ಬೆಳ್ಳಿಯ ಹಬ್ಬದ ಪ್ರಕಟನೆ

ಶಿವಕೋಟ್ಯಾಚಾರ್ಯ

ವಿರಚಿತ

# ವಡ್ಡಾರಾಧನೆ

ಸಂಪಾದಕರು

ಡಾ. ಡಿ. ಎಲ್. ನರಸಿಂಹಾಚಾರ್, ಎಂ.ಎ., ಡಿ.ಲಿಟ್.



ಶಾರದಾ ಮಂದಿರ

ರಾಮಯ್ಯರ್ ರಸ್ತೆ, ಮೈಸೂರು-4

ಪ್ರಿಯ ಮಿತ್ರರಾದ
ಶ್ರೀ ಎಂ. ವಿ. ಸೀತಾರಾಮಯ್ಯನವರಿಗೆ
ವಿಶ್ವಾಸಪೂರ್ವಕವಾಗಿ
Jm Shankarray
21 - 10 - 70

ಕನ್ನಡಕವಿಕಾವ್ಯಮಾಲೆ

ಶಿವಕೋಟ್ಯಾಚಾರ್ಯ

ವಿರಚಿತ

# ವಡ್ಡಾರಾಧನೆ

ಸಂಪಾದಕರು

ಡಾ. ಡಿ. ಎಲ್. ನರಸಿಂಹಾಚಾರ್, ಎಂ.ಎ., ಡಿ.ಲಿಟ್.

ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು–4

ಈ ನೂಲೆಯ ಸಂಪಾದಕರು ಮತ್ತು ಪ್ರಕಾಶಕರು

H. M. SHANKAR NARAYAN RAO M.A.,
*Professor and Head of the Department of Kannada*
*Sarada Vilas College, Mysore-4*

ಮೂರನೆಯ ಮುದ್ರಣ : ೧೯೬೫
ನಾಲ್ಕನೆಯ ಮುದ್ರಣ : ೧೯೭೦ (ಅಕ್ಟೋಬರ್)





ಬೆಲೆ:
ಸಾದಾ ಪ್ರತಿ : ೧೦.೦೦
ಉತ್ತಮ ಪ್ರತಿ : ೧೫.೦೦

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು



ಕನ್ನಡದ ರಕ್ಷಾಮಣಿ
ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು

# ಅರ್ಪಣೆ

ನನ್ನ ವಿದ್ಯಾಗುರುಗಳೂ ಹಿತೈಷಿಗಳೂ ಶಿಷ್ಯವಾತ್ಸಲ್ಯ ಪ್ರಪೂರ್ಣರೂ ಆಗಿದ್ದು
ದಿವಂಗತರಾಗಿರುವ

ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.
ಅವರ

ನೆನಪಿಗಾಗಿ ಭಕ್ತಿಯಿಂದ ಈ ಪರಿಷ್ಕೃತ ಗ್ರಂಥವು
ಅರ್ಪಿತವಾಗಿದೆ

ಶ್ರೀಕಂಠಗುರುವ ಕಾವ್ಯವು
ನಾಕರ್ಣಿಸಿ ರಸದ ಮಡುವೊಳಾಟಿದನಾವಂ
ಕೇಕಿಕ ನೃತ್ಯದ್ ಬಹಾರ್
ಲೋಕದವೋಲದುವೆ ಚಿತ್ರವರ್ಣಾಕೀರ್ಣಂ

ಆವಂ ಕನ್ನಡ ಕಲ್ಪಿಯೊಳ್ ಪರಿಣತಂ ತಾನಾಗಿ ತನ್ನೞ್ತಿಯಿಂ
ತೀವುತ್ತುಂ ನಿಜ ಶಿಷ್ಯವೃಂದದೆರ್ದೆಯೊಳ್ ಸಾಹಿತ್ಯ ಸಂಪ್ರೀತಿಯಂ
ಭಾವಾವೇಶ ರಸಂಗಳಂ ತುಳುಕಿಪಾ ಶ್ರೀಕಂಠ ವಾಗ್ಧಾರೆಯಿಂ
ಡೋವೋ ಕೀರ್ತಿಯನಾಂತನಾ ಗುರುವರಂಗೀ ಗ್ರಂಥಮಾಯ್ತರ್ಪಿತಂ

ಡಿ. ಎಲ್. ಎನ್.

# ಮೊದಲ ಮಾತು

(ಮೊದಲ ಮುದ್ರಣಕ್ಕೆ ಬರೆದದ್ದು)

'ವಡ್ಡಾರಾಧನೆ'ಯಲ್ಲಿನ ಕಥೆಗಳಲ್ಲಿ ಮೂರನ್ನು ೧೯೩೧ನೆಯ ಇಸವಿಯಲ್ಲೇ 'ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ'ಯ ಆಗಿನ ಮಾನ್ಯ ಸಂಪಾದಕರಾಗಿದ್ದ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಕೃಪೆಯಿಂದ ಪ್ರಕಟಿಸಲಾಗಿತ್ತು. ಅಂದಿನಿಂದ ಸಮಗ್ರ ಗ್ರಂಥವನ್ನು ಪ್ರಚುರಪಡಿಸಬೇಕೆಂಬ ಉದ್ದೇಶವಿತ್ತು. ಆಗ ದೊರೆತಿದ್ದ ಒಂದೇ ಒಂದು ಪ್ರತಿಯಿಂದ ಗ್ರಂಥ ಪರಿಶೋಧನೆಯ ಕಾರ್ಯ ಸಮರ್ಪಕವಾಗುವುದಿಲ್ಲವೆಂದು ಕಂಡು ಬಂದದ್ದರಿಂದ ಮಾದರಿಗಾಗಿ ಮೂರು ಕಥೆಗಳನ್ನು ಮಾತ್ರ ಕೊಟ್ಟು ಉಳಿದುವನ್ನು ಪ್ರತ್ಯಂತರಗಳು ದೊರೆತಮೇಲೆ ಪ್ರಕಟಿಸುವುದು ಒಳ್ಳೆತೆಂದು ಸುಮ್ಮನಿರಬೇಕಾಯಿತು. ಅಲ್ಲಿಂದ ಈಚೆಗೆ 'ವಡ್ಡಾರಾಧನೆ'ಯ ಬೇರೆ ಐದಾರು ಪ್ರತಿಗಳು ಸಿಕ್ಕಿವೆ. ಇವುಗಳ ಸಹಾಯದಿಂದ ಈಗ ಆ ಗ್ರಂಥವನ್ನು ಈ ರೂಪದಲ್ಲಿ ಪ್ರಕಟಿಸಿದೆ.

* * *

ವಡ್ಡಾರಾಧನೆಯ ಮೂಲ ಪ್ರತಿಗಳು, ಕರ್ತೃತ್ವ, ಕಾಲ, ಕಥೆಗಳ ಮೂಲ ಮತ್ತು ಬೆಳವಣಿಗೆ, ಶೈಲಿ, ಭಾಷೆಯ ಲಕ್ಷಣ, ಕಾವ್ಯ ವಿಮರ್ಶೆ, ಶಬ್ದಕೋಶ, ಟಿಪ್ಪಣಿ— ಎಂಬಿವೇ ಮುಂತಾದ ವಿಷಯಗಳನ್ನೊಳಕೊಂಡ ಪೀಠಿಕೆಯೊಂದನ್ನು ಬರೆಯಬೇಕೆಂಬ ಸಂಕಲ್ಪವಿದ್ದುದರಿಂದಲೂ, ಇನ್ನೂ ಹಲವು ಕಾರಣಗಳಿಂದಲೂ ಈ ಗ್ರಂಥ ಪ್ರಕಟ ವಾಗುವುದು ಬಹಳ ತಡವಾಯಿತು. ಆದರೂ ಆ ಪೀಠಿಕೆಯನ್ನು ಬರೆಯುವುದು ಇದು ವರೆಗೆ ಸಾಧ್ಯವಾಗಿಲ್ಲ. ಮುಂದಿನ ಮುದ್ರಣದ ಹೊತ್ತಿಗೆ ಅದು ಸಿದ್ಧವಾಗುವುದೆಂಬ ಭರವಸೆ ಇದೆ. ಡಾ. ಎ. ಎನ್. ಉಪಾಧ್ಯೆ ಅವರು ತಮ್ಮಿಂದ ಸಂಪಾದಿತವಾದ ಹರಿಷೇಣನ 'ಬೃಹತ್ಕಥಾಕೋಶ'ಕ್ಕೆ ಬರೆದಿರುವ ಪ್ರೌಢವೂ ಪರಿಪೂರ್ಣವೂ ಆದ ಪ್ರಸ್ತಾವನೆಯನ್ನು ಎಲ್ಲರೂ ಅವಲೋಕಿಸಬಹುದು.

ತಮ್ಮಲ್ಲಿದ್ದ ಮೂರು ಪ್ರತಿಗಳನ್ನು ಉದಾರಬುದ್ಧಿಯಿಂದ ನನಗೆ ದೊರಕಿಸಿಕೊಟ್ಟ ಸರಾಫ್ ಪದ್ಮರಾಜಯ್ಯನವರ ಉಪಕಾರವು ಸ್ಮರಣೀಯವಾಗಿದೆ. ಈ ಮಹನೀಯರು ಗ್ರಂಥವು ಪೂರ್ತಿ ಅಚ್ಚಾಗಿ ಪ್ರಕಟವಾದದ್ದನ್ನು ಕಣ್ಣಾರನೋಡಿ ಸಂತೋಷಪಡಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ಅದು ಪ್ರಕಟವಾಗುವುದರೊಳಗೆ ಅವರು ದಿವಂಗತರಾದದ್ದು ವಿಷಾದದ ಸಂಗತಿ. ಉಳಿದ ಪ್ರತಿಗಳನ್ನು ಉಪಯೋಗಿಸಿಕೊಳ್ಳು ವುದಕ್ಕೆ ಅವಕಾಶವನ್ನು ಕೊಟ್ಟ ಮೇಲ್ಕಂಡ ಸಂಸ್ಥೆಗಳಿಗೂ ಮಹನೀಯರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಗ್ರಂಥಸಂಪಾದನೆಯ ಕಾರ್ಯದಲ್ಲಿ ನನಗೆ ಮೊದಲಿಂದಲೂ ಪ್ರೋತ್ಸಾಹಕೊಟ್ಟು ಅಚ್ಚಿನ ಕರಡುಗಳನ್ನು ನೋಡಿ ತಿದ್ದಿ, ಅಮೂಲ್ಯವಾದ ಸೂಚನೆಗಳನ್ನು ಕೊಟ್ಟವರು, ನನ್ನ ವಿದ್ಯಾಗುರುಗಳಾದ ಬಿ. ಎಂ. ಶ್ರೀಕಂಠಯ್ಯನವರು. ಪುಸ್ತಕ ಹೊರಬೀಳುವುದ ರೊಳಗಾಗಿ ಅವರು ಸ್ವರ್ಗವಾಸಿಗಳಾದದ್ದು ತುಂಬಾ ದುಃಖಕ್ಕೆ ಕಾರಣವಾಗಿದೆ. ಅವರ ನೆನಪಿಗೆ ಈ ಗ್ರಂಥವನ್ನು ವಿೂಸಲಾಗಿ ಇಟ್ಟಿದೆ. ಇದರಲ್ಲಿ ಬರುವ ಪ್ರಾಕೃತ ಸಂಸ್ಕೃತ ಪದ್ಯಗಳ ಪಾಠ ನಿರ್ಣಯದಲ್ಲಿ ಮೇಲಿಂದ ಮೇಲೆ, ಬೇಸರಪಟ್ಟುಕೊಳ್ಳದೆ ಸಹಾಯ ಮಾಡಿದ ಡಾ॰ ಎ॰ ಎನ್. ಉಪಾಧ್ಯೆ ಅವರಿಗೆ ನಾನು ತುಂಬಾ ಋಣಿಯಾಗಿದ್ದೇನೆ. ಈ ಪುಸ್ತಕದ ಮುದ್ರಣಕಾರ್ಯದಲ್ಲಿ ಬಹಳ ಶ್ರದ್ಧೆಯನ್ನು ವಹಿಸಿದ ನನ್ನ ಗೆಳೆಯರಾದ ಶ್ರೀಮಾನ್ ವೆಂಕಟಾಚಲಪತಿಯವರಿಗೂ ಪರಿಷತ್ತಿನ ಮುದ್ರಣಾಲಯದ ಅಧಿಕಾರಿ ಗಳಿಗೂ, ಪರಿಷತ್ ಪತ್ರಿಕೆಯಲ್ಲಿ ಇದನ್ನು ಭಾಗಶಃ ಅಚ್ಚು ಹಾಕಿಸಿಕೊಟ್ಟ ಪರಿಷತ್ ಪತ್ರಿಕೆಯ ಸಂಪಾದಕರುಗಳಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಮೈಸೂರು
೧-೮-೧೯೪೯

**ಡಿ. ಎಲ್. ನರಸಿಂಹಾಚಾರ್**

# ನಾಲ್ಕನೆಯ ಮುದ್ರಣದ ಅರಿಕೆ

ಕನ್ನಡ ಸಾಹಿತ್ಯ ಪರಿಷತ್ತು, ವಿದ್ಯಾಭ್ಯಾಸದ ಇಲಾಖೆ, ಕನ್ನಡನಾಡಿನ ವಿಶ್ವವಿದ್ಯಾನಿಲಯಗಳು ಈ ಗ್ರಂಥವನ್ನು ವಿವಿಧ ಪರೀಕ್ಷೆಗಳಿಗೆ ಪಠ್ಯಪುಸ್ತಕವನ್ನಾಗಿ ಗೊತ್ತು ಮಾಡಿದ ಕಾರಣ, ಇದರ ಪುನರ್ ಮುದ್ರಣಕ್ಕೆ ಅವಕಾಶವುಂಟಾಯಿತು. ಈ ಅವಕಾಶ ದೊರಕಿದ್ದಕ್ಕಾಗಿ ಮೇಲ್ಕಂಡ ಸಂಸ್ಥೆಗಳಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಗ್ರಂಥದ ಪುನರ್ ಮುದ್ರಣದ ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಇದಕ್ಕೆ ವಿಸ್ತಾರವಾದ ಟಿಪ್ಪಣಿಗಳನ್ನೂ, ಉಪಯುಕ್ತವಾದ ಅನುಬಂಧಗಳನ್ನೂ ಸೇರಿಸಿದೆ. ಪೀಠಿಕೆ ಮಾತ್ರ ಅಸಂಪೂರ್ಣವಾಗಿಯೇ ಉಳಿದಿದೆ. ಗ್ರಂಥವಿಮರ್ಶೆ, ವಡ್ಡಾರಾಧನೆಯ ಶೈಲಿಯ ಸ್ವರೂಪ, ಗ್ರಂಥದಲ್ಲಿ ಕಂಡುಬರುವ ಸಾಮಾಜಿಕ ಜೀವನ ಇವೇ ಮೊದಲಾದ ವಿಷಯಗಳನ್ನು ಪೀಠಿಕೆಯಲ್ಲಿ ಸೇರಿಸಬೇಕೆಂಬ ಆಸೆ ಕೈಗೂಡಲಿಲ್ಲ. ಗ್ರಂಥಕ್ಕೆ ಇನ್ನೊಂದು ಮುದ್ರಣದ ಅವಕಾಶ ದೊರಕಿದರೆ ಮೇಲೆ ಹೇಳಿದ ಅಂಶಗಳನ್ನು ಸೇರಿಸಿ ಗ್ರಂಥವನ್ನು ಸಮಗ್ರಗೊಳಿಸುವ ಭರವಸೆ ಇದೆ.

ಇನ್ನು ನೆರವು ನೆನವು. ಕಠಿಣಶಬ್ದಗಳ ಕೋಶ, ಪಾರಿಭಾಷಿಕ ಶಬ್ದಗಳ ಕೋಶ, ಸಂಕೇತಗಳ ವಿವರ, ಅಚ್ಚಿನ ತಪ್ಪುಗಳು ಇವುಗಳ ಪಟ್ಟಿಯನ್ನು ನನ್ನ ತರುಣ ಮಿತ್ರರಾದ ಶ್ರೀ. ಜಿ. ಜಿ. ಮಂಜುನಾಥರವರೂ, ಗ್ರಂಥದಲ್ಲಿ ಉದ್ಧೃತಪದ್ಯಗಳ ಅಕಾರಾದಿಯನ್ನು ಶ್ರೀ. ಎಚ್. ಎಸ್. ಹರಿಶಂಕರ್ ಅವರೂ ಸಿದ್ಧಪಡಿಸಿಕೊಟ್ಟಿದ್ದಾರೆ, ಪ್ರಾಕೃತ ಸಂಸ್ಕೃತ ಪದ್ಯಗಳ ಪಾಠಗಳನ್ನು ಸರಿನೋಡಿಕೊಟ್ಟ ಡಾ. ಎ. ಎನ್. ಉಪಾಧ್ಯೇ ಅವರ ಸಹಾಯ ಸ್ಮರಣೀಯವಾಗಿದೆ. ಗ್ರಂಥದಲ್ಲಿ ಉದ್ಧೃತವಾಗಿರುವ ಸಂಸ್ಕೃತ ಪದ್ಯಗಳನ್ನು ಅರ್ಥ ಮಾಡುವಲ್ಲಿ ವೇದಾಂತ ರತ್ನಂ, ಪಂಡಿತಭೂಷಣಂ ಬ್ರಹ್ಮಶ್ರೀ ವಿದ್ವಾನ್ ಎನ್. ವಿ. ಪದ್ಮನಾಭಾಚಾರ್ಯರ ಸಹಾಯವನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಈ ಎಲ್ಲ ಮಹನೀಯರಿಗೂ ನನ್ನ ಹಾರ್ದಿಕವಾದ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥದ ಮುದ್ರಣದ ವಿಷಯದಲ್ಲಿ ಅತ್ಯಂತ ಆಸಕ್ತಿವಹಿಸಿ, ಕೆಲಸವನ್ನು ತುಂಬ ದಕ್ಷತೆಯಿಂದ ಕ್ಷಿಪ್ರವಾಗಿ ನಿರ್ವಹಿಸಿದ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಚಿ|| ಜಿ. ಎಚ್. ಕೃಷ್ಣಮೂರ್ತಿಯ ಶ್ರಮವನ್ನು ಎಷ್ಟು ಹೊಗಳಿದರೂ ಸ್ವಲ್ಪವೇ.

ವಿಸ್ತೃತವಾದ ಈ ಗ್ರಂಥವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುವರೆಂದು ನಂಬುತ್ತೇನೆ.

ಮೈಸೂರು
೨-೧೧-೬೦

ಡಿ. ಎಲ್. ನರಸಿಂಹಾಚಾರ್

# ವಿಷಯಸೂಚಿಕೆ

# ಪೀಠಿಕೆ

೧೯೩೦ ನೆಯ ಇಸವಿಯಲ್ಲಿ ನಾನು ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿಕೊಂಡಾಗ, ಅಲ್ಲಿ ನನ್ನ ಪಾಲಿಗೆ ನಿಯೋಜಿತವಾಗಿದ್ದ ಒಂದು ವೈದ್ಯಗ್ರಂಥದ ಸಂಪಾದನಾ ಕಾರ್ಯವನ್ನು ಮುಂದುವರಿಸುತ್ತ, ವಿರಾಮಕಾಲದಲ್ಲಿ ನನಗೆ ತೋರಿದ ಕೆಲಸವನ್ನು ಮಾಡುತ್ತಿದ್ದೆ. 'ಕರ್ಣಾಟಕ ಕವಿ ಚರಿತ್ರೆ'ಯಲ್ಲಿ ಉಕ್ತ ವಾಗದಿರುವ ಗ್ರಂಥಗಳು ಯಾವುವಾದರೂ ಇವೆಯೋ ಎಂಬುದನ್ನು ತಿಳಿಯಲು ಆ ಲೈಬ್ರರಿಯ ಕನ್ನಡ ಹಸ್ತಪ್ರತಿಗಳ ಪಟ್ಟಿಗಳನ್ನು ನೋಡುವ ಕುತೂಹಲವುಂಟಾಯಿತು. ೧೯೨೭-೨೯ನೆಯ ವರ್ಷಗಳಲ್ಲಿ ಸಂಗ್ರಹಿಸಿದ ಕೈಬರಹದ ಕನ್ನಡ ಪುಸ್ತಕಗಳ ಪಟ್ಟಿ ಯನ್ನು, ೧೯೩೦ ರಲ್ಲಿ ಅಚ್ಚಾದುದನ್ನು, ನೋಡುತ್ತಿರುವಾಗ, ೨೦ನೆಯ ಪುಟದಲ್ಲಿ 'ವೊಡ್ಡಾರಾಧಣಂ' ಎಂಬ ಪುಸ್ತಕ ಕಣ್ಣಿಗೆ ಬಿತ್ತು. ಇದರ ನಂಬರು K. 415 ; ಇದರ ಕವಿಯು ಹೆಸರು ಉಕ್ತವಾಗಿಲ್ಲ; ಇದು ವಾ. ಷ. ಎಂದರೆ ವಾರ್ಧಕಷಟ್ಪದಿಯಲ್ಲಿ ರಚಿತ ವಾದುದೆಂದು ಅಲ್ಲಿ ಹೇಳಿದೆ. ಗ್ರಂಥದ ಹೆಸರು ವಿಚಿತ್ರವಾಗಿ ಕಂಡಿತು. ಇದು ಯಾವುದೋ ಸ್ತೋತ್ರಗ್ರಂಥವಿರಬಹುದೆಂದು ಮನದಲ್ಲಿ ಒಂದು ತೆರನಾದ ಔದಾಸೀನ್ಯ ತಲೆದೋರಿದರೂ ನೋಡಿಯೇ ಬಿಡೋಣವೆಂದು ಆ ಗ್ರಂಥವನ್ನು ತರಿಸಿ ಅದರ ಓಲೆ ಗಳನ್ನು ತಿರುವಿಹಾಕಿದಾಗ ಅದು ವಾರ್ಧಿಕ ಷಟ್ಪದಿಯಲ್ಲಿಲ್ಲದಿರುವುದೂ ಗದ್ಯದಲ್ಲಿ ರಚಿತ ವಾಗಿರುವುದೂ ಗೊತ್ತಾಯಿತು. ಆರಂಭದ ಕೆಲವು ಓಲೆಗಳನ್ನು ಓದುತ್ತ ಹೋದಾಗ, ಅಲ್ಲಿನ ಗದ್ಯ ಶೈಲಿ ನನ್ನನ್ನು ಆಕರ್ಷಿಸಿತು. ಇಷ್ಟು ಒಳ್ಳೆಯ ಗದ್ಯ, ಹಳಗನ್ನಡದಲ್ಲಿ ರಚಿತವಾಗಿರುವುದನ್ನು ಕಂಡ ನನಗೆ ಮಿಗಿಲಾದ ಸಂತೋಷವೂ ಆಶ್ಚರ್ಯವೂ ಉಂಟಾ ದವು. ಕೂಡಲೇ ಆ ಗ್ರಂಥವನ್ನು ಓದಿ ನನಗೆ ಬೇಕಾದ ಟಿಪ್ಪಣಿಗಳನ್ನು ಬರೆದುಕೊಂಡೆ. ಆಮೇಲೆ ಅದರಲ್ಲಿರುವ ೧೯ ಕಥೆಗಳಲ್ಲಿ ಮೂರನ್ನು ಮಾತ್ರ ಆರಿಸಿಕೊಂಡು, ಅಚ್ಚಿಗಾಗಿ ಅವುಗಳ ಒಂದು ಪ್ರತಿಯನ್ನು ಸಿದ್ಧಪಡಿಸಿ, ಅದನ್ನು 'ಕರ್ಣಾಟಕ ಸಾಹಿತ್ಯ ಪರಿಷತ್ಪ ತ್ರಿಕೆ'ಯ ಸಂಪಾದಕರಿಗೆ— ಈಗ ದಿವಂಗತರಾಗಿರುವ ಬೆಳ್ಳಾವೆ ವೆಂಕಟನಾರಾಯಣಪ್ಪ ನವರಿಗೆ—ಕಳಿಸಿಕೊಡಲಾಯಿತು. ಅದು ಆ ಪತ್ರಿಕೆಯ ೧೯೩೧ನೆ ಅಕ್ಟೋಬರ್ ಸಂಚಿಕೆ ಯಲ್ಲಿ ಅಚ್ಚಾಗಿ ಪ್ರಕಟವಾಯಿತು. (ಪುಟ ೧೭೩-೨೩೧). ಗ್ರಂಥದ ಮತ್ತು ಅದರ ಕರ್ತೃವಿನ ವಿಷಯವಾಗಿ ನನಗೆ ಆಗ ತಿಳಿದುಬಂದಷ್ಟು ವಿಷಯಗಳನ್ನು ಒಳಗೊಂಡ ಒಂದು ಸಣ್ಣ ಮುನ್ನುಡಿಯೂ ಇದರಲ್ಲಿದೆ. (ಪುಟ ೧೭೩-೧೭೮). ಲಭ್ಯವಾಗಿದ್ದ ಒಂದೇ ಹಸ್ತಪ್ರತಿಯ ಸಹಾಯದಿಂದ ಗ್ರಂಥಪರಿಷ್ಕರಣಕಾರ್ಯ ಸಮರ್ಪಕವಾಗಿ ನಡೆ ಯಲು ಸಾಧ್ಯವಿಲ್ಲವೆಂದು ಇಡೀ ಗ್ರಂಥವನ್ನು ಮುದ್ರಿಸದೆ ಇಷ್ಟರಿಂದಲೇ ತೃಪ್ತಿಪಡ ಬೇಕಾಯಿತು. ಇನ್ನೂ ಒಂದೆರಡಾದರೂ ಹಸ್ತಪ್ರತಿಗಳು ದೊರೆತರೆ ಒಳ್ಳೆಯದೆಂಬ ನಿರೀಕ್ಷೆ ಇತ್ತು.

ಪ್ರತ್ಯಂತರಗಳ ನಿರೀಕ್ಷೆಯಲ್ಲಿ ಸುಮಾರು ಎಂಟು ವರ್ಷಗಳು ಕಳೆದುಹೋದುವು. ೧೯೩೯ನೆಯ ಇಸವಿಯ ಆರಂಭಭಾಗದಲ್ಲಿ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಕನ್ನಡ ಪಂಡಿತರಾಗಿದ್ದ ಶ್ರೀಮಾನ್ ಎನ್. ಅನಂತರಂಗಾಚಾರ್ಯ ಎಂ. ಎ., ಬಿ. ಟಿ., ಅವರು ಕನ್ನಡ ಹಸ್ತಪ್ರತಿಗಳ ಅನ್ವೇಷಣೆಯಲ್ಲಿ ತೊಡಗಿದ್ದಾಗ ಮೂಡಬಿದರೆಯ ಶ್ರೀಮಾನ್ ಲೋಕನಾಥಶಾಸ್ತ್ರಿಗಳೆಂಬ ಮಹನೀಯರ ಬಳಿ 'ವಡ್ಡಾರಾಧನೆ' ಯ ಒಂದು ಓಲೆಯ ಪ್ರತಿ ದೊರೆಯಿತು. ಇದರಲ್ಲಿರುವ ಪಾಠಾಂತರಗಳನ್ನು ಗುರುತುಹಾಕಿಕೊಳ್ಳಲು ತಮ್ಮ ಶ್ರಮವನ್ನು ಲೆಕ್ಕಿಸದೆ, ಸ್ನೇಹಭಾವದಿಂದ ನನಗೆ ಸಹಾಯ ಮಾಡಿದವರು ಶ್ರೀಮಾನ್ ಅನಂತರಂಗಾಚಾರ್ಯರು. ಈ ಪ್ರತಿಯಿಂದ ಪಾಠಸಂಕಲನ ಕಾರ್ಯ ಮುಗಿದಿತ್ತು. ಈ ನಡುವೆ ಸಾಲಿಗ್ರಾಮದ ಶ್ರೀಮಾನ್ ಸರಾಫ್ ಪದ್ಮರಾಜಯ್ಯನವರಲ್ಲಿ 'ವಡ್ಡಾರಾಧನೆ'ಯ ಮತ್ತೊಂದು ಪ್ರತಿ ಇರುವುದಾಗಿ ತಿಳಿಯಬಂತು. ಆ ಊರಿಗೆ ಹೋಗಿ ಅವರನ್ನು ನಾನು ಕಂಡಾಗ ಅವರು ದಯವಿಟ್ಟು ಆ ಪ್ರತಿಯನ್ನು ನನಗೆ ತೋರಿಸಿದರು. ಆದರೆ ಅದನ್ನು ನನ್ನ ಉಪಯೋಗಕ್ಕಾಗಿ ಕೊಡಲು ಅವರು ಏಕೋ ಸ್ವಲ್ಪ ಹಿಂದೆಗೆದರು. ೧೯೩೯ ನೆಯ ಇಸವಿಯಲ್ಲಿ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ಕರ್ಣಾಟಕ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ಒಂದು ದಿವಸ ಅವರ ಸಂದರ್ಶನಾರ್ಥವಾಗಿ ಅವರ ಬಳಿಗೆ ಹೋದಾಗ 'ವಡ್ಡಾರಾಧನೆ' ಯ ಇನ್ನೊಂದು ಪ್ರತಿ ಸಿಕ್ಕಿದೆಯೆಂಬ ವಿಷಯವನ್ನು ಅವರಿಗೆ ತಿಳಿಸಲು, ಅವರು ತುಂಬ ಸಂತೋಷವನ್ನು ವ್ಯಕ್ತಪಡಿಸಿ ಆ ಗ್ರಂಥವನ್ನು ಪರಿಷ್ಕರಿಸಿ ಸಂಪಾದಿಸಿಕೊಡಬೇಕೆಂದೂ ಅದನ್ನು ಪರಿಷತ್ಪತ್ರಿಕೆಯಲ್ಲಿ ಭಾಗಶಃ ಮುದ್ರಿಸಲಾಗುವುದೆಂದೂ ಪ್ರೋತ್ಸಾಹಕರವಾದ ಮಾತುಗಳನ್ನಾಡಿದರು. ಅದನ್ನು ಅಪ್ಪಣೆಯೆಂದು ಭಾವಿಸಿ ದೊರೆತಿದ್ದ ಎರಡು ಪ್ರತಿಗಳ ಸಹಾಯದಿಂದ ಆ ಗ್ರಂಥದ ಮೊದಲ ಕಥೆಯಾಗಿರುವ ಸುಕುಮಾರಸ್ವಾಮಿಯ ಕಥೆಯನ್ನು ಸಂಪಾದಿಸಿ ಮುದ್ರಣಕ್ಕೆ ಸಿದ್ಧಗೊಳಿಸಲಾಯಿತು. ಆಗ ಪರಿಷತ್ಪತ್ರಿಕೆಯ ಸಂಪಾದಕರಾಗಿದ್ದ ಮಾನ್ಯ ಶ್ರೀ ಡಿ. ಸಿ. ಸುಬ್ಬರಾಯಪ್ಪ, ಬಿ. ಎ., ಬಿ. ಎಲ್., ಅವರು ಆ ಕಥೆಯನ್ನು ಕನ್ನಡ ಸಾಹಿತ್ಯಪರಿಷತ್ಪತ್ರಿಕೆ ಸಂಪುಟ ೨೪, ಸಂಚಿಕೆ ೪ರಲ್ಲಿ ಮುದ್ರಿಸಿ ಪ್ರಕಟಿಸಿದರು.

ಸಾಹಿತ್ಯಪರಿಷತ್ಪತ್ರಿಕೆಯ ಮುಂದಿನ ಸಂಚಿಕೆ ಪ್ರಕಟವಾಗುವಷ್ಟರಲ್ಲಿ 'ವಡ್ಡಾರಾಧನೆ' ಯ ಬೇರೆ ಮೂರು ಹಸ್ತಪ್ರತಿಗಳು ನನ್ನ ಕೈಸೇರಿದವು. ಮೊದಲ ಕಥೆ ಪ್ರಕಟವಾದುದನ್ನೂ ಇಡೀ ಗ್ರಂಥದ ಮುದ್ರಣಕ್ಕಾಗಿ ಸಾಹಿತ್ಯಪರಿಷತ್ತು ಮಾಡಿದ್ದ ಏರ್ಪಾಟನ್ನೂ ನೋಡಿ ತಿಳಿದು ಶ್ರೀ ಸರಾಫ್ ಪದ್ಮರಾಜಯ್ಯನವರು ತಮ್ಮ ಬಳಿಯಲ್ಲಿದ್ದ ಮೂರು ಹಸ್ತಪ್ರತಿಗಳನ್ನೂ, ಗ್ರಂಥವು ಅಚ್ಚಾಗಿಬಿಡುವುದೆಂಬ ಭರವಸೆ ತಮ್ಮಲ್ಲಿ ಮೂಡಿದ ಮೇಲೆ, ನನಗೆ ಕಳುಹಿಸಿಕೊಟ್ಟರು. ಅವರ ಔದಾರ್ಯವು ಇಲ್ಲಿ ಸ್ಮರಣೀಯವಾಗಿದೆ. ಈ ಮೂರು ಪ್ರತಿಗಳು ದೊರೆತಮೇಲೆ ಆರಾದ ಸೆಂಟ್ರಲ್ ಜೈನ ಲೈಬ್ರರಿಯಲ್ಲಿದ್ದ ಇನ್ನೊಂದು ಪ್ರತಿಯನ್ನು ಸಾಹಿತ್ಯಪರಿಷತ್ತಿನ ಮೂಲಕ ತರಿಸಿಕೊಂಡುದಾಯಿತು. ಈ ಆರು ಪ್ರತಿಗಳ ಸಹಾಯದಿಂದ ಗ್ರಂಥದ ಸಂಸ್ಕರಣಕಾರ್ಯ ಮುಂದುವರಿಯುತ್ತ, ಪರಿಷತ್ಪತ್ರಿಕೆಯ

ಸಂಚಿಕೆಗಳಲ್ಲಿ ಭಾಗಶಃ ಮುದ್ರಣವಾಗುತ್ತ ೧೯೪೯ನೆಯ ಇಸವಿಯಲ್ಲಿ ಇಡೀ ಗ್ರಂಥವು ಅಚ್ಚಾಗಿ ಪ್ರಕಟವಾಯಿತು.

## ಹಸ್ತಪ್ರತಿಗಳು

'ವಡ್ಡಾರಾಧನೆ' ಯ ಸಂಪಾದನೆಗಾಗಿ ಉಪಯೋಗಿಸಿಕೊಂಡಿರುವ ಆರು ಹಸ್ತಪ್ರತಿಗಳ ಸ್ವರೂಪವನ್ನು ತಿಳಿಸಬೇಕಾಗಿದೆ. ಪ್ರತಿಯೊಂದು ಪ್ರತಿಗೆ ಒಂದೊಂದು ಸಂಕೇತವನ್ನು ಕೊಟ್ಟಿದೆ.

(ಕ) :—ಇದು ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿರುವ K 415 ನೆಯ ನಂಬರಿನ ಓಲೆಯ ಪ್ರತಿ. ಈ ಪ್ರತಿ ಮೊದಲಿಗೆ ಸರಾಫ್ ಪದ್ಮರಾಜಯ್ಯನವರ ಪುಸ್ತಕ ಭಂಡಾರದಲ್ಲಿದ್ದಿತೆಂದೂ, ೧೯೨೦ ನೆಯ ಇಸವಿಯಲ್ಲಿ ಅವರು ಅದನ್ನು ಓರಿಯಂಟಲ್ ಲೈಬ್ರರಿಗೆ ಕೊಟ್ಟರೆಂದೂ ತಿಳಿದುಬರುತ್ತದೆ. ಇದರಲ್ಲಿ ಒಟ್ಟು ೧೦೮ ಪತ್ರಗಳಿವೆ. ೫೪ ನೆಯ ಪತ್ರ ನಷ್ಟವಾಗಿದೆ; ಕೆಲವು ಮುರಿದು ಹೋಗಿವೆ. ಪತ್ರಗಳ ಉದ್ದ ೧೭.೫ ಅಂಗುಲಗಳು; ಅಗಲ ೧.೯ ಅಂಗುಲಗಳು. ಪ್ರತಿಯೊಂದು ಪತ್ರದ ಒಂದೊಂದು ಪಾರ್ಶ್ವದಲ್ಲಿ ೯ ಪಂಕ್ತಿಗಳು ಲಿಖಿತವಾಗಿವೆ. ಪ್ರತಿ ಪಂಕ್ತಿಯಲ್ಲಿರುವ ಅಕ್ಷರ ಸಂಖ್ಯೆ ೬೫. ಱಕಾರ ಅದು ಇರಬೇಕಾದ ಎಡೆಗಳಲ್ಲಿ ತಪ್ಪಿಲ್ಲದಂತೆ ಲಿಖಿತವಾಗಿದೆ. ೞಕಾರವನ್ನು ಎಲ್ಲಿಯೂ ಬರೆದಿಲ್ಲ; ಅದು ಇರಬೇಕಾದ ಸ್ಥಾನಗಳಲ್ಲಿ ಳಕಾರವಾಗಿ ಬರೆದಿದೆ. ಈ ಪ್ರತಿಯಲ್ಲಿರುವ ಲಿಪಿರೂಪ ವಿಜಯನಗರದ ದೊರೆಗಳ ಕಾಲದ ಕನ್ನಡ ಶಾಸನಾಕ್ಷರಗಳನ್ನು ಹೋಲುತ್ತದೆ. ಉ, ತ, ಹ.—ಎಂಬ ಈ ಅಕ್ಷರಗಳನ್ನು ನಿರ್ದೇಶಿಸುವ ಲಿಪಿಗಳು ಈಗಿನ ತೆಲುಗು ವರ್ಣಮಾಲೆಯಲ್ಲಿ ಕಾಣುವ ಆಯಾ ಅಕ್ಷರದ ಲಿಪಿರೂಪಕ್ಕೆ ಸದೃಶವಾಗಿದೆ. ಗ್ರಂಥದ ಆದಿಯಲ್ಲಿ 'ನಮಃ ಶ್ರೀ ವರ್ಧಮಾನಾಯ....' ಎಂಬ ಶ್ಲೋಕವಿದೆ. ಅನಂತರ "xxx ಂತರ್ಗೆ ನಮಸ್ಕಾರಂ ಗೆಯ್ದು....ಸುಕುಮಾರಸ್ವಾಮಿಯ ಕಥೆಯಂ ಪೇೞ್ವೆಂ" ಎಂಬ ಗದ್ಯವಿದ್ದು 'ಭಲ್ಲುಂಕಿಯೇಣಣಿಜ್ಜಂ'—ಎಂಬ ಗಾಹೆಯಿಂದ ಮೊದಲ ಕಥೆ ಆರಂಭವಾಗುತ್ತದೆ ಗ್ರಂಥಾಂತ್ಯದಲ್ಲಿ.

> "ಯಿಾ ಪೇಳ್ದ ಪತ್ತೊಂಬತ್ತು ಕಥೆಗ × × × × ಟ್ಯಾಚಾರ್ಯರು ಪೇಳ್ದಾ ವೊಡ್ಡಾರಾಧಣಂ ಸಂಪೂರ್ಣ್ಣಂ. ಶುಭಮಸ್ತು. ಆನಂದ ಸಂವತ್ಸರದ ಕಾರ್ತೀಕ ಬಹುಳ ಪಾಡ್ಯ ಸೋಮವಾರದಲು ಮಲ್ಲರಸನು ಬರೆದ ವೊಡ್ಡಾರಾಧನೆ ಸಮಾಪ್ತಂ."

ಎಂಬ ಬರಹವಿದೆ. ಗ್ರಂಥವನ್ನು ಹೇಳಿದಾತನ ಹೆಸರು ಪೂರ್ಣವಾಗಿ ತಿಳಿಯದೆ ಅದರ ಅಂತ್ಯಭಾಗ ಮಾತ್ರ ಗೊತ್ತಾಗುತ್ತದೆ. ಇಲ್ಲಿ ಹೇಳಿರುವ ಆನಂದ ಸಂವತ್ಸರವು ಯಾವುದೆಂಬುದನ್ನು ಖಚಿತವಾಗಿ ನಿಶ್ಚಯಿಸುವುದು ಸಾಧ್ಯವಿಲ್ಲವಾಗಿದೆ. ಮೇಲ್ಕಂಡ ಸಂವತ್ಸರ ಮಾಸ ತಿಥಿ ವಾರಗಳು ಕೆಳಗೆ ಕಾಣಿಸಿರುವ ವರ್ಷಗಳಲ್ಲಿ ಪ್ರಾಪ್ತವಾಗಿದ್ದುವು.

(೧). ಕ್ರಿ. ಶ. ೧೪೫೪ ನೆಯ ಅಕ್ಟೋಬರ್ ೧೮ ನೆಯ ತಾರೀಖು ಸೋಮವಾರ.

(೨). ಕ್ರಿ. ಶ. ೧೬೧೪ ನೆಯ ನವೆಂಬರ್ ೭ನೆಯ ತಾರೀಖು ಸೋಮವಾರ.

ಮಲ್ಲರಸನು ಈ ಗ್ರಂಥವನ್ನು ಪ್ರತಿ ಮಾಡಿದ ಕಾಲವು ಈ ಎರಡು ಇಸವಿಗಳಲ್ಲಿ ಯಾವುದೋ ಒಂದಾಗಿರಬೇಕು. ಈ ಪುಸ್ತಕದ ಓಲೆಗಳ ಜೀರ್ಣಾವಸ್ಥೆಯನ್ನೂ ಲಿಪಿ ರೂಪವನ್ನೂ ಗಮನಿಸಿದಾಗ ಇದು ಬಹುಶಃ ಕ್ರಿ. ಶ. ೧೪೩೪ ರಲ್ಲಿ ಲಿಖಿತವಾಗಿರಬಹು ದೆಂದು ತೋರುತ್ತದೆ.

(ಖ)—ಇದು ಓಲೆಯ ಪ್ರತಿ. ಪತ್ರಸಂಖ್ಯೆಯನ್ನೂ ಪತ್ರಗಳ ಉದ್ದ ಅಗಲಗಳನ್ನೂ ಪಂಕ್ತಿಗಳ ಸಂಖ್ಯೆಯನ್ನೂ ಪ್ರತಿಪಂಕ್ತಿಗಳ ಅಕ್ಷರಸಂಖ್ಯೆಯನ್ನೂ ಆ ಪ್ರತಿ ಸಿಕ್ಕಿದಾಗ ಗುರುತು ಹಾಕಿಕೊಳ್ಳಲಿಲ್ಲವಾದ್ದರಿಂದ ಈಗ ಅವುಗಳನ್ನು ಹೇಳಲು ಸಾಧ್ಯವಿಲ್ಲ. ಈ ಪ್ರತಿ ಮೂಡಬಿದರೆಯ ಶ್ರೀ ಶ್ರೀ ಚಾರುಕೀರ್ತಿಪಂಡಿತಾಚಾರ್ಯರ ಶ್ರೀಮಠಕ್ಕೆ ಸೇರಿದ್ದು. ಅದೇ ಊರಿನ ಶ್ರೀ ಎಚ್. ಲೋಕನಾಥಶಾಸ್ತ್ರಿಗಳವರ ಮೂಲಕ ಶ್ರೀ. ಎನ್. ಅನಂತ ರಂಗಾಚಾರ್ ಎಂ. ಎ., ಬಿ. ಟಿ. ಅವರಿಗೆ ದೊರೆಯಿತು. ಇದರಲ್ಲಿರುವ ಪಾಠಾಂತರ ಗಳನ್ನು ಗುರುತು ಹಾಕಿಕೊಳ್ಳುವ ಕೆಲಸ ಮುಗಿದದ್ದು ೨೪-೧೨-೧೯೪೧ ರಂದು; ಅಲ್ಲಲ್ಲಿ ಇದರ ಕೆಲವು ಓಲೆಗಳು ನಷ್ಟವಾಗಿರುವುದರಿಂದ ದೀರ್ಘವಾದ ಗ್ರಂಥಪಾತಗಳು ಹಲವಿವೆ. (ಕ) ಪ್ರತಿಯು ಆರಂಭವಾಗುವ ಹಾಗೆಯೇ ಇದೂ ಆರಂಭವಾಗಿದೆ. ಶೇಕಟರೇಫ ವನ್ನು ತಪ್ಪಿಲ್ಲದೆ ಬರೆದಿದೆ; ಱಕಾರ ಎಲ್ಲಿಯೂ ಲಿಖಿತವಾಗಿಲ್ಲ; ಅದಕ್ಕೆ ಪ್ರತಿಯಾಗಿ ಳಕಾರ ಲಿಖಿತವಾಗಿದೆ. ಪ್ರತಿಯ ಅಂತ್ಯದಲ್ಲಿ.

'ಯಿಾ ಪೇಳ್ದ ಪತ್ತೊಂಭತ್ತು ಕಥೆಗಳ್ ಶಿವಕೋಟಾಚಾರ್ಯರ್ ಪೇಳ್ದ ವಡ್ಡಾರಾಧನೆಯ ಕವಚವು ಮಂಗಳ ಮಹಾಶ್ರೀ ಶ್ರೀ. ಸ್ವಸ್ತಿ ಶ್ರೀಮದ್ರಾಯರಾಜ ಗುರು ಮಂಡಳಾಚಾರ್ಯ ಮಹಾವಾದಿ ವಾದಿರಾಯ ಪಿತಾಮಹ ಸಕಳ ವಿದ್ವಜ್ಜನ ಚಕ್ರವರ್ತಿಗಳುಮಪ್ಪ ಶ್ರೀ ಚಿಕ್ಕದೇವರ ಪ್ರಿಯಾಗ್ರಗುಡ್ಡನು ಕ್ಷೇಮಪುರದ ಅಮ್ಮಿಯಣ್ಣ ಸೆಟ್ಟಿಯ ಮಗ ಹರಿಯಣ್ಣನು ಯಮನಿಯಮ ಸ್ವಾಧ್ಯಾಯ ಧ್ಯಾನಮೌನಾನುಷ್ಠಾನ ಜಪತಪಸ್ಸಮಾಧಿಶೀಲಗುಣಸಂಪನ್ನರುಮಪ್ಪ ಶ್ರೀ ಭಾನು ಮುನಿಗಳ ವಾಕ್ಯಾಮೃತದಿಂ ಬರೆದುಕೊಟ್ಟನು ಬರಸಿಕೊಟ್ಟಾತನು ಓಜಣ್ಣಸೆಟ್ಟಿಯರ ಮಗ ಕಲ್ಲಪ್ಪಸೆಟ್ಟಿಯ ಕಮಲಶ್ರೀ ಅವ್ವಗಳಿಗೆ ಆತ್ಮಾರ್ಥವಾದೀ ವೊಡ್ಡಾರಾಧನೆಯ ಬರಯಿಸಿಕೊಟ್ಟು ದರ್ಕೆ ಮಂಗಳಮಹಾಶ್ರೀ"

ಎಂದು ಲಿಪಿಕಾರ ಪ್ರಶಸ್ತಿ ಇದೆ. ಇದರಿಂದ ಈ ಪ್ರತಿ ಕ್ರಿ. ಶ. ೧೪೦೩ ರಲ್ಲಿ ಹುಟ್ಟಿ ದಂತೆ ತಿಳಿದುಬರುತ್ತದೆ. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿರುವ K. A. 297 ಎಂಬ ಸಂಖ್ಯೆಯುಳ್ಳ ಕಾಗದದ ಹಸ್ತಪ್ರತಿ ಈ (ಖ) ಪ್ರತಿಯ ನಕಲಾಗಿದೆ. ಇದರ ಮಾತೃಕೆಯಲ್ಲಿ ಲುಪ್ತವಾಗಿರುವ ಭಾಗಗಳನ್ನು ಮೇಲೆ ಹೇಳಿರುವ (ಕ) ಪ್ರತಿಯ ಆಧಾರದ ಮೇಲೆ ತುಂಬಿ ಬರೆದಿದೆ. ಖ. ಪ್ರತಿಯೇ ಲಭ್ಯವಾಗಿದ್ದದ್ದರಿಂದ ಅದರ ನಕಲನ್ನು ಸಂಪಾದನಕಾರ್ಯಕ್ಕೆ ಉಪಯೋಗಿಸಿಕೊಳ್ಳಲಿಲ್ಲ.

(ಗ)—ಇದು ಸಾಲಿಗ್ರಾಮದ ಸರಾಫ್ ಪದ್ಮರಾಜಯ್ಯನವರ ಭಂಡಾರಕ್ಕೆ ಸೇರಿದ್ದು.

ದಪ್ಪ ಕಾಗದದ ಪ್ರತಿ. ಒಟ್ಟು ಹಾಳೆಗಳು 119. ಪ್ರತಿಹಾಳೆಯ ಉದ್ದಗಲ $12\frac{3}{4}'' \times 7\frac{3}{4}''$. ಪ್ರತಿ ಹಾಳೆಯ ಇಕ್ಕಡೆಗಳಲ್ಲೂ ಬರಹವಿದೆ. ಪಂಕ್ತಿಗಳ ಸಂಖ್ಯೆ 15. ಪ್ರತಿ ಪಂಕ್ತಿಯ ಅಕ್ಷರ ಸಂಖ್ಯೆ 28 ರಿಂದ ಹಿಡಿದು 38ರ ವರೆಗೆ; ಸರಾಸರಿ 32. ಱಕಾರ ವನ್ನು ಬರೆದಿಲ್ಲ. ವ್ಯಂಜನಾಂತಗಳನ್ನು ಸ್ವರಾಂತಗಳನ್ನಾಗಿ ಲಿಖಿಸಿದೆ; ಮುತ್ತಿದಾಗಳು, ಬಿಲ್ಲೊಳು, ಕುದುರೆಯೊಳು, ಯಾನೆಯೊಳು ಹಾಳೆ 90 (b), 10–13), ಪುಟ್ಟಿದರು (ಹಾಳೆ 84-10). ಗ್ರಂಥದ ಆರಂಭದಲ್ಲಿ.

ಓಂ ನಮಸ್ಸಿದ್ಧೇಭ್ಯಃ ॥ ಶ್ರೀ ವೀತರಾಗಾಯನಮಃ । ಶ್ರೀಮತ್ಪಂಚ ಗುರುಭ್ಯೋನಮಃ । ಶ್ರೀ ಮದುಭಯಲಕ್ಷ್ಮೀ ಸಮಣಾಯ ನಮಃ । ನಿರ್ವಿಘ್ನಮಸ್ತು ॥ ಶ್ರೀ ಸ್ಯಾದ್ವಾದ ಧ್ವಜಾ ಪರಮಾ ಗದು ಪ್ರಕಾಶರೂ ಭಾರತ್ಯೈ ನಮಃ

ಎಂದಿದ್ದು 'ನಮಃ ಶ್ರೀವರ್ಧಮಾನಾಯ' ಎಂಬ ಶ್ಲೋಕದಿಂದ ಮೂಲಗ್ರಂಥ ಪ್ರಾರಂಭವಾಗುತ್ತದೆ. ಅಕ್ಷರಗಳು ದುಂಡಗೆ ದಪ್ಪಗೆ ಬಿಡಿ ಬಿಡಿಯಾಗಿ ಬರೆದಿವೆ. ಈ ಕಾರಕ್ಕೆ ಪ್ರತಿಯಾಗಿ ಅದರ ಬದ್ಧರೂಪ ಚಿಹ್ನೆಯನ್ನು (ೀ) ಬರೆದಿರುತ್ತದೆ. ಅಂತ್ಯದಲ್ಲಿ.

ಆನಂದ ಸಂವತ್ಸರದ ಕಾರ್ತೀಕ ಬಹುಳ ಪಾಡ್ಯ ಸೋಮವಾರದಲ್ಲೂ ಮಲ್ಲರಸನು ಬರೆದ ವೊಡ್ಡಾರಾಧನೆ ಎಂದು ಮೂಲಪ್ರತಿಯಲ್ಲಿ ಇಥೆ॥ ಯಿಂತು ಶಕ ಸಾವಿರದ ಯಂಟುನೂರು ಇಪ್ಪತ್ತನೆಯ ವಿಳಂಬಿನಾಮ ಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆ ಶುಕ್ರವಾರದಲ್ಲೂ ಬ್ರಹ್ಮಯ್ಯನ ಬರೆದ ಪುಸ್ತುಕಕ್ಕೆ ಭದ್ರಂ ಶುಭಂ ಮಂಗಳಂ.

ಎಂದು ಲಿಪಿಕಾರಪ್ರಶಸ್ತಿ ಇದೆ. ಇದರಲ್ಲಿ ಮೊದಲನೆಯ ವಾಕ್ಯ (ಕ) ಪ್ರತಿಯ ಅಂತ್ಯ ದಲ್ಲಿರುವ ಹಾಗೆಯೇ ಇದೆ. ಆ ವಾಕ್ಯದ 'ಮೂಲಪ್ರತಿ' ಎಂಬ ಅಕ್ಷರಗಳ ಮೇಲೆ ಪಂಕ್ತಿಯ ನಡುವೆ 'ನನ್ನ ಸ್ವಂತ' ಎಂದು ಕೆಂಪು ಶಾಯಿಯಲ್ಲಿ ಬರೆದಿದೆ. ಮುಂದಿನ ವಾಕ್ಯದ 'ಶುಕ್ರವಾರದಲ್ಲೂ' ಎಂದಾದಮೇಲೆ ಕುಂಟು ಪಂಕ್ತಿಯಲ್ಲಿ 'ಮೂಲಪ್ರತಿ ಜೀರ್ಣವಾಗಿದ್ದುದರಿಂದ' ಎಂದು ಕೆಂಪು ಮಸಿಯಲ್ಲಿ ಬರಹವಿದೆ. ಇಲ್ಲಿ ಹೇಳಿರುವ ಮೂಲಪ್ರತಿ (ಕ) ಪ್ರತಿಯೇ ಆಗಿದೆ. ಅದರ ನೇರ ನಕಲಾದ (ಗ) ಪ್ರತಿ ಕ್ರಿ. ಶ. ೧೮೯೮ ನೆಯ ಇಸವಿಯಲ್ಲಿ ಸಿದ್ಧವಾಯಿತೆಂದು ತಿಳಿದು ಬರುತ್ತದೆ. (ಕ) ಮಾತೃಕೆಯೇ ದೊರೆತಿರುವಾಗ ಅದರ ನಕಲಾದ (ಗ) ದಿಂದ ಸಂಪಾದನ ಕಾರ್ಯಕ್ಕೆ ಪ್ರಯೋಜನ ವೇನು ಎಂದು ಶಂಕಿಸಬಹುದು. (ಕ) ಪ್ರತಿಗೆ ಈಗ ಇರುವಷ್ಟು ಜೀರ್ಣಾವಸ್ಥೆ ೧೮೯೮ ನೆಯ ಇಸವಿಯಲ್ಲಿ ಇದ್ದಿರಲಾರದೆಂದು ಹೇಳಬಹುದು. ಅದರಲ್ಲಿ ಈಗ ಮುರಿದುಹೋಗಿ ರುವ ಭಾಗಗಳು ಆಗ ಇನ್ನೂ ಸರಿಯಾಗಿಯೇ ಇದ್ದುವು. ಗ್ರಂಥಾಂತ್ಯದಲ್ಲಿ ಬರುವ ಗ್ರಂಥಕರ್ತನ ಹೆಸರು (ಕ) ದಲ್ಲಿ 'ಟ್ಯಾಚಾರ್ಯ' ಎಂದು ಇದ್ದು ಹಿಂದಿನ ಅಕ್ಷರಗಳ ಭಾಗ ತ್ರುಟಿತವಾಗಿದೆ; ಅದರ ನಕಲಾದ (ಗ) ದಲ್ಲಿ 'ಶಿವಕೋಟ್ಯಾಚಾರ್ಯ' ಎಂದು ಆ ಹೆಸರು ಪೂರ್ಣವಾಗಿದೆ. ಆದ್ದರಿಂದ (ಕ) ದಲ್ಲಿ ಈಗ ತ್ರುಟಿತವಾಗಿ ನಷ್ಟವಾಗಿರುವ

ಅಕ್ಷರಗಳನ್ನೋ ಶಬ್ದಗಳನ್ನೋ (ಗ) ದಿಂದ ತುಂಬಬಹುದಾಗಿದೆ. ಈ ದೃಷ್ಟಿಯಿಂದ ಅದು ಸಂಪಾದನಕಾರ್ಯಕ್ಕೆ ನೆರವಾಗುತ್ತದೆ.

(ಘ)—ಈ ಓಲೆಯ ಪ್ರತಿಯೂ ಸರಾಫ್ ಪದ್ಮರಾಜಯ್ಯನವರ ಪುಸ್ತಕಭಂಡಾರಕ್ಕೆ ಸೇರಿದ್ದು. ಇದರಲ್ಲಿ 119 ಓಲೆಗಳಿದ್ದು ಗ್ರಂಥ ಸಮಗ್ರವಾಗಿದೆ. ಪ್ರತಿ ಓಲೆಯ ಅಳತೆ $13\frac{1}{2}'' \times 2''$; ಓಲೆಯ ಒಂದು ಪಾರ್ಶ್ವದಲ್ಲಿ ಪಂಕ್ತಿಗಳ ಸಂಖ್ಯೆ ೮-೯; ಪ್ರತಿಪಂಕ್ತಿಯಲ್ಲಿಯೂ ಅಕ್ಷರಗಳ ಸಂಖ್ಯೆ 64 ರಿಂದ 66ರವರೆಗೆ. ಇದರಲ್ಲಿ ಱಕಾರವನ್ನು ಸರಿಯಾಗಿ ಬರೆದಿದೆ; ೞಕಾರವನ್ನು ಬರೆದಿಲ್ಲ; ಆದಕ್ಕೆ ಬದಲಾಗಿ ಳಕಾರ ಲಿಖಿತವಾಗಿದೆ. ವ್ಯಂಜನಾಂತಗಳು ಹಾಗೆಯೇ ಅನೇಕ ಎಡೆ ಲಿಖಿತವಾಗಿವೆ; ಅವು ಸ್ವರಾಂತಗಳಾಗಿಲ್ಲ; ಮುತ್ತಿದಾಗಳ್, ಬಿಲ್ಲೊಳ್, ಕುದುರೆಯೊಳ್, ಯಾನೆಯೊಳ್ (ಓಲೆ 96 (b)) ಪೇಳಲ್ ತೊಡಗಿದರ್ (ಓಲೆ 60 b); ಕೆಲವೆಡೆ ಸ್ವರಾಂತಗಳಿವೆ; ಸ್ನೇಹದೊಳು ಕೂಡಿ (ಓಲೆ 33b). "ಶ್ರೀವೀತರಾಗಾಯನಮಃ" ಎಂದು ಬರವಣಿಗೆ ಆರಂಭವಾಗಿ "ತಿಳೋಯ ಸಬ್ಬ ಜೀವಾಣಂ....' ಎಂಬ ಗಾಹೆಯಿಂದ ಗ್ರಂಥಾರಂಭವಾಗಿದೆ. ಮೊದಲನೆಯ ಪತ್ರದ ಎರಡನೆಯ ಪಾರ್ಶ್ವ (b) ದಲ್ಲಿ ಏನೂ ಬರವಣಿಗೆಯಿಲ್ಲ, ಅಲ್ಲಲ್ಲಿ ಹುಳುತಿಂದು ಓಲೆಗಳಲ್ಲಿ ರಂಧ್ರಗಳಾಗಿವೆ. ಕೊನೆಯಲ್ಲಿ ಜದಿತಾಏವಂ ಅನಗಾರಾ, ಕಿಂಪುಣ ಅಣಗಾರ, ಸಹಾದುಗೇಣ, ಜಿಣ ವಯಣ ಮರುದಭೂದಂ—ಎಂಬ ಮೂರು ಗಾಹೆಗಳಾದ ಮೇಲೆ 'ಈ ಪೇಳ್ದ ಪತ್ತೊಂಭತ್ತು ಕಥೆಯಂ ರೇವಾಕೋಟ್ಯಾಚಾರ್ಯರ್ಪ್ಪೇಳ್ದ ವಡ್ಡಾರಾಧನೆಯ ಕವಚವೆಂಬಧಿಕಾರಉ' ಎಂದು ಲಿಖಿತವಿದ್ದು ಆಮೇಲೆ 'ಆವಾವ ಜನ್ಮಜನ್ಮದೊಳ್' ಎಂದು ಆರಂಭವಾಗುವ ಕಂದ ಪದ್ಯವಿದೆ. ಅನಂತರ

> ಭಾವ ಸಂವತ್ಸರದ ಪುಷ್ಯ ಬ ೫ ಸೋಮವಾರದಲು ಪದುಮಿಸೆಟ್ಟಿಯ ಮಗ ಹರಿಯಪ್ಪನ ವಡ್ಡಾರಾಧನೆ.

ಎಂದು ಲಿಪಿಕಾರನ ಬರವಣಿಗೆ ಇದೆ. ಇದರಿಂದ ಈ ಪ್ರತಿ ಲಿಖಿತವಾದ ಕಾಲವನ್ನು ಖಚಿತವಾಗಿ ಹೇಳುವುದಕ್ಕಾಗದಿದ್ದರೂ ಇದು ಸುಮಾರು ೨೦೦-೨೫೦ ವರ್ಷಗಳಷ್ಟು ಹಿಂದಿನದೆಂದು ಊಹಿಸಬಹುದಾಗಿದೆ. ಇಲ್ಲಿನ ರೇವಾಕೋಟಾಚಾರ್ಯ ಎಂಬ ಹೆಸರಿನ ಎರಡನೆಯ ಅಕ್ಷರವನ್ನು ಮೊದಲು ವ ಎಂದು ಬರೆದಿದ್ದು ಅನಂತರ ಅದಕ್ಕೆ ದೀರ್ಘ ಚಿಹ್ನೆಯನ್ನು (ಾ) ಬರೆದಿದೆ.

(ಚ)—ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಸರಗೂರಿಗೆ ಸೇರಿದ ಪ್ರತಿ ಇದೆಂದು ತಿಳಿದುಬಂದಿದೆ. ಈ ಓಲೆಯ ಪ್ರತಿಯೂ ಸರಾಫ್ ಪದ್ಮರಾಜಯ್ಯನವರ ಬಳಿಯಲ್ಲೇ ಇತ್ತು. ಇದರ ಓಲೆಗಳ ಸಂಖ್ಯೆ ೧೨೭-೧೯೦; ಓಲೆಯ ಉದ್ದಗಲಗಳು $18'' \times 2.4''$; ಪ್ರತಿ ಪುಟಕ್ಕೆ ೧೦-೧೧ರ ವರೆಗೆ ಪಂಕ್ತಿಗಳಿವೆ; ಪ್ರತಿ ಪಂಕ್ತಿಯಲ್ಲಿ ಸರಾಸರಿ 80 ಅಕ್ಷರಗಳಿವೆ. ಅರ್ಧಾಕ್ಷರಗಳು ಅಲ್ಲಲ್ಲಿ ಲಿಖಿತವಾಗಿದ್ದರೂ ಸಾಧಾರಣವಾಗಿ ಅವುಗಳು ಸ್ವರಾಂತವಾಗಿ ಲಿಖಿತವಾಗಿರುವುದೇ ಹೆಚ್ಚು; ಎಂಬಳು (ಓಲೆ 144 b);

ಮೂಲದೊಳು (ಅದೇ), ಪಸುಂಬೆಗಳೊಳು ತೀವಿ (149 ಓ) ಇತ್ಯಾದಿ. ಱಕಾರವನ್ನು ಅದಿರಬೇಕಾದ ಎಡೆಗಳಲ್ಲಿ ಸರಿಯಾಗಿಯೇ ಬರೆದಿದೆ; ೞಕಾರ ಲಿಖಿತವಾಗಿಲ್ಲ. ಅಕ್ಷರ ಗಳು ದುಂಡಾಗಿ ಮುದ್ದಾಗಿ ದಪ್ಪವಾಗಿವೆ. ಪ್ರತಿಯೊಂದು ಓಲೆಯೂ ಒಂದಲ್ಲ ಒಂದು ರೀತಿಯಲ್ಲಿ ತ್ರುಟಿತವಾಗಿದೆ. "ತಿಳೋಯ ಸಬ್ಬ ಜೀವಾಣಂ" ಎಂಬ ಗಾಹೆಯಿಂದ ಗ್ರಂಥಾರಂಭವಾಗಿದೆ. ಈ ಪುಸ್ತಕ ಅಪೂರ್ಣವಾಗಿರುವುದರಿಂದ ಕೊನೆಯಲ್ಲಿ ಇದ್ದಿರ ಬಹುದಾದ ಲಿಪಿಕಾರನ ಪ್ರಶಸ್ತಿ ದೊರೆತಿಲ್ಲ. ಈ ಪ್ರತಿಯೂ ಸುಮಾರು ೨೦೦-೩೦೦ ವರ್ಷಗಳಷ್ಟು ಹಿಂದಿನದಾಗಿರಬಹುದು. ಚಾಣಾಕ್ಯರಿಸಿಯ ಕಥೆಯಲ್ಲಿನ 'ದ್ರವ್ಯಮಂ ಕೊಟ್ಟು' (ಪುಟ ೧೮೧-ಪಂ ೯) ಎಂಬ ವರೆಗೆ ಮಾತ್ರ ಈ ಓಲೆಯ ಪುಸ್ತಕದಲ್ಲಿ ಗ್ರಂಥ ಲಭ್ಯವಾಗಿವೆ.

(ಛ)—ಇದು ಆರಾದ ಸೆಂಟ್ರಲ್ ಜೈನ ಓರಿಯಂಟಲ್ ಲೈಬ್ರರಿಗೆ ಸೇರಿದ್ದು. ಈ ಓಲೆಯ ಪ್ರತಿ ಅಸಮಗ್ರವಾಗಿದೆ. ಓಲೆಗಳ ಸಂಖ್ಯೆ ೧೮೦; ೧೬೪ ರಿಂದ ೧೭೦ರ ವರೆಗಿನ ಓಲೆಗಳು, ಎರಡನೆಯ ದಾರ ಪೋಣಿಸುವ ರಂಧ್ರದ ಸುತ್ತಲೂ, ಮುರಿದು ಹೋಗಿವೆ; ೧೭೧ ನೆಯ ಓಲೆಯಿಂದ ಮುಂದಕ್ಕೆ ರಂಧ್ರವು ವಿಶಾಲತರವಾಗುತ್ತ ಬಂದು ಅಲ್ಲಿನ ಬರವಣಿಗೆ ನಷ್ಟವಾಗಿದೆ; ಕೊನೆಯ ಎರಡು ಓಲೆಗಳು ಒಡೆದಿವೆ. ಪ್ರತಿ ಓಲೆಯ ಉದ್ದಗಲ $11\frac{1}{2}'' \times 1.8''$; ಪಂಕ್ತಿಗಳ ಸಂಖ್ಯೆ ೭-೮; ಅಕ್ಷರಗಳ ಸಂಖ್ಯೆ 42-46. ರುಷಿಯರ್ಕಳ್ (135 a), ವನಿತ್ಯಂಗಳ್ (133 a) ಮನೆಗಳೊಳ್ (124 ಓ) ಇತ್ಯಾದಿಯಾಗಿ ವ್ಯಂಜನಾಂತಗಳು ಕೆಲವೆಡೆ ಬಂದಿವೆ. ಸ್ವರಾಂತಗಳೂ ಲಿಖಿತವಾಗಿಲ್ಲ ದಿಲ್ಲ; ಮಡಕೆಗಳೊಳು (96), ಯುವಱಿೊಳು (94) ಇತ್ಯಾದಿ. ಱಕಾರವನ್ನು ಶುದ್ಧ ವಾಗಿ ಬರೆದಿದೆ. ಅಕ್ಷರಗಳು ಗುಂಡಾಗಿ ಸುಂದರವಾಗಿವೆ. ಆರಂಭದಲ್ಲಿ 'ಶ್ರೀ ಪಂಚ ಗುರುಭ್ಯೋ ನಮಃ ಶುಭಮಸ್ತು' ಎಂದಿದ್ದು 'ತಿಳೋಯ ಸಬ್ಬ....' ಎಂಬ ಗಾಹೆಯಿಂದ ಗ್ರಂಥ ಲೇಖನ ಆರಂಭವಾಗಿದೆ. ಇದರಲ್ಲಿ ಲಿಪಿಕಾರನ ಪ್ರಶಸ್ತಿ ಇಲ್ಲ. ಇದೂ ಸುಮಾರು 300 ವರ್ಷಗಳಷ್ಟು ಹಳೆಯ ಪ್ರತಿಯೆಂದು ತೋರುತ್ತದೆ.

ಈ ಆರು ಹಸ್ತಪ್ರತಿಗಳ ಪಾಠಸಂಕಲನ ಕಾರ್ಯ ಮುಗಿದಮೇಲೆ ಇನ್ನೊಂದು ಓಲೆಯ ಪ್ರತಿ ಡಾ. ಆದಿನಾಥ ನೇಮಿನಾಥ ಉಪಾಧ್ಯೆಯವರ ಮೂಲಕ ಲಭ್ಯವಾಯಿತು. ಇದರಲ್ಲಿನ ೨೫ ಓಲೆಗಳನ್ನು ಮಾತ್ರ ತರಿಸಿಕೊಂಡು ಪಾಠಾಂತರಗಳನ್ನು ಗಮನಿಸಿದ ತರುವಾಯ ಇದು ಘ.ಚ.ಛ. ಪ್ರತಿಗಳ ಸಂಪ್ರದಾಯಕ್ಕೆ ಸೇರಿದ್ದೆಂದು ಖಚಿತವಾಯಿತು. ಆದ್ದರಿಂದ ಸಂಪಾದನಕಾರ್ಯಕ್ಕೆ ಈ ಪ್ರತಿಯನ್ನು 'ಸುಕುಮಾರನ ಕಥೆ' ಯಿಂದ ಮುಂದಕ್ಕೆ ಉಪಯೋಗಿಸಿಕೊಳ್ಳಲಿಲ್ಲ. ಇದರ ವಿಷಯವಾಗಿ ಡಾ. ಉಪಾಧ್ಯೆಯವರು ಕೆಲವಂಶಗಳನ್ನು ತಿಳಿಸಿರುತ್ತಾರೆ—

ಈ ಪ್ರತಿ ಕೊಲ್ಹಾಪುರದಲ್ಲಿರುವ ಶ್ರೀ ಲಕ್ಷ್ಮೀಸೇನಭಟ್ಟಾರಕರವರ ಜೈನಮಠದ ಪುಸ್ತಕ ಭಂಡಾರಕ್ಕೆ ಸೇರಿದ್ದು; ಇದಕ್ಕೆ 45 ಎಂಬ ಸಂಖ್ಯೆಯನ್ನು ಕೊಟ್ಟಿದೆ. ಇದು ತಾಳೆ ಯೋಲೆಯ ಪ್ರತಿ. ಇದರ ಒಂದು ಕಡೆಯ ಮರದ ಪಟ್ಟಿಕೆಯ ಮೇಲೆ 'ಉಪಸರ್ಗ ಕೇವಲಿ

ಕಥೆ' ಎಂಬ ಬರೆಹ ಹಳಗನ್ನಡ ಅಕ್ಷರಗಳಲ್ಲಿ ಕಾಣುತ್ತದೆ. ಈ ಹೆಸರು ಗ್ರಂಥದ ಒಳಗಡೆಯೂ ಓಲೆಯಲ್ಲಿಯೂ ಕಾಣುವುದಿಲ್ಲವಾದ್ದರಿಂದ ಆ ಭಂಡಾರದ ಅಧಿಕಾರಿ ಅದಕ್ಕೆ ಒಂದು ಹೆಸರನ್ನು ಕೊಡುವ ಸಂದರ್ಭದಲ್ಲಿ ಆರಂಭದ ಕೆಲವು ಓಲೆಗಳನ್ನು ಓದಿ ನೋಡಿ ಈ ಹೆಸರನ್ನು ಬರೆದಿರುವನೆಂದು ಊಹಿಸಬೇಕಾಗಿದೆ. ಇದರಲ್ಲಿ 147 ಓಲೆಗಳಿವೆ. ಕೊನೆಯ ಓಲೆಯ ಒಂದು ಪಕ್ಕದಲ್ಲಿ ಮಾತ್ರ ಬರಹವಿದೆ; ಉಳಿದ ಓಲೆಗಳ ಇಕ್ಕಡೆಗಳಲ್ಲೂ ಬರಹವಿದೆ. ಇಕ್ಕಡೆಯ ಮರದ ಪಟ್ಟಿಗಳನ್ನು ಬಿಟ್ಟು ಇದರ ಗಾತ್ರ 11.75·×1·5″×2″ ಅಂಗುಲಗಳು. ಪ್ರತಿ ಓಲೆಯಲ್ಲೂ 8 ಪಂಕ್ತಿಗಳಿದ್ದು ಪಂಕ್ತಿಯೊಂದಕ್ಕೆ 55ರಿಂದ 60 ಅಕ್ಷರಗಳಿವೆ. ಱಕಾರವು ಸರಿಯಾಗಿ ಲಿಖಿತವಾಗಿದೆ. ೞಕಾರವನ್ನು ಬರೆದಿಲ್ಲ; ಅದಿರಬೇಕಾದ ಎಡೆಗಳಲ್ಲಿ ಳಕಾರವನ್ನು ಬರೆದಿದೆ. ಗ್ರಂಥವು ಆರಂಭವಾಗುವುದು ಹೀಗೆ—

> ಸುಕುಮಾರಸ್ವಾಮಿ ॥ ನಮಃ ಸಿದ್ಧೇಭ್ಯಃ ॥ ಇಂದಸಯವಂದಿಯಾಣಂ ಇತ್ಯಾದಿ ॥ ಏಸಸುರಾಸುರ....॥ ತಿಳೋಯ ಸಬ್ಬ ಜೀವಾಣಂ ಹಿಯಂ ಧಮ್ಮೋವ ದೇಸಿಣಂ। ವಡ್ಢಮಾಣಂ ಮಹಾವೀರಂ ವಂದಿತಾ, ಸವ್ವ ವೇಇಣಂ ॥ ನಮಃ ಶ್ರೀ ವರ್ಧಮಾನಾಯ....॥ ಯೆಂದಿಂತು ಶ್ರೀ ವರ್ಧಮಾನ ಭಟ್ಟಾರಕರ್ಗ್ಗೆ....ಇತ್ಯಾದಿ.

ಗ್ರಂಥಾಂತ್ಯದಲ್ಲಿ ಕೊನೆಯ ಕಥೆಯನ್ನು ಬರೆದು ಮುಗಿಸಿದಮೇಲೆ ಮೂರು ಪ್ರಾಕೃತ ಗಾಹೆಗಳು ಲಿಖಿತವಾಗಿವೆ; ಜದಿತಾ ಏವಂ. . . ॥ ಕಿಂ ಪುಣ ॥ ಜಿಣವಯಣ. . . ॥ ಈ ಗಾಹೆಗಳ ಪಾಠ ತುಂಬ ಕೆಟ್ಟುಹೋಗಿದೆ. ಇದನ್ನು ಬರೆದಾದಮೇಲೆ

> ಯಿಾ ಪೇೞ್ದ ಪತ್ತೊಂಭತ್ತು ಕಥೆಯ ರೇವಕೋಟ್ಯಾಚಾರ್ಯ್ಯರ್ಪೇೞ್ದ ವಡ್ಡಾರಾಧನೆಯ ಕವಚಮೆಂಬಧಿಕಾರಉೂ ॥ ಶ್ರೀ ಪಂಚಗುರುಶರಣು ॥ ಪ್ಲವ ಸಂವತ್ಸರದ ಕಾರ್ತೀಕ ಸುದ ೧ ಶುಕ್ರವಾರ ಬೇಲೂರ ಚಂದ್ರಯ್ಯವೈಶ್ಯರ ಚಂದ್ರಯ್ಯನು ವಡ್ಡಾರಾಧನೆಯ ಪುಸ್ತಕವನು ಬರದನು ಮಂಗಲಮಹಾಶ್ರೀ ೪ ॥

ಎಂದು ಲಿಪಿಕಾರ ಪ್ರಶಸ್ತಿ ಇದೆ. ಈ ಪ್ರತಿ ಹುಟ್ಟಿದ ಕಾಲವನ್ನು ನಿಷ್ಕರ್ಷಿಸುವುದಾಗದಿದ್ದರೂ ಇದು ಮುನ್ನೂರು ವರ್ಷಗಳಷ್ಟು ಹಿಂದೆ ಲಿಖಿತವಾಗಿರಬೇಕೆಂದು ಊಹಿಸಬಹುದಾಗಿದೆ. ಇದು ಲಿಖಿತವಾದದ್ದು ಬೇಲೂರಿನಲ್ಲಿ. ಇದು ಬಹುಶಃ ಹಾಸನ ಜಿಲ್ಲೆಯಲ್ಲಿರುವ ಬೇಲೂರೇ ಇರಬಹುದು.[1] ಈ ಪ್ರತಿಯ ಪಾಠಗಳು ಘಚಥ ಪ್ರತಿಗಳ ಪಾಠಗಳಂತೆಯೇ ಇವೆ; ಈ ನಾಲ್ಕೂ ಒಂದು ಪಾಠಸಂಪ್ರದಾಯಕ್ಕೆ ಸೇರಿದುವಾಗಿವೆ.

## ಹಸ್ತಪ್ರತಿಗಳ ಪರಸ್ಪರ ಸಂಬಂಧ


ಮೇಲೆ ವರ್ಣಿಸಿರುವ ಏಳು ಪ್ರತಿಗಳಿಗೆ ಇರುವ ಅಥವಾ ಇದ್ದಿರಬಹುದಾದ ಪರಸ್ಪರ ಸಂಬಂಧಗಳನ್ನು ತಿಳಿದುಕೊಳ್ಳಬೇಕಾಗಿದೆ. ಇದಕ್ಕಾಗಿ ಸಮಾನಪಾಠಗಳು, ವಿಚ್ಛೇದಕ

[1] *Bṛhatkathakosa*, ಪೀಠಿಕೆ, ಪು. ೬೪.

ಸ್ಖಾಲಿತ್ಯಗಳು, ವಿಶೇಷ ಸ್ಖಾಲಿತ್ಯಗಳು ಎಂಬಿವೇ ಮುಂತಾದುವನ್ನು ಪರಿಶೀಲಿಸುವುದು ಅವಶ್ಯಕ. ಈ ಪ್ರತಿಗಳಲ್ಲಿ ಕ.ಖ.ಗ. ಎಂಬ ಮೂರರಲ್ಲಿ ಸಮಾನಪಾಠಗಳಿರುವುದರಿಂದಲೂ ಅವುಗಳಿಗೂ ಘ.ಚ.ಛ.ಜ. ಪ್ರತಿಗಳಲ್ಲಿರುವ ಪಾಠಗಳಿಗೂ ವ್ಯತ್ಯಾಸಗಳಿರುವುದರಿಂದಲೂ ಕ ಖ ಗ ಪ್ರತಿಗಳನ್ನು ಒಂದು ಗುಂಪೆಂದು ಭಾವಿಸಬಹುದು; ಉಳಿವ ನಾಲ್ಕು ಪ್ರತಿಗಳು ಇನ್ನೊಂದು ಗುಂಪಾಗುತ್ತವೆ.[2] ಮೊದಲ ಗುಂಪಿನ ಕಗ ಎಂಬೆರಡು ಪ್ರತಿಗಳಿಗೆ ಜನ್ಯ ಜನಕ ಸಂಬಂಧವಿರುವುದನ್ನು ಬೇರೆ ಪ್ರತ್ಯಕ್ಷ ಆಧಾರಗಳಿಂದ ಸ್ಥಾಪಿಸಬಹುದು. ಕ.ದ ನೇರಾದ ನಕಲೇ ಗ ಆಗಿದೆ. ಇನ್ನು ಕ. ಖ. ಗಳ ಸಂಬಂಧ. ಇವು ಒಂದರಿಂದ ಇನ್ನೊಂದು ಬಂದಿದೆಯೆ ಇಲ್ಲವೆ? ಇಲ್ಲಿ ಗ್ರಂಥಪಾತವೊಂದು ಸಹಾಯಕ್ಕೆ ಬರುತ್ತದೆ. ವಿದ್ಯುಚ್ಚೋರ ನೆಂಬ ರಿಸಿಯ ಕತೆಯಲ್ಲಿ (ವಡ್ಡಾ ೧೨೬) ಕೆಳಗಿನ ವಾಕ್ಯವಿದೆ.

> ವಿಸ್ತೀರ್ಣ ಗುಹೆಯುಂಟದಱ ಬಾಗಿಲಂ ಮುಚ್ಚಿರ್ದ ಸಿಲೆಯಂ ಕಳೆದದಱೊಳಗೆ ಪೊಕ್ಕು ಹಾರಮಂ ಕೊಂಡು *ಪೊೞಲ ಜನಮುನೆಲ್ಲಮನೆಂದಂ ನಿಮ್ಮ ನಿಮ್ಮ ಕಸವರಮುಪ್ಪುದನಾರಯ್ದು ಪಲ್ಲಟಿಸಲೀಯದೆ ನೋಡಿಕೊಳ್ಳಿಮೆಂದು ತೋಱಿದೊಡವರುಂ ತಂತಮ್ಮ ಕಸವರಮೆಲ್ಲಮ ನಾರಯ್ದು ಕೊಂಡರ್ ಮತ್ತೆ ವಿದ್ಯುಚ್ಚೋರನುಂ ಹಾರಮಂ ಕೊಂಡು* ಪೋಗಿಯರಸಂಗೊಪ್ಪಿಸಿ ದೊಡೆ....


ಇಲ್ಲಿ ಚುಕ್ಕಿಗಳ ನಡುವೆ [*—*] ಇರುವ ಭಾಗ ಕ ಪ್ರತಿಯಲ್ಲಿ ಇಲ್ಲ; ಅದರ ನೇರ ನಕಲಾದ ಗ ದಲ್ಲಿಯೂ ಇಲ್ಲ. ಆದರೆ ಇದು ಖದಲ್ಲಿದೆ. ಇದು ಕದಿಂದ ಖ ಬಂದಿಲ್ಲ ಎಂಬುದನ್ನು ಸ್ಥಾಪಿಸುತ್ತದೆ; ಇವೆರಡರ ಮೂಲ ಒಂದು ಪ್ರತಿ ಇದ್ದಿರಬೇಕೆಂದೂ ಆ ಪ್ರತಿಯ ಸ್ವತಂತ್ರ ನಕಲುಗಳು ಇವಾಗಿರಬೇಕೆಂದೂ ಸ್ಥಾಪಿಸಬಹುದು; ಜೊತೆಗೆ ಖದಲ್ಲಿ ಮಾತ್ರವೇ ಅದಕ್ಕೇ ವಿಶಿಷ್ಟವಾಗಿರುವ ಪಾಠಗಳು ಇವೆ; ಮುಪ್ಪರೂಪೆಲ್ಲಿಯುಮಿಲ್ಲೊಂ ದರದ (33-7), + ಪೊಡವಟ್ಟು (ಅದೇ-9), ದಿವಸ (ಅದೇ-14) ಇವನ್ನು ನೋಡಿ ದರೆ ಕ. ಖ. ಗಳಿಗೆ ಜನ್ಯಜನಕ ಸಂಬಂಧವಿಲ್ಲವೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಮೂರು ಪ್ರತಿಗಳ ಸಂಬಂಧ ಕೆಳಗೆ ಕಾಣಿಸಿದಂತೆ ಇರಬಹುದು.





ಇನ್ನು ಎರಡನೆಯ ಗುಂಪಿನ ಪ್ರತಿಗಳ ವಿಚಾರ. ಇದರ ನಾಲ್ಕು ಪ್ರತಿಗಳಲ್ಲೂ ಸಮಾನ ಸ್ಖಾಲಿತ್ಯಗಳು ಎಂದರೆ ಪಾಠಗಳು ಹೇರಳವಾಗಿವೆ; ಒಂದೊಂದಕ್ಕೂ ವಿಶಿಷ್ಟ

[2] ಈ ವಿಷಯವಾಗಿ 'ಕನ್ನಡ ಗ್ರಂಥಸಂಪಾದನೆ' ೧೫೫–೧೫೯ ಪುಟಗಳನ್ನು ನೋಡಬಹುದು.

ವಾದ ಸ್ಖಾಲಿತ್ಯಗಳೂ ಇವೆ. ಉದಾ—ಪುಟ. 8—9 ಇವರೆ (ಘ), ಅವರಂ (ಚ), ಇವರ್ಗೆ (ಛ), ಳನಾಂ (ಅದೇ 16) ಇತ್ಯಾದಿ. ಅಲ್ಲದೆ ಒಂದೊಂದು ಪ್ರತಿಯಲ್ಲೂ ಇರುವ ತಪ್ಪು ಉಳಿದ ಮೂರರಲ್ಲಿ ಇಲ್ಲದಿರುವುದನ್ನು ನೋಡಬಹುದು. ಎಮ್ಮುಕಿವ ಎಂಬ ತಪ್ಪು ಚಛಜಗಳಲ್ಲಿಲ್ಲ. ಚದಲ್ಲಿರುವ + ತಿರಸ್ಕರಿಸಿ ಎಂಬ ಅಧಿಕ ಪಾಠ ಘಛಜಗಳಲ್ಲಿಲ್ಲ. ಛ ದಲ್ಲಿರುವ ನುಡಿ$^{3}$ (೧೨-೧) ಎಂಬುದು ಘಚಜಗಳಿಲ್ಲ. ಜ ದಲ್ಲಿರುವ 'ವಿಧಿವಶದೆ' ಎಂಬ ಪಾಠವು (13-4) ಘಚಛಗಳಲ್ಲಿಲ್ಲ. ಇದರಿಂದ ಈ ನಾಲ್ಕು ಪ್ರತಿಗಳೂ ಸಮಾನಮೂಲದಿಂದ ಸ್ವತಂತ್ರವಾಗಿ ಬಂದಿರುವ ನಕಲುಗಳೆಂದು ಹೇಳುವುದು ಸಾಧ್ಯವಾಗುತ್ತದೆ; ಎಂದರೆ ಇವಕ್ಕೆ ಜನ್ಯಜನಕ ಸಂಬಂಧವಿಲ್ಲವೆಂದಾಗುತ್ತದೆ. ಭದ್ರಬಾಹು ಭಟಾರರ ಕಥೆಯಲ್ಲಿ ಬರುವ ಒಂದು ದೀರ್ಘವಾದ ಅಧಿಕಪಾಠ ಘಚಛ ಪ್ರತಿಗಳಲ್ಲಿ ಮಾತ್ರವೇ ಇರುವುದೂ (ಬಹುಶಃ ಇದು ಜದಲ್ಲಿಯೂ ಇರಬೇಕು.) ಇವಕ್ಕೆ ಸಮಾನ ಮೂಲವೊಂದರ ಸೂಚಕವಾಗಬಹುದು. ಆದ್ದರಿಂದ ಈ ನಾಲ್ಕು ಪ್ರತಿಗಳ ಸಂಬಂಧ ಹೀಗಿರಬಹುದು.




ಆದ್ದರಿಂದ ಈ ಏಳು ಪ್ರತಿಗಳ ಪರಸ್ಪರ ಸಂಬಂಧವನ್ನು ಕೆಳಗೆ ಕಾಣಿಸಿರುವಂತೆ ನಿರೂಪಿಸಬಹುದು.




ಮೊದಲ ಗುಂಪಿನ ಪ್ರತಿಗಳಲ್ಲಿ ಕಾಣುವ ಕೆಲವು ಕ್ಲಿಷ್ಟಪಾಠಗಳಿಗೆ ಎರಡನೆ ತಂಡದ ಪ್ರತಿಗಳಲ್ಲಿ ಸಮಾನಾರ್ಥಕ ಶಬ್ದಗಳ ಪ್ರತಿನಿಧಾನಗಳು ಹೇರಳವಾಗಿ ದೊರೆಯುತ್ತವೆ. ಎರಡನೆ ಗುಂಪಿನ ಪ್ರತಿಗಳ ಮಾತೃಕೆ ವ ದಲ್ಲಿಯೋ ಅದಕ್ಕೆ ಮೂಲವಾದ ಲ. ಪ್ರತಿಯಲ್ಲಿಯೋ ಓಲೆಯ ಅಂಚುಗಳಲ್ಲಿ ಬರೆದಿರಬೇಕಾಗಿದ್ದ ಸಮಾನಾರ್ಥಕವಾದ ಟಿಪ್ಪಣಿ

ಗಳ ಸ್ವೀಕರಣ ನಡೆದುಹೋಗಿರಬೇಕು ಎಂಬ ಊಹೆಯನ್ನು ಮಾಡಲು ಸಾಧ್ಯವಾಗುತ್ತದೆ. ಇಲ್ಲಿ ಕ. ಖ. ಗ. ಪ್ರತಿಗಳ ಪಾಠ ಒಂದು ಸಂಪ್ರದಾಯವಾಗಿಯೂ ಘ. ಚ. ಛ. ಜ. ಗಳ ಪಾಠ ಇನ್ನೊಂದು ಸಂಪ್ರದಾಯವಾಗಿಯೂ ಬೇರೆ ಬೇರೆ ನಿಲ್ಲುತ್ತವೆ. ಇವೆರಡರಲ್ಲಿಯೂ ಐಕ್ಯತೆ ಇದ್ದಾಗ ಮೂಲಪಾಠ ಎಂದರೆ ಕವಿಪ್ರತಿಯಾದ (ಯ) ದ ಪಾಠ ಲಭ್ಯವಾಗುತ್ತದೆ. ಮೊದಲನೆಯ ಗುಂಪಿನ ಯಾವುದಾದರೂ ಒಂದು ಪ್ರತಿಯ ಪಾಠ ಎರಡನೆಯ ಗುಂಪಿನ ಯಾವುದಾದರೂ ಒಂದು ಪ್ರತಿಯ ಪಾಠಕ್ಕೆ ಸಮಾನವಾಗಿದ್ದರೆ ಆಗ ಅದೇ ಮೂಲಪಾಠವೆಂದು ನಿರ್ಣೀತವಾಗುತ್ತದೆ. ಇವೆರಡು ಪಾಠ ಸಂಪ್ರದಾಯಗಳಲ್ಲಿ ಮೊದಲನೆಯದು ಪ್ರಾಚೀನತರವಾಗಿದ್ದು ಮೂಲ ಪ್ರತಿಗೆ ಸಮೀಪತರವಾಗಿದೆ, ಎರಡನೆಯದು ಪ್ರಾಚೀನವಾದರೂ ಮೂಲಪ್ರತಿಗೆ ಸ್ವಲ್ಪ ದೂರವಾಗಿದೆ.

## ಗ್ರಂಥದ ಹೆಸರು

ವಡ್ಡಾರಾಧನೆ ಎಂಬ ಹೆಸರಿನಿಂದ ಈಗ ಈ ಗ್ರಂಥ ಪ್ರಚಾರದಲ್ಲಿರುವುದಾದರೂ ಇದನ್ನು ರಚಿಸಿದಾತನು ಇದಕ್ಕೆ ಕೊಟ್ಟ ಹೆಸರೇನೆಂಬುದನ್ನು ತಿಳಿಯಬೇಕಾಗಿದೆ. ಗ್ರಂಥ ಆದಿಯಲ್ಲೋ ಅಂತ್ಯದಲ್ಲೋ ಅಥವಾ ಎರಡೂ ಎಡೆಗಳಲ್ಲಿಯೋ ಕವಿ ಸ್ವಕೀಯ ವೃತ್ತಾಂತವನ್ನು ತಿಳಿಸುವುದು ಸಾಧಾರಣವಾದ ಸಂಪ್ರದಾಯವಾಗಿದೆ. ಇದಕ್ಕೆ ಈ ಗ್ರಂಥದಲ್ಲಿ ಭಂಗವುಂಟಾಗಿದೆ. ಆದಿಯಲ್ಲಾಗಲಿ ಅಂತ್ಯದಲ್ಲಾಗಲಿ ಕವಿ ತನ್ನ ವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ. ಗ್ರಂಥಕ್ಕೆ ಪೀಠಿಕಾರೂಪವಾಗಿರುವ ಆರಂಭದ ಚಿಕ್ಕ ವಾಕ್ಯವೃಂದದ ಕೊನೆಯಲ್ಲಿ 'ಮುನ್ನಂ ಸುಕುಮಾರಸ್ವಾಮಿಯ ಕಥೆಯಂ ಪೇೞ್ವೆಂ' ಎಂಬ ವಾಕ್ಯ ದೊರೆಯುತ್ತದೆ. ಇಲ್ಲಿರುವ 'ಪೇೞ್ವೆಂ' ಎಂಬ ಉತ್ತಮ ಪುರುಷದ ಕ್ರಿಯೆ ಹೇಳಿದವನು ಯಾರೆಂಬುದನ್ನು ತಿಳಿಸಲು ಸಮರ್ಥವಾಗಿಲ್ಲ. ಗ್ರಂಥಾಂತ್ಯದಲ್ಲಿ ಬರುವ "ಈ ಪೇೞ್ದ ಪತ್ತೊಂ[ಬ]ತ್ತು ಕಥೆಗ[ಳಂ] ಶಿವಕೋಟ್ಯಾಚಾರ್ಯರ್ ಪೇೞ್ದಾ[ರ್] ವಡ್ಡಾರಾಧನೆ ಸಂಪೂರ್ಣಂ" ಎಂಬ ವಾಕ್ಯಗಳು ಗ್ರಂಥಕರ್ತನ ಹೆಸರನ್ನೂ ಗ್ರಂಥದ ಹೆಸರನ್ನೂ ತಿಳಿಸಿಕೊಡುತ್ತವೆಯೆಂದು ಹೇಳಬಹುದು. ಈ ವಾಕ್ಯಗಳನ್ನು ಮೂಲಕವಿಯೇ ಬರೆದಿದ್ದ ಪಕ್ಷದಲ್ಲಿ ಮೇಲಿನ ಅಭಿಪ್ರಾಯ ಸಾಧುವಾಗುತ್ತದೆ. ಇವುಗಳನ್ನು ಯಾವನಾದರೂ ಲಿಪಿಕಾರನು ಬರೆದಿದ್ದ ಪಕ್ಷದಲ್ಲಿ ಗ್ರಂಥದ ಹೆಸರಿನ ವಿಷಯದಲ್ಲೂ ಅದರ ಕರ್ತೃವಿನ ವಿಷಯದಲ್ಲೂ ಸಂದೇಹಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈ ವಾಕ್ಯಗಳ ರಚಕನ ವಿಷಯವಾಗಿ ವಿಚಾರ ಮಾಡಬೇಕಾಗಿದೆ.

ಇವೆರಡು ವಾಕ್ಯಗಳು ಕವಿಯವಲ್ಲವೆಂದೂ ಅವು ಅವನ ಸ್ವಹಸ್ತಪ್ರತಿಯಲ್ಲಿ ಇರಲಿಲ್ಲವೆಂದೂ ಭಾವಿಸೋಣ. ಇವು ಲಿಪಿಕಾರ ರಚಿತವೆಂದು ಹೇಳಿದರೆ ಅವನಿಗೆ ಕವಿಯ ಹೆಸರಾಗಲಿ, ಗ್ರಂಥದ ಹೆಸರಾಗಲಿ, ಅವು ಏನೇ ಇದ್ದಿರಲಿ ಹೇಗೆ ತಿಳಿಯಿತು ? ಗ್ರಂಥಕ್ಕೂ ಕವಿಗೂ ಒಬ್ಬೊಬ್ಬ ಲಿಪಿಕಾರ ಒಂದೊಂದು ಹೆಸರನ್ನು ಕೊಡಬಹುದಾಗಿತ್ತಲ್ಲ, ಮೂಲತಃ ಗ್ರಂಥದಲ್ಲಿ ಯಾವ ಹೆಸರುಗಳೂ ಇಲ್ಲದ ಕಾರಣದಿಂದ. ಕೊಲ್ಲಾಪುರದ

ಪ್ರತಿಯ (ಜ) ಮರದ ಪಟ್ಟಿಯ ಮೇಲೆ 'ಉಪಸರ್ಗ ಕೇವಲಿ ಕಥೆ' ಎಂದು ಗ್ರಂಥದ ಹೆಸರನ್ನು ಯಾರೋ ಬರೆದಿರುವುದು ಇದಕ್ಕೆ ಒಂದು ನಿದರ್ಶನವಾಗಿದೆ. ಅದೇ ಪ್ರತಿಯ ಅಂತ್ಯದಲ್ಲಿ 'ವಡ್ಡಾರಾಧನೆ' ಎಂಬ ಹೆಸರೇ ಇದ್ದರೂ ಅದನ್ನು ಬಿಟ್ಟು ಈ ಹೊಸ ಹೆಸರನ್ನು ಬರೆದಿದೆ. ಹೀಗೆಯೇ ಇತರ ಪ್ರತಿಕಾರರೂ ಏಕೆ ಮಾಡಲಿಲ್ಲ? ವಸ್ತುಸ್ಥಿತಿ ಹೀಗಿಲ್ಲ. ಒಂದು ಸಂಪ್ರದಾಯಕ್ಕೆ ಸೇರಿರುವ ಪ್ರತಿಗಳಲ್ಲಿ (ಕಖಗ) ಗ್ರಂಥಕರ್ತನ ಹೆಸರು ಶಿವಕೋಟ್ಯಾಚಾರ್ಯನೆಂದೂ ಇನ್ನೊಂದು ಸಂಪ್ರದಾಯದ ಎರಡು ಪ್ರತಿಗಳಲ್ಲಿ (ಘಜ) ರೇವಕೋಟ್ಯಾಚಾರ್ಯನೆಂದೂ ಇರುವುದನ್ನು ನೋಡಿದರೆ ಅವುಗಳಿಗೆ ಮೂಲವಾದ ಮಾತೃಕೆಗಳಲ್ಲಿ ಆಯಾ ಹೆಸರುಗಳು ಲಿಖಿತವಾಗಿದ್ದುವೆಂದು ಹೇಳಬೇಕಾಗುತ್ತದೆ. ಶಿವಕೋಟ್ಯಾಚಾರ್ಯ ಎಂಬ ಹೆಸರಿನ ಮೊದಲಕ್ಷರ ಶಿ ಎಂಬುವನ್ನು ಘ.ಜ.ಗ.ಳ ಪ್ರತಿಕಾರರು ರೆ ಎಂದು ಓದಿರಬಹುದು. ಇವೆರಡಕ್ಷರಗಳಿಗಿರುವ ರೂಪಸಾದೃಶ್ಯ ಇಂಥ ಭ್ರಾಂತಿಗೆ ಕಾರಣವಾಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು; ಶಕ ೧೦೫೭ರಲ್ಲಿ ಲಿಖಿತವಾದ ಒಂದು ಶಾಸನದಲ್ಲಿ[3] ಕೆಳಗೆ ಕಾಣಿಸಿರುವ ಕಂದಪದ್ಯವಿದೆ:

ಕೊಳದೊಳ್ಮಾವರೆ ಗಗನ
ಸ್ಥಳದೊಳ್ಮರೆಯೊಗೆವ ತೆಱದಿನೊಗೆದಂ ನಿಜ ನಿ
ರ್ಮ್ಮಳ ಯಶಮೆಸೆಯೆ ಸುಪುತ್ರಃ
ಕುಳದೀಪಕನೆನಿಸಿ ಪೊಗಳೆ ಧರೆಕಲಿದೇವ [೦] ॥

ಇಲ್ಲಿ 'ಗಗನಸ್ಥಳದೊಳ್ಮರೆಯೊಗೆವ' ಎಂಬಲ್ಲಿನ ರೆ ಅಕ್ಷರ ಶಿ ಎಂದಿದ್ದಿರಬೇಕು; ಇಲ್ಲದೆ ಹೋದರೆ ಅರ್ಥವಾಗುವುದಿಲ್ಲ. ಶಾಸನವನ್ನು ರಚಿಸಿದ ಕವಿ ಬಳಸಿದ್ದ ಶಿ ಅಕ್ಷರ ಲಿಪಿಕಾರನಿಂದಲೋ ಕಂಡರಣೆಕಾರನಿಂದಲೋ ರೆ ಆಗಿ ಪರಿಣಮಿಸಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಮೇಲಿನ ಘಜ ಪ್ರತಿಗಳ ಮಾತೃಕೆಯಲ್ಲಿ 'ಶಿವಕೋಟ್ಯಾಚಾರ್ಯ' ಎಂಬ ಹೆಸರೇ ಇದ್ದಿರಬಹುದೆಂಬ ಊಹೆ ಸಂಗತವಾಗುತ್ತದೆ. ಆದರೆ ಇಬ್ಬರು ಪ್ರತಿಕಾರರು ಸಮಾನ ಸ್ಖಾಲಿತ್ಯವನ್ನು ಸ್ವತಂತ್ರವಾಗಿ ಮಾಡುವುದು ಸಾಧಾರಣವಾಗಿ ಅಸಂಭವವಾಗಿರುವ ಕಾರಣದಿಂದ ಆ ಮಾತೃಕೆಯಲ್ಲೇ 'ರೆ' ಎಂದು ಲಿಖಿತವಾಗಿದ್ದರೂ ಇರಬಹುದು. ಅಥವಾ ಘಜ ಪ್ರತಿಗಳಲ್ಲಿ ಒಂದು ಇನ್ನೊಂದಕ್ಕೆ ಮಾತೃಕೆಯಾಗಿರಬಹುದು. ಆದುದರಿಂದ ಗ್ರಂಥಾಂತ್ಯದ ಆ ಎರಡು ವಾಕ್ಯಗಳು ಲಿಪಿಕಾರರಚಿತವಲ್ಲವೆಂದೂ, ಕವಿರಚಿತವಾದುವೆಂದೂ ನಿರ್ಣಯಿಸಬೇಕಾಗಿದೆ. ಗ್ರಂಥಕರ್ತನ ವಿಷಯವಾಗಿ ಮುಂದೆ ಹೇಳಲಿರುವುದರಿಂದ ಸದ್ಯಕ್ಕೆ ಗ್ರಂಥದ ಹೆಸರನ್ನು ಮಾತ್ರ ಗಮನಿಸಬಹುದು.

ಐದು ಪ್ರತಿಗಳಲ್ಲೂ ಗ್ರಂಥದ ಹೆಸರು ವಡ್ಡಾರಾಧನೆ ಅಥವಾ ಅದರ ಇತರ ರೂಪಗಳಲ್ಲಿ ಲಿಖಿತವಾಗಿರುವುದು ಕಾಣುತ್ತದೆ. ಗ್ರಂಥಕರ್ತನೇ ಇಟ್ಟ ಹೆಸರು ಲಿಪಿಕಾರರ ಕೈಯಲ್ಲಿ ನಾನಾ ಬಗೆಯಾಗಿ ವಿಕಾರಗೊಂಡಿರಬಹುದು. ಇದರ ಬೇರೆಬೇರೆ ರೂಪಗಳನ್ನು ಕೆಳಗೆ

[3] *Andhra Pradesh Govt. Archaelogical Series*—9, No. 23, l. 44–45.

ಕಾಣಿಸಿ—ವಡ್ಡಾರಾಧನೆ ಎಂಬ ಹೆಸರೇ ಉಚಿತವೆಂದು ತೋರಿಸಿದೆ.[4]

| ೧ | ೨ | ೩ | ೪ |
|---|---|---|---|
| ವೃದ್ಧಾರಾಧನಂ | ವ(ವು)ಡ್ಡಾರಾಧಣಂ | ವೊಡ್ಡಾರಾಧಣಂ | ಒಡ್ಡಾರಾಧಣಂ |
| ವೃದ್ಧಾರಾಧನಾ | ವ(ವು)ಡ್ಡಾರಾಧನೆ | ವೊಡ್ಡಾರಾಧನೆ | ಒಡ್ಡಾರಾಧನೆ |

ಎರಡನೆಯ ಪಂಗಡದ ಹೆಸರುಗಳು ಮಿಕ್ಕ ಪಂಗಡಗಳ ಹೆಸರುಗಳಿಗಿಂತ ಸಂಸ್ಕೃತಕ್ಕೆ ಸಮೀಪತಮವಾಗಿದ್ದು ಪ್ರಾಚೀನತರವಾಗಿಯೂ ಇವೆ. 'ವಡ್ಡಾರಾಧಣಂ' ಎಂಬಲ್ಲಿಯ ಎರಡನೆಯ ಶಬ್ದದ ರೂಪ ಸಂದೇಹಾಸ್ಪದವಾದುದೆಂದು ಹಿಂದೆಯೇ ಸೂಚಿಸಿದೆ. ಆದ್ದರಿಂದ ಅದನ್ನು ಬಿಟ್ಟು 'ವಡ್ಡಾರಾಧನೆ' ಎಂಬ ರೂಪವನ್ನೇ ಅಂಗೀಕರಿಸಿ ಅದೇ ಹೆಸರಿನಿಂದ ಈ ಗ್ರಂಥವನ್ನು ಕರೆಯಬಹುದಾಗಿದೆ. ಕವಿ ಇಟ್ಟ ಹೆಸರೂ ಇದೇ ಎಂದು ತೋರುತ್ತದೆ.

ಡಾ|| ಆ. ನೇ. ಉಪಾಧ್ಯೆ ಅವರು ಈ ವಿಷಯವಾಗಿ ಬೇರೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಹಲವು ವರ್ಷಗಳು ಮುಂಚಿತವಾಗಿಯೇ, ಎಂದರೆ ೧೯೪೩ನೆಯ ಇಸವಿಯಲ್ಲೇ. "ಈ ಕನ್ನಡ ಕಥೆಗಳಿಗೆ ವಡ್ಡಾರಾಧನೆ ಎಂಬ ಹೆಸರು ಬಂದುಬಿಟ್ಟಿದೆ; ಅವುಗಳ ಸಂಪಾದಕರೂ ಈಚಿನ ಇತರ ಲೇಖಕರೂ ಇದೇ ಹೆಸರನ್ನೇ ತಮ್ಮ ಪ್ರತಿಗಳಿಗೆ ಧಾರಾಳವಾಗಿ ಇರಿಸಿದ್ದಾರೆ. ಖಚಿತವಾಗಿ ಹೇಳುವುದಾದರೆ ಈ ಹತ್ತೊಂಬತ್ತು ಕಥೆಗಳಿಗೆ ಅವುಗಳನ್ನು ರಚಿಸಿದಾತನು ಒಟ್ಟಾಗಿ ಇಟ್ಟ ಹೆಸರೇನೋ ನಿರ್ಣಯಿಸಲು ಯಾವ ಆಧಾರವೂ ಇಲ್ಲ; ನನ್ನ ಅಭಿಪ್ರಾಯದಲ್ಲಿ ಆ ಹೆಸರು ನಮ್ಮವರೆಗೆ ಉಳಿದುಕೊಂಡು ಬಂದಿಲ್ಲ."[5] ಮುಂದುವರಿಯುತ್ತ ಅವರು "ಗ್ರಂಥದ ಪರಿಸಮಾಪ್ತಿ ವಾಕ್ಯದಲ್ಲಿ ಕಾಣುವ ಶಿವಕೋಟಿ ಮತ್ತು ವಡ್ಡಾರಾಧನೆ ಎಂಬ ಹೆಸರುಗಳು ಪ್ರಕೃತ ಕನ್ನಡ ಗ್ರಂಥಕರ್ತನನ್ನೂ, ಆ ಗ್ರಂಥವನ್ನೂ ನಿರ್ದೇಶಿಸುವುದಿಲ್ಲ. ಕೆಲವು ಪ್ರತಿಗಳಲ್ಲಿ ವಡ್ಡಾರಾಧನೆಯ ಕವಚ, ವಡ್ಡಾರಾಧನೆಯ ಕವಚವೆಂಬಧಿಕಾರವು ಎಂದು ಲಿಖಿತವಿದೆಯಷ್ಟೆ. ಇಲ್ಲಿನ ಕವಚ ಎಂಬ ಪದ ಗಮನಾರ್ಹ—ಈ ಪದವು ಭಾರತೀಯ ಸಾಹಿತ್ಯದಲ್ಲಿ ಯಾವುದಾದರೂ ದೇವತೆಯನ್ನು ಕುರಿತ ಮಂತ್ರಸ್ತೋತ್ರ ವಿಭಾಗದ ಗ್ರಂಥವನ್ನು ನಿರ್ದೇಶಿಸುತ್ತದೆ; ಈ ಮಂತ್ರಗಳ ಪುನಶ್ಚರಣೆಯಿಂದ ಭಕ್ತನಿಗೆ ಎಲ್ಲ ತೊಂದರೆಗಳೂ

---

[4] ಇದೇ ಗ್ರಂಥದ ೩೪೦–೩೪೩ ನೆಯ ಪುಟಗಳನ್ನು ನೋಡಿ.

[5] "The title Vaddaradhane for these stories has come to stay; It has been made sufficiently popular by their editor as well as by subsequent writers; and without any hesitation the writers of the Moodabidri and Kolhapur MSS use this title for their copies. To be more accurate there is no evidence to say what name the author of the Kannada work gave to his collection of these nineteen stories; in my opinion this name has not come down to us" (*Brhat Kathakosa*, Intr. p. 67–68)

ನಿವಾರಣೆಯಾಗುತ್ತವೆಯೆಂದೂ, ಅವುಗಳಲ್ಲಿ ಅದ್ಭುತವಾದ ಶಕ್ತಿ ಇರುವುದೆಂದೂ ಭಕ್ತನು ಭಾವಿಸುತ್ತಾನೆ. ಸಿಪಾಯಿಯನ್ನು ಕವಚವು ರಕ್ಷಿಸುವಂತೆ ಈ ಮಂತ್ರಗಳೂ ರಕ್ಷಿಸುತ್ತವೆಯೆಂಬ ನಂಬಿಕೆಯಿದೆ. ಜೈನಸಾಹಿತ್ಯದಲ್ಲಿ ಇಂಥ ಕವಚ ಗ್ರಂಥಗಳು ಕೆಲವಿವೆ. ಶಿವಕೋಟಿಯಿಂದ ಪ್ರಾಕೃತಭಾಷೆಯಲ್ಲಿ ರಚಿತವಾದ 'ಭಗವತೀ ಆರಾಧನಾ' ಎಂಬ ಗ್ರಂಥದ (೧೫೪೯-೧೬೮೨ ವರೆಗಿರುವ) ಗಾಹೆಗಳನ್ನೊಳಕೊಂಡ ಭಾಗಕ್ಕೆ ಕವಚವೆಂಬ ಹೆಸರೇ ಇವೆ. ಕನ್ನಡ ಕಥೆಗಳ ಆರಂಭದಲ್ಲಿ ಕಾಣುವ ಗಾಹೆಗಳು ಈ 'ಕವಚ' ವಿಭಾಗ ದಿಂದ ಉದ್ಧೃತವಾಗಿವೆ. ಕನ್ನಡ ಗ್ರಂಥದಲ್ಲಿ ಕೊನೆಯ ಕಥೆಯಾಗಿರುವ ವೃಷಭಸೇನನ ಕಥೆ ಶ್ರೀಚಂದ್ರನ ಅಪಭ್ರಂಶ ಕಥಾಕೋಷದಲ್ಲೂ ಇದೆ. ಇದು ಮುಗಿದಮೇಲೆ ಅಲ್ಲಿ 'ಕವಚಾಹಿಯಾರೋಯಂ' (ಕವಚಾಧಿಕಾರೋಯಂ) ಎಂದು ಬರೆದಿದೆ. ಆದ್ದರಿಂದ 'ವಡ್ಡಾರಾಧನೆಯ ಕವಚವು' ಎಂಬುದು 'ಭಗವತೀ ಆರಾಧಾನಾ' ಗ್ರಂಥವನ್ನೇ ನಿರ್ದೇಶಿಸುತ್ತದೆ. 'ವಡ್ಡಾರಾಧನೆ' ಎಂಬುದು ಆ ಗ್ರಂಥದ ಮತ್ತೊಂದು ಹೆಸರೇ ಹೊರತು ಕನ್ನಡ ಗ್ರಂಥದ ಹೆಸರಲ್ಲ. ಇಲ್ಲಿ ಹೇಳಿರುವ ಶಿವಕೋಟಿ ಆ ಪ್ರಾಕೃತಗ್ರಂಥದ ಕರ್ತನೇ ಹೊರತು ಕನ್ನಡ ಗ್ರಂಥದ ಕರ್ತನ ಹೆಸರಲ್ಲ. ಈ ಕಥೆಗಳನ್ನು ವಡ್ಡಾರಾಧನೆ ಎಂದು ಕರೆಯಬಹುದು; ಅವುಗಳ ಕರ್ತ ಯಾರೋ ನಮಗೆ ತಿಳಿಯದು[6]—ಎಂಬ ನಿರ್ಣಯಕ್ಕೆ ಬಂದಿದ್ದಾರೆ.

ಇದರಂತೆ ಈ ಕನ್ನಡ ಗ್ರಂಥಕ್ಕೆ ಅದನ್ನು ರಚಿಸಿದಾತನು ಯಾವ ಹೆಸರನ್ನೂ ಇಡಲಿಲ್ಲವೆಂದೂ, ಬೇಕಾದರೆ 'ವಡ್ಡಾರಾಧನೆ'ಯೆಂಬ ಹೆಸರಿನಿಂದ ಕರೆಯಬಹುದೆಂದೂ ಹೇಳಿದಹಾಗಾಯಿತು. ಕೊಲ್ಲಾಪುರದ ಪ್ರತಿಯ ಮರದ ಪಟ್ಟಿಕೆಯ ಮೇಲೆ ಬರೆದಿರುವ 'ಉಪಸರ್ಗ ಕೇವಲಿಗಳ ಕಥೆ' ಎಂಬ ಹೆಸರಿನಿಂದ ಈ ಗ್ರಂಥವನ್ನು ಕರೆಯಲೂಬಹುದು. 'ಪುಣ್ಯಾಸ್ರವ ಕಥಾಕೋಶ'ವೆಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿರುವ ರಾಮಚಂದ್ರ ಮುಮುಕ್ಷು[7] ಆ ಗ್ರಂಥದ ಶ್ರೇಣಿಕನ ಕಥೆಯ ಅಂತ್ಯದಲ್ಲಿ "ಭ್ರಾಜಿಷ್ಣ್ವಾರಾಧನಾ ಶಾಸ್ತ್ರೇ ಕರ್ನಾಟಟೀಕಾ ಕಥಿತ ಕ್ರಮೇಣೋಲ್ಲೇಖ ಮಾತ್ರಂ ಕಥಿತೇಯಂ ಕಥಾ" ಎಂದು ಹೇಳಿದ್ದಾನೆ. ಈ ಕರ್ನಾಟ ಟೀಕೆ ಪ್ರಕೃತ ಕನ್ನಡ ಗ್ರಂಥವೇ; ಏಕೆಂದರೆ ಇಂಥ ಗ್ರಂಥ ಕನ್ನಡದಲ್ಲಿ ಬೇರೊಂದಿಲ್ಲ. ಆದ್ದರಿಂದ ಈ ಗ್ರಂಥವನ್ನು 'ಆರಾಧನಾಶಾಸ್ತ್ರ ಕರ್ನಾಟಟೀಕಾ' ಎಂದು ಬೇಕಾದರೂ ಕರೆಯಬಹುದು. ಈ ವಿಷಯ ಹಾಗಿರಲಿ. ಈ ಕನ್ನಡಗ್ರಂಥವನ್ನು ಬರೆದವನು ತಾನೇ ಬರೆದ[8] ಪರಿಸಮಾಪ್ತಿ ವಾಕ್ಯದಲ್ಲಿ ತನ್ನ ಗ್ರಂಥದ

[6] To conclude, we can call these stories by the name Vaddaradhane, but we do not know who the author was (Ibid p. 69).

[7] ಇವನು ಕುಂಡಕುಂಡಾನ್ವಯದ ಕೇಶವನಂದಿದೇವಯತಿಪತಿಯ ಶಿಷ್ಯನು. ಇವನ ಗ್ರಂಥವನ್ನು ೧೩೩೧ ನೆಯ ಇಸವಿಯಲ್ಲಿ ನಾಗರಾಜನು ಕನ್ನಡಿಸಿರುವುದರಿಂದ ಇವನು ಆ ಕಾಲಕ್ಕೆ ಹಿಂದೆ ಇದ್ದನೆಂದು ತಿಳಿಯುತ್ತದೆ.

[8] ಇದನ್ನು ಡಾ॥ ಉಪಾಧ್ಯೆಯವರೂ ಒಪ್ಪಿಕೊಂಡಿರುವಂತೆ ತೋರುತ್ತದೆ.

ಹೆಸರನ್ನು ಹೇಳಿಕೊಳ್ಳದೆ ತನಗಿಂತ ಹಲವು ಶತಮಾನಗಳ ಹಿಂದೆ ರಚಿತವಾಗಿದ್ದ ಪ್ರಾಕೃತಗ್ರಂಥದ ಹೆಸರನ್ನು ಹೇಳುವುದು ಎಷ್ಟರಮಟ್ಟಿಗೆ ಸಂಭವನೀಯ? ಇದಕ್ಕೆ ನಿದರ್ಶನಗಳು ಬೇರೆ ಎಲ್ಲಿಯಾದರೂ ಇವೆಯೆ? ಶಿವಕೋಟಿರಚಿತವಾದ ಆ ಪ್ರಾಕೃತ ಗ್ರಂಥಕ್ಕೆ ಆರಾಹಣಾ (=ಆರಾಧನಾ) ಎಂಬ ಹೆಸರಷ್ಟೇ ಇದ್ದಿತು.[9] ಆ ಗ್ರಂಥದ ೨೧೬೪ನೆಯ ಗಾಹೆಯಲ್ಲಿ 'ಆರಾಹಣಾ ಭಗವದೀ ಏವಂ ಭತ್ತೀಏ ವಣ್ಣಿದಾಸಂತೀ" ಎಂಬ ವಾಕ್ಯದಲ್ಲಿ ಭಗವತೀ ಎಂಬ ಹೆಸರು ವಿಶೇಷಣವಾಗಿ ಬಂದಿದೆ.[10] ಈ ಗ್ರಂಥವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ ಅಮಿತಗತಿ "ಆರಾಧನಾ ಭಗವತೀ ಕಥಿತಾ ಸ್ವಶಕ್ತ್ಯಾ" ಎಂದು ಭಗವತೀ ಎಂಬುದನ್ನು ವಿಶೇಷಣವಾಗಿಯೇ ಬಳಸಿದ್ದಾನೆ.[11] ಕಾಲಕ್ರಮದಲ್ಲಿ ಆ ಗ್ರಂಥಕ್ಕೆ 'ಭಗವತೀ ಆರಾಧನಾ' (=ಭಗವತ್ಯಾರಾಧನಾ) ಎಂದು ಹೆಸರಾಗಲು ಇದು ಕಾರಣವಿರಬಹುದು. ಇದೇ ಅಲ್ಲದೆ ಈ ಗ್ರಂಥಕ್ಕೆ 'ಮೂಲಾರಾಧನಾ' ಎಂಬ ನಾಮಾಂತರವೂ ಉಂಟಾಯಿತು. ಆಶಾಧರನು (೧೩ ನೆಯ ಶತಮಾನ) ಈ ಗ್ರಂಥದ ಮೇಲೆ ಬರೆದಿರುವ ತನ್ನ ಟೀಕೆಯನ್ನು 'ಮೂಲಾರಾಧನ ದರ್ಪಣ'ವೆಂದು ಹೆಸರಿಸಿದ್ದಾನೆ. ಈ ಆಧಾರಗಳಿಂದ ಶಿವಕೋಟಿ ಬರೆದ ಆ ಪ್ರಾಕೃತ ಗ್ರಂಥಕ್ಕೆ ಆರಾಧನಾ, ಭಗವತೀ ಆರಾಧನಾ, ಮೂಲಾರಾಧನಾ ಎಂಬ ನಾಮಾಂತರಗಳಿದ್ದುವೆಂದು ಸುವ್ಯಕ್ತವಾಗಿದೆ; ಇವುಗಳನ್ನು ಡಾ. ಉಪಾಧ್ಯೆ ಅವರೇ ಹೇಳಿದ್ದಾರೆ.[12] ವಡ್ಡಾರಾಧನೆ (ವಡ್ಡಾರಾಧಣಂ), ಬೃಹದಾರಾಧನಾ ಎಂಬ ಇತರ ನಾಮಾಂತರಗಳೂ ಈ ಗ್ರಂಥಕ್ಕೆ ಇದ್ದುವೆಂದು ಹೇಳುವುದಕ್ಕೆ ಸ್ವತಂತ್ರವಾದ ಆಧಾರಗಳನ್ನು ಅವರು ತೋರಿಸಿಲ್ಲ. ಸಂಸ್ಕೃತದಲ್ಲಾಗಲಿ ಪ್ರಾಕೃತದಲ್ಲಾಗಲಿ ಈ ಹೆಸರುಗಳು ಆ ಗ್ರಂಥದ ವಿಷಯದಲ್ಲಿ ವ್ಯವಹಾರದಲ್ಲಿದ್ದು ವೆಂಬುದನ್ನು ವಿಶದಪಡಿಸಬೇಕಾಗಿದೆ. ಕನ್ನಡ ಗ್ರಂಥಾಂತ್ಯ ಗದ್ಯದಲ್ಲಿ ಮಾತ್ರ ಇರುವ 'ವಡ್ಡಾರಾಧನೆ' ಎಂಬುದಷ್ಟನ್ನೇ ಇಟ್ಟುಕೊಂಡು ಅದು 'ಭಗವತೀ ಆರಾಧನ'ದ ಇನ್ನೊಂದು ಹೆಸರೆಂದು ಹೇಳುವುದು ಸಂಗತವಾಗಲಾರದು. ಈ ಎರಡು ಶಂಕೆಗಳು ಪರಿಹಾರವಾಗುವವರೆಗೆ ಈ ಕನ್ನಡ ಗ್ರಂಥಕ್ಕೆ ಕವಿ ಇಟ್ಟ ಹೆಸರು 'ವಡ್ಡಾರಾಧನೆ' ಎಂದೇ ಗ್ರಹಿಸಬೇಕಾಗಿದೆ.

## ಕರ್ತೃತ್ವ ವಿಚಾರ

"ಈ ಪೇೞ್ದ ಪತ್ತೊಂ[ಬ]ತ್ತು ಕಥೆಗ[ಳಂ] ಶಿವಕೋಟ್ಯಾಚಾರ್ಯರ್ ಪೇೞ್ದಾ [ರ್]" ಎಂಬ ಗ್ರಂಥಪರಿಸಮಾಪ್ತಿ ವಾಕ್ಯದಲ್ಲಿರುವ 'ಶಿವಕೋಟ್ಯಾಚಾರ್ಯ' ಎಂಬ ಹೆಸರು

---

9 "ಆರಾಹಣಾ ಸಿವಜ್ಜೇಣ ಪಾಣಿದಲಭೋಇಣಾರಇದಾ" (ಗಾಹೆ ೨೧೬೨)

10 ಜೈನಸಾಹಿತ್ಯ ಔರ್ ಇತಿಹಾಸ್: ೨೩

11 ಅಮಿತಗತಿ ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಒಂದಾದ ಧರ್ಮ ಪರೀಕ್ಷೆ ಯನ್ನು ಕ್ರಿ. ಶ. ೧೦೧೧ರಲ್ಲಿ ರಚಿಸಿದನು. (ಅದೇ, ೬೨.)

12 Ibid p. 62.

ಕನ್ನಡ ಗ್ರಂಥಕರ್ತನ ಹೆಸರಲ್ಲವೆಂದೂ ಪ್ರಾಕೃತ ಗ್ರಂಥವಾದ 'ಭಗವತೀ ಆರಾಧನಾ' ಎಂಬುದನ್ನು ರಚಿಸಿದ ಶಿವಾರ್ಯ ಅಥವಾ ಶಿವಕೋಟಿಯನ್ನು ಅದು ನಿರ್ದೇಶಿಸುವುದೆಂದೂ ಡಾ. ಉಪಾಧ್ಯೆಯವರ ಅಭಿಪ್ರಾಯವೆಂದು ಹಿಂದೆಯೇ ಹೇಳಿದೆ. ಕನ್ನಡ ಗ್ರಂಥವನ್ನು ಹೇಳಿದಾತನು 'ರೇವಾಕೋಟ್ಯಾಚಾರ್ಯ'ನೆಂಬ ಪಾಠಕರ ಮತ್ತು ಅವರನ್ನು ಅನುಸರಿಸಿದ ಕನ್ನಡ ಕವಿಚರಿತಕಾರರಾದ ರಾ. ನರಸಿಂಹಾಚಾರ್ಯರ ಅಭಿಪ್ರಾಯಗಳು ಈಚೆಗೆ ಪ್ರತ್ಯಂತರಗಳಲ್ಲಿ ದೊರೆತಿರುವ ಆಧಾರಗಳಿಂದ ಸರಿಯಲ್ಲವೆಂದೂ ಕನ್ನಡ ಕವಿಯ ಹೆಸರು 'ಶಿವಕೋಟ್ಯಾಚಾರ್ಯ'ನೆಂದೂ ಡಾ. ಉಪಾಧ್ಯೆ ಅವರೇ ಸ್ಥಾಪಿಸಿರುವುದರಿಂದ[13] ಈ ವಿಷಯವಾಗಿ ಹೆಚ್ಚು ಹೇಳಬೇಕಾಗಿಲ್ಲ. ಇಲ್ಲಿ ಡಾ. ಉಪಾಧ್ಯೆ ಅವರ ಅಭಿಪ್ರಾಯವನ್ನು ಮಾತ್ರ ನೋಡಬೇಕಾಗಿದೆ. ಯಾವನೋ ಕನ್ನಡ ಕವಿ ತನ್ನ ಗ್ರಂಥದ ಪರಿಸಮಾಪ್ತಿಯಲ್ಲಿ ತನ್ನ ಕರ್ತೃತ್ವ ಸೂಚಕವಾಗಿ ತನ್ನ ಹೆಸರನ್ನು ಹೇಳಿಕೊಳ್ಳದೆ ತನಗಿಂತ ಹಲವು ಶತಮಾನಗಳ ಹಿಂದೆ ಆಗಿ ಹೋದ ಪ್ರಾಕೃತ ಕವಿಯೊಬ್ಬನ ಹೆಸರನ್ನು ಹೇಳಿರುವನೆಂದು ನಂಬುವುದು ಹೇಗೆ ಸಾಧ್ಯ? ಅವನು ತನ್ನ ಕೃತಿಯ ಕರ್ತೃತ್ವವನ್ನು ಇನ್ನೊಬ್ಬ ಕನ್ನಡ ಕವಿಗೆ ಆರೋಪಿಸಿದ್ದರೆ ಅದನ್ನು ಒಂದು ವೇಳೆ ನಂಬಬಹುದಾಗಿತ್ತೋ ಏನೊ! ಯಾರೋ ಸಂಸ್ಕೃತದಲ್ಲಿ 'ಶ್ರುತಬೋಧ'ವೆಂಬ ಛಂದೋ ಗ್ರಂಥವನ್ನು ಬರೆದು ಸಂಸ್ಕೃತ ಕವಿಯೇ ಆಗಿರುವ ಕಾಲಿದಾಸನಿಗೆ ಆರೋಪಿಸಿರುವುದು ನಂಬಿಕೆಗೆ ಅಯೋಗ್ಯವೆಂದು ಯಾರೂ ಖಂಡಿತವಾಗಿ ಹೇಳಲಾಗುವುದಿಲ್ಲ. ಹೀಗಿಲ್ಲದೆ ಕನ್ನಡ ಗ್ರಂಥವೊಂದರ ಕರ್ತೃತ್ವವನ್ನು ಅದೇ ಕಾಳಿದಾಸನಿಗೆ ಆರೋಪಿಸಿದರೆ ಅದು ಅಪನಂಬಿಕೆಗೆ ಕಾರಣವಾಗುವುದಲ್ಲದೆ ಪರಿಹಾಸಕ್ಕೂ ಎಡೆ ಕೊಡುತ್ತದೆ. ಆದ್ದರಿಂದ ತಮ್ಮ ಅಭಿಪ್ರಾಯವನ್ನು ಡಾ. ಉಪಾಧ್ಯೆಯವರು ಸ್ಥಾಪಿಸಲು ಬಲವಾದ ಇತರ ಆಧಾರಗಳನ್ನು ಕಾಣಿಸಬೇಕಾದ ಆವಶ್ಯಕತೆಯಿದೆ. ಕನ್ನಡ ಗ್ರಂಥದ ಶಿವಕೋಟಿ ಆ ಪ್ರಾಕೃತ ಗ್ರಂಥದ ಶಿವಕೋಟಿಯೇ ಏಕಾಗಬೇಕು? ಒಂದೇ ಹೆಸರಿನ ಹಲವು ವ್ಯಕ್ತಿಗಳು ಇರಬಾರದೇಕೆ? ಸುದೀರ್ಘವೂ, ಸುವಿಸ್ತಾರವೂ ಆಗಿರುವ ಜೈನಸಾಹಿತ್ಯದ ಚರಿತ್ರೆಯಲ್ಲಿ ಶಿವಕೋಟಿನಾಮಕರಾದ ಹಲವು ವ್ಯಕ್ತಿಗಳು ಇದ್ದಿರಬಹುದು. ಈ ದೃಷ್ಟಿಯಿಂದ ಪ್ರಕೃತ ವಿಷಯವನ್ನು ಪರಿಶೀಲಿಸುವುದು ಮೇಲು. ಇದುವರೆಗೆ ತಿಳಿದು ಬಂದಿರುವ ಶಿವಕೋಟಿನಾಮಕ ಗ್ರಂಥಕರ್ತರನ್ನು ಕೆಳಗೆ ಕಾಣಿಸಿದೆ.

(೧) ಭಗವತೀ ಆರಾಧಾನಾ ಅಥವಾ ಮೂಲಾರಾಧನಾ ಎಂಬ ಆರಾಧನಾ ಗ್ರಂಥವನ್ನು ಜೈನ ಶೌರಸೇನೀ ಪ್ರಾಕೃತ ಭಾಷೆಯಲ್ಲಿ ಶಿವಾರ್ಯನೆಂಬಾತನು ರಚಿಸಿದ್ದಾನೆ. ಈ ಗ್ರಂಥಕ್ಕೆ 'ಮೂಲಾರಾಧನ ದರ್ಪಣ'ವೆಂಬ ಟೀಕೆಯನ್ನು ಬರೆದ ಆಶಾಧರನು 'ಸಿವಜ್ಜೇಣ ಶಿವಕೋಟ್ಯಾಚಾರ್ಯೇಣ' ಎಂದು ಹೇಳಿರುವುದರಿಂದಲೂ, 'ಭಗವನ್ ಶಿವಕೋಟ್ಯಾಚಾರ್ಯವರ್ಯಃ' ಎಂಬ ಆತನ ಮಾತಿನಿಂದಲೂ ಶಿವಾರ್ಯ, ಶಿವಕೋಟಿ— ಇವೆರಡೂ ಒಬ್ಬನೇ ವ್ಯಕ್ತಿಯ ಹೆಸರುಗಳೆಂದು ಹೇಳಬಹುದು. ಇವನು ಆರ್ಯ

[13] *Brhatkathakosa*, p. 69.

ಜಿನನಂದಿಗಣಿ, ಸರ್ವಗುಪ್ತಗಣಿ, ಆರ್ಯಮಿತ್ರನಂದಿ—ಇವರ ಪಾದಮೂಲದಲ್ಲಿ ಮೂಲ ಸೂತ್ರಾರ್ಥಗಳನ್ನು ಓದಿ ಕಲಿತನು. ತನ್ನನ್ನು 'ಪಾಣಿದಲಭೋೞ' ಎಂದರೆ ಹಸ್ತತಲ ಭೋಜನ ವ್ರತವನ್ನುಳ್ಳವನು ಎಂದು ಕರೆದುಕೊಂಡಿರುವನು. ಪೂರ್ವಾಚಾರ್ಯರ ರಚನೆಗಳನ್ನು ಅವಲಂಬಿಸಿ ಇವನು ತನ್ನ ಗ್ರಂಥವನ್ನು ರಚಿಸಿದನು. ಇವನ ವಿಷಯವಾಗಿ ಬೇರೆ ಯಾವ ಸಂಗತಿಗಳೂ ಇವನ ಗ್ರಂಥದಲ್ಲಿ ದೊರೆಯುತ್ತಿಲ್ಲ. ಭಗವಜ್ಜಿನಸೇನಾಚಾರ್ಯರು ತಮ್ಮ 'ಆದಿಪುರಾಣ'ದ

> ಶೀತೀಭೂತಂ ಜಗದ್ಯಸ್ಯ ವಾಚಾಽಽರಾಧ್ಯ ಚತುಷ್ಟಯಂ
> ಮೋಕ್ಷಮಾರ್ಗಂ ಸಪಾಯನ್ನಃ ಶಿವಕೋಟಿ ಮುನೀಶ್ವರಃ ॥ 1-49

ಎಂಬ ಶ್ಲೋಕದಲ್ಲಿ ಈತನನ್ನು ಸ್ತುತಿಸಿದ್ದಾರೆ. ಕ್ರಿ. ಶ. ೧೧ ನೆಯ ಶತಮಾನದ ಅಂತ್ಯಾರ್ಧದಲ್ಲಿದ್ದ ಶ್ರೀಚಂದ್ರನು ತನ್ನ ಅಪಭ್ರಂಶ 'ಕಥಾಕೋಶ'ದ

> ಸಿವಕೋಡಿ ಮುಣಿಂದಂ ಜೇಮು ಜಯಿ
> ಕಹಕೋಸು ಕಹಿಉ ಪಂಚಮು ಸಮಯಿ ॥

ಎಂಬ ಪಂಕ್ತಿಗಳಲ್ಲಿ ಶಿವಕೋಟಿಯನ್ನು ಸ್ಮರಿಸಿ ಅವನಿಂದ ಕಥಾಕೋಶವು ಕಥಿತವಾಯಿತೆಂದು ಹೇಳಿದ್ದಾನೆ.[14] ಶಿವಕೋಟಿಯ ಕಾಲದೇಶಗಳ ಬಗ್ಗೆ ಯಾವ ಸಂಗತಿಗಳೂ ತಿಳಿದುಬಂದಿಲ್ಲ. ಕ್ರಿ. ಶ. ಒಂದನೆಯ ಶತಮಾನದಲ್ಲಿ ಈತನಿದ್ದಿರಬೇಕೆಂದು ವಿದ್ವಾಂಸರ ಊಹೆ.[15] ಇವನು ಭರತಖಂಡದ ಉತ್ತರ ಭಾಗಕ್ಕೆ ಬಹುಶಃ ಮಥುರಾನಗರದ ಪ್ರಾಂತಕ್ಕೆ ಸೇರಿದವನಿದ್ದಿರಬಹುದು.[16] ಇವನ ಗ್ರಂಥ ಸಂಸ್ಕೃತ ಪ್ರಾಕೃತಗಳಲ್ಲಿರುವ ಎಲ್ಲ ಜೈನ ಕಥಾಕೋಶಗಳಿಗೂ ಮೂಲಾಧಾರವೆಂದು ಹೇಳುತ್ತಾರೆ.[17] ಇದರ ಮೇಲೆ ಅನೇಕ ವ್ಯಾಖ್ಯಾನಗಳೂ ವಿವರಣೆಗಳೂ ರಚಿತವಾಗಿವೆ. ಇದುವರೆಗೆ ಲಭ್ಯವಾಗಿರುವ ಟೀಕೆಗಳಲ್ಲಿ ಅಪರಾಜಿತ ಸೂರಿಯ (ಕ್ರಿ. ಶ. ಸು. ೭೦೦) 'ವಿಜಯೋದಯಾ' ಎಂಬ ಸಂಸ್ಕೃತ ಟೀಕೆ ಅತ್ಯಂತ ಪ್ರಾಚೀನ. ಇದಕ್ಕೂ ಹಿಂದೆ ಹಲವು ವ್ಯಾಖ್ಯಾನಗಳಿದ್ದುವೆಂದು ಈ ಟೀಕೆಯಲ್ಲಿಯೇ ಹೇಳಿದೆ.

(೨) ಸ್ವಾಮಿ ಸಮಂತಭದ್ರಾಚಾರ್ಯರ ಶಿಷ್ಯನಾಗಿದ್ದ ಶಿವಕೋಟಿ ಮಹಾರಾಜನ ವಿಷಯವಾಗಿ ಕೆಲವು ಕಥೆಗಳು ಪ್ರಚಾರದಲ್ಲಿವೆ. (೧) ದೇವಚಂದ್ರನ (ಕ್ರಿ. ಶ. ೧೮೩೮) ಕನ್ನಡ ರಾಜಾವಳೀ ಕಥೆಯ ಪ್ರಕಾರ: ಶಿವಕೋಟಿ ಮಹಾರಾಜನು ತನ್ನ ತಮ್ಮ ಶಿವಾಯನ ಸಮೇತನಾಗಿ ಕಾಂಚೀಪುರಿಯಲ್ಲಿ ಆಳುತ್ತಿದ್ದನು. ಇವನು ಶಿವಭಕ್ತನಾಗಿದ್ದು

---

[14] *Brhatkatha Kosa*, Int. p. 59. ಇಲ್ಲಿ ಶಿವಕೋಟಿಯ ಗ್ರಂಥದ ಹೆಸರನ್ನು ಭಗವತೀ ಆರಾಧನಾ ಎಂದು ಹೇಳದೆ ಕಹಕೋಸು (ಕಥಾಕೋಶ) ಎಂದು ಹೇಳಿರುವುದು ಗಮನಾರ್ಹ.

[15] *The Jaina Sources of the History of Ancient India*, Jyoti Prasad Jain, p. 131.

[16] ಅದೇ, 130.

[17] ಅದೇ, 128.

2

ಭೀಮಲಿಂಗವನ್ನು ಪೂಜಿಸುತ್ತಿದ್ದನು. ಆ ದೇವರಿಗೆ ಪ್ರತಿದಿನವೂ ಹನ್ನೆರಡು ಖಂಡುಗದಕ್ಕಿಯೋಗರದ ನೈವೇದ್ಯವಾಗುತ್ತಿತ್ತು. ಹೀಗಿರಲು ಮಣುವಕ ಹಳ್ಳಿಯಲ್ಲಿ ತಪಸ್ಸು ಮಾಡುತ್ತಿದ್ದ ಸಮಂತ ಭದ್ರಾಚಾರ್ಯರೆಂಬ ಯತಿಪತಿಗಳು ಭಸ್ಮಕ ರೋಗದಿಂದ ಪೀಡಿತರಾಗಿ ಗುರುಗಳನುಮತದಂತೆ ಅದರ ಉಪಶಮನಾರ್ಥವಾಗಿ ಕಾಂಚೀಪುರಕ್ಕೆ ಬಂದು ಶಿವಕೋಟಿಯನ್ನು ಕಂಡು ಭೀಮಲಿಂಗದ ನೈವೇದ್ಯವನ್ನೆಲ್ಲ ತಾನೊಬ್ಬನೆ ತಿಂದು ಆ ಲಿಂಗದ ಎಡೆಯಲ್ಲಿ ಚಂದ್ರಪ್ರಭಜಿನಮೂರ್ತಿ ಆವಿರ್ಭಾವವಾಗುವಂತೆ ಮಾಡಿದನು. ಇದನ್ನು ಕಂಡ ಶಿವಕೋಟಿ ತನ್ನ ತಮ್ಮನೊಡನೆ ಜೈನದೀಕ್ಷೆಯನ್ನು ಸ್ವೀಕರಿಸಿದನು. ಇವನು ರತ್ನಮಾಲಾದಿ ಅನೇಕ ಶಾಸ್ತ್ರಪ್ರವರ್ತಕನಾದನು. (೨) ಪ್ರಭಾಚಂದ್ರನ ಆರಾಧನಾ ಕಥಾಕೋಶ (೧೧ ನೆಯ ಶತಮಾನ) ಮತ್ತು ಬ್ರಹ್ಮ ನೇಮಿದತ್ತನ ಕಥಾಕೋಶದ (೧೬ ನೆಯ ಶತಮಾನ) ಪ್ರಕಾರ: ಶಿವಕೋಟಿ ಕಾಶೀ ನಗರಕ್ಕೆ ರಾಜನಾಗಿದ್ದನು. ಕಾಂಚೀನಗರ ನಿವಾಸಿಯಾಗಿದ್ದ ಸಮಂತಭದ್ರನು ಉದರ ವ್ಯಾಧಿ ಪೀಡಿತನಾಗಿ ಕಾಂಚಿಯಿಂದ ಹೊರಟು ಪೌಂಡ್ರಪುರ ದಶಪುರಗಳಿಗೆ ಬಂದು ಅಲ್ಲಿಂದ ಕಾಶಿಗೆ ಹೋದನು. ಇಲ್ಲಿನ ಶಿವಲಿಂಗದೆಡೆಯಲ್ಲಿ ಪಾರ್ಶ್ವನಾಥಜಿನಬಿಂಬವನ್ನು ಮೂಡಿಸುವ ಪವಾಡವನ್ನು ಅವನು ಮಾಡಿದನು. ಶಿವಕೋಟಿಗೆ ಜೈನದೀಕ್ಷೆಯನ್ನು ಕೊಟ್ಟನು. (೩) ಶ್ರವಣಬೆಳಗೊಳ ೧೦೫ ನೆಯ ಶಾಸನದಲ್ಲಿ (ಕ್ರಿ. ಶ. ೧೩೯೮) ಸಮಂತಭದ್ರನ ವಿಷಯವಾಗಿ ಹೇಳುತ್ತ ಅವನ ಶಿಷ್ಯ ಶಿವಕೋಟಿಸೂರಿ ತಪಸ್ವಿ ಯಾಗಿದ್ದು ತತ್ವಾರ್ಥ ಸೂತ್ರವನ್ನು ಅಲಂಕರಿಸಿದನೆಂದು ಹೇಳಿದೆ.[18] (೪) ಶಿವಮೊಗ್ಗ ಜಿಲ್ಲೆಯ ನಗರದ ೩೫ ನೆಯ ಶಾಸನದಲ್ಲಿ (ಕ್ರಿ. ಶ. ೧೦೭೭) "ಕಲಿಕಾಲಗಣ ಧರರುಂ ಶಾಸ್ತ್ರಕರ್ತೃಗಳುಮೆನಿಸಿರ್ದ ಸಮಂತ್ರಭದ್ರಸ್ವಾಮಿಗಳವರ ಶಿಷ್ಯ ಸನ್ತಾನಂ ಶಿವಕೋಟ್ಯಾಚಾರ್ಯರವರಿಂ ವರದತ್ತಾಚಾರ್ಯರ್" ಎಂದು ಹೇಳಿದೆ. (೫) ಹಸ್ತಿಮಲ್ಲನ (ಕ್ರಿ. ಶ. ೧೨೯೦) 'ವಿಕ್ರಾಂತ ಕೌರವ'ವೆಂಬ ನಾಟಕದ ಅಂತ್ಯದಲ್ಲಿರುವ ಪ್ರಶಸ್ತಿಯಲ್ಲಿ ಸಮಂತಭದ್ರ, ಶಿವಕೋಟಿ, ಶಿವಾಯನ, ವೀರಸೇನ, ಜಿನಸೇನ, ಗುಣಭದ್ರ—ಇವರ ಹೆಸರುಗಳನ್ನು ಹೇಳಿದೆ. ಸಮಂತಭದ್ರನ ಶಿಷ್ಯರ ವಿಷಯವಾಗಿ ಈ ಕೆಳಗಿನ ಪದ್ಯವಿದೆ :

ಶಿಷ್ಯಾಸ್ತದೀಯೌ ಶಿವಕೋಟಿ ನಾಮಾ
ಶಿವಾಯನಃ ಶಾಸ್ತ್ರವಿದಾಂ ವರೇಣ್ಯೌ ।
ಕೃತ್ಸ್ನಂ ಶ್ರುತಂ ಶ್ರೀಗುಣಪಾದ ಮೂಲೇ
ಹ್ಯಧೀತವಂತೌ ಭವತಃ ಕೃತಾರ್ಥೌ ॥

(೬) ಕನ್ನಡ ಕವಿ ಗುಣವರ್ಮನ (ಕ್ರಿ. ಶ. ಸು. ೧೨೩೫) 'ಪುಷ್ಪದಂತ ಪುರಾಣ'ದಲ್ಲಿ ಸಮಂತಭದ್ರ ಸ್ತುತಿರೂಪವಾದ ಈ ಕೆಳಗಿನ ಪದ್ಯವಿದೆ.

---

18 ತಸ್ಯೈವ ಶಿಷ್ಯಃ ಶಿವಕೋಟಿಸೂರಿ ಸ್ತಪೋಲತಾಲಂಬನ ದೇಹಯಷ್ಟಿಃ । ಸಂಸಾರವಾರಾಕರ ಪೋತಮೇತತ್ತತ್ವಾರ್ಥ ಸೂತ್ರಂ ತದಲಂಚಕಾರ ॥

ಬಿತ್ತರವಾಗಿ ಸೂತ್ರಗತಿಯಿಂ ಮಿಗೆ ಪಣ್ಣಿದ ಗಂಧಹಸ್ತಿ ತೊಂ
ಬತ್ತಱು ಸಾಸಿರಕ್ಕೆ ಶಿವಕೋಟಿಯ ಕೋಟಿ ವಿಪಕ್ಷವಿದ್ವದು
ನ್ಮತ್ತ ಮತಂಗಜಂ ಮದಂ ಬಱಿತು ಕೈಯೆಡೆಗೊಟ್ಟುದೆನಲ್ಕೆ ಪೇೞ್ವುದೇಂ
ಮತ್ತೆ ಸಮಂತಭದ್ರಮುನಿರಾಜನುದಾತ್ತ ಜಯಪ್ರಶಸ್ತಿಯಂ ‖ ೧-೨೨

ಸಮಂತಭದ್ರನು ಉಮಾಸ್ವಾತಿಕೃತ ತತ್ವಾರ್ಥ ಸೂತ್ರಕ್ಕೆ ವ್ಯಾಖ್ಯಾನ ರೂಪವಾಗಿ ೯೬೦೦೦ ಗ್ರಂಥ ಪರಿಮಿತಿಯುಳ್ಳ ಗಂಧಹಸ್ತಿ ಮಹಾಭಾಷ್ಯವನ್ನು ಬರೆದನೆಂದೂ, ಅದನ್ನು ನೋಡಿದ ವಿಪಕ್ಷ ವಿದ್ವಜ್ಜನರು, ಶಿವಕೋಟಿಯ ಕಡೆಯವರು, ಗರ್ವವನ್ನು ಉಡುಗಿಸಿಕೊಂಡರೆಂದೂ ಇದರಿಂದ ಹೇಳಬಹುದಾಗಿದೆ. ಅನಂತರ ಶಿವಕೋಟಿಗೆ ಸಮಂತ್ರಭದ್ರ ಶಿಷ್ಯತ್ವವು ಸಂಪ್ರಾಪ್ತವಾಗಿರಬಹುದು. (೭) ಇಂದ್ರನಂದಿಯ 'ನೀತಿ ಸಾರ'ದ ೬೯ನೆಯ ಪದ್ಯದಲ್ಲಿ ಸಮಂತಭದ್ರ, ಶ್ರೀಕುಂಭ, ಶಿವಕೋಟಿ, ಶಿವಾಯನ, ವಿಷ್ಣುಸೇನ, ಗುಣಭದ್ರ—ಇವರ ಹೆಸರುಗಳನ್ನು ಹೇಳಿದೆ. ಸಮಂತಭದ್ರನಿಗೂ ಶಿವ ಕೋಟಿಗೂ ಗುರುಶಿಷ್ಯ ಸಂಬಂಧವಿದ್ದಂತೆ ಇದರಿಂದ ತಿಳಿದು ಬರುವುದಿಲ್ಲ.

ಮೇಲೆ ಕೊಟ್ಟಿರುವ ೭ ಉಲ್ಲೇಖಗಳಿಂದ ಶಿವಕೋಟಿಯ ವಿಷಯವಾಗಿ ತಿಳಿದು ಬರುವ ಸಂಗತಿಗಳು—ಇವನು ಕಾಶಿಯಲ್ಲಿಯೋ ಕಂಚಿಯಲ್ಲಿಯೋ ರಾಜನಾಗಿದ್ದ; ಇವನಿಗೆ ಸಮಂತ್ರಭದ್ರಾಚಾರ್ಯನ ಪರಿಚಯವಾಯಿತು; ಆ ಆಚಾರ್ಯನಿಗೆ ಇವನು ಶಿಷ್ಯನಾಗಿದ್ದನು ಅಥವಾ ಅವನ ಶಿಷ್ಯಸಂತಾನದಲ್ಲಿ ಒಬ್ಬನಾಗಿದ್ದನು; ರತ್ನಮಾಲಾದಿ ಶಾಸ್ತ್ರಗ್ರಂಥಗಳನ್ನು ಬರೆದನು. ಮತ್ತು ತತ್ವಾರ್ಥ ಸೂತ್ರಕ್ಕೆ ಸಂಬಂಧಿಸಿದಂತೆ ಯಾವುದೋ ಒಂದು ಗ್ರಂಥವನ್ನು ರಚಿಸಿರಬಹುದು.

ಈ ಶಿವಕೋಟಿಯ ಕಾಲವೂ ತಿಳಿಯದು. ಇವನು ಎಲ್ಲಿ ರಾಜನಾಗಿದ್ದನೋ, ಯಾವ ರಾಜವಂಶಕ್ಕೆ ಸೇರಿದ್ದನೋ ಹೇಳಲಾಗುವುದಿಲ್ಲ. ಇವನ ಗುರುವಾಗಿದ್ದ ಸಮಂತ್ರಭದ್ರಾ ಚಾರ್ಯರ ಕಾಲವೂ ಅನಿರ್ದಿಷ್ಟವಾಗಿಯೇ ಇದೆ. ಕ್ರಿ. ಶ. ೨ನೆಯ ಶತಮಾನದಲ್ಲಿ ಸಮಂತಭದ್ರರಿದ್ದಿರಬಹುದೆಂದು, ಎಂದರೆ ಸು. ಕ್ರಿ. ಶ. ೧೨೦-೧೮೫ ರವರೆಗೆ ಅವನ ಕಾಲವೆಂದು, ಕೆಲ ವಿದ್ವಾಂಸರು ಹೇಳುತ್ತಾರೆ[19] ಮೇಲೆ ಹೇಳಿರುವ ಇಬ್ಬರು ಶಿವಕೋಟಿ ಗಳು ಅಭಿನ್ನರೆಂದು ಕೆಲವರು ಹೇಳಬಹುದು.[20] ಒಂದನೆಯ ಶಿವಕೋಟಿ ತನ್ನ ಗುರುಗಳ ಹೆಸರುಗಳನ್ನು ಹೇಳುವಾಗ ಸಮಂತಭದ್ರನ ಹೆಸರನ್ನು ಹೇಳಿಲ್ಲವಾದ್ದರಿಂದ ಈ ಊಹೆಗೆ ಅವನ ಗ್ರಂಥದಲ್ಲಿ ಆಧಾರವಿಲ್ಲ, ಆದರೆ ಪ್ರಭಾಚಂದ್ರನ ಕಥಾಕೋಶ ಸಮಂತಭದ್ರನಿಂದ ಜೈನದೀಕ್ಷೆ ವಹಿಸಿದ ಶಿವಕೋಟಿ ಸಕಲಶಾಸ್ತ್ರಗಳನ್ನು ಕಲಿತು ೮೪೦೦೦ ಪದ್ಯಗಳಿದ್ದ ಆರಾಧನಾ ಎಂಬ ಗ್ರಂಥವನ್ನು, ಲೋಹಾಚಾರ್ಯಕೃತವಾದುದನ್ನು, ೨೫೦೦ ಪದ್ಯ

[19] *The Jaina Sources of the History of Ancient India*, p. 148.

[20] "The tendency is to identify the another of Mularadhana with this convert of Samanta Bhadra," *Catalogue of Sanskrit and Prakrit Manuscripts in C. P. and Berar*, p. XIX

ಗಳಲ್ಲಿ ಸಂಗ್ರಹಿಸಿ ಮೂಲಾರಾಧನಾ ಎಂಬ ಗ್ರಂಥವನ್ನು ಮಾಡಿದನೆಂದು[21] ಹೇಳುತ್ತದೆ. ಈ ಕಥೆಗೆ ಬೇರೆ ಎಲ್ಲಿಯೂ ಸಮರ್ಥನೆ ದೊರೆತಿಲ್ಲ. ಆದ್ದರಿಂದ ಇದಕ್ಕೆ ಹೆಚ್ಚು ಗಮನವನ್ನು ಕೊಡಬೇಕಾಗಿಲ್ಲ.

(೩) 'ರತ್ನಮಾಲಾ' ಎಂಬೊಂದು ಚಿಕ್ಕ ಸಂಸ್ಕೃತ ಗ್ರಂಥ, ೬೭ (೬೬) ಶ್ಲೋಕಗಳನ್ನುಳ್ಳದ್ದು, ಒಬ್ಬ ಶಿವಕೋಟಿಯಿಂದ ರಚಿತವಾಗಿರುವಂತೆ ತಿಳಿದು ಬರುತ್ತದೆ. ಈ ಗ್ರಂಥದ ಅಂತ್ಯದಲ್ಲಿರುವ "ಇತಿ ಶ್ರೀ ಸಮಂತಭದ್ರಸ್ವಾಮಿ ಶಿಷ್ಯ ಶಿವಕೋಟ್ಯಾಚಾರ್ಯ ವಿರಚಿತಾ ರತ್ನಮಾಲಾ ಸಮಾಪ್ತಾ" ಎಂಬ ಪ್ರಶಸ್ತಿ ವಾಕ್ಯದಲ್ಲಿ ಇದನ್ನು ಬರೆದ ಶಿವಕೋಟಿ ಸಮಂತಭದ್ರನ ಶಿಷ್ಯನೆಂದು ಹೇಳಿದೆ. ಗ್ರಂಥದ ಅಂತ್ಯ ಶ್ಲೋಕ—

ಯೋ ನಿತ್ಯಂ ಪಠತಿ ಶ್ರೀಮಾನ್ ರತ್ನಮಾಲಾಮಿಮಾಂ ಪರಂ
ಸಶುದ್ಧ ಭಾವತೋಽನೂನಂ ಶಿವಕೋಟಿತ್ವಮಾಪ್ನುಯಾತ್ ||

ಇದರಲ್ಲಿ 'ಶುದ್ಧಭಾವತೋ' ಎಂಬುದಕ್ಕೆ 'ಶುದ್ಧಚರಣೋ' ಎಂಬ ಪಾಠಾಂತರವಿದೆ.[22] 'ಶಿವಕೋಟಿತ್ವಂ' ಎಂಬಲ್ಲಿ ಶ್ಲೇಷೆಯಿಂದ ಗ್ರಂಥಕರ್ತನ ನಾಮಸೂಚನೆ ಇದೆಯೆಂದು ಹೇಳಬಹುದು. ೨ನೆಯ ಶ್ಲೋಕದಲ್ಲಿ ಸಿದ್ಧಸೇನ ಗುರುವಿನ ಸ್ಮರಣೆಯನ್ನು ಮಾಡಿದೆ. ೪ನೆಯದರಲ್ಲಿ 'ಸ್ವಾಮಿ ಸಮಂತಭದ್ರೋ ಮೇ ಮನಸೇ ಮಾನಸೇನ ಘಃ। ತಿಷ್ಠತಾತ್' ಎಂದು ಪ್ರಾರ್ಥನೆಯಿದೆ. ಇಲ್ಲಿಂದ ಮುಂದಕ್ಕೆ ಜೈನ ಶ್ರಾವಕರ ಆಚಾರ ವ್ಯವಹಾರಗಳು ಹೇಗಿರಬೇಕೆಂಬ ವಿಷಯದ ಪ್ರತಿಪಾದನೆ ಕಾಣುತ್ತದೆ.

ಈ ಗ್ರಂಥವನ್ನು ಬರೆದ ಶಿವಕೋಟಿ ಭಗವತೀ ಆರಾಧನಾ ಕರ್ತೃವಾದ ಶಿವಕೋಟಿಯಲ್ಲ; ಯಾರೋ ಇದನ್ನು ಬರೆದು ಶಿವಕೋಟಿಯ ಹೆಸರಿನಲ್ಲಿ ಪ್ರಚಾರ ಮಾಡಿರಬೇಕು. ಇಲ್ಲವಾದರೆ ಈ ಶಿವಕೋಟಿಯೇ ಇನ್ನೊಬ್ಬನಿರಬಹುದು. ರತ್ನಮಾಲಾ ಗ್ರಂಥದ ರಚನೆ ತುಂಬ ಸಾಧಾರಣ. ಇದರಲ್ಲಿ ಯಾವ ಪ್ರೌಢಿಮೆಯೂ ಇಲ್ಲ; ಈ ಗ್ರಂಥದ ಉಲ್ಲೇಖವನ್ನು ಯಾರೂ ಮಾಡಿಲ್ಲ, ಇದರ ಯಾವ ಪದ್ಯವನ್ನೂ ಪ್ರಮಾಣವೆಂದು ಯಾರೂ ಉದಾಹರಿಸಿಲ್ಲ—ಎಂದು ಪಂಡಿತ ನಾಥೂರಾಮಪ್ರೇಮಿ ಅವರು ಹೇಳುತ್ತಾರೆ. ಮುಂದುವರಿಯುತ್ತ ಈ ಗ್ರಂಥದಲ್ಲಿ ಕಾಣುವ ೨೨ ನೆಯ ಪದ್ಯ ಹೀಗಿದೆ :

ಕಲೌಕಾಲೇ ಏನೇ ವಾಸೋ ವರ್ಜ್ಯತೇ ಮುನಿಸತ್ತಮೈಃ।
ಸ್ಥೀಯತೇಚ ಜಿನಾಗಾರೇ ಗ್ರಾಮಾದಿಷು ವಿಶೇಷತಃ ||

ಕಲಿಕಾಲದಲ್ಲಿ ಜೈನಯತಿಗಳು ವನದಲ್ಲಿ ವಾಸಮಾಡುವುದನ್ನು ಬಿಡಬೇಕು; ಜಿನಾಲಯಗಳಲ್ಲಾಗಲಿ, ಗ್ರಾಮಗಳಲ್ಲಾಗಲಿ, ಅವರು ಇರಬೇಕು;—ಎಂದು ಇದರ ಅಭಿಪ್ರಾಯ. ಇದು 'ಮೂಲಾರಾಧನೆ'ಯ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಆದ್ದರಿಂದ ಈ ಗ್ರಂಥ

---

[21] *Brahatkatha Kosa*, p. 53.

[22] ಶ್ರೀ ಸಿ. ಮಹದೇವಪ್ಪ ಎಂ. ಎ. ಅವರು ನನಗೆ ಕಳಿಸಿದ 'ರತ್ನಮಾಲಾ'ಗ್ರಂಥದ ಒಂದು ಹಸ್ತಪ್ರತಿಯಲ್ಲಿ.

ವನ್ನು ಬರೆದವನು ಆ ಗ್ರಂಥದ ಶಿವಕೋಟಿಯಲ್ಲ'—ಎಂಬ ನಿರ್ಣಯಕ್ಕೆ ಅವರು ಬಂದಿದ್ದಾರೆ. ಸ್ವಾಮಿ ಸಮಂತಭದ್ರಕೃತರತ್ನಕರಂಡಕ ಶ್ರಾವಕಾಚಾರದಲ್ಲಿ ಇರುವ ಅಭಿಪ್ರಾಯಕ್ಕೂ (೫-೧೪೭) ಇದು ವಿರುದ್ಧವಾಗಿರುವುದರಿಂದ ರತ್ನಮಾಲೆಯನ್ನು ಬರೆದಾತ ಸಮಂತಭದ್ರಶಿಷ್ಯ ಶಿವಕೋಟಿಯಲ್ಲವೆಂದು ಹೇಳಬಹುದು. ರತ್ನಮಾಲೆಯಲ್ಲಿರುವ

ಸರ್ವಮೇವ ವಿಧಿರ್ಜೈನಃ ಪ್ರಮಾಣಂ ಲೌಕಿಕಃ ಸತಾಂ ।
ಯತ್ರ ನವ್ರತಹಾನಿಃ ಸ್ಯಾತ್ಸಂಯಕ್ತ್ವಸ್ಯ ಖಂಡನಂ ॥ ೬೫

ಎಂಬ ಪದ್ಯ ಸ್ವಲ್ಪ ಪಾಠಭೇದಗಳೊಡನೆ ಸೋಮದೇವ ಸೂರಿಯ (ಕ್ರಿ. ಶ. ೯೫೯) 'ಯಶಸ್ತಿಲಕ ಚಂಪು'ವಿನಲ್ಲಿ ದೊರೆಯುವುದರಿಂದ ಆ ಕಾಲಕ್ಕೆ ಸ್ವಲ್ಪ ಹಿಂದೆ ರತ್ನಮಾಲೆ ರಚಿತವಾಗಿರಬಹುದು.[23] ನಾಥೂರಾಮ ಪ್ರೇಮಿ ಅವರ ಈ ಅಭಿಪ್ರಾಯಗಳನ್ನು ಡಾ. ಉಪಾಧ್ಯೆಯವರೂ ಅನುಮೋದಿಸಿದ್ದಾರೆ.[24] ಈ ಕಾರಣಗಳಿಂದ ರತ್ನಮಾಲಾ ಕರ್ತೃವಾದ ಶಿವಕೋಟಿ ಬೇರೊಬ್ಬ ಶಿವಕೋಟಿ ಎಂದು ಹೇಳಬಹುದು. ಇವನ ಗುರುವಾಗಿದ್ದ ಸಮಂತಭದ್ರನು ಕೂಡ ಇನ್ನಾರೋ ಸಮಂತಭದ್ರನಾಗಿರಬೇಕು.[25]

ಪೂರ್ವೋಕ್ತರಾದ ಮೂವರು ಶಿವಕೋಟಿಗಳಲ್ಲದೆ ಬರಿ ಕೋಟಾಚಾರ್ಯ ಅಥವಾ ಕೋಟ್ಯಾಚಾರ್ಯ ಎಂಬೊಬ್ಬ ಜೈನ ಟೀಕಾಕಾರನಿದ್ದಂತೆ ತಿಳಿದುಬರುತ್ತದೆ. ಇವನು ವಿಶೇಷಾವಶ್ಯಕಭಾಷ್ಯ ಟೀಕೆಯನ್ನು ಬರೆದಿದ್ದಾನೆ. ಇದರ ಒಂದು ಹಸ್ತಪ್ರತಿ ಕ್ರಿ. ಶ. ೧೦೮೧ ರಲ್ಲಿ ಲಿಖಿತವಾಗಿರುವುದು ದೊರೆಯುವುದರಿಂದ[26] ಕೋಟ್ಯಾಚಾರ್ಯನು ಆ ಕಾಲಕ್ಕಿಂತ ಹಿಂದಿದ್ದವನೆಂದು ಹೇಳಬಹುದು. ಮೊದಲ ಇಬ್ಬರು ಶಿವಕೋಟಿಗಳು ಅತಿ ಪ್ರಾಚೀನ ಕಾಲಕ್ಕೆ ಸೇರಿದವರಾಗಿರುವುದರಿಂದ ಅವರು ಪ್ರಕೃತ ಕನ್ನಡ ವಡ್ಡಾರಾಧನೆಯ ಕರ್ತೃಗಳಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಮೂರನೆಯ ಶಿವಕೋಟಿ ಅದರ ಕರ್ತೃವಾಗಿದ್ದಿರಬಹುದಾದ ಸಂಭವವಿದೆ. ಇಲ್ಲದಿದ್ದರೆ ವಡ್ಡಾರಾಧನೆಯ ರಚಕನಾದವನು ಬೇರೊಬ್ಬ ಶಿವಕೋಟಿಯಾಗಿದ್ದನೆಂದು ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ಈ ಕನ್ನಡ ಗ್ರಂಥದ ಹೆಸರು ವಡ್ಡಾರಾಧನೆಯೆಂದೂ, ಅದನ್ನು ಹೇಳಿದವನು ಒಬ್ಬ ಶಿವಕೋಟಿಯೆಂದೂ ಸದ್ಯಕ್ಕೆ ನಿರ್ಣಯಿಸಬಹುದು. ಖಚಿತವಾದ ನೂತನಾಧಾರಗಳು ದೊರೆಯುವವರೆಗೆ ಬೇರೆ ಯಾವ ನಿರ್ಣಯಕ್ಕೂ ಅವಕಾಶವಿದೆಯೆಂದು ತೋರುವುದಿಲ್ಲ. ಗ್ರಂಥ ಸಮಾಪ್ತಿ

---

[23] ಜೈನ ಸಾಹಿತ್ಯ ಔರ್ ಇತಿಹಾಸ್, p. 28

[24] *Brhatkatha Kosa*, (p. 53 Intr)

[25] ೬ ಜನ ಸಮಂತಭದ್ರರು ಇದ್ದಂತೆ ಇದುವರೆಗೆ ತಿಳಿದುಬಂದಿದೆ: ರತ್ನಕರಂಡ ಶ್ರಾವಕಾಚಾರ, (ಬೊಂಬಾಯಿ), ಪೀಠಿಕೆ, 58.

[26] *Catalogue of Sankrit & Prakrit Manuscripts in C. P. and Berar*, p. v.

ಯಲ್ಲಿರುವ ಗದ್ಯವನ್ನು ಎರಡು ವಾಕ್ಯಗಳಂತೆ ಭಾವಿಸಿ ಮೊದಲನೆಯದು ಕವಿಯ ಹೆಸರನ್ನು ಹೇಳುವುದೆಂದೂ, ಎರಡನೆಯದು ಗ್ರಂಥದ ಹೆಸರನ್ನು ಸೂಚಿಸುವುದೆಂದೂ ಸ್ವಾಭಾವಿಕವಾದ ಅರ್ಥವನ್ನು ಗ್ರಹಿಸಬೇಕಾಗಿದೆ.

## ಕಾಲ

'ವಡ್ಡಾರಾಧನೆ' ಯಾವ ಕಾಲದಲ್ಲಿ ರಚಿತವಾಯಿತೆಂಬ ವಿಷಯವೂ ತುಂಬ ತೊಡಕಾದ ಪ್ರಶ್ನೆಯಾಗಿದೆ. ಬಾಹ್ಯಾಭ್ಯಂತರ ಪ್ರಮಾಣಗಳನ್ನು ಅಧಿಕರಿಸಿ ಈ ಸಮಸ್ಯೆಯ ವಿಚಾರ ನಡೆಯಬೇಕಾಗಿದೆ. ಕೆಲವರು ವಿದ್ವಾಂಸರು ಈ ವಿಷಯದಲ್ಲಿ ತುಂಬ ಬೆಳಕನ್ನು ಬೀರಿದ್ದಾರೆ. ಕೆ. ಬಿ. ಪಾಠಕ್ ಅವರು ತೊರೆಗಲ್ಲು ಶಾಸನದ ಕಾಲವಾದ ೧೧೮೮ ನ್ನು ಈ ಗ್ರಂಥದ ಕಾಲವನ್ನಾಗಿ ಭಾವಿಸಿದರು. ಅವರನ್ನು ಅನುಸರಿಸಿ ಆರ್. ನರಸಿಂಹಾಚಾರ್ಯರು ಇದರ ಕಾಲವನ್ನು ಸು. ೧೧೮೦ ಎಂದು ಹೇಳಿದರು. ಈ ಗ್ರಂಥದ ಮೂರು ಕಥೆಗಳನ್ನು ೧೯೩೧ ನೆಯ ಇಸವಿಯಲ್ಲಿ ಮೊದಲಬಾರಿಗೆ ಪ್ರಕಟಿಸಿದಾಗ ಅದರ ಪೀಠಿಕೆಯಲ್ಲಿ ಈ ಗ್ರಂಥದ ಕಾಲವು ಕ್ರಿ. ಶ. ಸು. ೯೮೦ ಆಗಿರಬಹುದೆಂದು ಸದ್ಯಕ್ಕೆ ಊಹಿಸಬಹುದಾಗಿದೆಯೆಂದು ಕೆಲವು ಆಧಾರಗಳನ್ನು ಅವಲಂಬಿಸಿ ಬರೆಯಲಾಗಿತ್ತು.[27]

೧. ಶ್ರೀಮಾನ್ ಎಂ. ಗೋವಿಂದಪೈಗಳು ೧೯೪೦ ರಲ್ಲಿ ಪ್ರಕಟವಾದ 'ಮೂರು ಉಪನ್ಯಾಸಗಳು' ಎಂಬ ತಮ್ಮ ಗ್ರಂಥದಲ್ಲಿ 'ವಡ್ಡಾರಾಧನೆ'ಯ ಕಾಲವನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಾರೆ (೧೧೧-೧೨೨). ಅವರ ನಿರ್ಣಯ : "ನನಗಾದರೊ ಕನ್ನಡ ವೊಡ್ಡಾರಾಧಣವು ಕ್ರಿ. ಶ. ೬ ನೆಯ ಶತಮಾನಕ್ಕಿಂತ ಈಚೆಯದಲ್ಲವೆಂದು ತೋರುತ್ತದೆ." ಇವರು ಆಂತರಿಕ ಪ್ರಮಾಣಗಳನ್ನೇ ವಿಶೇಷವಾಗಿ ಅವಲಂಬಿಸಿರುವುದು ಕಾಣುತ್ತದೆ; ಬಾಹ್ಯಪ್ರಮಾಣಗಳ ನೆರವು ಇದ್ದ ಹೊರತು ಇವಕ್ಕೆ ಬೆಲೆ ಬರಲಾರದು. ರೋಮೀಯ ದೀನಾರ, ಗ್ರೀಕಿನ ದ್ರಮ್ಮ ಎಂಬ ನಾಣ್ಯಗಳ ಹೆಸರುಗಳು, ಕಟ್ಟಿಪ್ಪು, ಕಳ್ಳದ, ಕಲ್ಪಿ, ಕಲ್ಪಿಸು, ಬಡ್ಡಿಸು, ಬದುಕು (ಬಾಳು ಎಂಬರ್ಥದಲ್ಲಿ), ಕೆಂದು, ಕೇಳ್ಪಿ, ಲುಂದು, ಪತನಾರ್ಥದ ಕೆಡು, ತೊಡು, ದಂಶನಾರ್ಥದ ಕೊಳ್, ಇಟ್ಟಿ, ಪೊಟ್ಟಿ, ಉಳ್ಳ ಎಂಬರ್ಥದ ಒಡೆಯ, ಕರ್ಮಣಾರ್ಥದ ಮುಚ್ಚಿಪಟ್ಟ—ಈ ಮುಂತಾದ ಅವರೇ ತೋರಿಸಿರುವ ಪ್ರಯೋಗಗಳು ಪ್ರಾಚೀನವಾಗಿದ್ದರೂ ಅಪೂರ್ವವಾಗಿದ್ದರೂ ಇವುಗಳ ಆಧಾರದಿಂದಲೇ ಕಾಲನಿರ್ಣಯ ಸಾಧ್ಯವಾಗಲಾರದು. ಇವುಗಳಲ್ಲಿ ಪ್ರತಿಯೊಂದರ ವಿಷಯದಲ್ಲೂ ಇವು ಸಾಹಿತ್ಯದಲ್ಲಿ ಯಾವಾಗ ತಲೆದೋರಿದುವು, ಯಾವಾಗ ಇಲ್ಲವಾದುವು ಎಂಬ ಕಾಲಾವಧಿಯನ್ನು ಕಂಡುಹಿಡಿಯಬೇಕಾಗುತ್ತದೆ. ಈ ಅವಧಿಯಲ್ಲಿ ಆ ಗ್ರಂಥ ಯಾವಾಗಲೋ ರಚಿತವಾಗಿರಬಹುದೆಂದು ಹೇಳಲು ಮಾತ್ರ ಸಾಧ್ಯ; ಅಲ್ಲದೆ ಹಳೆಯ ನುಡಿಗಟ್ಟಿನಲ್ಲಿ ಪ್ರವೀಣವಾಗಿದ್ದ ಅರ್ವಾಚೀನ ಕವಿಯೊಬ್ಬ ಇಂಥ ಪ್ರಯೋಗಗಳನ್ನು ಮಾಡುವ ಸಂಭವವೂ ಇರುತ್ತದೆ. ಆ ಅವಧಿ ಅನೇಕ ಶತಮಾನಗಳಷ್ಟು ಕಾಲ

---

[27] ಇದೇ ಗ್ರಂಥ, ೩೩೧-೩೩೩ ನೋಡಿ.

ವನ್ನು ಹೊಂದಿರಬಹುದು. ಉದಾಹರಣೆಗೆ ಒನ್, ಒಳ್, ಒರ್ ಮುಂತಾದ ಪ್ರತ್ಯಯಗಳು ಹಲ್ಮಿಡಿ ಶಾಸನದ ಕಾಲದಿಂದ (ಕ್ರಿ. ಶ. ೪೫೦) ಹಿಡಿದು ಕವಿರಾಜಮಾರ್ಗದ (೮೫೦) ಕಾಲದವರೆಗೂ ಇದ್ದದ್ದೂ, ಅವುಗಳ ಜೊತೆಯಲ್ಲಿಯೇ ಅನ್, ಅಳ್, ಅರ್ ಮುಂತಾದ ಪ್ರತ್ಯಯಗಳು ಪ್ರಯೋಗದಲ್ಲಿದ್ದದ್ದೂ, ಕ್ರಮೇಣ ಒಕಾರಾದಿ ಪ್ರತ್ಯಯಗಳು ಕಡಿಮೆಯಾಗುತ್ತ ಬಂದು ಅಕಾರಾದಿ ಪ್ರತ್ಯಯಗಳಿಗೆ ಎಡೆಕೊಟ್ಟು ಭಾಷೆಯಿಂದ ನಷ್ಟವಾದದ್ದೂ ಶಾಸನಗಳ ಅವಲೋಕನದಿಂದ ಖಚಿತಪಡುತ್ತದೆ. ಪೈ ಅವರು ಕಾಣಿಸಿರುವ ಎಲ್ಲ ಅಪೂರ್ವ ಪ್ರಯೋಗಗಳೂ ಈಚಿನ ಕಾಲದ ಹಳಗನ್ನಡ ಗ್ರಂಥಗಳಲ್ಲೂ, ಶಾಸನಗಳಲ್ಲೂ ಕ್ವಚಿತ್ತಾಗಿಯಾದರೂ ದೊರೆಯುತ್ತವೆಂದು ತೋರಿಸುವುದು ಸಾಧ್ಯ. ಆದ್ದರಿಂದ ಅವರು ಹೇಳಿರುವ ಈ ಆಂತರಿಕ ಪ್ರಮಾಣಗಳಿಂದ ವಡ್ಡಾರಾಧನೆಯ ರಚನೆಯ ಕಾಲವನ್ನು ನಿರ್ಣಯಿಸುವುದಾಗಲಾರದು. "ವೊಡ್ಡಾರಾಧಣವು ಕ್ರಿ. ಶ. ೬ನೆಯ ಶತಮಾನಕ್ಕಿಂತ ಈಚೆಯದಲ್ಲವೆಂದು ತೋರುತ್ತದೆ"—ಎಂಬ ಅವರ ಮಾತು ಬರಿ ಅಭಿಪ್ರಾಯವಾಗಿಯೇ ಉಳಿದುಕೊಳ್ಳುತ್ತದೆ.

೨. ಶಿವಕೋಟಿಯ ವೊಡ್ಡಾರಾಧನೆಯು ಪ್ರಾಯಶಃ ಏಳನೆಯ ಶತಮಾನಕ್ಕೆ ಸೇರಿದ ರಚನೆಯೆಂದು ಡಾ. ಎಸ್. ಶ್ರೀಕಂಠಶಾಸ್ತ್ರಿ ಅವರು ಹೇಳಿದ್ದಾರೆ.[28] ಇದಕ್ಕೆ ಅವರು ಯಾವ ಆಧಾರವನ್ನೂ ತೋರಿಸಿಲ್ಲ.

೩. ವಡ್ಡಾರಾಧನೆಯ ರಚನಾಕಾಲವನ್ನು ಕಂಡುಹಿಡಿಯುವುದರಲ್ಲಿ ಡಾ. ಆ. ನೇ. ಉಪಾಧ್ಯೆ ಅವರು ಮಾಡಿರುವ ಸಂಶೋಧನೆಗಳು ಬಹು ಸಾರವತ್ತಾಗಿವೆ. ಅವರು ಮೊದಲು ಬಾಹ್ಯಪ್ರಮಾಣಗಳನ್ನು ನಿರೂಪಿಸಿ, ಆಮೇಲೆ ಆಂತರಿಕ ಪ್ರಮಾಣಗಳ ನೆರವನ್ನು ಪಡೆದು ತಮ್ಮ ತೀರ್ಮಾನವನ್ನು ಮಾಡಿದ್ದಾರೆ. ವಡ್ಡಾರಾಧನೆಯಲ್ಲಿ ಅನೇಕ ಪ್ರಾಕೃತ, ಸಂಸ್ಕೃತ, ಕನ್ನಡ ಪದ್ಯಗಳು ಅನುವಾದಿತವಾಗಿರುವುದು ವಿದಿತವಾಗಿರುವ ಅಂಶವಷ್ಟೆ. ಕೆಲವು ಪ್ರಾಕೃತ, ಸಂಸ್ಕೃತ ಪದ್ಯಗಳಿಗೆ ಡಾ. ಉಪಾಧ್ಯೆಯವರು ಆಕರಗಳನ್ನು ಕಂಡುಹಿಡಿದಿದ್ದಾರೆ. ಕನ್ನಡದ ಪದ್ಯಗಳು ಅನುವಾದಿತವೋ, ಆ ಗ್ರಂಥದ ಕವಿಕೃತವೋ ಎಂಬುದನ್ನು ನಿರ್ಣಯಿಸುವುದಾಗದಿರುವುದರಿಂದ ಅವುಗಳ ವಿಷಯವನ್ನು ಪ್ರಕೃತ ನೋಡಬೇಕಾಗಿಲ್ಲ. ಕೆಲವು ಪ್ರಾಕೃತ, ಸಂಸ್ಕೃತ ಪದ್ಯಗಳ ಆಕರಗಳು ಹೀಗಿವೆ:

೧. ಹತ್ತೊಂಬತ್ತು ಕಥೆಗಳ ಆದಿಯಲ್ಲಿ ಕಾಣುವ ಗಾಹೆಗಳು, (ಫ. ಜ) ಪ್ರತಿಗಳ ಅಂತ್ಯದಲ್ಲಿರುವ ೩ ಗಾಹೆಗಳು, ಜಹಜಹ ಭುಂಜಇ....ಎಂಬ ಗಾಹೆ (ವಡ್ಡಾ. ೧೪೩)—ಇವು ಶಿವಕೋಟಿಯ 'ಭಗವತೀ ಆರಾಧನಾ'ದಲ್ಲಿವೆ; ಕಾಲ ಕ್ರಿ. ಶ. ೧ ನೆಯ ಶತಮಾನ.

೨. ಕೊಲ್ಲಾಪುರ ಪ್ರತಿಯ ಆದಿಯಲ್ಲಿರುವ ಮೂರು ಗಾಹೆಗಳಲ್ಲಿ ಮೊದಲನೆಯದು

---

[28] *Sources of Karnatak History*, xx

'ಪಂಚಾಸ್ತಿಕಾಯ'ದಿಂದಲೂ, ಎರಡನೆಯದು 'ಪ್ರವಚನಸಾರ'ದಿಂದಲೂ ಉದ್ಧೃತವಾಗಿವೆ. ಈ ಗ್ರಂಥಗಳ ಕರ್ತೃ ಕುಂಡಕುಂದಾಚಾರ್ಯ. ಕಾಲ ಸು. ೧ನೆಯ ಶತಮಾನ.

೩. "ಖಮ್ಮಾಮಿ ಸಬ್ಬ ಜೀವಾಣಂ"....ಎಂಬ ಗಾಹೆ—ವಟ್ಟಕೇರಸ್ವಾಮಿಯ ಮೂಲಾಚಾರ'ದಲ್ಲೂ ಮತ್ತು 'ಪ್ರತಿಕ್ರಮಣ'ದಲ್ಲೂ ಇದೆ. (ಪು. ೯ ಭಾವ ನಗರದ ಮುದ್ರಣ ಸಂವತ್ ೧೯೦೪) ಕಾಲ ಸು. ೧ ನೆಯ ಶತಮಾನ

೪. "ಯದ್ಯಪಿನಿಷೇವ್ಯಮಾಣಾ...." (ಪು. ೧೦೭) ಉಮಾಸ್ವಾತಿಯ 'ಪ್ರಶಮರತಿ ಪ್ರಕರಣ'ದಲ್ಲಿದೆ, ಕಾಲ ೧ ನೆಯ ಶತಮಾನ.

೫. "ನಮಶ್ರೀ ವರ್ಧಮಾನಾಯ...." ಎಂಬ ಗ್ರಂಥಾದಿಯ ಪದ್ಯ—ಸಮಂತ ಭದ್ರನ ರತ್ನಕರಂಡಕ ಶ್ರಾವಕಾಚಾರದಲ್ಲಿದೆ, ಕಾಲ ೨ ನೆಯ ಶತಮಾನ.

೬. "ಯೇಷಾಂನ ವಿದ್ಯಾ . . . . ."
"ಯಾವತ್ ಸ್ವಸ್ಥಮಿದಂ . . ."
"ತೃಷ್ಣಾಂ ಛಿಂದಿ . . . . . ."
} ಭರ್ತೃಹರಿಯ ನೀತಿವೈರಾಗ್ಯಶತಕಗಳು ಕಾಲ ಅನಿರ್ದಿಷ್ಟ

೭. "ಛಿಜ್ಜಉ ಭಿಜ್ಜಉ...."ಎಂಬ ಗಾಹೆ (ವಡ್ಡಾ. ೪೮) ಜೋಇಂದುವಿನ 'ಪರ ಮಾತ್ಮ ಪ್ರಕಾಶ'ದಲ್ಲಿದೆ. ಕ್ರಿ. ಶ. ೬ನೆಯ ಶತಮಾನ.

೮. "ಕಸ್ಯಮಾತಾಪಿತಾ ಕಸ್ಯ...." ಎಂಬ ಶ್ಲೋಕ (ವಡ್ಡಾ. ೧೪೨) ಜಟಾಸಿಂಹ ನಂದಿಯ ವರಾಂಗಚರಿತದಲ್ಲಿದೆ. (೧೫-೭೮). ಕಾಲ, ಕ್ರಿ. ಶ. ೭ ನೆಯ ಶತಮಾನದ ಅಂತ್ಯ.

೯. "ಅದೌಜನ್ಮ ಜರಾರೋಗ...." ಎಂಬ ಶ್ಲೋಕ (ವಡ್ಡಾ. ೬೮) ಗುಣಭದ್ರಾ ಚಾರ್ಯರು ಪೂರೈಸಿದ ಮಹಾಪುರಾಣ ಭಾಗದಲ್ಲಿದೆ (೪೬-೧೯೬): ಗುಣಭದ್ರನ ಉತ್ತರ ಪುರಾಣ ಮುಗಿದದ್ದು ಕ್ರಿ. ಶ. ೮೯೮ ಕ್ಕಿಂತ ಸ್ವಲ್ಪ ಹಿಂದೆ.

ಮೇಲ್ಕಂಡ ಪದ್ಯವೇಷ್ಟನಗಳು ಇನ್ನೂ ಪ್ರಾಚೀನತರ ಗ್ರಂಥಗಳಿಗೆ ಸೇರಿದುವೆಂದೂ ಕನ್ನಡ ಗ್ರಂಥದಲ್ಲಿ ಅವುಗಳ ಅಸ್ತಿತ್ವವೇ ಸಂದೇಹಾಸ್ಪದವೆಂದೂ ಬಲವಾದ ಪ್ರಮಾಣ ಗಳಿಂದ ಸ್ಥಾಪಿಸುವವರೆಗೆ ಕನ್ನಡ ವಡ್ಡಾರಾಧನೆ ಕ್ರಿ. ಶ. ೮೯೮ ಕ್ಕಿಂತ ಹಿಂದಿನದಲ್ಲ ವೆಂದು ಒಪ್ಪಬೇಕಾಗುತ್ತದೆ. ಗುಣಭದ್ರಾಚಾರ್ಯ ಕೃತ "ಅದೌ ಜನ್ಮಜರಾರೋಗ...." ಎಂಬ ಪದ್ಯ ಬಹು ಮುಖ್ಯವಾದ ಆಧಾರವಾಗಿದೆ. ಇದನ್ನು ಕದಲಿಸುವುದು ಕಷ್ಟ.

ವಡ್ಡಾರಾಧನೆಯ ಅತಿ ಪ್ರಾಚೀನ ಹಸ್ತಪ್ರತಿ (ಖ) ಕ್ರಿ. ಶ. ೧೪೦೩ರಲ್ಲಿ ಲಿಖಿತ ವಾಗಿದೆ. ಆದ್ದರಿಂದ ವಡ್ಡಾರಾಧನೆ '೮೯೮-೧೪೦೩'ರ ಅವಧಿಯಲ್ಲಿ ರಚಿತವಾಗಿರ ಬೇಕು. ಈ ಅವಧಿಯನ್ನು ಕುಗ್ಗಿಸಲು ಆಂತರಿಕ ಪ್ರಮಾಣಗಳು ನೆರವಾಗು ತ್ತವೆ :

೧. ಈ ಗ್ರಂಥದಲ್ಲಿ ಪದಾದಿಯ ಪಕಾರಕ್ಕೆ ಸಾಧಾರಣವಾಗಿ 'ಹ' ಬರುವುದಿಲ್ಲ. ಈ ಮಾರ್ಪಾಟು ನಡೆದದ್ದು ಕ್ರಿ. ಶ. ೧೧ನೆಯ ಶತಮಾನದ ಮೇಲೆ ಎಂದು ಶಾಸನಗಳಿಂದ ತಿಳಿದು ಬರುತ್ತದೆ.

೨. ರೇಫಸಂಯುಕ್ತ ಈ ಗ್ರಂಥದಲ್ಲಿ ದೊರಕುತ್ತದೆಯೇ ಹೊರತು ಅದಕ್ಕೆ ಸಜಾತೀಯತ್ವ ಪ್ರಾಪ್ತವಾಗಿಲ್ಲ. ಹೀಗಾಗುವುದು ೧೨ ನೆಯ ಶತಮಾನದ ಮಧ್ಯಭಾಗದ ಜನರ ಬಾಯಿಮಾತಿನಲ್ಲಿ ತಲೆದೋರಿತಾದರೂ ೧೩ ನೆಯ ಶತಮಾನ ಮುಗಿಯುವ ಹೊತ್ತಿಗೆ ಸಾರ್ವತ್ರಿಕವಾದ ಭಾಷಾವ್ಯಾಪಾರವಾಗಿ ಪರಿಣಮಿಸಿತು.

೩. ಕಳ್ವೊಂ, ಕೂಡಿದೊಂ ಇತ್ಯಾದಿ ಕ್ರಿಯಾರೂಪಗಳು ನಿಸ್ಸಂದೇಹವಾಗಿ ಪ್ರಾಚೀನ. ೧೧ ನೆಯ ಶತಮಾನದ ಮೇಲೆ ಇವುಗಳ ಪ್ರಯೋಗ ವಿರಲವಾಗುತ್ತದೆ.

ಈ ಕಾರಣಗಳು ಕನ್ನಡ ವಡ್ಡಾರಾಧನೆಯ ಕಾಲ ಕ್ರಿ. ಶ. ೮೯೮–೧೪೦೩ ರ ವರೆಗೆ ವಿಶಾಲವಾದ, ಆದರೆ ನಿಷ್ಕೃಷ್ಟವಾದ ಅಂತರಕ್ಕೆ ಸೇರಿದೆಯೆಂಬುದನ್ನೂ, ಬಹುಶಃ ಅದು ೧೧ ನೆಯ ಶತಮಾನದಲ್ಲಿ ರಚಿತವಾಗಿರಬಹುದೆಂಬುದನ್ನೂ ಸೂಚಿಸುತ್ತವೆ.

ಡಾ. ಉಪಾಧ್ಯೆಯವರು ಮಾಡಿರುವ ಆಕರ ನಿರ್ದೇಶನ ಪಟ್ಟಿಗೆ ಮತ್ತೆ ಕೆಲವನ್ನು ಸೇರಿಸಬಹುದು. ವಿದ್ಯುಚ್ಚೋರ ಗುರುದತ್ತಭಟ್ಟಾರರ ಕಥೆಗಳಲ್ಲಿ ಉದ್ಧೃತವಾಗಿ ಕೊಟ್ಟಿರುವ ಹಲವು ಪ್ರಾಕೃತ ಗಾಹೆಗಳು ವಟ್ಟಕೇರಸ್ವಾಮಿಯ 'ಮೂಲಾಚಾರ'ಕ್ಕೆ ಸೇರಿದುವಾಗಿವೆ. ಈ ಕೆಳಗಿನ

> ಸಮ್ಮದ್ದರಿಸ್ಸಣ ಸುದ್ಧೋ ಕದವದ ಕಮ್ಮೋ ಸುಸೀಲ ಸಂಪಣ್ಣೋ ।
> ಅಣವರದಾಣ ಸೀಲೋ ಜಿಣಸಾಸಣ ವಚ್ಛಲೋ ವೀರೋ ॥

ಎಂಬ ಗಾಹೆ ಪದ್ಮನಂದಿಯ 'ಜಂಬೂದ್ವೀಪ ಪಣ್ಣತ್ತಿ' ಎಂಬ ಗ್ರಂಥದ ಅಂತ್ಯಭಾಗಕ್ಕೆ (೧೬೫) ಸೇರಿದ್ದಾಗಿದೆ; ಇದು ಕನ್ನಡ ವಡ್ಡಾರಾಧನೆಯ ಸುಕೌಶಳ ಸ್ವಾಮಿಯ ಕಥೆಯ ಆದಿಯಲ್ಲಿ ಅನುವಾದಿತವಾಗಿದೆ; ಆದರೆ ಎರಡನೆಯ ಪಂಕ್ತಿಯ ಪಾಠ ಇಲ್ಲಿ ತೀರ ಬೇರೆಯದಾಗಿದೆ. ಪದ್ಮನಂದಿಯ ಕಾಲವೇ ಅನಿರ್ದಿಷ್ಟವಾಗಿರುವುದರಿಂದ[29] ವಡ್ಡಾರಾಧನೆಯ ಕಾಲ ನಿರ್ದೇಶಕ್ಕೆ ಸಹಾಯವಾಗುವಂತಿಲ್ಲ. ಡಾ. ಉಪಾಧ್ಯೆಯವರು ಹೇಳಿರುವ ಆಂತರಿಕ ಆಧಾರಗಳಲ್ಲಿ ಒಂದನ್ನು ಪರಿಶೀಲಿಸಬಹುದು. ಉಳಿದ ಎರಡು ವಿಷಯವಿಚಾರಕ್ಕೆ ಸಹಾಯವಾಗಲಾರವು.

---

[29] ಕ್ರಿ. ಶ. ೫೦೦ ಎಂದು ಹೀರಾಲಾಲ್ (catalogue, cp. & Berar, xix); ವಿಕ್ರಮ ಶಕೆ ೧೨ನೆಯ ಶತಮಾನ ಎಂದು ಪಂಡಿತ ನಾಥೂರಾಮ ಪ್ರೇಮಿ (ಜೈನ ಸಾಹಿತ್ಯ ಔರ್ ಇತಿಹಾಸ, ೫೭೧); ಕ್ರಿ. ಶ. ಸು. ೭೦೦ ಎಂದು ಜ್ಯೋತಿ ಪ್ರಸಾದ ಜೈನ್ (*Jaina Soures of the History of Ancient India*, p. 113).

೧. ಪಕಾರ ಹಕಾರವಾಗುವ ವಿಷಯ: ಈ ಗ್ರಂಥದಲ್ಲಿ ಪದಾದಿಯ ಮತ್ತು ಮಧ್ಯಾಂತಗಳ ಪಕಾರಕ್ಕೆ ಸಾಧಾರಣವಾಗಿ 'ಹ' ಬರುವುದಿಲ್ಲ. ಪಕಾರ ಕ್ರಮೇಣ ಹಕಾರಕ್ಕೆ ಮಾರ್ಪಾಡಾದದ್ದು ಕ್ರಿ. ಶ. ೧೧ ನೆಯ ಶತಮಾನವಾದ ಮೇಲೆ ಎಂದು ಶಾಸನಗಳಿಂದ ತಿಳಿದುಬರುತ್ತದೆ. ಇದಕ್ಕೆ ಆಧಾರವಾಗಿ ಡಾ. ಉಪಾಧ್ಯೆಯವರು ನಿರ್ದೇಶಿಸಿರುವ ಗ್ರಂಥದಲ್ಲೇ '೧೦ ನೆಯ ಶತಮಾನದಲ್ಲಿ ಪಕಾರಯುಕ್ತರೂಪಗಳೆಡೆಯಲ್ಲಿ ಹಕಾರವು ತಲೆದೋರಲಾರಂಭಿಸುತ್ತದೆಂಬುದು ಕನ್ನಡ ನುಡಿಯ ಎಲ್ಲ ಪ್ರದೇಶಗಳಲ್ಲೂ ಕಾಣುತ್ತದೆ'[30] ಎಂಬ ವಾಕ್ಯವಿದೆ. ಇದು ಹೆಚ್ಚು ಗಮನಕ್ಕೆ ಅರ್ಹವಾದದ್ದು. ಕನ್ನಡ ಪ>ಹ ಆಗಿರುವುದಕ್ಕೆ ಇನ್ನೂ ಹಳೆಯ ಪ್ರಯೋಗಗಳಿವೆ.

೧. ಹಡಗಿಲೆ ನಾಮುಗ್ರಾಮಂ (*SII*, XX, 4–12 ; 683)
೨. ಜೋತಿಷ ಶಕುನ ನಿಮಿತ್ತಂಗಳ ಬಲ್ಲಹಗೆ (SII XI–i, 123 : A.D. 862)
೩. ಸಿಸುಳ ಹಾಟಿಯ್ವದಿಂಬರು (BKI. No. 14, ಪಂಕ್ತಿ ೧೧, AD 872)
ಮೊದಲೊಳುಸಿಸೂಳಹಾಟಿಂ
ವಿದಿತ ಶ್ರೀ ಚಳುಕಿ ರಾಜ್ಯದೊಳ್ (ಅದೇ. ಪಂಕ್ತಿ ೧೫)
೪. ಸಂದ ಲೋಕಕ್ಕೆ ಹೋಹಾನ್ (ಶ್ರೀರಂಗಪಟ್ಟಣ 134, ಕ್ರಿ. ಶ. 910)
೫. ಪನ್ನೊಮ್ಮೃತ್ತ ಹರ್ಡುವೊಜ್ಜ್ಗೆ (*SII* IX, Part I No. 60. l. 13, 931 AD)
೬. ಊರಟಿವಿನೊಳೆ ಹೊಗೆನೆಂದು (ಅದೇ, No. 61, l. 13, AD 931–32)
೭. ಹನ್ನಿರ್ವಱು ಗದ್ಯಾಣಂ (*IA*, XII. p. 25 f. l. 15. AD. 971)

ಇವುಗಳನ್ನು ನೋಡಿದರೆ ಪ>ಹ ಮಾರ್ಪಾಡು ೯–೧೦ ನೆಯ ಶತಮಾನಗಳಲ್ಲಿಯೇ ಅಲ್ಲಲ್ಲಿ ಇದ್ದಿತೆಂದು ಹೇಳಬೇಕಾಗಿದೆ. ಇದು ಜನರ ಬಾಯಿಮಾತಿನಲ್ಲಿ ತಲೆದೋರಿ ಅಲ್ಲಿಂದ ಈ ಶಾಸನಗಳೊಳಕ್ಕೆ ಪ್ರವೇಶಿಸಿರಬಹುದು. ಪ್ರಕೃತ ಪ>ಹ ಮಾರ್ಪಾಡಿಗೆ ಒಂದು ನಿದರ್ಶನವಾದರೂ ವಡ್ಡಾರಾಧನೆಯಲ್ಲಿ ದೊರೆಯುತ್ತಿಲ್ಲ. ಹತ್ತನೆಯ ಶತಮಾನದ ಯಾವ ಕನ್ನಡ ಗ್ರಂಥದಲ್ಲೂ ಇರುವಂತೆ ತಿಳಿದಿಲ್ಲ. ಹಳೆಯ ನುಡಿಗಟ್ಟಿನಲ್ಲಿ ಪರಿಣತನಾಗಿದ್ದ ಒಬ್ಬ ಈಚಿನ ಕವಿ ಪಟ್ಟು ಹಿಡಿದು ಪಕಾರ ಪ್ರಯೋಗವನ್ನೇ ಮಾಡಿ ಬರೆದಿದ್ದಾನೆ ಎಂಬ ಸಂಭವನತೆಯನ್ನು ಬಿಟ್ಟರೆ 'ವಡ್ಡಾರಾಧನೆ' ೧೦ ನೆಯ ಶತಮಾನಕ್ಕಿಂತ ಈಚಿನದಾದ ರಚನೆಯಲ್ಲವೆಂದು ನಿರ್ಣಯಿಸಬೇಕಾಗಿದೆ. ಕ್ರಿ. ಶ. ೧೦೬೮ ರಲ್ಲಿ ಇದ್ದ ಶಾಂತಿನಾಥನ 'ಸುಕುಮಾರಚರಿತಂ' ಎಂಬ ಕಾವ್ಯದಲ್ಲಿ ವಡ್ಡಾರಾಧನೆಯ ಪ್ರಭಾವ ಪದಪ್ರಯೋಗಗಳಲ್ಲಿಯೂ, ಸಮಾನ ಪದ್ಯವೇಷ್ಟನದಲ್ಲಿಯೂ, ವರ್ಣನೆಗಳಲ್ಲಿಯೂ ಕಂಡುಬರುವುದು ಇದಕ್ಕೆ ಪರಿಪೋಷಕವಾಗಿದೆ.[31]

---

30 In the 10th century forms with h. in place of p, begin to appear in all parts of the Kanarese area (*Grammar of the Oldest Kanarese Inscriptions*, p. 2)

31 ಹೆಚ್ಚಿನ ವಿವರಗಳಿಗೆ 'ಸುಕುಮಾರ ಚರಿತಂ' ಎಂಬ ಗ್ರಂಥದ ಮುನ್ನುಡಿ (xxxvii—xiii) ನೋಡಿ ಅಥವಾ ಇದೇ ಗ್ರಂಥದ (೧೬೪–೧೬೭) ಪುಟಗಳನ್ನು ನೋಡಿ.

"ಈ ಗ್ರಂಥದ ಗದ್ಯಶೈಲಿ 'ಚಾವುಂಡರಾಯ ಪುರಾಣ'ದ ಶೈಲಿಗಿಂತ ಈಚಿನದೆಂದೂ, ನೋಂಪಿ ಕಥೆಗಳ ಗದ್ಯಶೈಲಿಗಿಂತ ಹಳೆಯದೆಂದೂ ನನಗೆ ತೋರುತ್ತದೆ; ಹೀಗೆ ಹೇಳುವಾಗ ಈ ಕಥೆಗಳಲ್ಲಿ ಸಂಸ್ಕೃತಪದಪ್ರಯೋಗ ಅಲ್ಪತರವಾಗಿರುವುದನ್ನೂ, ಇವುಗಳ ದೇಶೀಯವಾದ ನುಡಿಗಟ್ಟನ್ನೂ ಗಮನಿಸಿದೆ. ಆದ್ದರಿಂದ ಈ ಗ್ರಂಥದ ಕಾಲವನ್ನು ನಾನು 'ಚಾವುಂಡರಾಯಪುರಾಣ'ದ ಕಾಲಕ್ಕಿಂತ (ಕ್ರಿ. ಶ. ೯೭೮) ಈಚೆಗೆ ಹಾಕುತ್ತೇನೆ" ಎಂದು ಡಾ. ಉಪಾಧ್ಯೆಯವರು ಹೇಳುತ್ತಾರೆ. ಈ ನೋಂಪಿ ಕಥೆಗಳನ್ನು ಯಾರು ಯಾವ ಕಾಲದಲ್ಲಿ ರಚಿಸಿದರೆಂಬುದು ತಿಳಿದಿಲ್ಲ. ಇವುಗಳಲ್ಲಿ ಪ>ಹ ಮಾರ್ಪಾಟು ಹೇರಳವಾಗಿ ಕಾಣುತ್ತದೆ—ಹೞಿದಲೆ, ಹೊಟ್ಟೆ, ಹೊಱಹಲ್ಲು ಇತ್ಯಾದಿ ಉದಾಹರಣೆಗಳು ಸಿಕ್ಕುತ್ತವೆ.[32] ಈ ವ್ಯತ್ಯಾಸವಿಲ್ಲದ ೧೦ ನೆಯ ಶತಮಾನದ ಕನ್ನಡ ಗ್ರಂಥಗಳಿಗಿಂತಲೂ, ವಡ್ಡಾರಾಧನೆಗಿಂತಲೂ ಇವು ಈಚಿನವೆಂದು ಹೇಳಬಹುದು. ಸಂಸ್ಕೃತ ಶಬ್ದಗಳ ಪ್ರಯೋಗ ಕಡಮೆಯಾಗಿರುವುದು, ದೇಶೀಯ ನುಡಿಗಟ್ಟಿನ ಪ್ರಾಚುರ್ಯ—ಇವು ನೋಂಪಿಯ ಕಥೆಗಳಲ್ಲಿ ಇರಬಹುದಾದರೂ ೧೦ ನೆಯ ಶತಮಾನದ ಗ್ರಂಥಗಳಲ್ಲಿ ಇವು ಇಲ್ಲವೆಂದು ಹೇಳಲಾಗದು. ಪಂಪಭಾರತದಲ್ಲಿ ಒಂದಾದರೂ ಸಂಸ್ಕೃತ ಶಬ್ದವಿಲ್ಲದ ಅನೇಕ ಪದ್ಯಗಳಿರುವುದೂ, ದೇಶೀ ನುಡಿಗಟ್ಟಿನ ಗದ್ಯ ಖಂಡಗಳು ಬಹುವಾಗಿ ದೊರೆಯುತ್ತಿರುವುದೂ ಸುವಿದಿತವಾಗಿರುವ ವಿಷಯ. ಆದ್ದರಿಂದ ಶೈಲಿಯ ಈ ಲಕ್ಷಣಗಳು ನೋಂಪಿಯ ಕಥೆಗಳಿಗೇ ಮೀಸಲಲ್ಲ. ಅವು ಹೇರಳವಾಗಿ ದೊರೆಯುವ ವಡ್ಡಾರಾಧನೆ ೧೦ ನೆಯ ಶತಮಾನದ ರಚನೆಯಲ್ಲವೆಂದು ಇವುಗಳಿಂದ ಸ್ಥಾಪಿಸುವುದು ಸಾಧುವಾಗಲಾರದು. 'ವಡ್ಡಾರಾಧನೆ' ಚಾವುಂಡರಾಯಪುರಾಣದ ಕಾಲಕ್ಕಿಂತ (ಕ್ರಿ. ಶ. ೯೭೮) ಈಚಿನದೆಂಬ ಅಭಿಪ್ರಾಯಕ್ಕೆ ಇನ್ನೂ ಬಲವಾದ ಆಧಾರಗಳು ಬೇಕಾಗಿವೆ. ಈ ಲಕ್ಷಣಗಳೇ ಅದು ಚಾವುಂಡರಾಯ ಪುರಾಣಕ್ಕಿಂತ ಹಳೆಯದೆಂದು ಹೇಳಲು ನೆರವಾಗಲೂಬಹುದು.

ಹಳಗನ್ನಡಕ್ಕಿಂತಲೂ ಹಳೆಯದಾದ ಎಂದರೆ ಪೂರ್ವದ ಹಳಗನ್ನಡದ ಪ್ರಯೋಗಗಳು ಕೆಲವು ವಡ್ಡಾರಾಧನೆಯಲ್ಲಿವೆಯೆಂಬ ವಿಷಯದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಒಕಾರಯುಕ್ತ ಆಖ್ಯಾತ ವಿಭಕ್ತಿ ಪ್ರತ್ಯಯಗಳ ವಿಚಾರವಾಗಿ ಹಿಂದೆ ಹೇಳಿದೆ. ಬೇರೆ ಕೆಲವು ಪೂರ್ವದ ಹಳಗನ್ನಡದ ಅವಶೇಷಗಳನ್ನು ಇಲ್ಲಿ ಕಾಣಿಸಬಹುದು :

**೧** ೧. —ಆನ್ ಎಂಬ ದ್ವಿತೀಯಾ ವಿಭಕ್ತಿಗೆ: ವಾಯುಭೂತಿಯೆಂಬೊನಾನಾ ಮೋದಿಸಿದೆಂ (ಪು ೨೪-೪)

೨. —ಆ ಎಂಬ ಷಷ್ಠೀ ದೀರ್ಘಕ್ಕೆ:

(i) ಅಧಮ[ರಾ] ಪುಲ್ಲಮಾನಸ[ರಾ] ದುರ್ಜನ[ರಾ] ಜಾರಜಾತ[ರಾ] ವಿಜಾತಿಗಳ್ಗೆ (೮-೧೪)

---

[32] ಜನ್ನನ ಯಶೋಧರ ಚರಿತೆ (ಸಂ. ಕೆ. ವೆಂ. ರಾಘವಾಚಾರ್), ಪುಟ ೧೩೩.

(ii) ದಾಷ್ಟಿಕನಾ ಪಕ್ಕದೆ ಕಾಪಿರ್ದನ್ (೧೫-೨)
(iii) ವರ್ಣೆಯೆಂಬ ತೊಱೆಯಾ ತಡಿಯೊಳ್ (೧೨೮-೧೩)
(vi) ತನ್ನ ಮಗಳಾ ಚೋೞಂಗಿಯೊಳ್ (೧೮೪-೧೮)

'—ಉಳ್' ಎಂಬ ಸಪ್ತಮೀವಿಭಕ್ತಿ ಪ್ರತ್ಯಯ 'ವಡ್ಡಾರಾಧನೆ'ಯಲ್ಲಿ ಈಗ ಒಂದಾದರೂ ಇಲ್ಲ; ಇದನ್ನು ಎಲ್ಲೆಡೆಗಳಲ್ಲೂ—ಒಳ್ ಎಂದು ಹಳಗನ್ನಡಕ್ಕೆ ಲಿಪಿಕಾರರೂ ಇತರರೂ ತಿದ್ದಿರಬಹುದು. ಸೋಜಿಗದ ಅಂಶವೇನೆಂದರೆ ದ್ವಿತೀಯಾ ಷಷ್ಠೀ ವಿಭಕ್ತಿ ದೀರ್ಘರೂಪಗಳು ಕ್ರಿ. ಶ. ೧೪೦೩ ರಲ್ಲಿ ಲಿಖಿತವಾದ ಹಸ್ತಪ್ರತಿಯಲ್ಲಿ ಇನ್ನೂ ಸಿಕ್ಕುತ್ತಿರುವುದು. ಇದು ಕವಿಯ ಸ್ವಹಸ್ತಪ್ರತಿಯಲ್ಲಿ ಇಂಥ ರೂಪಗಳು ಇನ್ನೂ ಹಲವು ಇದ್ದಿರಬೇಕೆಂಬ ಊಹೆಗೆ ಅವಕಾಶ ಕೊಡುತ್ತದೆ. ಇವು ಚಾವುಂಡರಾಯ ಪುರಾಣದಲ್ಲಾಗಲಿ, ಅದಕ್ಕೆ ಹಿಂದಿನ ಗ್ರಂಥಗಳಲ್ಲಾಗಲಿ ಇಲ್ಲ.

೨. ಉಳ್ಳ ಎಂಬರ್ಥದ 'ಒಡೆಯ' ಎಂಬ ತದ್ಧಿತ ಪ್ರತ್ಯಯವನ್ನು ನಾಗವರ್ಮನೇ ಹೇಳಿರುವನು[32] ಇದರ ಪ್ರಯೋಗ 'ವಡ್ಡಾರಾಧನೆ'ಯಲ್ಲಿರುವಷ್ಟು ಬೇರಾವಗ್ರಂಥದಲ್ಲೂ ಇಲ್ಲ. ಒಡೆಯನ್, ಒಡೆಯಳ್, ಒಡೆಯರ್, ಒಡೆಯದು, ಒಡೆತು, ಒಡೆಯುವು— ಈ ಎಲ್ಲ ರೂಪಗಳೂ ಈ ಗ್ರಂಥದಲ್ಲಿವೆ. ಪಂಪನ (ಕ್ರಿ. ಶ. ೯೪೧) ಗ್ರಂಥಗಳಲ್ಲಿ ಈ ಪ್ರತ್ಯಯದ ಪ್ರಯೋಗ ಕೆಲವು ಮಾತ್ರ ಇವೆ: ಬುದ್ಧಿಯೊಡೆಯರ್—ಇತ್ಯಾದಿ.[33] ಅವನಿಗಿಂತ ಹಿಂದಿನ ಕಾಲದ ಗ್ರಂಥಗಳಲ್ಲಾಗಲಿ, ಶಾಸನಗಳಲ್ಲಾಗಲಿ ಈ ಪ್ರತ್ಯಯ ವಿದ್ದಂತೆ ಕಾಣುವುದಿಲ್ಲ. ಇವೆಲ್ಲ ಖಚಿತವಾಗಿರುವ ಅಂಶಗಳು. ಆದರೆ ಇವುಗಳಿಂದ ಕಾಲನಿರ್ಣಯಕ್ಕೆ ಹೇಗೆ ಸಹಾಯ? ಈ ಪ್ರತ್ಯಯದ ಪ್ರಯೋಗ ಬಾಹುಳ್ಯ ಪ್ರಾಚೀನತೆಗೆ ಸಾಕ್ಷಿ ಎಂದಾದರೆ 'ವಡ್ಡಾರಾಧನೆ' ಪಂಪಪೂರ್ವ ಗ್ರಂಥವೆಂದು ಹೇಳಬೇಕಾಗುತ್ತದೆ; ಇಲ್ಲವೆ ಪಂಪಾದಿಗಳ ಕ್ವಚಿತ್ ಪ್ರಯೋಗವನ್ನು ಕಂಡಿದ್ದ ಈಚಿನ ಕವಿಯೊಬ್ಬ ಈ ಪ್ರಯೋಗದ ಮೇಲೆ ಪ್ರೀತಿಯುಳ್ಳವನಾಗಿ ಅದನ್ನೇ ಅಧಿಕವಾಗಿ ಬಳಸಿದನು ಎಂದು ಹೇಳಬೇಕಾಗುತ್ತದೆ. ಪಂಪಪೂರ್ವಯುಗದ ಲಭ್ಯಸಾಹಿತ್ಯ ಶಾಸನಗಳಲ್ಲಿ ಇಲ್ಲದಿದ್ದ ಈ ಪ್ರಯೋಗ ವಡ್ಡಾರಾಧನೆಯಲ್ಲಿ ಹೇಗೆ ಬಂತು ? ಜನರ ಮಾತಿನಲ್ಲಿ ಬಳಕೆಯಲ್ಲಿದ್ದಿರಬಹುದಾದ ಈ ಪ್ರತ್ಯಯವನ್ನು ಶಿವಕೋಟಿ ಎತ್ತಿಕೊಂಡು ಅದಕ್ಕೆ ಪ್ರಥಮತಃ ತನ್ನ ಗ್ರಂಥದಲ್ಲಿ ಸ್ಥಾನವನ್ನು ಕೊಟ್ಟಿರಬಹುದು. ಹೀಗೆ ಅನೇಕ ಊಹೆ ಪ್ರತ್ಯೂಹೆಗಳಿಗೆ ಆಸ್ಪದವಾಗುತ್ತದೆ, ಇಂಥ ಪ್ರಯೋಗಗಳನ್ನು ಹಿಡಿದು ಹೊರಟರೆ. ಹೀಗೆಯೇ ದೀನಾರ, ದ್ರಮ್ಮ ಶಬ್ದಗಳ ಪ್ರಯೋಗದಿಂದ ಆಗುವ ಸಹಾಯವೂ ಇದೆ.

೩. ದೀನಾರವೆಂಬುದು ರೋಮಿಾಯನಾಣ್ಯ; ಇದು ಚಿನ್ನದ್ದಾಗಿರಬಹುದು, ಬೆಳ್ಳಿಯದಾಗಿರಬಹುದು. ಇದು ಬಹು ಹಿಂದೆಯೇ ತನ್ನ ಹೆಸರಿನೊಡನೆ ಕರ್ಣಾಟಕಕ್ಕೆ

[32] ಕಾವ್ಯಾವಲೋಕನ, ಸೂ. ೭೪.
[33] ಪಂಪಭಾರತ, ೩–೩೪ ವ.

ಬಂದಿತ್ತು; ಬೆಂಗಳೂರಿನ ಬಳಿ ಈ ನಾಣ್ಯಗಳು ಸಿಕ್ಕಿವೆ. ಇವಕ್ಕೆ Denarius ಎಂದು ಲ್ಯಾಟಿನ್ ಭಾಷೆಯ ಹೆಸರು. ಇಕ್ಷ್ವಾಕು ವಂಶದ ವೀರಪುರುಷದತ್ತನ ನಾಗಾರ್ಜುನಿ ಕೊಂಡದ ಶಾಸನದಲ್ಲಿ 'ದೀನಾರಿಮಾಸಕ' ಎಂಬ ಪ್ರಯೋಗವಿದೆ;[34] ಶಾಸನದ ಕಾಲ ಕ್ರಿ. ಶ. ೩ನೆಯ ಶತಮಾನ. ಈ ನಾಣ್ಯದ ಹೆಸರು ಈ ಕಾಲದಿಂದ ಹಿಡಿದು ಇತರ ಶಾಸನಗಳಲ್ಲೂ ಪ್ರಯೋಗದಲ್ಲಿತ್ತು. ಕನ್ನಡ 'ವಡ್ಡಾರಾಧನೆ' ಯಲ್ಲಿ ಅಲ್ಲದೆ ಈ ಶಬ್ದ ಒಂದೆರಡೆಡೆ ಇತರ ಕನ್ನಡ ಗ್ರಂಥಗಳಲ್ಲಿ ಪ್ರಯುಕ್ತವಾಗಿದೆ:

೧. ಶಾಂತಿನಾಥನ 'ಸುಕುಮಾರಚರಿತಂ' (೧೦-೧೧೮) ಸು. ೧೦೬೮ : "ಕೋಟಿದೀನಾರಮನಾ ಮೃಗನಯನೆ ಕೊಟ್ಟು ಕೊಂಡಳ್"

೨. ಕರ್ಣಪಾರ್ಯನ 'ನೇಮಿನಾಥಪುರಾಣ' (೪-೫೫) ಕಾಲ ೧೧೪೦ : "ದೀನಾರಮಂ ದಿನಂಪ್ರತಿ ಸಾಸಿರಮಾಪರ್ವದಿನದೊಳ್ ಪತ್ತುಸಾಸಿರಂ ಎಂಬೀಗಣನೆಯಿಂ"

ದ್ರಮ್ಮ>ದಮ್ಮ ಎಂಬ ನಾಣ್ಯದ ಹೆಸರಿಗೆ ಮೂಲ ಗ್ರೀಕ್ ಭಾಷೆಯ Drachma ಎಂಬ ಶಬ್ದ. ಕನ್ನಡದಲ್ಲಿ ಇದಕ್ಕೆ ಪ್ರಯೋಗಗಳು :

೧. ಕ್ರಿ. ಶ. ೮೭೨ ರಲ್ಲಿ ಲಿಖಿತವಾದ ೧ನೆಯ ಅಮೋಘವರ್ಷ ನೃಪತುಂಗನ ಖಾಜಿ ಪೇಟೆಯ ಶಾಸನದಲ್ಲಿ 'ಎರಡು ದ್ರಮ್ಮ', 'ಇಪ್ಪತ್ತನಾಲ್ಕು ದ್ರಮ್ಮ', 'ಮದುವೆಯೊಳೋ ರೊಂದು ದ್ರಮ್ಮ'—ಹೀಗೆ ಮೂರು ಸಲ ಪ್ರಯೋಗವಿದೆ.[35]

೨. ರವಿನಾಗಭಟ್ಟನೆಂಬ ಕವಿ ಕ್ರಿ. ಶ. ೯೨೯ ರಲ್ಲಿ ಹೇಳಿದ ಶಾಸನ (ಕ. ಕ. ಚ. i-೨೮)

ವಿಪ್ರರ ವಿವಾಹಮೂರೊಳ
ಗಪ್ಪನಿತಱೊಳೆಲ್ಲಮೊಸಗೆ ದ್ರಮ್ಮಂ ಮೂಱಂ ।
ತಪ್ಪದೆ ಮಾಣಿಯೊಳೆರಡಂ
ಕೆಪ್ಪಿದರೀ ಶೂದ್ರಗಣದ ಮದುವೆಯೊಳೊಂದಂ ॥

೩. ಬರಿಸಕ್ಕೆ ಆಱು ಕರಿಯದ್ರಮ್ಮಮಂ ತೀಱುವರ್ (ಕಾಲ ಕ್ರಿ. ಶ. ೯೫೧)[36]

೪. ಕ್ರಿ. ಶ. ೧೦೬೨ ರಲ್ಲಿ ಲಿಖಿತವಾದ ಬಂಕಾಪುರದ ಶಾಸನ,[37] "ಪಾಯದ್ರಮ್ಮಂ"

೪. —ಉಂ ಎಂಬ ಸಮುಚ್ಚಯವನ್ನು ಒಳಕೊಂಡಿರುವ ಕೆಲವು ಪ್ರಯೋಗಗಳು, ವಡ್ಡಾರಾಧನೆಯಲ್ಲಿರುವುವು, ಗಮನಾರ್ಹವಾಗಿವೆ. ಈ ಸಮುಚ್ಚಯ ಪ್ರಯೋಗವನ್ನು ಕುರಿತಿರುವ ಮೂರು ಪದ್ಯಗಳು, ಕವಿರಾಜಮಾರ್ಗದಲ್ಲಿರುವುವು, (i-೧೩೧, ೧೩೨, ೧೩೩) ಪರಿಶೀಲನೆಗೆ ತಕ್ಕುವು. ಸಮುಚ್ಚಯ ಸಂಬಂಧದಲ್ಲಿ ಹಲವು ಶಬ್ದಗಳಿದ್ದಾಗ ಕೆಲವಕ್ಕೆ ಉಂ ಪ್ರತ್ಯಯವನ್ನು ಸೇರಿಸಿ ಕೆಲವಕ್ಕೆ ಬಿಟ್ಟರೆ ಅದು ದೋಷ. ಉದಾಹರಣೆ—

ದೇವರುಂ ಗೊರವರುಂ ಗುಣವೃದ್ಧರನಾರತಂ
ಕಾವರಕ್ಕಸನಂ ಪ್ರಜೆಯಂ ಪರಿವಾರಮಂ ॥

---

34 *Select Inscriptions* I (D. C. Sarkar), p. 222.

35 *Annual Report of Archaeology*, Hyderabad, 1936.

36 *Historical Grammar of Old Kannada* (Dr. Gai), p. 155.

37 *Bombay Karnatak Inscriptions*, 1934, No 3.

ಈ ದೋಷವನ್ನು ಕಳೆಯುವ ಕ್ರಮ ಹೀಗೆ :

ನೃಪನುಮಂ ಪ್ರಜೆಯುಮಂ ಪರಿವಾರಮುಮಂ
ಕೃಪೆಯಿನಾಗೊರವರುಂ ಸುರರುಂ ಗುಣವೃದ್ಧರುಂ
ವಿಪುಳರಾಗಪರರಾಗಿಸುಗೆ....

ಇಲ್ಲಿ ಗುಣವೃದ್ಧರ್ ಎಂಬುದಕ್ಕೆ ಪ್ರತಿಯಾಗಿ 'ಗುಣವೃದ್ಧರುಂ' ಎಂದಿದ್ದರೆ ಸರಿ. ನೃಪತುಂಗನ ಈ ವಿಧಿಯನ್ನು ನೋಡಿದರೆ ಅವನ ಕಾಲದಲ್ಲಿ ವಿಕಲ್ಪ ಸಮುಚ್ಚಯ ಪ್ರಯೋಗಶೀಲರಾದ ಲೇಖಕರು ಹಲವರಿದ್ದಿರಬೇಕೆಂದು ತೋರುತ್ತದೆ. 'ವಡ್ಡಾರಾಧನೆ'ಯಲ್ಲಿ ಈ ಕೆಳಗಿನ ಕೆಲವು ಪ್ರಯೋಗಗಳು ದೊರೆಯುತ್ತವೆ:

೧. ಸೂರ್ಯಮಿತ್ರಾಚಾರ್ಯರುಮಗ್ನಿಭೂತಿರುಷಿಯರುಂ ಕಂಡು (೧೨-೨೩)
೨. ಲಡ್ಡುಗೆಗಳ್ ಮಂಡಗೆಗಳುಂ ಮೊದಲಾಗೊಡೆಯ (೧೮-೧೫)
೩. ಇಂದ್ರಜಾಲಿಗರ ಪಾಪೆಗಳುಂ ಸೀರೆಗಳುಂ ಝುಣಂಬಮುಂ ಕೊಂಡು (೧೯-೧೨)
೪. ಮೂವತ್ತಿರ್ವರ್ ದಿವ್ಯಸ್ತ್ರೀಯರ್ಕಳ್ ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಮುಂ ಪಂಚರತ್ನಂಗಳೆಂಬಿನಿತಱೊಳ್ (೨೫-೧೨)
೫. ಸಾಮಂತ ಮಹಾಸಾಮಂತರ್ ಮೂವತ್ತಿರ್ಛಾಸಿರ್ವರ್ ಮಕುಟಬದ್ಧರ್ಕಳುಂ ವಿದ್ಯಾಧರರ್ಕಳುಂ (೬೭-೧೮)
೬. ಎನ್ನ ದೇಹಮುಂ ಪೂಜಿಸಲುಂ ನಿನಗೆನ್ನ ವಿಭವಮುಂ ತೋಱಲ್ ಬಂದನೆಂದು (೮೪-೨೦)
೭. ದಯೆಯುಮುಪಶಮೆ ಪರಿಗ್ರಹಪರಿತ್ಯಾಗಮುಂ (೮೨-೩)
೮. ಸಂತಾಪಮುಂ ವಧೆಯುಮುಂ (೧೨೬-೧೩)
೯. ದಾದಿಯುಂ ಸಖೀಜನಂಗಳ್ವೆರಸು (೧೪೮-೧೨)
೧೦. ಪಲ್ಲಣಮುಂ ಚಮರಸಿಕೆಯುಮುಂ ಕೀಱುಮುಂ (೧೬೨-೨೦).

ಇವುಗಳೆಲ್ಲ ವಿಕಲ್ಪ ಸಮುಚ್ಚಯಕ್ಕೆ ಉದಾಹರಣೆಗಳಾಗಿವೆ. ೧೦ನೆಯ ಶತಮಾನದ ಗ್ರಂಥಗಳಲ್ಲಿ ಇಂಥ ಪ್ರಯೋಗಗಳು ಕೆಲವು ದೊರೆಯುತ್ತವೆ. 'ಪಂಪಭಾರತ'ದಲ್ಲಿ ಈ ಕೆಳಗಿನ ಪ್ರಯೋಗಗಳಿವೆ:

೧. ಮಲೆಪರ್ ಮಂಡಳಿಕರ್ ಕಱುಂಬರದಟರ್ ವೀರರ್ಕಳುಂ ತಮ್ಮ ಬಾಟ್ದಲೆಯಂ (೯-೧೦)
೨. ಅದಟನಳುರ್ಕೆಯಂ ಬಲದಳುರ್ಕೆಯುಮುಂ ಗೆಡೆಗೊಂಡು (೧೧-೫೦)
೩. ಅಡಿ ತೊಡೆ ಪೊರ್ಕುಟುಂ ತೆಗಲೆ ಕೈಕಣಕಾಲ್ ಕೊರಲೆಂಬಿವುಂ (೧೧-೧೩೬)
೪. ಕಪ್ಪುರದ ಕಂಪುಮುಂ ಸೂಡಿದ ಬಾಸಿಗದ ಪೊಸಗಂಪನಿಂಬಾಗಿರೆ (೧೪-೨೫)
೫. ಮಣಿಕುಂಡಲಮುಂ ಕವಚಂ ಮಣಿಯದ ಚಾರಿತ್ರಮುಗ್ರತೇಜಮುಮಿಾ (೧೨-೯೮)

ರನ್ನನ ಗದಾಯುದ್ಧದಲ್ಲಿ

೧. ಅರೆ ಮುಗಿದಿರ್ದ ಕಣ್ಗಳುಮುಲರ್ದಮೊಗಂ ಕಡಿವೋದಕೆಯ್ಯುಮಾಸುರತರವಾಗೆ ಕರ್ಚಿದವುಡುಂ ಬೆರಸು (ಗದಾ. ೪-೫೩)

ಇಲ್ಲಿ ಮೊಗಂ ಎಂಬುದು ಸಮುಚ್ಚಯವನ್ನು ಹೊಂದಿ 'ಮೊಗಮುಂ' ಎಂದಾಗಿರಬೇಕು; 'ಅರೆ ಮುಗಿದಿರ್ದ ಕಣ್ಮ [ಲರ]ಲರ್ದ ಮೊಗಂ' (ಗದಾ. ಸಂಗ್ರಹ. ೫-೧೪) ಎಂಬ ಪಾಠವನ್ನು ಅಂಗೀಕರಿಸಿದರೆ ಆಗ 'ಕಣ್ಮಲರ್' ಎಂಬುದಕ್ಕೂ ಸಮುಚ್ಚಯ ಸಮಾವೇಶವಾಗಬೇಕು.

೨. ಮನೆ ಪೆಣ್ಣುಂ ಮಕ್ಕಳೆಂಬೀ ನುಡಿ ಪುಸಿ . (ಗದಾ. ೧೦-೧೧)

ಎಂಬ ಪ್ರಯೋಗಗಳುಂಟು. ಈ ವಿಷಯವಾಗಿ ಕೇಶಿರಾಜ "ಸಾರಮದಧ್ಯಾರೋಪಂ.... ಪೇಳ್ವುದಾ ಸಮುಚ್ಚಯದುಮುಗಂ" (ಸೂ. ಶಮದ ೧೫೬) ಎಂದು ಹೇಳಿ "ಆಯುಂ ಸಿರಿ ತಾಯುಂ ತಂದೆ ಕಣ್ಣುಂ ಗತಿಯೆನಿಸಿದಪಂ ಸಿಂಹಸೇನಕ್ಷಿತೀಶಂ" ಎಂಬ ಉದಾಹರಣೆಯನ್ನು, ಕಾಣಿಸಿ "ಎಂಬಲ್ಲಿ ಕಡೆಯ ಸಮುಚ್ಚಯದುಮ್ ಅಧ್ಯಾಹಾರ್ಯಂ" ಎಂದು ವಿಧಿಸಿದ್ದಾನೆ. 'ಕವಿರಾಜಮಾರ್ಗ'ಕಾರನು ದೋಷವೆಂದು ಭಾವಿಸಿರುವ ("ದೋಷಮಿದಗ್ಗಳಂ") ಈ ಸಮುಚ್ಚಯ ಪ್ರಯೋಗವನ್ನು ಕೇಶಿರಾಜನು ದೋಷವೆಂದು ಭಾವಿಸದೆ ಆ ಸಮುಚ್ಚಯ ಪ್ರತ್ಯಯ ಅದಿಲ್ಲದಿರುವ ಎಡೆಯಲ್ಲಿ ಅಧ್ಯಾಹಾರ್ಯವೆಂದು ಎಣಿಸಿದ್ದಾನೆ.

ಇದೇ ಸಮುಚ್ಚಯದ ಪ್ರತ್ಯಯವನ್ನು ಬೇರೊಂದು ರೀತಿಯಲ್ಲಿ ಪ್ರಯೋಗಿಸಿರುವುದು 'ವಡ್ಡಾರಾಧನೆ'ಯಲ್ಲಿ ಕಾಣುತ್ತದೆ. ಅದು ಆ ಗ್ರಂಥದ ವೈಶಿಷ್ಟ್ಯವೆಂದು ಹೇಳಲೂ ಬಹುದು. ಆಖ್ಯಾತ ವಿಭಕ್ತಿ ಪ್ರತ್ಯಯಗಳು ನಾಮ, ಸಂಖ್ಯಾ, ಗುಣವಚನ, ಸರ್ವನಾಮ— ಈ ಶಬ್ದಗಳಿಗೆ ಸೇರಿ ನಾಮಕ್ರಿಯೆಗಳಾಗುವ ವಿಷಯ ಶಬ್ದಮಣಿದರ್ಪಣದಲ್ಲಿ (೨೩೦) ಹೇಳಿದೆಯಷ್ಟೆ. (i) ಇಂಥ ಕ್ರಿಯೆಗಳು ಸಮುಚ್ಚಯವಾಗಿ ಬಂದಾಗ ಅವುಗಳ ಅಂತ್ಯಕ್ಕೆ—ಉಂ ಪ್ರತ್ಯಯ ಸೇರುತ್ತದೆ. ಈ ಕೆಳಗಿನ ಉದಾಹರಣೆಗಳನ್ನು 'ವಡ್ಡಾರಾಧನೆ'ಯಲ್ಲಿ ನೋಡಬಹುದು :

(i) ೧. ನಾಮುಂ ಪಾರ್ವರೆಮುಂ ಲೋಕಕ್ಕೆಲ್ಲಮುಗ್ಗಳಂ ಲೋಕಪೂಜಿತ[ರೆ]ಮುಮೆಮ್ಮಿಂ ಪೆಱರಿಲ್ಲ (೧೩-೧೯, ೨೦)

೨. ವೈದ್ಯಶಾಸ್ತ್ರದೊಳಾದಮಾನುಂ ಕುಶಲರೆಮುಂ ಗ್ರಂಥಾರ್ಥ ಸ್ವರೂಪದಿಂದೆಲ್ಲಾ ಕುಶಲರೆಮುಂ ಕರ್ಮಜ್ಞರೆಮುಂ (೬೯-೨೧, ೨೨)

೩. ಆಮೆಲ್ಲಂ ಕೂಸುಗಳೆಮುಂ ನವಯೌವನರೆಮುಂ (೧೦೦-೧)

೪. ಮತ್ತಮಿರ್ವೆಮುಂ ಸಮಾನವಯಸರೆಂ (೧೨೮-೧೯), ಇತ್ಯಾದಿ

ಮೇಲಿನ ನಾಲ್ಕು ಪ್ರಯೋಗಗಳಲ್ಲಿ ನಾಮಪದ, ಆಖ್ಯಾತಪ್ರತ್ಯಯ ಸಮುಚ್ಚಯ ಉಂ—ಈ ವಿನ್ಯಾಸವಿರುವುದು ವ್ಯಕ್ತವಾಗಿದೆ. ಮೂರನೆಯ ಪ್ರಯೋಗವನ್ನು ಹೊಸಗನ್ನಡಕ್ಕೆ 'ನಾವೆಲ್ಲ ಕೂಸುಗಳಾಗಿದ್ದೇವೆ ಮತ್ತು ನವಯೌವನರಾಗಿದ್ದೇವೆ ಮತ್ತು' ಎಂದು ತಿರುಗಿಸಬಹುದು. ಹೀಗೆಯೇ ಉಳಿದ ಪ್ರಯೋಗಗಳನ್ನೂ ಮಾಡಬಹುದು.

(ii) ಕ್ರಿಯಾಪದಗಳು ಸಮುಚ್ಚಾಯಕವಾಗಿ ಬಂದಾಗ ಅವುಗಳ ಅಂತ್ಯಕ್ಕೆ —ಉಂ ಸೇರುತ್ತದೆ :

೧. ನೋೞ್ಪೆನುಂ ಬರೆವೆನುಂ ಭಾವಿಸುತ್ತಿರ್ಪೆನಪ್ಪುದಱಿಂ (೫೯–೧೬)
೨. ಆಂ ಸೋಲ್ತೆನುಂ ಸತ್ತೆನುಂ (೧೨೫–೯)

(i) ಮತ್ತು (ii) ಸಮ್ಮಿಶ್ರವಾಗಿಯೂ ಬರಬಹುದು.

೧. ಕುಲಕ್ರಮಾಗತರೆಮುಂ ನಿಮ್ಮ ಪ್ರಸಾದದಿಂ ಬಾೞ್ವೆಮುಂ (೧೮೫–೨೧)
೨. ಪಂಚಮಹಾಪಾತಕರೆಮುಂ ಪೊಲ್ಲಕೆಯ್ದೆಮುಂ ಭಟ್ಟಾರರಂ ಕೊಂದೆಮುಮವರ್ ತಪದ ಮಾಹಾತ್ಮ್ಯದಿಂದಂ ಬರ್ದುಂಕಿದರ್ (೯೯–೧೪)

ಈ ತೆರನಾಗಿ ಸಮುಚ್ಚಯವನ್ನು ಬಳಸಿರುವುದಕ್ಕೆ ನಿದರ್ಶನಗಳು ೧೦ನೆಯ ಶತಮಾನದ ಕನ್ನಡ ಗ್ರಂಥಗಳಲ್ಲಿ ಹೆಚ್ಚಾಗಿ ದೊರೆಯುತ್ತಿಲ್ಲ. 'ಕಾವ್ಯಾವಲೋಕನ'ದಲ್ಲಿ ಉದ್ಧೃತವಾಗಿರುವ ಪಂಪಭಾರತದ ಪದ್ಯದಲ್ಲಿ (೧೨–೩೬) "ತಂದೆಯ ಶೋಕಮನಿರ್ವೆಮುಂ ಮುನಿವರಂ ತವೆ ಕೊಂದೊಡ ನೀಗುವಂ" ಎಂಬ ಪಾಠವಿದೆ. ಇದರಂತೆ ಇರ್ವೆಂ + ಉಂ ಎಂದು 'ನಾವು ಇಬ್ಬರಾಗಿದ್ದೇವೆ, ಮತ್ತು', ಎಂದರೆ ಒಟ್ಟಿನಲ್ಲಿ ನಾವಿಬ್ಬರೂ ಎಂದು ಅರ್ಥಮಾಡಬೇಕಾಗಿದೆ. 'ಇರ್ವರುಂ' ಎಂಬ ಪಾಠಾಂತರದಲ್ಲಿ ವಿಶೇಷವೇನೂ ಇಲ್ಲ. 'ಇರ್ವೆಮುಂ' ಎಂಬುದು ಕವಿಪಾಠವೆಂದು ಹೇಳಬೇಕಾಗಿದೆ. ಚಾವುಂಡರಾಯ ಪುರಾಣದಲ್ಲಿ ಇರ್ವೆಮುಂ ಎಂಬುದಕ್ಕೆ ಎರಡು ಪ್ರಯೋಗಗಳು ನನ್ನ ದೃಷ್ಟಿಗೆ ಬಿದ್ದಿವೆ :

೧. ಬಾಲಿಗಧಿರಾಜ ಪಟ್ಟಮುಂ ಎನಗೆ ಯುವರಾಜ ಪಟ್ಟಮುಮಂ
ಕೊಟ್ಟೊಡಂತಿರ್ವೆಮುಮಿರ್ಪಿನಮೆಮ್ಮಣ್ಣನೆನ್ನಂ
ನಾಡಿಂದಟ್ಟಿ ಕಳೆಯೆ

—(ಸೀತೆಯ ಕಥೆಯಲ್ಲಿ)

೨. ಧಾತಕೀಷಂಡದೊಳಾಮಿರ್ವೆಮುಂ ತಪಂಗೆಯ್ದು

—(ನಮಿಜಿನನ ಕಥೆಯಲ್ಲಿ)

ಈ ನಾಲ್ಕು ಆಂತರಿಕ ಆಧಾರಗಳನ್ನು ಸಮಷ್ಟಿದೃಷ್ಟಿಯಿಂದ ನೋಡಿದರೆ 'ವಡ್ಡಾರಾಧನೆ ಪಂಪಭಾರತಕ್ಕಿಂತ (ಕ್ರಿ. ಶ. ೯೪೧) ಹಿಂದಿನ ರಚನೆಯಾಗಿರಬೇಕೆಂಬ ಭಾವನೆಯುಂಟಾಗುತ್ತದೆ. ಇದು ರಚನೆಯಾದ ಕಾಲದ ಅವಧಿ ೮೯೮ ರಿಂದ ೯೪೧ ಎಂದಾಗುತ್ತದೆ; ಸುಮಾರು ಕ್ರಿ. ಶ. ೯೨೦ ಎಂಬ ಕಾಲವನ್ನು ಈ ಗ್ರಂಥಕ್ಕೆ ಕೊಡಬಹುದಾಗಿದೆ. "ಆದೌಜನ್ಮ ಜರಾರೋಗ" ಎಂದು ಆರಂಭವಾಗುವ ಪದ್ಯ ಗುಣಭದ್ರನದಲ್ಲವೆಂದೂ, ಅವನಿಗಿಂತ ಹಿಂದಿನ ಕಾಲದ್ದೆಂದೂ ಸ್ಥಾಪಿಸಬಹುದಾದರೆ 'ವಡ್ಡಾರಾಧನೆ' ಕವಿರಾಜಮಾರ್ಗಕ್ಕೆ ಸಮಕಾಲಿಕವಾದ (ಕ್ರಿ. ಶ. ಸು. ೮೫೦) ಕೃತಿಯೆಂದು ಹೇಳುವುದು ಸಂಗತವಾಗುತ್ತದೆ.

## ದೇಶ

'ವಡ್ಡಾರಾಧನೆ'ಯನ್ನು ಹೇಳಿದ ಕನ್ನಡದ ಶಿವಕೋಟಿ ಕನ್ನಡನಾಡಿನ ಯಾವ ಪ್ರದೇಶಕ್ಕೆ ಸೇರಿದ್ದಿರಬಹುದು? ಈ ಪ್ರಶ್ನೆಗೆ ಉತ್ತರವನ್ನು ಹೇಳುವುದು ಸಾಧ್ಯವಿಲ್ಲವಾದರೂ ಒಂದು ಊಹೆಗೆ ಅವಕಾಶವಿರುವಂತೆ ತೋರುತ್ತದೆ. ಈ ಗ್ರಂಥದಲ್ಲಿ ಬರುವ ಕಾರ್ತಿಕ ಋಷಿಯ ಕಥೆಯಲ್ಲಿ ಇದಕ್ಕೆ ಆಧಾರವಿರುವಂತಿದೆ:

೧. ಕೋಗಳಿಯಯನಾಳ್ವ ಕ್ರೌಂಚನೆಂಬರಸಂಗೆ ಕೊಟ್ಟರ್
೨. ತೆಂಕನಾಡ ಕಿಷ್ಕಿಂಧಮೆಂಬ ಪರ್ವತಮನೆಯ್ದಿಯದಱ ಮೇಗೆ ರಾತ್ರಿ ಪ್ರತಿಮಾಯೋಗಂಗೆಯ್ದೊರ್....ಅಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು.
೩. ಕೋಗಳಿಯಯನೆಯ್ದಿಯಲ್ಲಿಯ ಬಸದಿಯೊಳ್ ಪಂಥಾತಿಚಾರ ನಿಯಮಂ ಗೆಯ್ದು
೪. ದೇವತೆ ನವಿಲ ರೂಪಿನಿಂದೆತ್ತಿಕೊಂಡು ಬೆನ್ನೊಳಿಟ್ಟು ಕೋಗಳಿಯ ಮೂಡಣದೆಸೆಯ ಪರ್ವತದ ಕೊಳದ ತಡಿಯೊಳ್ ಇರಿಸಿ ಪೋದೊಡೆ ಮುಡಿಪಿ
೫. ಅಂದಿಂದಿತ್ತ ಬಾದುಬ್ಬೆಯ ಪರ್ವಮುಂ ಪಗರಣದಾಟಪಾಟಮುಮಾದುವು.
೬. ಸ್ವಾಮಿ ಕಾರ್ತಿಕ ಋಷಿಯರ್ ಮುಡಿಪಿದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯಂ ಮಾಡಿದೊಡೆ....

ಮೇಲಿನ ಉದ್ಧೃತ ವಾಕ್ಯಗಳಿಂದ ತೆಂಕನಾಡಿನ ಕಿಷ್ಕಿಂಧವೆಂಬ ಬೆಟ್ಟದ ಬಳಿ ಕೋಗಳಿ ಎಂಬ ಊರು ಇದ್ದಿತು; ಅಲ್ಲಿ ಬಸದಿಗಳು ಎಂದರೆ ಜಿನಮಂದಿರಗಳು ಇದ್ದುವು; ಅದಕ್ಕೆ ರಾಜ ಕ್ರೌಂಚ; ಆ ಊರಿನ ಪೂರ್ವದ ಪರ್ವತದಲ್ಲಿ ಕಾರ್ತಿಕೇಯ ಋಷಿ ಮುಡಿಪಿದನು ಎಂದರೆ ಸತ್ತನು; ಆ ಎಡೆಯಲ್ಲಿ ಅವನ ತಂಗಿ ವೀರಶ್ರೀ ಒಂದು ಬಸದಿಯನ್ನು ಕಟ್ಟಿಸಿದಳು; ಬಾದುಬ್ಬೆಯ ಹಬ್ಬ ಅಂದಿನಿಂದ ಆರಂಭವಾಯಿತು—ಎಂಬ ಅಂಶಗಳು ತಿಳಿದುಬರುತ್ತವೆ. ಇವುಗಳಲ್ಲಿ ಕ್ರೌಂಚರಾಜನೂ ಅವನ ಹೆಂಡತಿ ವೀರಶ್ರೀಯೂ ಕಥೆಯ ಪಾತ್ರಗಳಾಗಿರುವುದರಿಂದ ಅವರ ವಿಚಾರ ಮಾಡಬೇಕಾಗಿಲ್ಲ. ಉಳಿದ ಅಂಶಗಳಲ್ಲಿ ಕೋಗಳಿ ಎಂಬ ಊರು ಪ್ರಮುಖವಾಗಿದೆ. ಈ ಹೆಸರು ಹರಿಷೇಣನ ಬೃಹತ್ಕಥಾಕೋಶದಲ್ಲಿ ಬರುವುದಿಲ್ಲ: 'ವಡ್ಡಾರಾಧನೆ'ಯಲ್ಲಿರುವ ಈ ಕಥೆಯ ಆರಂಭದ ಗಾಹೆಯಲ್ಲಿ 'ರೋಹೇದಯಮ್ಮಿ' (ರೋಹೇದಕ) ಎಂದು ಊರಿನ ಹೆಸರಿದೆ. ಹರಿಷೇಣನ ಕೃತಿಯಲ್ಲಿ 'ರೋಹೇಡಕ' ಎಂದಿದೆ. ವಡ್ಡಾರಾಧನೆಯಲ್ಲಿ ಈ ಹೆಸರು ಕಥಾಭಾಗದಲ್ಲಿ ಎಲ್ಲಿಯೂ ಇಲ್ಲ; ಅಲ್ಲೆಲ್ಲ ಕೋಗಳಿ ಎಂದೇ ಇದೆ. ಇದಕ್ಕೆ ಏನೋ ವಿಶಿಷ್ಟವಾದ ಕಾರಣವಿರಬಹುದು.

ಈಗಿನ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಹೂವಿನ ಹಡಗಲಿ—ಎಂಬ ತಾಲ್ಲೂಕುಗಳನ್ನು ಒಳಕೊಂಡಿದ್ದ ಪ್ರದೇಶಕ್ಕೆ ಹಿಂದಿನ ಕಾಲಗಳಲ್ಲಿ ಕೋಗಳಿ ೫೦೦ ಎಂಬ ಹೆಸರಿದ್ದಿತು; ಇದಕ್ಕೆ ಎಂದರೆ ಕೋಗಳಿನಾಡಿಗೆ ಮುಖ್ಯ ನಗರ ಕೋಗಳಿ. ಈ ನಾಡಿನ ವರ್ಣನೆ ಹಲವು ಶಾಸನಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಒಂದು ಶಾಸನದಲ್ಲಿ:[38]

[38] *SII*, IX, part I, No. 141; A. D. 1079.

ನಾಡುಗಳೊಳಗೆಲ್ಲ ಗಾಡಿವೆತ್ತಸಮುದ
ನಾಡುಗಳರಸನತಿಚೆಲ್ವ ಕೋಗಳಿ।
ನಾಡು ನೋಡಲ್ಕೆ ಸೊಗಯಿಕ್ಕುಂ॥

ಆ ನಾಡೊಳೆಸೆವುದು ನಾನಾವಿದ್ವಜ್ಜನ
ಸ್ಥಾನಂ ನಿರ್ಗುಂದವೆನಿಪಗ್ರಹಾರವ।
ತ್ಯಾನಂದಕಾರಿ ಜಗಕೆಲ್ಲಂ॥

ಎಂಬೆರಡು ತ್ರಿಪದಿಗಳಿವೆ. ಇದರಿಂದ ಕೋಗಳಿನಾಡು ಇತರ ನಾಡುಗಳಿಗಿಂತ ಅಧಿಕ ರಮಣೀಯವಾಗಿದ್ದಿತ್ತೆಂದೂ, ಅದರಲ್ಲಿ ನಿರ್ಗುಂದವೇ ಮುಂತಾದ ಅಗ್ರಹಾರಗಳಿದ್ದುವೆಂದೂ ತಿಳಿದುಬರುತ್ತದೆ. ಈ ನಾಡು ಚಳುಕ್ಯ ರಾಷ್ಟ್ರಕೂಟರ ಕಾಲಗಳಲ್ಲಿ ತುಂಬ ಪ್ರಸಿದ್ಧವಾಗಿತ್ತು. ಇದನ್ನು ಕೋಗಳಿ ೫೦೦ ಎಂದೇ ಕರೆಯುವ ವಾಡಿಕೆ ಇದ್ದಿತು.[39] ಇದಕ್ಕೆ ಮುಖ್ಯ ನಗರವಾಗಿದ್ದ ಕೋಗಳಿ ಈಗ ಒಂದು ಹಳ್ಳಿಯಾಗಿದೆ. ಇಲ್ಲಿ ಅನೇಕ ಪ್ರಾಚೀನ ಅವಶೇಷಗಳಿವೆ; ಖಿಲವಾಗಿರುವ ಜೈನಬಸದಿಗಳೂ ಅಲ್ಲಲ್ಲಿ ಮುರಿದುಬಿದ್ದಿರುವ ದೇವತಾಮೂರ್ತಿಗಳೂ ಇಲ್ಲಿ ಇಂದಿಗೂ ಹೇರಳವಾಗಿವೆ; ಈ ಹಳ್ಳಿಯಲ್ಲಿ ಅನೇಕ ಶಿಲಾಶಾಸನಗಳೂ ದೊರೆತಿವೆ.[40] ಶಕ. ೯೭೭ ರಲ್ಲಿ ಲಿಖಿತವಾದ ಒಂದು ಶಾಸನದಲ್ಲಿ[41] ಇಂದ್ರಕೀರ್ತಿ ಮುನೀಂದ್ರನು ಜೈನಬಸದಿಯ ಮಾಣಿಗಳ ವಿದ್ಯಾಭ್ಯಾಸಕ್ಕಾಗಿ ಒಂದು ದತ್ತಿಯನ್ನು ಬಿಟ್ಟಂತೆ ಹೇಳಿದೆ; ಈ ಜೈನಬಸದಿಯನ್ನು ಮೊದಲು ಕಟ್ಟಿಸಿದವನು ಗಂಗರಾಜನಾದ ದುರ್ವಿನೀತನೆಂದು ಆ ಶಾಸನದ ಈ ಕೆಳಗಿನ ಪದ್ಯ ಹೇಳುತ್ತದೆ: (ಪಂಕ್ತಿ ೧೫-೧೭)

ಇದು ದುರ್ವಿನೀತನಿಂದಂ
ಮೊದಲೊಳ್ ಬಸದಿಯಿದ ನಾಡ ಮುತ್ತರಘಳೆಯಂ।
ವಿದಿತಯಶರಿನ್ದ್ರ ಕೀರ್ತಿಗ
ಳುದಿತೋದಿತಮಾಗೆ ಮಾಡಿದರ್ ಕೋಗಳಿಯೊಳ್॥

ಗಂಗರಾಜ ದುರ್ವಿನೀತನ ಕಾಲದಿಂದ ಹಿಡಿದು (ಕ್ರಿ. ಶ. ೫೫೫-೬೦೫)[42] ಹಲವು ಶತಮಾನಗಳವರೆಗೆ,ಬಹುಶಃ ಹೊಯ್ಸಳ ವಂಶದ ಅಂತ್ಯದವರೆಗೆ,ಉಚ್ಛ್ರಾಯಸ್ಥಿತಿಯಲ್ಲಿದ್ದು ಈ ಊರು ಪುಣ್ಯಕ್ಷೇತ್ರವಾಗಿತ್ತು; ಜೈನಧರ್ಮಕ್ಕೆ ಕೇಂದ್ರವಾಗಿತ್ತು. ಒಂದು ಶಾಸನದಲ್ಲಿ[43] ಇದನ್ನು ಕೋಗಳಿಯ ತೀರ್ಥವೆಂದು ಕರೆದಿದೆ. ಕ್ರಿ.ಶ. ೯೭೨ರ ಇನ್ನೊಂದು

[39] *Inscriptions of the Madras Presidency*, Vol. I, *Bellary Inscriptions*, Rangacharya, Nos. 195, 215, 234, 245, 265, 267, 273, etc.

[40] See Ibid. Nos 189–193, 195–196.

[41] *SII*, IX—i, No. 117.

[42] ದುರ್ವಿನೀತನ ಕಾಲದ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ. ರೈಸ್, ೪೮೨-೫೧೭ ಎನ್ನುತ್ತಾರೆ. ಬ್ರಾಯಿಲ್, ೬೦೫-೬೫೦; ರಾ. ನರಸಿಂಹಾಚಾರ್ಯ, ೬೦೫-೬೫೦

[43] *SII*. IX—1, No 368, AD 1173–1220.

ಶಾಸನದಲ್ಲಿ[44] ಕೋಗಳಿಯ ಸ್ಥಾನಾಧಿಪತಿಗಳಾದ ಗಣಧರದೇವಭಟ್ಟಾರಕನ ಹೆಸರನ್ನು ಹೇಳಿದೆ. ಕ್ರಿ.ಶ. ೮೯೭ರ ಇನ್ನೊಂದು ಶಾಸನದಲ್ಲಿ[45] ಕೋಗಳಿಯಯ್ನೂಱು ನಾಡಿನ ಉಲ್ಲೇಖವಿದೆ. ರಾಷ್ಟ್ರಕೂಟ ನಿತ್ಯವರ್ಷದೇವನ ಕ್ರಿ.ಶ. ೯೨೬ರ ಒಂದು ಶಾಸನದಲ್ಲಿ[46] ಮೂಸಿಯವಾಡ ನಾಲ್ವತ್ತರೊಡನೆ ಕೋಗಳಿಯಯ್ನೂರನ್ನು ಹೇಳಿದೆ. ಕೋಗಳಿ 'ನಾಲ್ಕುಂ ಯುಗದ ಪೊೞಲ್' ಎಂದು ಹಿಂದೆಯೇ ಹೇಳಿದ ಕ್ರಿ.ಶ. ೯೯೭ರ ಶಾಸನದಲ್ಲಿ ಹೊಗಳಿದೆ. ಈ ಪಟ್ಟಣ ಮುಳುಗುಂದ, ಕೊಪಣ, ಶ್ರವಣಬೆಳಗೊಳ ಮುಂತಾದುವುಗಳಂತೆ ಪ್ರಸಿದ್ಧವೂ, ಪವಿತ್ರವೂ ಆದ ಕ್ಷೇತ್ರವಾಗಿತ್ತು. ಇದರ ಹೆಸರನ್ನು 'ವಡ್ಡಾರಾಧನೆ'ಯಲ್ಲಿ ಹೇಳುವುದಕ್ಕೆ ಕಾರಣವೇನು? ಹರಿಷೇಣನು (೯೩೧ ಕಾಲ) ಇದನ್ನು ಹೇಳಿಲ್ಲ. ಆದ್ದರಿಂದ ಕೋಗಳಿಯ ಹೆಸರನ್ನು ಇಲ್ಲಿ ತರುವುದಕ್ಕೆ ವಿಶೇಷವಾದ ಏನೋ ಕಾರಣವಿರಬೇಕು. ಬಹುಶಃ 'ವಡ್ಡಾರಾಧನೆ'ಯ ಶಿವಕೋಟಿ ಈ ಊರಿಗೆ ಅಥವಾ ಈ ಪ್ರದೇಶಕ್ಕೆ ಸೇರಿದವನಾಗಿರಬೇಕೆಂದೂ, ತನ್ನ ಊರ ಹೆಸರನ್ನು ಕಥೆಯಲ್ಲಿ ಹೀಗೆ ಸೇರಿಸಿದ್ದಾನೆಂದೂ ಹೇಳಬಹುದಾಗಿದೆ.

ಈ ಕಥೆಯಲ್ಲಿ ಬರುವ ಸ್ವಾಮಿ ಕಾರ್ತಿಕ ಋಷಿಗೂ ಬಳ್ಳಾರಿ ಜಿಲ್ಲೆಗೂ ಸಂಬಂಧವಿರಬಹುದು. ಈ ಋಷಿ ರಾತ್ರಿ ಪ್ರತಿಮಾಯೋಗದಲ್ಲಿ ನಿಂತದ್ದು ಕಿಷ್ಕಿಂಧವೆಂಬ ಪರ್ವತದ ಮೇಲೆ; ಅವನ ಮೇಲೆ ರಾತ್ರಿಯೆಲ್ಲ ಸುರಿದ ಮಳೆಯ ನೀರು, ಮಡುವಾಗಿ 'ಸರ್ವೌಷಧ'ವೆಂಬ ತೀರ್ಥವಾದದ್ದು ಆ ಪರ್ವತದಲ್ಲಿ. ಶಕ್ತಿಯೆಂಬ ಆಯುಧದಿಂದ ಈ ಋಷಿ ಹತನಾದದ್ದು ಕೋಗಳಿಯಲ್ಲಿ; ಅಲ್ಲಿಂದ ನವಿಲ ರೂಪಿನ ದೇವತೆ ಅವನನ್ನು ಎತ್ತಿಕೊಂಡು ಬರುತ್ತದೆ; ಕೋಗಳಿಯ ಪೂರ್ವಕ್ಕಿರುವ ಬೆಟ್ಟದಲ್ಲಿನ ಕೊಳದ ಬಳಿ ಇವನನ್ನು ಆ ದೇವತೆ ಇರಿಸುತ್ತದೆ, ಋಷಿ ಮಡಿದದ್ದು ಅಲ್ಲಿ; ಅವನಿಗೆ ಒಂದು ಬಸದಿಯನ್ನು ಮಾಡಿದ್ದು ಅಲ್ಲಿ; ಅದಕ್ಕೆ ಸ್ವಾಮಿ ಎಂಬ ತೀರ್ಥನಾಮವಾಯಿತು. ಬಳ್ಳಾರಿ ಜಿಲ್ಲೆಯ ಸೊಂಡೂರಿನ ಬಳಿ ಬೆಟ್ಟಗಳಲ್ಲಿ ಈಗ ಕುಮಾರಸ್ವಾಮಿಯ ದೇವಾಲಯವಿರುವುದು ಪ್ರಸಿದ್ಧವಾಗಿದೆ. ಚಂಗಗಾವುಂಡನೆಂಬಾತ ಸೂಜಿಂಗಲ್ಲು ಎಂಬ ಪ್ರದೇಶವನ್ನು ಸತ್ಯರಾಶಿಭಟ್ಟಾರನಿಗೆ ಮಠದ ಅನ್ನಸತ್ರಕ್ಕಾಗಿ ದಾನಮಾಡಿದಂತೆಯೂ, ಆ ದಾನವನ್ನು ಕೋಳಗಲ್ಲಿನಲ್ಲಿ ಪ್ರಭುವಾಗಿದ್ದ ಗಜಧರಯ್ಯನು, 'ಸ್ವಾಮಿ ಕಾರ್ತಿಕೇಯ ತಪೋವನ'ದ ಅಧಿಕಾರಿಯು, ಸ್ಥಿರೀಕರಿಸಿದಂತೆಯೂ ರಾಷ್ಟ್ರಕೂಟ IIIನೆಯ ಕೃಷ್ಣನಕಾಲದ ಒಂದು ಶಾಸನದಲ್ಲಿ(ಕಾಲ. ಕ್ರಿ.ಶ. ೯೬೪) ಉಕ್ತವಾಗಿದೆ.[47] ಇನ್ನೊಂದು ಶಾಸನದಿಂದ[48] ಕುಮಾರಸ್ವಾಮಿ ದೇವಾಲಯವು ಶಕ ೬೪೧ (ಕ್ರಿ. ಶ. ೭೧೯) ಸ್ಥಾಪಿತವಾದಂತೆ ತಿಳಿದುಬರುತ್ತದೆ. ಆದ್ದರಿಂದ ಆ

---

44 Ibid. no 77; *Jainism in Karnataka*, p. 149.

45 *Bombay Karnatak Inscriptions*, No. 22.

46 *SII*, IX—1, 57.

47 *Inscriptions of the Madras Presidency*, Vol, I, No. 47; *History of the Dekkan* (Bhandarkar) p. 54–55.

48 ಅದೇ. 480, 481; Sewell's *Antiquties* I, 108.

ದೇವಾಲಯ ಸಾಕಷ್ಟು ಹಳೆಯದಾದ ರಚನೆಯೆಂದು ನಿರ್ಧಾರಿತವಾಗಿದೆ. ಕಥೆಯಲ್ಲಿನ ಸ್ವಾಮಿ ಕಾರ್ತಿಕೇಯ ಯತಿ ಕುಮಾರಸ್ವಾಮಿಯೆಂಬ ದೇವರಾಗಿಯೂ, ಆ ಬಸದಿಯೇ ಅನ್ಯದೇವಾಲಯವಾಗಿಯೂ ಪರಿವರ್ತನೆಗೊಂಡಿರಬಹುದು.[49] ಈ ಭೂ ಸನ್ನಿವೇಶವೆಲ್ಲ ಕೋಗಳಿಯ ಪೂರ್ವಕ್ಕೆ ಇರುವ ಪರ್ವತಪ್ರಾಂತವಾಗಿದೆ. ಈ ಎಲ್ಲ ಕಾರಣಗಳಿಂದ ವಡ್ಡಾರಾಧನೆಯ ಕರ್ತೃವಾದ ಶಿವಕೋಟಿ ಕೋಗಳಿ ನಾಡಿಗೆ ಎಂದರೆ ಈಗಿನ ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗಕ್ಕೆ, ಸೇರಿದವನೆಂದು ಹೇಳಬಹುದು. ಕಾರ್ತಿಕೇಯ ಋಷಿಯ ಮರಣವಾದ ಸ್ವಲ್ಪ ಕಾಲಕ್ಕೆ ಬಾದುಬ್ಬೆಯೆಂಬ ಹಬ್ಬ ರೂಢಿಗೆ ಬಂದಿತೆಂದು ಕಥೆಯಿಂದ ತಿಳಿದುಬರುವ ಅಂಶವಾಗಿದೆಯಷ್ಟೆ. ಈ ಹಬ್ಬ ಉಕ್ತವಾಗಿರುವ ಅತ್ಯಂತ ಪ್ರಾಚೀನ ಉಲ್ಲೇಖ ನನಗೆ ಕಂಡಮಟ್ಟಿಗೆ ಖಾಜಿಪೇಟೆಯ ಶಿಲಾಲಿಪಿ.[50] ಇದರ ಕಾಲ ಕ್ರಿ.ಶ. ೮೭೨; ಇದರ ೨೪ನೆಯ ಪಂಕ್ತಿಯಲ್ಲಿ "ಬಾದುಬ್ಬೆಯ ಪರ್ವದಂದು" ಎಂಬ ಮಾತು ಗಳಿವೆ. ಈ ಎಲ್ಲ ನೆನಪುಗಳು ಜನತೆಯ ಸ್ಮೃತಿಪಥದಲ್ಲಿ ಇನ್ನೂ ಜೀವಂತವಾಗಿದ್ದ ಕಾಲದಲ್ಲಿ 'ವಡ್ಡಾರಾಧನೆ' ರಚಿತವಾಗಿರಬಹುದು.

ಈ ಪೀಠಿಕೆ ಅಚ್ಚಾಗುತ್ತಿರುವಾಗ ಅದರ ಕೊನೆಯ ಕರಡು ಪ್ರತಿಯೊಂದನ್ನು ಡಾ॥ ಆ. ನೇ. ಉಪಾಧ್ಯೆ ಅವರಿಗೆ ಕಳಿಸಲಾಯಿತು. ಅದನ್ನೆಲ್ಲ ಸಾವಧಾನವಾಗಿ ಪರಿಶೀಲಿಸಿ ಅವರು ನನಗೆ ಒಂದೆರಡು ಪತ್ರಗಳನ್ನು ಬರೆದರು. ಅವುಗಳಲ್ಲಿ ಸೆಪ್ಟೆಂಬರ್ ೧೩, ೧೯೪೯ ನೆಯ ದಿನಾಂಕದ ಪತ್ರ ಬಹಳ ಮುಖ್ಯವಾದುದಾಗಿದೆ. ಅದರಲ್ಲಿ ಅವರು ವಡ್ಡಾರಾಧನೆಯ ಕರ್ತೃತ್ವ ಕಾಲವಿಚಾರಗಳ ಬಗ್ಗೆ ತಮ್ಮ ನಿಲವೇನೆಂಬುದನ್ನು ವಿಶದಗೊಳಿಸಿದ್ದಾರೆ. ಅದನ್ನು ಇಲ್ಲಿ ನಿರೂಪಿಸಿ ಆ ಬಗ್ಗೆ ನನ್ನ ನಿಲವೇನೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ.

'ವಡ್ಡಾರಾಧನೆ'ಯ ಕರ್ತೃ ಯಾರೊ ಗೊತ್ತಿಲ್ಲ; ಅದರ ಅಂತ್ಯದಲ್ಲಿ ಬರುವ 'ಈಪೇಟ್ಟಿ ಪತ್ತೊಂಬತ್ತು ಕತೆಗಳಂ ಶಿವಕೋಟ್ಯಾಚಾರ್ಯರ್ ಪೇಟ್ಟಾ[ರ್]' ಎಂಬ ವಾಕ್ಯದಲ್ಲಿ ಕಾಣುವ ಶಿವಕೋಟಿ ಭಗವತೀ ಆರಾಧನಾ ಅಥವಾ ಮೂಲಾರಾಧನಾ' ಎಂಬ ಪ್ರಾಕೃತ ಗ್ರಂಥದ ಕರ್ತೃವಿಗೆ ಅನ್ವಯಿಸುತ್ತದೆ. ಆ ಪ್ರಾಕೃತಗ್ರಂಥಕ್ಕೆ 'ವಡ್ಡಾರಾಧನಾ' ಎಂಬ ಹೆಸರೂ ಇದ್ದಿರಬಹುದು; 'ವಡ್ಡಾರಾಧನೆ' ಹನ್ನೊಂದನೆಯ ಶತಮಾನದಲ್ಲಿ ರಚಿತವಾಗಿರ ಬಹುದು. ಇದು ಅವರ ನಿಲವು. ಅವರು ಕೊಟ್ಟಿರುವ ಕಾರಣಗಳನ್ನು ಕೆಳಗೆ ಕಾಣಿಸಿದೆ.

(೧) 'ವಡ್ಡಾರಾಧನೆ' ಯಲ್ಲಿರುವ ಕಥೆಗಳಿಗೆ ಮೂಲವಾದ ಗಾಹೆಗಳು 'ಭಗವತೀ ಆರಾಧನಾ' ದಲ್ಲಿರುವುವೇ ಆಗಿವೆ; ಅಲ್ಲಿರುವ ಗಾಹೆಗಳ ಕ್ರಮದಂತೆಯೇ ಇಲ್ಲಿನ ಗಾಹೆ ಗಳೂ ಇವೆ.

(೨) ಈ ಗಾಹೆಗಳು ಹೇಗೆ ಆ ಪ್ರಾಕೃತ ಮೂಲದಿಂದ ಕನ್ನಡ ಗ್ರಂಥಕ್ಕೆ ಬಂದಿ ವೆಯೋ ಹಾಗೆಯೇ ಆ ಪ್ರಾಕೃತ ಗ್ರಂಥಕಾರನ ಹೆಸರೂ ಕನ್ನಡಕ್ಕೆ ಬಳುವಳಿಯಾಗಿ ಬಂದಿದೆ.

---

49 ಈ ವಿಷಯವಾಗಿ ಇನ್ನೂ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇವೆ.

50 *Annual Report of Archaeology*, Hyderabad, 1936.

(೩) "ವಡ್ಡಾರಾಧನೆಯ ಕವಚವು (ಖ), ವಡ್ಡಾರಾಧನೆಯ ಕವಚವೆಂಬಧಿಕಾರಃ" (ಘ) ಎಂಬ ಮಾತು ತುಂಬ ಮುಖ್ಯವಾದದ್ದು. ಈ ಗ್ರಂಥ 'ಕವಚ'ವೆಂಬ ಗ್ರಂಥ ಸಮುದಾಯಕ್ಕೆ ಸೇರಿದ್ದೆಂಬುದನ್ನು ತಿಳಿಸುತ್ತದೆ. ಈ ಮಾತಿಗೆ ಮೂಲ "ಭಗವತೀ ಆರಾಧನಾ" ಎಂಬುದರಲ್ಲಿದೆ.

(೪) ಕನ್ನಡದ ಕಥೆಗಳಲ್ಲಿ 'ಆರಾಧನಾ' ಎಂಬ ಪ್ರಕ್ರಿಯೆಯ ವಿವರಗಳೇನೂ ಉಕ್ತವಾಗಿಲ್ಲದಿರುವುದರಿಂದ, 'ವಡ್ಡಾರಾಧನಾ' ಎಂಬ ಹೆಸರಿಗೆ ಸಾರ್ಥಕತೆ ಏನೂ ಇಲ್ಲ. ಆದರೆ ಶಿವಕೋಟಿಯ ಭಗವತೀ ಆರಾಧನಾ ಗ್ರಂಥಕ್ಕೆ ಈ ಹೆಸರು ಚೆನ್ನಾಗಿ ಅನ್ವಯಿಸುತ್ತದೆ.

(೫) ಈ ಕನ್ನಡ ಗ್ರಂಥಕ್ಕೆ 'ವಡ್ಡಾರಾಧನೆ' ಎಂಬ ಅನುಚಿತವಾದ ಹೆಸರನ್ನು, ಗ್ರಂಥಕರ್ತನು ಯಾರೇ ಇರಲಿ, ಅವನು ಕೊಟ್ಟಿರುವನೆಂದು ಒತ್ತಾಯಪೂರ್ವಕವಾಗಿ ಹೇಳಲಾಗದು. 'ಉಪಸರ್ಗ ಕೇವಲಿಗಳ ಕಥೆ' ಎಂಬ ಹೆಸರು ಇದಕ್ಕಿಂತ ಎಷ್ಟೋ ಉಚಿತವಾದುದಾಗಿದೆ.

ಮೇಲೆ ಹೇಳಿರುವ ಅಂಶಗಳು ಡಾ|| ಆ. ನೇ. ಉಪಾಧ್ಯೆಯವರ ನಿಲವಿಗೆ ಸಮರ್ಥನೆಯನ್ನು ಉಂಟುಮಾಡುತ್ತವೆಂದು ಆಪಾತತಃ ತೋರಬಹುದು. ಆದರೆ ಇವು ಯಾವುವೂ ನಿಶ್ಚಯಸ್ಪಷ್ಟತೆಯನ್ನು ಪಡೆಯಲಾರವು. 'ವಡ್ಡಾರಾಧನೆ'ಯ ಕರ್ತೃತ್ವ ಕಾಲಗಳ ಬಗ್ಗೆ ನನ್ನ ನಿಲವು ಕೆಳಗೆ ಕಾಣಿಸಿದಂತಿದೆ:

(೧) ಗ್ರಂಥಾಂತ್ಯದಲ್ಲಿ ಕಾಣುವ "ಈ ಪೇೞ್ದ ಪತ್ತೊಂಬತ್ತು ಕಥೆಗಳಂ ಶಿವಕೋಟ್ಯಾಚಾರ್ಯರ್ ಪೇೞ್ದಾ[ರ್]" ಎಂಬ ವಾಕ್ಯ ಈಗ, ಇಗೋ, ಹೇಳಿರುವ ಹತ್ತೊಂಬತ್ತು ಕಥೆಗಳನ್ನು ಶಿವಕೋಟ್ಯಾಚಾರ್ಯರು ಹೇಳಿದರು ಎಂಬರ್ಥವನ್ನು ಕೊಡುತ್ತದೆ. ಇಲ್ಲಿ ಬರುವ ಶಿವಕೋಟಿ 'ಭಗವತೀ ಆರಾಧನಾ' ಕರ್ತೃವಿನಿಂದ ಭಿನ್ನನು. ಇವನೇ ಬೇರೆ ಶಿವಕೋಟಿ. ಶಿವಕೋಟಿ ನಾಮಕರಾದ ಹಲವರು ಜೈನ ಯತಿ ಲೇಖಕರಿದ್ದರು. ಈ ವಿಷಯವನ್ನು ನನ್ನ ಪೀಠಿಕೆಯಲ್ಲಿ ಸಾಧಾರವಾಗಿ ತೋರಿಸಿದೆ.

(೨) ಶಿವಕೋಟಿಯ ಪ್ರಾಕೃತ ಗ್ರಂಥಕ್ಕೆ 'ಭಗವತೀ ಆರಾಧನಾ', ಮೂಲಾರಾಧನಾ ಎಂಬ ಹೆಸರುಗಳಿದ್ದುವೇ ಹೊರತು 'ವಡ್ಡಾರಾಧನಾ' ಎಂದು ಅದನ್ನು ಕರೆಯುತ್ತಿದ್ದರೆಂದು ಹೇಳುವುದಕ್ಕೆ ಆಧಾರ ಕಾಣುವುದಿಲ್ಲ. ಕನ್ನಡ ಗ್ರಂಥಕರ್ತನು ಇಟ್ಟಿರುವ ಹೆಸರು 'ವಡ್ಡಾರಾಧನೆ' ಎಂದು. ಇದು ಉಚಿತವೋ ಅನುಚಿತವೋ ಎಂಬ ವಿಷಯ ಅವರವರ ಅಭಿಪ್ರಾಯಕ್ಕೆ ಒಳಪಟ್ಟದ್ದು. ಅಲ್ಲದೆ 'ವೃದ್ಧಾರಾಧನಾ' ಎಂಬ ಹೆಸರನ್ನು ವೃದ್ಧರ ಎಂದರೆ ಹಿರಿಯ ಜೈನಯತಿಗಳ ಆರಾಧನಾ ಎಂದರೆ ಸಾಧನ, ಸಿದ್ಧಿ ಎಂದು ಅರ್ಥೈಸಬಹುದಾಗಿದೆ. ಈ ಹಿರಿಯ ಜೈನಋಷಿಗಳು ಪಡೆದ ಸಿದ್ಧಿಗಳನ್ನು ಇಲ್ಲಿರುವ ಕಥೆಗಳು ವರ್ಣಿಸುತ್ತವೆ. ಆದ್ದರಿಂದ ಈ ಹೆಸರು ಈ ಕನ್ನಡ ಗ್ರಂಥಕ್ಕೆ ತಕ್ಕದಲ್ಲವೆಂದು ಹೇಳುವ ಹಾಗಿಲ್ಲ.

(೩) 'ಈ ಪೇೞ್ದ', 'ಪೇೞ್ದಾ[ರ್]'—ಎಂಬ ಶಬ್ದಗಳು ಗಮನಾರ್ಹ. ಇದು

ಒಂದು ನುಡಿಗಟ್ಟು ಕನ್ನಡದಲ್ಲಿ; ಕಾವ್ಯ ರಚನೆ ಮಾಡು ಎಂಬರ್ಥದಲ್ಲಿ "ಕಾವ್ಯಮಂ ಪೇೞ್" ಎಂದು ಹಳಗನ್ನಡದಲ್ಲಿ ಹೇಳುವುದು ವಾಡಿಕೆ. ಇದರಂತೆ 'ಶಿವಕೋಟ್ಯಾಚಾರ್ಯರ್ ಪೇೞ್ದಾ[ರ್]' ಎಂದರೆ ಶಿವಕೋಟ್ಯಾಚಾರ್ಯರು ರಚಿಸಿದರು ಎಂದರ್ಥ. ಒಟ್ಟಿನಲ್ಲಿ 'ಇಗೋ ಹೇಳಿದ, ಈಗ ಹೇಳಿದ, ಹತ್ತೊಂಬತ್ತು ಕತೆಗಳನ್ನು ಶಿವಕೋಟ್ಯಾಚಾರ್ಯರು ರಚಿಸಿದರು' ಎಂದು ಆ ವಾಕ್ಯದ ಅರ್ಥವಾಗಿರುವುದರಿಂದ ಕನ್ನಡ ಗ್ರಂಥಕರ್ತನ ಹೆಸರು ಶಿವಕೋಟಿ ಎಂದು ನಿಷ್ಪನ್ನವಾಗುತ್ತದೆ. ಇವನು ಯಾವ ಶಿವಕೋಟಿಯೋ ತಿಳಿಯದು.

(೪) ಇನ್ನು 'ಕವಚ' ಶಬ್ದದ ವಿಚಾರ. ಕನ್ನಡ ಗ್ರಂಥಕರ್ತ ಆ ಹತ್ತೊಂಬತ್ತು ಕಥಾಸೂಚಕ ಗಾಹೆಗಳನ್ನು ಪ್ರಾಕೃತ 'ಭಗವತೀ ಆರಾಧನಾ' ಗ್ರಂಥದಿಂದ ಸ್ವೀಕರಿಸಿರುವಂತೆಯೇ ಅಲ್ಲಿನ 'ಕವಚ'ವೆಂಬ ಹೆಸರನ್ನೂ ತೆಗೆದುಕೊಂಡಿರಬಹುದು.

(೫) ಗ್ರಂಥಾಂತ್ಯದಲ್ಲಿ ಕವಿ ತನ್ನ ಹೆಸರನ್ನು ಹೇಳಿಕೊಳ್ಳದೆ ಶತಮಾನಗಳ ಹಿಂದೆ ಆಗಿಹೋದ ಇನ್ನೊಬ್ಬನ ಹೆಸರನ್ನು ಹೇಳುವುದು ಸಹಜವಾಗಿ ತೋರುವುದಿಲ್ಲ.

(೬) 'ವಡ್ಡಾರಾಧನೆ'ಯ ಶಿವಕೋಟಿ ಬಳ್ಳಾರಿ ಜಿಲ್ಲೆಯ ಕೋಗಳಿನಾಡಿಗೆ ಸೇರಿರಬಹುದೆಂಬ ಅಂಶವನ್ನು ಗಮನಿಸಿದರೆ ಇವನಿಗೂ 'ಮೂಲಾರಾಧನಾ' ರಚಕನಿಗೂ ಯಾವ ಸಂಬಂಧವೂ ಇರುವಂತೆ ತೋರುವುದಿಲ್ಲ. ಈ ಕನ್ನಡದ ಶಿವಕೋಟಿಯನ್ನು ಕೋಗಳಿಯ ಶಿವಕೋಟಿ ಎಂದು ಕರೆಯಬಹುದು.

'ವಡ್ಡಾರಾಧನೆ' ರಚಿತವಾದ ಕಾಲದ ವಿಚಾರವಾಗಿ ಡಾ. ಆ. ನೇ. ಉಪಾಧ್ಯೆಯವರು ಒಂದು ಹೊಸ ಅಂಶವನ್ನು ನನಗೆ ತಮ್ಮ ಆಗಸ್ಟ್ ೧೩, ೧೯೭೦ ನೆಯ ತಾರೀಕಿನ ಪತ್ರದಲ್ಲಿ ತಿಳಿಯಪಡಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಹಾರ್ದಿಕ ವಂದನೆಗಳು. 'ವಡ್ಡಾರಾಧನೆ'ಯ ೪೮ ನೆಯ ಪುಟದಲ್ಲಿ "ಮಜ್ಝು ಸಹಾವಂ ಣಾಣಂ" ಎಂದು ಆರಂಭಿಸುವ ಗಾಹೆ ಉದ್ಧೃತವಾಗಿದೆಯಷ್ಟೆ. ಈ ಗಾಹೆಯು ದೇವಸೇನನಿಂದ ಪ್ರಾಕೃತದಲ್ಲಿ ರಚಿತವಾಗಿರುವ 'ನಯಚಕ್ರ' ಅಥವಾ 'ನಯಲಕ್ಷಣ' ಎಂಬ ಗ್ರಂಥದಲ್ಲಿ ೮೩ ನೆಯ ಪದ್ಯವಾಗಿ ದೊರೆಯುತ್ತದೆ. ಇದೇ ಗಾಹೆ ಮಾಯಿಲ್ಲಧವಳ ಎಂಬ ದೇವಸೇನನ ಶಿಷ್ಯನಿಂದ ರಚಿತವಾದ 'ದ್ರವ್ಯಸ್ವಭಾವ ಪ್ರಕಾಶ' ಎಂಬ ಗ್ರಂಥದಲ್ಲಿಯೂ ಇದೆ (೪೦೬ ನೆಯ ಪದ್ಯ). 'ನಯಚಕ್ರ' ದ ರಚಕನಾದ ದೇವಸೇನನೂ 'ದರ್ಶನಸಾರ' ಎಂಬ ಪ್ರಾಕೃತ ಗ್ರಂಥವನ್ನು ಬರೆದ ದೇವಸೇನನೂ ಒಬ್ಬನೇ ಆಗಿರುವುದನ್ನು ಎರಡು ಗ್ರಂಥಗಳಲ್ಲೂ ಕಾಣುವ ಒಂದು ಸಮಾನಾರ್ಥಕ ಶಬ್ದ ಘಟಿತ ಗಾಹೆಯಿಂದ ನಿರ್ಣಯಿಸಬಹುದು. ಈ ದೇವಸೇನನು ಕ್ರಿ.ಶ. ೯೩೩ ರಲ್ಲಿದ್ದನೆಂದು ಖಚಿತವಾಗಿ ಗೊತ್ತಾಗಿದೆ. ಇವನ ಗ್ರಂಥದಿಂದ ಎಂದರೆ 'ನಯಚಕ್ರ'ದಿಂದ ಪದ್ಯವನ್ನು ಎತ್ತಿಕೊಂಡಿರುವ 'ವಡ್ಡಾರಾಧನೆ' ಕ್ರಿ. ಶ. ೯೩೩ ರಿಂದ ಈಚೆಗೆ ರಚಿತವಾಗಿರಬೇಕು ಎಂಬ ಅಂಶ ಸ್ಥಾಪಿತವಾಗುತ್ತದೆ.

ಆದರೆ ಈ ಆಧಾರ ದುರ್ಬಲವಾಗಿರುವಂತೆ ತೋರುತ್ತದೆ. 'ವಡ್ಡಾರಾಧನೆ'ಯ ೪೮

ನೆಯ ಪುಟದಲ್ಲಿ ದೊರೆಯುವ 'ಮಜ್ಝಸಹಾವಂ ಣಾಣಂ' ಎಂಬ ಗಾಹೆಯೂ, ಅದರ ಮುಂದಿನ 'ಭಿಜ್ಜಉ ಭಿಜ್ಜಉ' ಎಂಬುದೂ 'ವಡ್ಡಾರಾಧನೆ'ಯ (ಖಘಚಛ) ಪ್ರತಿಗಳಲ್ಲಿ ದೊರೆಯುವುದಿಲ್ಲ; (ಕ) ಪ್ರತಿಯಲ್ಲೂ ಅದರ ನೇರ ನಕಲಾದ ಗ. ದಲ್ಲೂ ಇವು ದೊರೆಯುತ್ತವೆ. ಖ. ಪ್ರತಿಯೂ, (ಘಚಛ) ಪ್ರತಿಗಳೂ ಭಿನ್ನಸಂಪ್ರದಾಯಗಳಿಗೆ ಸೇರಿದ್ದರೂ ಅವುಗಳಲ್ಲಿ ಈ ಪದ್ಯಗಳ ವಿಷಯದಲ್ಲಿ ಐಕ್ಯತೆಯಿರುವುದರಿಂದ ಮೂಲದ 'ವಡ್ಡಾರಾಧನೆ' ಯಲ್ಲಿ ಈ ಗಾಹೆಗಳು ಇರಲಿಲ್ಲವೆಂದೂ, (ಕ) ಪ್ರತಿಕಾರನೋ ಅವನಿಗೆ ಮಾತೃಕೆಯಾಗಿದ್ದ ಪ್ರತಿಯಲ್ಲೋ ಈ ಗಾಹೆಗಳು ಬಂದು ಸೇರಿಕೊಂಡಿವೆಯೆಂದೂ ತೀರ್ಮಾನಿಸಬಹುದು. ಆದ್ದರಿಂದ ಈ ಗಾಹೆಗಳನ್ನು ಕಾಲನಿರ್ಣಯಕ್ಕೆ ಉಪಯೋಗಿಸಿಕೊಳ್ಳುವುದು ಸಾಧುವಾಗಲಾರದು. ಡಾ. ಆ. ನೇ. ಉಪಾಧ್ಯೆಯವರು 'ವಡ್ಡಾರಾಧನೆ' ಕ್ರಿ. ಶ. ೯೩೩ ಕ್ಕಿಂತ ಈಚಿನ ರಚನೆ ಎಂದು ಮಾಡಿರುವ ನಿರ್ಣಯಕ್ಕೆ ಪ್ರತಿಕೂಲವಾಗಿ ತಾವೇ ಈ ಪರಿಹಾರವನ್ನು ಸೂಚಿಸಿರುವುದು ಅವರ ನಿಷ್ಪಕ್ಷಪಾತ ದೃಷ್ಟಿಗೆ ಸಾಕ್ಷಿಯಾಗಿದೆ. ಒಟ್ಟಿನಲ್ಲಿ 'ವಡ್ಡಾರಾಧನೆ' ಯ ರಚನೆಯ ಕಾಲ ಅನಿರ್ದಿಷ್ಟವಾಗಿಯೇ ಉಳಿದುಕೊಂಡಿದೆ.

## ಹಿನ್ನೆಲೆ

"'ವಡ್ಡಾರಾಧನೆ' ಹತ್ತೊಂಬತ್ತು "ಮಹಾಪುರುಷರ್ಕಳ ಕಥೆಗಳಂ" ಹೇಳುವುದಾಗಿದೆ. ಈ ಕಥೆಗಳೆಲ್ಲ ಧರ್ಮಕಥೆಗಳು. ಅವುಗಳ ನಾಯಕರೆಲ್ಲ ಧರ್ಮವೀರರು. ಕೆಲವರು ಮೋಕ್ಷವನ್ನು ಸಂಪಾದಿಸಿಕೊಳ್ಳುತ್ತಾರೆ; ಕೆಲವರು ಮೋಕ್ಷಕ್ಕೆ ನೆರೆಮನೆಯಾದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗಕ್ಕೆ ಹೋಗುತ್ತಾರೆ; ಅವರು ಪಡೆದ ಸಿದಿ ಗಳು ಇವು. ಅವರಿಗೆ ಇವು ಉಂಟಾದದ್ದು ಪುಣ್ಯಪಾಪ ರೂಪವಾದ ಕರ್ಮಕ್ಷಯದಿಂದ ಅಥವಾ ಅದರ ಉಪಶಮನದಿಂದ. ಕರ್ಮಕ್ಷಯವು ತಪಸ್ಸಿನಿಂದ ಮಾತ್ರ ಸಾಧ್ಯ. ತಪಸ್ಸಿಗೆ ವಿರಕ್ತಿ, ಇಂದ್ರಿಯ ನಿಗ್ರಹ, ಕಾಯಕ್ಲೇಶ ಸಹನೆ ಮುಂತಾದುವು ಅವಶ್ಯಕ. ತಪಸ್ಸಿನಲ್ಲಿ ಕುಳಿತಿರುವ ಯತಿಗೆ ದೇವತೆ, ಮನುಷ್ಯ, ಪ್ರಾಣಿ, ಜಡವಸ್ತು—ಇವುಗಳಿಂದ ನಾನಾ ಬಗೆಯಾದ ತೊಂದರೆಗಳು ಆಗುತ್ತವೆ. ಇವುಗಳಿಗೆ ಉಪಸರ್ಗವೆಂದು ಹೆಸರು. ಉಪಸರ್ಗವನ್ನು ಜಯಿಸುವುದು ತಪಸ್ಸಿಗೆ ಸಹಕಾರಿ; ಅಲ್ಲದೆ ಹಸಿವು, ನೀರಡಿಕೆ, ಶೀತವಾತ ಮುಂತಾದ ಬಾಧೆಗಳನ್ನು ಯತಿ ಸೈರಿಸಿಕೊಳ್ಳಬೇಕು. ಇವುಗಳಿಗೆ ಪರೀಷಹವೆಂದು ಹೆಸರು. ಇವುಗಳ ಸಂಖ್ಯೆ ೨೨. ಪರಿಷಹೋಪಸರ್ಗಗಳ ಜಯವೇ ಜಯ, ಇದೇ ಉಪಾಸನೆ ಅಥವಾ ಆರಾಧನೆ. ಇದರ ಸ್ವರೂಪವನ್ನು ವಿವರಿಸುವ ಗ್ರಂಥಗಳಿಗೆ ಆರಾಧನಾಶಾಸ್ತ್ರವೆಂದು ಹೆಸರು; ಇವುಗಳಲ್ಲಿ ದೃಷ್ಟಾಂತಕ್ಕಾಗಿ ಸೂಚಿತವಾಗಿರುವ ಕಥೆಗಳ ವಿವರಣೆ ಆರಾಧನಾಕಥಾಕೋಶಗಳಲ್ಲಿ ಕಂಡುಬರುತ್ತವೆ. ವಡ್ಡಾರಾಧನೆ ಇಂಥ ಕಥಾಕೋಶಗಳಲ್ಲಿ ಒಂದು. ಇದಕ್ಕೆ ಸುದೀರ್ಘವಾದ ಪರಂಪರೆ ಇದೆ.[51] ಈ ಕಥಾನಾಯಕರನ್ನು ವಡ್ಡಾ

---

51 ಹರಿಷೇಣನ ಬೃಹತ್ಕಥಾಕೋಶ, ಸಂ. ಡಾ. ಆ. ನೇ. ಉಪಾಧ್ಯೆ. ವಿವರಗಳಿಗಾಗಿ ಈ ಗ್ರಂಥದ Introduction ಪುಟ ೪೭-೬೩ ನೋಡಿರಿ.

ರಾಧನೆ ಮಹಾ ಪುರುಷರೆಂದು ಕರೆದಿರುವ ಹಾಗೆ ಇತರ ಗ್ರಂಥಗಳಲ್ಲಿ 'ಪುರುಷಸಿಂಹ'ರೆಂದು ಕರೆದಿರುವುದು ಕಾಣುತ್ತದೆ.[52] ಪುರುಷಪ್ರಧಾನರು ಅಥವಾ ಪುರುಷಶ್ರೇಷ್ಠರು ಎಂದು ಇದರ ಅರ್ಥ. ಪರೀಷಹ ಸುಭಟರನ್ನು ಜಯಿಸಿದ್ದರಿಂದ ಇವರು ಪುರುಷಸಿಂಹರಾದರು. ಈ ಗ್ರಂಥಕ್ಕೆ ಯಾರೋ ಇಟ್ಟಿರುವ 'ಉಪಸರ್ಗ ಕೇವಲಿಗಳ ಕಥೆ' ಎಂಬ ಇನ್ನೊಂದು ಹೆಸರೂ ಗಮನಾರ್ಹ. ಉಪಸರ್ಗಗಳನ್ನು ಜಯಿಸಿ ಕೇವಲ ಜ್ಞಾನವನ್ನು ಪಡೆದುಕೊಂಡ ಜೈನ ಯತಿಗಳ ಕಥೆಗಳೇ ಇಲ್ಲಿ ಹೇಳಿವೆ. ಇವುಗಳಿಗೆ ಹಿನ್ನೆಲೆಯಾಗಿ ಪ್ರಾಕೃತ ಸಂಸ್ಕೃತ ಜೈನ ಸಾಹಿತ್ಯದಲ್ಲಿ ಆರಾಧನಾಗ್ರಂಥಗಳೂ, ಆರಾಧನಾ ಕಥಾ ಕೋಶಗಳೂ ಹೇರಳವಾಗಿವೆ.

ಮೋಕ್ಷಕಾಂಕ್ಷಿಗಳಾದ ಜೈನಮುನಿಗಳು ಕೈಕೊಳ್ಳುವ ಉಪಾಸನೆ ಅಥವಾ ಮಾಡುವ ಉದ್ಯಮ ಆರಾಧನೆಯಾಗುತ್ತದೆ. ಇದು ನಾಲ್ಕು ವಿಧವಾಗಿವೆ. ತಪಸ್ಸು, ದರ್ಶನ, ಜ್ಞಾನ, ಚರಣ ಎಂದು. ತಪಸ್ಸಿನಲ್ಲಿ ಬಾಹ್ಯ, ಅಭ್ಯಂತರ ಎಂದು ಎರಡು ವಿಭಾಗಗಳಿವೆ. ಅನಶನ, ಅವಮೋದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತ ಶಯನಾಸನ, ಕಾಯಕ್ಲೇಶ—ಈ ಆರು ಬಾಹ್ಯತಪಗಳು. ಪ್ರಾಯಶ್ಚಿತ್ತ, ವಿನಯ, ವೈಯಾಪೃತ್ಯ, ಸ್ವಾಧ್ಯಾಯ, ಉತ್ಸರ್ಗ, ಧ್ಯಾನ—ಈ ಆರು ಅಭ್ಯಂತರ ತಪಗಳು. ಈ ೧೨ ಬಗೆಯಾಗಿರುವ ತಪಗಳನ್ನು ಸ್ವಶಕ್ತಿಯಿಂದ ಆಚರಣೆಮಾಡುವುದು ತಪದ ಆರಾಧನೆಯಾಗುತ್ತದೆ. ದರ್ಶನವೆಂದರೆ ಜೈನತತ್ವ ಶಾಸ್ತ್ರಕ್ಕೆ ಸೇರಿದ ಸಪ್ತತತ್ತ್ವಗಳಲ್ಲೂ, ನವ ಪದಾರ್ಥಗಳಲ್ಲೂ ಇರುವ ಅಚಲವಾದ ನಂಬಿಕೆ, ಶ್ರದ್ಧೆ, ವಿಶ್ವಾಸ, ಅಭಿರುಚಿ. ಇದನ್ನು ವೃದ್ಧಿಗೊಳಿಸಿಕೊಳ್ಳುವುದು ಸಮ್ಯಕ್ತ್ವ. ಇದಕ್ಕೆ ದರ್ಶನಾರಾಧನೆ ಎಂಬ ಹೆಸರಿದೆ. ಜ್ಞಾನವೆಂದರೆ ಪರಮಾಗಮೋಕ್ತವಾದ ಸೂತ್ರಾರ್ಥಗಳನ್ನು ಭಾವಿಸಿ ತಿಳಿಯುವುದು ಮತ್ತು ಜೀವಾದಿ ನವಪದಾರ್ಥಗಳ ತತ್ವವನ್ನು ಅರಿಯುವುದು. ಇದೇ ಸಮ್ಯಕ್‌ಜ್ಞಾನ. ಇದನ್ನು ಪಡೆಯುವುದಕ್ಕೆ ಮಾಡುವ ಉದ್ಯಮ ಜ್ಞಾನಾರಾಧನೆಯಾಗುತ್ತದೆ. ಚರಣವೆಂದರೆ ಚಾರಿತ್ರ; ಪಂಚಮಹಾವ್ರತಗಳು, ಪಂಚಸಮಿತಿಗಳು, ತ್ರಿಗುಪ್ತಿಗಳು, ಎಂದು ಇದರಲ್ಲಿ ೩ ವಿಧಗಳಿವೆ; ಭಾವಶುದ್ಧಿಯಿಂದ ಇವುಗಳನ್ನು ಪರಿಪಾಲಿಸುವುದು ಚಾರಿತ್ರಾರಾಧನೆ. ಇವುಗಳ ಆಚರಣೆಯಿಂದ ಜೈನಮುನಿಗೆ ಮರಣ ಸಮಯದಲ್ಲಿ ಕ್ಷಮೆ, ಸಮತ್ವ, ಶಾಂತಿ, ವೈರಾಗ್ಯ, ಸಂಯಮ, ಧೈರ್ಯ, ಸ್ಥೈರ್ಯಗಳು ಉದ್ಭವವಾಗುತ್ತವೆ. ಈ ಆರಾಧನಾ ಚತುಷ್ಟಯಗಳ ಸವಿಸ್ತರ ಪ್ರತಿಪಾದನೆ ಆ ಶಾಸ್ತ್ರಗ್ರಂಥಗಳಲ್ಲಿ ದೊರೆಯುತ್ತವೆ; ಇವುಗಳ ಸಿದ್ಧಿಗಾಗಿ ಪ್ರಯತ್ನಿಸಿದ ಧರ್ಮವೀರರ ನಾಮಸ್ಮರಣೆಯೂ ಅವರ ಕಥಾ ಸೂಚನೆಯೂ ಇಲ್ಲಿ ಕಂಡುಬರುತ್ತವೆ.

ಶ್ವೇತಾಂಬರ ಸಂಪ್ರದಾಯದಲ್ಲಿ ಜೈನಸಿದ್ಧಾಂತದ ಅಥವಾ ಆಗಮದ ಗ್ರಂಥಗಳು

---

[52] ದೇವಸೇನಾಚಾರ್ಯ ವಿರಚಿತ ಆರಾಧನಾಸಾರ ಗಾಹೆ, ೪೮. "ಪುರುಷಸಿಂಹೈಃ ಸೋಢಾ ಮಹೋಪಸರ್ಗಾಃ". (ಛಾಯೆ)

ಒಟ್ಟು ಸುಮಾರು ೪೫ ಇವೆ.[53] ಇವುಗಳನ್ನು ಆರು ಗುಂಪುಗಳಾಗಿ ವಿಂಗಡಿಸಿದೆ. ದ್ವಾದಶಾಂಗಗಳು, ದ್ವಾದಶ ಉಪಾಂಗಗಳು ಆದಮೇಲೆ ೧೦ ಪ್ರಕೀರ್ಣಕ ಗ್ರಂಥಗಳಿವೆ.[54] ಇವುಗಳೆಲ್ಲ ಆರ್ಷ ಅಥವಾ ಅರ್ಧಮಾಗಧಿ ಭಾಷೆಯಲ್ಲಿ ರಚಿತವಾಗಿವೆ. ಪ್ರಕೀರ್ಣಕಗಳ ಬಹುಭಾಗ ಛಂದೋನಿಬದ್ಧವಾಗಿವೆ. ಇವುಗಳಲ್ಲಿ ಮೊದಲನೆಯದಾದ ಚಉರಣ (=ಚತುಃಶರಣ)ದಲ್ಲಿ ಅರ್ಹತ್ ಸಿದ್ಧ ಸಾಧುಗಳ ಸ್ತುತಿಯೂ ಧರ್ಮಪ್ರಶಂಸೆಯೂ ಇವೆ. ಆರಂಭದ ಪದ್ಯಗಳಲ್ಲಿ ಷಡಾವಶ್ಯಕಗಳ ನಿರೂಪಣೆ ಇದೆ. ಒಟ್ಟು ೬೩ ಪದ್ಯಗಳು. ಇದನ್ನು ರಚಿಸಿದಾತನು ವೀರಭದ್ರ. ಕನ್ನಡ ವಡ್ಡಾರಾಧನೆಯ ದೃಷ್ಟಿಯಿಂದ ೧೭೨ ಪದ್ಯಗಳನ್ನೊಳಗೊಂಡ ಭಕ್ತಪರಿಜ್ಞಾ (=ಭಕ್ತ ಪರಿಜ್ಞಾ,) ೧೩೩ ಪದ್ಯಗಳಿರುವ ಸಂಥಾರಪರಿಜ್ಞಾ (=ಸಂಸ್ಕಾರ ಪರಿಜ್ಞಾ), ಮರಣ ಸಮಾಹಿ (=ಮರಣ ಸಮಾಧಿ) —ಎಂಬಿವು ಮುಖ್ಯವಾದುವು. ಇವುಗಳಲ್ಲಿ ಸೂಚಿತವಾಗಿರುವ ಕಥೆಗಳನ್ನು ಡಾ. ಆ.ನೇ. ಉಪಾಧ್ಯೆಯವರು ನಿರೂಪಿಸಿದ್ದಾರೆ.[55] ವಡ್ಡಾರಾಧನೆಯ ಹತ್ತೊಂಬತ್ತು ಕಥೆಗಳಿಗೆ ಸಂಬಂಧಿಸಿರುವುದನ್ನು ಮಾತ್ರ ಇಲ್ಲಿ ನೋಡಬಹುದು :

೧. ಪೋಯಣ (ಪೋದನ) ಪುರದಲ್ಲಿ ಪುಪ್ಪಚೂಲಾ ಎಂಬ ಕಂತಿಯಿದ್ದಳು. ಅವಳ ಗುರು ಅಣ್ಣಿಯಾ ಉತ್ತ ; ಇವನು ಗಂಗಾನದಿಯನ್ನು ದಾಟುತ್ತಿರುವಾಗ ದೋಣಿ ಮಗುಚಿಕೊಂಡು ನದಿಯಲ್ಲಿ ಮುಳುಗಿ ಸತ್ತುಹೋದನು[56] (ಸಂ. ೫೬-೫೭, ವ. ೫)

೨. ಕಾಯಂದಿಯ (ಕಾಕಂದಿ) ಅಮಯಘೋಷನು ಮಗನಿಗೆ ರಾಜ್ಯವನ್ನು ಒಪ್ಪಿಸಿ ಆಗಮಗಳನ್ನು ಕಲಿತು ಜೈನ ಸಂನ್ಯಾಸಿಯಾಗಿ ಧರ್ಮವಿಹಾರವನ್ನು ಕೈಕೊಂಡು ಅನೇಕ ಪ್ರದೇಶಗಳಲ್ಲಿ ಸಂಚಾರಮಾಡಿ ತನ್ನ ಮುನ್ನಿನ ನಗರಕ್ಕೆ ಮರಳಿಬಂದಾಗ ಚಂಡವೇಗನು ಅವನ ದೇಹವನ್ನು ಕತ್ತರಿಸಿ ಹಾಕುತ್ತಾನೆ; ಆ ವೇದನೆಯನ್ನು ಸಹಿಸಿಕೊಂಡು ಆ ಮುನಿ ಸದ್ಗತಿಗೆ ಹೋದನು. (ಸಂ. ೭೬-೭೮ ; ವ. ೧೨)

೩. ಉಜ್ಜಯಿನಿಯ ಅವಂತಿ ಸುಕುಮಾಲನು ನಳಿನೀ ವಿಮಾನವೆಂಬ ಸ್ವರ್ಗದ ವ್ಯಾವರ್ಣನೆಯನ್ನು ಕೇಳಿ ಜಾತಿಸ್ಮರನಾಗಿ ಸಂನ್ಯಾಸ ಗ್ರಹಣಮಾಡಿ ಶ್ಮಶಾನದ ಏಕಾಂತ ಪ್ರದೇಶದಲ್ಲಿದ್ದ ಬಿದಿರು ಮೆಳೆಯ ಕೆಳಗೆ ತಪಸ್ಸಿನಲ್ಲಿ ಕುಳಿತುಕೊಂಡನು. ನರಿಯೊಂದು ಬಂದು ಅವನ ದೇಹವನ್ನು ಮೂರು ದಿವಸಗಳವರೆಗೆ ಅತ್ತ ಇತ್ತ ಎಳೆದಾಡಿ ಅವನನ್ನು ತಿಂದುಬಿಟ್ಟಿತು. ಈ ನೋವನ್ನೆಲ್ಲ ಅವನು ಸೈರಿಸಿ ಸದ್ಗತಿಗೆ ಸಂದನು. ಅವನು ಸತ್ತ ಎಡೆಯಲ್ಲಿ ದೇವತೆಗಳು ಸುರಿದ ಹೂಮಳೆಯಿಂದ ಸುವಾಸನಾಯುಕ್ತವಾದ ಗಂಧವತಿ

---

53 ಇವುಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳಿವೆ; ೫೦ ಗ್ರಂಥಗಳಿರುವಂತೆ ಕೆಲವೆಡೆ ಹೇಳಿದೆ. (*History of Indian Literature* p. 430)

54 ಪ್ರಕೀರ್ಣಕಗಳ ಸಂಖ್ಯೆ ಇಷ್ಟೇ ಎಂದು ನಿರ್ದಿಷ್ಟವಾಗಿಲ್ಲ. *History of Indian Literature*, (461)

55 ಬೃಹತ್ಕಥಾಕೋಶ *Introduction*, p. (26-29)

56 ಸಂ = ಸಂಥಾರಕ ಪಇಣ್ಣಾ, ಭ = ಭತ್ತ ಪರಿನ್ನಾ, ಮ = ಮರಣ ಸಮಾಹಿ, ವ = ವಡ್ಡಾರಾಧನೆ.

ಯೆಂಬ ಕೊಳವುಂಟಾಯಿತು. (ಭ. ೧೬೦, ಮ. ೪೩೫-೩೯, ಸಂ. ೬೫-೬೬, ವ. ೧)

೪. ಕುಣಾಳನಗರಕ್ಕೆ ರಾಜನಾದ ವೇಶವಮಣದಾಸನ ಬಳಿ ರಿಟ್ಠ ಎಂಬ ಮಂತ್ರಿ ಇದ್ದನು. ಅವನು ಪಂಡಿತನಾಗಿದ್ದನು. ವೃಷಭಸೇನರೆಂಬ ಋಷಿಯರೊಡನೆ ಅವನು ವಾದಮಾಡಿ ಸೋತನು. ಈ ಅವಮಾನವನ್ನು ತಾಳಲಾರದೆ ಅವನು ಆ ಋಷಿಯನ್ನು ಕಿಚ್ಚಿನಿಂದ ಸುಟ್ಟುಬಿಟ್ಟನು. ಆ ಮುನಿ ಈ ಬಾಧೆಯನ್ನು ಕ್ಷಮೆಯಿಂದ ಸೈರಿಸಿ ಸತ್ತು ಸದ್ಗತಿಗೆ ಸಂದನು. (ಸಂ. ೮೧-೮೪, ವ. ೧೯)

೫. ಅಗ್ಗಿ (ಅಗ್ನಿ) ರಾಜನ ಮಗನಾದ ಕತ್ತಿಯ (ಕಾರ್ತಿಕ) ಎಂಬ ಋಷಿ ಚರಿಗೆಗಾಗಿ ಸಂಚಾರಮಾಡುತ್ತ ರೋಹೇಡಯವೆಂಬ ನಗರಕ್ಕೆ ಬಂದನು. ಅಲ್ಲಿಗೆ ರಾಜನಾಗಿದ್ದ ಕುಂಚನು (ಕ್ರೌಂಚನು) ಅವನನ್ನು ಈಟಿಯಿಂದ ತಿವಿದನು. ಋಷಿ ಸಮಚಿತ್ತನಾಗಿ ವೇದನೆಯನ್ನು ಸೈರಿಸಿ ಉತ್ತಮ ಗತಿಯನ್ನು ಸಂಪಾದಿಸಿದನು. (ಸಂ. ೬೭-೬೯, ಭ. ೧೬೦ A, ವ. ೧೧)

೬. ಕುಂಭಾರ ಕಡ (ಕುಂಭಕಾರ ಘಟ) ವೆಂಬ ನಗರದಲ್ಲಿ ೫೦೦ ಜನ ಜೈನಯತಿಗಳಿದ್ದರು. ಅವರೆಲ್ಲರನ್ನು ಯಂತ್ರಕ್ಕೆ (ಗಾಣಕ್ಕೆ) ಹಾಕಿ ಅರೆದು ಹಿಂಡಿದ್ದರಿಂದ ಅವರು ಸತ್ತುಹೋದರು; ಅನೇಕ ಸ್ವರ್ಗಗಳಲ್ಲಿ ಅವರು ಜನ್ಮತಾಳಿದರು. (ಮ. ೪೪೩, ೪೯೫, ಸಂ. ೫೮-೬೦, ವ-೧೭)

೭. ಒದ್ದೆಯಾದ ತೊಗಲನ್ನು ನೆಲದಮೇಲೆ ಹರವಿ ಅದಕ್ಕೆ ಮೊಳೆಗಳನ್ನು ಹೊಡೆಯುವ ಹಾಗೆ ಗಜಕುಮಾರನೆಂಬ ಯತಿ[57] ಕೀಲುಗಳಿಂದ ಇರಿಯಲ್ಪಟ್ಟವನಾಗಿ ಸತ್ತು ಉತ್ತಮ ಗತಿಯನ್ನು ಪಡೆದುಕೊಂಡನು. (ಸಂ. ೮೭, ವ-೩)

೮. ಪಾಟಲೀಪುತ್ರದಲ್ಲಿ ಚಾಣಕ್ಯನೆಂಬವನಿದ್ದನು. ಅವನು ಇಂಗಿಣೀ ಮರಣದಿಂದ ಸತ್ತನು. ಅವನು ಶತ್ರುಗಳನ್ನು ಜಯಿಸಿ ಗೌರವಕ್ಕೆ ಆಸ್ಪದನಾಗಿದ್ದನು. ಅವನು ಆಕಳಹಟ್ಟಿಯಲ್ಲಿ ಪ್ರಾಯೋಪಗಮನದಲ್ಲಿದ್ದಾಗ ಕ್ರೂರನಾದ ಸುಬಂಧು (ಅಥವಾ ಸುಬುದ್ಧಿಯು) ಬೆರಣಿಯನ್ನು ಅವನ ಮೇಲೆ ಒಟ್ಟಿ ಕಿಚ್ಚಿಟ್ಟು ಕೊಂದನು. ಚಾಣಕ್ಯ ಸಮಚಿತ್ತನಾಗಿ ಸತ್ತು ಉತ್ತಮ ಗತಿಗೆ ಏರಿದನು. (ಭ. ೧೬೩, ಮ. ೪೭೮ ಸಂ. ೭೩-೭೫, ವ-೧೮)

---

[57] ಇಬ್ಬರೋ ಮೂವರೋ ಗಜಕುಮಾರರಿದ್ದಂತೆ ಕಾಣುತ್ತದೆ. ಒಬ್ಬನು ಈ ಕಥೆಯಲ್ಲಿ ಕಾಣುವವನು. ಇನ್ನೊಬ್ಬನು ಗಜಕುಮಾರ ಸಂನ್ಯಾಸವನ್ನು ಗ್ರಹಿಸಿ ಕಳಿಂಗನಾಡಿನ ದಂತಪುರಕ್ಕೆ ಬಂದು ಆ ಊರಿನ ಪಶ್ಚಿಮದ ಬೆಟ್ಟದಲ್ಲಿ ಪ್ರತಿಮಾಯೋಗದಲ್ಲಿ ನಿಂತುಕೊಂಡನು. ಬುದ್ಧದಾಸನೆಂಬವನು ಅವನು ನಿಂತ ಶಿಲೆಯನ್ನು ಕಿಚ್ಚಿನಿಂದ ಕೆಂಪಗೆಕಾಸಿದನು. ಋಷಿ ಆ ಯೋಗಪೀಠವನ್ನು ಹತ್ತಿ ಸುಟ್ಟುಹೋಗಿ ಸತ್ತು ಮೋಕ್ಷಕ್ಕೆ ಹೋದನು. (ವಡ್ಡಾರಾಧನೆ, ಗುರುದತ್ತ ಭಟ್ಟಾರರ ಕಥೆ, ಪುಟ ೧೫೯-೧೬೧) ಡಾ. ಆ. ನೇ. ಉಪಾಧ್ಯೆ ಅವರು ಕೊಟ್ಟಿರುವ ಕಥೆ ಹೀಗೆ: ಗಜಕುಮಾರನ ಮಾವನು ಅಳಿಯನನ್ನು ಸಜೀವವಾಗಿ ಶ್ಮಶಾನದಲ್ಲಿ ಸುಟ್ಟನು; ಅವನು ಆ ಹಿಂಸೆಯನ್ನು ಸೈರಿಸಿ ಸಮತೆಯಿಂದ ಸತ್ತನು. (ಮ. ೪೩೧-೩೨, ೪೯೨)

೯. ಚಿಲಾಇ ಪುತ್ತನು (ಚಿಲಾತಪುತ್ರ) ವೈರಾಗ್ಯಾದಿ ಗುಣಗಳಿಂದ ಕೂಡಿದ್ದ ಯತಿ ಪ್ರವರನು; ಅವನಿಗಾದ ಗಾಯಗಳಿಂದ ಸುರಿಯುತ್ತಿದ್ದ ರಕ್ತದ ವಾಸನೆಗೆ ಕಟ್ಟಿರುವೆಗಳು ಬಂದು ಮುತ್ತಿಕೊಂಡು ಅವನ ತಲೆಯನ್ನು ತೋಡಿ ತಿಂದುವು. ಅವನ ದೇಹ ಜನಲಿಯ ಹಾಗೆ ರಂಧ್ರಮಯವಾಯಿತು; ಈ ಯಾತನೆಯನ್ನೆಲ್ಲ ಅವನು ಸೈರಿಸಿಕೊಂಡು ಸತ್ತು ಸುಗತಿಗೆ ಹೋದನು. (ಭ. ೮೮, ಮ ೪೨೭-೩೦, ಸಂ. ೮೬, ವ. ೧೫)

೧೦. ಕನಕಪುರದ ರಾಜ ಹರಿವಾಹನ; ಅವನು ಪರಿವ್ರಾಜಕರಿಗೆ ಮಹಾಭಕ್ತ. ಅವನ ರಾಜಶ್ರೇಷ್ಠಿ ಜಿಣಧಮ್ಮ. ಆ ಊರಿಗೆ ಬಂದ ಒಬ್ಬ ಜೈನ ಯತಿ ಜಿಣಧರ್ಮನನ್ನು ನೋಡಿದಾಗ ಪೂರ್ವ ವೈರ ಸ್ಮರಣೆಗೆ ಬಂತು. ಜಿನಧರ್ಮನ ಬೆನ್ನಿನ ಮೇಲೆ ತಟ್ಟೆಯ ನ್ನಿಟ್ಟು ಬಿಸಿಬಿಸಿ ಪಾಯಸವನ್ನು ಬಡಿಸಿದರೆ ತಿನ್ನಲು ತನಗೆ ತುಂಬ ಇಷ್ಟವೆಂದು ಯತಿ ರಾಜನಿಗೆ ಹೇಳಿದನು. ರಾಜನು ಜಿಣಧಮ್ಮನ ಸಮ್ಮತಿಯಿಂದ ಹಾಗೆಯೇ ಮಾಡಿದನು. ತಟ್ಟೆಯನ್ನು ಎತ್ತಿದಾಗ ಜಿನಧಮ್ಮನ ಬೆಂದುಹೋದ ಬೆನ್ನ ತೊವಲೆಲ್ಲ ಕಿತ್ತು ಬಂದು ಗಾಯವಾಯಿತು. ಈ ಗಾಯವನ್ನು ಹಕ್ಕಿಗಳು ಕುಕ್ಕಿದುವು. ಹುಳು ತುಂಬಿಕೊಂಡಿತು. ಎರಡು ತಿಂಗಳ ಕಾಲ ಈ ನೋವನ್ನು ಜಿಣಧಮ್ಮ ಸೈರಿಸಿ ಮಡಿದನು. (ಮ. ೪೧೩-೪೯೩, ವ. ೨. ಸನತ್ಕುಮಾರಚಕ್ರವರ್ತಿಯ ಕಥೆ, ಪುಟ ೬೪-೬೫)

೧೧. ದಂಡ (ದಂಡಕ) ನೆಂಬ ಋಷಿ ಪ್ರತಿಮಾಯೋಗಸ್ಥಿತನಾಗಿದ್ದಾಗ ಬಾಣಗಳು ಬಂದು ಅವನ ಮೈಯಲ್ಲೆಲ್ಲ ನಾಟಿಕೊಳ್ಳುತ್ತವೆ. ಈ ವೇದನೆಯನ್ನು ಸೈರಿಸಿ ಅವನು ಉತ್ತಮ ಗತಿಗೆ ಸಂದನು. (ಮ. ೪೬೫, ಸಂ. ೬೧-೬೨, ವ. ೧೬)

೧೨. ಕೌಶಂಬಿಯ ಲಲಿಯ ಘಡಾ (ಲಲಿತಘಟೆ) ಎಂಬ ಸಂಘದ ಮೂವತ್ತೆರಡು ರಾಜಕುಮಾರರು ನದಿಯ ಪ್ರವಾಹದ ಸೆಳೆತಕ್ಕೆ ಸಿಕ್ಕಿ ಪ್ರಾಯೋಪಗಮನದಿಂದ ಸತ್ತು ಸುಗತಿಯನ್ನೈದಿದರು. (ಸಂ. ೭೯-೮೦, ಮ. ೪೮೦ ? ವ. ೭)

೧೩. ಸಣಂಕುಮಾರ (ಸನತ್ಕುಮಾರ) ನೆಂಬ ನಾಲ್ಕನೆಯ ಚಕ್ರವರ್ತಿ ೧೬ ಪ್ರಬಲ ರೋಗಗಳಿಂದ ಪೀಡಿತನಾಗಿ ೭೦೦೦ ವರ್ಷಗಳವರೆಗೆ ನರಳಿ ಸೈರಣೆಯಿಂದ ಸಮಾಧಿಗೆ ಸಂದನು. (ಮ. ೪೧೦-೧೧, ವ. ೪)

೧೪. ಸುಕೋಶಲ ಋಷಿ ಮುಗ್ಗಿಲ್ಲ ಗಿರಿಯ ಚಿತ್ತ ಕೂಡ (ಚಿತ್ರಕೂಟ) ದಲ್ಲಿ ತಪಸ್ಸು ಮಾಡುತ್ತಿದ್ದನು. ನಾಲ್ಕು ತಿಂಗಳು ಉಪವಾಸವಿದ್ದು ಪಾರಣೆಗಾಗಿ ಬೆಟ್ಟದಿಂದ ಇಳಿದು ಬರುತ್ತಿದ್ದ ಅವನನ್ನು ಒಂದು ಹುಲಿ, ಹಿಂದಿನ ಜನ್ಮದಲ್ಲಿ ಅವನ ತಾಯಿಯಾಗಿದ್ದದ್ದು, ಕಂಡು ಅವನ ಮೇಲೆ ಹಾರಿ ಅವನನ್ನು ಹರಿದು ತಿನ್ನುತ್ತದೆ. ಈ ಯಾತನೆಯನ್ನು ಅವನು ಸೈರಿಸಿ ಸತ್ತು ಸ್ವರ್ಗಕ್ಕೆ ಹೋದನು. (ಭ. ೧೬೧, ಮ.೪೬೬-೬೭, ಸಂ. ೬೩-೬೪, ವ. ೩)

ಪ್ರಕೀರ್ಣಕ ಗ್ರಂಥಗಳಲ್ಲಿ ದೊರೆಯುವ ದೃಷ್ಟಾಂತ ಕಥೆಗಳ ಸ್ವರೂಪ ಮೇಲಿನ ಕಥಾ ಸಂಗ್ರಹದಿಂದ ಸ್ವಲ್ಪ ಮಟ್ಟಿಗೆ ವಿಶದವಾಗಿದೆ. ಹೆಚ್ಚು ವಿವರಗಳಿಗೆ ಹೋಗದೆ ಅವು ಅತಿ ಸಂಕ್ಷಿಪ್ತವಾಗಿವೆ. ಇವುಗಳನ್ನು ಕೇಳಿದವರು ಪೂರ್ಣವಾಗಿ ಕಥೆಗಳನ್ನು ನೆನಪಿಗೆ ತಂದು ಕೊಳ್ಳಬಹುದಾಗಿತ್ತೆಂದು ಊಹಿಸಬಹುದು. ಜನರಲ್ಲಿ ಈ ಕಥೆಗಳು ಪ್ರಚಾರದಲ್ಲಿದ್ದು

ವೇನೋ? ಅವುಗಳ ಸಂಕ್ಷಿಪ್ತ ಸೂಚನೆಯಷ್ಟೇ ಸಾಕಾಗಿತ್ತೇನೊ? ಈ ಗ್ರಂಥಗಳ ಟೀಕಾಕಾರರು ಜನಪ್ರಿಯವಾಗಿದ್ದ ಕಥೆಗಳಿಗೆ ಶಾಶ್ವತ ರೂಪವನ್ನು ಕೊಟ್ಟಿರಬಹುದು. ಈ ಕಾರಣದಿಂದ ಈ ಕಥೆಗಳನ್ನು ಒಬ್ಬೊಬ್ಬ ಟೀಕಾಕಾರ ಒಂದೊಂದು ರೀತಿಯಲ್ಲಿ ಹೇಳಿರುವುದು ಕಾಣುತ್ತದೆ.

ದಿಗಂಬರ ಸಂಪ್ರದಾಯವು ಜೈನಾಗಮದ ಸುಮಾರು ೪೫ ಗ್ರಂಥ ಸಮೂಹವನ್ನು ತನಗೆ ಪ್ರಮಾಣಭೂತವೆಂದು ಅಂಗೀಕರಿಸಿಲ್ಲ. ಈ ಸಂಪ್ರದಾಯಕ್ಕೆ ಆಧಾರಭೂತವಾದ ಗ್ರಂಥ ಸಮುಚ್ಚಯವನ್ನು ಶ್ರುತಸ್ಕಂದವೆಂದು ಕರೆದಿದೆ; ಅನುಯೋಗ ಚತುಷ್ಟಯ ವೆಂದೂ ಇದರ ಹೆಸರು. ಪ್ರಥಮಾನುಯೋಗದಲ್ಲಿ ಪದ್ಮಪುರಾಣ, ಹರಿವಂಶ ಪುರಾಣ, ತ್ರಿಷಷ್ಟಿ ಲಕ್ಷಣ ಮಹಾಪುರಾಣ, ಉತ್ತರ ಪುರಾಣ—ಮುಂತಾದ ಜೈನ ಪೌರಾಣಿಕ ಗ್ರಂಥಗಳು ಸೇರಿವೆ. ಕರಣಾನುಯೋಗದಲ್ಲಿ ಸೂರ್ಯಪ್ರಜ್ಞಪ್ತಿ, ಚಂದ್ರಪ್ರಜ್ಞಪ್ತಿ, ಜಂಬೂದ್ವೀಪಪ್ರಜ್ಞಪ್ತಿ ಎಂಬ ಲೋಕಾಕಾರ ಕಥನಗ್ರಂಥಗಳೂ, ಜ್ಯೋತಿಷ್ಕ ಗ್ರಂಥ ಗಳೂ ಸಮಾವೇಶವಾಗಿವೆ. ದ್ರವ್ಯಾನುಯೋಗದಲ್ಲಿ ಕುಂಡ ಕುಂದಾಚಾರ್ಯರ ಕೃತಿಗಳು, ಉಮಾಸ್ವಾತಿಯ ತತ್ತ್ವಾಧಿಗಮ ಸೂತ್ರ ಮತ್ತು ಅದರ ವ್ಯಾಖ್ಯಾನಗಳು; ಸಮಂತ ಭದ್ರಾಚಾರ್ಯರ ಆಪ್ತಮೀಮಾಂಸಾ ಮತ್ತು ಅದರ ಮೇಲಿನ ವ್ಯಾಖ್ಯಾನಗಳು—ಈ ತತ್ತ್ವಗ್ರಂಥಗಳೆಲ್ಲ ಅಂತರ್ಗತವಾಗಿವೆ. ನಾಲ್ಕನೆಯದಾದ ಚರಣಾನುಯೋಗದಲ್ಲಿ ಜೈನಾ ಚಾರಕ್ಕೆ ಸಂಬಂಧಿಸಿದ ಗ್ರಂಥಗಳು ಸೇರಿವೆ; ಇವುಗಳಲ್ಲಿ ಪ್ರಮುಖವಾದುವು ವಟ್ಟ ಕೇರಸ್ವಾಮಿಯ ಮೂಲಾಚಾರ, ತ್ರಿವರ್ಣಾಚಾರಗಳು ಮತ್ತು ಸಮಂತಭದ್ರ ಸ್ವಾಮಿ ಯ ರತ್ನ ಕರಂಡಕ ಶ್ರಾವಕಾಚಾರ. ಇಲ್ಲಿರುವ ಗ್ರಂಥಗಳಲ್ಲಿ ಕೆಲವು, ಎಂದರೆ ಪ್ರಥಮಾನು ಯೋಗಕ್ಕೆ ಸೇರಿದುವು, ಅರ್ವಾಚೀನ ಕಾಲದ ರಚನೆಗಳೆಂಬುದನ್ನು ಗಮನಿಸಬಹುದು.

ಶ್ವೇತಾಂಬರಾಗಮಕ್ಕೆ ಈಗಿರುವ ಸ್ವರೂಪ ಉಂಟಾದದ್ದು ಸು. ಕ್ರಿ. ಶ. ೪೫೪ ರಲ್ಲಿ ಗುಜರಾತಿನ ವಲಭಿ ನಗರದಲ್ಲಿ; ದೇವರ್ಧಿಕ್ಷಮಾ ಶ್ರಮಣನೆಂಬ ಆಚಾರ್ಯನ ಅಧ್ಯಕ್ಷತೆ ಯಲ್ಲಿ ಈ ಆಗಮ ಸಂಕಲನ ವ್ಯವಸ್ಥೆ ಆಯಿತು. ಈ ಕಾಲಕ್ಕೆ ಹಿಂದೆಯೇ ಎಂದರೆ ಕ್ರಿ.ಶ. ಆದಿಶತಮಾನಗಳಲ್ಲಿ ದಿಗಂಬರಾಚಾರ್ಯರಿದ್ದರು; ಅವರಿಂದ ರಚಿತವಾದ ಗ್ರಂಥ ಸಮುದಾಯವೂ ಇದ್ದಿತು. ಶ್ರೀಧರಸೇನ, ಗುಣಧರ, ಭೂತಬಲಿ, ಪುಷ್ಪದಂತ, ಯತಿ ವೃಷಭ, ಕುಂಡ ಕುಂದ, ಉಮಾಸ್ವಾತಿ, ವಟ್ಟಕೇರ, ಶಿವಾರ್ಯ—ಈ ದಿಗಂಬರಾಚಾರ್ಯರು ಗಳಿಗೆ ದೊರೆತಿದ್ದ ಶ್ವೇತಾಂಬರಾಗಮದ ಸ್ವರೂಪವನ್ನು ಈಗ ಹೇಳುವುದಾಗದಿದ್ದರೂ ಅದು ಕ್ರಿ. ಶ. ೪೫೪ ಕ್ಕಿಂತ ಪ್ರಾಚೀನವೆಂದು ಹೇಳಬಹುದಾಗಿದೆ. ಅದರ ಪ್ರಭಾವ ಈ ಆಚಾರ್ಯರುಗಳ ಕೃತಿಗಳ ಮೇಲೆ ಆಗಿರುವುದು ಸ್ವಾಭಾವಿಕ. ಹಿಂದೆ ಹೇಳಿರುವ ಕೆಲವು ಪ್ರಕೀರ್ಣಕಗಳಲ್ಲೂ, ಶಿವಾರ್ಯನ ಮೂಲಾರಾಧನೆಯಲ್ಲೂ ದೊರೆಯುವ ಕೆಲವು ದೃಷ್ಟಾಂತ ಕಥೆಗಳಲ್ಲಿ ಸಮಾನವಾದ ಹೆಸರುಗಳಿವೆಯಲ್ಲದೆ ಆ ಗಾಹೆಗಳು ಕೂಡ ಅಲ್ಪ ಪಾಠಬೇಧಗಳಿದ್ದರೂ ಸಮನಾಗಿವೆ.[58] ವಟ್ಟಕೇರನ ಮೂಲಾಚಾರವು ಸ್ವಶಿಷ್ಯಬೋಧ

[58] ಬೃಹತ್ಕಥಾಕೋಶ, Introduction 34

ನಾರ್ಥವಾಗಿ ರಚಿತವಾದುದೆಂದೂ ಅದು ದ್ವಾದಶಾಂಗಗಳಲ್ಲಿ ಮೊದಲನೆಯದಾದ ಆಚಾರಾಂಗದ ಸಂಕ್ಷಿಪ್ತ ರೂಪವುಳ್ಳುದೆಂದೂ ತಿಳಿದುಬರುತ್ತದೆ.[59] ಕುಂಡಕುಂದಾಚಾರ್ಯರ ಗ್ರಂಥಗಳಲ್ಲೂ ಜೈನಾಗಮಿಕ ಪ್ರಭಾವ ಪ್ರವೇಶಿಸಿರಬಹುದು. ಯತಿವೃಷಭನ 'ತ್ರೈಲೋಕ ಪ್ರಜ್ಞಪ್ತಿ'ಯೆಂಬ ಗ್ರಂಥಕ್ಕೆ ೫, ೬ ಮತ್ತು ೭ನೆಯ ಉಪಾಂಗಗಳಿಂದ ಸಹಾಯವಾಗಿರಬಹುದು. ಶ್ವೇತಾಂಬರ ದೃಷ್ಟಿಯಲ್ಲಿ ನಷ್ಟವಾಗಿರುವ ದಿಟ್ಟಿವಾಯಾಂಗವೆಂಬ ಹನ್ನೆರಡನೆಯ ಅಂಗ ಗ್ರಂಥದ ಕೆಲವು ಭಾಗಗಳು ಭೂತಬಲಿ, ಪುಷ್ಪದಂತರ ಕೃತಿಗಳಲ್ಲಿ ಸೇರಿಕೊಂಡಿವೆ.[60] ಉಮಾಸ್ವಾತಿಯು ತತ್ವಾರ್ಥ ಸೂತ್ರವಂತೂ ಉಭಯವರ್ಗದವರಿಂದಲೂ ಆದೃತವಾಗಿದೆ. ಆದ್ದರಿಂದ ಈ ಗ್ರಂಥಸಮೂಹ ೧ ನೆಯ ಶತಮಾನದ ಜೈನಾಗಮಕ್ಕೂ, ಈಚಿನ ಶ್ರುತಸ್ಕಂದಕ್ಕೂ ಮಧ್ಯವರ್ತಿಯಾಗಿದ್ದು ಅಧಿಕ ವಿಶ್ವಸನೀಯವಾದುದೆಂದು ಹೇಳಬಹುದು; ಅಥವಾ ಉಭಯ ಸಂಪ್ರದಾಯಗಳಿಗೂ ಒಂದೇ ಮೂಲವಿದ್ದಿರಬಹುದು. ಭಗವತೀ ಆರಾಧನಾ, ಮೂಲಾಚಾರ—ಇವೇ ಮುಂತಾದ ಈ ಗುಂಪಿನ ಗ್ರಂಥಗಳಲ್ಲಿರುವ ದೃಷ್ಟಾಂತ ಕಥಾಗಾಹೆಗಳು ಪರಮ ಪ್ರಾಚೀನವಾಗಿರುವವಲ್ಲದೆ ಈಚಿನ ಎಲ್ಲ ಆರಾಧನಾ ಕಥಾಕೋಶಗಳಿಗೂ ಬೀಜರೂಪವಾಗಿವೆ. ವಡ್ಡಾರಾಧನೆಯ ಕಥೆಗಳ ಆರಂಭದಲ್ಲಿರುವ ೧೯ ಗಾಹೆಗಳು ಭಗವತೀ ಆರಾಧನಾ ಗ್ರಂಥದಲ್ಲಿ ಇರುವುವೇ ಆಗಿವೆ[61]. ಒಂದೇ ಕ್ರಮದಲ್ಲಿ ಕಥೆಗಳು ಬರುತ್ತವೆ.

ಈ ಮೂಲದಲ್ಲಿರುವ ಕಥೆಗಳು ಒಂದೊಂದೇ ಗಾಹೆಯಲ್ಲಿ ನಿರೂಪಿತವಾಗಿವೆ. ಅವು ಅತಿ ಸಂಕ್ಷಿಪ್ತವಾಗಿವೆ; ಕಥೆಗಳ ಯಾವ ವಿವರಗಳೂ ಅಲ್ಲಿ ದೊರೆಯುವುದಿಲ್ಲ. ಹರಿಷೇಣನೂ ಕೋಗಳಿಯ ಶಿವಕೋಟಿಯೂ ಈ ಕಥೆಗಳನ್ನು ಸವಿಸ್ತಾರವಾಗಿಯೂ ಸಾಲಂಕಾರವಾಗಿಯೂ ನಿರೂಪಿಸಿದ್ದಾರೆ. ಹರಿಷೇಣನಿಗಿಂತ ಶಿವಕೋಟಯು ಹೆಚ್ಚು ವಿವರಗಳನ್ನು ಕೊಡುತ್ತಾನೆ. ಹರಿಷೇಣನು 'ಅಭಿನಂದನ ಮುನಿಕಥಾನಕ'ವನ್ನು ಅತಿ ಸಂಗ್ರಹವಾಗಿ ೮ ಶ್ಲೋಕಗಳಲ್ಲಿ ಯಾವ ವರ್ಣನೆಗೂ ಹೋಗದೆ ಸುದ್ದಿಯನ್ನು ತಿಳಿಸುವ ವರದಿಗಾರನಂತೆ ಹೇಳಿದ್ದಾನೆ. ಇದೇ ಕಥೆ 'ವಡ್ಡಾರಾಧನೆ'ಯಲ್ಲಿ "ಮಹೇಂದ್ರದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ ಕಥೆ" ಎಂಬ ಹೆಸರಿನಿಂದ ಸಪರಿಕವಾಗಿ, ಸರಸವಾಗಿ, ಕುತೂಹಲಕಾರಕವಾಗಿ ಹೃದ್ಯವಾದ ಗದ್ಯದಲ್ಲಿ ಐದು ಪುಟಗಳಲ್ಲಿ ನಿರೂಪಿತವಾಗಿದೆ. ಆದ್ದರಿಂದ ಈ ಇಬ್ಬರು ಕವಿಗಳು ತಮಗೆ ಸಿಕ್ಕ ಮೂಲ ಸಾಮಗ್ರಿಯನ್ನು ತಮಗೆ ಇಷ್ಟಬಂದ ಹಾಗೆ ಬಳಸಿಕೊಂಡಿದ್ದಾರೆಂದು ಭಾವಿಸಬಹುದು. ಇವರಿಬ್ಬರಿಗೆ ಸಮಾನ ಮೂಲವೊಂದು ಇದ್ದಿತೆಂದೂ ಅದು 'ಭಗವತೀ ಆರಾಧನಾ' ಗ್ರಂಥಕ್ಕೆ ಇದ್ದಿರಬಹುದಾದ ಯಾವುದೋ ಪ್ರಾಕೃತ ವ್ಯಾಖ್ಯಾನವೆಂದೂ ಡಾ. ಆ. ನೇ. ಉಪಾಧ್ಯೆಯವರು ಕೆಲವು ಆಧಾರಗಳ ಮೇಲೆ ಊಹಿಸಿದ್ದಾರೆ. ಇದು ಅತ್ಯಂತ ಸಂಭವ

59 *History of Indian Literature*, II, p. 577

60 *The Jaina Sources of the History of Ancient India*, p. 109

61 ಈ ವಿಷಯವನ್ನು ಮೊದಲು ಕಂಡುಹಿಡಿದವರು ಡಾ. ಆ. ನೇ. ಉಪಾಧ್ಯೆಯವರು.

ನೀಯವೆಂದೂ ಪರಿಗ್ರಾಹ್ಯ ಯೋಗ್ಯವೆಂದೂ ತೋರುತ್ತದೆ. ಈ ಮೂಲದಲ್ಲಿ ಒಂದೊಂದು ಗಾಹೆಯಲ್ಲೇ ಸೂಚಿತವಾಗಿದ್ದ ಕಥೆಗಳನ್ನು ವ್ಯಾಖ್ಯಾನದಲ್ಲಿ ವಿಸ್ತರಿಸಿ ನಿರೂಪಣೆ ಮಾಡಿದ್ದಿತೆಂದು ಹೇಳಬಹುದು. ಈ ವಿಸ್ತೃತ ಕಥೆಗಳನ್ನು ಕವಿಯ ದೃಷ್ಟಿಯಿಂದ ಹರಿಷೇಣನೂ ಶಿವಕೋಟಿಯೂ ನೋಡಿ ಅವುಗಳ ನಿರೂಪಣೆಯಲ್ಲಿ ತನ್ನ ಕೌಶಲವನ್ನೂ ಪ್ರತಿಭೆಯನ್ನೂ ಪ್ರಕಾಶಪಡಿಸಿರುವರೆಂದು ತಿಳಿಯಬಹುದು. 'ವಡ್ಡಾರಾಧನೆ'ಯನ್ನು ಸಾಹಿತ್ಯದೃಷ್ಟಿಯಿಂದ ವಿಮರ್ಶೆಮಾಡುವಾಗ ಅದರ ಕವಿಗೆ ದೊರೆತಿದ್ದ ಮೂಲ ಸಾಮಗ್ರಿಯ ಸ್ವರೂಪವೆಂಥದೆಂಬುದು ಖಚಿತವಾಗಿ ತಿಳಿದುಬಂದಿದ್ದರೆ ವಿಮರ್ಶಕನಿಗೆ ತುಂಬ ಸಹಾಯವಾಗುತ್ತಿತ್ತು. ಅವನು ಸ್ವೀಕರಿಸಿದ್ದೇನು, ಬಿಟ್ಟದ್ದೇನು, ಹೊಸದಾಗಿ ಸೇರಿಸಿದ್ದೇನು, ಮಾಡಿಕೊಂಡ ಮಾರ್ಪಾಟುಗಳೇನು—ಇವನ್ನೆಲ್ಲಾ ವಿಶ್ಲೇಷಣಮಾಡಿ ಸಾಹಿತ್ಯದೃಷ್ಟಿಯಿಂದ ಕೃತಿಯ ಮೌಲ್ಯವನ್ನು ಒರೆಯಿಟ್ಟು ನಿರ್ಣಯಿಸಬಹುದಾಗಿತ್ತು. ಆ ಅವಕಾಶ ಈಗ ಇಲ್ಲ. ಆದರೂ ಹರಿಷೇಣನ ಕಥೆಗಳನ್ನೂ ವಡ್ಡಾರಾಧನೆಯ ಕಥೆಗಳನ್ನೂ ತೋಲನಾತ್ಮಕವಾಗಿ ವಿಮರ್ಶಿಸುವುದು ಈ ದೃಷ್ಟಿಯಿಂದ ಲಾಭದಾಯಕವಾದದ್ದು. 'ವಡ್ಡಾರಾಧನೆ'ಯ ನಿರೂಪಣೆ, ಸಂನಿವೇಶ ನಿರ್ಮಾಣ, ಪಾತ್ರರಚನೆ, ರಸಾವಿಷ್ಕರಣ, ಗದ್ಯದ ರಮಣೀಯತೆ, ವಾಕ್ಯಗಳ ವೈವಿಧ್ಯ, ಧ್ವನಿ—ಇವೆಲ್ಲ ಹರಿಷೇಣನ ಕೃತಿಯಲ್ಲಿರುವುದಕ್ಕಿಂತ ಅಧಿಕ ಪ್ರಮಾಣದಲ್ಲೂ ಗುಣದಲ್ಲೂ 'ವಡ್ಡಾರಾಧನೆ'ಯಲ್ಲಿ ಇವೆಯೆಂದು ಸ್ಥಾಪಿಸಲು ಸಾಧ್ಯವಾಗುತ್ತದೆ. ಈ ತೋಲನಾತ್ಮಕ ದೃಷ್ಟಿಯಿಂದಲೇ ಈ ಕೃತಿಯ ಮೌಲ್ಯವಿಚಾರ ನಡೆಯಬೇಕಾಗಿದೆ.

ಶಿವಕೋಟ್ಯಾಚಾರ್ಯ

ವಿರಚಿತ

# ವಡ್ಡಾರಾಧನೆ

# ವಡ್ಡಾರಾಧನೆ

## ಪೀಠಿಕೆ

ನಮಃ ಶ್ರೀ ವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ ।
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ ॥*

[1]ಶ್ರೀ ವೀರವರ್ಧಮಾನ ಭಟ್ಟಾರಕರ್ಗೆ[1] ನಮಸ್ಕಾರಂ ಗೆಯ್ದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗ[2]ಮ[2]ಚೇತನೋಪಸರ್ಗಮೆಂದಿಂತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಬಿಸ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳು[3]ಮಂ[3] ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗಳ್ದು ಪ್ರಾಯೋಪಗಮ[4]ನದಿಂ[4] ಸಂನ್ಯಸನಂ ಗೆಯ್ದು ಕರ್ಮಕ್ಷಯಂ ಗೆಯ್ದು ಮೋಕ್ಷಕ್ಕೆ ಪೋದ[5] ಮತ್ತಂ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಕಳ ಕಥೆಗಳಂ ಪೇೞ್ವಲ್ಲಿ ಮು[6]ನ್ನಂ[6] ಸುಕುಮಾರಸ್ವಾಮಿಯ ಕಥೆಯಂ ಪೇೞ್ವೆಂ.

## (೧) ಸುಕುಮಾರ ಸ್ವಾಮಿಯ ಕಥೆ

ಗಾಹೆ ॥ ಭಲ್ಲುಕ್ಕಿಯೇಣ ಣಿಚ್ಚಂ ಖಜ್ಜಂತೋ ಘೋರವೇದಣಕ್ಕೋಪಿ ।
ಆರಾಧಣಂ ಪ[7]ವಣ್ಣೋ ಝಾಣೇಣ ಅವಂತಿ ಸುಕುಮಾರೋ ॥

---

* (ಘಚಛ) ಪ್ರತಿಗಳಲ್ಲಿ ಕೆಳಗೆ ಕಾಣಿಸಿರುವ ಗಾಹೆಯೊಂದು ಆರಂಭದಲ್ಲಿದೆ:

ತಿಳೋಯ ಸಬ್ಬಜೀವಾಣಂ ಹಿಯಂ ಧಮ್ಮೋವದೇಸಿಣಂ ।
ವಡ್ಢಮಾಣಂ ಮಹಾವೀರಂ ವಂದಿತ್ತಾ ಸಬ್ಬವೇಇಣಂ ॥

ಇದಕ್ಕಿಂತ ಹಿಂದೆ ಚ. ಪ್ರತಿಯಲ್ಲಿ ಇನ್ನೂ ಎರಡು ಗಾಹೆಗಳಿರುವಂತಿವೆ; ಆದರೆ ಆ ಭಾಗ ತ್ರುಟಿತ. ಕೊಲ್ಲಾಪುರದ ಪ್ರತಿಯಲ್ಲಿ (ಜ) ಈ ಗಾಹೆಯ ಹಿಂದೆ ಕೆಳಗಿನ ಎರಡು ಗಾಹೆಗಳಿವೆ:

ಯಿಂದ ಸಯ ವಂದಿಯಾಣಂ ತಿಹುವಣಹಿಯ ಮಹುರ ವಿಸದ ವಕ್ಖಾಣಂ ।
ಅಂತಾತಿಧ ಗುಣಾಣಂ ಣಮೋ ಜಿಣಾಣಂ ಜಿದ ಭವಾಣಂ ॥
ಯೇಸ ಸುರಾಸುರ ಮಣುಸಿಂದವಂದಿಯಂ ಧೋದ ಘಾಯಿ ಕಂಮಮಳಂ
ಪಣಮಾಮಿ ವಡ್ಢಮಾಣಂ ತಿಚ್ಛಂದಯಸ್ಸ ಕತ್ತಾರಂ ॥

[1] ಎಂದಿಂತು ಶ್ರೀ ವರ್ಧಮಾನ ಭಟ್ಟಾರಕರ್ಗೆ (-ಸ್ವಾಮಿಗಳ್ಗೆ-ಛ) ತ್ರಿಕರಣಶುದ್ಧಿಯಿಂದಂ (ಘಚಛಜ). [2] (ಕಖಗ) ಗಳಲ್ಲಿಲ್ಲ. [3] ಗಳಂ (ಕಖಗ). [4] ಗಮನಂ (ಘಚಛ), ನಂಗೆಯ್ದು (ಜ). [5] + ರ್ (ಕಖಗ, ಚಛಘ). [6] ನ್ನ (ಕಖಗ). [7] + ಡಿ (ಘಚಛಜ).

[ಭಲ್ಲುಕ್ಕಿಯೇಣ—ಮುನ್ನಿನ [1]ಜನ್ಮಾಂತರ[1]ದತ್ತಿಗೆಯಪ್ಪ ಪೆಣ್ಣರಿಯಿಂದಂ, ಣಿಜ್ಜಂ ಖಜ್ಜಂತೋ—ಮೂಱುದಿವ[2]ಸಂ ನಿರಂತರ[2]ಮಿರುಳುಂ ಪಗಲುಂ ತಿನೆಪಡುತಿ[3]ದೊ[3]ನಾಗಿ[4]ಯುಂ[4], ಘೋರವೇದಣತ್ತೋಪಿ—ಕಡಿದಪ್ಪ ವೇದನೆಯಿಂದಂ ಬ[5]ಟ್ಟ್ದು[5]ದೊನಾಗಿಯುಂ, [6]ಆರಾಧಣಂ—ಸಮ್ಯಗ್ದರ್ಶನ ಚಾರಿತ್ರಾತ್ಮಕಮಪ್ಪಾರಾಧನೆಯಂ[6], ಝಾಣೇಣ—ಉತ್ತಮಧ್ಯಾನದಿಂದಂ, ಅವಂತಿ ಸುಕುಮಾರೋ—ಅವಂತಿಯೆಂಬ ಸುಕುಮಾರಸ್ವಾಮಿ, ಪವಣ್ಣೋ—ಪೊ[7]ರ್ದ್ದಿದೊಂ[7]]

ಅದೆಂತೆಂದೊಡೆ—

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಸಂಬಿಯೆಂಬುದು ಪೊೞಲದನಾಳ್ವೊನತಿಬಳನೆಂ[8]ಬರಸನಾ[8]ತನ ಮಹಾದೇವಿ ಮನೋಹರಿಯೆಂಬೊಳ್ [9]ಪೆಸರ್ಗೆ ತಕ್ಕಂತೆ ನೋಡಿದರೆಲ್ಲರ್ಗಳ ಕಣ್ಣಾಲಿಗೆ ಸೊಗಯಿಸುವಳ್ ಸತ್ಯ ಶೌಚಾಚಾರಂಗಳಿಂ ಕೂಡಿದೊಳ್ ಅತ್ಯಂತ ರೂಪ[9]ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯಳಂತವರ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರೆ [10]ಮತ್ತಾ ಅರಸನ ಮಂತ್ರಿ ಸೋಮಶರ್ಮನೆಂಬೊನಾ[10]ತನ ಭಾರ್ಯೆ ಕಾಶ್ಯಪಿಯೆಂಬೊಳ್ ಇರ್ವರ್ಗ್ಗಂ ಮಕ್ಕಳಗ್ನಿಭೂತಿ ವಾಯುಭೂತಿ[11]ಯೆಂಬ[11]ವರ್ಗಳ್ ತಾಯ್ತಂದೆವಿರ [12]ಕೇಳ್ವಿ[12]ಯಂ ಗೆಯ್ಯದಾ ವೇದಂ ಮೊದಲಾಗೊಡೆಯ [13]ಶಾಸ್ತ್ರಂಗಳನೋದದೆ ತಂದೆ[13] ಪಡೆದ ಕ[14]ಸ[14]ವರವಂ [15]ಬಿಯಂ[15]ಗೆಯ್ಯುತ್ತುಂ ಸಪ್ತವ್ಯಸನಾಭಿಭೂತರಾಗಿ ನೆಗೞುತ್ತಿರೆ[16]ಯಿರೆ[16] ಪಲ ಕಾಲದಿಂ ತಂದೆ ಕೞಿದೊಡೆ ಸೋಮಶರ್ಮ್ಮಂಗೆ ಮಕ್ಕ[17]ಳೊಳರಿಲ್ಲೆಂ[17]ದರಸಂ ಬೆಸಗೊಂಡೊಡೋಳರೆಂದು ಪೇೞ್ದೊಡವರ್ಗ್ಗೆ ಬೞಿಯ[18]ಟ್ಟೆ[18] ವರಿಸಿ ಮಜ್ಜ[19]ನದೊಳ್ ಮಿಸಿಸಿ[19] ಉಡಿಸಿ ತುಡಿಸಿ [20]ಯೂಡಿ[20] ತಂಬುಲಂಗೊಟ್ಟುಬೆಸಗಂಬಡದಿರಿಮೆಂದು ನುಡಿದವರ್ಗ್ಗಳ್[21]ದುಃಖಮುನಾಱಿಸಿ ಬೀಡಿಂಗೆ ಪೋಗಲ್ವೇೞ್ದು ಕೆಲ[21]ವು ದಿವಸದಿಂ ಬೞಿಯ[22]ಟ್ಟೆ ವರಿಸಿ ನೀ[23]ವಾ[23]ವೋದುಗಳಂ ಬಲ್ಲಿರೆಂದಿರ್ವರುಮಂ ಬೆಸಗೊಂಡೊಡವರ್ಗ್ಗಳ್ ತಲೆಯಂ ಬಾಗಿ ಮಱುಮಾತು[24]ಗುಡದೆ ಕಣ್ಣನೀರಂ ತೀವಿ[24] ನೆಲನಂ ಬರೆಯುತ್ತಿರೆ ಸಭೆಯೊಳಿರ್ದ್ದವರ್ಗ್ಗಳೆಲ್ಲಂ—ಇವರ್ ಮೂರ್ಖರೇನುಮೋದುಗಳನಱಿಯರ್ ಸಪ್ತವ್ಯಸನಾಭಿಭೂತರೆಂದರಸಂಗೆ ಪೇೞ್ದೊಡರಸನ[25]ವರ್ಗಳನಟ್ಟಿ ಕಳೆದವರ ದಾಯಿಗಂ ಶಾಸ್ತ್ರಂಗಳಂ ಬಲ್ಲೊಂಗಂ ಮಂತ್ರಿ[25]ಪದವಿಯಂ ಬಾೞುಮಂ ಪ್ರತಿಪತ್ತಿಯುಮಂ ಕೊಟ್ಟುದಂ ಕೇಳ್ದಿರ್ವರುಮುಬ್ಬೆಗಂಬಟ್ಟು ವೈರಾಗ್ಯಪ[26]ರಾಯಣ[26]ರಾಗಿ

---

[1] ಭವ (ಘುಚಭಜ). [2] ಸ (ಘುಚಭಜ). [3] ದರ್ (ಘುಚಭಜ). [4] (ಘುಚಭಜ) ಗಳಲ್ಲಿಲ್ಲ. [5] ದ್ದಿ (ಘುಭಚಜ). [6] (ಕಖಗ) ಗಳಲ್ಲಿಲ್ಲ. [7] ಳ್ದಿದೊಂ (ಕಖಗ), ದ್ದಿದನಾದೊಂ (ಘುಚಭಜ). [8] ಬೊನಾ (ಘುಭಜ). [9] (ಕಗ) ಗಳಲ್ಲಿ ತ್ರುಟಿತ. [10] (ಕಗ) ಗಳಲ್ಲಿ ತ್ರುಟಿತ. [11] ಯುಮೆಂಬೊರ (ಘುಭಜ). [12] ಕಲ್ವಿ (ಘುಭಜ). [13] (ಕಗ) ಗಳಲ್ಲಿ ತ್ರುಟಿತ. [14] ಡ (ಸಗಘು). [15] (ಕಗ) ಗಳಲ್ಲಿ ತ್ರುಟಿತ. [16] (ಘುಭಜ) ಗಳಲ್ಲಿಲ್ಲ. [17] ಳಿಲ್ಲೆಂ (ಗ), (ಕಖ) ಗಳಲ್ಲಿ ತ್ರುಟಿತ. [18] + ನ (ಘುಭಜ). [19] ನಂ ಮಾಡಿಸಿ (ಕಗ). [20] ಭೋಜನಾನಂತರ (ಚ). [21] (ಕಗ) ಗಳಲ್ಲಿ ತ್ರುಟಿತ. [22] + ನ (ಘುಚಜ). [23] ಯಾ (ಜ). [24] ಗಾಣದೆ ನೀಡುಂ ನೋಡಿ (ಘುಭಜ), ಗುಡದೆ ಕಣ್ಣೊಳ್ ನೀರದುಂಬಿ (ಗ), (ಕ) ದಲ್ಲಿ ತ್ರುಟಿತ. [25] (ಕಗ) ಗಳಲ್ಲಿ ತ್ರುಟಿತ. [26] ರ (ಘುಚಜ).

ಕಪ್ಪಡಮುಟ್ಟು [1]ಬೈಕಂದಿರಿದಿನ್ನಪ್ಪೊಡಮೋದುವಮೆಂದು ತಾಯ್ಗೆ ನುಡಿಮೊಡಂ ತಪ್ಪೊಡೆ ಮಕ್ಕಳಿರಾ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬುದು ಪೊೞಲದ ನಾಳ್ವೊಂ ಸುಬಲನೆಂಬರಸನಾತನ ಮಹಾದೇವಿ ಸುಪ್ರಭೆಯೆಂಬೊಳವರ್ಗ್ಗೆ[1] ಮಂತ್ರಿಯೆಮ್ಮಣ್ಣಂ ಸೂರ್ಯಮಿತ್ರನೆಂಬೊಂ ಎಲ್ಲಾ ಓದುಗಳುಮಂ ಬಲ್ಲೊನಾತಂ ನಿಮ್ಮನೋದಿಸಿ ಯೋಗ್ಯರಂ ಮಾಡುವಂತಿರೆ [2]ನಿರೂಪಿಸಿ[2] ಕಲ್ಪಿಸಿಯೋಲೆಯುಂ ಬರೆಯಿಸಿ ನಿಮ್ಮ ಕಯ್ಯೊಳ[3]ಟ್ಟಿದಪೆಂ[3] ನೀಮುಂ ಪೋಗಿ ನಿಮ್ಮ ಮಾವನ ಪಕ್ಕದೊಳೋದಿಮೆಂದೋಲೆಯುಂ ಬರೆಯಿಸಿ ಕೊಟ್ಟೊಡವರ್ಗ್ಗಳುಂ ತಾಯುಂ ಬೀೞ್ಕೊಂಡು ಕತಿಪಯ ದಿವಸಂಗಳಿಂ ರಾಜಗೃಹಮನೆಯ್ದಿ ಸೂರ್ಯಮಿತ್ರ[4]ನ ಮನೆಯುಂ ಬೆಸಗೊಂಡು[4] ಪೋಗಿ ಕಂಡೋಲೆಯನಿಕ್ಕಿದೊಡೆ ಸೂರ್ಯಮಿತ್ರನೆಲ್ಲಿಂ ಬಂದಿರಾರೋಲೆಯೆಂದು ಬೆಸಗೊಂಡೊಡೆ—ಕೌಸಂಬಿಯಿಂ ಬಂದೆವು ನಿಮ್ಮ ತಂಗೆಯಪ್ಪ ಕಾಶ್ಯಪಿಯಟ್ಟಿ[5]ದೋಲೆಯೆಂದೊಡೋ[5]ಲೆಯುಂ ಬಾ[6]ಜಿ[6]ಸಿ ನೋಡಿ ಸೋಮಶರ್ಮಂ ಕೞಿದುದುಮಂ ಮಂತ್ರಿಪದವಿ ಪೆಱ[7]ಗ್ಗಾ[7]ದುದುಮಂ ಮಕ್ಕಳ್ ಸಪ್ತವ್ಯಸನಾಭಿಭೂತರಾಗಿ ಬಾೞಿಂ ಕೆಟ್ಟುದುಮಂ ಶಾಸ್ತ್ರಜ್ಞರುಂ ಬುದ್ಧಿಯೊಡೆಯರುಂ ಯೋಗ್ಯರುಮಪ್ಪಂತು ಮಾಡಿಮೆಂದು ಮಕ್ಕಳಂ ತನ[8]ಗಿನಿತೊಪ್ಪಿಸಿ[8]ಯಟ್ಟಿದುದುಮನಿಂತಿವೆಲ್ಲಮಂ ಬಾ[9]ಜಿ[9]ಸಿ ನೋಡಿ—[10]ಇವಂದಿರ್ಗ್ಗೆ[10] ಪಸರಂಗೊಟ್ಟಿನಪ್ಪೊಡೆ ಮುನ್ನಿನಂತುಕ್ಕಿ ಕಿಡುವರೆಂದು ಮನದೆ ಬಗೆದಗ್ನಿಭೂತಿ ವಾಯುಭೂತಿಗಳ್ಗಿಂತೆಂದಂ—ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮ್ಮನೆಂಬೊಂ ಮಯ್ದುನನುಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆನೆಂದವರ್ಗ್ಗೆ ನುಡಿದುಂ[11]ಮತ್ತಮಿಂತೆಂದಂ ನೀಮಾಗ್ಗಾರಾದೊಡಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬೞ್ತಿಯೊಳ್ ಬಂದಿರಪ್ಪೊಡೆ ಬೈಕಂದಿರಿದು ಕಪ್ಪಡಮುಟ್ಟಿರುಳುಂ ಪಗಲುಮುಲಸದೆ ನಿರ್ಬಂಧದಿಂದೋದಲಾಪೊ೯ಡೆ ನಿಮ್ಮನೋದಿಸಲಕ್ಕುಮೆಂದೊಡವ[12]ಗ್ಗಳುಮಿಂ ದಯೆಗೆಯ್ಯಿಂ[12] ಮಹಾಪ್ರಸಾದಮೆಂದು ಪೊಡೆಮಟ್ಟು ಹರ್ಷಚಿತ್ತರಾಗಿ ಒಳ್ಳಿತಪ್ಪ ದಿವಸ ವಾರ ವಿದ್ಯಾ ನಕ್ಷತ್ರದಂದು[11] ತಮ್ಮನುಕೂಲದೊಳೋಜರ್ಗ್ಗೆಱಗಿ ಪೊಡೆಮಟ್ಟು ವಿದ್ಯಾಪ್ರಾರಂಭಂಗೆಯ್ದರ್ ಸೂರ್ಯಮಿತ್ರನುಮವರನಿರುಳುಂ ಪಗಲುಂ ನಿರಂತರಂ ನಿರ್ಬಂಧದಿಂದೋದಿಸಿ [13]ಏೞೆಂಟು[13] ವರುಷದಿಂದೊಳಗೆ ನಾಲ್ಕುವೇ[14]ದಮುಮಾ[14]ಱಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ನ್ಯಾ[15]ಯ[15]ವಿಸ್ತರಂ ವ್ಯಾಕರಣಂ ಪ್ರಮಾಣಂ ಛಂದಮಲಂಕಾರಂ ನಿಘಂಟು ಕಾವ್ಯ ನಾಟಕಂಗಳುಂ ಚಾ[16]ಣ[16]ಕ್ಯಂ ಸಾಮುದ್ರಿಕಂ

---

[1] (ಕಖ)ದಲ್ಲಿ ತ್ರುಟಿತ. [2] ನೀವೋದಿಸಿ (ಕಖಗ), ನಿವೇದಿಸಿ? [3] ಟ್ಟುವೆಂ (ಜ). [4] (ಕಖ) ದಲ್ಲಿ ತ್ರುಟಿತ. [5] ದಳೊಂದೋ (ಘಚ), ದಳೋ (ಛ), ದಳೆಂದೋ (ಜ). [6] ವಿ (ಘ), ರಿ (ಜ). [7] ಗ್ಗೆವೋ (ಘಛಜ), (ಚ) ದಲ್ಲಿ ತ್ರುಟಿತ. [8] ಗೆನಿರೂಪಿಸಿ (ಘಚಛಜ). [9] ವಿ (ಘ) ರಿ (ಜ). [10] ಯಱಿದವರ್ಗ್ಗೆ (ಘಚಛಜ). [11] (ಕಗ) ಗಳಲ್ಲಿ ತ್ರುಟಿತ. [12] ರಿರ್ವ್ವರುಂ (ಘಚಛಜ). [13] ಎಂ (ಘಚಛಜ). [14] ಮುಂ ಮೂ (ಕಖ), ಮುಂ ಮಾ (ಗ), ದಂಗಳುಮನಾ (ಘಚಛಜ). [15] ಸ (ಘಚಛಜ). [16] ಣಾ (ಗ).

ಶಾಲಿಹೋತ್ರಂ ಪಾಳಕಾಪ್ಯಂ ಹಾನಿತಂ ಚರ[1]ಕಮು[1]ಶ್ವಿನೀಮತಂ [2]ಬಾಹಲಂ[2] ಸುಸ್ರುತಂ ಕ್ಷಾರಪಾನೀಯಂ ಮೊದಲಾಗೊಡೆಯ ನರವೈದ್ಯಂಗಳುಂ ಜ್ಯೋತಿಷಂ ಮಂತ್ರವಾ[3]ದಂ[3] ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮಂ ನೆಱೆಯೆ ಕಲ್ಪಿಸಿ ಯೋಗ್ಯರ್ ಮಾಡಿದೊಡವರ್—ನಿಮ್ಮ ಪ್ರಸಾದದಿಂದೆಲ್ಲಾ ಶಾಸ್ತ್ರಮಂ ಕಲ್ತು ಪಂಡಿತರೆನಾದೆ ಮೆಂದಾದಮಾನುಮೊಸೆದುಮಿನ್ನೆಮ್ಮ ನಾಡ್ಗೆ ಪೋದಪೆಮೆಂದೋಜರ್ಗ್ಗೆಱಗಿ ಪೊಡೆವಟ್ಟು ಬೀೞ್ಕೊಂಡಾಗಳೋಜರೆಂದರ್—ನೀಮೆಮ್ಮ ತಂಗೆಯ ಮಕ್ಕಳಿರ್ ಸೋದರಳಿಯಂದಿರಪ್ಪಿರ್ ನಿಮಗಾಂ ಪಸರಂಗೊಟ್ಟಿನಿಲ್ಲೇಕೆಂದೊಡೆ ಮುನ್ನಿನಂತೆ ತಂದೆಯಲ್ಲಿಯುರ್ಕ್ಕೆ ಕೆಟ್ಟಂತಿರಿಲ್ಲಿಯುಮೆತ್ತಾನುಮುರ್ಕ್ಕೆ ಕಿಡುಮಿರೆಂದಾಂ ನಿಮ್ಮಂ ಯೋಗ್ಯರಂ ಮಾಡುವ ಕಾರಣಮಾಗಿ ನಿಮಗೆ ಪಸರಂಗೊಟ್ಟಿನಿಲ್ಲಿದರ್ಕ್ಕೆ ಮುಳಿಯದಿರಿಂ ಕ್ಷಮಿಯಿಸಿಮೆಂದುಡಲುಂ ತುಡಲುಂ ಸಂಬಳಮುಮಂ ಕೊಟ್ಟು ಕೞಿಪಿದಾಗಳ್ ಪಿರಿಯಾತನಗ್ನಿಭೂತಿಯೆಂ[4]ಬೊಂ[4] ಮಾವನೆಮಗೆ ಪಸರಂಗುಡದಿರ್ವರುಮಂ ಯೋಗ್ಯರಂ ಮಾಡಿದರೆಂದುಪಕಾರಮಂ ಮನದೆ ಬಗೆದಾವಮಾನುಂ ಸಂತೋಷಂ ಬಟ್ಟಂ ಕಿಱಿಯಾತಂ ವಾಯುಭೂತಿ ಸೂರ್ಯಮಿತ್ರಂಗೆಯ್ದುದೆಲ್ಲಮಪಕಾರಮೆಂದು ಬಗೆದೆಂದಪ್ಪೊಡಮೆಮ್ಮ ಮಾವಂ ಬೈಕಂದಿರಿದು ತಂದ ಕೂೞ್ಗೆ [5]ನೆರ್[5]ಮೆಣ್ಣೆಯನಕ್ಕುಪ್ಪನಕ್ಕೆ ಕೞಿಯನಕ್ಕೆಂದಪ್ಪೊಡಮಿಕ್ಕಿಯುಮೆಱೆಯಿಸಿಯುಮಱಿಯಂ [6]ಕೆಱೆಗೆ[6] ಪೋಗಿ ಮೀವಾಗಳ್ ತಲೆಯಂ ಪೊಸಲೆಣ್ಣೆಯನಪ್ಪೊಡಮೆಱೆಯಿಸಿಯಱಿಯಂ ತಾಂ ದಿವ್ಯಮಪ್ಪಾಹಾರಂಗಳಂ ದೆವಸದೆವಸಕ್ಕಂ ಪಲಂಬರ್ ನಂಟ[7]ರ್ಕ್ಕಳುಂ[7] ಆಳ್ಗಳುಂ ಬೆರಸುಣ್ಣಂ ಪರ್ವದಿವಸದೊಳಪ್ಪೊಡಮೆಂದಾನುಮಿವರ್ಗ್ಗಣಲಿಕ್ಕಿಮೆಂದಱಿಯಂ ಪಂಚಮಹಾಪಾತಕನೆಮ್ಮನೇೞೆಂಟು ವರುಷಂಬರಂ ಪಗೆವರಂ [8]ಬಗೆ[8]ವಂತೆ ದಂಡಿಸಿದನೆಂದು ಮನದೊಳ್ ಮುಳಿಸಂ ಭಾವಿಸಿ ಪೊಱಮಟ್ಟು ಪೋದರ್

ಅಂತಿರ್ವರುಂ ಪೋಗಿ ಕತಿಪಯ ದಿವಸಂಗಳಿಂ ಕೌಶಂಬಿಯನೆಯ್ದಿ ತಮ್ಮ ಮನೆಯಂ ಪೊಕ್ಕು ತಾಯಂ ಕಂಡು ತುೞಿಲ್ಗೆಯ್ದು ಪಂಡಿತರಾಗಿ ಬಂದುದಂ ಪೇೞ್ದು ಮಿಂದುಂಡು [9]ವಿ[9]ಶ್ರಮಿಸಿಯೊಳ್ಳಿತಪ್ಪ ದಿವಸ ವಾರ ನಕ್ಷತ್ರ ಮುಹೂರ್ತದೊಳತಿಬಲ ಮಹಾರಾಜನಂ ಕಂಡಿರ್ವರುಂ ಬೇಱೆಬೇಱುಪಶ್ಲೋಕಿಸಿ ಕ್ರಿಯಾಕಾರಕ ಸಂಬಂಧದಿಂದಂ ವಖ್ಖಾಣಿಸಿ ತಮ್ಮ ಪಂಡಿತಿ[10]ಕ್ಕೆ[10]ಯನಱಿಪಿದೊಡೆ ಸಭೆಯೊಳಿರ್ದ್ದ ಪಂಡಿತಜ[11]ನಮೆಲ್ಲಂ[11] ಮೆಚ್ಚಿ [12]ಬಿಚ್ಚಳಿಸಿ[12] ಪೊಗೞ್ದೊಡರಸಂ ಸಂತುಷ್ಟಚಿತ್ತನಾಗಿ ಒಸೆದು ನಿಮ್ಮ ತಂದೆಯ ಮಂತ್ರಿಪದಮಂ ಬಾೞ್ವಂ ಕೈಕೊಳ್ಳಿಮೆಂದು ಕೊಟ್ಟೊಡೆ [12]ಮಹಾ[12]ಪ್ರಸಾದಮೆಂದಱಗಿ ಪೊಡೆವಟ್ಟು ಕೈಕೊಂಡು ಸುಖದೊಳ್ ಬಾೞ್ತ್ತಂ ಪಲಂಬರ್ ಪಂಡಿತರ್ಕ್ಕಳ್ಗೋದುಗಳಂ ವಖ್ಖಾಣಿಸುತ್ತಂ ಲೋಕದೊಳರಮನೆಯೊಳಂ ಪೂಜ್ಯರಾಗಿ ಸುಖ[13]ಸಂಕಥಾ ವಿನೋದದಿಂ[13] ಕಾಲಂ ಸಲೆ

---

1 ಕಾ (ಕಖ). 2 (ಘಚಛಜ) ಗಳಲ್ಲಿಲ್ಲ. ಬಾಹಟಂ? 3 ದನೆಂಬವು (ಘಚಛಜ). 4 ಬೊನೆಂದನೆಂಮ (ಘಚಛಜ). 5 ನೆರೆ (ಕಖಗ), ನೀರ (ಜ), (ಛ)ದಲ್ಲಿಲ್ಲ, (ಚ) ದಲ್ಲಿ ತ್ರುಟಿತ. 6 ಱೆ (ಕಗ). 7 ರ್ ಮಕ್ಕಳುಂ (ಚಜ). 8 ದಂಡಿಸು (ಘಜ). 9 ಪ (ಕ).. 10 ಕ್ಕೆ (ಕಗ). 11 ನಂಗಳೆಲ್ಲರುಂ (ಚಜ). 12 (ಖ) ದಲ್ಲಿಲ್ಲ. 13 ದೊಳು (ಖಚಜ).

ಮತ್ತಿತ್ತ ರಾಜಗೃಹ[1]ದೊಳ್ ಸೂರ್ಯಮಿತ್ರಂ ಸುಬಲ ಮಹಾರಾಜನ ತೊಟ್ಟ ನರ್ಘ್ಯಮಪ್ಪ[2] ಮಾಣಿಕ್ಯದುಂಗುರಮಂ ಕಳೆದು ತ[3]ನಗೆ ತುಡಲ್ಕೆಂದು[3] ಕೊಟ್ಟೊಡೊಂದು ದಿವಸಂ ಸಂಜೆವಾರಿಸಲೆಂದು ಪೋದಲ್ಲಿ ಆದಿತ್ಯಂ[4]ಗಿದಿರಂ ನೀರಂ ಸೂಸು[4]ವಾಗಳ್ ಬೆರಲಿಂದ[5]ಮುಚ್ಚಿರ್ದ[5] ನೀರ್ವೆರಸು ಸೂಸಿ ತಾವರೆ[6]ಯೊಳುಂಗುರಂ ಬಿ[7]ದ್ದು[7]ತ್ತು [8]ತಾನುಂ[8] ನೋಡದೆ [9]ಬಗೆಯದೆ[9] ಕೆಮ್ಮನೆ ಕಿಱಿದಂತರಮಂ ಪೋಗಿ ಕೈಯಂ ನೋಡಿ ಬೆರ[10]ಲುಂ[10]ಗುರಮಂ ಕಾಣದೆಲ್ಲಿ ಕೆ[11]ಟ್ಟ[11]ತ್ತೆಂದು ಪ್ರಮಾಣಮಱಿಯದೆ ಮಲ್ಮಲಂ ಮಱು[12]ಗುತ್ತಂಜಿ[12] ದೆಸೆಗಳಂ ನೋಟ್ಪ[13]ನ್ನೆಗಂ ದೂರಾಂತರದೊಳಿರ್ದ್ದ ಸುಧರ್ಮರೆಂಬಾಚಾರ್ಯರಂ ದಿವ್ಯ ಜ್ಞಾನಿಗಳಂ ಕಂಡಿವರೇನಾನುಮಂ ಬ[14]ಲ್ಲೊ[14]ರಪ್ಪೊಡೆ ಬೆಸಗೊಂಡು ನೋಟ್ಪೆನೆಂದು ಪೋಗಿ ಭಟ್ಟಾರರಂ ಕಂಡು ಪಕ್ಕದೊಳಿರ್ದ್ದಾಗಳ್ ಈತಂ ಭವ್ಯನೆಂದಱಿದು—ಏನಯ್ಯ ಅರಸರ ವಾರಕ[15]ದ[15] ಮಾಣಿಕದುಂಗುರಮಂ ಕಿಡಿಸಿ ಬಂದಿರೆ ಎಂದಾಗಳೆಱಗಿ ಪೊಡೆವ[16]ಟ್ಟಂತಱಿವರೊ[16]ಳರೆ ಎಂದು ಪೊಗೞ್ದಿರ್ದ್ದಿಂತು ಬೆಸಗೊಂಡಂ—ಭಟ್ಟಾರಾ ಬೆಸಸಿಮಾವುಂಗುರಮಂ ಕಾಣಲಕ್ಕು[17]ಮೆ[17] ಎಂದಂಗೆ ಭಟಾರರ್ ಕಾಣಲಕ್ಕುಮೆಂ[18]ದರ್[18] ನಿನ್ನೆ ನೀನಾದಿತ್ಯಂಗೆ ನೀರಂ ಸೂಸಿ ಪೊಡೆವಡುವಾಗಳಾ ನೀರ್ವೆರಸು ಸೂಸಿ ತಾವರೆ[19]ಗೆಱೆ[19]ಯೊಳಗೆ ಮುಱುಗಿರ್ದ ಮುಗುಳಮೇಗೆ ತಗುಳ್ದಿರ್ದುದು ನಾಳೆ ನೇಸಱ್ ಮೂಡುವಾಗಳ್ ನೀರಿಂದಂ ಮೇಗೆ ನೆಗೆದಿದ್ದ್ದಿಂಗುರಮಂ ಕಾಣಲಕ್ಕುಮೆಂದೊಡೆ ಸಂತೋಷಂ ಬಟ್ಟು ಪೊಡೆಮಟ್ಟು ಪೋಗಿ ಕೊಳಕ್ಕೆ ಮಾನಸರಂ ಕಾಪಿಟ್ಟು ಮಱುದಿವಸಂ ಸಂಜೆ[20]ಯೊಳ್[20] ಬಂದು ನೋಟ್ಪನನ್ನೆಗಂ ತಾವರೆಯ ಮುಗುಳ ಮೇಲೆ [21]ತಗುಳ್ದಿ[21]ರ್ದ್ದಿಂಗುರಮಂ ಕಂಡು ಕೊಂಡರಸಂಗೊಪ್ಪಿಸಿ ತುರಿಪದಿಂದರಮನೆಯಂ ಪೊಱಮಟ್ಟು ಪೋಗಿ ಮನದೊಳಿಂತೆಂದು ಬಗೆದನೀ ಲೋಕದೊಳಿರ್ದ ಸೂಕ್ಷ್ಮಾಂತರಿತ ದೂರ ಪದಾರ್ಥ ವಸ್ತುಗಳೆಲ್ಲಮನಱಿವಂತಪ್ಪೀ ಸವಣ[22]ನ[22] ಜೋಯಿಸಮನೆಂತಪ್ಪೊಡಂ ಕ್ಷಪಣಕನಂ ಮಿಥ್ಯಾವಿನಯದಿಂ[23]ದಿಳೆ[23]ಸಿ ಕಲ್ವೆನೆಂಬುದೊಂದು ಬುದ್ಧಿಯಿಂದಂ ಮನೆಗೆ ಬಂದು ಸುದೇವಿಯೆಂಬ ತನ್ನ ಪಾರ್ವಂತಿಗೆ [24]ಸ್ವಾ[24]ಭಿಪ್ರಾಯಮೆಲ್ಲಮಂ ಪೇೞ್ದು ಜ್ಯೋತಿಷ ನಿಮಿತ್ತಂ ಮನೆಯಂ ಪೊಱಮಟ್ಟು ಸುಧರ್ಮಾಚಾರ್ಯರಲ್ಲಿಗೆ ಪೋಗಿ ಪೊಡೆವಟ್ಟು ಭಟ್ಟಾರಾ ನಿಮ್ಮ ಪಕ್ಕದ ಜ್ಯೋತಿಷಮಂ ಕಲ್ವೆನೆಂಬುದೊಂದ[25]ಱ್ತಿ[25]ಯಿಂ ಬಂದೆನೆನ್ನಂ ಜ್ಯೋತಿಷಮಂ ಕಲ್ಪಿಪ್ಪುದೆಂದೊಡೆ ಭಟಾರರೆಂದರ್—ತಮ್ಮಾ ಎಮ್ಮ ಜೋಯಿಸಮೆಮ್ಮಂತಪ್ಪ ರೂಪಿನ

---

[1] + ನಗರ (ಚ). [2] + ಮಣಿ (ಘಚಭ), (ಜ) ದಲ್ಲಿಲ್ಲ. [3] ತನ್ನ ಕಯ್ಯೊಳು (ಘಚಭ), [4] ಗರ್ಘ್ಯಮುಂಗುಡು (ಕಗ), ಗಿದಿನಂ ನೀರಂ ಸೂಸು (ಜ). [5] ಮಳ್ಬು (ಖ), (ಕ) ದಲ್ಲಿಲ್ಲ. ದುಂ. ಗುರಂ (ಗ). [6] ಗೆಱೆ (ಘಚಭಜ). [7] ದ್ದ (ಕಖಗ). [8] ತಾಂ (ಘಜ). [9] (ಘಜ) ಗಳಲ್ಲಿಲ್ಲ. [10] ಲಿಂದುಂ (ಘಜ). [11] ಟ್ಟ (ಜ). [12] ಗಿ ಭಯುಂಗೊಂಡು (ಕಗ). [13] + ನ (ಘಜ). [14] ಲ್ಲ (ಕಖಗ). [15] ರ (ಕ). [16] ಟ್ಟಂ ತಲೆವರು (ಖ), ಟ್ಟಂತಂತಿರು (ಕಗ). [17] ಮೊ (ಘಭಜ). [18] ದೊಡೆತು ಕಾಣಲಕ್ಕುಮೆಂದೊಡೆ (ಘಜಭ). [19] (ಕಖಗ) ಗಳಲ್ಲಿಲ್ಲ. [20] ವಾರಿಸಲೆಂದು (ಘಭಜ). [21] ತೊಳಗುತ್ತಿ (ಸ-ಗ). [22] ರ (ಖಗಭ). [23] ಭೇದಿಸಿ (ಘಭಜ). [24] ಸಾ (ಕಖ). [25] ತಿಗ (ಜ).

ಋಷಿಯರ್ಗಲ್ಲದೆ ಪೇೞಲುಂ ಕ[1]ಲಲು[1]ಮಾಗದೆಂದೊಡೆ ಅಂತಪ್ಪ ದೀಕ್ಷೆಯಂ ದಯೆಗೆಯ್ಯಿಮೆಂದು ಬೇಡಿದೊಡೊಳ್ಳಿತಪ್ಪ ಮುಹೂರ್ತದೊಳ್ ದೀಕ್ಷೆಯಂ ಕೊಟ್ಟು ಪಂಚಮಹಾವ್ರತಂಗಳನೇಱಿಸಿ [2]ಪಡಿಕಮಣಂ[2] ಪೇೞ್ದು ತದನಂತರಮಿನ್ ಕಲ್ಪಿಸಿಮೆಂದೊಡೆ ನಮಸ್ಕಾರಂಗಳುಮಾಳೋಚನೆಗಳಂ ನಿಯಮುಮನೋದಿದೊಡಲ್ಲದೆ ಪೇೞಲಾಗದೆಂದೊಡೆಲ್ಲಮಂ ಬೇಗವೇಗಂ ಪಾಠಂಗೊಂಡು ಭಟ್ಟಾರಾ ಇನ್ ಪೇೞಿಮೆನೆ ಭಟ್ಟಾರರೆಂದರ್ ತ್ರಿಷಷ್ಟಿಶಲಾಕಾಪುರುಷರ್ಕಳ ಚರಿತಂಗಳುಮನಾಚಾರಮಾರಾಧನೆ ಮೊದಲಾಗೊಡೆಯ [3]ಚರಣ[3] ಗ್ರಂಥಂಗಳುಮಂ [4]ಲೋಗಾಣಿ ಸಂಗಾಣಿ[4]ಮೊದಲಾಗೊಡೆಯ ಕರಣಗ್ರಂಥಂಗಳುಮನಿವೆಲ್ಲಮಂ ಕಲ್ತೊಡಲ್ಲದೆ ಪೇೞಲಾಗದೆಂದೊಡೆ ಸೂರ್ಯಮಿತ್ರಂ ಪಂಡಿತನಪ್ಪುದಱಿಂದವೆಲ್ಲಮಂ ಕಿಱಿದೆ ಕಾಲದಿಂದೋದಿ ಕಲ್ತು ಭಟ್ಟಾರಾ ನಿಮ್ಮ ಪೇೞ್ದೋದುಗಳೆಲ್ಲಮಂ ಗ್ರಂಥಾರ್ಥ ಸ್ವರೂಪದಿಂದೋದಿ ಕಲ್ತೆಂ ಇನ್ ಜ್ಯೋತಿಷಮಂ ವಖ್ಖಾಣಿಸಿಮೆಂದೊಂಗೆ ಭಟ್ಟಾರರೆಂದರ್ ಇನ್ನೊಂದಧಿಕಾರಮುಂಟು ದ್ರವ್ಯಾನುಯೋಗಮೆಂಬುದಂ ಕೇಳ್ದ ಬೞಿಕ್ಕೆ ಜ್ಯೋತಿಷ ಶಾಸ್ತ್ರಮಂ ವಖ್ಖಾಣಿಸುವೆನೆಂದೊಡೆ ಮನದೊಳಾದಮಾನುಮೊಸೆದೊಂದಧಿಕಾರಮೆಂಬು[5]ದೆನಗೇಮುಟ್ಟೇಗಳ್[5] ಕಲ್ವೆನೆಂದು ಬಗೆದು ಒಳ್ಳಿತಪ್ಪ ದಿವಸ ವಾರ ನಕ್ಷತ್ರ ಮುಹೂರ್ತದೊಳ್ ಸಿದ್ಧಾಂತಮಂ ತೊಡಗಿಸೆ ಎಂತಂತೆ ಕೇಳ್ಗುಮಂತಂತೆ ಮಿಥ್ಯಾತ್ವಮಿನಿ[6]ಸಿನಿಸು[6] ಪಿಂಗೆ [7]ಬಂಧಂ ಬಂಧಕಾರಣಂ ಮೋಕ್ಷಂ ಮೋಕ್ಷಕಾರಣಮಾ[7] ಎರಡೞ ಫಲಮುಮೆಂದಿಂತು ಸಿದ್ಧಾಂತದೊಳ್ ಪೇೞ್ದ ವಸ್ತುಗೆಳೆಲ್ಲಮಂ ಕೇಳ್ದು ಜೀವಾಜೀವ ಪುಣ್ಯಪಾಪಾಸ್ರವ ಸಂವರ ನಿರ್ಜರಬಂಧಮೋಕ್ಷಮೆಂದಿಂತು ನವಪದಾರ್ಥಂಗಳುಂ ಪಂಚಾಸ್ತಿಕಾಯ ಷಡ್ದ್ರವ್ಯಂಗಳುಮೆಂಬಿವಱೊಳಾದಮಾನುಮಱಿತಮುಂ ಕುಶಲಿಕೆಯುಂ ನಂಬುಗೆಯುಮಾಗಿ ಅರ್ಹದ್ಭಟ್ಟಾರಕರ ಸಿದ್ಧಸ್ವರೂಪಮಂ ಗುಣಂಗಳುಮನಱಿದು ಶಂಕಾದ್ಯಷ್ಟಮಲಂಗಳುಮೆಂಟು ಮದಂಗಳುಂ ಮೂಱು ಮೂಢಮುಮಾಱನಾಯತನ ಸೇವೆಗಳುಮೆಂದಿಂತು ಇಪ್ಪತ್ತೈದುಂ ದೋಷಂ[8]ಗಳಿಂದಗಲ್ದು[8] ಸಮ್ಯಕ್ತ್ವ[9]ಮನೊಡೆಯನಾಗಿ[9] ಸಂಸಾರ [10]ಭೋಗ ವೈರಾಗ್ಯ [11]ಪರಾಯಣನುಮಾಗಿ[11] [12]ಎಮ್ಮ [ಕ್ಕೆವ][12] ತಪದಿಂದನನಂತ ಸುಖಕ್ಕೆ ಕಾರಣಮಪ್ಪ ಸನ್ಮಾರ್ಗಮಂ ಪೆತ್ತೆನೆಂದತ್ಯಂತ ಹರ್ಷಚಿತ್ತನಾಗಿ ಗುರುಗಳ್ಗೆ ತಮ್ಮುಕ್ಕೆವದಿಂ ತಪಂಬಟ್ಟುದನಾಳೋಚಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂ[13]ಗೆಯ್ದು[13] ಪರಮಾರ್ಥಯತಿ[14]ವರರಾಗಿ[14] ಪನ್ನೆರಡು ವರ್ಷಂಬರಂ ಗುರುಗಳನಗಲದೆ ತಪಂಗೆಯ್ದಾಚಾರ್ಯರಾಗಿ ಗುರುಗಳನುಮತದಿಂದೇಕವಿಹಾರಿಯಾಗಿ

---

[1] ಲಿಸ (ಗ), ಲಿಯ (ಜ). [2] ಪ್ರತಿಕ್ರಮಣಂ (ಘಭಜ). [3] ಶ್ರವಣ (ಕಖಗ). [4] ಲೋಕಾಣಿ ಸಂಗ್ರಾಣಿ (ಕಖಗ). [5] ದೇನೆನಗೆ ಮುಟ್ಟಿದಾಗಳೆ (ಕಖಗ). [6] ಸಾನುಂ (ಘಭಜ). [7] ಬಂದಮೋಕ್ಷಕಾರಣಮುಮನಾ (ಘಜ), ಬಂಧ ಮೋಕ್ಷಕ್ಕೆ ಕಾರಣಮುಮನಾ (ಜ). [8] ಗಳಂ ಗೆಲ್ವ (ಕಖಗ). [9] ಮಂ ಸಂಬಿ (ಘಭಜ.) [10]। ಶರೀರ (ಘಭಜ). [11] ಮಾದಮಾನುಂ ಪೆರ್ಚೆ (ಘಭಜ). [12] ಯೆಂ ಮುಕ್ಕೆಯ್ವು (ಕಖಗಜ), ಎಮ್ಮುಕಿವ (ಘ). [13] ಕೇಳ್ದು (ಕಖಗ). [14] ಧರನಾಗಿ (ಘಭಜ).

ಗ್ರಾಮೇಽಕರಾತ್ರಂ ನಗರೇ ಪಂಚರಾತ್ರ[1]ಮಟವ್ಯಾಂ[1] ದಶರಾತ್ರಮೆಂಬೀ ತೆಱದಿಂದಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ[2] ವಿಹಾರಿಸುತ್ತಂ

ಕೌಶಂಬಿಗೆ ವಂದುದಯಾವತ ಪರ್ವತದೊಳ್ ಸಿದ್ಧಕ್ಷೇತ್ರಂಗಳೆಲ್ಲಮಂ ಬಂದಿಸಿ ತೀರ್ಥೋಪವಾಸಂಗೆಯ್ದು ಭೈಕ್ಷಕ್ಕೆಂದು ಕೌಶಂಬಿನಗರಮಂ ಪೊಕ್ಕು ಕಿಱುಮನೆ ಪೆರ್ಮನೆಯೆನ್ನದುಣಲ್ತಕ್ಕ ಮನೆಗಳಂ ಚರಿಗೆದೊಳಲುತ್ತ[3]ಮ[3]ಗ್ನಿಭೂತಿ ಬ್ರಾಹ್ಮಣನ ಮನೆಯಂ ಪೊಕ್ಕೊಡಾತನುಂ ಕಂಡಿದಿರಂ ಪರಿತಂದಾದಮಾನುಂ ಭಕ್ತಿಯಿಂದಂ ನಿಱಿಸಿ ಕಾಲಂ ಕರ್ಚಿ [4]ಪಡಿಗಹಮುಚ್ಚಂ ಠಾಣಮೆಂ[4]ದೀವೊಂಬತ್ತು [5]ತೆಱವಿಂದಂ[5] ಪುಣ್ಯಮಂ ಕೈಕೊಂಡು ಶ್ರದ್ಧೆ ಮೊದಲಾಗೊಡೆಯ ಏೞುಂ ಗುಣಂಗಳಿಂ ಕೂಡಿ ಪ್ರಾಸುಕಮಪ್ಪಾಹಾರಮನಾದಮಾನುಂ ಭಕ್ತಿಯಿಂದಂ ಬಡ್ಡಿ[6]ಸೆಯ್ಯುಂಡಿನ್[6] ಬೞಿಕ್ಕ [7]ಕ್ಷಯದಾನಮೆಂದು ಪರಸಿ[7]ಪೋಪಾಗಳ್ ಭಟ್ಟಾರಾ ನಿಮ್ಮ ಕಿಱಿಯ ಗುಡ್ಡನಂ ಪರಸಿ ಪೋಗಲ್ವೇೞ್ಕುಮೆಂದು ವಾಯುಭೂತಿಯ ಮನೆಗೊಡಗೊಂಡು ಪೋದೊಡಾತನುಂ ಪಿರಿಯ ಲೋಹಾಸನಮೇಱಿ ಪಲಂಬರ್ ಪಾರ್ವರ್ಗ್ಗೆ ವಖ್ಖಾಣಿಸುತ್ತಿರ್ದ [8]ಮಾನ[8] ಗರ್ವದಿಂದಿದಿರಂ ಬಂದು ಬಂದಿಸದಿ[9]ರ್ದ್ದೊಡನಂ[9] ಅಗ್ನಿಭೂತಿ ಪೋಗಿ ವಾಯುಭೂತಿಯ ಕೈಯಂ ಪಿಡಿದೆನ್ನುಂ ಭಟ್ಟಾರರ್ ನಮಗೆ ಸ್ವಾಮಿಗಳ್ ಭಟ್ಟಾರರ ಪ್ರಸಾದದಿಂದಂ ನಮಗಿನಿವಿರಿದು ಶ್ರೀಯುಂ ಸಂಪತ್ತುಂ ವಿಭವಮುಮಾದುದಱಿಂದಮೆೞ್ದು ಪೋಗಿ ಭಟ್ಟಾರರಂ ವಂದಿಸೆಂದೊಡವನಿಂತೆಂದಂ— ಇದೇನೊಳ್ಳಿದರ್ಗ್ಗೆನ್ನಂ ಪೊಡೆವಡಿಸಿದಪ್ಪೈ ಪೇ[10]ೞಿ[3]ಂದುಮ[10]ಶುಚಿಗಳ್ ಮಲಗ್ರಸ್ತರೆಂದಪ್ಪೊಡಂ ಮಿಂದಱಿಯದ[11]ವರಿವರ[11] ಕಾಲ್ಗೆಱಗುವೆಂ ಗಡಮೆಂದು ಪಾರ್ವರ ಸಭೆಯ ನಡುವಿರ್ದ್ದು [12]ಕನಿಷ್ಠ[12] ನಿಷ್ಠುರ ವಚನಂಗಳಿಂ ನಾನಾ ಪ್ರಕಾರದಿಂ [13]ನಿರಾಕರಿಸಿ[13] ನುಡಿದು ಪೊಲ್ಲದಂ ಪೇೞ್ದಿಟ್ಟ ಕಳೆಯೆ ಅಗ್ನಿಭೂತಿಯೆಂದಂ— [14]ಕೊಯ್ತಲೆ[14]ಯಧಮಾ ನೀಚಾ ಸ್ವಾಮಿಯನಿಂತೆಂಬಾ ಎಂದವನಂ ಬಯ್ದೊಡೆ ಭಟ್ಟಾರರೆನ್ನುಂ

ಗಾಹೆ ॥ ಣಿಂದಂತಂ ಸಿಳಹಂತಂ ಸತ್ತುಂ ಮಿತ್ತುಂ ತಹೇವ ಸುಖ ದುಕ್ಖಂ ।
ಜೋ ಸಮಭಾವಣ ಪೆಚ್ಛಇ ಸೋ ಸಮಣೋ ಸೋಯ ಪವ್ವಯಿಓ ॥
ವೃತ್ತ ॥ ಆಕೃಷ್ಟಯೇವ ವಚಸಾ ನ ತು ತಾಡಿತೋಽಸ್ಮಿ
ಸಂತಾಪಿತೋಽಸ್ಮಿ ನ ತು ಮೇ ಹೃತಮುತ್ತಮಾಂಗಂ ।
ಪ್ರಾಣಾ ಹೃತಾಃ ಮಮ ಪರೈರ್ನತು ಮೇ ಸಮಾಧಿಃ
ಇತ್ಯಾತ್ಮಚಿಂತನ ಪರಂಪರಯಾ ಕ್ಷಮೇತ ॥

---

1 ಕಾನನಂ (ಕಖಗ). 2 + ಯಥಾಕ್ರಮದಿಂ (ಘಭಜ). 3 ಬಪ್ಪೊರ್ವರ (ಘಭಜ). 4 ಗಾಹೆ ॥ ಪಡಿಗಹಮುಚ್ಚಂ ಠಾಣಂ ಪಾಯೋಯಕ ಮಚ್ಚಣಂ ಚ ಪಣಮಂ ಚ । ಮಣವಯಣ ಕಾಯಸುದ್ಧಿಂ ಯೇಸಣ ಸುದ್ಧಿಂ ಚ ಣವವಿದಂ ಪುಣ್ಣಂ ॥ (ಘಚಭಜ). 5 ತೆಱದ (ಘಚಭಜ). 6 ಡ್ಡಿಯಾಡಿದ (ಘಚಭ), ಸಿಯೂಡಿದ (ಜ). 7 (ಘಚಭಜ) ಗಳಲ್ಲಿಲ್ಲ. 8 ಮನದ (ಕಗ) ಮನ (ಖ). 9 ದ್ದಾರ್ಗಳ್ (ಘಚಭಜ). 10 ಳ (ಘಚಭಜ). 11 ವರ (ಕಖಗ). 12 ಕಷ್ಟ (ಘಚಭ). 13 ತಿರಸ್ಕರಿಸಿ (ಘಚಭಜ). 14 ಕಾಯ್ದೆಲೆ (ಕಖಗ), ಕೊಯಿತಲೆ (ಚಜ).

ಎಂದಿಂತು ಕ್ಷಮೆಯಂ ಭಾವಿಸಿದರ್ ಅಗ್ನಿಭೂತಿಯುಂ ಭಟ್ಟಾರರೊಡನು[1]ದ[1]ಯಾವತೆ ಪರ್ವತಕ್ಕೆ ಪೋಗಿ ಇಂತೆಂದಂ—ಭಟ್ಟಾರಾ ನಿಮ್ಮಂ ಪಂಚಮಹಾಪಾತಕನ ಮನೆಗೊಡಗೊಂಡು ಪೋಗಿ ಬಯ್ಸಿದೆನದನಾತಂ ಬಯ್ದೊನಲ್ಲನಾಂ ಬಯ್ದೆನೀಯಪರಾಧಕ್ಕೆ [2]ನಗೆ ಕ್ಷಮಿಯಿಸುವುದೀ ಬಯ್ಸಿದ ಪಾಪಮಿಂತಲ್ಲದೆ ಪಿಂ[2]ಗದೆನಗೆ ದೀಕ್ಷೆಯಂ ದಯಗೆಯ್ಯಿಮೆಂದು[3] ಕೀೞ್ ಬೇಡಿದೊಡೆ ಭಟ್ಟಾರರೊಳ್ಳಿತಪ್ಪ ಮುಹೂರ್ತದೊಳ್ ದೀಕ್ಷೆಯಂ ಕೊಟ್ಟೊಡಾತನುಂ ತಪಂಬಟ್ಟು ಕ್ರಿಯೆಗಳೆಲ್ಲ[4]ಮಂ ಕಲ್ತು ಆ[4]ಗಮಂಗಳ [5]ನೋದು[5]ತ್ತಂ ತಮ್ಮ ಗುರುಗಳೊಡನೆ ವಿಹಾರಿಸುತ್ತಿರ್ದ್ದರ್

ಇತ್ತಲಗ್ನಿಭೂತಿಯ ಪಾರ್ವಂತಿ ಸೋಮದತ್ತೆಯೆಂಬೊಳ್ ತನ್ನೊಂದು [6]ಸಲ್ಗೆ[6]ಯಿಂದಮಟಲಿಂದಂ ವಾಯುಭೂತಿಯನಿಂತೆಂದಳ್ — ಸೂರ್ಯಮಿತ್ರಭಟ್ಟಾರಕರ್ [7]ಮುನ್[7] ಬ್ರಾಹ್ಮಣರ್ ನಿಮ್ಮ ಸೋದರಮಾವಂಗಳೀಗಳ್ ಮಹಾತಪೋಧನರ್ ಗುಣವಂತರಪ್ಪರ್ ನಿಮ್ಮ ಮನೆಗೆ ವಂದೊಡೆ ಮಣೆಯಿಂದೆರ್ದ್ದಿದಿರಂ ಪೋಗಿ ಪೊಡೆವಟ್ಟ[8]ರಿ[8]ಲ್ಲೀ ಬಾೞುಂ ಸಂಪತ್ತುಂ ಶ್ರೀಯುಮೆಂಬುದವರ ಪ್ರಸಾದದಿಂದಮಾದುದಂತಪ್ಪ ಮಹಾಋಷಿಯರಂ ನಿಮಗೆ ಪೞಯಲುಂ ಬಯ್ಯಲುಂ ತಿರಸ್ಕರಿಸಿ ನುಡಿಯಲುಮಕ್ಕುಮೆ [9]ಅಧಮರ[9] ಪೊಲ್ಲಮಾನ[10]ಸ[10]ರ ದುರ್ಜ[11]ನರ[11] ಜಾರಜಾತ[12]ರ[12] ವಿಜಾತಿಗ[13]ಳ್ಗೆ ಯೋಗ್ಯಮಪ್ಪಯೋಗ್ಯಮಂ[13] ಗೆಯ್ದಿರೆಂದು ಪಾರ್ವರ ಸಭೆಯ ನಡುವೆ ನುಡಿದೊಡೆ ವಾಯುಭೂತಿಯುಂ ಮುಳಿದು [14]ಬಯ್ದು[14] ಜಡಿದು ಕಾಲಿಂದಂ ತಲೆಯನೊದೆದು ಮನೆಯೊಳುಳ್ಳುದೆಲ್ಲಮಂ ಕವರ್ದುಕೊಂಡು ನಿಮ್ಮ ಸವಣನಾಗಿರ್ದ್ದಾಣ್ಮನ ಪೋದಲ್ಲಿಗೆ ಪೋಗೆಂದಟ್ಟಿ ಕಳೆದೊಡಾಕೆಯುಂ ಮುಳಿದು ಕ್ರೋಧಾಗ್ನಿ[15]ಪೆರ್ಚಿ ದುರಾತ್ಮಾ ಎನ್ನನೊದೆದ ನಿನ್ನ ಕಾಲ್ಗ[16]ಳಂ[16] ಜನ್ಮಾಂತರದೊಳಂ ನಾಯುಂ ನರಿಯುಮಾಗಿಯುಪ್ಪೊಡಂ ಕೊಂದು ಮಕ್ಕಳ್ವೆರಸು ತಿಂಬೆನೆಕ್ಕೆಂದು ನಿದಾನಂಗೆಯ್ದು ಮನೆಯಿಂದಂ ಮಕ್ಕಳ್ವೆರಸು ಪೊಱಮಟ್ಟು ಪೋಗಿ ಕೆಲವು ಕಾಲದಿಂ[17]ಬೞಕ್ಕೆ[17] ಸತ್ತುತಾನುಂ ಮಕ್ಕಳುಂ ಸಂಸಾರದೊಳ್ ತಿ[18]ರಿಯುತ್ತಿರ್ದ್ದರ್[18]

ಇತ್ತ ವಾಯುಭೂತಿಯುಮತಿಮಾನ ಗರ್ವದಿಂದಂ ಋಷಿಯರಂ ಪರಿಭವಿಸಿ ಬಯ್ದು ನುಡಿದು[19] ಜಿನಧರ್ಮಮಂ ಪೞಿದ [20]ಪಾಪದ[20] ಫಲದಿಂದಮೇೞುಂ ದಿವಸದಿಂದೊಳ[21]ಗೌ[21]ದುಂಬರ ಕುಷ್ಠಮಾಗಿ ಪುೞಿತು ನಮೆದು ಸತ್ತು ಕೌಸಂಬಿಯೆಂಬ ಪೊೞಲೊಳ್ [22]ಮಿಳಿಯ ಬಿದಿರ ಮೇಗೇ[22]ೞ್ ಯಾಕಾಶದೊಳಾಡುವ ವಿದ್ಯಾಧರ ಲಂಗಿಗರ

---

[1] ನೆದ (ಘಚಭಜ). [2] ಸೈರಿಸುವುದು ಬೈ..... ಪೋ (ಕಗ). [3] + ನೆೞ[3] (ಕಗ). [4] ಮನೋದಿಯಾ (ಘಚಭಜ). [5] ಳು ಕೇಳು (ಘಚಭಜ). [6] ಸಲುಗೆ (ಕಖಗ). [7] ಸ (ಕಖಗ) ಮಂ (ಭ). [8] ತಿ (ಕಗ). [9] ಅಧಮರಂ (ಕಖಗ), ಇವರೆ (ಘ), ಅವರಂ (ಜ), ಇವರ್ಗೆ (ಭ). [10] ರಂ (ಕಖಗ). [11] ನರಂ (ಕಖಗ), ನಂಗಳ (ಘಚಭಜ). [12] ರಂ (ಕಖಗ), ಅಧಮರಾ ಪೊಲ್ಲಮಾನಸರಾ ದುರ್ಜನರಾ ಜಾರಜಾತರಾ ಎಂದು ಇರಬಹುದೆ? [13] ಳಿಗೆ ಯೋಗಮಂ (ಘಚಭಜ). [14] (ಘಚಜ) ಗಳಲ್ಲಿಲ್ಲ. [15] + ಯಿಂ (ಕ). [16] ಳನಾಂ (ಜ). [17] (ಖಚಜ) ಗಳಲ್ಲಿಲ್ಲ. [18] ರುಗುತ್ತಿರ್ದಳ್ (ಘಚಭ). [19] + ತಿರಸ್ಕರಿಸಿ (ಚ). [20] (ಜ) ದಲ್ಲಿಲ್ಲ. [21] ಗು (ಸ.ಗ). [22] ಬಿದಿರ ಮೆಳೆಯ ಮೇಲೇ (ಕಖಗ).

ಮನೆಯೊಳ್ ಪೆಣ್ಣತ್ತೆಯಾಗಿ ಪುಟ್ಟಿ ಪಿರಿಯನಪ್ಪ ಪೊಱೆಗಳಂ ಪೊತ್ತು ಪೋಗಿ ಬೆನ್ನೊಳ್ [1]ನಾಳಿ ಬಿದ್ದರ್[1] ಕಱ[2]ವೆ[2]ಯಾಗಿ ಪುೞುತು ನಮೆದು ಸತ್ತು ಮತ್ತಮಾ ಪೊೞಲೊಳ್ ಪೇಪಂದಿಯಾಗಿ ಪುಟ್ಟಿ ಸತ್ತು ಮತ್ತಾ ಮಗಧೆಯೆಂಬುದು ನಾಡಲ್ಲಿ ಚಂಪಾನಗರವೆಂಬುದು ಪೊೞಲಲ್ಲಿ ಪೆಣ್ಣಾಯಾಗಿ [3]ಮಾದೆಗರ[3] ಮನೆಯೊಳ್ ಪುಟ್ಟಿ ಸತ್ತು ಮತ್ತಮಾ ಪೊೞಲೊಳ್ ಮಾದೆಗರ್ಗೆ ಪ್ರಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿ[4]ಯೆಂಬ[4] [5]ಮಾದೆಗಿಗಂ[5] ಮಗಳ್ ದುರೂಪೆ ದು[6]ರ್ವ್ವರ್ಣೆ[6] ದುರ್ಗಂಧೆ ದುಸ್ಸ್ವರೆ ಪುಟ್ಟಿಂಗುರುಡಿ ಪೊಲತಿಯಾಗಿ ಪುಟ್ಟಿ ವ್ಯಾಧಿಪೀಡಿತೆ ಕ್ಷುಧಾಗ್ನಿಯಿಂ [7]ಬೞ್ದಿದೊಳೊಂದು ದಿವಸ[7]ಮುದ್ಯಾನವನಕ್ಕೆ ಪೋಗಿ ನೇಱಿಲ ಪಣ್ಗಳಂ ತಡವರಿಸಿಯಾಯ್ದಾಯ್ದು ತಿನ್ನುತ್ತಿರ್ಪಳ್

ಅನ್ನೆಗಮಿತ್ತ ಸೂರ್ಯಮಿತ್ರಾಚಾರ್ಯರುಮಗ್ನಿಭೂತಿಮುನಿಯುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಚಂಪಾನಗರಮನೆಯ್ದಿ ವಾಸುಪೂಜ್ಯ ಭಟ್ಟಾ[8]ರರ ನಿಸಿದ್ಧಿಗೆ[8] ಸಂದ ತೀರ್ಥಸ್ಥಾನಮನಾದಮಾನುಂ ಶುದ್ಧ ಪರಿಣಾಮದಿಂದಂ ವಂದಿಸುತ್ತಿರ್ದ್ದ ಸೂರ್ಯಮಿತ್ರಾಚಾರ್ಯರ್ಗ್ಗವಧಿಜ್ಞಾನಂ ಪುಟ್ಟಿತ್ತು ಮತ್ತೆ ಬಹಿರುದ್ಯಾನದೊಳ್ [9]ಸಂಬರನಾಗತಾಣದೊಳ್[9] ಬಂದಿರ್ದರಂದಿನ ದಿವಸಂ ಸೂರ್ಯಮಿತ್ರಾಚಾರ್ಯರುಪವಾಸಂ ಗೆಯ್ದಿರ್ದ್ದರಗ್ನಿಭೂತಿಮುನಿಯುಂ ಭೈಕ್ಷಾನಿಮಿತ್ತಂ ಚರಿಗೆವೊಗುತ್ತಮೆಡೆಯೊಳುದ್ಯಾನವನದೊಳ್ ನೇಱಿಲ ಮರದ ಕೆೞಗೆ ನೇಱಿಲ ಪಣ್ಗಳಂ ತಡವರಿಸಿ [10]ಆಯ್ದು[10] ತಿನ್ಬ ಜಾತ್ಯಂಧೆಯಪ್ಪ ಪೊಲೆಯರ ಕೂಸಂ 'ಕಂಡತ್ಯಂತ ಸ್ನೇಹಮಾಗಿ ಪರವಸದಿಂದಂ ಕಣ್ಣೀರ್ಗಳಂ ಸೂಸಿ[11]ಯೆಯ್ತುಂದು[11] ಮನ್ನ್ಯ ಮಿಕ್ಕು†ಕರುಣದಿಂದೆ ಕುಂಚದ ಕೋಲೊಳ್ ಪರೆದಿರ್ದ ಪಣ್ಗಳಂ ಕೂಸಿನ ಮುಂದೆ ಸಾಚ್ಚುತ್ತಂ ನೀಡುಂ ಬೇಗಮಿರ್ದ್ದಿದೇಂ ಪಾಪದ ಫಲವೊ ಎಂದು ಸಂಸಾರ ನಿರ್ವೇಗ[12]ಮಾಗೆ[12]ಯುಂದಿನ ದಿವ[13]ಸಮುಲಾಭಂ[13]ಮಾಡಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರೆಂದರ್—[14]ಏನ[14]ಲಾಭಮಾದುದೆ ಎಂದು ಬೆಸಗೊಂಡೊಡೆ ಭಟ್ಟಾರಗ್ಗಿಂತೆಂದು ಪೇೞ್ದರ್ ಚರಿಗೆವುಗುತ್ತಮೊಂದೆಡೆಯೊಳುದ್ಯಾನದೊಳ್ ನೇಱಿಲ ಮರದ ಕೆೞಗೆ ತಡವರಿಸಿ ನೇಱಿಲ ಪಣ್ಗಳಂ ತಿನ್ಬ ಜಾತ್ಯಂ[15]ಧೆ[15]ಯಪ್ಪ ಪೊಲೆಯರ ಕೂಸಂ ಕಂಡಾದಮಾನುಂ ಸ್ನೇಹ[16]ಮಾಗಿ ಕರುಣದಿಂದಂ[16] ಮನ್ನ್ಯ ಮಿಕ್ಕು ಪರವಸದಿಂದಂ ಕಣ್ಣೀರ್ಗಳ್ ಬಂದು[17] ನೀಡುಂ ಬೇಗಮಿರ್ದ್ದ ನೋಡಿ ಅಹೋ [18]ವಿಧಾತ್ರಾ[18] ಸಂಸಾರಮೆಂ[19]ದಲಾಭಂ[19] ಮಾಡಿ

1 (ಘಚಭಜ) ಗಳಲ್ಲಿಲ್ಲ. 2 ವೆ (ಸ—ಕ). 3 ಮಾದರ (ಕ), ಮಾದಿಗರ (ಗ), ಮಾದೆಂಗರ (ಘಭಜ). 4 + ನಿ (ಜ). 5 ಮಾತಂಗಿಗಂ (ಘಭಜ). 6 ವ್ರ್ಣೆ (ಕಗ). 7 ಬರ್ದಿದೊಳೊಂದಿನಂ (ಕಗ). 8 ರಕರು ಸಿದ್ಧಿಗೆ (ಕಖಗ). . . .ನಿಷಿದ್ದಿಗೆ (ಛಚ). . . .ನಿಷಿಧಿಗೆ (ಛ). 9 ಗನಾಗವಟ್ಟದೊಳು (ಘ), ನಾಗವಟ್ಟಣದೊಳು (ಚಭಜ). 10 ಆಯ್ದಾಯ್ದು (ಕಗ), (ಘಚಛ) ಳಲ್ಲಿಲ್ಲ. 11 ಪಾಯ್ತುಂದು (ಘಚಛ). 12 ಡಿ (ಕಖಗ). 13 ಸಂ ಮುಟ್ಟುಪಡಂ (ಘಚಛ). 14 ಎನಗ (ಖ). 15 ಧಕಿ (ಚ). 17 ದಿಂಕರುಣಮಾಗಿ (ಘಚಭಜ). 17 + ನಾಡೆ (ಕಗ). 18 ಚಿತ್ರಂ (ಘಚಛ). 19 ದು ಮುಟ್ಟುಪಡಂ (ಘಚಛ).

ಬಂದೆನೆನೆ ಭಟ್ಟಾರರೆಂದರ್—ಆ ಕೂಸೆಂ[1]ಬುದು[1] ನಿಮ್ಮ ತಮ್ಮನಪ್ಪ ವಾಯು ಭೂತಿಯ ಜೀವಮೆನೆ ಅದೆಂತು ಭಟ್ಟಾರಾ ಎಂದು ಬೆಸಗೊಂಡೊಡೆ ಭಟ್ಟಾರ ರಿಂತೆಂದು ಪೇೞ್ದರ್ ವಾಯುಭೂತಿ ತನ್ನೊಂದು ಮಾನಗರ್ವದಿಂದೆಮ್ಮಂ ಪೞಿದು ಬಯ್ದು ನುಡಿದ ಪಾಪದ ಫಲದಿಂದೇೞು ದಿವಸದಿಂದೊಳ್[2]ಗೌ[2]ದುಂಬರ ಕುಷ್ಠಮಾಗಿ ಪುೞಿತು ನಮೆದು ಸತ್ತಾ [3]ಪೊೞಲೊಳೆ ಲಂಗಿಗರ[3] ಮನೆಯೊಳ್ ಪೆಣ್ಗತ್ತೆಯಾಗಿ ಪುಟ್ಟಿ ನಮೆದು ಸತ್ತು ಪೇಪಂದಿಯಾಗಿ ಪುಟ್ಟಿ ಸತ್ತು ಪೆಣ್ನಾಯಾಗಿ ಪುಟ್ಟಿ ಸತ್ತೀಗಳ್ ಜಾತ್ಯಂಧೆ ಪೊಲೆಯರ ಮಗಳಾಗಿ ಪುಟ್ಟಿದಳದಱಿಂ ಮುನ್ನಿನ ಸ್ನೇಹಂ ಕಾರಣಮಾಗಿ ಕೂಸಿನ ಮೇಗೆ ನಿಮಗೆ ಕೂರ್ಮೆಯಾದುದೆನೆ—ಭಟ್ಟಾರಾ ಅದೇಂ ಭವ್ಯಜೀವನೊ ಅಭವ್ಯಜೀವನೊ ಎಂದು ಬೆಸಗೊಂಡೊಡೆ ಭವ್ಯಜೀ[4]ವಂ[4] ನಿಮ್ಮ [5]ಪೇೞ[5] ಬ್ರತಂಗಳಂ ಕೈಕೊಳ್ಗುಮೆಂದೊಡೆ ಭಟ್ಟಾರರನುಮತದಿಂದಗ್ನಿಭೂತಿ ಋಷಿ ಯರ್ ಪೋಗಿ ತಮ್ಮ ಮುನ್ನಿನ ಜನ್ಮಾಂತರ ಸಂಬಂಧಮುಮಂ ಋಷಿಯರಂ ಏಳಿದು ನುಡಿದ ಪಾಪದ ಫಲದಿಂದೆಯ್ದಿದ ಭವಂಗಳ ದುಃಖಂಗಳುಮನಾ ಕೂಸಿಂಗೞಿವಂತು ತಿಳಿಯೆ ಪೇೞ್ದು ಮತ್ತಮಿಂತೆಂದರ್ ಮುನ್ನೆ ನೀನೀ ಭವದಿಂ ತೊಟ್ಟಯ್ದನೆಯ ಭವದೊಳ್ ವಾಯುಭೂತಿಯಪ್ಪಂದು ಮಾನಗರ್ವದಿಂ ಋಷಿಯರಂ ಬಯ್ದ ಪಾಪದ ಫಲದಿಂದಿಂತಪ್ಪ ದುಃಖಂಗಳನೆಯ್ದಿದೆ ಇನ್ ಮತ್ತಂ ಮಧುಮದ್ಯಮಾಂಸಂ ಗಳಂ ಭಕ್ಷಿಸಿ ನರಕ ತಿರಿಕ [6]ಮನುಷ್ಯ[6]ಭವಂಗಳೊಳಪ್ಪ ದುಃಖಂಗಳ್[7]ನಂತನಂತ[7] ಕಾಲಮನುಭವಿಸಿ ನೀಡಱಿಂ[8]ದೆ[8]ತ್ತಾನುಮಲ್ಲದೆ ಮನುಷ್ಯಭವಮಂ ಪೆಱದು ಪೆತ್ತೊಡ ಮಿಂತಾಗಿ ಪುಟ್ಟುಗುಂ :—

ವೃತ್ತ ॥ ವೈರೂಪ್ಯಂ ದುರ್ಭಗತ್ವಂ ಕುಮತಿ ಕುಜನತಾಂ ಕುತ್ಸಿತತ್ವಂ ಕುಜಾತಿಂ
ಕ್ಷುತ್ತೃಷ್ಣಾಪೀಡಿತತ್ವಂ ವಿರಸವಿಕಳತಾಂ ವ್ಯಾಧಿತಾಂ ಚಾಬಲತ್ವಂ ।
ಹೀನತ್ವಂ ಪ್ರೇಷಣತ್ವಂ ಲಘುತರಮರಣಂ ಶೋಕ ಕಾಂಕ್ಷಾಲಯತ್ವಂ
ಮಾಂಸಾಶೀ ಪ್ರಾಣಘಾತೀಹ್ಯನುಭವತಿ ಚಿರು ಪ್ರಾಪ್ಯ ಮಾನುಷ್ಯಜನ್ಮಂ ॥
ಪಾಪಾತ್ಕಿಲ ಜಾಯಂತೇ ವಾಮನ ಪಂಗ್ವಂಧ ಕುಬ್ಜ ಖಂಜ ಕರಾಳಾಃ ।
ಜಡ ಬಧಿರ ಮೂಕ ಕೃಶರೋಮಶ ವಕ್ರ ನಿಬಿಡಾಳಿಸ್ತೇ (?) ॥

ವಸಂತತಿಲಕಂ ॥ ಉದ್ದಂತ ಕುಬ್ಜ ಕುಣಿಕುಂಡ ಕರಾಳ ಕಾಣಾಃ
ಸಂಸ್ಥೂಲ ದೀರ್ಘ ಕೃಶರೋಮಶ ರೂಕ್ಷ ರೂಪಾಃ ।
ಕುಷ್ಠಾರ್ದಿತಾಃ ಕೃಪಣ ವಾಮನ ಪಾಮನಾಶ್ಚ
ಪಾಪೇನ ಪೂರ್ವ ಚರಿತೇನ ನರಾ ಭವನ್ತಿ ॥

*ವೃತ್ತ ॥ ಕುಲಹೀನಂ ದೀನಮಾನಂ ಪರಿಭವ ವಿಭವಂ ದುಷ್ಕೃತಂ ಪಾಪಕರ್ಮಂ
ಮಲಿನಂ ದುರ್ಗಂಧ ಗಂಧಂ ಜಡಮತಿ ಕಿವುಡಂ ಪಂಗುಮೂಕಂ ...ತಂ ನಾ।
ಣಿಲಿ ಪಾಣ್ಬಂ ಪಂಬೆ ಲೋಭಂ ಖಳನಳಿಕ ಮನಂ ವಂಚಕಂ ನಿತ್ಯರೋಗಾ
ಕುಳನೆಂಬೀ ನಾಮ ನಾಮಾವಳಿಗೆ ನಿಳಯನಕ್ಕುಂ ವ್ರತವ್ರಾತ ಹೀನಂ ॥†

---

1 ಬಳ್ (ಕ). 2 ಗು (ಸ. ಚ. ಥ). 3 ಪೊಳಲೊಳಗಣ ವಿದ್ಯಾಧರ ಲಂಗಿಗರ (ಘಚಥ). 4 ವಮೆಂದರ್ (ಕಖಗ). 5 ಪೇಳ್ದ (ಸ—ಕ). 6 (ಚ) ದಲ್ಲಿಲ್ಲ. 7 ನನಂತಾನಂತ (ಜ). 8 ದೆಚ್ಚತ್ತುಮೆ (ಕಗ). † ಈ ಪದ್ಯ (ಘಚಥ) ಗಳಲ್ಲಿಲ್ಲ; (ಖ) ದಲ್ಲಿ ನಷ್ಟ.

ಇಂತು ಪೂರ್ವಕೃತ ಪಾಪದ ಫಲದಿಂದಂ [1]ವ್ರತಂಗಳಂ ಕೈಕೊಂಡಱುದುದಱಿಂದಂ[1] ಮನುಷ್ಯ ಜನ್ಮದೊಳ್ ಪುಟ್ಟಿಯುಂ ದುಃಖಂಗಳ[2]ನೆಯ್ದುಗುಂ[2] ಜೀವಂ ಮತ್ತೆ ಧರ್ಮದ ಫಲದಿಂದಂ—

ವೃತ್ತ ॥ ಶ್ರೀ ವಕ್ಷಶ್ಚಾರು ರೂಪಂ ಕುಲ ಬಲ ವಿನಯಂ ಖ್ಯಾತಿ ದೀರ್ಘಾಯುಸತ್ವಂ
ಪೂಜಾಂ ದೇವಾಸುರೇಂದ್ರೈಃ ಸುರನರವನಿತಾ ಪ್ರೀತಿಮುಷ್ಟಾಂಗ ಭೋಗಂ।
ಸ್ವರ್ಗ್ಗೇ ಮರ್ತ್ಯೇ ಲಭಂತೇ ದ್ಯುತಿಮತಿಪಟುತಾಂ ರಾಜರಾಜಶ್ರಿಯಂ ಚ
ಸೌಭಾಗ್ಯಂ ಪೂಜ್ಯವಾಕ್ಯಂ ಜಗತಿ ಮಧುಸುರಾ ಮಾಂಸ ಸೇವಾನಿವೃತ್ತಾಃ ॥

ಆರ್ಯೆ ॥ ಪುಣ್ಯಾದುತ್ಪಾದ್ಯಂತೇ ಜೀವಾ ವಿಖ್ಯಾತ ವಿಪುಲ ವಂಶೇಷ್ವೇಕೇ।
ದ್ಯುತಿ ಮತಿ ಧೃತಿ ಕಾಂತಿ ಶ್ರೀ ಹ್ರೀ ರೂಪಾರೋಗ್ಯ ಸತ್ವಬಲ ಸಂಪನ್ನಾಃ ॥
ಅಜ್ಞಾ ಯಶೋ ಧೃತಿ ಮತಿ ದ್ಯುತಿ ಕಾನ್ತಿಲಕ್ಷ್ಮೀ
ಶೌರ್ಯ ಪ್ರತಾಪ ಪರಿವಾರ ಧನೋಪಭೋಗಾಃ।
ತೇ ಲೋಕವೇದ ಸಮಯೇಷು ಸುನಿಶ್ಚಯೇನ
ಪುಣ್ಯೋದಯೇನ ಸುಲಭಾ ಇತಿ ವರ್ಣಯಂತಿ ॥
ವರಯುವತಿ ಭವನ ವಾಹನ ನಾಟಕ ಧನ ಕನಕ ರಜತಮಣಿ ಸುರಥಾಃ।
ಅತಿ ಲಲಿತ ತುರಗ ಮದ ದಳಿತ ನಾಗ ಭೃತ್ಯಾ ಭವಂತಿ ಧರ್ಮೇಣ ॥

ಇಂತು ಧರ್ಮದ ಫಲದಿಂದಂ ದೇವಲೋಕದ ಮನುಷ್ಯ ಲೋಕದ ಸುಖಂಗಳನನುಭವಿಸಿ ಬೞಿಕ್ಕೆ ನಿರ್ವಾಣ ಸುಖಮನೆಯ್ದುಗುಂ ಜೀವಮಿನ್ನಾ ಧರ್ಮಮೆಂಬುದೆಂತೆಂದೊಡೆ—

ಗಾಹೆ ॥ ಸೋ ಧಮ್ಮೋ ಜತ್ಥ ದಯಾ ಸೋವಿ ತಓ ವಿಸಯಣಿಗ್ಗಹೋ ಜತ್ಥ।
ದಸ ಅಟ್ಠ ದೋಸರಹಿಓ ಸೋ ದೇವೋ ಣತ್ಥಿ ಸಂದೇಹೋ ॥

ಎಂದಿಂತು [3]ಪದಿನೆಂಟು ದೋಷಂಗಳ[3]ನಿಲ್ಲದೊಂ ದೇವನಂತಪ್ಪ ದೇವನ ಪೇೞ್ದುದಾಗಮಮೆಂಬುದಕ್ಕುಮಾ ಆಗಮಂ ಪೇೞ್ದಿಂತು ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆ[3]ದು ದ್ವಾದಶವಿಧಮಪ್ಪ ತಪದೊಳ್ನೆಗೞ್ದು ಅಯ್ದುಮಿಂದ್ರಿಯಂಗಳಂ ಗೆಲ್ದು ಪಸಿವುಂ ನೀರಱಿಕ್ಕೆ ಮೊದಲಾ[4]ಗೊಡೆಯ ಇಪ್ಪ[4]ತ್ತೆರಡು ಪರೀಷಹಂಗಳಂ ಸೈರಿಸಿ ಯಮ ನಿಯಮ ಸ್ವಾಧ್ಯಾಯ ಧ್ಯಾನಾನುಷ್ಠಾನ ನಿರತರಾಗಿ ತಪಂಗೆಯ್ವ ಋಷಿಯರ್ಕಳ್ ತಪೋಧನರ್ ಕೊಲ್ಲದುದೆ ಧರ್ಮಮೆಂದಿಂತು ನಂಬಿ ವ್ರತಂಗಳಂ ಕೈಕೊಂಡು ನೆಗೞ್ವುದು ಧರ್ಮಮೆಂಬುದಕ್ಕುಮೆಂದಗ್ನಿಭೂತಿ ರಿಸಿಯರ್ ತಿಳಿಯೆ ಧರ್ಮಮಂ ಪೇೞ್ದೊಡೆರ್ಡೆಯೊಳ್ ಮೆಲ್ಲಿದಳಾಗಿ ತನ್ನ ಭವಾಂತರಂಗಳಂ ಧರ್ಮಮುಮಂ ಕೇಳ್ದಱಿದು ಸಂಸಾರ ಶರೀರ ವೈರಾಗ್ಯ[5]ಮಾದಮಾನುಂ ಪೆರ್ಚೆ[5] ತನ್ನಂ ತಾನೆ ಪೞಿದು ನಿಂದಿಸಿ ಪಾಪಕ್ಕಂಜಿ ಅಣುವ್ರತಂ ಮೊದಲಾಗೊಡೆಯ ಶ್ರಾವಕ ಬ್ರತಂಗಳಂ ಕೈಕೊಂ*ಡಾಗಳ್ ಭಟ್ಟಾರರುಂ ದೃಢವ್ರತೆಯಾಗು ಕರ್ಮಕ್ಷಯಮಕ್ಕೆಂದು ಪರಸಿ

---

1. (ಚಜ) ಗಳಲ್ಲಿಲ್ಲ. 2 ನಗೆಯ್ದುಂ (ಕಗ).*—*(ಖ) ದಲ್ಲಿ ನಷ್ಟ. 3 ಮೊದಲಾಗಿ ಒಡೆಯ (ಕಗ), (ಖ) ದಲ್ಲಿ ನಷ್ಟ. 4 ಗಿಪ್ಪ (ಘಚಛ). 5 ಮಾಗಿ (ಘಚಛ).

ತವರ್ಮ್ಮಾವಾಸಕ್ಕೆ ಪೋದರ್ರಿತ್ತ ಜಾತ್ಯಂಧೆಯಪ್ಪ [1]ಕೂಸುಮಹಿಂಸಾದಿ ವ್ರತಂಗಳಂ ಮೇಲ್ಕೊಂಡು* ತನ್ನ ಮನೆಗೆ ಪೋಪಾಗಳ್

ಅನ್ನೆಗಂ ಎಡೆಯೊಳರಸನ ಪುರೋಹಿತಂ ಸೋಮಶರ್ಮನೆಂಬೊಂ ತನ್ನ ಪರಿವಾರಂ ಬೆರಸು ಮಹಾವಿಭೂತಿ ವಿಸ್ತಾರದಿಂದಂ ಪಿರಿದು ಪೂಜೆಯಂ ಕೊಂಡು ಮಕ್ಕಳಂ ಬೇಡಿ [2]ಸಂ[2]ಬರನಾಗ[3]ಠಾಣಕ್ಕೆ[3] ಪರಕೆಗುಡಲ್ ಪೋಪುದಂ ತನ್ನೊಡ [4]ವೋಪ[4] ಪೊಲೆಯರ ಕೂಸುಗಳ್ ಕಂಡು ತನಗೆ ವ್ಯಾವರ್ಣಿಸಿ [5]ಪೇೞ[5] ಕೇಳ್ದದ ಱೊಳ್ ಮನಮಿಟ್ಟುಮವರ್ಗ್ಗೆ ಸತ್ತು ಪುಟ್ಟುವೆನಕ್ಕೆಂದು ಭೋಗಾಸಕ್ತೆಯಾಗಿ ನಿದಾನಂಗೆಯ್ದು ಮನೆಗೆ ವೋಗಿ ಇರ್ಪ್ಪನ್ನೆಗಮಾಯಿರುಳೊಳೆ [6]ಪಾ[6]ವು ಕೊಳೆ ಸತ್ತು ಚಂಪಾನಗರಮನಾಳ್ವೊಂ ಚಂದ್ರವಾಹನನೆಂಬೊನರಸನಾತನ ಮಹಾದೇವಿ ಚಂದ್ರಮತಿಯೆಂಬೊಳವರ ಪುರೋಹಿತಂ ಸೋಮಶರ್ಮನೆಂಬೊಂ ಭಟ್ಟನಾತನ ಪಾರ್ವಂತಿ ತ್ರಿವೇದಿಯಂಬೊಳಾಯಿರ್ವರ್ಗ್ಗಂ ನಾಗಶ್ರೀಯೆಂಬೊಳ್ ಮಗಳಾಗಿ ಪುಟ್ಟಿ[7]ದೊಳ್[7]ತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿಯನೊಡೆಯಳ್ ಜನಂಗಳ್ಗೆಲ್ಲಮಾದಮಾನುಂ ಸೊಗಯಿಸುವಳ್ ನಾಗರ್ಗೆ ಪರಸಿ ಪೆತ್ತರಪ್ಪದಱಿಂ ನಾಗಶ್ರೀಯೆಂದು ಪೆಸರನಿ[8]ಟ್ಟರ್ ಮತ್ತಿತ್ತ[8] ಸೂರ್ಯಮಿತ್ರಾಚಾರ್ಯರ್ ಅಗ್ನಿಭೂತಿ ರುಷಿಯರುಮಂತಿರ್ವರುಂ ಚಂಪಾನಗರ[9]ಮಂ[9] ಪೊಱಮಟ್ಟು [10]ಗ್ರಾಮನಗರ ಖೇಡ ಖರ್ವಡಮಡಂಬ ಪತ್ತನ ದ್ರೋಣಾಮುಖಂಗ[11]ಳಂ ವಿಹಾರಿಸುತ್ತಂ ಏೞ[3]ಂಟು ವರ್ಷದಿಂ[11] ಮಗುೞ್ದು ಚಂಪಾನಗರಕ್ಕೆ ವಂದು*ಪೊಱವೊೞಲೊಳುದ್ಯಾನವನದೊಳ್ ಕಂಬಳನಾಗಂ ಶಂ[12]ಬರ[12]ನಾಗಂ ಪಾಂಡುಕನಾಗಮೆಂದೀ [13]ನಾಗರ[13] ಪೆಸರನೊಡೆಯ ಮುನ್ನಿರ್ದ್ದ ನಾಗ[14]ಠಾಣ[14]ದೊಳ್ ಬಂದಿರ್ದ್ದರ್

ಅನ್ನೆಗಂ ನಾಗಶ್ರೀಯುಂ ಪಂಚಮಿಯಂದು* ಮಂತ್ರಿಯರ್ಕ್ಕಳ ಪೆರ್ಗಡೆಗಳ ರಾಜಶ್ರೇಷ್ಠಿಯರ ಪ್ರಧಾನರಪ್ಪ ನಿಯೋಗಿಗಳ ಪಲಂಬರುಂ ಪೆಣ್ಗೂಸುಗಳ್ವೆರಸು ಪಿರಿದುಮರ್ಚನೆಯಂ ಕೊಂಡು ನಾಗಠಾಣಕ್ಕೆ ಪೋಗಿ ನಾಗರನರ್ಚಿಸಿ ಪೊಡೆವಟ್ಟು ಸೂರ್ಯಮಿತ್ರಾಚಾರ್ಯರುಮಗ್ನಿಭೂತಿ ರುಷಿಯುರಂ ಕಂಡು ಜಾತಿಸ್ಮ[15]ರೆ[15]ಯಾಗಿ ತನ್ನ ಮುನ್ನಿನ ಪೊಲತಿಯಾಗಿ ಪುಟ್ಟಿದ ಭವಮನಱಿದು ಭಟ್ಟಾರರ ಕಾಲ್ಗೆಱಗಿ ಪೊಡೆವಟ್ಟು ಕುಳ್ಳಿರ್ದಾಗಳಾ ಕೂಸಂ ಕಂಡು ಅಗ್ನಿಭೂತಿ ರುಷಿಯರ್ಗತಿ ಸ್ನೇಹಮಾಗಿ ತಮ್ಮ ಗುರುಗಳಂ ಸೂರ್ಯಮಿತ್ರಾಚಾರ್ಯರನಿಂತೆಂದು ಬೆಸಗೊಂಡರ್ ಭಟ್ಟಾರಾ ಈ ಕೂಸಿನ ಮೇಗೆಮಗಾದಮಾನುಂ [16]ಮೋ[16]ಹಮಾದುದರ್ಕೆ ಕಾರಣಮೇನೆಂದು ಬೆಸಗೊಂಡೊಡೆ ಭಟ್ಟಾರರವಧಿ [17]ಜ್ಞಾನಮಂ[17] ಪ್ರಯೋಗಿಸಿ ಇಂತೆಂದು ಪೇೞ್ದರ್—ಈ ಕೂಸೆಂಬುದು ನಿಮ್ಮ ತಮ್ಮನಪ್ಪ ವಾಯುಭೂತಿಯ ಜೀವಂ

[1] + ಪೊಲೆಯರ (ಘಚಛ). [2] ಶಂ (ಛ). [3] ವಟ್ಟಣಕ್ಕೆ (ಘಛ). [4] ನೆಯ (ಘಚಛ). [5] ದೊಡೆ (ಘ). [6] ಹಾ (ಘ). [7] ದೊಡ (ಕ). [8] ಟ್ಟು ಮತ್ತಂ (ಕಗ). [9] ಡಿಂ (ಕಖಘ). [10] + ಪೋಗಿ (ಘಚಛಜ). [11] ಛಸೆಂಟು ವರುಸಂಬರಂ ವಿಹಾರಿಸಿ (ಘಚಛಜ). [12] ಖ (ಘಚಛ). [13] (ಕಖ) ಗಳಲ್ಲಿ ತ್ರುಟಿತ. [14] ವಟ್ಟಣ (ಘಚಛಜ).*—*(ಜ) ದಲ್ಲಿಲ್ಲ. [15] ರಣೆ (ಕಗ). [16] ಸ್ನೇ (ಘಚಛ). [17] ಯಂ (ಘಚಛಜ).

ಅಭಿಮಾನಂ ಕಾರಣಮಾಗೆಮ್ಮ[1]ನುಱದೆ[1] ಪರಿಭವಿಸಿ ಬಾಯ್ಗೆ ವಂದುದನೆ ಪೊಲ್ಲ[2]ಮೆಯ[2] ಬಯ್ಗುಗಳಂ ಬಯ್ದು[3]ಮಾ ಪಾಪದ ಫಲದಿಂದ[4]ಮೇಲುದಿವಸದಿಂದೊಳ[4]ಗೌದುಂಬರ ಕುಷ್ಠಮಾಗಿ ಪು[5]ಲಿಲುತು[5] ಸತ್ತು ಕೌಸಂಬಿಯೊಳೆ [6]ಲಂಗಿಗರ ಮನೆಯೊಳ್[6] ಪೆಣ್ಗತ್ತೆಯಾಗಿ[7] ಪಿರಿಯಪೊಱೞಗಳಂ ಪೊತ್ತು ಪೋಗಿ ಬೆನ್ನೊಳ್ [8]ಕಱುಮೆ[8]ಯಾಗಿ ನಾಳಿ ಬಿರ್ದು ಪು[5]ಱುತು[5] ನವೆದು ಸತ್ತು ಪೇಪಂದಿಯಾಗಿ ಪುಟ್ಟಿ ಸತ್ತು ಪೆಣ್ಣಾಯಾಗಿ ಪುಟ್ಟಿ ಸತ್ತು ಮತ್ತೀ ಚಂಪಾನಗರದೊಳ್ ಮಾದೆಗರ್ಗೆ ಪ್ರಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಿಗಂ ದುರೂಪೆ[9] ದುರ್ಗಂಧೆ ದುಸ್ಸರಿ ಜಾತ್ಯಂಧೆ ಪೊಲೆಯರ್ಗೆ ಮಗಳಾಗಿ ಪುಟ್ಟಿ[10]ನೀವು ಪ್ರತಿಬೋಧಿಸೆ[10] ವ್ರತಂಗಳಂ ಕೈಕೊಂಡು ನಿದಾನಂಗೆಯ್ದು ಪಾವು ಕೊಳೆ ಸತ್ತು ಪುರೋಹಿತಂ ಸೋಮಶರ್ಮಂಗಂ ತ್ರಿವೇದಿಗಂ ಪುಟ್ಟಿದ ನಾಗಶ್ರೀಯೆಂಬೊಳ್ ಮಗಳಾದಳದಱಿಂ ನಿಮಗೀ ಕೂಸಿನ ಮೇಗತಿಸ್ನೇಹಮಾದುದೆಂದು ಪೇ[11]ಳ್ದುದೆ[11]ಲ್ಲಮಂ ನಾಗಶ್ರೀ ಕೇಳ್ದು ಕೞಿದಯ್ದು ಭವಂಗಳುಂ ತನಗೆ ಪ್ರತ್ಯಕ್ಷಮಾದಂತಱಿದು ಭಟ್ಟಾರರ ಕಾಲ್ಗೆಱಗಿ ಪೊಡೆವಟ್ಟು ಧರ್ಮಮಂ ಬೆಸಗೊಂಡು ಕೇಳ್ದಣುವ್ರತಂ ಮೊದಲಾಗೊಡೆಯ ಶ್ರಾವಕ ವ್ರತಂಗಳಂ ಸಮ್ಯಕ್ತ್ವ ಪೂರ್ವಕಂ ಕೈಕೊಂಡು ವಂದಿಸಿ ಮನೆಗೆ ಪೋಪಾಗಳ್ ಭಟ್ಟಾರರ್ ಮಗಳೆ ಎಮ್ಮ ಕೊಟ್ಟ ಬ್ರತಂಗಳಂ ನಿಮ್ಮಮ್ಮಂ ಬಿಸುಡಲ್ವೇೞ್ದನಪ್ಪೊಡೆ [12]ಪೆಱ[12]ವುೞಿವಿಸುಡದಿರೆಮ್ಮಲ್ಲಿಗೆ ವಂದೆಮ್ಮ ಕೊಟ್ಟ ಬ್ರತಂಗಳನೆಮಗೊಪ್ಪಿಸುವುದೆನೆ ಕೇಳ್ದಂತೆಗೆಯ್ವೆನೆಂದು ಮನೆಗೆ ವೋದೊಡೊಡ[13]ನೆಯ[13] ಕೂಸುಗಳ್ ಸೋಮಶರ್ಮ [14]ಭಟ್ಟಂಗೆ—ನಿಮ್ಮ ಮಗಳ್ ರಿಸಿಯರ ಪಕ್ಕದೆ ಶ್ರಾವಕ ಬ್ರತಂಗಳಂ ಕೈಕೊಂಡು [15]ಬಂದಳೆನೆ[15] ಭಟ್ಟಂ ಕೇಳ್ದು ಮಗಳೆ ನಾಗಶ್ರೀ ನಾಮುಂ [16]ಪಾರ್ವರೆಮುಂ ಲೋಕಕ್ಕೆಲ್ಲಮಗ್ಗಳಂ ಲೋಕದಿಂದಂ ಪೂಜಿತ [ರೆ] ಮುಮೆಮ್ಮಿಂದಗ್ಗಳಂ[16] ಪೆಱರಿಲ್ಲದಱಿಂದಂ ಸವಣರ ಧರ್ಮಮಂ ನಮಗೆ ಕೊಳಲಾಗ ಬಿಸುಡು ಎನೆ ನಾಗಶ್ರೀಯೆಂದಳ್—ಅಮ್ಮಾ ವ್ರತಂಗಳಂ ಕೊಟ್ಟ ರಿಸಿಯರ್ಗೆ ಪೋಗಿಯೊಪ್ಪಿಸಿ ಬಿಸು[17]ಟ್ಟಪ್ಪೆ[17]ನೆನೆಯಂತೆ ಗೆಯ್ಯೆಂದು ಮಗಳ ಕೈಯಂ ಪಿಡಿದಿರ್ವರುಂ ರಿಸಿಯರಲ್ಲಿಗೆ ವ್ರತಂಗಳನೊಪ್ಪಿಸ[18]ಲ್ಕೆಂ[18]ದು ಪೋಪನ್ನೆಗವೆಡೆಯೊಳ್ ಬಟ್ಟೆಯೊಳೊರ್ವನಂ ಪೆಡಂಗಯ್ಯುಡಿಯೆ ಕಟ್ಟಿ ಒಂದೆವಱಗುಟ್ಟಿ ಪೊೞಲ ಜನಂಗಳ್ ಮುಸುಱಿಕೊಂಡು ನೋಡುತ್ತಮೊಡ[19]ವರೆ ನೂಂಕುತ್ತುಂ ಕೊಲಲುಯ್ವ ಪುರುಷನಂ ಯುವ್ವನನಂ ತೇಜಸ್ವಿಯಂ ಕಂಡು ನಾಗಶ್ರೀ ತಮ್ಮಮ್ಮನಂ ಬೆಸಗೊಳ್ಗುಮಿಾತನನೇಕೆ ಕೊಲಲುಯ್ದಪ್ಪೊರಮ್ಮಾ ಬೆಸಗೊಳ್ವೆನೆ ಸೋಮಶರ್ಮನುಂ ಕೊಲಲುಯ್ವ[20]

[1] ನುಱದೆ (ಛ). [2] (ಘುಚಭಜ) ಗಳಲ್ಲಿಲ್ಲ. [3] + ಪರಿಭವಿಸಿದ (ಚ). [4] ವಿಧಿವಶದೊಳ (ಜ). [5] ಳ್ತು (ಕಗ). [6] (ಘುಚಭಜ) ಗಳಲ್ಲಿಲ್ಲ. [7] + ಪುಟ್ಟ (ಘು). [8] ಕಱವೆ (ಘುಚಭಜ). [9] + ದುರ್ವಣೆ (ಘು). [10] ನಿಮ್ಮ ಬೋಧೆಯಿಂ (ಘುಜ). [11] ಳ್ದೊಡೆ (ಘುಜ), ಳಿದೆ (ಕಗ). [12] ವೆಡೆ (ಘುಚಭಜ). [13] ನೆ ಬಂದ (ಚ). [14] + ಂಗೆ (ಕಗ). [15] ಳೆಂದು, ಪೇಳ್ದೊಡದಂ (ಘುಚಜ). [16] . . . ಪೂಜಿಸೆ ಪಟ್ಟೆ . . .(ಗ). (ಖ) ದಲ್ಲಿ ನಷ್ಟ, ಸಾಪಕ್ಕೆ ಮೂಲೋಕಕ್ಕೆ ಮಗ್ಗಳಂ ಲೋಕದಿಂದಂ ಪೂಜಿಸೆ (ಪೂಜ್ಸಿ) ಪಟ್ಟೆವು ನಮ್ಮಿಂದಗ್ಗಳಂ (ಘುಚಭಜ). [17] ಡುವೆ (ಗ). [18] ಲೆಂ (ಕ.ಖ.ಛ). [19] + ನೆ (ಗ). [20] + ಪ್ರಧಾನನಪ್ಪ (ಘುಚಭಜ).

ತಳಾಜಿನಂ ಬೆಸಗೊಂಡು ತದ್ವೃತ್ತಾಂತಮೆಲ್ಲಮನಱಿದು ನಾಗಶ್ರೀಗಿಂತೆಂದು ಪೇೞ್ಗುಂ

ಈ ಪೊೞಲ ಪ್ರಧಾನನಪ್ಪ ಶ್ರೇಷ್ಠಿ ಇಂದ್ರದತ್ತನೆಂಬೊಂ ಪದಿನಾಱುಂ ಕೋಟಿ ಕಸವರಮನೊಡೆಯೊ[1]ನಾತನ ಮಗನೀತಂ[1] ವರಸೇನನೆಂಬೊಂ ಜೂದಾಡಿಯ[2]ಕ್ಷ ಧೂರ್ತ[2]ನೆಂಬೊಂಗೆ ಸಾಸಿರ ದೀನಾರಮಂ ಸೋಲ್ತು ಸೋಲಮಂ ಕುಡಲಾಱದೆ ಅರಸ[3]ನಾಣೆಯಂ ಮಿಕ್ಕು ಪೋಪ[ನ್][3]ಮುಂದಡ್ಡಮಾಗಿರ್ದ್ದೊನನಪರಾಧಿಯನಕ್ಷ ಧೂರ್ತನಂ ಕೊಂದನದಱಿಂದರಸನೀತನಂ ಕೊಲಲ್ವೇೞ್ದಿನದಱಿಂ ಕೊಲಲುಯ್ವಪರ್ ಮಗಳೆ ಎಂದು ಪೇೞೆ[3]ೞ್ದೊಡೆ ನಾಗಶ್ರೀಯೆಂದಳ್—ಅಂತಪ್ಪೊಡಮಾನುಂ ರಿಸಿಯರ ಪಕ್ಕದೆ ಬ್ರತಮಂ ಸಾವಿಂಗಂಜಿ ಜೀವಂಗಳಂ ಕೊಲ್ಲೆನೆಂ[4]ಬ[4] ಬ್ರತಮಂ [5]ಕೊಂಡೆನಾ ಬ್ರತಮನವರ್ಗೊಪ್ಪಿಸಿದೊಡಾ[6]ನುಮಮೋಘಂ[6] ಜೀವಂಗಳಂ ಕೊಲಲ್ವೇೞ್ಕುಮಾ ಜೀವಂಗಳಂ ಕೊಂದೊಡೆನ್ನುಮನೀತನಂತೆ ಪೆಡಂಗಯ್ಯುಡಿಯೆ ಕಟ್ಟಿಯೊಂದೆವೞಿ[3] ಗುಟ್ಟಿ ನೀವೆಲ್ಲ[7]ನಂಟರ್[7] ನೋಡೆ ಶ್ಮಶಾನಕ್ಕುಯ್ದು ಸೂಲದೊಳಿಕ್ಕಿ ಕೊಲ್ವರೆನೆ ಅಂತಪ್ಪೊಡೆ ಈಯೊಂದು ಕೊಲ್ಲದ ವ್ರತಂ ನಿನಗಿರ್ಕೆ ಮಗಳೆ ಉೞಿದ ಬ್ರತಂಗಳೆಲ್ಲಮಂ ಪೋಗಿಯಾ ಕ್ಷಪಣಕಂಗೊಪ್ಪಿಸುವ[8]ಮೆಂದು[8] ಕಿಱಿದಂತರಮಂ ಪೋಪನ್ನೆಗಂ ಮತ್ತೊರ್ವನಂ ಮುನ್ನಿ[9]ನಂತೆ ಕೊಲಲ್ಕೊಂಡು ಪೋಪ ಪುರುಷನಂ ಕಂಡು ನಾಗಶ್ರೀ ತಮ್ಮಮ್ಮನಂ ಬೆಸಗೊಳಲ್ವೇೞೆ[3]ೞ್ದೊಡಾತನುಂ ಬೆಸಗೊಂಡೆಲ್ಲಮನಱಿದು ಮಗಳ್ಗಿಂ ತೆಂದು ಪೇೞ್ಗುಂ ಕೇಳ್ ಮಗಳೆ [10]ವೈನಯಿಕನೆಂಬೊ[10]ನೊರ್ವಪುರುಷಂ ಕನ್ನೆಯ ಬಂಟನ ವೃದ್ಧಸ್ತ್ರೀಯ ಮೂವರ ಚಿತ್ರಕಥೆಗಳಂ ಪಟದೊಳ್ [11]ತೋಱಿ ಪೇೞ್ದು ಲೋ[12]ಗರಂ[12] ಡಂಬಿಸಿ [13]ಮಾಱುಗೊಳ್ವ[13]ಬತ್ತಮಂ [14]ಕ[14]ಳ್ವೊನಾ ಮೂಱುಂ ಕಥೆ ಗಳೊಳಗೆ ಕನ್ನೆಯ ಕಥೆಯಂ ಪೇೞ್ವನದೆಂತೆಂದೊಡೆ—

ಕೌಶಂಬಿಯೆಂಬ ಪೊೞಲೊಳ್ ಸುಮಿತ್ರನೆಂಬೊಂ ಶ್ರೇಷ್ಠಿ [15]ಕೋಟಿ ಕಸವರ ಮನೊಡೆಯೊ[15]ನಾತನ ಮಗಂ ವಸುಮಿತ್ರನೆಂ[16]ಬೊಂಗೆ ಸರ್ಪದಷ್ಟಮಾದೊಡೆ ಸತ್ತ ನೆಂದು[16] ಶ್ಮಶಾನಕ್ಕೆ [17]ಕೊಂಡು ಪೋಗಿ ಇೞಿಪಿದೊಡಲ್ಲಿ ಗರುಡನಾಭಿಯೆಂಬ ಮಂತ್ರ ವಾದಿ ಪೋಗಿ ನೋಡಿ ಈತನನಾಂ ನಾಳೆಯುಭಿಮಂತ್ರಿಸಿ ಬಾೞಿಸುವೆನಂಜದಿರಿ ಮಿಲ್ಲಿಯೆ [18]ಇರುಳೀ ದಾಷ್ಟಿಕಂಗೆ[18] ಜಾವಮಿರಿ[19]ಮೆಂದು ಪೇೞ್ದು ಪೋದಂ ಸುಮಿತ್ರ ಸೆಟ್ಟಿಯುಂ ನಾಲ್ವರೊಳ್ಪಿದರಪ್ಪ ಸುಭಟರಂ ಜಾವಮಿರಿಸಿ ಪೋದನಾ ನಾಲ್ವರುಂ ಜಾವಮಿರ್ದ ಭಟ[20]ರೊಳಗೊ[20]ರ್ವನಿರುಳ್ ಕುೞಿಯಂ ಕಳ್ದು ತರಲ್ ಪೋದಂ

[1] (ಕಗ) ಗಳಲ್ಲಿ ತ್ರುಟಿತ, (ಖ) ದಲ್ಲಿ ನಷ್ಟ. [2] ಕ್ಷುದ್ರೂರ್ತ (ಕಗಘಚಛ). [3] ರಾಣೆಯಂ ಮಿಕ್ಕು (ಮಿಾಱಿ) ಪೋಪಂಗೆ (ಘಚಛಜ), . . . . ನ (ಕಗ). [4] ಬೀ (ಘಚಛಜ). [5] + ಕೈ (ಘಚಜ). [6] ನುಂ (ಘಚಛಜ). [7] ರುಂ ನೋಡೆ (ಚಜ). [8] ಮೆನೆ (ಘಛಜ). [9] + ನಾತ (ಘಛಜ). [10] ವೈನೈಕ್ಯ (ಕ), ವೈನೈಕ (ಗ), (ಖ) ದಲ್ಲಿ ನಷ್ಟ. ವೈನಯಿಕನೆಂಬಾತ (ಘಚಛಜ). [11] + ಬರೆದು (ಕ). [12] ಕನುಲ್ಲಮಂ (ಘಚಛಜ). [13] ಮಾಱುಕೊಳ್ವ (ಕಗ). [14] ಕೊ (ಘಚಛಜ). [15] ಕಸನರಮಂ ಪಡೆಯನಾ (ಘಚಛಜ). [16] ಬೊನಂ ಸರ್ಪದಷ್ಟನಾಗಿದ್ದೊನಂ (ಘಚಛಜ). [17] + ಸಂಸ್ಕರಿಸಲ್ಕೆ (ಗಘಛಜ). [18] ಇರುಳಿಕ್ಕನ್ನೆಗಂ (ಘಛಚಜ). [19] + ಸಿ (ಘಛಜ). [20] ರಾಗಳೊ (ಕಗ).

ಮತ್ತೊರ್ವಂ ಪುಳ್ಳಿಯಂ ತರಲ್ ಪೋದಂ ಮತ್ತೊರ್ವಂ ಕಿಚ್ಚಂ ತರಲ್ ಪೋದಂ ಮತ್ತೊರ್ವಂ ದಾಷ್ಟಿಕನಾ ಪಕ್ಕದೆ ಕಾಪಿರ್ದನಂತಾ ನಾಲ್ವರುಂ ಕುಱಿಯಂ ಕೊಂದು ಸುಟ್ಟು ತಿಂ[1]ದ[1]ರೆಂಬ ಕಥೆಯುಮಂ ಪೊೞ್ತುಱಿನೆ ನೇಸಱ್ಮೂಡೆ ಗರುಡನಾಭಿಯೆಂಬ ಮಂತ್ರವಾದಿ ಬಂದು ಪಱಿಗುಟ್ಟಿ ಮಂತ್ರಿಸಿ ದಾಷ್ಟಿಕನನೆತ್ತಿದಂ ಸುಮಿತ್ರಸೆಟ್ಟಿಯುಮಿರುಳ್ ಜಾವಮಿರ್ದ ನಾಲ್ವರ್ ಸುಭಟರ್ಗ್ಗೊರೊರ್ವರ್ಗೆ ಸಾಸಿರ ದೀನಾರದ ಪೊಟ್ಟಳಿಗೆಗಳಂ ಪ್ರಾಸಾದದ ಮೇಗಿರ್ದು ಜನಸಂಕೀರ್ಣದ ನಡುವೆ ನಾಲ್ಕು ಪೊಟ್ಟಳಿಗೆಯನೀಡಾಡಿದೊಡಾ ಪೊಟ್ಟಳಿಗೆಯಂ [2]ಕೊಂಡು ಕೊಳ್ಳೆನೆಂದು ಪುಸಿದೊಡಾ ಶ್ರೇಷ್ಠಿಯು[2]ಮರಸರ್ಗೆ ಪೋಗಿ ಬಿನ್ನಪಂಗೆಯ್ದನ್ ಎನ್ನ ಸಾಸಿರ ದೀನಾರದ ಪೊಟ್ಟ[3]ಳಿಗೆ[3] ಕೆಟ್ಟುದದಂ ದೇವರಾರೈವುದೆಂದು ಪೇೞ್ದೊಡೆ ತಳಾಱನಂ ಕರೆದು ಬೇಗಂ ಕಳ್ಳನನಾರಯ್ಯಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾೞ್ಪೆನೆಂದರಸನಾತನಂ ಬಗ್ಗಿಸಿ ನುಡಿದೊಡಾತನುಮಱಿಸಿ ಕಳ್ಳನನಾರಯ್ಯಲಾಱದೆ ನಾಲ್ವರ್ ಸುಭಟರುಮಂ ಮನೆಗೊಡಗೊಂಡು ಬಂದು ಭೀತನಾಗಿ ಬಿನ್ನನೆ ಮೊಗಂ[4]ಬಾಡಿ[4] ಚಿಂತಿಸುತಿರ್ದೊಡಾತನ ಮಗಳ್ ಸುಮತಿಯೆಂಬಳಿಂತೇಕೆ [5]ಬಿ[5]ನ್ನನಾಗಿ ಚಿಂತಿಸು[6]ತ್ತಿರ್ದ್ದೆ[6]ಯಮ್ಮಾ ಎಂದು ತಂದೆಯಂ ಬೆಸಗೊಂಡೊಡಾತನುಂ ತದ್ವೃತ್ತಾಂತಮೆಲ್ಲಮಂ ಮಗಳ್ಗಱಿಯೆ ಪೇೞ್ದೊಡಂಜಲ್ವೇಡಿದನೆಲ್ಲಮನಾನಾರಯ್ದು ಕಳ್ಳನುಮಂ ಕಸವರಮುಮಂ ನಾಳೆ ನಿಮಗೊಪ್ಪಿಸುವೆಂ ನೀಮುಂ ನಿಶ್ಚಿಂತಮಿರಿಮೆಂದು ತಂದೆಯನೇಕಾಂತದೊಳ್ ನುಡಿದು [7]ತಂದೆಯಂ[7] ಸಂತ[8]ವಿಸಿದಾಗಳ್[8] ಸುಮತಿಯುಮಿರುಳ್ ಕಳ್ಳರಂ ಪರೀಕ್ಷಿಸಲ್ವೇಡಿಯಾ ನಾಲ್ವರುಂ ಸುಭಟರ ಪಕ್ಕದಿ[9]ರ್ದ್ದೆ[9] ನೆಂದವರ್ಗ್ಗೆ ಕಥೆಯಂ ಪೇೞ್ಗುಂ

ಪಾಟಳೀಪುತ್ರಮೆಂಬ ಪುರಮಲ್ಲಿ ಶ್ರೇಷ್ಠಿ ಸುದತ್ತನೆಂಬೊನಾತನ ಮಗಳ್ ಸುದಾಮೆಯೆಂಬ ಕನ್ನೆಯೊಂದು ದಿವಸಂ ಗಂಗೆಯಂ ಮೀಯಲ್ಪೋಗಿ ಮೀವಲ್ಲಿ ನೆಗೞ್ ಪಿಡಿದೊಡಾದಮಾನುಮಂಜಿ ತಡಿಯೊಳಿರ್ದ [10]ಧ[10]ನದತ್ತನೆಂಬೊಂ ಸೋದರ[11] ಮಯ್ದುನನಂ ಕಂಡೆನ್ನಂ ಬೇಗಂ ಬಿಡಿಸೆಂದೊಡಾತನಿಂತೆಂದನೆನ್ನ ಬೇಡಿದುದನೀವೊಡೆ ನಿನ್ನಂ ಕಾವೆನೆಂದೊಡಾಕೆಯು[12]ಮೀವೆ[12]ನೆಂದು ಪೂಣ್ದೊಡೆ ಬೇಗಂ ನೀರಂ ಪೊಕ್ಕು ನೆಗೞಿಂ [13]ಬಿಡಿಸಿದ[13] ಬೞಿಕ್ಕ ಪೇೞೆನಂ ಬೇಡುವಯ್ ನಿನ್ನ ಬೇಡಿದುದೆಲ್ಲಮನೀವೆನೆಂದು ಕನ್ನೆ ನುಡಿದೊಡಾತನಿಂತೆಂದಂ ನಿನ್ನ ಮದುವೆಯಂದು ಪ್ರಥಮ ದಿವಸದ ಪದಸದನಮನೆನಗೆ ವಂದು ತೋಱಲ್ವೇೞ್ಕುಮೆಂದು ಬೇಡಿದೊಡಾಕೆಯುಮಂತೆ ಗೆಯ್ವೆನೆಂದು ಪೂಣ್ದಳಿಂತು ಕಾಲಂ ಸಲೆ ಮತ್ತಾ ಕನ್ನೆಗೆ ಯೌವನಂ ನೆಱೆದಂದು ಮದುವೆಯಾದೊಡೆ ತನ್ನ [14]ಪೂಣ್ಕೆಯಂ ನೆನೆದು ಸರ್ವಾಲಂಕಾರ[14] ಭೂಷಿತೆಯಾಗಿಯಾದ ಮಾನುಂ ಕೈಗೆಯ್ದು ಚೆಲ್ವೆಯಾಗಿ ನಟ್ಟನಡುವಿರುಳ್ ಮನೆಯಿಂದಂ ಪೊಱಮಟ್ಟು

---

[1] ಬ (ಕಗ). [2] .... ನೆಂದು ಕಳೆದೊಡಾ ಸೆಟ್ಟಿಯು (ಕಗ). [3] ಳಂ (ಚಜ). [4] ಮಾಡಿ (ಘಜ). [5] ಖಿ (ಘಛ). [6] ತ್ತಿರ್ದ್ದಪ್ಪೆ (ಕಗ). [7] (ಚಜ) ಗಳಲ್ಲಿಲ್ಲ. [8] ವಿಸಿದಳ್ (ಚ) ಯಿಸಿದಳ್ (ಜ). [9] ರ್ದಿಂತೆಂ (ಘಚಜ). [10] ಜಿ (ಕ). [11] + ದ (ಜ). [12] ಮಂತೆಗೆಯ್ವೆ (ಘ), (ಚಜ) ದಲ್ಲಿಲ್ಲ. [13] ತಾಟಿಸದ (ಘಚಛ), (ಜ) ದಲ್ಲಿಲ್ಲ. [14] ಪೂಣ್ಬ ಪ್ರತಿಜ್ಞೆಯಂ ನೆನೆದು ಸರ್ವಾಭರಣ (ಘಚಛಜ).

ವ್ನೆದುನನಿ[1]ರ್ದಾಪಣಕ್ಕೆ[1] ಪೋಪನ್ನೆಗವೆಡೆಯೊಳ್ ಕಳ್ಳನೊರ್ವಂ ಕಂಡು ನಿನ್ನ ತೊಟ್ಟಾಭರಣಮೆಲ್ಲಮಂ ಕೊಟ್ಟು ಪೋಗಲ್ಲದಾಂ ಪೋಗಲೀಯೆನೆಂದೊಡೀಗಳೆ ಪೋಗಿ ಬಂದು ನಿನಗೆನ್ನ ತುಡುಗೆಯೆಲ್ಲಮಂ ಕುಡುವೆನೆನ್ನೆಗವಿಲ್ಲಿ ಎನ್ನ ಬರ್ಪನ್ನೆಗಮೆತ್ತಂ ಪೋಗದಿರೆಂದು ನಂಬೆ ನುಡಿದು ಸಂತೈಸಿ ಕಿಱಿದಂತರಮಂ ಪೋಪೊಡೆ ತಳಾಱಂ ಕಂಡೀ ಪೊೞ್ತಿತ್ತ ಪೋದಪ್ಪಯ್ ಪೊಲ್ಲಮಾನಸಿಯೆ ಎಂದಾತಂ ಪಿಡಿದು ಕಾಡೆ ಪಿರಿದೊಂದು ಮನೆವಾೞ್ತೆಯುಂಟಿನ್ನಂ ಕಾಡದೆ ಪೋಗಲೀಯಾನೀಗಳೆ ಪೋಗಿ ನಿನ್ನಲ್ಲಿಗೆ ಬಂದಪ್ಪೆಂ ಬಂದೊಡೆ ನಿನ್ನ ಮೆಚ್ಚುಗೆಯ್ವೆನೆಂದು ನಂಬೆ ನುಡಿದು ನನ್ನಿಗೊಟ್ಟು ಕಿಱಿದಂತರಮಂ ಪೋಪ[2]ನ್ನೆಗಮೆಡೆಯೊಳ್ ಬ್ರಹ್ಮರಾಕ್ಷಸಂ ಕಂಡು ತನ್ನಂ ತಿನ್ನಲ್ ಬಗೆದೊಡೆ ಬ್ರಹ್ಮರಾಕ್ಷಸಂಗೆಂದಳ್ ಪಿರಿಯದೊಂದು ಮನೆವಾೞ್ತೆಯುಂಟೀಗಳೆ ಪೋಗಿ ಬಂದಪ್ಪೆಂ ಬಂದ ಬೞಿಕ್ಕೆನ್ನಂ [3]ಮೆಚ್ಚಿದಂತೆ ಮಾಡೆಂದು[3] ನನ್ನಿಗೊಟ್ಟು ನಂಬಿಸಿ ಪೋದೊಡಾ ಕಳ್ಳನುಂ ತಳಾಱನುಂ ಬ್ರಹ್ಮರಾಕ್ಷಸನು[4]ಮಂತುಮಾಕೆಯಾ[4] ಪೊೞ್ತು ತುರಿಪದಿಂದಬ್ಬೞಿಂದೆತ್ತ ಪೋದಪ್ಪಳೆಂದು ಬೞಿವೞಿಯನೆ ನೋಡುತ್ತಂ ಪೋಪರನ್ನೆಗಂ ಮಯ್ದು[5]ನಂ ಪಟ್ಟಿರ್ದ್ದಾಪಣಕ್ಕೆ[5]ಪೋಗಿ ಬಾಗಿಲಂ ತೆಱೆ[3]ಯಿಂಮೆಂದಾಗಳವರಾರೆಂದು ಬೆಸಗೊಂಡಾಗಳಾನಲ್ತೆ ಸುದಾಮೆಯೆನೆಂದೊಡೆ ಬಾಗಿಲಂ ತೆಱೆ[6]ದಾಪಣ[6]ದೊಳಗಂ ಪೊಕ್ಕಳನೀ ಪೊೞ್ತೇಕೆ ಬಂದೆಯೆಂದು ಬೆಸಗೊಂಡೊಡೆ ನೀನಲ್ತೆ ಎನ್ನ ನನ್ನಿಗೊಂಡಯ್ ಎನ್ನ ಮದುವೆಯಂದು ಪ್ರಥಮ ದಿವಸದ ಪಸದನಮನೆನಗೆ ತೋಱಲ್ವೇೞ್ಕುಮೆಂದು ಬೇಡಿದೊಡಾಂ ಪ್ರತಿಜ್ಞೆಯಂ [7]ನೆಱಪಲ್[7] ಬಂದೆನೆಂದು ತನ್ನಂ ತೋಱಿದೊಡಾತನುಮಾಕೆಯ ರೂಪಂ ನೋಡಿ ಮೆಚ್ಚಿ ವಿದ್ಯಾಧರಿಯ ದೇವಗಣಿಕೆಯ ರೂಪನೆ ಪೋಲ್ವೆ ಎಂದು ಪೊಗೞ್ದು ಮತ್ತಮಿಂತೆಂದಂ ಪ್ರತಿಜ್ಞೆಯಂ ನೆಱಪಿದೆ ಒಳ್ಳಿತ್ತಾಯ್ತು ಪೊೞ್ತು [8]ಪೊಲ್ಲದು ನಂದೆ[8] ನಟ್ಟನಡುವಿರುಳ್ ಕಳ್ಳರುಂ ತಳಾಱರುಂ ಕಾಡುವರ್ ಬೇಗಂ ಪೋಗೆಂದು ನುಡಿದು ಪೋಗಲ್ವೇೞ್ದೊಡದೆಲ್ಲಮನಾ ಮೂವರುಂ ಪೊಱಗೆ ಕೇಳ್ದು ಮತ್ತಂ ಬೇಗವೇಗಂ ಪೋಗಿ ತಮ್ಮಿರ್ದೆಡೆಗಳೊಳಿರ್ದರನ್ನೆಗಮಾ [9]ಮದೆವಳ್[9] ರಕ್ಕಸನಲ್ಲಿಗೆ ಬಂ[10]ದೇನೆನ್ನಂ ನೀಂ ಮೆಚ್ಚಿದಂತಂ ಮಾಡೆಂದು[10]ತ[11]ನ್ನಂ ತೋಱಿ[11]ದೊಡಾ ಬ್ರಹ್ಮರಾಕ್ಷಸನಿಂತೆಂದಂ ನೀಂ ಸತ್ಯವಾದಿಯಯ್ ಆದಮಾನುಂ ರೂಪು ಲಾವಣ್ಯ ಸೌಭಾಗ್ಯ ಕಾಂತಿ [12]ಹಾವಭಾವ ವಿಲಾಸ ವಿಭ್ರಮಂಗಳ[12]ನೊಡೆಯಯ್ ನಿನ್ನಂ ತಿಂದಾನಾವ ಗತಿಗೆ ಪೋಪೆಂ ನಿನ್ನ ರೂಪನೞಿಯಲಾಱೆನಱಂಜದೆ ಪೋಗೆಂದು ಪೋಗಲ್ವೇೞ್ದೊಡೆ ಬರ್ಪಳನ್ನೆಗಂ ತಳಾಱನಂ ಕಂಡಿನ್ನೆನ್ನಂ ನೀಂ ಮೆಚ್ಚುಗೆಯ್ಯೆಂದು ನುಡಿದೊಡಾತನಿಂತೆಂದಂ ನೀಂ ಪೊಲ್ಲಮಾನಸಿಯೆ ಎಂದು ಮನದೊಳೆ ಬಗೆದೆಂ ನಿನ್ನಂತೊಳ್ಳಿದರಾರುಮಿಲ್ಲ [13]ನುಡಿದ ನನ್ನಿಯಂ[13] ತಪ್ಪದೆ ಬಂದೆ

---

[1] ದ್ರೊರ್ದೀವಣಕ್ಕೆ (ಕಗ), ನಿರ್ದ್ದಾಯೆಡೆಗೆ (ಘಚಛಜ). [2] + ಳ (ಚಜ). [3] ತಿನ್ನೆಂದು (ಘಚಛಜ). [4] ಪಿಂತೀ ಮೂವರುಮಾ (ಚ), ಮೂವರು (ಜ). [5] ನನು × × × ಗೆಯ್ದಿರ್ದಾವಾಸಕ್ಕೆ (ಕಗ), (ಖ) ದಲ್ಲಿ ನಷ್ಟ. [6] ದೊಡಾಪಣ (ಘಜ). [7] ತೋಱಲ್ (ಘಚಜ). [3] ಪೊಡಮಡೆ (ಚ). [9] ಮದೇವಳಪ್ಪ ಸುದಾಮೆಯುಂ (ಘಛಜ), (ಚ) ದಲ್ಲಿಲ್ಲ. [10] ದೆನ್ನಂತಿನ್ನೆಂದು (ಘಚಛಜ). [11] ನ್ನನೊಪ್ಪಿಸಿ (ಘಚಛಜ). [12] ಯ (ಘಚಛಜ). [13] ನಿನ್ನನನ್ನಿಗೆ (ಘಚಛ), ನಿನ್ನಂನನ್ನಿಗೆ(ಜ).

[1]ಸತ್ಯವಾದಿಯಯ್[1] ಪೋಗಬ್ಬಾ ಎಂದು ಪೋಗಲ್ವೇೞ್ದೊಡೆ ಬರ್ಪಳನ್ನೆಗಂ ಕಳ್ಳನಂ ಕಂಡು ತನ್ನ ತೊಟ್ಟಾಭರಣಮನೆಲ್ಲಮಂ ಕಳೆದೊಪ್ಪಿಸೆಯಾತನಿಂತೆಂದನೆನಗೇನೊಂದೆ ಭವಮೆ ನಿನ್ನ ಕೈಯ[2]ದಂ[2] ಕೊಂಡಾನೇನಾಚಂದ್ರಾರ್ಕತಾರಂಬರಂ ಬರ್ದ್ದಪ್ಪೆನೆ [3]ಎ[3]ಣಿಕೊಂಡ ಕಸವರಂ ತವನಿಧಿಯಂತೆ ತವದಿರ್ದ್ದಪ್ಪುದೆ ನಿನ್ನ ಕೈಯಿಂದಂ ಕೊಳ್ಳೆ ಪೋಗಬ್ಬಾ ಎಂದು ಪೋಗಲ್ವೇೞ್ದನಂತಾ ಮೂವರುಂ [4]ಮದೆವಳಂ[4] ಪೋಗಲ್ವೇೞ್ದು ಪೂಜಿಸಿ ಕೞಪಿದೊಡಾಕೆಯುಂ ತನ್ನ ಮನೆಗೆ ಪೋದಳಿಂತವರೊಳಗೊಳ್ಳಿದರಾರಣ್ಣಂಗಳಿರಾ ಪೇೞಿಮೆಂದು ಸುಮತಿಯೆಂಬ ಕನ್ನೆ ಬೆಸಗೊಂಡಾಗಳಾ ಸುಭಟರೊಳೊರ್ವನಿರುಳ್ ಕುಱಿಯಂ ಕೊಂದವಂ ಬೊಮ್ಮರಾಕ್ಷಸನಾಕೆಯಂ ತಿನ್ನದೆ ಕೞಪಿದೊಡಾತನೊಳ್ಳಿದನೆಂದಂ ಸರ್ಪದಷ್ಟನಂ ಕಾದಿರ್ದಾತಂ ತಳಾಱಂ ಕಾಡದೆ ಕೞಪಿದನಾತನೊಳ್ಳಿ[5]ದನೆಂದಂ[5] ಕಿಚ್ಚಂ ತರಲ್ ಪೋದಾತನಿಂತೆಂದಂ [6]ಮದೆವಳಂ[6] ಸೋದರ[7]ಮಯ್ದುನನತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಂಗಳನೊಡೆಯೊಳಂ ಸೋದರ[7]ಮಾವನ ಮಗಳಂ ತನ್ನಲ್ಲಿಗೆ [8]ವಂದೊಳ[8]ನೇಕಾಂತಂ ಸಮನಿಸಿದೊಡಾಕೆಗಳಿಪದೆ ಪೋಗವೇೞ್ದು ಧನದತ್ತನೊಳ್ಳಿದನೆಂದಂ ಪುಳ್ಳಿಯಂ ತರಲ್ ಪೋದಾತಂ ಸಾಸಿರ ದೀನಾರದ ಪೊಟ್ಟ[9]ಳಿಗೆಯಂ[9] ಕ[10]ಳ್ದಾ[10]ತನಿಂತೆಂದಂ ಮದೆವಳ್ ತೊ[11]ಟ್ಟಾಭರಣಮೆಲ್ಲಮಂ ಕೊಳ್ಳದೆ ಕೞಪಿದ ಕಳ್ಳ[11]ನೊಳ್ಳಿದನೆಂದೊಡಾತನ್ ಕಳ್ಳನಪ್ಪುದನಱಿದು [12]ಕಿಱಿದು[12] ಬೇಗಮಿರ್ದಾ ನುಡಿಗಳೆಲ್ಲಮಂ ಮಱೆಯಿಸಿ ಎಲ್ಲ[13]ರುಮಂ ಮಱಲುಂದಿಸಿದ ಬೞಿಕ್ಕ[13]ಮಾ ಕಳ್ಳನನೆೞ್ಬಿ ಏಕಾಂತದೊಳಿಂತೆಂದು ನುಡಿಗುಂ ನಿನಗಾನಾಟಸಿದೆನೆನಗೆ [14]ನೆಱೆಯೆ[14] ತುಡುಗೆಯಂ ಮಾಡಿಸಲ್ [15]ಭಾಗಸ[15]ಮುಳ್ಳೊಡೆ ನಿನಗಾಂ ಪೆಂಡತಿಯೆನಾಗಿ ನಿನ್ನೊಡವರ್ಪೆನೆಂದವನನುರ್ಕೆವದಿಂದಂ [16]ಮನಂಗೊಳೆ ನಂಬೆ ನುಡಿದೊಡಾತನುಂ ಮೆಯ್ಯಱಿಯದೆ ದೀನಾರದ ಸಹಸ್ರದ ಪೊಟ್ಟಳಿಗೆಯಂ ತೆಗೆದು ಕೊ[17]ಟ್ಟಾನಿದಱೊಳಗೆ[17] ನಿನಗೆ ತುಡುಗೆಯಂ ಮಾಡಿಸುವೆಂ ಬಾ ಪೋಪಮಿರ್ವರುಮೆಂದೊಡಂತೆಗೆಯ್ವೆನೆಂದು ಪೊನ್ನ ಪೊಟ್ಟಳಿಗೆಯಂ ತಂದೆಯ [18]ಮಱಲುಂದಿದಲ್ಲಿಗೆ[18] ಪೋಗಿ [19]ಬರುಂಟೆ[19] ಎೞ್ಬಿ ಪೊಟ್ಟಳಿಗೆಯಂ ತಂದೆಗೆ ಕೊಟ್ಟಳ್ ಕೊಟ್ಟೊಡಾತನುಂ ಕಳ್ಳನುಮಂ ದೀನಾರದ ಸಹಸ್ರದ ಪೊಟ್ಟಳಿಗೆಯುಮಂ ಕೊಂಡು ಪೋಗಿಯರಸಂಗೊಪ್ಪಿಸಿದನೆಂಬೀ ಚಿತ್ರಕಥೆಗ[20]ಳುಮಂ[20] ಜನಂಗಳ್ಗೆ ಪೇೞ್ದು ಬತ್ತಮಂ ಕಳ್ದಾಂ ವೈನಯಿಕನೆಂಬೊಂ ಕಳ್ಳನಿನ್ನುಮಾತನ ಪೇೞ್ದ

1 (ಘಚಜ) ಗಳಲ್ಲಿಲ್ಲ. 2 ಯ್ಯ ಆಭರಣಮಂ (ಚ). 3 ಎಂದುಮೆ (ಕಗ). 4 ಸುದಾಮೆಯಂ (ಚಜ). 5 ದಂ (ಕಗ). 6 ಸುದಾಮೆಯಂ (ಚ). 7 + ಧ (ಚಜ). 8 (ಕಗ) ಗಳಲ್ಲಿ ತ್ರುಟಿತ. 9 ಣಮಂ (ಚ), ಳಮಂ (ಜ). 10 ದ್ದಾ (ಕಗ). 11 ಟ್ಟುದೆಲ್ಲಮಂ + + + ಡಾತ (ಕಗ), (ಖ) ದಲ್ಲಿ ನಷ್ಟ. 12 (ಸ–ಚ) ಪ್ರತಿಗಳಲ್ಲಿಲ್ಲ. 13 ರುಂ ಪಟ್ಟಿರ್ದಿಂ ಬಳಿಯ (ಘಚಛಜ). 14 ತಕ್ಕವಸ್ತುವುಳ್ಳೊಡೆ (ಚಛ), (ಘಛ) ಗಳಲ್ಲಿಲ್ಲ. 15 ಭಾಗವಸ (ಘಜ). 16 + ನಾನಾ ಪ್ರಕಾರದಿಂ (ಘಚಜ). 17 ಟ್ಟನಿತಱೊಳೇ (ಘಛಜ), (ಚ) ದಲ್ಲಿ ತ್ರುಟಿತ. 18 ಪಟ್ಟಿರ್ದಲ್ಲಿಗೆ (ಘಚಛಜ). 19 ಬೆರಂಟೆ ಕಗ, (ಖ)ದಲ್ಲಿ ನಷ್ಟ. 20 ಳ್ಳಂ (ಗ).

ಕಥೆಗ[1]ಳುಮಂ[1] ಪೇೞ್ವೆಂ ಕೇಳ್ ಮಗಳೆ ಎಂದು ಸೋಮಶರ್ಮಭಟ್ಟಂ ನಾಗಶ್ರೀಗಿಂತೆಂದು ಪೇೞ್ಗುಂ

ಧರ್ಮಪುರಮೆಂಬುದು ಪೊೞಲಲ್ಲಿ ನಾಗದತ್ತನೆಂಬೊಂ ಶ್ರೇಷ್ಠಿಯಾತನ ಬಂಟಂ [2]ವೈನಾ[2]ಕನೆಂಬೊನಾತನೊಂದು ದಿವಸಂ ಕಬ್ಬಿನ ಕೆಯ್ಯ[3]ನುೞ[3]ರ್ವ್ವಂ ನಿದಾನಮಂ ಕಂಡ[4]ದಂ[4] ಮಱಸಲ್ವೇಡಿ ತನ್ನ ಪೆಂಡತಿಯ ಮನಮಂ ಪರೀಕ್ಷಿಸಲ್ವೇಡಿ ಕೃತಕ ಗರ್ಭಮಂ ತಾಳ್ದಿರೆ ಪೆಂಡತಿ ಕಂಡಿದೇನ್ [5]ಬಸಿಱೊ[5]ಳ್ದುದೆಂದೊಡಾತನಾ ಮಾತಿನೊಳೇನೊ ಕೆಮ್ಮಗಿ[6]ರೆಂ[6]ದೊಡಾಕೆ ನಿರ್ಬಂಧದಿಂ ಕೇಱ ಬೆಸಗೊಳೆ[7]ಯಾರ್ಗಂ[7] ಪೇೞೆಯಪ್ಪೊಡೆ ನಿನಗೆ ಪೇೞ್ವೆನೆಂದಿಂತೆಂದಂ ಪುರುಷ[8]ರ್ಕ್ಕಳ್ಗಾಗದುದೆನಗಾ[8]ದುದೆಂದು ಪೇೞ್ದೊಡದಂ ಕೇಳ್ದು ಸೈರಿಸಲಾಱದೆ ಪೊೞಲ ಜನಂಗಳೆಲ್ಲಮಱವಂತು ಪೇೞ್ದಳೆಂಬೆರಡನೆಯ ಕಥೆಯುಮಂ ಪೇೞ್ದು ಮೂಱನೆಯ ವೃದ್ಧಸ್ತ್ರೀಯ ಕಥೆಯನಿಂತೆಂದು ಪೇೞಲ್ ತೊಡಂಗಿದಂ

ಹರಿಪುರಿಯೆಂಬ [9]ಪೊೞಲೊಳ್[9] ಗಂಭೀರೆಯೆಂಬೊಳೊರ್ವಳ್ ಬಿ[10][ದ್ದಿ]ರ್[10] ಯಾಕೆಯ ಮಗಳ್ ಹರಿಣಿಯೆಂಬೊಳಾಕೆಯಂ ಜ[11]ಯಂತ[11]ಮೆಂಬ ಪೊೞಲೊಳ್ ವಸುದತ್ತನೆಂಬ ಪರದಂಗೆ ಕೊಟ್ಟೊಡಾಕೆಗೆ ಗರ್ಭಮಾಗಿ [12]ಮೋದಗೆ[12]ಯ ಮೇ[13]ಗೆ[13] ಬಯಕೆಯಾದೊಡೆ ತಾಯ್ ಪಲವುಂ ತೆಱದ ಲಡ್ಡುಗೆಗಳ್ [14]ಮಂಡಗೆಗಳುಂ[14] ಮೊದಲಾಗೊಡೆಯ ಪಲವುಂ ಭಕ್ಷ್ಯ ಭೋಪಂಗಳುಮಂ ಕೊಂಡು ಗಂಭೀರೆಯೆಂಬ [10]ಬಿ[ದ್ದಿ]ರ್[10] ಹರಿಪುರದಿಂ ಪೊಱಮಟ್ಟು ಮಗಳ[15]ದ್ದೂ[15]ರ್ಗೆ ಪೋಪಳನ್ನೆಗಮೆಡೆಯೊಳೆಣ್ಬರ್ ಕಳ್ಳರಂ ಕಂಡವರೊಳಗೊರ್ವ[16]ನಂ ಪಿಡಿದಟ್ಟಿತ್ತಿನ್ನ ಮಗಂ ನಿನ್ನನೆ ಪೋಲ್ಕುಂ ಪನ್ನೆರ[17]ಟ್ಬಿ[17]ರಿಸಂ ಪೋದೊನೆತ್ತ ಪೋದನೆಂದಱಯೆನಾತನಂ ಕಾಣದಿರುಳುಂ ಪಗಲುಂ ನೆನೆದಟ್ಟುತ್ತ ಕಣ್ಗಳ್ ಬಾತಿರ್ಪುವಿಂದೆನಗೆ ಆತಂ ಬಂದಂತಿರೆ ನಿನ್ನಂ ಕಂಡು ಸಂತಸನಾಯ್ತು ಮಗನೆ ನೀವೆಲ್ಲಂ ಬನ್ನಿಂ ಪೋಪಂ ಸಾರೆಯೂ[18]ರಂ ಮಿಂದುಂಡುಟ್ಟು[18] ವಿಶ್ರಮಿಸಿ ನಾಳೆ ಪೋಪಿರೆಂದೊಡಗೊಂಡು ಪೋಗಿ ಮಗಳ ಮನೆಯನೆಯ್ದಿ ಅವರ್ಗೆಲ್ಲಂ ನೀ[19]ರ[19]ನಿಡಿಸಿ ತಲೆಯಂ ಪೂಸಿಸಿಯೊಲ್ಲಣಿಗೆಯನುಡಿಸಿ ತಲೆಯೊ[20]ಳ್[20] ಕಟಿಯಂ ಪೊಯ್ವಾಗಳ್ ಬಿ*[ದ್ದಿ]ರ್*ಮನೆಯ ಮೇಗೇಱ ಕಳ್ಳರೆಂದು ಪುಯ್ಯಲಿಟ್ಟಾಗಳನಿಬರುಂ ತ್ರಸ್ತಾ[21]ಭಿಭೂ[21]ತರಾಗಿ [22]ಪಟ್ಟನೆ ಪಾಱ[22]ಯೋಡಿ ಕೆಟ್ಟೊಳ್ಳಿತ್ತೆಮ್ಮಂ [23]ಬಿ[ದ್ದಿ]ರ್[23]ಭಿದ್ರಿಸಿದಳೆಂದು ಪಗೆಸಾಱ[ದ್ದ]ರ್[24]ರಿತ್ತ† ಬಿ*[ದ್ದಿ]ರ್*

---

[1] ಳ್ಮಂ (ಗ). [2] ವೈಸಾ (ಕಖ), ವೈನೆ (ಘಚ), ವೈನಯಿ (ಜ). [3] ನಾಳ್ವೊಂ (ಕಖಗ). ನುಳ್ವಲ್ಲಿ (ಘಚಛಜ). [4] ಡನದಂ (ಘಚಜ). [5] ಬಸಿಬ್ಬಾರ್ತಿ (ಘಚಛಜ). [6] ರಲೆಂ (ಕ). [7] ನೀನಾರ್ಗಂ (ಘಜ). [8] ಗ್ಗಾಗದ ಗರ್ಭಮೆನಗಾ (ಘಚಛಜ). [9] ಪುರದೊ (ಕಖಗ). [10] ಳ್ದಿ (ಕಖಗ), ದ್ದಿ (ಘಚಛಜ). [11] ಯಪುರ (ಘಚಛಜ). [12] ಮೊಱಗೆ (ಖ), ಮೊದಱಗೆ (ಕ). [13] ಲೆ (ಕಖಗ). [14] (ಘಚಛಜ) ಗಳಲ್ಲಿಲ್ಲ. [15] ಪ್ಪೂ (ಕಖಗ). [16] + ಕಳ್ಳ (ಘಚ). [17] ಡ್ಬ (ಖ), ಡುವ (ಘಚಜ). [18] ರುಂಟು (ಘಚಛಜ). [19] ಗ್ಗಳ (ಘಚಛಜ). [20] ಳಟ್ಟು (ಘಚಛಜ). * ಳ್ದಿ (ಕಖಗ), ದ್ದಿ (ಘಚಛಜ). [21] ಭೀ. [22] ಪಟ್ಟಂಪಱ (ಘಚಛಜ). [23] ಳ್ದಿಗಿತ್ತಿ (ಕಖಗ). [24] ಳ್ದ (ಕಖಗ). † ಮುಂ ನೆಟ್ಟನೊರ್ವನೊಂದಿರುಳೊಳ್ (ಕಖಗ).

ಯುಂ ನೆಟ್ಟನಿಂದಿರುಳ್ ಕಳ್ಳರ್ ಬರ್ಪರೆಂದಱಿದು ಕೂರಿತಪ್ಪ ಬಾಳಂ ಪಿಡಿದಿರ್ದಳನ್ನೆಗಮಿರುಳ್† ಕಳ್ಳರ್ ವಂದಾಕೆಯ [1]ಲುಂದಿದ[1] ಮನೆಯೊಳ್ ಕನ್ನಮಿಕ್ಕಿದೊಡೆ ಕನ್ನದ ಬಾಗಿಲೊಳಾ ಬಾಳನಡ್ಡಮಿಟ್ಟು ಪಿಡಿದಿ[2]ರ್ದು[2] ಪುಗುವ ಕಳ್ಳನ ಮೂಗನರಿದೊಡವಂ ಪೊಱಮಟ್ಟು ತನಗೆ ಪುಗಲ್ ಪಾಂಗಿಲ್ಲ ನೀಂ ಪುಗೆಂದು ಪೆಱನೊರ್ವ[3]ನಂ ಪುಗಿಸಿದೊಡಾ[4]ತನ ಮೂಗುಮಂ ಕೊಱೆದೊಡಾತನುಂ ಪೆಱನೊರ್ವನಂ ಪುಗಿಸೆ ಸೂೞ ಸೂೞೊಳೆ ಪೊಕ್ಕೊಡನಿಬರ ಮೂಗುಮಂ ಕೊಱೆದಿಕ್ಕಿದೊಡನಿಬರುಂ ಮೂಗರಿಯೆಪಟ್ಟು[4] ಪೊಱಮಟ್ಟು ಪೋಗಿಯೊರ್ವನಿಂದ್ರಜಾಲಿಗನ ಮನೆಯೊಳ್ ಕನ್ನಮಿಕ್ಕಿ [5]ಪುಡುಕೆಯುಂ ತೆಗೆದು ಪೊತ್ತುಪೋಗಿ ಪೊಱವೊೞಲೊಳ್ ಶ್ಮಶಾನದೊಳಿೞಿಪಿ ಕುಱಿಯಂ ಕಳ್ದು ತಂದಱಿವರ್ ಕಳ್ಳರುಂ [6]ಮಱಲುಂದಿದರೊರ್ವನಾ[6] ಕುಱಿಯಂ ಕೊಂದು ಜಾವಮಿರ್ದು ಮಸಣದ ಕಿಚ್ಚಿನೊಳ್ ಪಿಶಿತಮಂ ಮಾಡುತ್ತಿ[7]ರ್ದು[7] ಪುಡುಕೆಯುಂ ತೆಱೆದು ನೋೞ್ಪನ್ನೆಗಮದಱೊಳಗಿರ್ದ [8]ಇಂದ್ರಜಾಲಿ[8]ಗರ ಪಾವೆಗಳುಂ ಸೀರೆಗಳುಂ ಝು[9]ಣಂಬ[9]ಮಂ ಕೊಂಡೊಂದು ಪ್ರತಿಮುಖಮಂ ಕೊಂಡು ತನ್ನ ಮುಖದೊಳಿಟ್ಟು ಪುಲಿಯ ಝುಣಂಬಮುಮಂ ತೊಟ್ಟು ಶ್ಮಶಾನದೊಳುರಿವ ಕಿಚ್ಚಿನ ಪಕ್ಕದೆ ನಿಂದಿ*ರ್ದನನ್ನೆಗಮೆೞ್ಚತ್ತು ಕಂಡಱಿವರುಂ ಕಳ್ಳರುಂ ಬೇತಾಳನೆಂದಂಜಿ ಪ್ರಾಣಭಯದಿಂದೋಡಿ ಕೆಟ್ಟರಾತನುಮವರೋಡುವುದಂ ಕಂಡು [10]ಪಿಶಿತಮಂ ಕೊಂಡು[10] ಬೞಿಯಂ ತಗುಳೆ [11]ಎನಿತೆನಿತಾ[11]ತನಂ ಕಾಣ್ಬರನಿತನಿತನೆ ಬೇತಾಳಂ ಬೞಿಯಂ ತಗುಳ್ದನೆಂದೋಡೆ ಪ್ರತಿಮುಖಮುಂ ಝು[12]ಣಂ[12]ಬಮುಮಂ ಕಳೆದೀಡಾಡಿ ತನ್ನ ಪೆಸರಂ ಪೇೞ್ದವರಂ ಮಾಣಿಸಿಯೊಡಗೂಡಿ ತನ್ನ ಮಾಡಿದ ಪಿಶಿತಮನವರ್ಗ್ಗೆಲ್ಲಂ [13]ಪರ್ಚ್ಚಿ[13] ಗೊಟ್ಟುಮನಿಬರುಮೊಂದಾಗಿ ಪೋಪನ್ನೆಗಂ

ಇತ್ತ ಗಂಭೀರೆಯೆಂಬ [14]ಬಿ[ರ್ದ್ದಿ][14] ಬೈಗಿರುಳಿನೊಂದು ಜಾವಮುಂಟೆನೆ ಎೞ್ದು ಪೊೞಲಂ ಪೊಱಮಟ್ಟು ತನ್ನೂರ್ಗ್ಗೆ ಪೋಪಳ್ ನೆರಂ [15]ಬೆಱದಂ[15]ಜಿ ವಂದಾಲದ ಮರನನೇಱಿರ್ದಳನ್ನೆಗಮಾ ಕಳ್ಳರಾಕೆಯೇಱಿರ್ದ್ದ ಮರಕ್ಕೆ ವಂದವರೊಳೊರ್ವಂ ಬಟ್ಟೆಯೊಳ್ ಬರ್ಪ ಜನಮಂ ನೋಡಲ್ವೇಡಿ ಮರದ [16]ತುತ್ತತುದಿಯನೇಱಿ ನೋೞ್ಪನ್ನೆಗಂ[16] ಮರದ ಮೇಗಿರ್ದ ವೃದ್ಧಸ್ತ್ರೀಯಂ ಕಂಡು ನೀನಾರ್ಗ್ಗೆಂದಾತಂಬೆಸಗೊಂಡೊಡಾಕೆಯಾನೀ ಮರದೊಳಿರ್ಪ್ಪ ಯಕ್ಷದೇವತೆಯೆನೆಂದೊಡಾತನೆನಗೆ ಪೆಂಡತಿಯಪ್ಪಾ ಎಂದು ಬೆಸಗೊಂಡೊಡೊಂದು ಪಾಂಗಿನೊಳಪ್ಪೆನೀ ಪಿಶಿತದ ಖಂಡಮಂ ನಾಲಗೆಯಿಂ ಪಿಡಿದೆನ್ನ ಬಾಯೊಳಿಡುವೊಡೆ ನಿನಗಾಂ ಪೆಂಡತಿಯಪ್ಪೆ

---

[1] ನಿದ್ರೆಗೆಯ್ವ (ಘಚಭಜ). [2] ಳ್ದು (ಕಖಗ). [3] + ಕಳ್ಳ (ಘಚಭಜ). [4] ತನುಂಪೆಱನೊರ್ವಕಳ್ಳನಂ ಪುಗಿಸೆಯಿಂತಿಂತನಿಬರುಂ ಮೂಗರಿವಟ್ಟು (ಚ). [5] + ಮಾನ (ಚ). [6] ಪಟ್ಟಿರ್ದವರೊರ್ವಕಳ್ಳನಾ (ಚ), ಪಟ್ಟಿರ್ದರೊರ್ವನಾ (ಜ). [7] ಳ್ದು (ಕಖಗ). [8] (ಕ) ಖಗಗಳಲ್ಲಿ ತ್ರುಟಿತ. [9] ಣಂಕೃತ (ಕಗ), (ಘ) ದಲ್ಲಿ ಇಲ್ಲ. * (ಘ) ದಲ್ಲಿ ಇಲ್ಲ. [10] (ಘಜ)ಗಳಲ್ಲಿಲ್ಲ. [11] ಯೆನತೆನತಾ (ಜ). [12] ಳಂ (ಕಖಗ). [13] ಬಿರ್ಚಿ (ಗ), ಪರ್ಚ್ಚಿ (ಘ), ಪಚ್ಚು (ಜ). [14] ಳ್ದಿ (ಕಖಗಘಛ), ದ್ದಿ (ಚಜ). [15] ಬಡ (ಕಗ). [16] ತುದಿಯನೇಱಿ (ಘಚಭಜ).

ನೆಂದು ನುಡಿದೊಡಾತನುಂ ನಾಲಗೆಯಿಂದಂ ಪಿಶಿತದ ಖಂಡಮುಂ [1]ಬಾಯೊಳಿಡೆ[1] ನಾಲಗೆಯುಂ ಪಱಿಯೆ ಕಚ್ಚಿದೊಡವಂ ಪುಯ್ಯಲಿಟ್ಟಂಜಿ *ಬೀೞ[3] ಅನಿಬರುಂ* ಭಯದಿಂದೋಡೆ ವೃದ್ಧಸ್ತ್ರೀಯೆಂದಳ್ ಎನಗೆ ನಿಮ್ಮ ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮುಂ ತಂದೀ [2]ಪೊಟಿಲೊ[2]ಳಿಟ್ಟುಪೋಪೊಡೆ [3]ಬಾೞ್ವ[3]ರಲ್ಲದಾಗಳ್ ಸತ್ತಿರ್ ನಿಮ್ಮೆಲ್ಲರುಮಂ ತಿಂದಪ್ಪೆನೆಂದೊಡಂಜಿ ಕಳ್ಳರಂತೆಗೆಯ್ವೆಮೆಂದೊಡಂಬಟ್ಟು ಕಳ್ವಲ್ಲಿಯೆಲ್ಲಮೆಂಟನೆಯ ಭಾಗಮುಂ ಮರದ [4]ಪೊಟಿಲೊ[4]ಳಿಟ್ಟು ದಿವಸಕ್ಕಂ ಪೋಪರಾ ವೃದ್ಧಸ್ತ್ರೀಯುಂ ತನ್ನೂರಿಂದಂ ಬಂದು ಕಸವರಮುಂ ಕೊಂಡು ಪೋಕುಮಿಂತಾ ಎಣ್ಬರ್ ಕಳ್ಳರನಾ ವೃದ್ಧಸ್ತ್ರೀ ಪಿಡಿದಾಳ್ದಳೆಂಬ ಕಥೆಗ[5]ಳುಮಂ[5] ಇಂತಿವು ಮೊದಲಾಗೊಡೆಯ ಚಿತ್ರಕಥೆಗಳಂ ಪಟದೊಳ್ ಬರೆದು ಜನಂಗಳ್ಗೆ ತೋಱಿ ಪೇೞ್ದು ಬತ್ತಮುಂ [6]ಕಳ್ದೊ[6]ನೀತನೊರ್ವಂ ವೈನಯಿಕನೆಂಬೊಂ ಕಳ್ಳಂ ಮತ್ತೊ[7]ರ್ವಂ ವೈನಯಿಕನೆಂಬೊಂಗಾಸಕ್ತರಾಗಿ[7] ಕೇಳ್ವ ಜನಂಗಳ ಧಾನ್ಯಮನಱುವತ್ತು ಬಳ್ಳಮನಿ[8][ಪ್ಪರ್][8]ತ್ತು ಬಳ್ಳಮೆಂದಳೆ[9]ಗು[9]ವಿಮೀತನೊರ್ವಂ [10]ವೈಕ[10]ನೆಂಬೊಂ ಕಳ್ಳಂ ಮತ್ತೊರ್ವಂ [11]ವ್ಯೋಮಕ[11]ನೆಂಬೊಂ ವೈನೈಕನ [12]ಕಳ್ದ[12] ಧಾನ್ಯಮನೆಲ್ಲಮನಲ್ಲಿಯ ನೆಲಮನೆಯೊಳಗಿರ್ದು ಕಿಱಿ[13]ದಾನುಮೊಂದು ಛಿದ್ರದ್ವಾರದೊ[13]ಳಗಣ್ಗೆ ಬತ್ತಮುಂ ಬರೆ[14]ಕೊಳ್ವಂ[14] ಪೊಱಗಣಳಿದ ಬತ್ತಮುಂ ನೋಟಕ್ಕೆ ಕಿಱಿದಪ್ಪಂತಿರೆ ಇಂತು ಮೂವರುಮೊಂದಾಗಿ ಬತ್ತಮುಂ ಮಾಱುವರಾ ಬತ್ತಂಗಳಂ [15]ಕಳ್ದು[15]ಕೊಳ್ವರೀ [16]ಪ್ರಕಾರದಿಂ[16] ಮೂವರ್ಗಂ ಕಾಲಂ ಸಲೆ ಮತ್ತೊಂದು ದಿವಸಂ ಕೌಶಳ[17]ಮೆಂಬೂರ [18]ಗಾಮುಂಡಂ[18] ಜಗದ್ಗೃಹನೆಂಬೊಂ ತನ್ನ ಬತ್ತಮುಂ ಚಂಪಾನಗರಕ್ಕೆ ಮಾಱಲೆಂದು ಕೊಂಡು ಪೋಗಿ ಬತ್ತಮನಳೆವಲ್ಲಿ[19]ಯಾ ಮೂ[19]ವರ ದೋಷಂಗಳುಂ ಪ್ರಕಟಮಾಗರಸುವರೆಗಮಾದೊಡೆ ಅರಸನಿವರ ಕಳವಿನ ಪುಸಿಯ ದೋಷಂ ಕಾರಣಮಾಗಿ ಮೂವರುಮುಂ [20]ಕೊಲಲ್ ಪೇೞ್ದೊಡೆ[20] ಕೊಲಲುಯ್ದಪ್ಪರ್ ಮಗಳೆ ಎಂದು ಪೇೞ್ದೊಡೆ ನಾಗಶ್ರೀಯುಮೀ ತೆಱದಪ್ಪ ದುಃಖಕ್ಕಂಜಿ ಪುಸಿಯುಂ ಕಳವುಮಂ ನಿವೃತ್ತಿಗೆಯ್ದೆನಮ್ಮಾ ಎಂದೊಡಂ ತಪ್ಪೊಡಾ ಎರಡುಂ ಬ್ರತಂಗಳ್ ನಿನಗಿರ್ಕೆ [21]ಮಗಳೆ ಎಂದೊಡಂತೆಗೆಯ್ವೆನೆನೆ[21] ಮತ್ತಂ ಕಿಱಿದಂತರಮಂ ಪೋಪನ್ನೆಗಂ ಗಂಡನುಮಂ ಪೆಂಡತಿಯನೊಡಗೂಡಿ ಇರ್ವರುಮಂ ಪೆಡಂಗಯ್ಯುಡಿಯೆ ಕಟ್ಟಿಕೊಂಡು ಪೋ[22]ಪರಂ ಕಂಡೇ[22] ದೋಷಂಗೆಯ್ದರವರಂ

---

[1] ನಾಲಗೆಯೊಳಿಡೆ (ಘಚಭಜ). * ಜಿದೊಡೆಳ್ಬರುಂ (ಘಚಭಜ). [2] ಪೊೞೊ (ಕಗ). [3] ಬದ್ದಿರ್ (ಘಜಭಜ). [4] ಪೊಳೊ (ಕಗ). [5] ಳ್ರಂ (ಗ). [6] ಕಳಿಪೊ (ಕಖಗ), ಕೊಳ್ವೊ (ಘ). [7] ರ್ವಂ ವೈನೈಕನೆಂಬೊವಾನೈಕನಂತೆಯಾಸಕ್ತರಾಗಿ (ಕಗ), ರ್ವಂ ವೈನೈಕನೆಂಬೊವಾ ವೈನೈಕನಂತೆಯಾಸಕ್ತರಾಗಿ (ಖ), ರ್ವಕಳ್ಳಂ ವೈನೈಕನೆಂಬ ಕಳ್ಳಂಗಾಶಕ್ತನಾಗಿ (ಚ), ರ್ವಂ ವೈನೈಕನೆಂಬ ಕಳ್ಳಂಗಾಶಕ್ತರಾಗಿ (ಘಭಜ). [8] ಪ್ಪ (ಸ). [9] ದು (ಕಖಗ). [10] ವೈನೈಕ (ಕಖಗಘಭ). [11] ದಾರುಕ (ಘಚಭಜ). [12] ಳಿದ (ಘ), ವಡೆದ (ಜ). [13] ದಾನುಮೊಳಗಗೆ-(ಜ್ಞೆ), (ಘಚಭ), ದಾನುಮನೊ (ಜ). [14] ಕಳ್ವೊಂ (ಘಜ). [15] ಕಳ್ವ (ಘಚಜ). [16] ಸ್ವರೂಪದಿಂ (ಚಜ). [17] + ಗ್ರಾಮ (ಜ). [18] ಗಾಡಂ (ಘ), ಗಉುಂಡಂ (ಚ), ಗವುಂಡಂ (ಜ). [19] ಯ (ಘಚಭಜ). [20] (ಕಖಗ)-ಗಳಲ್ಲಿಲ್ಲ. [21] ಎಂದು (ಘಜ). [22] ಪುಪಂ ಇದಾವ (ಕಖಗ).

ಬೆಸಗೊಳ್ಳಿಮೆಂದು ತಂದೆಗೆ ಪೇೞ್ದೊಡಾತನುಮದೆಲ್ಲಮಂ ಬೆಸಗೊಂಡು ಮಗಳ್ಗಿಂತೆಂದು ಪೇೞ್ಗುಂ

ಚಂಪಾನಗರದ ಸಾರೆ ಶ್ವೇತಪುರಮೆಂಬ ಪೊೞಲಲ್ಲಿ ಮತ್ಸ್ಯನೆಂಬ ಪರದನಾತನ ಪೆಂಡತಿ [1]ಜೈಸೆ[1] ಯೆಂಬೊಳ್ ಇರ್ವರ್ಗ್ಗಂ ಮಕ್ಕಳ್ ನಂದ[2]ನುಂ ಬೋದ[2]ನೆಂಬ ವರ್ಗಳ್ ಮತ್ತಮಾ ಪೊೞಲೊಳ್ ಸೂರದತ್ತನೆಂಬ ಪರದಂಗಂ ವಸುದತ್ತೆಯೆಂಬ ಪರದಿಗಂ ಮಗಳ್ [3]ಮೋದಾ[3]ಳಿಯೆಂಬೊಳಾಕೆಯುಂ [4]ಬಸಿಱೊಳಿರ್ದಂತೆ[4] ಸೋದರ ಮಾವನ ಮಗಂ ನಂ[5]ದನೆಂಬೊಂ[5]ಗೆ ಕುಡುವಮೆಂದು ನುಡಿದರಿಂತು ಕಾಲಂ ಸಲೆ ನಂದನೊಂದು ದಿವಸಂ ದ್ರವ್ಯಂಬಡೆವುದು ಕಾರಣಮಾಗಿ ಸುವರ್ಣ ದ್ವೀಪಕ್ಕೆ ವೋಗುತ್ತಂ ಮಾವಂ[6]ಗೆಂ[6]ದಂ ಪನ್ನೆರಡು ವರುಷಕ್ಕಾಂ ಬಾರದಾಗಳ್ ಎನ್ನ ಕಿಱಿಯ [7]ತಮ್ಮಂ ಬೋದಂಗೆ[7] ಕೂಸಂ ಕುಡಿಮೆಂದು ಪೇೞ್ದು ಪೋದಂ ಇಂತು ಕಾಲಂ ಸಲೆ ಪನ್ನೆರಡುವರುಷಂ ನೆಱೆದಂದು ನಂದಂ ಬಂದನಿಲ್ಲೆಂದು ಕೂಸಂ [8]ಬೋದಂ[8]ಗೆ ಕೈನೀರೆಱೆದು ಕುಡುವ ಪ್ರಸ್ತಾವಕ್ಕಾಗಳ್ ನಂದಂ ಬಂದೊಡಾ ತಂಗೆ [9]ಕುಡಲ್[9] ತಗುಳ್ದೊಡೆ ತಮ್ಮನ ಪೆಂಡತಿಯನೆನಗೆ [10]ಕೊಳ[10]ಲಕ್ಕುಮೆ ಎಂದು ಕೊಂಡನಿಲ್ಲ [11]ಬೋದನು[11]ಮಣ್ಣನ ಪೆಂಡತಿಯನೆಂತು ಕೊಳ್ವೆನೆಂದಾತನುಂ ಕೊಂಡನಿಲ್ಲಿಂತಿರ್ವರುಂ ಬಿಸುಟ್ಟೊಡೆ [12]ಮೋ[12]ದಾಳಿ ತನ್ನ ತವರ್ಮನೆಯೊಳಿರ್ದಳ್ ಮತ್ತಮಾ ಪೊೞಲೊಳ್ ನಾಗದತ್ತನೆಂಬೊಂ ಪರದನಾತನ ಭಾರ್ಯೆ ಗಂಗೆಯೆಂಬೊಳಾ ಇರ್ವರ್ಗಂ ಮಗಂ ನಾಗಸೂರನೆಂಬೊನಾ[13]ತಂಗೆಣ್ಬರ್ ಪೆಂಡಿರ್[13] ತನ್ನ [14]ಪೆಂಡಿರೊಳ್[14] ಸಂತೋಸಂಬಡೆಯದೆ ಮೋದಾಳಿಯೊಳ್ ಮಱೆವಾೞುತ್ತಿರ್ಕ್ಕುಂ ಇಂತು ಕಾಲಂ ಸಲೆ ಮತ್ತೊಂದು ದಿವಸಂ ನಾಗಸೂರಂ [15]ಮೋ[15]ದಾಳಿಯನೊಡಗೊಂಡು ಚಂಪಾನಗರಕ್ಕೆ ವಂದೊಡೆ ತಳಾಱಂ ಕಂಡಾಯಿರ್ವರುಮಂ ಪಿಡಿದು ಕೊಂಡುಪೋಗಿ ಅರಸಂಗೆ ತೋಱಿದೊಡರಸನುಮಿರ್ವರುಮನೆರಡು ಕಾಯ್ದ ಕಬ್ಬೊನ್ನ ಪ್ರತಿಮೆಗಳನಪ್ಪವೇೞಿಮೆಂದು ತಳಾಱಂಗೆ ಬೆಸವೇೞ್ದೊಡವರ್ಗಿರ್ವರುಮಂ ಕೊಲಲ್ಕೊಂಡು ಪೋಪರ್ ಮಗಳೆ ಎಂದು ಪೇೞ್ದೊಡಾನುಮಿಂತಪ್ಪ ಭಯಕ್ಕಂಜಿ ಪರಪುರುಷ ಪ್ರಸಂಗನುಂ ತೊಱೆದೆನೆಂದೊಡಂತಪ್ಪೊಡಾ ಬ್ರತಮುಂ ನಿನಗಿರ್ಕ್ಕೆ ಮಗಳೆ ಎಂದೊಡುೞಿದ ಬ್ರತಂಗಳಂ ಬಿಸುೞ್ವುದೆಂದು ಪೇೞ್ದು ಕಿಱಿದಂತರಮಿರ್ವರ್ ಪೋಪರನ್ನೆಗಂ ಮತ್ತೊರ್ವನಂ ಕೊಲಲ್ಕೊಂಡು ಪೋಪ ಪುರುಷನಂ ಕಂಡೀತನೇದೋಷಂಗೆಯ್ದನಾಗಿ [16]ಕೊಲಲ್ ಕೊಂಡುಪೋದಪ್ಪರೆಂದು[16] ಬೆಸಗೊ[17]ಳ್ಳಿಯಮ್ಮಾ ಎಂದು[17] ತಂದೆಗೆ ಪೇೞ್ದೊಡಾತನುಮದೆಲ್ಲಮಂ ಬೆಸಗೊಂಡು ಮಗಳ್ಗಿಂತೆಂದು ಪೇೞ್ಗುಂ

---

[1] ಜೈನೆ (ಘಜ), ಜೈನಿ (ಛ), ಜೈ (ಜ). [2] ನೆಂಬ ಬೋದ (ಕಗ), ನು ಬೋಧ (ಖ). ನುಂ ಲೊದ್ದ (ಘಚಛಜ). [3] ಮುದಾ (ಗಘಚಛಜ). [4] (ಘಚಛಜ) ಗಳಲ್ಲಿಲ್ಲ. [5] ದನನೆಂಬೊಂ (ಖಗ), ದಂ (ಘಚಛಜ). [6] ನನೆಂ (ಘಚಛಜ). [7] ತಮ್ಮಂಗೆ ಲೊದ್ದಂಗೆ (ಘಚಛಜ). [8] ಲೊದ್ದಂ (ಘಚಛಜ). [9] + ಕೂಸಂ (ಜ). [10] ಕುಡ (ಘಚಛಜ). [11] ಲೊದ್ದನು (ಘಚಛಜ). [12] ಮು (ಕಗ). [13] (ಘಚಛಜ) ಗಳಲ್ಲಿಲ್ಲ. [14] ಪೆಂಡತಿಯೊಳ್ (ಚಜ). [15] ಮು (ಕಗ). [16] ಕೊಲಲುಯ್ದುಪರ್ (ಛಜ). [17] ಳ್ಳಿಮೆಂದು (ಘಚಛಜ).

ಈ ಕೊಲೆಪಡುವಾತನರಸರ ಗೋಮಂಡಳಮಂ ಕಾವೊಂ ವೀರಪೂರ್ಣನೆಂಬೊ [1]ನರಸನೊಂದು ದಿವಸಮಾತಂಗೊಸೆದು[1] ತನ್ನ ಗೋಮಂಡಳದೊಳಗೊಳ್ಳಿದುವಪ್ಪ ಪತ್ತು ಪಯನುಮಂ ಮೂಸಾಸಿರಗಂಡುಗ ಬತ್ತಮುಮಂ [2]ಪ್ರಮಾಣಂ ಮಾಡಿ ಕೊಟ್ಟೊಡಾ ಪಸರದೊಳರಸಂ ದಾಯಂಗೊಟ್ಟನೆಂದು ಸಾಮಂತರ ನಿಯೋಗಿಗಳ ಅರಸಿಯರ ಗೋವುಗಳೊಳೊಳ್ಳಿದುವಪ್ಪ ಎಮ್ಮೆಯುಂ ಪಸುಗಳುಮನಾಯ್ದು ಕೊಂಡರಸರ ಮಂಡಲದೊಳಗೆ ಪುಗಿಸಿಯುಣುತ್ತಮಿರ್ಕ್ಕುಂ ಮತ್ತಂ ಲೋಭಾಭಿಭೂತಂ ಪೊೞಲ ಪಸುಗಳನರಸರ ಗೋಮಂಡಳಮಂ[2] ಪೊಕ್ಕವೆಲ್ಲಮಂ ಬಂಡಾರಂ ಪೊಕ್ಕವೆಂದುಂ ಪೊಱಮಡವೆಂದುಂ ಜಡಿದು ಬಗ್ಗಿಸಿಕೊಂಡುಣೆ ಮತ್ತೊಂದು ದಿವಸಂ ಮಹಾದೇವಿಯ ಗೋಮಂಡಳದೊಳಗಗ್ಗಳಮಪ್ಪ ಕಾಮಧೇನುವನಾ [3]ಯ್ದೊಂದು[3] ದಿವಸಂ ವೀರಪೂರ್ಣಂ ಮೂದಲಿಸೆ ಮಹಾದೇವಿಯರಸಂಗೆನ್ನ ಕಾಮಧೇನುವಂ ವೀರಪೂರ್ಣಂ ಕೊಂಡೊಯ್ದನೆಂದೊಡರಸಂ ಸಾಮಂತರುಮರಸಿಯರುಂ ನಿಯೋಗಿಗಳುಂ ಪೊೞಲ ಜನಂಗಳುಮೆಲ್ಲಮೆಮ್ಮೆಮ್ಮ ಪಶುಗಳೆಲ್ಲಮಂ ಕೊಂಡನೆಂದನಿಬರುಂ ಪೇೞಯರಸಂ ಮುಳಿದವನೆನ್ನ ಕೊಟ್ಟುದಱೊಳ್ ಸಂತೋಷಂಬಟ್ಟನಿಲ್ಲ ಲೋಗರ ಪಶುಗಳಂ ಕೊಳಲ್ತಗುಳ್ದೊನ್ ಮಹಾಲೋಭಾಭಿಭೂತನ ಸಂತುಷ್ಟಚಿತ್ತನಿವನಂ ಕೊಲ್ಲಿಮೆಂದು ತಳಾಱಂಗೆ ಬೆಸವೇೞ್ದೊಡೆ ಸೂಲದೊಳಿಕ್ಕಲೊಯ್ದಪ್ಪರ್ ಮಗಳೆ ಎಂದು ಪೇೞ್ದೊಡೆ ನಾಗಶ್ರೀಯೆಂದಳ್ ಕೊಲ್ಲದ ಪುಸಿಯದ [4]ಕಳ್ಳದ[4] [5]ಸ್ವದಾರ ಸಂತೋಷಂ[5] ಪರಿಮಿತ ಪರಿಗ್ರಹಮಿಂತಯ್ದುಮಣುವ್ರತಂಗಳಂ ಕೊಂಡೆನೀ ಬ್ರತಂಗಳಂ ರಿಸಿಯರ್ಗೊಪ್ಪಿಸಿದೊಡಾನುಮಿಾಯ[6]ಯ್ದುಂ ಪಾಪಂಗಳೊ[6]ಳಪ್ಪ ಸೇದೆಯಂ ಕಟ್ಟುಪಡುವುದುಂ ಕೊಲೆಯುಮನಿವರಂತೆಯ್ದಲ್ ವೇೞ್ಕುಮೆಂದೊಡೆ ಸೋಮಶರ್ಮನೆಂದನೀಯಯ್ದುಮ*ಣುಬ್ರತಮಂ ಕೈಕೊಂಡು ದೃಢಬ್ರತೆಯಾಗು ಸುವ್ರತೆಯಾಗು ಮಗಳೆ ಅವರ್ಗೊಪ್ಪಿಸಲ್ವೇಡೆಂ[7]ತುಮಾ ನಿರ್ಲಜ್ಜಂ[7] ಬತ್ತಲಿಗನಪ್ಪ ಸವಣನಲ್ಲಿಗೆವೋಗಿ ಕಂಡು [8]ನುಡಿದು ಕಾಡಿ ಬರ್ಪಂ ಬಾ ಮಗಳೆ ಎಂದು ಮಗಳನೊಡಗೊಂಡು ಱಿಸಿಯರಲ್ಲಿಗೆ ಪೋಗಿ ಕಂಡು ಗೆಂಟಱೊಳಿರ್ದ್ದಿಂತೆನ್ಗುಂ ಎಲೆ[9]ತಪಸ್ವಿ[9] ಎನ್ನ ಮಗಳ್ಗೆ ನಿಮ್ಮ ಬ್ರತಂಗಳನೇಕೆ ಕೊಟ್ಟಿರೆನೆ ಸೂರ್ಯಮಿತ್ರ ಭಟಾರರೆಂದರ್ ನಿಮ್ಮ ಮಗಳ್ಗೇಕಕ್ಕುಮೆಮ್ಮ ಮಗಳಿಂಗೆಮ್ಮ ಬ್ರತಂಗಳನಾಮುಂ ಕೊಟ್ಟೊಡೆ ನಿನ[10]ಗೆ[10] ಬೇನೆ ಮೂಡಿತ್ತೆ ಎಂದು ನುಡಿದು ಇತ್ತ ಬಾ ನಾಗಶ್ರೀ ಎಂದು ಕರೆದೊಡಾಕೆಯುಂ ಪೋಗಿ ಇರ್ವರ್ ಭಟ್ಟಾರಕರ ಕಾಲ್ಗಳಂ ಪಿಡೆದೆಱಗಿ ಪೊಡೆವಟ್ಟವರ ಕೆಲದೊಳಿರ್ದೊಡೆ ಸೋಮಶರ್ಮಭಟ್ಟಂ ಬೆಱಗಾ[11]ಗಿ ಕೀಲಿಸಿ[11]ದಂತಿರ್ದೊನಂ ಭಟ್ಟಾರರೆಂದರ್ ಈ ಎಡೆಯಿಂದಂ [12]ಬೇಗಂ ಪೋಗು[12] ದುಷ್ಟ ಬ್ರಾಹ್ಮಣಾ ಅರಸರ್ಗೆ

[1] ನೊಂದು ದಿವಸ ಮಿಾತಂಗರಸನೊಸೆದು (ಚಜ). [2] ಕೊಟ್ಟು ಕಾರುಣ್ಯಂಗೆಯ್ದೊಡೆ ಸೊರ್ಕಿಪೊಳಲೊಳಗಣ ಪಸುಗಳನರಸರ ಗೋಮಂಡಳದೊಳು (ಘಚಛಜ). [3] ಯ್ದುಕೊಂಡಿರ್ದೊಂದು (ಘಚಛಜ). [4] ಕಳದ (ಘಛ). [5] ಪರವಧುವಿಂಗಳಿಪದ (ಚ). [6] ಯ್ದುಂದೋಷಂಗಳೊ (ಘ). ಯ್ದಂದದೊಳ (ಚಛ). *-* (ಖ). ದಲ್ಲಿ ನಷ್ಟ. [7] ತುನಿಚ್ಚಂ (ಕಖಗ). [8] + ಜಡಿದು (ಘಚಛಜ). [9] ದಿಗಂಬರಾ (ಚ). [10] ಗೇಂ (ಘಜ). [11] ಗಿರೆ ಇರಿಸಿ (ಕಗ). [12] (ಕಗ)ಗಳಲ್ಲಿ ತ್ರುಟಿತ.

ಪೇೞ್ದು [1]ನೀನಟ್ಟಾ[1]ಡವನ್ನೆಗಮೆಂದೊಡಲ್ಲಿಂದಮೆೞ್ದು ಪೋಗಿ ಸೋಮಶರ್ಮ ಭಟ್ಟಂ [2]ಪಿರಿದೊಂದು ತೊವಲಂ ಪಿಡಿದಬ್ರಹ್ಮಣ್ಯಂ ಭೋ ಅಬ್ರಹ್ಮಣ್ಯಂ ಭೋ ಎಂದೞುತ್ತ[2] ಮಂಗಡಿಯ ಜನಂಗಳ್ಗೆ ಪುಯ್ಯಲಿಡುತುಮರಮನೆಗೆ ಪೋಗಿ ಚಂದ್ರವಾಹನನೆಂಬರಸನಂ ಕಂಡಿಂತೆಂದು ಬಿನ್ನಪಂಗೆಯ್ಗುಂ ಮಹಾರಾಜಾ ಆಂ ಬತ್ತಲೆ ಸವಣರಿಂದಂ ಕೋೞ್ಪಟ್ಟೆನೆನ್ನ ಮಗಳ್ ನಾಗಶ್ರೀಯುಂ ತನ್ನ ಮಗಳೆಂದು ಕೈಕೊಂಡಿರ್ದರ್ ಮತ್ತವರ್ ಕೂಸಂ ಕೊಂಡೋಡದನ್ನೆಗಂ ಪೋಪಂ ಬನ್ನಿಮೆಂದರಸನನೊಡಗೊಂಡು ಪೋಗೆ ಸಾಮಂತ ಮಹಾ†ಸಾಮಂತ ಶ್ರೇಷ್ಠಿ ಸೇನಾಪತಿ ತಳಾಱ ದಂಡನಾಯಕ ಪ್ರಭೃತಿ ಚಂಪಾನಗರದ [3]ಸಬಾಳ[3]ವೃದ್ಧ ಜನಮೆಲ್ಲರುಮರಸನೊಡನೆ ನಾಗರ [4]ತಾ[4]ಣಕ್ಕೆ ಪೋಗಿ ಸೂರ್ಯಮಿತ್ರಾಚಾರ್ಯರಗ್ನಿ†ಭೂತಿರಿಸಿಯರನರಸಂ ಕಂಡವರ ಪಕ್ಕದೆ ಕುಳ್ಳಿರ್ದ್ದಿರ್ದೇನ್ ಸಂಬಂಧಂ ಪೇೞಿಮೆಂದು [5]ಮುನೀಂದ್ರನಂ[5] ಬೆಸಗೊಂಡೊಡೆ ಸೂರ್ಯಮಿತ್ರ ಭಟ್ಟಾರಕರೀ ಕೂ[6]ಸೆಂಬುದು ನ[6]ಮ್ಮ ಮಗಳೆಂದೊಡೆ ಸೋಮಶರ್ಮ ಭಟ್ಟನ್ ನಾಗಶ್ರೀ ಎನ್ನ ಮಗಳ್ ನಾಗರಿತ್ತರೆಂದೊಡೆ ಭಟ್ಟಾರರಿಂತೆಂದರ್ ನಿನ್ನ ಮಗಳಪ್ಪೊಡೆ ನಾಲ್ಕುವೇದಮುಮಾಱಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ನ್ಯಾಯಶಾಸ್ತ್ರಂ ವ್ಯಾಕರಣಂ ಪ್ರಮಾಣಂ ಕಾವ್ಯಂ ನಾಟಕಂ ಛಂದಮಲಂಕಾರಂ [7]ಅಭಿಧಾನಂ[7] ಸಾಮುದ್ರಿಕಂ ಶಾಳಿಹೋತ್ರಂ ಪಾಳಕಾಪ್ಯಂ ಹಾನಿತಂ ಚರಕಮಶ್ವಿನೀಮತಂ [8]ಬಾಹಟಂ[8] ಶುಶ್ರುತಮುಮೆಂದಿವು ಮೊದಲಾದ ನರವೈದ್ಯಮುಮಂ ಚಾಣಕ್ಯಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮನೀ ಕೂಸನೋದಿಸಿದಾ ಎಂದೊಡಾತನಿಲ್ಲೋದಿಸಿದೆನೆಂದಂ ಮತ್ತಿನಿತುಮನಾ ಕೂಸನಾವೋದಿಸಿದೆಮುದಱಿಂದೆಮ್ಮ ಕೂಸೆಂದೊಡೆ ಅರಸನೋದಿಸಿ ತೋಱಿಮೆಂದೊಡೆ ವಾಯುಭೂತಿ [9]ಎಮ್ಮೋ[9]ದಿಸಿದ ವೇದಮನೀ ಪೊಱಲ ನೆರೆದ ನೆರವಿಯ ನಡುವೆ ಓದಿ ತೋಱು ಮಗಳೆ ಎಂದೊಡಾ ನಾಗಶ್ರೀಯುಮಂತೆಗೆಯ್ವೆನೆಂದು ಪ್ರಣವಮವನುಚ್ಚರಿಸಿ ಸ್ವರ ವರ್ಣ ಭೇದದಿಂದಂ ಪ್ರಥಮಂ ಚತುಃಷಷ್ಟಿ [10]ಸಂಹಿತಿ[10]ಗಳಂ [11]ಪದ[11] ಕ್ರಮ ಭೇದದಿಂ ಬ್ರಾಹ್ಮಣ [12]ಆರಣ[12] ಸೂತ್ರಂ ಮೊದಲಾಗೊಡೆಯವನೋದಿ[13]ಋಗ್ಯಜುಸ್ಸಾಮಾಥರ್ವಣ ವೇದಂಗಳಂ [13]ಸ್ವರವರ್ಣಭೇದದಿಂದಂ ಮಂತ್ರ ಸಹಿತ ಪಾಳಿ ಪದಕ್ರಮ ಜಟೆ ಭೇದದಿಂದಂ ಶತಸೂತ್ರಂ ಮೊದಲಾ[14]ಗೆ[14]ಲ್ಲಮಂ ಯಥಾಕ್ರಮದಿಂದುಚ್ಚರಿಸಿ ಪದಿನೆಂಟು ಪುರಾಣಂಗಳುಂ ಪದಿನೆಂಟು ಧರ್ಮ [15]ಸಂಹಿತಿಗಳುಂ[15] ಮೀಮಾಂಸಾ ನ್ಯಾಯ ಸೂತ್ರಮಿವೆಲ್ಲಮನೋದಿ ಕ್ರಿಯಾಕಾರಕ ಸಂಬಂಧದಿಂದೆಲ್ಲಮಂ ವಕ್ಖಾಣಿಸಿ ತೋಱಿದೊಡರಸಂ ಮೊದಲಾಗಿ ನೆರೆದ

---

[1] ನಿನ್ನಂಕಾಡ (ಘಚಭಜ). [2] + + + + ಯೊಳಗಣಿಂದಮನ್ಯಾಯಂಭೋ ಅನ್ಯಾಯಂಭೋ ಅಬ್ರಾಹ್ಮಣ್ಯಂಭೋ ಅ ಬ್ರಾಹ್ಮಣ್ಯಂಭೋ ಎಾದಳುತ್ತ (ಕಗ), (ಖ) ದಲ್ಲಿ ನಷ್ಟ, ....ದೂದಱುತ್ತಂ (ಘಚಭಜ). † (ಜ) ದಲ್ಲಿಲ್ಲ. [3] ಶತ (ಘಚಭ). [4] ಠಾ (ಘಚಭ). [5] ಮುನಿಪತಿಯಂ (ಘಚಭಜ). [6] ಸೆ (ಘಚಭಜ). [7] ನಿಘಂಟು (ಘಚಭಜ). [8] ಬಾಭಟಂ (ಘಚಭಜ). [9] ಯನೋ (ಸಭಜ). [10] ಸಂಹಿತೆ (ಘಚಭಜ). [11] ಸ್ವರ (ಘಚಭಜ). [12] (ಘಚಭಜ)ಗಳಲ್ಲಿಲ್ಲ. [13] ಋಗ್ವೇದಮನೋದಿ ಮತ್ತಂ (ಘಚಭಜ). [14] ಗಿ ಯಜುರ್ವೇದಮನುಚ್ಚರಿಸಿ ಸಾಮವೇದಮುಮಥರ್ವಣ ವೇದಮುಮನೆ (ಘಚಭಜ). [15] ಶಾಸ್ತ್ರಂಗಳ್ಮಂ (ಘಚಭ).

ನೆರವಿಯುಂ ಪಂಡಿತರ್ಕ್ಕಳೆಲ್ಲಂ ವಿಸ್ಮಯಂಬಟ್ಟು ಪೊಗೞ್ದು ಮತ್ತಮರಸನಿಂತೆಂದನೀ ಕೂಸಿನಿತು ಶಾಸ್ತ್ರಂಗಳನೆಂತು ಕಲ್ತಳೆಂದು ಭಟಾರಾ [1]ಇದನಱಿಯೆ[1] ಬೆಸಸಿಮೆನೆ ಸೂರ್ಯಮಿತ್ರ ಭಟ್ಟಾರರಿಂತೆಂದರ್ ಈಯಿರ್ದ್ದರಿಸಿಯರ ಸಹೋದರಂ ವಾಯು ಭೂತಿ[2]ಯೆಂಬೊನಾನಾವೋದಿ[2]ಸಿದೆಮೆಮ್ಮೊಳಪ್ಪ ಮಾನಕಷಾಯಂ ಕಾರಣಮಾಗಿ ಸತ್ತು [3]ಬೆಳ್ಗ[3]ತ್ತೆಯುಂ ಪೇಪಂದಿಯುಂ ನಾಯುಂ ಪೊಲೆಯರ ಕೂಸುಮಾಗಿ[4] ರಿಸಿಯರ ಪ್ರಬೋಧನೆಯಿಂದಂ ಬ್ರತಂಗಳಂ ಕೈಕೊಂಡೀಗಳ್ ನಾಗಶ್ರೀಯಾದಳೆಂದು ಮುನ್ನಿನ ಭವದ ಸಂಬಂಧಮೆಲ್ಲಮಂ ಸವಿಸ್ತರಂ ಪೇೞ್ದು ಮತ್ತಮಿಂತೆಂದರ್ ಮಿಥ್ಯಾ[5]ತ್ವ[5] ಸಂಯಮ ಕಷಾಯಯೋಗಂ ಕಾರಣಮಾಗಿ [6]ಜೀವಂಗಳ್[6] ಸಂಸಾರ ಸಮುದ್ರದೊಳ್ ತೊೞಲ್ಗುಮೆಂದು ಸವಿಸ್ತರಂ ಧರ್ಮಮಂ ಪೇೞೆ ಕೇಳ್ದು ಚಂದ್ರ ವಾಹನನೆಂಬರಸಂಗೆ ವೈರಾಗ್ಯಂ ಪುಟ್ಟಿ ಮಗಂಗರಸು[7]ಗೊಟ್ಟು[7] ಪಲಂಬರರಸು ಮಕ್ಕಳ್ವೆರಸು ಭಟ್ಟಾರರ ಪಕ್ಕದೆ ತಪಂಬಟ್ಟಂ ಕೆಲರ್ ಶ್ರಾವಕ ವ್ರತಂಗಳಂ ಕೆಲಂಬರ್ ಸಮ್ಯಕ್ತ್ವಮಂ ಕೈಕೊಂಡರಾಗಳಾ ಸೋಮಶರ್ಮ ಭಟ್ಟಂ ರಿಸಿಯರೊಳಾದ ಮಾನ ಗರ್ವದ ದೋಷದಿಂದೆಯ್ದಿದ ದುಃಖಂಗಳಂ ಕೇಳ್ದಱಿದಾ ಭಟ್ಟಾರರ ಪಕ್ಕದೆ ತಪಂ ಬಟ್ಟಂ ನಾಗಶ್ರೀಯುಂ ನಾಗಶ್ರೀಯ ತಾಯ್ [8]ತ್ರಿವೇದಿಯುಂ[8] ಬ್ರಹ್ಮಿಲೆಯೆಂಬ ಕಂತಿಯರ ಪಕ್ಕದೆ ತಪಂಬಟ್ಟರ್ ಮತ್ತೆ ಸೂರ್ಯಮಿತ್ರ ಭಟ್ಟಾರರಗ್ನಿಭೂತಿ ಭಟ್ಟಾರರು ಮಿರ್ವರುಂ ಪಲಕಾಲಂ ತಂಪಗೆಯ್ದು[9] ಅಗ್ರಮಂದಿರಮೆಂಬ ಪರ್ವತದೊಳ್ ಮೋಕ್ಷಮನೆಯ್ದಿದರ್ ಮತ್ತಂ ಸೋಮಶರ್ಮರಿಸಿಯರುಮುಗ್ರೋಗ್ರ ತಪಶ್ಚರಣಂ ಗೆಯ್ದು ಸಂನ್ಯಸನ ವಿಧಿಯಿಂದಂ ಮುಡಿಪಿ ಅಚ್ಯುತ ಕಲ್ಪದೊಳಿರ್ಪ್ಪತ್ತೆರಡು ಸಾಗ ರೋಪಮಾಯುಷ್ಯಮನೊಡೆಯೊಂ ಸಾಮಾನಿಕ ದೇವನಾಗಿ ಪುಟ್ಟಿದೊಂ ಮತ್ತೆ ನಾಗಶ್ರೀಯುಂ [10]ಭುಕ್ತ[10]ಪ್ರತ್ಯಾಖ್ಯಾನವಿಧಿಯಿಂ ರತ್ನತ್ರಯಮಂ ಸಾದಿಸಿ [11]ಅಚ್ಯುತ[11] ಕಲ್ಪದೊಳ್ ದೇವನಾಗಿ ಪುಟ್ಟಿದೊಳ್ ಮತ್ತಾ ಸ್ವರ್ಗದೊಳ್ ತ್ರಿವೇದಿ ಯುಂ ನಾಗಶ್ರೀ ಎನಗೆ ಜನ್ಮಾಂತರದೊಳಪ್ಪೊಡಂ ಮಗನಕ್ಕೆಂದು [12]ನಿದಾನಂ ಗೆಯ್ದು[12] ಮುಡಿಪಿ ದೇವನಾದೊಳಿಂತಾಯಿರ್ವರುಂ ಇರ್ಪ್ಪತ್ತೆರಡು ಸಾಗರೋಪ ಮಾಯುಷ್ಯಮನೊಡೆಯೊರಾಗಿ ದೇವರಾಗಿ ಪುಟ್ಟಿದರ್

ಮತ್ತಂ ಸೋಮಶರ್ಮನಪ್ಪ ದೇವಂ ಪಲಕಾಲಂ ದೇವಲೋಕದ ಭೋಗ ಮನನುಭವಿಸಿ ಬಂದಿಲ್ಲಿ ಈ ಜಂಬೂದ್ವೀಪದ ದಕ್ಷಿಣ ಭರತದೊಳವಂತಿಯೆಂಬುದು ನಾಡುಜ್ಜೇನಿಯೆಂಬುದು ಪೊೞಲಲ್ಲಿ[13] ಇಂದ್ರದತ್ತನೆಂಬೊಂ [14]ಪರದನಾತನ[14] ಭಾರ್ಯೆ

---

1 ಇನ್ನೆಮಗಱಿಯೆ (ಘಚಛ), ಇದನೆಮಗಱಿಯೆ (ಜ). †–† (ಚ) ದಲ್ಲಿ ನಷ್ಟ. 2 ಯೆಂಬನುಂ ಅವನೋದಿ (ಕಗ), (ಖ)ದಲ್ಲಿ ನಷ್ಟ, ಬೊನನಾವೋದಿ (ಘಛ), (ಚ)ದಲ್ಲಿ ನಷ್ಟ. 3 ಪೆಣ್ಗ (ಘಛಜ), (ಚ) ದಲ್ಲಿ ನಷ್ಟ. 4 + ಯಿರೆ (ಕಗ). 5 (ಘಚಛ) ಗಳಲ್ಲಿಲ್ಲ. 6 (ಕಗ) ಗಳಲ್ಲಿಲ್ಲ. 7 ವಟ್ಟಂಗಟ್ಟಿ (ಛ), ವಟ್ಟಂಗೊಟ್ಟು (ಜ). 8 (ಘಛಜ) ಗಳಲ್ಲಿಲ್ಲ. 9 + ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ (ಘಛಜ). 10 ಭಕ್ತ (ಘ), ಭುಕ್ತಿ (ಜ). 11 ಆರಣ (ಕಗ). 12 (ಘಛಜ) ಗಳಲ್ಲಿಲ್ಲ. 13 + ವೃಷಾಭಾಂಗನೆಂಬರಸ ಜ್ಯೋತಿರ್ಮಾಲೆ ಸ್ತ್ರೀ (ಜ). 14 ಪ್ರಧಾನ ಶ್ರೇಷ್ಠಿಯಾತನ (ಘಛಜ).

ಗುಣಮತಿಯೆಂಬೊಳಾಯಿರ್ವರ್ಗ್ಗಂ ಸೂರದತ್ತನೆಂಬೊಂ ಮಗನಾಗಿ ಪುಟ್ಟಿದೊಂ ಮತ್ತಮಾ ಪೊೞಲೊಳ್ ಮೂವತ್ತೆರಡು ಕೋಟಿ ಕಸವರಮನೊಡೆಯೊಂ ಸುಭದ್ರನೆಂಬೊಂ ಸೆಟ್ಟಿಯಾತನ ಭಾರ್ಯೆ ಸರ್ವಯಶಿಯೆಂಬೊಳಾ ಯಿರ್ವರ್ಗ್ಗಂ ತ್ರಿವೇದಿಯಪ್ಪ ದೇವಂ ಬಂದು ಯಶೋಭದ್ರೆಯೆಂಬೊಳ್ ಮಗಳಾಗಿ ಪುಟ್ಟಿದೊಳಾ ತ್ರಿವೇದಿ ತಪಶ್ಚರಣದ ಫಲದಿಂದಂ ದೇವತ್ವಮನೆಯ್ದಿಯುಂ[1] ನಿದಾನಂ ಕಾರಣಮಾಗಿ ಮಿಥ್ಯಾತ್ವಕ್ಕೆ ಸಂದು ಸ್ತ್ರೀತ್ವಮನೆಯ್ದಿಳಾ ಯಶೋಭದ್ರೆಯುಂ ಸೂರದತ್ತಂಗೆ ಕೊಟ್ಟೊರಾಯಿರ್ವರ್ಗ್ಗಂ ನಾಗಶ್ರೀಯಪ್ಪ ದೇವಂ ಬಂದು ಸುಕುಮಾರಸ್ವಾಮಿಯೆಂಬೊಂ ಮಗನಾಗಿ ಪುಟ್ಟಿದನಾತನ ಪುಟ್ಟಿದಂದೆ ವೈರಾಗ್ಯಂ ಕಾರಣಮಾಗಿ ಸೂರದತ್ತಸೆಟ್ಟಿ ಸುಕುಮಾರಸ್ವಾಮಿಗೆ ಸೆಟ್ಟಿವಟ್ಟಂಗಟ್ಟಿ ತಪಂಬಟ್ಟಂ ಸುಕುಮಾರ ಸ್ವಾಮಿಯುಂ ಯೌವನನಾಗಿ ಅತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿಯಿಂದಂ ಕೂಡಿದೊನಾತಂಗೆ ಮೂವತ್ತೆರಡು ಬಳ್ಳಿ ಮಾಡಂಗಳತ್ಯಂತರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯ ದೇವಗಣಿಕೆಯರನೆ ಪೋಲ್ವ ಮೂವತ್ತಿರ್ವರ್ ದಿವ್ಯಸ್ತ್ರೀಯರ್ಕಳ್ ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಮುಂ ಪಂಚರತ್ನಂಗಳೆಂಬಿನಿತಱೊಳಂ ಕೂಡಿ ಭೋಗೋಪಭೋಗ ಸುಖಂಗಳನನುಭವಿಸುತ್ತುಮಿರೆಯಿರೆ

ಮತ್ತೊಂದು ದಿವಸಮೊರ್ವ ನೈಮಿತ್ತಿಕನಿಂತೆಂದಾದೇಶಂಗೆಯ್ದನೀ ಸುಕುಮಾರ ಸ್ವಾಮಿ ಆವುದೊಂದು ಕಾಲದೊಳ್ ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮೆಂದೊಡಾ ಮಾತಂ ತಾಯ್ ಕೇಳ್ದು ತನ್ನ ಮನೆಯಂ ರಿಸಿಯರಂ ಪುಗಲೀಯದಂತು [2]ಬಾಗಿಲ[2] ಕಾಪಿನವರಂ ಕಲ್ಪಿಸಿದೊಳಂತು ಕಾಲಂ ಸಲೆ ಮತ್ತೊಂದು ದಿವಸಂ ರತ್ನದ್ವೀಪದಿಂದೊರ್ವ ಪರ[3]ದಂ ಸರ್ವ ರತ್ನ ಕಂಬಳಂಗಳಂ[3] ಲಕ್ಷದೀನಾರಂಗಳ್ ಬೆಲೆಯಪ್ಪವನುಜ್ಜೇನಿಗೆ ಮಾಱಲ್ಕೊಂಡು ಬಂದೊನಾ ಪೊೞಲನಾಳ್ವೊಂ ವೃಷಭಾಂಕನೆಂಬೊನರಸಂಗಂ ಜ್ಯೋತಿರ್ಮಾಲೆಯೆಂಬ ಮಹಾದೇವಿ[4]ಗಮಿಂತಿರ್ವರ್ಗ್ಗಂ[4] ತೋಱಿದೊಡೆ [5]ಅವಱ[5] ಬೆಲೆಯಂ ಬೆಸಗೊಂಡೊಡೆ ಲಕ್ಷ ದೀನಾರಂಗಳ್ ಬೆಲೆಯೆಂದು ಪೇೞ್ದೊಡೆ ಕೊಳಲಾಱದರಸಂ ಪೋಗಲ್ವೇೞ್ದನಂತು ಪೊೞಲೊಳಗೆಲ್ಲಂ ತೋಱಿಯಾರುಂ ಕೊಳಲಾಱದಿರ್ದೊಡೆ ರತ್ನಂ ಕಂಬಳಂಗಳಂ ಕೊಂಡು[6]ಪೋಗಿ ಯಶೋಭದ್ರೆಗೆ ತೋಱಿದೊಡೆ[6] ಲಕ್ಷದೀನಾರಂಗಳಂ ಕೊಟ್ಟು [7]ರತ್ನಕಂಬಳಂಗಳಂ ಕೊಂಡೋರೊಂದಱೊಳಂ ನಾಲ್ಕು ಖಂಡಮಾಗೆ[7] ಮೂವತ್ತೆರಡು ಖಂಡಂಗಳಂ ಮಾಡಿ ಮೂವತ್ತಿರ್ವರ್ ಸೊಸೆವಿರ್ಕಳ್ಗೆ ಪಚ್ಚುಗೊಟ್ಟೊಡವರುಂ ತಂತಮ್ಮ ಕೆರ್ಪುಗಳೊಳ್ ತಗುಳ್ಚಿ[8]ದರೆಂಬ ಮಾತನರಸಂ ಕೇಳ್ದು ಚೋದ್ಯಂಬಟ್ಟವರ ವಿಭೂತಿಯಂ

[1] + ನಿನ್ನ (ಕಖಗ). [2] (ಘಛಜ) ಗಳಲ್ಲಿಲ್ಲ. [3] ದನೊಂದು ರತ್ನಕಂಬಳಂ (ಘಛಜ). [4] ಗಂ ಕಂಬಳಮಂ (ಘಛಜ). [5] ಅವರು (ಘಛಜ). [6] ಪೊಳಲಂ ಪೊಱಮಟ್ಟು ಪೋಪನ ನಾರಾನುಮೆಂದರ್ ಸುಕುಮಾರಸ್ವಾಮಿಯ ತಾಯ್ ಕೊಳ್ಗುಂ ಪೋಗಿಮೆನೆ ಪೋದಡೆ (ಘಚಛ). [7] ಕೊಂಡು (ಘಛಜ). [8] + ಪಾಲಿಸಿದರ್ ಮತ್ತಮಿಂತೆಂದು ರತ್ನಕಂಬಳಂ ಸುಕುಮಾರ ಸ್ವಾಮಿಯ ತಾಯ್ ಲಕ್ಕೆದಿನಾರಂಗಳಂ ಕೊಟ್ಟುಕೊಂಡ ಮೂವತ್ತೆರಡು ಖಂಡಂ ಮಾಡಿ ಮೂವತ್ತಿರ್ವರ್ ಸೊಸೆವಿರ್ಕಳ್ಗೆ (ಖ). ಇದು ಪುನರುಕ್ತಿ.

ನೋೞ್ಪೆನೆಂದು ಮನೆಗೆ ವರ್ಪುದಂ ಯಶೋಭದ್ರೆ ಕೇಳ್ದರಸರ್ ಬರ್ಪ ಬಟ್ಟೆಯೊಳೆಲ್ಲಂ ಪಂಚರತ್ನಂಗಳಿಂ ರಂಗವಲ್ಲಿಯನಿಕ್ಕಿ ನೇತ್ರವ[1]ಟ್ಟೆದುಕೂಲ ಚೀನಾದಿ[1] ದಿವ್ಯವಸ್ತ್ರಂಗಳಂ ಪಾಸಿ ಮಣಿ[2]ಭದ್ರ[2]ಮಪ್ಪ ಹೇಮಮುಕ್ತಾಹಾರಂಗಳಿಂ ತೋರಣಂಗಟ್ಟಿಸಿ ಯರಸರ ಬರವಂ ಪಾರುತ್ತಿರೆ ನೃಪತಿಯುಂ ಬಂದು ಸುರೇಂದ್ರ ಭವನೋಪಮಮಪ್ಪ ಪ್ರಾಸಾದಮಂ ಪೊಕ್ಕು ವಿಸ್ಮಯಚಿತ್ತನಾಗಿ† ಸುರಲೋ[3]ಕಂಬೊ[3]ಕ್ಕ ಪುಣ್ಯಾವಂ [4]ತಂಬೊಲಾಗಳ್[4] ಮಹಾ ವಿಭೂತಿಯಿಂ [5]ಶಯ್ಯಾತಳದೊಳಿರ್ದ ಸುಕುಮಾರನೆಲ್ಲಿದನೆಂದು ಬೆಸಗೊಂಡೊಡೆ ಸ್ವಾಮಿ ಆತಂ ಕರಂ ಸಾದು ನಿಮ್ಮ ಬರ[6]ವು[6]ನಱಿಯಂ ಪ್ರಾಸಾದದ ಮೇಗಣ ನೆಲೆಯೊಳಿರ್ದನೆಂದೊಡರಸಂ ಬಱಿಯನಟ್ಟಿಮೆನೆ ತಾಯ್ ಪೋಗಿ ಮಗನೆ ಅರ[7]ಸರ್ ವಂದರ್ ಬಾ[7] ಪೋಪಮೆನೆ ಅರಸರೆಂಬೊರಾರೆನೆ ತಾಯೆಂದಳ್ [8]ನಮ್ಮ[8]ನಾಳ್ವೊರೆಂದೊಡೆ ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು ತಾಯ ವಚನಮಂ ಮಾರ್ಕೊಳಲಾಱದೆ ಬರ್ಪೊನಂ ನರೇಶ್ವರಂ ಕಂಡು ಕಣ್ಬೆತ್ತ ಫಲಮನಿಂದು ಪೆತ್ತೆನೆಂದು ಪ್ರತ್ಯಕ್ಷ ಕಾಮದೇವನನಪ್ಪಿ [9]ಕೊಳ್ವಂತಪ್ಪಿ[9]ಕೊಂಡು ದಿವ್ಯಶಯ್ಯಾತಳದ ಮೇಗೊ[10]ಡನಿರಿಸಿದಾ[10]ಗಳ್ ಸ್ವಜನಪರಿಜನಂಗಳ್ ಸಿದ್ಧಾರ್ಥಂಗಳಂ ಮಾಂಗಲ್ಯಮೆಂದಿರ್ವಗ್ಗ್ರಂ ಸೇಸೆ[11]ಯನಿಕ್ಕಲಾಗಳಾ[11] ಸಿದ್ಧಾರ್ಥಂಗಳ್ ಸುಕುಮಾರಸ್ವಾಮಿಯಾಸನಮನೊತ್ತೆ ಕಟಿ[12] [ವ] ಮನಲು[12]ಗಿಸುವುದುಮಂ ಸೊಡರಂ ನೋಡಿದಾಗಳ್ ಕಣ್ಣೀರ್ಗಳ್ ಸುರಿವುದುಮಂ ಕಂಡೀಗಳೀತಂಗೆ[13] ಬ್ಯಾದಿಗಳೆಂದು ಬಗೆದಿಪ್ಪೆನಂ[13] ಮಜ್ಜನಕ್ಕೆೞ್ತನ್ನಿಮೆಂದೊಡಂತೆಗೆಯ್ವೆಮೆಂದು ಮಜ್ಜನಂಗೊಂ[14]ಡಮರ ಸನ್ನಿಭ[14] ಮಣಿಕುಟ್ಟಿಮಮಪ್ಪ ಬಾವಿಯಂ ಪೊಕ್ಕು ಮಿಂದಲ್ಲಿಯನರ್ಘ್ಯಮಪ್ಪ ತನ್ನ ಬೆರಲ ಮಾಣಿಕದುಂಗುರಂ [15]ಬಿೞ್ದ[15] ನಱಿಸಲ್ವೇಡಿ ಛಿದ್ರಕದ್ವಾರದ ತೂಂತನುರ್ಚಿ ನೀರಂ ಕಳೆದಾಗಳಿಂದ್ರನ ಭಂಡಾರಂ ತೆಱೆದಂತಪ್ಪ [16]ಲೇಸಪ್ಪ[16] ನಾನಾ ಮಣಿಯ ವಿಚಿತ್ರ ಭೂಷಣಂಗಳಂ ಪಲವುಮಂ ಕಂ[17]ಡು ಮಹಾ[17]ಶ್ಚರ್ಯಭೂತನಾಗಿ ನೋಡುತ್ತಿರ್ಪನ್ನೆಗಮಾರೋಗಿಸಲೆೞ್ತನ್ನಿಮೆಂದಾಗಳ್ ಪರಿ[18]ಯ[18]ಣದ ಮೊದಲೊಳ್ ಸುಕುಮಾರಂ ಬೆರಸು ನಾನಾಪ್ರಕಾರ ದಿನಿಯವಪ್ಪುಣಿಸುಗಳನುಣುತ್ತಂ ಸುಕುಮಾರಸ್ವಾಮಿ ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುೞ್ಗುಮದಂ ನೋಡಿ ಇದುವು[19]ಮೊಂದು ಕುತ್ತ[ಂ][19] ಆಹಾರದ ಮೇಗರುಚಿಯೆಂದು ಬಗೆದುಣಿಸು ಸಮೆದಬೞಿಕ್ಕೆ ಗಂಧ ತಾಂಬೂಲ ಮಾಲ್ಯ ವಸ್ತ್ರಾ

---

[1] ಟ್ಟೆಯ ಚೀನದುಕೂಲಾದಿ (ಘಛ), ಟ್ಟೆಯ ಚೀನದ ದುಗೂಲಾಂಬರಾದಿ (ಜ). [2] ಗಣನಿಬದ್ಧ (ಘಛಜ). [3] ಕಮಂಪೊ (ಜ). [4] ತನಂತೆ ನೋಡುತ್ತಿರ್ದರಸನಂ ಯಶೋಭದ್ರೆಯಿದಿರ್ಗೊಂಡು (ಘಚಛಜ). [5] + ಕುಳ್ಳಿರಿಸೆ (ಘಚಛಜ). [6] ವ (ಸ–ಖ). [7] ಸರ್ಬಂದರ್ ಬಾ (ಕಗ), ಸಂ ಕರೆದಪಂ (ಘಚಛಜ). [8] ನಿಮ್ಮ (ಕಗ). [9] (ಜ) ದಲ್ಲಿಲ್ಲ. [10] ಡರಿಸಿದನಾ (ಜ). [11] ಗಳನಿಕ್ಕೆ (ಜ). [12] ರಮನಲ್ಲಿ (ಕಗ) ರಮನ (ಖ), ಯನಲು (ಘಚಛಜ). [13] ಬಾವ್ಯಾದಿತನೆಂದಿಪ್ಪನ್ನೆಗಂ (ಘಚಛಜ). [14] ಡಡೆ (ಘಜಛ). [15] ಬಿರ್ದುದ (ಕಖಗ), ಬಿಳ್ದೊಡದ (ಘಚಛಜ). [16] ಲೋಲ (ಘ), (ಚಛಜ), ಗಳಲ್ಲಿಲ್ಲ. [17] ಡಾ (ಖಘಚಛಜ). [18] ಯಾ (ಕಖಗ). [19] ವೊಂದು ಕುತ್ತು (ಖ), ವುಮೊಂದು ವ್ಯಾಧಿ (ಘಚಛಜ).

ಭರಣಂಗಳಂ ತಂದು ಕೊಟ್ಟಾಗವಂ ತೊಟ್ಟುಟ್ಟು ಪಸದನಂಗೊಂಡು ಸುಖಸಂಕಥಾ ವಿನೋ[1]ದದಿಂದಿರ್ದೊಡೆ[1] ಯಶೋಭದ್ರೆಯನರಸನಿಂತೆಂದು ಬೆಸಗೊಂಡನಬ್ಬಾ ಎಮ್ಮ ತಮ್ಮನ ಕಟಪ್ರದೇಶ[2]ಭಾ[2]ಗಕ್ಕಂ ಕಣ್ಣ ನೀರ್ ಬರ್ಪುದರ್ಕಂ ಅರುಚಿಗವೇಕೆ ಮರ್ದಂ ಮಾಡಿಸಿದಿರಿಲ್ಲನೆ ದೇವಾ ಆತಂಗಿವು ಕುತ್ತಮಲ್ಲವು ಸೇ[3]ಸೆಯಿಕ್ಕಿ[3]ದ ಸ[4]ರುಸಪಂ[4]ಗಳೊತ್ತೆ ಸೈರಿಸಲಾಱಂ ಮತ್ತೆ ಆವ ಕಾಲಮುಂ ಮಾಣಿಕದ ಬೆಳಗಿನೊಳಿರ್ಪುದಱಿಂದಂ ಸೊಡರ ಬೆಳಗಿಂಗೆ ಸೈರಿಸದೆ ಕಣ್ಣ ನೀರ್ ಬರ್ಕುಂ ಮತ್ತಂ ಕಮಳನೀಳೋತ್ಪಳದೊಳ್ ವಾಸಿಸಿದಕ್ಕಿಯೊಳ್ ಪೆಱವಕ್ಕಿಯಂ [5]ನೀವಂ[5] ಬಂದೊಡೆ ಬೆರಸಿಯಟ್ಟುದು ಕೂೞುಮಪ್ಪುದಱಿಂ ವಾಸಿಸಿದಕ್ಕಿಯ ಕೂೞಂ [6]ನುಂಗುಗು[6]ಮುೞಿದ ಕೂೞನುಗುೞ್ಗುಮದಱಿಂದೀತಂಗೀ ಯವಸ್ಥೆಗಳಾದುವೆನೆ ಕೇಳ್ದು ವಿಸ್ಮಯಂ ಬಟ್ಟು ಈತನ ಕ್ಷಣಮಾತ್ರದ ಭೋಗಕ್ಕಂ ಸುಖಕ್ಕಂ ಎಮ್ಮೆಲ್ಲಾ ಕಾಲಮುರಸುತನಂಗೆಯ್ವಲ್ಲಿಯೊಳಪ್ಪ ಭೋಗೋಪಭೋಗಂಗಳ್ ದೊರೆಯಲ್ಲವದಱಿಂದೀ ಲೋಕದೊಳೀತನೆ ಪರಮಾರ್ಥಂ ಸುಖಿಯೆಂದೊಸೆದರಸನವಂತಿ ಸುಕುಮಾರನೆಂದು ಪೆಸರನಿಟ್ಟಂ

ಯಶೋಭದ್ರೆಯುಮರಸನನನೇಕ ವಸ್ತುವಾಹನಂಗಳಿಂದಂ ಪೂಜಿಸಿ ಕೞಿಪಿದೊಳಿಂತು ಸುಕುಮಾರ ಸ್ವಾಮಿಗೆ ಸುಖದಿಂದಂ ಕಾಲಂ ಸಲೆ ಮತ್ತೊಂದು ದಿವಸಂ ಯಶೋಭದ್ರೆ[7]ಯ ಭ್ರಾತರರಪ್ಪ[7] ದಯಾಭದ್ರರೆಂಬ ರಿಸಿಯರ್ ಮುನ್ನಮವರ ಪಕ್ಕದೆ ಸೂರದತ್ತಂ ಧರ್ಮಂಗೇಳ್ದು ವೈರಾಗ್ಯಮಾಗಿ ಪುತ್ರಮುಖಂಗಂಡು ತಪಂಬಟ್ಟೊನಾತನ ಮಗನುಂ ರಿಸಿಯರಂ ಕಂಡಾ[8]ಗಳೆ[8] ತಪಂಬಡುಗುಮೆಂಬುದಂ ಮುನ್ನೆ ನೈಮಿತ್ತಿಕರಾದೇಶಂಗೆಯ್ದಿರ್ದರ್ ಮತ್ತಂ ದಯಾಭದ್ರರೆಂಬ ರಿಸಿಯರ್ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪ ದಿವ್ಯಜ್ಞಾನಿಗಳ್ ಸುಕುಮಾರಸ್ವಾಮಿಗೆ ನಾಲ್ಕುತಿಂಗ[9]ಳುಮೈ[9]ದುದಿವಸಮಾಯುಷ್ಯಪ್ರಮಾಣ[10]ಮನಱಿದುಪಕಾರಾರ್ಥಮು[10]ಜ್ಜೇನಿಗೆ ವಂದು ಸುಕುಮಾರ ಸ್ವಾಮಿಯ ಮಾಡದ [11]ಪೆಱ[11]ಗಣ ನಂದನವನದೊಳಗಣ ಜಿನಾಲಯದೊಳಾಷಾಢ ಮಾಸದ ಚತುರ್ದಶಿಯ ದಿವಸ[12]ದಂದು ಪಱಿವೊಯ್ತು[12] ಬಂದು ಜೋಗುಗೊಂಡಿರ್ದರನ್ನೆಗಂ ವನಪಾಲಕರ್ ಪೋಗಿ ಯಶೋಭದ್ರೆಗೆ ರಿಸಿಯರ ಬರವಂ ಪೇೞ್ದೊಡಾಕೆಯುಂ ಬಂದು ದೇವರುಮಂ ರಿಸಿಯರುಮಂ ಬಂದಿಸಿ ಭಟ್ಟಾರಾ ನೀಮಿಲ್ಲಿಗೇಕೆ ಬಂದಿ[13]ರಿಲ್ಲಿಂದಂ ಪೊಱವೊೞಲೊಳ್ ಪೆಱವುೞಿ ಬಸದಿಯಿಲ್ಲಾ[13] ಎಂದೊಡೆ ಭಟ್ಟಾರರೆಂದರಬ್ಬಾ ನಿಡುವಯಣಂ ಬಂದು ಸೇದೆಗೆಟ್ಟೆಂತಾನುಮಿಲ್ಲಿಗೆಯಾ[14]ಸತ್ತು[14]ಜೋಗಿನ

[1] ದದೊಳಿರ್ದಾಗಳ್ (ಘ ಚ ಛ). [2] ಶದರೋ (ಘ ಚ ಛ ಜ). [3] ಸಿಕ್ಕಿ (ಜ). [4] ಸರ್ಷಪ (ಘ ಚ ಛ ಜ). [5] ನಿಮ್ಮಡಿ (ಘ ಚ ಛ ಜ). [6] ಸುಣ್ಣು (ಛ ಜ). [7] ತನ್ನ ಭತ್ತಾರರಂ (ಘ ಚ ಛ ಜ). [8] ಕ್ಷಣಮೆ (ಚ ಜ). [9] ಳಮೇಗೈ (ಘ ಛ ಚ ಜ). [10] ಮೆಂದರಿದು (ಘ ಚ ಛ ಜ). [11] ಕೆಳ (ಖ). [12] ದಲು ಪರೆವೊತ್ತ (ಖ), ದಂದು ಪರೆಪುತ್ತ (ಕ), ದೊಳು ಪರೆವೊತ್ತ (ಗ), ದೊಳ್ ಪರೆವೊಳ್ತು (ಘ ಛ), ದೊಳ್ ಪಗೆವೊಳ್ತು (ಚ), ದೊಳು ಪಱಿವೊಳ್ತು (ಜ). [13] ಪೊ್ರಳಲೊಳಗೆ ಬಸದಿಗಳಿಲ್ಲಾ (ಘ ಚ ಜ), ಪೊ್ರಳಲೊಳಿನ್ ಪೆಱವು ಬಸದಿಗಳಿಲ್ಲಾ (ಛ). [14] ಸರುಗೆಟ್ಟು (ಕ).

ಪೊಲ್ತುಱಿಕೊಳೆಯ್ದಿ ಬಂದು ಜೋಗುಗೊಂಡಿರ್ದೆ[1]ನೆತ್ತಲುಂ ಪೋಗಲಾಗದೆನೆ ಅಂತಪ್ಪೊಡೆ ಭಟಾರಾ ನಿಮ್ಮನೊಂದಂ ಬೇಡಿದಪ್ಪೆಂ[1] ನಾಲ್ಕು ತಿಂಗಳುಮೇನುಮ ನೋದದೆ ಮೋನಂಗೊಂಡು ಬಸದಿಯಂಗಣದೊಳ್ ನಡಪಾಡದೊಳಗಣಡಂಗಿರ್ದು ಜೋಗು ನೆಱೆದಂದು ಬಿಜಯಂಗೆಯ್ಯಿಮೆಂದೊಡಂತೆಗೆಯ್ವೆಮೆಂದು ಭಟಾರರಿರ್ದರ್

ಮತ್ತಿತ್ತಲ್ ಸುಕುಮಾರಸ್ವಾಮಿಯುಂ ಸರ್ವತೋಭದ್ರಮೆಂಬುತ್ತುಂಗ ವಿಚಿತ್ರಮಾಗಿರ್ದ ಪ್ರಾಸಾದದ ಮೇ[2]ಗೇಲ[2]ನೆಯ ನೆಲೆಯೊಳ್ ಕಾರ್ತಿಕ ಮಾಸದ ಪುಣ್ಣಮಿಯಂದು ಸುಖದಿಂದೆ [3]ಉಂದಿರ್ದ[3]ನನ್ನೆಗಮಿತ್ತ ದಯಾಭದ್ರ ಭಟಾರರ್ಗೆ ಜೋಗು ನೆಱೆದು ಯಶೋಭದ್ರೆಯ ಬೇಡಿದ ಮೋನದ ದಿವಸದ ಪ್ರಮಾಣಾವಸಾನ ದೊಳ್ ಬೈಗಿರುಳಿನ ಪಂಚಮಹಾಶಬ್ದದ ಪೊಲ್ತುಱಿಕೊಳ್ ತ್ರಿಲೋಕ ಪ್ರಜ್ಞಪ್ತಿ ಯೆಂಬುದಂ ಮೃದು ಮಧುರ ಗಂಭೀರ ಸ್ವರದಿಂ ಭಟಾರರ್ ಪರಿವಡಿಗೆಯ್ದಾಗಳ್ ಅಧೋಲೋಕ ತಿರ್ಯಗ್ಲೋಕಂಗಳಿರ್ದ ಸ್ವರೂಪಮುಂ ಪ್ರಮಾಣಮುಮನೋದಿ ಊರ್ಧ್ವಲೋಕ ವ್ಯಾವರ್ಣನೆಯಂ ಪೇೞ್ದಾಗ[4]ಳಚ್ಯುತ[4]ಕಲ್ಪದ ಪದ್ಮಗುಲ್ಮ ವಿಮಾನಮುಂ ವ್ಯಾವರ್ಣಿಸುವುದಂ ಸುಕುಮಾರಸ್ವಾಮಿ ಕೇಳ್ದು ಜಾತಿಸ್ಮರನಾಗಿಯಾ ನಿಲ್ಲಿ[5]ಪುಟ್ಟಿ[ರ್ದೆ][5] ನೆಂಬುದನಱಿದು ಅಹೋ ಸುರಲೋಕಸುಖಮೆಂಬಮೃತ ಸಮುದ್ರದ ನೀರೆಲ್ಲಮುಂ ಕುಡಿದು ತಣಿಯದನೀ ಮನುಷ್ಯ ಭವದ ಸುಖಮೆಂಬ ಪುಲ್ವನಿಯೊಳ್ ಸಿಲ್ಕಿ ಶಿವಸುಖಮುನೆಯ್ದಿಸುವ ಸಚ್ಚಾರಿತ್ರದಿಂ ಬ[6]ಟ್ಟೆ[6]ದೆನೆಂದು ತನ್ನಂ ತಾಂ ನಿಂದಿ ಸುತ್ತಂ ಮಂಚದಿಂದಿೞಿದು ಮಾಡದೊಳ[7]ಗಿರ್ದ[7] ವಸ್ತ್ರಂಗಳಂ ತೆಗೆದುಕೊಂಡು [8]ಪ್ರಾಸಾದದ ಪೆಱಗಣ ಗವಾಕ್ಷ ಜಾಳದೊಳ್ [8]ಕಟ್ಟಿ[9]ಕೊಂಡೊಂದೊಂದಱ ತುದಿಯೊಳೊಂದೊಂದು[9] ವಸ್ತ್ರಮುಂ ತಗುಳ್ಚಿ ಪಿಡಿದಿೞಿದು ಜಿನಾಲಯಮುನೆಯ್ದಿ ದೇವರ್ಗೆ ನಮಸ್ಕಾರಂಗೆಯ್ದು ದಯಾಭದ್ರಭಟಾರರ್ಗೆಱಗಿ ಪೊಡೆವಟ್ಟು [10]ದೀಕ್ಷೆಯಂ ಪ್ರಸಾದಂಗೆಯ್ದೆನ್ನಂ[10] ಸಂಸಾರಾರ್ಣವದತ್ತಣಿಂದೆ[11]ತ್ತಿ[11]ಮೆಂದೊಂಗೆ ಭಟಾರರ್ ಮೂಱುದಿವಸಂ ನಿನಗಾಯುಷ್ಯಮೆಂದೊಡೀಗಳೀ ನಿಸ್ಸಾರಮಪ್ಪದೇಹದಿಂ ಸಾರಮಪ್ಪ ತಪಮುಂ ಕೈಕೊಂಡು ಪಲಕಾಲಂ ನೆಗ[12]ೞಲ್ ಪೆತ್ತೆ[12]ನಿಲ್ಲ ನಿಸ್ಸಾರಮಪ್ಪ ಭೋಗ ದೊಳ್ ಸಿ[13]ಲ್ಕಿ[13] ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮುಂ ಬಱಿದೆ [14]ಕಳೆದೆ[14]ನೆಂದು ತನ್ನನಾದಮಾನುಂ ನಿಂದಿಸಿ ತತ್ಪಾದ ಮೂಲದೊಳ್ ತಪಂಬಟ್ಟು ಪಂಚಮಹಾಬ್ರತಂಗಳನೇಱಿಸಿಕೊಂಡು ಪಡಿಕಮಣಂಗೇಳ್ದು ತದ ನಂತ[15]ರಂ[15] [16]ನಿಶ್ಚಯ ಸಮ್ಯಕ್ತ್ವಮುಂ ಕೈಕೊಂಡಿಂಬೞಿಕ್ಕೆ[16] ಮಹಾಕಾಳಮೆಂಬ ಶ್ಮಶಾನಕ್ಕೆ ಪೋಗಿ ಯಾವಜ್ಜೀವಮಾಹಾರ[17]ಕ್ಕೆ[17]ನಿವೃತ್ತಿಗೆಯ್ದು ಪ್ರಾಯೋಪಗಮನ

[1] ವಿನ್ನೆತ್ತ ಪೋಪೆಯೆಬ್ಬಾಯೆನೆ ಯಂತಪ್ಪಡೆ ಭಟಾರಾ ನಿಮ್ಮ ನೊಂದಡನೊಂಬದಿಸಿಪೆಂ (ಘಚಭಜ). [2] ಗಳೇಳ (ಕಗ), ಗಣನೇಳ (ಜ). [3] ಉಂದಿಳ್ದ (ಕಖಗ), ಪಟ್ಟಿರ್ದ (ಘಚಭ). ಪಟ್ಟಿರ್ದೊ (ಜ). [4] ಆರಣ (ಕಖಗ). [5] ಪುಟ್ಟಿಳ್ದೆ (ಕಖಗ), ಪುಟ್ಟಿದೆ (ಘಚಭಜ). [6] ಳ್ದಿ (ಕಖಗ). [7] ಗೊಟ್ಟಿರ್ದ (ಘಚಭಜ). [8] ಪೆಱಗಣಗವಾಕ್ಷದೊಳ್ (ಘಚಭಜ). [9] ಯೋರೊಂದಱ ತುದಿಯೊಳೋರೊಂದು (ಘಚಭಜ). [10] ದೀಕ್ಷಾಪ್ರಸಾದದಿಂ (ಘಚಭಜ). [11] + ನ್ನನೆ (ಘಚಭಜ). [12] ಳ್ಪೆ (ಕಗ). [13] ಕ್ಕಿ (ಕಗಘಚಭಜ). [14] ಕಳಿಪಿದೆ (ಕಗಜ). [15] ರಮೆ (ಘಚಭಜ). [16] (ಘಚಭಜ) ಗಳಲ್ಲಿಲ್ಲ. [17] ಶರೀರ (ಘಚಭಜ).

ವಿಧಾನದಿಂ ಪ್ರಚ್ಛನ್ನಮಪ್ಪೆಡೆಯೊಳ್ ಮೃತಕಸೆಜ್ಜೆಯೊಳಿರ್ದು ಸಂನ್ಯಸನಂಗೆಯ್ದು ಧರ್ಮಧ್ಯಾನ [1]ಶುಕ್ಲಧ್ಯಾನಂ[1]ಗಳಂ [2]ಧ್ಯಾನಿಸುತ್ತಿ[2]ರ್ಪನ್ನೆಗಂ

ಇತ್ತ ವಾಯುಭೂತಿಯಪ್ಪ ಭವದಂದಿನತ್ತಿಗೆಯಪ್ಪ ಸೋಮದತ್ತೆಯೆಂಬೊಳ್ ನಿದಾನಂಗೆಯ್ದು ತನ್ನ ನಾಲ್ವರ್ ಮಕ್ಕಳುಂ ತಾನುಂ ಸಂಸಾರಸಮುದ್ರದೊಳ್ ನೀಡುಂ ತಿಱ್ಱನೆ ತಿರಿದು ಬಂದು ಪೆಣ್ಣರಿಯಾಗಿ ಪುಟ್ಟಿ ತನ್ನ ನಾಲ್ಕುಮಱಿಗಳ್ವೆರಸಾಹಾರಮನಱಸಿ ತೊೞಲುತ್ತಂ [3]ಬರ್ಪು[3]ದನ್ನೆಗಂ ಸುಕುಮಾರಸ್ವಾಮಿ[4]ಯುಂ[4] ಮಹಾಕಾಳಕ್ಕೆ ಪೋಪ[5]ನೆಲ್ಲಾ ಕಾಲಮುಂ[6] ಮಣಿಕುಟ್ಟಿಮಭೂಮಿ[7]ಯೊಳ್ ಪಾಸಿದ ನೇತ್ರ[8]ಪೞಿಯ ಮೇಗೆ ನಡೆ[9]ದ[9] ಮೃದು ಲಲಿತಮಪ್ಪ ಚರಣ ದ್ವಯದೊಳ್ ಮುನ್ನೆಂದುಂ ನೆಲನಂ [10]ಕಿ[10]ಟ್ಟಿಯಱಿಯದೊಂ ಕಠಿನಭೂಮಿಯೊಳ್ ನಡೆದೊಡೆ ಕಿಱು[11]ಗಲ್ಗಳುಂ[11] ಪೆಟ್ಟೆಗಳು[12]ಮಗುೞ್ದು[12] ಪುಗುಳೊಡೆದು [13]ಪೊಱಮಟ್ಟು[13] ಕರಗದ ದಾರೆವೊಲೆಡೆವಱಿಯದೆ [14]ಮಹಾಕಾಳ ಶ್ಮಶಾನಂಬರೆಗಮೊಕ್ಕ ನೆತ್ತರ ದಾರೆಯ ಗಂದದಿಂ[15]ದಂ ನರಿಗಳ್[15]ಬಂದು ಕಂ[16]ಡು[16]ರಾಗಿಸಿ ಮಱಿಗಳ್ವೆರಸಡಿಯಿಂದಂ ತೊಟ್ಟೆರಡುಂ ಕಾಲ್ಗಳಂ ಮೊೞಕಾಲ್ವರೆಗಮೊಂದು ದಿವಸಂ ತಿಂದತ್ತೆರಡನೆಯ ದಿವಸಂ ಮೊೞಕಾಲಿಂ ತೊಟ್ಟು ಕಟಿವರೆಗಂ ತಿಂದತ್ತು ಮೂಱನೆಯ ದಿವಸಂ ಬಸಿಱಂ ಪೋೞ್ದು ಕರುಳಂ ತೋಡಿ ತಿನೆ ಪೃಥಕ್ತ್ವವಿತರ್ಕ ವೀಚಾರಮೆಂಬ ಪ್ರಥಮ ಶುಕ್ಲಧ್ಯಾನದೊಳ್ ಕೂಡಿಯುಪಶಾಂತ [17]ಗುಣಸ್ಥಾನದೊಳಿರ್ದು ರತ್ನತ್ರಯಮಂ ಸಾದಿಸಿ [18]ಸಯಸತ್ತಮ ದೇವನಾಗಿ[18]ಪುಟ್ಟಿದೊಂ

ಮತ್ತಿತ್ತ ತಾಯುಂ ಪೆಂಡಿರುಂ* ಪರಿವಾರ[19]ಮುಮೆಲ್ಲಾ ದೆಸೆಗಳೊಳಂ ಪರಿವರಿದು ಪೋಗಿ[19] ಸುಕುಮಾರಸ್ವಾಮಿಯನೆರೞ್ದಿವಸಮಿರುಳುಂ ಪಗಲುಮಱಸಿಯುಂ ಕಾಣದೆ ಮೂಱನೆಯ ದಿವಸದಂದು ಬೈಗಿನ ಪೊತ್ತಱೊಳ್ ದೇವರ್ಕಳ್ ಬಂದು ಸುಕುಮಾರಸ್ವಾಮಿಯನಹೊ ಸೂರಾ ಅಹೊ ಮಹಾಪುರುಷ ಅಹೊ ಧೈರ್ಯವಂತ ಅಹೊ ಸಂಸಾರಭೀರು[20] ನಿನ್ನಂತುಪಸರ್ಗಮನಾರಪ್ಪೊಡಂ ಸೈರಿಸಿ ರತ್ನತ್ರಯಮಂ ಸಾಧಿಸಿದೊರಿಲ್ಲೆಂದು ದೇವತೆಗಳ್ ಪೊಗೞ್ವ ಕಳಕಳಧ್ವನಿಯುಮಂ ದೇವದುಂದುಭಿಯ ರವಮುಮಂ ಯಶೋಭದ್ರೆ[21] ನೋಡಿ ದೇವಸಂಘಾತಮಂ ಕಂಡು ಮಗನ ಸಾವನಱಿದು ಬಯ್ಗಿರುಳಾದಾಗಳ್ ಮೂವತ್ತಿರ್ವರ್ ಸೊಸೆವಿರ್ಕಳ್ಗಂ ಪೇೞ್ದಿಟ್ಟ[22] ಸುಕುಮಾರಸ್ವಾಮಿ ನಿಮಗೆಲ್ಲರ್ಗೆ ಮುಳಿದು ಪೋಗಿಯಡಂಗಿ[23]ರ್ದೊನನಾ[23]ನಱಿಪೆಂ ನೀವೆಲ್ಲಂ

---

[1] (ಘಚಭಜ) ಗಳಲ್ಲಿಲ್ಲ. [2] ಸಾಧಿಸುತ್ತಿಮಿ (ಜ). [3] ಬರ್ಪ (ಘಕಖಗ). [4] ಯಂ (ಕಖಗ). [5] + ನ (ಕಖಗ). [6] + ಮುನ್ನ (ಕಖಗ). [7] + ಕೆ (ಕಗ). [8] + ದ (ಘಚಭಜ). [9] ವಾತಂ (ಘಚಭಜ). [10] ಮೆ (ಕಖಗ). [11] ವರಲ್ಗಳುಂ (ಘಚಭ). [12] ಮೞ್ದು (ಖ) ಮೊತ್ತೆ (ಘಚಭಜ). [13] (ಘಚಭಜ) ಗಳಲ್ಲಿಲ್ಲ. [14] + ಪೊಱಪೊಣ್ಮಿ (ಘಚಭಜ). [15] (ಜ) ದಲ್ಲಿಲ್ಲ. [16] ಡಾದಮಾನುಂ (ಘಚಭಜ). [17] + ಕಷಾಯ (ಘಚಭಜ). [18] (ಘಚಭಜ) ಗಳಲ್ಲಿಲ್ಲ. [19] ಮುಂನೆರೆದು ಎಲ್ಲಾಯೆಡೆಗೆ ಪೋಗಿ (ಘಚಭಜ). * ಇಲ್ಲಿಂದ ಮುಂದಕ್ಕೆ (ಜ) ಪ್ರತಿಯನ್ನು ಉಪಯೋಗಿಸಿಲ್ಲ. [20] + ಅಹೊ ಎಕ್ಕಲ ವೀರಾ (ಘಚಭ). [21] + ಕೇಳ್ದೆಚ್ಚತ್ತು ನೋಡಿ (ಘಚಭ). [22] + ದಳ್ (ಘಚಭ). [23] ರ್ದುದನಾ (ಕ).

ನೆಱ[3]ಯೆ ತೊಟ್ಟುಟ್ಟು ಪಸದನಂಗೊಂಡು ಚೆಲ್ವೆಯರಾಗಿ ಬನ್ನಿಂ [1]ಪೋ[1]ಪಂ ತಿಳಿಪಿಕೊಂಡು ಬ[2]ರ್ಪಂ ನಿಮ್ಮ[2] ಸ್ವಾಮಿಯನೆಂದೊಡವರ್ಗಳನಿಬರುಂ ರಾಗಿಸಿ ಕೈಗೆಯ್ದತ್ತೆಯೊಡನೆ ಪರಿವಾರಸಹಿತಂ ಮಹಾಕಾಳಕ್ಕೆ ಪೋಗಿ ನೋೞ್ಪ[3]ರನ್ನೆಗಂ *ನಮೇರು ಮಂದಾರಸಂತಾನಕ ಪಾರಿಯಾತ್ರಮೆಂಬ ದೇವರ್ಕಳ್ ಸುರಿದ ಪುಷ್ಪವೃಷ್ಟಿಯಿಂದಂ ಮುಚ್ಚೆಪಟ್ಟನಾಗಿ ಕಂಪಿಂಗೆಱಗಿದ ತುಂಬಿಯ ಸಮೂಹಮಂ ಮೇಗೆ ಸುೞಿವುದಂ ಕಂಡಿಲ್ಲಿರ್ದ್ದನೆಂದು ಯಶೋಭದ್ರೆ ತೋಱ[3]ದೊಡೆ ಪೋಗಿ ತೆಱ[3]ದು ನೋೞ್ಪರನ್ನೆಗಂ* ಮೃತಕಮಂ ಕಂಡನಿಬರುಂ ಮೂರ್ಛೆವೋಗಿ ನೀಡಱಿಂದೆೞ್ಚೆತ್ತರ್ತ್ತ ತಮ್ಮ ಬಸಿಱುಮಂ ತಲೆಯುಮಂ [4]ಬ[4]ಡಿದು ಕೊಂಡು ಸುಕುಮಾರಸ್ವಾಮಿಯ ರೂಪಮಂ ತೇಜಮುಮಂ ಯೌವನಮಂ ಲಾವಣ್ಯಮಂ ಸೌಭಾಗ್ಯಮಂ ಯಶಮಂ ಮೆಲ್ಪಂ ನುಡಿಯ ಬಲ್ಮೆಯಂ ಶುಚಿತ್ವಮಂ ಶೌಚಮಂ ಶ್ರೀಯಂ ಸಂಪತ್ತಂ ಸೊಬಗಂ ಒಲ್ಮೆಯಂ ಧೈರ್ಯಮುಂ ಎಂದಿವು ಮೊದಲಾಗೊಡೆಯವಾತನೊಳ್ ನೆಲಸಿರ್ದ ಗುಣಂಗಳಂ ನೆನೆನೆನೆದನಿಬರುಂ[5] ಪ್ರಲಾಪಂಗೆಯ್ಯುತ್ತಂ ಸೈರಿಸಲಾಱದೆ ನಿರಂತರಂ ಮೂರ್ಛೆವೋಗುತ್ತಂ ನೀಡುಂ ಬೇಗಂ ದುಃಖಂಗೆಯ್ದಲ್ಲು ನೀರಿೞಿದೆಣ್ಬರ್ ಬಸಿ[6]ಱ ಪೆಂಡಿರುೞಿಯೆ ಇರ್ಪ್ಪತ್ತನಾಲ್ವರ್ ಪೆಂಡಿರುಂ ಮತ್ತಂ ಪೆಱರ್ ನಂಟರ್ಕಳುಂ ಪರಿವಾರಮುಂ ಯಶೋಭದ್ರೆಯೊಡನೆ ದಯಾಭದ್ರರ್ ಗುರುಗಳಾಗೆ ಕಮಳಶ್ರೀ ಕಂತಿಯರ್ ಕಂತಿಯರಾಗೆ ತಪಂಬಟ್ಟುಗ್ರೋಗ್ರ ತಪಂಗೆಯ್ದನಿಬರುಂ ಸೌಧರ್ಮ [7]ಕಲ್ಪಂ[7] ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್

ಮತ್ತಿಂತಪ್ಪುದಂ ಚಿಂತಿಸಲು ಸೈರಿಸಲುಮಾಗದ ತಿರಿಕೋಪಸರ್ಗಮನವಂತಿ ಸುಕುಮಾರಸ್ವಾಮಿ ಮೂಱುದಿವಸಮಿರುಳುಂ ಪಗಲುಂ ಸೈರಿಸಿ ರತ್ನತ್ರಯಮನೆಂತು ಸಾದಿಸಿದನಂತೆ ಸಂನ್ಯಸನಂಗೆಯ್ದಿ[8]ರ್ದಾ[8]ರಾಧಕರಪ್ಪ ಮಹಾಪುರುಷರುಮವಂತಿ ಸುಕುಮಾರಸ್ವಾಮಿಯ ಪರಮಸುಖಿಯುಪ್ಪುಪಸರ್ಗಮಂ ವಿಜಯ ವಿಧಾನಮಂ ಮನದೊಳನವರತಂ ಚಿಂತಿಸು[9]ತ್ತಾ ಪ್ರಾಗಮಪದಾರ್ಥರ್ಥಿಗಳೊಳತೀವ ಸ್ಥಿರರಾಗಿ ಪರಮ ಸಹಜ ನಿಜರತ್ನತ್ರಯದೊಳ್ ಕೂಡಿ ಅಭೇದವಾಗೆಯ್ದೆಕೂಡಿ ಶರೀರಂ ಮೊದಲಾಗೊಡೆಯ ಸಮಸ್ತ ಬಾಹ್ಯಾಭ್ಯಂತರ ಪರಿಗ್ರಹಂಗಳಂ ನೆಱ[3] ತೊಱ[3]ದು ಅಪೂರ್ವಾಪವರ್ಗ ಸುಖಂಗಳನೆಯ್ದುಗೆ[9]

ಮತ್ತುಜ್ಜೇನಿಯ ತೆಂಕಣದೆಸೆಯೊಳವಂತಿ ಸುಕುಮಾರಸ್ವಾಮಿಯ ಕಾಲಂಗೆಯ್ದೆಡೆ ಈಗಳುಂ ಪುಣ್ಯಮುಂ ಪವಿತ್ರಮುಮಾದುದು ಮತ್ತಂ[10] ಮಹಾಪುರುಷನ ಶರೀರಮಂ ಚತುರ್ನಿಕಾಯಾಮರತತಿಗಳ್ ಭಕ್ತಿಯಿಂದಗರು ಕಾಳಾಗರು ಗೋಶೀರ್ಷ ಚಂದನಂ ಮೊದಲಾಗೊಡೆಯ ಅನೇಕ ಸುಗಂಧ ದ್ರವ್ಯಂಗಳಿಂದಂ

---

[1] ಬಾಪೋ (ಖ), ಕೋ (ಗ). [2] ರ್ಪ ಮಿಂತು (ಕಗ). [3] + ರ (ಕಗ). *-* (ಘಚಛ) ಗಳಲ್ಲಿಲ್ಲ. [4] ಪಿ (ಖ). [5] + ವಿ (ಘಚಛ). [6] ರ್ಪೆಂ (ಘಚಛ). [7] ೦ (ಘಚಛ). [8] ಳ್ದ (ಕಖಗ). [9] ತ್ತಂ ಪಂಚನಮಸ್ಕಾರಮನುಚ್ಚರಿಸುತ್ತಂ ದೇವರಂ ಧ್ಯಾನಿಸುತ್ತುಂ ಮುಡಿಪಿ ರತ್ನತ್ರಯಮಂ ಸಾದಿಸಿಯಭ್ಯುದಯ ಸುಖಂಗಳನೆಯ್ದಿ ಕರ್ಮಕ್ಷಯಂಗೆಯ್ದು ಮೋಕ್ಷಮಂ ಸಾದಿಸುಗೆ (ಘಚಛ). [10] ಗಂಧೋದಕಂ ಬಿಳ್ಪುದಱಿಂದಂ (ಘಚಛ).

ಪೂಜಿಸಿದ ವಸ್ತುಗಳ್ ಕಾಲಾಂತರದಿಂ ಕರಗಿ ಬಿೞ್ದುದಾ ಸ್ಥಾನಕ್ಕಂ[1] ಗಂಧವತಿಯೆಂಬ ತೊಱೆಯಾದುದು ದೇವರ್ಕಳ್ ಪೊಗೞ್ದು ಕಳಕಳಧ್ವನಿಯಿಂ ಪೆಂಡಿರ್ಕಳ ಪ್ರಳಾಪಂಗೆಯ್ದುತ್ತಿ ಕಳಕಳಧ್ವನಿಯಿಂದಂ ಕಳಕಳಾಯ[1]ತಮೆಂದು[1] ಸಿದ್ಧಾಯ[2]ತನ[2]ಮಾದುದು

[1] ಮೆಂಬುದು (ಘ ಚ ಛ). [2] (ಕ ಖ) ಗಳಲ್ಲಿಲ್ಲ.

# ಸುಕೌಶಳ ಸ್ವಾಮಿಯ ಕಥೆ

ಸುಕೌಶಳ ಸ್ವಾಮಿಯ ಕಥೆಯಂ ಪೇೞ್ವೆಂ:

ಗಾಹೆ ॥ ಮೊಗ್ಗಳ ಗಿರಿ [1]ಮ್ಹಿ[1] ಯ ಸುಕೌಸಳೋ ವಿ ಸಿದ್ದತ್ಥ ದಯಿದಗೋ ಭಗವಂ ।
ವಗ್ಘೀಯೆ ಖಯಿದಂ ಪದಿದೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಮೊಗ್ಗಳ ಗಿರಿಮ್ಹಿ ಯ—[2]ಮೊಗ್ಗಳವೆಂಬ[2] ಪರ್ವತದೊಳ್, ಸುಕೌಸಳೋಪಿ—ಸುಕೌಸಳಸ್ವಾಮಿಯುಂ, ಸಿದ್ಧತ್ಥದಯಿದಗೋ—ಸಿದ್ಧಾರ್ಥನೆಂಬ ಪರದನ [3]ಕಾದಲಿಸೆ[3] ಪಡುವ ಮಗಂ, ಭಗವಂ—ಪೆರ್ಮೆಯನೊಡೆಯೊಂ, ವಘ್ಘೀಯೆ ಖಯಿದಂಪದಿದೋ—ಮುನ್ನಿನ ಭವದ ತಾಯಪ್ಪ ಪೆಣ್ಬುಲಿಯಿಂದಂ ತಿನೆ [4]ಬ[ರ್ದಿ]ದೊ[4]ನಾಗಿಯುಂ, ಪಡಿವಣ್ಣೊ—ಪೊರ್ದಿದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನ ಚಾರಿತ್ರಾರಾಧನೆಯಂ.]

ಅದೆಂತೆಂದೊಡೆ:

ಈ ಜಂಬೂದ್ವೀಪದ ದಕ್ಷಿಣ ಭರತಕ್ಷೇತ್ರದೊ[5]ಳಂಗಮೆಂ[5]ಬುದು ನಾಡಲ್ಲಿ ಚಂಪಾನಗರಮೆಂಬುದು ಪೊೞಲದನಾಳ್ವೊಂ ಗಂಧಭಾಜನನೆಂಬರಸನಿಂದ್ರನೊಳೋರಂತಪ್ಪ ಭೋಗೈಶ್ವರ್ಯವಿಭವಮನೊಡೆಯೊಂ [6]ನ್ಯಾ[6]ಯದಿಂದಂ ಪ್ರಜೆಗಳಂ[7]ಪ್ರತಿಪಾಳಿಸವೊ[7] [8]ನಧಿಗಮ[8] ಸಮ್ಯಕ್ ದೃಷ್ಟಿಯಪ್ಪನೆೞು ಗುಣಂಗಳಿಂದಂ ಕೂಡಿ[9]ದೊ[9]ನಾಯೆೞುಂಗುಣಂಗಳೆಂಬುವಾವುವೆಂದೊಡೆ

ಗಾಹೆ ॥ ಸಮ್ಮದ್ದಸ್ಸಣಸುದ್ಧೋ ಕದವಧ ಕಮ್ಮೋ ಸುಸೀಲಗುಣಣಿಳಯೊ
[10]ಉಜುಗತ್ತೋ ಗುರುಭತ್ತೋ ಪವಯಣ ಕುಸಳೋ ಮದಿಪ್ಪಗಬ್ಭೋಯ ॥

ಎಂದೇೞುಂ ಗುಣಂಗಳಿಂದಂ ಕೂಡಿದೊನಂತಪ್ಪರಸಂ ಶರತ್ಕಾಲದ ಮುಗಿಲೊಳೋರಂತಪ್ಪುದನಾದಮಾನುಂ ವಿಚಿತ್ರಮಪ್ಪುದಂ ಸಹಸ್ರಕೂಟಮೆಂಬ ಜಿನಾಲಯಮಂ ಮಾಡಿಸಿ ಅದರ್ಕ್ಕನವರತಂ ಮಹಾ ಪೂಜೆಯುಮಂ ಮ[11]ಹಿಮೆ[11]ಯುಮಭಿಷೇಕಂಗ[12]ಳುಮಂ[12] ಸಲಿಸುತಿರ್ಪೊಂ ಮತ್ತಾ ಪೊೞಲೊಳೊರ್ವಂ ಸಾಗರದತ್ತನೆಂಬೊಂ ಸೆಟ್ಟಿಯಾತನ ಭಾರ್ಯೆ ಸುಭದ್ರೆಯೆಂಬೊಳಾಯಿರ್ವರ್ಗಂ ಮಗಳ್ [13]ಸು[13]ರೂಪೆಯೆಂಬೊಳ್ ಮತ್ತಾ ಪೊೞಲೊಳ್ ಪೆಱನೊರ್ವಂ ಸೆಟ್ಟಿ ನಾಗದತ್ತನೆಂಬೊನಾತಂಗೆ [13]ಸು[13]ರೂಪೆಯಂ ಕೊಟ್ಟೊಡಾಯಿರ್ವರ್ಗಂ ಸುಕೇ[14]ಶಿನಿಯೆಂ[14]ಬ ಮಗಳಾದಳಾಕೆ

---

[1] ಮಿ (ಖ). [2] ಮದ್ಗರಗಿರಿಯೆಂಬ ಪರ್ವತದೊಳ್ (ಗಘಚಛ). [3] ಕಾಲದಲಿಸೆ (ಸ–ಛ). [4] ಬಳ್ದಿ (ಖಗ), ಪಡುತಿರ್ದೊನಾಗಿಯುಂ (ಘಚಛ), ಬಳ್ದಿದ (ಕ). [5] ಳ್ ಗಂಗೆಯೆಂ (ಕಖಗ). [6] ಸ (ಕ). [7] (ಕ) ದಲ್ಲಿ ನಷ್ಟವಾಗಿದೆ. [8] ನಿದಿಗವಾಗಮ (ಕ) . . . ವಾ (ಖ). [9] ದ (ಕ). [10] ವಜುಗೆಂತೋ (ಖಗ), ವಜುಗುಲತೋ (ಘ), ಉಜುಗುಲತೊ (ಚಛ). [11] ಯ್ಮೆ (ಕ). [12] ಳ್ಮಂ (ಕಖಗ). [13] ಸ್ವ (ಕಗ). [14] ಶಿಯೆಂ (ಕ).

[1]ಬ[1]ಳೆದತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವವಿಲಾಸವಿಭ್ರಮಂಗಳ ನೊಡೆಯೊಳ್ ಪಲವುಂ ತೆಱದ ಶುಭಲಕ್ಷಣಂಗಳಿಂದಂ ಕೂಡಿದ ಮೆಯ್ಯನೊಡೆಯೊಳ್ ನವಯೌವನೆ ದೇವಗಣಿಕೆಯನೆ ಪೋಲ್ವಳೊಂದು ದಿವಸಂ ಅಷ್ಟಮಿ[2]ಯಂ ನೋಂತು[2] ದೇವರನರ್ಚಿಸಲೆಂದು ಸಹಸ್ರಕೂಟ ಚೈತ್ಯಾಲಯಕ್ಕರ್ಚನೆಯಂ ಕೊಂಡು ಪೋದಳನ್ನೆ ಗಮರಸನು[3]ಮಾಗಳೆ ದೇವರಂ ಬಂದಿಸಲ್ ಬಂದೊಡರಸಂಗೆ ನಾಣ್ಚಿ ಬಸದಿಯೊಳಗಣ ಕಂಬದ ಮಱೆ[3]ಯೊಳ್ ಕೇರಂ ಸಾರ್ದು ಪೊನ್ನ ಬೆಳಗುವ ಗಳಂತಿಗೆಯನಾದಮಾನು ಮೊಪ್ಪುತ್ತಿರ್ದುದಂ ಪಿಡಿದು ನಿಂದಿರ್ದೊಳನರಸಂ[3] ಕಂಡಿಲ್ಲಿಯ ಚಿತ್ರದ ಲೆಪ್ಪದ [4]ಕಾಷ್ಠಕರ್ಮದ[4] ರೂಪುಗಳೊಳೆಲ್ಲ[5]ಮಿಾ ಸ್ತ್ರೀಯ ಜೀವ[6]ವಿದ್ಧ[6]ಮಿಂತುಟತಿಶಯ [7]ಮೆಂದರಸನಾಕೆಯ ರೂಪಿಂಗಚ್ಚರಿವಟ್ಟು[7] ಪೊಗೞೆ[3] ಕೆಲದೊಳಿರ್ದ ಕಶ್ಚಿದ್ದೇವದತ್ತ ನೀಕೆ ಕನ್ನೆ[8]ಯಿರ್ದೊ[8]ಳೆಂದು ಪೇೞ[3]ದೊಡಾರ ಮಗಳೆಂದು ಬೆಸಗೊಂಡೊಡೀ ಪೊೞಲ್ಗೆ ಪ್ರಧಾನಂ ನಾಗದತ್ತ ಸೆಟ್ಟಿಯ ಮಗಳೆಂದು ಪೇೞ[3]ದೊಡರಸಂ ಕೇಳ್ದು ಕೆಮ್ಮಗಿರ್ದು ದೇವರ್ಗೆ ನಮಸ್ಕಾರಂಗೆಯ್ದು [9]ಋಷಿಯರಂ ಬಂದಿಸಿ ತನ್ನ ಮನೆಗೆ ಪೋದನ್

ಇತ್ತ ಸುಕೇಶಿನಿಯುಂ ದೇವರನರ್ಚಿಸಿ ಬಂದಿಸಿ ಗುರುಪರಿವಿಡಿಯಿಂದಂ ರಿಸಿಯರಂ ಬಂದಿಸಿ ವ್ರತಂಗಳನೇಱ[3]ಸಿಕೊಂಡು ಸಿದ್ಧಸೇಸೆಯಂ ತಾಯ್ಗಂ ತಂದೆಗಂ ಪೋಗಿ ಕೊಟ್ಟೊಡವರ್ಗಳುಂ[10] ತಲೆಯೊಳಿಟ್ಟುಕೊಂಡು ಯೌವನಂ ನೆಱೆ[3]ದ ಕೂಸಿನ ರೂಪಂ ನೋ[11]ಡುತ್ತಿರ್ದಾ[11]ರ್ಗೆ ಕುಡುವಮೆಂದು ತಮ್ಮೊಳ್ ನುಡಿಯುತ್ತಿರ್ಪಿನ ಮರಸಂ ಕನ್ನೆಯ ರೂಪಂ ಕಂಡಾಟಿಸಿ ಕೂಸಿನ ತಾಯಪ್ಪ ಸುರೂಪೆಗೆ ಬೞೆ[3]ಯನಟ್ಟಿ ಬರಿಸಿ ಕೂಸನಾರ್ಗೆ ಕೊಟ್ಟಪಿರೆಂದು ಬೆಸಗೊಂಡೊಡೆನ್ನ ತಮ್ಮಂ ವರಾಂಗನೆಂಬೊ ನಾತನ ಮಗಂ ಜಿತರಂಗನೆಂಬೊನೆನ್ನ ಸೋದರಳಿಯನಾತಂಗೆ ಕೊಟ್ಟಪೆನೆಂ[12]ದು ಪೇೞ[3]ದೊ[12]ಡರಸಂ ಮಧುಸೇನಂ ಮಧುಸೂದನರೆಂಬಿರ್ವರ್ ಪ್ರಧಾನರ್ಗಡೆಗಳಂ ನಾಗದತ್ತಸೆಟ್ಟಿಯಲ್ಲಿಗೆ ಕೂಸಂ ಬೇ[13]ಡಿಯಃ[13]ಟ್ಟಯುತ್ತ್ರವಳನಾಗಿಯವರ ಬೞೆ[3]ಯನೆ ತಾನುಂ ನಾಗದತ್ತನ ಮನೆಗೆ ಪೋಗಿ ಕೂಸಂ ಬೇಡಿ ಪೆತ್ತಂ ನಾಗದತ್ತನುಮಷ್ಟಾಹ್ನಿಕ ಮಹಾಮಹಿಮೆಯನೆಂಟು ದಿವಸಂ ಮಾಡಿ ಪ್ರಶಸ್ತ [14]ದಿನ[14]ವಾರ ನಕ್ಷತ್ರ ಮುಹೂರ್ತ ಹೋರಾಲಗ್ನದೊಳ್ ಕೂಸಿನನುಕೂಲದೊಳ್ ಪಾಣಿಗ್ರಹಣ ಪುರಸ್ಸರಂ ಸುಕೇಶಿನಿಯಂ ಗಂಧಭಾಜನನೆಂಬರಸಂಗೆ ಕೊಟ್ಟನಿಂತು ಮಹಾವಿಭೂತಿಯಿಂದಂ ಮದುವೆ ನಿಂದು ಗಂಧಭಾಜನ ನೃಪತಿಯುಂ ಸುಕೇಶಿನಿಯೊಳಿಷ್ಟ ವಿಷಯಕಾಮ ಭೋಗಂಗಳಂ ಪಲಕಾಲಮನುಭವಿಸುತ್ತಿರೆ

ಮತ್ತೊಂದು ದಿವಸಂ [15]ಕೌಶ[15]ಲಾಧಿಪತಿಯಪ್ಪ ತಿಬಳನೆಂಬರಸಂಗಂ ಕಳಿಂ

---

[1] ಬೆ (ಕ). [2] ಯ ನೋಂಪಿಗೆ (ಕ). [3] (ಕಖಗ) ಗಳಲ್ಲಿ ಈ ಭಾಗ ಇಲ್ಲ. [4] ಕಲ್ಲುಮರದಲ್ಮಾಡಿದ (ಕಗ). [5] + ಮಿಲ್ಲ, ಕ. [6] ರೂಪಿದು (ಕಖಗ). [7] ಮಪ್ಪ ರೂಪೆಲ್ಲಿಯುಮಿಲ್ಲೆಂದರಸಂ (ಖ). [8] ವುಳ್ಳೊ (ಕ). [9] + ಪೊಡೆವಟ್ಟು (ಖ). [10] + ತಮ ಗಿತ್ತ ಸೇಸೆಯುಂ (ಘಚಛ). [11] ಡಿತ್ತಿರ್ದೊಂತಾನಾ (ಕಖಗ). [12] ದೊ (ಕ). [13] ಡಲ (ಕ). [14] ದಿವಸ (ಖ). [15] ಕಂಸ (ಕ).

ಗಾಧಿಪತಿಯಪ್ಪ ಕಳಿಂಗನೆಂಬರಸಂ ತಮ್ಮೊಳ್ ವಿಗ್ರಹಮಾದೊಡೆ ಗಂಧಭಾಜನ ನೃಪತಿ ತನ್ನ ಮತಿ[1]ಶ್ರುತ[1]ನೆಂಬ ಮಂತ್ರಿಯನಟ್ಟಿ ಇರ್ವರ್ಗ್ಗಂ ಸಂಧಿಮಾಡಿದೊಡೆ ಕಳಿಂಗನೆಂಬರಸಂ ಮಧುಸೂದನನೆಂಬ ಪೆರ್ಗ್ಗಡೆಯ ಕೆಯ್ಯೊಳ್ ಮದಾಂಧ [2]ಗಂಧ ಹಸ್ತಿಯಂ[2] ಗಂಧಭಾಜನನೃಪತಿಗೆ ಪಾಗುಡಮಟ್ಟಿದೊಡದಂ ಸೊರ್ಕ್ಕಿನಿಂದಂ ಮಸಗಿದುದಂ ಗಂಧಹಸ್ತಿಯಂ ಸುಕೇಶಿನಿ ಕಂಡು ಜಾತಿಸ್ಮರೆಯಾಗಿ ಮೂರ್ಛೆ ವೋಗಿರ್ದ್ದೊಳಂ ದಾದಿ ಮೊದಲಾಗಿ ಕೆಲದೊಳಿರ್ದ್ದರೆಲ್ಲಂ ಚಂದನದ [3]ನೀರ್ಗಳಂ[3] ತಳಿದು ಬೀಸೆ ನೀಡಱಿಂದೆಚ್ಚತ್ತಳನ್ನೆಗಮರಸನುತ್ತಮಳನಾಗಿ ಪರಿತಂದಿದೇನೀಕೆಗೇ ಕಿಂತಾಯ್ತೆಂದು ಬೆಸಗೊಳೆ ದಾದಿಯೆಂದಳ್ ಸೊ[4]ರ್ಕ್ಕಾನೆ[4]ಯಂ ಕಂಡು ಮೂರ್ಛೆ ವೋದಳೆಂದು ಪೇೞ್ದೊಡಾ ಮಾತನರಸಂ ಕೇಳ್ದು [5]ಮಱುಸೂೞನಾನೆಯಂ[5] ಕಂಡಂಜ ದಂ[6]ತಿರೆ[6] ಸುಕೇಶಿನಿಯ ಮಾಡದ ಕೇರ್ಗ್ಗಳೆಲ್ಲಾಯೆಡೆಗಳೊಳಂ ವ್ಯಾಳಂಗಳಪ್ಪಾನೆ ಗಳಂ ತನ್ನ ಚಿತ್ರಾರಿಗರಿಂದಂ ಬರೆಯಿಸಿದಂ ಮತ್ತೆ ಸುಕೇಶಿನಿಯುಂ ತನ್ನ ಮುನ್ನಿನ ಜನ್ಮದೊಳ್ ನೆಗೞ್ದುದೆಲ್ಲಮಂ ಪಟದೊಳ್ ತಾನೆ ಬರೆದಾರುಮಱಿಯದಂತಿರೇಕಾಂತ ದೊಳ್ ನೋಡುತ್ತಿರ್ಕ್ಕುಮಿಂತು ಕಾಲಂ ಸಲೆ

ಮತ್ತೊಂದು ದಿವಸಂ ಮುನ್ನಿನ ಗಂಧಹಸ್ತಿಯೊಡನೆ [7]ಬಾರಿ[7]ಯೊಳ್ ಮೂವ ತ್ತೆರಡು ಗಜಕ್ರೀಡೆಗಳಿಂದಂ ನೀಡುಂ ಬೇಗಂ ಕ್ರೀಡಿಸಿಯಾನೆಯಂ ಸೇದೆಗೆಡಿಸಿ ತನ್ನ ಬಸಕ್ಕೆ ಮಾಡಿಯೇಱಿಯಂಕುಸಮಂ ಪೊಳೆಯಿಸುತ್ತಮರಸಿಯಲ್ಲಿಗೆ [8]ವಂ[8]ದು ನಿಂದಿಂತಕ್ಕುಮೆ [9]ಮ[9]ಚ್ಚಿದಾ ಎಂದು ತನ್ನ ಸಾಹಸಮಂ ಪೇೞ್ದು ಮೆಱೆಯೆ ಸುಕೇ ಶಿನಿಯೆಂ[10]ದೊ[10]ಳಿದೇ[11]ನೆಂಬಾನೆ[11] ತಗರೊಳೋರಂತಪ್ಪುದು ಚಂದನಮಲಯಮೆಂಬ ಪಿರಿಯ ಪರ್ವತದೊಳ್ ಇಂದ್ರನೀಲ ಮಾಣಿಕದೊಳೋರಂತಪ್ಪ ಬಣ್ಣಮನೊಡೆಯದು ಮಲಯಸುಂದರನೆಂಬಾನೆಯುಂಟು ಹಸ್ತಿಯೂಥಕ್ಕೆಱೆಯನಪ್ಪುದು ಎಲ್ಲಾ ಕಾಲಮುಂ ಮದದಿಂದಂ ಪೆರ್ಚುತ್ತಿರ್ದುದು ಕೆಂದಾವರೆಯ ವಣ್ಣದೊಳೋರಂತಪ್ಪ ಬಣ್ಣಮ ನೊಡೆಯ ಪದ್ಮಾವತಿಯೆಂಬ ಪಿಡಿ[12]ಯೊಡನೆ[12] ಕ್ರೀಡಿಸುತ್ತಿರ್ಪ್ಪಾನೆಯಂ ನಿನ್ನ ವಸಕ್ಕೆ ಮಾಡಿ ಪಿಡಿದೇಱಿಕೊಂಡು ವಂದೊಡೆ ನಿನ್ನ ಗಜ[13]ಪ್ರಿಯತೆಯುಮೇಱಿ ಯಾಡಲ್[13] ಬಲ್ಮೆಯುಂ ಕಲಿತನಮುಂ ಸಾಹಸಮುಂ ಗಂಡಗುಣಮುಮನಱಿಯ ಲಕ್ಕುಮಾ ಯಾನೆಯಂ ತಂದಂದು ಗಂಡರ್ ನಿನ್ನನ್ನರೀ ಭುವನದೊಳಾರುಮಿಲ್ಲೆಂದೊ ಸೆದು ಮೆಚ್ಚಿ ಪೊಗೞ್ವೆನೆಂದೊಡರಸ[14]ನಿಂ[14]ತೆಂದಂ ನೀನಪ್ಪೊಡಿಲ್ಲಿ ಪುಟ್ಟಿದೆ ಆ ಯಾನೆ ಯನೆಲ್ಲಿ ಕಂ[15]ಡೆಯೆಂ[15]ತಱಿವೆಯೆಂದು ಬೆಸಗೊಳೆ ಸುಕೇಶಿನಿಯಿಂತೆಂದಳ್

---

[1] ವರ (ಘಚಛ). [2] ಸಿಂಧುರಮಂ (ಘಚಜ). [3] ಹಿಮಸಲಿಲಂಗಳಂ (ಘಚಛ). [4] ಕ್ರೀಡಾ (ಕ). [5] ಮಧುಸೂದನನಾನೆಯಂ (ಘಚಛ). [6] ತೆ (ಘಚ). [7] ಚಾಲಿ (ಕ), ಬಾಳಿ (ಖ), ಬಾಲಿ (ಗ), ಬಾವಿ (ಚ). [8] ಬಂ (ಕ). [9] ಮೆ (ಖ). [10] ಬ (ಕ). [11] ದೇತಜಾನೆ (ಚ). [12] ಯನೆ (ಕ). [13] ಬಂಧನೋಪಾಯಕುಶಳಿಕೆಯುಮಱಿವಿನೊಂದು (ಘಚಛ), ಪ್ರಿತಿಯತಿರ್ಕೆಯುಮೇಱಿಯಾಡಲ್ (ಕಗ). [14] ಗಿಂ (ಖ). [15] ಡಱಿ ಯೆಯೆಂ (ಕ).

ಆಂ ಮುನ್ನಿನ ಜನ್ಮದೊಳ್ ಮನೋವೇಗೆಯೆನೆಂಬ ವಿದ್ಯಾಧರಿ ಎನ್ನಂದಿನ ಭರ್ತಾರಂ ಮಣಿ[1]ಚೂ[1]ಳನೆಂಬೊಂ ವಿದ್ಯಾಧರನಾತನೊಡನೆ ಭೌಮವಿಹಾರಾರ್ಥಂ ತೊಟಲ್ವಲ್ಲಿ ಚಂದನಮಲಯಮೆಂಬ ಪರ್ವತದೊಳ್ ಕರಿಣೀವೃಂದಂ ಬೆರಸಾಡುವ ಕರಿ[2]ಪತಿ[2]ಯನೈರಾವಣ ಸನ್ನಿಭಮಂ ಕಂಡೆನೆಂದುಕ್ಕೆರ್ವದಿಂದಂ ಪೇಟ್ದೊಡಾ ಮಾತ ನರಸಂ ಕೇಳ್ದು ಪೂರ್ವಜನ್ಮಾಂತರದೊಳ್ ಕಟ್ಟಿಪಟ್ಟ ಮುಳಿಸನೊಡೆಯೊಂ ತನ್ನಳ್ಳ ಸಮಸ್ತ ಬಲಂಬೆರಸು ಪೋಗಿ ಮಲಯಪರ್ವತಮೆಲ್ಲಮಂ ಬಳಸಿ ಸುತ್ತಿಮುತ್ತಿದಾಗ ಳಿಂದ್ರನೀಲಮಾಣಿಕದ ತೇಜದೊಳೋರಂತಪ್ಪ ಮೆಯ್ಯನೊಡೆಯ ಗಜಪತಿಯುಂ ಮುಗಿಲ ಧ್ವನಿಯ ಮೆಲ್ಗಂಭೀರಮಪ್ಪ ಗರ್ಜ್ಜನೆಯನೊಡೆಯದುಂ ಬಂದು ಪಡೆಯೆಲ್ಲಮಂ ಹತವಿತತಕೋಳಾಹಳಮೆಟಿದು ಕೊ[3]ಲ್ವು[3]ದನಾದಮಾನುಂ ಕಲಿಯಪ್ಪುದನರಸಂ ಕಂಡು ಪಿಡಿಯಲಾಱದಾನೆಯಂ ಕೊಂದೆರಡುಂ ನಿಡಿಯ ತೋರಮಪ್ಪ [4]ಕೊಂಬುಗ [ಳುಮಂ][4] ಕುಂಭಸ್ಥಳದ ಮುತ್ತುಗ[4] [ಳುಮಂ][4]ಕೊಂಡೊಸಗೆಯಿಂದಂ ಬೇಗಂ ಚಂಪಾ ಪುರಕ್ಕೆ ವಂದರಮನೆಯಂ ಪೊಕ್ಕರಸಿಯಂ ಕಂಡು ನಿನ್ನ ನಚ್ಚುವ ಮಲಯಸುಂದರನ ಕೊಂಬುಗ[4][ಳುಮಂ][4] ಮುತ್ತುಗ [4][ಳುಮಂ][4] ಕೊಳ್ಳೆಂದವಂ ಸುಕೇಶಿನಿಯ ಮುಂದೆ ತಂದಿಟ್ಟೊಡೆ ಸುಕೇಶಿನಿಯುಂ ಹಾ ಮಲಯಸುಂದರಾ ಹಾ ಎನ್ನ ನಲ್ಲನೆ, ಹಾ ಎನ್ನ ಮಲಯಸುಂದರನಪ್ಪ ಸ್ವಾಮಿಯೆಂದು ಪ್ರಳಾಪಂಗೆಯ್ದು ಎರಡು ಕೊಂಬು ಗಳುಮಂ ತಟಿಕೈಸಿಯಾದಮಾನುಂ ಬಿಗಿದಪ್ಪಿಕೊಂಡು ಸತ್ತಳ್ ಸುಕೇಶಿನಿ ಸತ್ತು ದರ್ಕ್ಕರಸಂ ಮೊದಲಾಗಿ ಪರಿವಾರಮೆಲ್ಲಮಂ ಬೆಱಗಾಗಿ ವಿಸ್ಮಯಂಬಟ್ಟು ದುಃಖಂ ಗೆಯ್ದರ್

ಕೆಲವು ದಿವಸದಿಂ ಯಶೋಧರರೆಂಬ ಕೇವಲಜ್ಞಾನಿಗಳ್ ವಿಹಾರಿಸುತ್ತಮಾ ಚಂಪಾನಗರಕ್ಕೆ ವಂದು ಪ್ರಮದೋದ್ಯಾನವನದೊಳಿರ್ದ್ದರೆಂಬ ಮಾತನರಸಂ ರಿಸಿ ನಿವೇದಕನಿಂದಱಿದು ಸಪರಿವಾರಂ ಬೆರಸು ಬಂದರ್ಚಿಸಿ ಯಥೋಚಿತಸ್ಥಾನದೊಳಿ ರ್ದಂ ಮತ್ತಂ ನಾಗದತ್ತ ಸೆಟ್ಟಿಯುಂ ಸುರೂಪೆಯುಂ ವರಾಂಗನುಂ ಪ್ರಿಯಂ ಗುವುಂ ಮೊದಲಾಗೊಡೆಯ ಶ್ರಾವಕ ಜನಂಗಳ್ ಬಂದರ್ಚಿಸಿ ನಮಸ್ಕಾರಂಗೆಯ್ದರ್ [5]ತನ್ಮ್ಮಡಿ[5]ಗಳೊಳಿರ್ದು ಧರ್ಮಮಂ ಕೇಳ್ದು ತದನಂತರಮೆ ವೈರಾಗ್ಯಮಾಗಿ ಸುಕೇಶಿನಿಯ ದುಃಖಮಂ ಸೈರಿಸಲಾಱದೆ ಸುಕೇಶಿನಿಯ ತಂದೆಯಪ್ಪ ನಾಗದತ್ತ ಸೆಟ್ಟಿಯುಂ ತಾಯ್ ಸುರೂಪೆಯುಂ ಮಾವನಪ್ಪ ವರಾಂಗನುಂ ವರಾಂಗನ ಭಾರ್ಯೆ ಯಪ್ಪ ಪ್ರಿಯಂಗುವುಮಂತು ನಾಲ್ವರುಮೆಟ್ದಭಿಮುಖರಾಗಿ ದೀಕ್ಷಾಪ್ರಸಾದಂಗೆಯ್ಯಿಂ ಭಟಾರಾ ಎಂದು ಬೇಡಿ ತಪಂಬಟ್ಟರ್ ಮತ್ತಂ ಸುಕೇಶಿನಿಯಾ ಮಲಯಸುಂದರ ನೆಂಬಾನೆಯ ಕೊಂಬುಗಳನಪ್ಪಿ ಸತ್ತಳೆಂಬ ಮಾತಂ ವರಾಂಗನುಂ ಕೇಳ್ದು ಜನ್ಮಾನು ಬಂಧಿಯಪ್ಪ ಸ್ನೇಹಂ ಕಾರಣಮಾಗಿ ದುಃಖಮಂ ಸೈರಿಸಲಾಱದೆ ತಪಂಬಟ್ಟು ನಿದಾನಸಹಿತಂ ತಪಂಗೆಯ್ದುನಿತ್ತ ಗಂಧಭಾಜನ ನೃಪತಿ ಯಶೋಧರ ಕೇವಲಿಗಳ

---

[1] ಮಾ (ಭ). [2] ಯಪಿರಿ (ಘಚಛ). [3] ಳ್ವು (ಖ). [4] ಕೋಡುಗಳ್ಮಂ (ಘಚಛ), ಕೊಂಬುಗಳ್ಮಂ (ಕಖಗ). [5] ಳ್ಮಂ (ಸ). [6] ತಂಮುಂದಿರಂ (ಕ), ತಂತಮ್ಮೆಡೆಯೊ (ಘಚಛ).

ನಿಂತೆಂದು ಬೆಸಗೊಂಡಂ ಭಟಾರಾ ಸುಕೇಶಿನಿ ಮಲಯಸುಂದರನೆಂಬಾನೆಯ ಕೊಂಬುಗಳನಪ್ಪಿಕೊಂಡು ಸತ್ತುದರ್ಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಕೇವಲ ಜ್ಞಾನಿಗಳಿಂತೆಂದು ಪೇಳ್ದರ್

ದಕ್ಷಿಣಾ ಪಥದೊಳ್ [1]ದ್ರವಿಳ ವಿಷಯದೊಳ್[1] ದಕ್ಷಿಣ ಮಧುರೆಯೆಂಬುದು ಪೊೞಲದನಾಳ್ವೊಂ [2]ಸುಂದರ[2]ಪಾಂಡ್ಯನೆಂಬೊನರಸನಾತನರಸಿಯುಮ್ಮೃತಮಹಾದೇವಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಮಾ ಪೊೞಲೊಳಾರ್ಯನಂದಿಯೆಂಬೊಂ ಸೆಟ್ಟಿಯಾತನ ಪರದಿ[3]ಯುವಿಧಿ[3]ಯೆಂಬೊಳಾ [4]ಇರ್ವ್ವರ್ಗ್ಗಂ ಸುಕೀರ್ತಿಯೆಂಬೊಳ್ ಮಗಳಾದಳ್ ಮತ್ತೊರ್ವನಾ ಪೊೞಲೊಳ್ ಸುದರ್ಶನನೆಂಬೊಂ ಪರದನಾತನ ಪರದಿ ವೀರಶ್ರೀಯೆಂಬೊಳಾಯಿರ್ವರ್ಗ್ಗಂ ಮಗಂ ಪ್ರಿಯದರ್ಶನನೆಂಬೊನಾತಂಗಾ ಸುಕೀರ್ತಿಯಂ ಕೊಟ್ಟರ್ ಸುಕೀರ್ತಿಯ ಕೆಳದಿ ಮಾಲೆಗಾರ್ತಿ ಪ್ರಿಯಸೇನೆಯೆಂಬೊ[4]ಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ ಸುಕೀರ್ತಿ ತನ್ನ ಭರ್ತಾರನನಿಂತೆಂದಳಡವಿಯೊಳಂ ಪರ್ವತಂಗಳೊಳಂ ಪುಳಿನಸ್ಥಳಂಗಳೊಳಮೆನಗೆ ಕ್ರೀಡಿಸಲಬ್ಬೆ ಯಾದುದೆನೆ ನಿನ್ನಬ್ಬೆಯಂ ನೆಱಪಲಕ್ಕುಮೆಂದು ಪ್ರಿಯದರ್ಶನನುಂ ಸುಕೀರ್ತಿಯುಂ ಪ್ರಿಯಸೇನೆಯುಮಂತು ಮೂವರುಂ ಪರಿವಾರಸಹಿತಮಡವಿಗೆ ಪೋಗಿಯಲ್ಲಿ [5]ಕಾನನ ವನ ಸರಿತ್ಸರೋವರ[5] ಪ್ರದೇಶಂಗಳೊಳ್ ಪರಿಜನಂಬೆರಸು ತದೀಪ್ಸಿತ ಪ್ರದೇಶಂಗಳೊಳ್ ವಿಹಾರಿಸಿ [6]ರಮ್ಯಮಪ್ಪ ಗಿರಿನದಿಯ ಪುಷ್ಪ ಪಲ್ಲವಲತಾ[6]ಕೀರ್ಣಮಪ್ಪ ಪುಳಿನ ಸ್ಥಳಂಗಳೊಳ್ ಕ್ರೀಡಿಸುತ್ತಿರ್ಪನ್ನೆಗಂ ಹಸ್ತಿಯೂಥಂ ಬರ್ಪ್ಪುದಂ ಕಂಡಾಗಳೊಂದು ಮದಾಂಧಗಂಧಸಿಂಧುರಂ ಕರಿಣೀವೃಂದಂಗಳಿಂ ಪರಿವೇಷ್ಟಿತನಾಗಿ ಕರಿಣೀಗಣಂಗಳಾ [7]ಕಾಶಪುಷ್ಪಂಗಳಿಂ[7] ಚಾಮರವಿಕ್ಕೆ ಮೃದು ಪಲ್ಲವಂಗಳಂ ಕಬಳಂಗೊಳುತ್ತುಂ ಲೀಲೆಯಿಂ ಬಂದು ಸ್ವಚ್ಛ [8]ವಿಚ್ಛಳಾಕಾರ[8]ಮಪ್ಪ ಮಡುವಂ ಪೊಕ್ಕು ಮನೋಹಾರಿಗಳಪ್ಪ ಕರಿಣೀಗಣದೊಡನೆ ಕ್ರೀಡಿಸುವುದಂ ಮೂವರುಂ ಕಂಡು ಹಸ್ತಿಭೋಗಂಗಳೊಳಪ್ಪ ಕಾಂಕ್ಷೆಯಿಂದಂ ನಿದಾನಂಗೆಯ್ದು ತಿರ್ಯಗಾಯುಷ್ಯಮಂ ಕಟ್ಟಿದರಿಂತು ಕಾಲಂ ಸಲೆ ಮತ್ತೊಂದು ದಿವಸಂ ಬಱಸಿಡಿಲ್ ಪೊಡೆದು ಪ್ರಿಯಸೇನೆ ಸತ್ತಳ್ ಪ್ರಿಯದರ್ಶನನೊಂದು ದಿವಸಂ ತನ್ನ ಭಾರ್ಯೆವೆರಸು ಕದಳೀವನದೊಳ್ [9]ಮಱಲುಂದಿದಲ್ಲಿಗೆ[9] ಕಾಳಿಂಗನಾಗಂ ಬಂದೊಡದಱ ಮೇಗೆ ಕಾಲಂ ನೀಡಿದೊಡೆ ಕಚ್ಚಿರ್ತ್ತಾತನುಮಾಗಳೆ ಪರವಶನಾಗಿ ಪ್ರಾಣಪರಿತ್ಯಾಗಂಗೆಯ್ದನಂ ಕಂಡು ಸುಕೀರ್ತಿಯುಂ ಕಾದಲನ ವಿಯೋಗಂ ಕಾರಣಮಾಗೆ ಪ್ರಾಣವಲ್ಲಭನ ಸುರಿಗೆಯಂ ಕೊಂಡು ತನ್ನಂ ತಾನಿಱಿದು[10] ಸತ್ತಳ್

---

[1] (ಕಖಗ) ಪ್ರತಿಗಳಲ್ಲಿಲ್ಲ. [2] ಗಂದರ (ಗ). ಗಾಂದಾರ (ಘಚ) ಗಂದಾರ (ಛ). [3] ಯವಧಿ (ಕ), ತಿ ವೀರಶ್ರೀ (ಛ). [4] (ಕ) ದಲ್ಲಿ ಇಲ್ಲ. [5] (ಕ) ದಲ್ಲಿ ನಷ್ಟವಾಗಿವೆ. [6] (ಕ) ದಲ್ಲಿ ನಷ್ಟವಾಗಿವೆ. [7] ಳ್ ಪೊಸಕುಸುಮ್ಮಂಗಳಿಂ (ಘಚಛ). [8] ವಿಚ್ಚಾಟಾಕ (ಖ), ಲಿಚ್ಚಾಳಾಕ (ಕಗ). [9] ಪಚ್ಚೆದ್ದರ್ಲ್ಲಿಗೆ (ಘಚಛ). [10] + ಕೊಂಡು (ಕ).

ಅಂತಾ ಮೂವರುಂ ಸತ್ತು ತೆಂಕಣ ಪಡುವಣ ಸಮುದ್ರದ ತಡಿಯೊಳ್ ಚಂದನಮುಲಯಮೆಂಬಾದಮಾನುಂ ರಮ್ಯಮಪ್ಪ ಪರ್ವತದೊಳ್ ಪ್ರಿಯದರ್ಶನ ನಿಂದ್ರನೀಲ ಮಾಣಿಕದೊಳೋರಂತಪ್ಪ ಮೆಯ್ಯನೊಡೆಯದಾಗಿ ಸುಭದ್ರಜಾತಿಯಪ್ಪಾನೆಗೆ ಮಲಯಸುಂದರನೆಂಬಾನೆಯಾಗಿ ಪುಟ್ಟಿದೊಂ ಸುಕೀರ್ತಿಯುಂ ಧವಳ ವರ್ಣಮಪ್ಪ ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದಳ್ ಪ್ರಿಯಸೇನೆಯುಂ ಕೆಂದಾವರೆಯ ವಣ್ಣದೊಳೋರಂತಪ್ಪ ಮೆಯ್ಯನೊಡೆಯ ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದಳಾಯೆರಡುಂ ಪಿಡಿಗಳುಂ ಸುಭದ್ರಜಾತಿಯಪ್ಪಾನೆಗೆ ಪುಟ್ಟಿದವನ್ತಾ ಮೂಱರ್ಕೆ[1]ಮಾರಣ್ಯ[1]ನಿವಾಸಿಗಳಪ್ಪ ಜನಂಗಳುಂ ತಾಪಸಾದಿಗಳುಮವಂ ಕಂಡೊರ್ಗ್ಗಳೆಲ್ಲಮೊಸೆದು ಮೆಚ್ಚಿ ತದ್ದೇಹಾನುಸಾರಿಗಳಪ್ಪ ಪೆಸರನಿಟ್ಟುದಱಿಂದಾ ನಾಡೊಳ್ ಪ್ರಸಿದ್ಧಿಗೆ ಸಂದುವಂತವರ್ಕೆ ಕಾಲಂ ಸಲೆ ಮತ್ತಮಲ್ಲಿ ಯೂಥಾಧಿಪತಿ ಭದ್ರಜಾತಿಯಪ್ಪ ಸುಂದರನೆಂಬಾನೆ ಚಾರಣರಿಸಿಯರ್ಕ್ಕಳ ಪಾದಯುಗಳಂಗಳಂ ವಿದ್ಯಾಧರರ್ಚಿಸಿ ಪೊಡೆವಟ್ಟು ಪೋಪುದಂ ಕಂಡು ತಾನುಂ ನಿಚ್ಚಮಾ ಸ್ಥಿತಿಯೊಳೆ ತಾಮರೆಯ ಪೂಗಳಂ ತಂದರ್ಚ್ಚಿಸಿ ಪೂಜಿಸಿ ಪೊಡೆವಟ್ಟು ಪೋಕುಮಿಂತು ಪುಣ್ಯಮಂ ನೆರಪುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಪ್ರಭಂಕರಿಯೆಂಬ ಸರೋವರದೊಳ್ [2]ಮಲಯಸುಂದರಂ ಪೂರ್ವಭವದ ಪ್ರಾಣವಲ್ಲಭೆಯರ್ಕಳಂ ಕಂಡತಿಸ್ನೇಹದಿಂದಂ ಪೊರ್ದಲಾಟಿಸುವುದಂ ಕಂಡು ಸುಂದರನೆಂಬಾನೆ ಸಾರಲೀಯದುದಱಿಂ ತದ್ವಿರಹ ಪರಿತಪ್ತ ಮನದಿಂದಂ ಸಲ್ವುದಂ ನವಯೌವನನಮನೆಯ್ದಿ[2] ಆತ್ಮಬಲಮನದಱ ಬಲದೊಳ್ ವೃಕ್ಷಭಂಜನ ಸಾಮರ್ಥ್ಯದಿಂ ಪರೀಕ್ಷಿಸಿ ಮಱಿಯಾನೆ[3]ಗಳಿಂ[3] ಪರಿಭವಮನದರ್ಕೆ ಕಂಡು ವೃದ್ಧನಪ್ಪಾ ಸುಂದರನೊಳ್ ಯುದ್ಧಂಗೆಯ್ದು ಕೊಂದಾ ಯೂಥಕ್ಕೆಲ್ಲಮಧಿಪತಿಯಾಗಿ ಮಲಯಾವತಿಯುಂ ಪದ್ಮಾವತಿಯುಮನೊಡಗೊಂಡಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಮಾಯೆರಡುಂ ಪಿಡಿಗಳ್ ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿದುವು ಮಲಯಸುಂದರನ್ ಬಲದ ದೆಸೆಯೊಳ್ ಮಲಯಾವತಿಗೆ ಪೋಪ ದಾಯಮನೆಡದ ದೆಸೆಯೊಳ್ ಪದ್ಮಾವತಿಗೆ ಪೋಪ ದಾಯಮನಿತ್ತಂತು ಪ್ರಭಂಕರಿಯೆಂಬ ಸರೋವರದೊಳ್ ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಡುವಾಗಳ್ ಮಲಯಾವತಿಯ ಮಸ್ತಕದೊಳ್ ವಿಕಸಿತ ಸಹಸ್ರಪತ್ರ ಕುಸುಮಮನಿಡುವ ದಾಯಮಂ ಕೊಟ್ಟು ಸಲಿಸುತ್ತಂ ಉೞಿದ ಪಿಡಿಗಳೆಲ್ಲಮಂ ತೊಱೆ[3]ದಾಯೆರಡಱ[3]ೊಳಮಾಸಕ್ತನಾಗಿ ಕಾಮ ಭೋಗಂಗಳನನುಭವಿಸುತ್ತಮಿಂತು ಸುಖದೊಳಿರ್ಪ್ಪ ಕಾಲದೊಳ್

ಮತ್ತೊಂದು ದಿವಸಂ ಪ್ರಭಂಕರಿಯೆಂಬ ಕೊಳದೊಳ್ ಸ್ವೇಚ್ಛೆಯಿಂ ನೀಡುಂ ಕ್ರೀಡಿಸುತ್ತಂ[4] ತಡಂಬಂದು ಮನಃಪೂರ್ವಕಮಲ್ಲದೆ ಪೊಱಮಡುವಾಗಳ್ ಪದ್ಮಾವತಿ ಬಲದ ದೆಸೆಯೊಳಾಗಿ ಮಲಯಾವತಿಯೆಡದ ದೆಸೆಯೊಳಾಗಿ ಪೊಱಮಟ್ಟು ಬರೆ ಮದಾಂಧ ಗಂಧಸಿಂಧುರಂ ಮದದಿಂ ಮೆಯ್ಯಱಿಯದೆ ಬಲದ ದೆಸೆಯೊಳಿರ್ದ

[1] ಮೂಜನ್ಯ (ಕ). [2] (ಕಖಗ) ಗಳಲ್ಲಿ ಇಲ್ಲ. [3] ಯಪ್ಪಂದಿನ (ಘಚಭ). [4] + ಮಾಡುತಂ ಮುಳುಗುತ್ತಂ (ಘಚಭ).

ಪದ್ಮಾವತಿಯಂ ಮಲಯಾವತಿಗೆತ್ತು ಪದ್ಮಾವತಿಯ ಮಸ್ತಕದೊಳ್ ವಿಕಸಿತ ಸಹಸ್ರಪತ್ರ ಕುಸುಮಮನಿಟ್ಟೊಡೆ ಮಲಯಾವತಿ ನೋಡಿ ತನ್ನಂ ಪರಿಭವಿಸಿದನೆಂದು ಪದ್ಮಾವತಿಯೊಳಪ್ಪ ಪುರುಡುಂ ಕಾರಣಮಾಗಿ ಮುಳಿಸಿನಿಂದಂ ಚಂದನಮಲಯ ಪರ್ವತದ ತುತ್ತತುದಿಯಂ ಬೇಗಂ ಪರಿದಡರ್ದಂತಲ್ಲಿಂದಂ ತನ್ನನಿಕ್ಕಿ ಮಲಯಾವತಿ ಶತಖಂಡಮಾಗಿ ಬಿಬ್ದು ಸತ್ತತ್ತದೞಿ ಸತ್ತುದಂ ಮಲಯಸುಂದರಂ ಕಂಡು ಮಲಯಾವತಿಯ ವಿಯೋಗದೊಳಾದಮಾನುಂ ದುಃಖಂಗೈದು ಪದ್ಮಾವತಿಯನೊಡಗೊಂಡು ಪೋಯ್ತು ಮತ್ತಾ ಮಲಯಾವತಿಯೆಂಬ ಪಿಡಿ ಸತ್ತು ಸುಕೇಶಿನಿಯೆಂಬೊಳಾದಳಾ ಪದ್ಮಾವತಿಯೆಂಬ ಪಿಡಿಯುಮಾಯುಷ್ಯಾಂತದೊಳ್ ಸತ್ತು ಸುಕೇಶಿನಿಯ ತಾಯ್ ಸುರೂಪೆಯ ಸೋದರ ತಮ್ಮಂ ವರಾಂಗನಾದೊಂ ಮತ್ತಾ ಮಲಯಸುಂದರನಿಂದಂ ಕೊ[1]ಲೆಸತ್ತ[1] ಸುಂದರನೆಂಬಾನೆ ಸುವೇಗನೆಂಬ ವಿದ್ಯಾಧರನಿಂದಂ ಪೂಜಿಸೆಪಟ್ಟ ಚಾರಣರಿಷಿಯರ ಪಾದಪದ್ಮಯುಗಳಂಗಳುಮಂ ನೋಡಿಯುಪಶಮಕ್ಕೆ ಸಂದು ತಾನುಂ ತಾಮರೆಯ ಪೂಗಳಂ ತಂದು ಪ್ರತಿದಿನಮರ್ಚಿಸಿ ಪೂಜಿಸಿ ಪೊಡೆವಟ್ಟು ಪೋಕುಮಾ ಚಾರಣರಿಷಿಯರಡಿವೊಣರನರ್ಚಿಸಿದ ಪುಣ್ಯದಿಂದಂ ಸತ್ತಿಲ್ಲಿ ನೀಂ ಚಂಪಾಪುರಕ್ಕಧಿಪತಿಯಯ್ ಗಂಧಭಾಜನನೆಂಬರಸನಾದಯ್ ಸುಕೇಶಿನಿಯುಂ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವದ ಭರ್ತಾರನಪ್ಪ ಮಲಯಸುಂದರನಂ ನೆನೆದು ನಿನ್ನಿಂದಂ ಕೊ[1]ಲೆಸತ್ತುದ[1]ಱಿ ಕೋಟ್ಕಳನಾದಮಾನುಂ ಬಿಗಿದಪ್ಪಿಕೊಂಡು ಸತ್ತು ದಕ್ಕಿರ್ದು ಕಾರಣಂ ಮತ್ತೆ ನೀಂ ಮುನ್ನೆ ಸುಂದರನೆಂಬಾನೆಯಾಗಿ ಚಾರಣರಿಷಿಯರ ಪಾದಯುಗಳಂಗಳನರ್ಚಿಸುವಂದು ನಿನ್ನಂ ಕಂಡಾಯೆರಡುಂ ಪಿಡಿಗಳ್ ನಿನ್ನೊಡವೋಗಿಯರ್ಚಿಸಿ ಪುಣ್ಯಮಂ ನೆರಪಿದ ಫಲದಿಂದಂ ಸುಕೇಶಿನಿಯುಂ ವರಾಂಗನುಮಾದರೆಂದು ಯಶೋಧರ ಕೇವಲಿಗಳ್ ಸವಿಸ್ತರಂ ಪೇೞ್ದೊಡೆ ಗಂಧಭಾಜನನೆಂಬರಸಂ ಕೇಳ್ದು ಮತ್ತಮಿಂತೆಂದಂ ಭಟಾರಾ ಸುಕೇಶಿನಿ ಸತ್ತೀಗಳೆಲ್ಲಿ ಪುಟ್ಟಿದಳೆಂದು ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್

ಸು[2]ರಟ[2]ಮೆಂಬುದು ನಾಡಲ್ಲಿ ಗಿರಿನಗರಮೆಂಬುದು ಪೊೞಲದನಾಳ್ವೊಂ ನಿನ್ನಾಳ್ ಮಹಾಸಾಮಂತನತಿರಥನೆಂಬೊನಾತನರಸಿ ಗೌರಿಯೆಂಬಳಾ ಇರ್ವರ್ಗ್ಗಂ ಸುಕೇಶಿನಿ ಸತ್ತು ಮನೋಹರಿಯೆಂಬೊಳ್ ಮಗಳಾಗಿ ಪುಟ್ಟಿದಳ್ ಮತ್ತಾ ಅರಸನ ಮಂತ್ರಿ ವಿಜಯನೆಂಬೊನಾತನ ಭಾರ್ಯೆ ವೀರಶ್ರೀಯೆಂಬೊಳಾ ಇರ್ವರ್ಗ್ಗಂ ಮಲಯಸುಂದರಂ ಸತ್ತು ಕುಬೇರಕಾಂತನೆಂಬೊಂ ಮಗನಾಗಿ ಪುಟ್ಟಿದೊಂ ವಿಭವೈಶ್ವರ್ಯಂಗಳಿಂದಂ ಕುಬೇರನೋಳೋರನ್ನನಪ್ಪೊಂ ಮತ್ತಾ ಪೊೞಲೊಳ್ ರಾಜಶ್ರೇಷ್ಠಿ ಧನ[3]ದನ[3]ಂಬೊನಾತನ ಪರದಿ ಧನಶ್ರೀಯೊಂಬೊಳಾ ಇರ್ವರ್ಗ್ಗಂ ಮಲಯಸುಂದರಂ ಸತ್ತುದಂ ಸುಕೇಶಿನಿ ಕಂಡು ಸೈರಿಸಲಾಱದೆ ಪ್ರಾಣಪರಿತ್ಯಾಗಂಗೆಯ್ವಳಂ ನೆನೆದು ದ್ರವ್ಯತಪದೊಳ್ ಕೂಡಿ ತಪಂಗೆಯ್ದು ವರಾಂಗಂ ಸತ್ತು ಶ್ರೀಧರನೆಂಬೊಂ ಮಗನಾಗಿ ಪುಟ್ಟಿದೊನಾತನ ಭಾರ್ಯೆ ಕುಬೇರಶ್ರೀಯೆಂಬೊಳಾ ಶ್ರೀಧರಂ ಕುಬೇರಕಾಂತಂಗಿಷ್ಟ

---

[1] ಲಲ್ಪಟ್ಟ (ಕಖಗ). [2] ರಾಟ್ಟ (ಘ), ರಾಷ್ಟ್ರ (ಛ). [3] ದೇವನೆಂ (ಘಚಛ).

ಮಿತ್ರನಾಗಿ ಸಲೆ ಮತ್ತೊಂದು ದಿವಸಂ ಶ್ರೀಧರಂ ಕುಬೇರಕಾಂತನೊಡನೆ [1]ನುಱಲುಂದಿಯಾ[1]ತನ ರತ್ನಕಂಬಳಮಂ ಪೊದೆದು ತನ್ನ ಮನೆಗೆ ಬರ್ಪೊನಂ ಕಂಡು ಸವತಿಯೊಳಪ್ಪ ಶಂಕೆಯಿಂದಂ ಪ್ರಸಾದದ ಮೇಗಣಿಂದಂ ನೆಲಕ್ಕಿಕ್ಕಿ ಬಿಬ್ಬಿ ಸತ್ತೊಳಾ ಸತ್ತೊಳಂ ಶ್ರೀಧರಂ ಕಂಡಾದಮಾನುಂ ದುಃಖಂಗೈದು ಶೋಕಾಭಿಭೂತನಾಗಿರ್ದೊನಂ ಕುಬೇರಕಾಂತಂ ಬಂದು ಕಂಡು ಶ್ರೀಧರಾ ಪರಮಮಿತ್ರಾ ಇಂತೇಕೆ [2]ಬರ್ದಿ[2] ಬಂಬಳಂ ಬಾಡಿ ಪಾಡೞಿದುಬ್ಬೆಗಂಬಟ್ಟಿರ್ದ್ದೆಯೆಂದು ಬೆಸಗೊಂಡೊಡೆ ತನ್ನ ಕೆಳೆಯಂಗಿಂತೆಂದು ಶ್ರೀಧರಂ ಪೇೞ್ಗುಂ ನಿನ್ನ ರತ್ನಕಂಬಳಮಂ ಪೊದೆದು ಮನೆಗೆ ವಂದೊಡೆ ಸವತಿಯೊಳಪ್ಪ ಶಂಕೆಯಿಂದೆನ್ನ ಭಾರ್ಯೆ ಕುಬೇರಶ್ರೀ ಮಾಡದ ಮೇಗಣಿಂದಂ ತನ್ನಂ ನೆಲಕ್ಕಿಕ್ಕಿ ಬಿಬ್ಬಿ ಸತ್ತಳಿನ್ನುಮಾಯಿರ್ದ್ದಳೆಂದು ತೋಱಿದೊಡೆ ಕುಬೇರಕಾಂತಂ ನೋಡೆ ನೋಡೆ ಜಾತಿಸ್ಮರನಾಗಿ ಕೆಳೆಯಂಗಿಂತೆಂದು ಪೇೞ್ಗುಮೆನ್ನ ಪೆಂಡತಿ ಮಲಯಾವತಿಯಪ್ಪ ಪಿಡಿ ಪುರುಡಿನಿಂದಂ ಚಂದನಮಲಯಮೆಂಬ ಪರ್ವ್ವತದ ಶಿಖರದಿಂದಂ ತನ್ನನಿಕ್ಕಿ ಸತ್ತುಂತೆ ನಿನ್ನ ಪೆಂಡತಿಯುಂ ಸತ್ತಳೆಂದು [3]ಪೇೞ್ದುಬ್ಬೆಗಂಬಡಲ್ವೇಡೆಂದು[3] ಸಂತಯಿಸಿ ತನ್ನ ಮನೆಗೆ ವೋಗಿ ಜಾತಿಸ್ಮರನಪ್ಪುದಱಿಂ ಕುಬೇರಕಾಂತಂ ತನ್ನ ಮುನ್ನಿನ ಮಲಯಸುಂದರನಪ್ಪ ಭವದ ನೆಗೞ್ತಿಗಳೆಲ್ಲಮಂ ಮಲಯಾವತಿ ಪದ್ಮಾವತಿ ಮೊದಲಾಗಿ ಕರಿಣೀವೃಂದಸಹಿತಂ ವನಹಸ್ತಿಕ್ರೀಡೆಗಳೆಲ್ಲಮನೊಂದು ಪಟದೊಳ್ ಬರೆದದಂ ನೋಡುತ್ತಂ ಪಾಡುತ್ತಂ ಹಾ ಎನ್ನ ಮಲಯಾವತಿ ಹಾ ಎನ್ನ ನಲ್ಲಳೆ ನೀನೀಗಳೆಲ್ಲಿರ್ದ್ದೆಯೆಂದಱಸುತ್ತಂ ಮರುಳ್ಗೊಂಡು ಪ್ರಳಾಪಂಗೆಯ್ಯುತ್ತಂ ಉಜ್ಜಯಂತ ಪರ್ವ್ವತಮಂ ಬಲಗೊಂಡು ಬರ್ಪೊನಂ ಚಿತ್ರಾಂಗದನೆಂಬ ವಿದ್ಯಾಧರಂ ಕಂಡು ಕರುಣಿಸಿ ಧರ್ಮವಾತ್ಸಲ್ಯದಿಂದಂ ತನ್ನ [4]ಕಾಮಮುದ್ರಿಕೆಯಂ ಸ್ವೇ[4]ಪ್ಸಿತ ಕಾರ್ಯಸಿದ್ಧಿಯಂ ಮಾಡುವ ವಿದ್ಯೆಯಂ ಕುಬೇರಕಾಂತಂಗೆ ಕೊಟ್ಟಂ ಕುಬೇರಕಾಂತನುಂ ವಿದ್ಯಾದೇವತೆಯಂ ಬೆಸಗೊಂಡೆನ್ನ ಮುನ್ನಿನ ಭವದ ಪ್ರಾಣವಲ್ಲಭೆಯೆಲ್ಲಿರ್ದ್ದಳೆನೆ ವಿದ್ಯಾದೇವತೆಯೆಂದಳ್ ನಿನ್ನ ಪ್ರಾಣವಲ್ಲಭೆಯುತಿರಥನೆಂಬರಸಂಗೆ ಮಗಳ್ ಮನೋಹರಿಯಾಗಿರ್ದಳೆಂದು ವಿದ್ಯಾದೇವತೆ ಪೇೞೆ ಕೇಳ್ದಱಿದು ಪಿಶಾಚವೇಷಮಂ ಕೈಕೊಂಡರಮನೆಯಂಗಣದೊಳಿರ್ದು ಪಟಮಂ ನಿರ್ವಿಚ್ಚಿಯೆತ್ತಿ ತೋಱಿ ಪಾಡುತ್ತಮಿಲೆ ಮಲಯಾವತಿ ಹಾ ಎನ್ನ ಕಾದ[5]ಲಳೆ[5] ನೀನೀಗಳೆಲ್ಲಿರ್ದ್ದೆಯೆಂದು ಪಾಡುವುದಂ ಕೇಳ್ದು ಪಟಮಂ ನೋಡಿ ಮನೋಹರಿ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವಮನಱಿದು [6]ದಾಮರಥಿ[6]ಯೆಂಬ ತನ್ನ ದಾದಿಗೊಸಗೆಯಿಂದಮಿಂತೆಂದಳೀಯಂಗಣದೊಳ್ ಪಟಮಂ ತೋಱುವಾತನೆನ್ನ ಮುನ್ನಿನ ಭವದ ಭರ್ತಾರನೆಂದು ಪೇೞ್ದು ಮತ್ತಮಿಂತೆಂದಳಬ್ಬಾ ನೀನೆನ್ನ ಪ್ರಾಣಮಂ ಕಾವುದು ಕಾರಣಮಾಗಿ ಆತನಲ್ಲಿಗೆ ವೋಗಿ ಏಕಾಂತದೊಳಿಂತೆಂದು ಪೇೞ್ ಪದ್ಮಾವತಿಯ ತಲೆಯೊಳೞ್ತಿಯಿಂದಂ ನೀಂ ತಾವರೆಯ ಪೂವಂ ಮುನ್ನಮಿಟ್ಟು ಮಲಯಾವತಿ ಪ್ರಾಣವಲ್ಲಭೆ ಎಲ್ಲಿರ್ದ್ದೆ

[1] ನಿದ್ರೆಗೈದಾ (ಘಚಛ). [2] ಬಿಳ್ಪು (ಘಛ), (ಚ) ದಲ್ಲಿ ನಷ್ಟವಾಗಿದೆ. [3] (ಕಖಗ) ಗಳಲ್ಲಿ ನಷ್ಟವಾಗಿದೆ. [4] ನಾಮಮುಂ ಶ್ರೀರ್ಕೈಯುಂ ಈ (ಕಖಗ). [5] ಲೊಳ್ (ಕಖ), ಲಳ್ (ಗ), ನಲ್ಲಳೆ (ಛ). [6] ವಾಮರತಿ (ಘಚಛ).

ಯೆಂದೀಗಳೇಕೆ ಮಲಯಸುಂದರಾ ನೀನಾರಯ್ದಪ್ಪೆಯೆಂದು ಪೇೞ್ದು ಮತ್ತಮಿಂತೆಂದು ಪೇೞ್ ನಿನ್ನ ಪ್ರಾಣವಲ್ಲಭೆ ನಿನ್ನನೆಯಱಿಸಿ ಬಯಸುತ್ತಿರ್ಪ್ಪಳಾಕೆ ನಿನ್ನೊಳ್ ಕೂಡುವನ್ನೆಗಮಿಾ ಪಟಮಂ ತೋಱಿಯಾಕೆಯ ಪ್ರಾಣಮಂ ಕಾವೆನೆಂದು ಪಟಮಂ ಬೇಡಿಕೊಂಡು ಬಾ ಎಂದು [1]ಕಲ್ಪಿ[1]ಸಿಯಟ್ಟಿದೊಡಾಕೆಯುಂ ಕಲ್ಪಿಸಿದ ಪಾಂಗಿನೊಳಾತನಲ್ಲಿಗೆವೋಗೇಕಾಂತದೊಳೆಲ್ಲಮಂ ನುಡಿ[2]ದು ಕುಬೇರಕಾಂತನ ಕೆಯ್ಯ ಪಟಮಂ ಬೇಡಿ ಕೊಂಡು ಪೋಗಿ ಮನೋಹರಿಗೆ ಕೊಟ್ಟಳ್ ಮನೋಹರಿಯುಮಾ ಪಟಮಂ ಕೊಂಡು ದೆವಸಕ್ಕಮಟ್ಟುಱೊಳ್ ನೋಡುತ್ತಿರ್ಕ್ಕುಂ

ಮತ್ತಿತ್ತ ಕುಬೇರಕಾಂತಂ ತನ್ನ ಮರುಳ್ವೇಷಮಂ ತೊಱೆದು ಸ್ವಾಭಾವಿಕನಾಗಿ ತನ್ನ ಮನೆಗೆ ವಂದೊಡೆ ಪ್ರಸನ್ನ ರೂಪನಾಗಿರ್ದ್ದೊನಂ ವಿಜಯನಿಂತೆಂದು ಬೆಸಗೊಂಡಂ ಮಗನೆ ನೀನಿನಿತು ದಿವಸಮೇಕೆ ಮರುಳಾಗಿರ್ದ್ದೆ ಈಗಳೆಂತು ಮರುಳ್ತನಂ [3]ಪಿಂಗಿತೆಂದು[3] ಬೆಸಗೊಂಡೊಡೆ ಕುಬೇರಕಾಂತನಿಂತೆಂದು ಪೇೞ್ದು ನೀಯರಸರ ಮಗಳಪ್ಪ ಮನೋಹರಿ ಎನ್ನ ಮುನ್ನಿನ ಭವದ ಪೆಂಡತಿಯಾಕೆಯನಱಿಸಲ್ವೇಡಿ [ಇ]ನಿತು ದಿವಸಂ ಮರುಳ್ಗೊಂಡಿರ್ದ್ದೆಂ ಮತ್ತೀಗಳಾರಯ್ದಱಿಸಿ ಕಂಡೆನಪ್ಪುದಱಿಂದಂ ಮರುಳ್ತನಂ [3]ಪಿಂಗಿತೆಂದು[3] ಪೇೞ್ದೊಡೆ ತಂದೆಯೆಂದಂ ಮಗನೆ ನಿನ್ನ ಮುನ್ನಿನ ಪೆಂಡತಿಯೆಂದಱಿದೆಯಪ್ಪೊಡಮಿಾಗಳಾಕೆಯರಸನ ಮಗಳಾಗಿರ್ಪ್ಪುದಱಿಂ ನಿನಗತಿ ದುರ್ಲಭೆ ಭಾಗ್ಯಮಿಲ್ಲದುದಂ ಪೆಱಲಾಗ ನಿನಗಾಕೆಯೊಳಪ್ಪ ಬೇಂಟಮನುೞಿವುದು ಮಗನೆ ಎಂದೊಡೆ ಕುಬೇರಕಾಂತಂ ಕಾಮವಿದ್ಯೆಯಿಂದಂ ಹಸ್ತ್ಯಶ್ವರಥಪದಾತಿಬಲಸಮೂಹಮನೆನಿತಾನುಮಂ ವಿಭವೈಶ್ವರ್ಯ ಸಮನ್ವಿತಂ ತಂದೆಗೆ ತೋಱಿದೊಡೆ ತಂದೆಯುಂ ಮಗನ ಸಾಮರ್ಥ್ಯಮಂ ಕಂಡಾದಮಾನುಂ ಸಂತಸಂಬಟ್ಟಿರ್ದಂ ಮತ್ತೊಂದು ದಿವಸಂ ಅತಿರಥ ಮಹಾರಾಜಂ ಮಂತ್ರಿಯರ್ಕಳೊಡನೆ ಮಂತಣಮಿರ್ದ್ದಲ್ಲಿ ಮಂತ್ರಿಯರ್ಕಳನಿಂತೆಂದು ಬೆಸಗೊಂಡಂ ಮನೋಹರಿಗೆ ಯೌವನಂ ನೆಱೆದುದು ಕೂಸು [4]ಕುಡಲ್ಕಾದುದಾರ್ಗೆ ಕುಡುವಮೆಂದು[4] ಮಂತ್ರಿಯರ್ಕ್ಕಳಂ ಬೆಸಗೊಂಡೊಡೆ ಉೞಿದ ಮಂತ್ರಿಯರ್ಕಳೆಲ್ಲಂ ತಂತಮ್ಮ ಬಗೆದರಸುಗಳ ಪೆಸರ್ಗ್ಗಳಂ ಪೇೞ್ದುವರ್ಗ್ಗೆ ಕುಡುವಮೆಂದೊಡೆ ಕುಬೇರಕಾಂತನ ತಂದೆಯಪ್ಪ ವಿಜಯನೆಂಬ ಮಂತ್ರಿಯುರ್ಕ್ಕೆವದಿಂದವರ ಪೇೞ್ದ ಮದವಕ್ಕಳಂ ನಿರಾಕರಿಸಿ ಮನೋಹರಿಯ ರೂಪಿಂಗಂ ಜವ್ವನಕ್ಕಂ [5]ಕಳಾಗುಣಂಗಳನಱಿವುದರ್ಕ್ಕಮವರ್ ಯೋಗ್ಯರ್ ಮದವಕ್ಕಳಲ್ಲರ್ ಕೂಸಿಂಗೆ ಸ್ವಯಂಬರಮಂ ಪಣ್ಣುವಂ ಸ್ವಯಂಬರದೊಳ್ ತನ್ನ ಭಾಗ್ಯದೊಳ್ ಮೆಚ್ಚಿದವರಂ ಕಯ್ಕೊಳ್ಗೆಂದು ನುಡಿದೊಡರಸನುಮಾತನ ಮಾತನೊಡಂಬಟ್ಟು ಸ್ವಯಂಬರಸಾಲೆಯುಂ ಮಾಡಿಸಿ ಅರಸುಗಳ್ಗೆಲ್ಲಂ ಬೞಿಯನಟ್ಟಿ ಬರಿಸೆ ಸ್ವಯಂವರಸಾಲೆಯೊಳ್ ನೆರೆದಿರ್ದ್ದ

---

[1] ಲಿ (ಘಚಛ). [2] + ದಿಂತೆಂದಳ್ ಮಲಯ ಸುಂದರಾ ನೀಂ ಮುನ್ನ ಪದ್ಮಾವತಿಯ ಮಸ್ತಕದಲು ತಾಮರೆಯ ಪುಷ್ಪಮನಿಕ್ಕಿಯಿಾಗಳ್ ಮಲಯಾವತಿಯೆಂದಱಿಸಲ್ತಕ್ಕುದೆಯೆಂದೊಡಾಂಮೆಯ್ಮಱೆದಿಕ್ಕಿದೆನೆಂದೊಡಾಕೆಯಿಂತೆಂದಳಿಕ್ಕಿದೊಡಮೇಂ ನಿನ್ನ ಪ್ರಾಣವಲ್ಲಭೆಯಪ್ಪ ಮಳಯಾವತಿ ನಿನ್ನೊಳು ಕೂಡುವನ್ನೆಗಮಿಾ ಪಟಮಂ ಕುಡು ನೋಡುತ್ತಿರ್ಕ್ಕುಮೆಂ (ಘಚಛ.) [3] ತಿಳಿದುದೆಂದು (ಘಚಛ). [4] (ಕಖಗಘಚ) ಗಳಲ್ಲಿ ನಷ್ಟವಾಗಿದೆ. [5] + ತೇಜಕ್ಕಂ (ಛ).

ರಂಗ [1]ವೆಂಗಿ[1] ಕಳಿಂಗ ಕಾಂಭೋಜ [2]ಕಾಶಿ ಕೌ[2]ಶಲ [3]ಪಲ್ಲವ ಪಾಂಚಾಳ ಮಗಧ ಮಾಳವ ವತ್ಸ ಮಹಾರಾಷ್ಟ್ರ ಕುಣಾಳ ಕುರುಜಾಂಗಣ ದ್ರವಿಳ ಲಾಳ ಕರ್ನ್ನಾಟ ಗೌಳ ಸು[4]ಹುಮ[4] ಸುರ[5]ಕ್ರಾನ್ತ[5] ಸೂರ[6]ಸೇನೀ[6]ಯ ಪ್ರಭೃತಿನಾನಾ ವಿಷಯಾಧಿಪತಿಗಳಪ್ಪರಸುಗಳೆಲ್ಲಂ ನೆರೆದಿರ್ದ್ದಲ್ಲಿಯಾರುಮಂ ಮೆಚ್ಚದೆ ದಾಂಟಿ ಪೋಗಿ ಕುಬೇರಕಾಂತಂಗೆ ಮಾಲೆಯಂ ಸೂಡಿ[7]ದಳಾಗಳರಸುಗಳೆಲ್ಲಂ[7] ನೆರೆದಾಮೇಕೈಕ ಪ್ರಧಾನರೆಮಿರ್ದ್ದಂತಿರೆ ಬಡವಂಗೇನುಮಲ್ಲದೊಂಗೆ ಮಾಲೆಯಂ ಸೂಡಿದಳೆಂದು ಸಭಾಕ್ಷೋಭಮಾಗಿ ಕುಬೇರಕಾಂತನೊಳನಿಬರುಂ ನೆರೆದು ಯುದ್ಧಂಗೆಯ್ವೊಡೆ ಸಂಗ್ರಾಮರಂಗದೊಳ್ ಸುವ[8]ರ್ಮ್ಮವರ್ಮ್ಮಂ[8] ಮೊದಲಾಗೊಡೆಯರರ್ಕ್ಕಳೆಲ್ಲರುಮಂ ಗೆಲ್ದು ಮನೋಹರಿಯಂ ಪಾಣಿಗ್ರಹಣ ಪುರಸ್ಸರಂ ಮದುವೆನಿಂದು [9]ಸೋಪಾರ[9]ಕ್ಕಧಿಪತಿಯಾಗಿರ್ದ್ದನ್

ಇಂತು ಕುಬೇರಕಾಂತಂ ಮನೋಹರಿಯೊಳಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಮಿರೆಯಿರೆ ಸುವ[10]ರ್ಮ್ಮವರ್ಮ್ಮ[10]ನೆಂಬರಸಂ ರಾಜ್ಯಪರಿಭ್ರಷ್ಟನಾಗಿ ತಾಪಸತಪಮಂ ಕೈಕೊಂಡು ನೆಗಳ್ದು ಸತ್ತು ಪ್ರತಿಸೂರ್ಯನೆಂಬ ವ್ಯಂತರದೇವನಾಗಿ ಪುಟ್ಟಿದೊಂ ಮತ್ತೆ ಶ್ರೀಧರನುಂ ಕುಬೇರಕಾಂತನುಂ ಮನೋಹರಿಯುಮನ್ಯೋನ್ಯಾತಿ ಸ್ನೇಹದೊಳ್ ಕೂಡಿ ರಾಜ್ಯಂಗೆಯ್ದು ತಮ್ಮ ಗೆಯ್ದ ದಾನಧರ್ಮದ ಫಲದಿಂದಂ ಅನ್ಯಜನ್ಮದೊಳಿಂತಪ್ಪ ವಿದ್ಯೆಯಕ್ಕೆಂದು ಮೂವರುಂ ನಿದಾನಂಗೆಯ್ದು ಮುನ್ನಂ ಶ್ರೀಧರಂ ಸತ್ತು ವಿಜಯಾರ್ಧಪರ್ವತದ ಉತ್ತರ ಶ್ರೇಣಿಯೊಳ್ ಅಳಕಾಪುರಮೆಂಬುದು ಪೊಟಲದನಾಳ್ವೊಂ ಗಗನವಲ್ಲಭನೆಂಬೊನಾತನ ಭಾರ್ಯೆ ಅನಂಗಮಾಲೆಯೆಂಬೊಳಾಯಿರ್ವ್ವರ್ಗ್ಗಂ ಶ್ರೀಧರಂ ಚಂಡವೇಗನೆಂಬೊಂ ಮಗನಾಗಿ ಪುಟ್ಟಿದೊಂ ಆ ಚಂಡವೇಗನ ಮಹಾದೇವಿ ವಿದ್ಯು[11]ಲ್ಲ[11]ತೆಯೆಂಬೊಳಾಯಿರ್ವ್ವರ್ಗ್ಗಂ ಕುಬೇರಕಾಂತಂ ಸತ್ತು ವಿದ್ಯುನ್ಮಾಳಿಯೆಂಬ ಮಗನಾಗಿ ಪುಟ್ಟಿದೊಂ ಮತ್ತಂ ದಕ್ಷಿಣಶ್ರೇಣಿಯೊಳ್ ವಿದ್ಯು[11]ಲ್ಲ[11]ತೆಯ ಸೋದರ ತಮ್ಮಂ ಮೇಘಕೂಟಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರನಾತನ ಮಹಾದೇವಿ ರತಿಬಿಂದುವೆಂಬೊಳಾಯಿರ್ವ್ವರ್ಗ್ಗಂ ಮನೋಹರಿ ಸತ್ತು ವಿರಳವೇಗೆಯೆಂಬೊಳ್ ಮಗಳಾಗಿ ಪುಟ್ಟಿದಳ್ ಮತ್ತೊಂದು ದಿವಸಂ ಚಂಡವೇಗನುಂ ವಿದ್ಯುನ್ಮಾಲಿಯುಮಂತು ತಮ್ಮಿರ್ವ್ವರುಂ ಉಜ್ಜಯಂತ ಪರ್ವತದ ಶಿಖರದೊಳ್ ಅರಿಷ್ಟನೇಮಿ ಭಟ್ಟಾರರ ಪರಿನಿರ್ವ್ವಾಣಭೂಮಿ[12]ಯೊಳ್ ಭಕ್ತಿಯಿಂ ಪೂಜಿಸಲೆಂದರ್ಚನೆಯಂ ಕೊಂಡು[12] ಪೋದೊಡಾ ಪರ್ವ್ವತದ ಶಿಖರಮಂ ಕಂಡು ವಿದ್ಯುನ್ಮಾಲಿ ಮೂರ್ಛೆ[13]ವೋ[13]ಗಿ ಜಾತಿಸ್ಮರನಾಗಿ ಮನೋಹರಿಯಂ ನೆನೆದು ಮಾಸೋಪವಾಸಂಗೆಯ್ದು ಪ್ರ[14]ಜ್ಞ[14]ಪ್ತಿಯೆಂಬ ಮಹಾವಿದ್ಯೆಯಂ ಸಾಧಿಸಿದೊಡಾ ವಿದ್ಯೆ ಬೆಸನೇನೆಂದು ಮುಂದೆ ನಿಲೆ ಎನ್ನ ಮುನ್ನಿನ ಭವದ

---

[1] (ಕಖಗ) ಗಳಲ್ಲಿಲ್ಲ, ವಂಗ (ಛ). [2] ಕಲುಶಿಕವು (ಕಖಗ). [3] ಪಾಂಬ (ಚ), ಪಾಂಡ್ಯ (?). [4] ರಮ್ಯ (ಘಚಛ). [5] ಕಾನ್ತ (ಚಛ). [6] ವೀರ್ಯ (ಕಖ). [7] ದೊಡರಸುಗಳಿಲ್ಲರಿಂದಾ (ಘಚಛ). [8] ರ್ಣ ವರ್ಣಂ (ಘಚಛ). [9] ಸೋಪಾನಗರ (ಘಚಛ). [10] ರ್ಣ ವರ್ಣ (ಘ). [11] ಲ್ಲ್ (ಕ). [12] ಯುಂ ಕಂಡು (ಕಗ). [13] ಯೋ (ಕ). [14] ಜ್ಞಾ (ಕ).

ಪ್ರಾಣವಲ್ಲಭೆಯಪ್ಪ ಮನೋಹರಿ ಈಗಳೀ ಲೋಕದೊಳೆಲ್ಲಿರ್ದ್ದಳೆಂಬುದನಱಿಸಿ ಬೇಗ ಮೆನಗೆ ಪೇ[1]ೞ್ದಂ[1]ದೊಡಾ ವಿದ್ಯೆಯಿಂತೆಂದು ಪೇೞ್ದತ್ತು

ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯೊಳ್ ಮೇಘಕೂಟ ಪುರಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರಂ ನಿನ್ನ ಸೋದರ ಮಾವನಾತಂಗೆ ಮನೋಹರಿ ಸತ್ತು ವಿರಳವೇಗೆ[2]ಯೆಂಬೊಳ್ ಮಗಳಾಗಿ[2]ರ್ದೊಳೆಂದೊಡಂತಪ್ಪೊಡೆ [3]ನೀನೆನ್ನ[3] ಮಾವನ ಮನೆಗೆ ಪೋಗಿ ವಿರಳವೇಗೆಗಿಂತೆಂದು ಪೇೞ್ ಎಲೆ ಮನೋಹರಿ ನೀಂ ಮುನ್ನಿನ ಭವದೊಳ್ ಕುಬೇರಕಾಂತನೊಡನೆ ಕ್ರೀಡಿಸಿದ ಕ್ರೀಡೆಗಳಂ ನೆನೆದಾ ಎಂದು ಪೇೞೆಂದು ವಿದ್ಯೆಯಂ ಕಲ್ಪಿಸಿಯಟ್ಟಿದೊಡಾ ವಿದ್ಯೆಯುಂ ಪೋಗಿ [4]ಕಲ್ಪಿಸಿದ ಪಾಂಗಿನೊಳ್[4] ನುಡಿದೊಡೆ ವಿರಳವೇಗೆ ಮೂರ್ಛೆವೋಗಿರ್ದ್ದು ನೀಡಱಿಂ[5]ದೆೞ್ಚತ್ತು[5] ಜಾತಿಸ್ಮರೆಯಾಗಿ ವಿರಹಸಂತಾಪದಿಂ ತನ್ನ ಮುನ್ನಿನ ಭರ್ತಾರನಂ ನೆನೆಯುತ್ತಿರೆ ವಿದ್ಯುನ್ಮಾಳಿಯುಂ ತನ್ನ ಮನೆಗೆ ಪೋಗಿ ತಂದೆ[6] ಚಂಡವೇಗಂಗೆ ತನ್ನ ವೃತ್ತಾಂತಮೆಲ್ಲಮಂ ಪೇೞ್ದೊಡಾ ತನುಮಾದಮಾನುಮೊಸೆದು ತನ್ನ ಮೈದುನನಪ್ಪ ಮೇಘಮಾಳಿ ವಿದ್ಯಾಧರನಲ್ಲಿಗೆ ಪೆರ್ಗ್ಗಡೆಗಳಂ ಕೂಸಂ ಬೇಡಿಯಟ್ಟಿ ಪೆತ್ತು ವಿರಳವೇಗೆಯಂ ವಿದ್ಯುನ್ಮಾಲಿ ಮದುವೆನಿಂದಾಕೆಯೊಳಿಷ್ಟವಿಷಯಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ

ಮತ್ತೊಂದು ದಿವಸಂ ವಿದ್ಯಾನಿರ್ಮಿತ ವಿಚಿತ್ರಮಾ[7]ಗುತ್ತಿ[7]ರ್ದ ವಿಮಾನಮ[8]ನೇಱಿಕೊಂಡು ಪೋಪಲ್ಲಿ[8] ಹಿಮವಂತ ಪರ್ವ್ವತದ ಮೇಗೆ ಪಾಱುವ ವಿಮಾನಮುಮುಂ ಪೇೞ್ದ ಪ್ರತಿಸೂರ್ಯನೆಂಬ ವ್ಯಂತರದೇವಂ ಕಂಡು ತನ್ನ ಸುವರ್ಮವರ್ಮ್ಮನಪ್ಪ ಭವದ ಪಗೆಯಂ ನೆನೆದಿರ್ವ್ವರುಮಂ [9]ಕೂಡಿ ಕೊಂದ[9]ನಿಂತಿರ್ವ್ವರುಂ ಸತ್ತು ಗಂಗೆಯೆಂಬ ಮಹಾನದಿಯ ತೆಂಕಣ ಪಡುವಣ ಕೋಣೊಳ್ ಸುಕೌಶಳಮೆಂಬ ವಿಷಯದೊಳಯೋಧ್ಯಾಪುರಮೆಂಬ ಪೊೞಲೊಳ್ ಸಾಗರಸೇನನೆಂ[10]ಬೊಂ[10] ರಾಜಶ್ರೇಷ್ಠಿಯಾತನ ಭಾರ್ಯೆ ಧರಣಿಯೆಂಬೊಳಾಯಿರ್ವ್ವರ್ಗಂ ವಿದ್ಯುನ್ಮಾಳಿಯೆಂಬ ವಿದ್ಯಾಧರಂ ಕಾಲಂಗೆಯ್ದು ಸಿದ್ಧಾರ್ಥನೆಂಬೊಂ ಮಗನಾಗಿ ಪುಟ್ಟಿದೊಂ ಪಿತೃಮಾತೃ[11]ಗಳೊ[11]ಸಗೆಯಂ ಮಾಡುತ್ತಂ ಶ್ರೀವಿಭವ ರೂಪಕಾಂತಿ ಸೌಭಾಗ್ಯಾದಿಗುಣಂ[12]ಗಳಿಂನೆ[12]ೞ್ದೊಂ

ಮತ್ತಿತ್ತ ಮ[13]ಗಧೆ[13]ಯೆಂಬುದು ನಾಡಲ್ಲಿ ರಾಜಗೃಹಮೆಂಬ ಪೊೞಲೊಳ್ ಸಮುದ್ರವಿಜಯನೆಂಬೊಂ ರಾಜಶ್ರೇಷ್ಠಿಯಾತಂಗೆ ಸಾಗರಸೆಟ್ಟಿಯ ಸೋದರ ತಂಗೆ [14]ಸುಮತಿಯೆಂಬೊಳಂ ಕೊಟ್ಟರಾ[14]ಯಿರ್ವ್ವರ್ಗ್ಗಂ ವಿರಳವೇಗೆಯೆಂಬ ವಿದ್ಯಾಧರಿ ಕಾಲಂಗೆಯ್ದು ಶ್ರೀಕಾಂತೆಯೆಂಬೊಳ್ ಮಗಳಾಗಿ ಪುಟ್ಟಿದೊಳತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳಿಂ ಕೂಡಿದೊಳ್ ದೇವಗಣಿಕೆಯನೆ

---

[1] ೞ್ವುದೆಂ (ಕಗ). [2] ಯಾಗಿ (ಕ). [3] ನೀಂ (ಖ). [4] (ಕ) ದಲ್ಲಿ ನಷ್ಟವಾಗಿದೆ. [5] (ಕ) ದಲ್ಲಿ ಇಲ್ಲ. [6] + ಗೆ (ಕ). [7] ಗಿ (ಕ). [8] ನಿರ್ವರುಮೇಱಿ ಭೌಮವಿಹಾರಕ್ಕೆಂದು ತೊಳಲ್ವಲ್ಲಿ (ಘಚಛ). [9] ಕಾದಿಕೊಂಡ (ಖ). [10] ಬ (ಕ). [11] ಸ್ವಜನಪರಿಜನಂಗಳೆಲ್ಲಮೊ (ಘಚಛ). [12] ಳೊಳ್ಮೆ (ಖ). [13] ರವಸೆ (ಘಛ). [14] (ಕಖಗ) ಗಳಲ್ಲಿಲ್ಲ.

ಪೋಲ್ವಳಾಕೆಯಂ ಸೋದರ ಮಾವನ ಮಗಂಗೆ [1]ಪಿರಿದುಂ ವಿಸ್ತಾರದಿಂ ಸಿದ್ಧಾರ್ಥಂಗೆ[1] ಕೊಟ್ಟರಂತು ಸಿದ್ಧಾರ್ಥನುಂ ಶ್ರೀಕಾಂತೆಯುಂ ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿ [ಇ]ಷ್ಟ ವಿಷಯಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ಸಪ್ತತಳಪ್ರಾಸಾದದ ಮೇಲಿರ್ಪ್ಪರುಮಿಷ್ಟಪರಿವಾರ ಸಹಿತಂ [2]ದಿಶಾವಳೋಕನಂಗೆಯ್ಯುತ್ತಂ[2] ಸುಖಸಂಕಥಾವಿನೋದದಿಂದಿರ್ಪ್ಪನ್ನೆಗಂ ವಿಚಿತ್ರ ಮಾಗುತ್ತಿರ್ದ್ದ ವಿಮಾನಮನೇಱಿ ಆಕಾಶಪಥಕ್ಕೊಗೆದು ಮೇಗೆ ಪೋಪ ವಿದ್ಯಾಧರ ಯುಗಳಮಂ ಕಂಡಿರ್ಪ್ಪರುಂ ಮೂರ್ಛೆವೋಗಿ ನೀಡಱಿಂದೆೞ್ಚೆತ್ತು ಜಾತಿಸ್ಮರರಾಗಿ ತಮ್ಮ ಮುನ್ನಿನ ಭವಮಂ ನೆನೆದು [3]ಸಂಸಾರದ[3] ಪೊಲ್ಲಮೆಯುಮನನಿತ್ಯತೆಯುಮಂ ಬಗೆದು ವೈರಾಗ್ಯಪರರಾಗಿ ಇರ್ವ್ವರುಂ ತಪಂ ಬಡುವ ಬುದ್ಧಿಯನೊಡೆಯರಾಗಿ [4]ಸ್ವಜನ[4] ಪರಿಜನ ಮಂತ್ರಿಮಿತ್ರವರ್ಗ್ಗಕ್ಕೆಲ್ಲಂ ಬಱಿಯನಟ್ಟಿ ಬರಿಸಿ ಸಂಸಾರದ ಪೊಲ್ಲಮೆಯುಮಂ [5]ತಂತಮ್ಮ ಬಗೆದ ಕಾರ್ಯ್ಯಮುಮ[5]ನವರ ಮುಂದೆ ನುಡಿದೊಡವರ್ಗ್ಗಳೆಲ್ಲಂ ನೆರೆದಿಂತೆಂದರಮ್ಮಾ ಪೂರ್ವದಿಂದಂ ಬಂದ ಕುಲಸಂತತಿಯಂ ಕಾವೊರಾರುಮಿಲ್ಲಿನಿತು ಭಾರಮನಾರ್ಗ್ಗೊಪ್ಪಿಸಿ ತಪಂಬಟ್ಟಪ್ಪಿರದಱಿಂ ಕೆಲವು ಕಾಲದಿಂ ಮಗನಾದೊಡೆ ಮಗಂಗೆ ಸಮಸ್ತ ಭಾರಮಂ ನಿರೂಪಿಸಿ ತಪಂಬಡುವುದೆಂದು ನುಡಿದೊಡೆ ಸಿದ್ಧಾರ್ಥ ನೆಂದಂ ನಿಮ್ಮೆಲ್ಲರ ಪೇೞ್ದುದನಿಂ[6]ಬುಗೆಯ್ದಪ್ಪೆನೆಂದು ಮಗನಾದಂದೆನ್ನ ತಪಂಬಡು ವಂದಾರುಂ ವಕ್ರಂಬರಸಲ್ವೇಂದು ನುಡಿದೊಡಂಬಡಿಸಿ ಕೆಲವು ಕಾಲಂ ಪರಿವಾರಂ ಬಾರಿಸೆ ಮಾಣ್ದಿರ್ದಿ[7]ಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆಯಿರೆ

ಮತ್ತೆ ಸಿದ್ಧಾರ್ಥನ ಪಿರಿಯರಸಿ [8]ಜಯಾವತಿ[8]ಯೆಂಬೊಳ್ ಮಕ್ಕಳಂ ಬೇಡಿ ದೇವರ್ಗ್ಗಂ ದೇವತೆಗಳ್ಗಂ ಪರಸಿ ಪೂಜೆಯಂ ಮಾಡುತ್ತಿರ್ಪ್ಪೊಳೊಂದು ದಿವಸಂ ವಿಜಯಭದ್ರರೆಂಬ ಭಟಾರರವಧಿಜ್ಞಾನಿಗಳ್ ಚರಿಗೆವೊಕ್ಕೊಡೆ ಕಂಡವರಂ ಜಯಾವತಿ ನಿಱಿಸಿಯಾದಮಾನುಂ ಭಕ್ತಿಯಿಂ[9]ದಂ ಕೈಯಲಿಕ್ಕಿ ನಿರಂತರಂ ಮಾಡಿ ಕುಳ್ಳಿರ್ದ್ದ ಬೞಿಕ್ಕಿಂತೆಂದು[9] ಬೆಸಗೊಂಡಳ್ ಭಟಾರಾ ಎನಗೆ ಮಕ್ಕಳಕ್ಕುಮೊ ಆಗದೊ ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ವಿಭವನೈಶ್ವರ್ಯ ರೂಪಕಾಂತಿ ಸೌಭಾಗ್ಯಾದಿ ಗುಣಂಗಳಿಂದಂ ಸಿದ್ಧಾರ್ಥನಿಂದಗ್ಗಳಂ ಕುಲತಿಲಕನಪ್ಪ ಮಗನಂ ಪೆಱುವಯ್ ಪೆತ್ತಾಗ ಳೆಂತು ಪುಣ್ಣಮಿಯಂದಿನ ಚಂದ್ರನಂ ಕಂಡಾಗಳಾದಿತ್ಯನಸ್ತಮಾನಕ್ಕೆ ಸಲ್ಗುಮಂತೆ ಮಗನಂ ಕಂಡಾಗಳೆ ನಿನ್ನ ಭರ್ತಾರನುಂ ತಪಂಬಡುಗುಮಾ ರಿಸಿಯುರಂ ಕಂಡಾಗಳೆ ಮಗನುಂ ತಪಂಬಡುಗುಮೆಂದು ಭಟಾರರ್ ಪೇೞ್ದುಪೋದರಿತ್ತ ಜಯಾವತಿಗೆ ಹರ್ಷ ವಿಷಾದಂಗಳೆರಡುಮೊರ್ಮ್ಮೆದಲಾಗೆ ಕಾಲಂ ಸಲೆ ಮತ್ತಿತ್ತ ಚಂಡವೇಗಂ ಪಲಕಾಲ ಮರಸುಗೆಯ್ದು ಆಯುಃಷ್ಯಾಂತದೊಳ್ ಕೞಿದು ಜಯಾವತಿಯ ಗರ್ಭದೊಳ್ ನೆಲಸಿ

---

1 ರೂಪವಿಭವ ಸಂಪನ್ನಂಗೆ (ಕಖಗ). 2 (ಕಖಗ) ಗಳಲ್ಲಿಲ್ಲ. 3 ಮಾಡಿದ (ಕಖಗ). 4 ವಿಶ್ವಜ್ಜ (ಕಗ), ವಿದ್ವಜ್ಜ(ಖ). 5 ತಪಂಬಡುವ ಪರಿಚ್ಛೇದಮುಮಂ (ಘಚಛ). 6 + ಗೆಯ್ದುಡಿ (ಖ). 7 + ದುರ್ಕಣ್ಗಂ ಮನಕ್ಕಂ ಮೆಚ್ಚೆಪಡುವ ಶ್ರೀಯಾ ದೇವತೆಗಳನೆ ಪೋಲ್ವ ಪಲರೊಳ್ವೆಂದ ರೊಡನಿ (ಘಚಛ). 8 ವಿಜಯಾವತಿಯೆಂದು (ಘಚಛ) ಪ್ರತಿಗಳಲ್ಲಿದೆ. 9 ದಮೂಡಿ ಕುಳ್ಳಿರ ವೇಳ್ದಿಂತೆಂದು (ಘಚಛ).

ಗರ್ಭಮಾದೊಡೆ ಜಯಾವತಿಯುಂ ನೆಲಮನೆಯಂ ಮಾಡಿಸಿ ಎನಗೆ ಕುತ್ತಂ ಜಲೋದರಮಾದುದಕ್ಕೆ [1]ಕ್ರಿಯೆ[1]ಗೆಯ್ವುದಪ್ಪೆನೆಂದು ಸಿದ್ಧಾರ್ಥಂಗೆ ಪೇೞ್ದು ಕುತ್ತಮಂ ಭಾವಿಸಿ ನೆಲಮನೆಯೊಳಗಿರ್ದು ನವಮಾಸಂ ನೆಱೆದಂದು ಪ್ರಸೂತೆಯಾಗಿ ಮಗನಂ ಪೆತ್ತು ತಾನುಂ ದಾದಿಯುಂ ಮತ್ತಂ ಬೆಸಕೆಯ್ವ ತೊೞ್ತುಮಿಂತು ಮೂವರು ಮಱುವೊರುೞಿದರಾರುಮಱಿಯರಿಂತು ದಿವಸಂಗಳ್ ಸಲೆ

ಮತ್ತೊಂದು ದಿವಸಂ ಬೆಸಕೆಯ್ವ ತೊೞ್ತು ನೀರಂ ತರಲ್ ಪೋದಲ್ಲಿ ನೀರ ಪೊೞೆಯೊಳಾಕೆಯ ಕೆಳದಿ ನಾಗ[2]ಬ್ಬೆ[2]ಯೆಂಬೊಳಾಕೆಯಂ ಕಂಡಿಂತೆಂದು ಬೆಸಗೊಂಡಳೆಲೆಗೆ ಕುಂದ[3]ಬೆ[3] ಪಲದಿವಸದಿಂದಂ ನಿನ್ನಂ ಕಂಡೆನಿಲ್ಲಿನಿತು ದಿವಸದಿಂ ಮುಂ ಕಾಣದುದಕ್ಕೆ ಕಾರಣಮಂ ಪೇೞೆಂದು ಬೆಸಗೊಂಡಳ್ಗೆ ಕಾರಣಮಂ ನಿನಗೆ ಪೇೞ್ದಪ್ಪೆಂ ನೀನಾರ್ಗ್ಗಂ ಪೇೞೆಯಪ್ಪೊಡೆಂದು ಸೂ*ರು*ೞಿಸಿ ಇಂತೆಂದು ಪೇೞ್ದಳ್ ನೋಡಾ ಎಮ್ಮ ಸೆಟ್ಟಿತಿ ಜಯಾವತಿ ಬೆಸಲೆಯಾದಳ್ ಕಿರುಂಡೆ[4]ಗನಂ ಪೆ[4]ತ್ತಳಾರುಮನಱಿಯಲೀಯದೆ ನೆಲಮನೆಯೊಳಡಂಗಿಪ್ಪೊಳೆಂದು ಪೇೞ್ದೊಡಾ ಮಾತನಲ್ಲಿಯೊರ್ವಂ ಸಂಜೆವಾರಿಸುತ್ತಿರ್ದ್ದ ಬ್ರಾಹ್ಮಣಂ ದಾರಿದ್ರ್ಯಾಭಿಭೂತಂ ಸೋಮಶರ್ಮ್ಮನೆಂಬಾತಂ ಕೇಳ್ದಾದಮಾನುಂ ಸಂತೋಷಂಬಟ್ಟು ಪಿರಿದೊಂದು ಮಾದುಫಲಮಂ ಕೊಂಡು ಪೋಗಿ ಸಿದ್ಧಾರ್ಥನಂ ಕಂಡಿಂತೆಂದು ಬಿನ್ನವಿಕುಂ ಸಿದ್ಧಾರ್ಥಸೆಟ್ಟಿ ಮಹಾಪುರುಷಾ ನಿನಗಾನೊಂದೊಸಗೆಯಂ ಪೇೞಲ್ ಬಂದೆಂ ಜಯಾವತಿ ಬೆಸಲೆಯಾದಳ್ ಮಗಂ ಪೆತ್ತಳೆಂದು ಪೇೞ್ದೊಡೆ ಪೇೞ್ದ ಭಟ್ಟಂಗೆ ಕಟಕ ಕಟಿಸೂತ್ರಂ ಮೊದಲಾಗೊಡೆಯ ಅಂಗಚಿತ್ರಮುಮಂ ಪಿರಿದು ಕಸವರಮುಮಂ ಕೊಟ್ಟು ಪಾರ್ವಂಗೆ ದಾರಿದ್ರ್ಯಮೋ[5]ಕ್ಷ[5]ಮಂ ಮಾಡಿ ಸಿದ್ಧಾರ್ಥನೀ ಪಾರ್ವನ ಮಾತಂ ಕೇಳ್ದಾಗಳೆ ಪುತ್ರಮುಖಮಂ ನೋೞ್ಪೆನೆಂದು ಭೋಂಕನೆ ನೆಲಮನೆಯೊಳಗಂ ಪೊಕ್ಕು ನೋೞ್ಪನ್ನೆಗಂ ಜಯಾವತಿ ತನ್ನ ಸೋಂಕಿಲ ಮೇಗಿ[6]ಟ್ಟಾ[6]ಡಿಸುತ್ತಿರ್ಪ್ಪ ಕೂಸಂ ಎಳನೇಸಱ ತೇಜದೊಳೋರಂತಪ್ಪನಂ ಕಂಡು ಪಲವು ಕಾಲಂ ಬಾೞ್ವೆಯಾಗೆಂದು ಮಗನಂ ಪರಸಿ ಮತ್ತಮಿಂತೆಂದನೆನ್ನ ಮೂವತ್ತೆರಡು ಕೋಟಿ ಕಸವರಕ್ಕಂ ರಾಜಶ್ರೇಷ್ಠಿಪದಕ್ಕಮೆನ್ನ ಸಂತತಿಗಮೆಲ್ಲಮಿನ್ನಿಂದಿತ್ತ ನೀನೆ ಅರಸನೆಂದು ನುಡಿದು ಸಮಸ್ತಭಾರಮೆಲ್ಲಮಂ ಕೂಸಿಂಗೆ ಸಮರ್ಪಿಸಿ ಸೋಂಕಿಲೊಳಿರ್ದ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಪರಸಿ ಸೇಸೆಯನಿಕ್ಕಿ ಸೋಂಕಿಲೊಳಿರ್ದ್ದನಂ ಕಂಡನಪ್ಪುದಱಿಂ ಸುಕೌಶಲಸ್ವಾಮಿಯೆಂದು ಪೆಸರನಿಟ್ಟು ನೆಲಮನೆಯಂ ಪೊಱಮಟ್ಟು ಸ್ವಜನ ಪರಿಜನ ಬಂಧುವರ್ಗ್ಗಕ್ಕೆಲ್ಲಂ ನಿಶ್ಶಲ್ಯಂಗೆಯ್ದು ನೀಮಿನಿಬರುಂ ಸುಕೌಶಲಸ್ವಾಮಿಯಂ ಪಿಡಿದು ಬಾೞಿಮೆಂದು ಕಲ್ಪಿಸಿ ಸಂತಯಿಸಿ ವಿನಯಂಧರರೆಂಬಾಚಾರ್ಯ್ಯರ ಪಕ್ಕದೆ ಪಲಂಬರುಂಬೆರಸು ತಪಂಬಟ್ಟಂ ಮತ್ತೆ ಶ್ರೀಕಾಂತೆ ಮೊದಲಾಗೊಡೆಯ ಪಲಂಬರ್ ಪೆಂಡಿರ್ಕ್ಕಳ್ ವಿನಯಂಧರಭಟ್ಟಾರರ್ ಗುರುಗಳಾಗೆ ಗುಣಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂ

---

1 ವೈದ್ಯಂ (ಘಚಛ). 2 ಜೆ (ಕ), ವತಿ (ಘಚಛ). 3 ದೆ (ಕ) ವೆ (ಚ). * ಱು (ಘ). 4 ಗಂಜಿ (ಕಗ), ಗಂಬೆ (ಖ), ಮಗನಂ ಪೆ (ಛ) : ತಿರುಂಡಿ ಮಗನಂ ಪೆತ್ತಳ್ ಎಂದಿರಬಹುದೆ ? 5 ಚನಂ (ಕ). 6 ದ್ದೂ (ಖ), ಮೇಗಿರ್ದುಮೊಲೆಯೂ (ಕ).

ಗೆಯ್ದು ಸಮಾಧಿ ಮರಣದಿಂದಂ ಮುಡಿಪಿ ದೇವಲೋಕದೊಳನಿಬರುಂ ಪುಟ್ಟಿದರ್ ಮತ್ತಿತ್ತ ಸಿದ್ಧಾರ್ಥರಿಸಿಯುಂ ಪನ್ನೆರಡು ವರುಷಂಬರಂ ಗುರುಗಳನಗಲದೆ ದ್ವಾದಶಾಂಗ-ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತೇಕವಿಹಾರಿಯಪ್ಪೆಂ ಭಟಾರಾ ಎಂದು ಗುರುಗಳಂ ಬೆಸಗೊಂಡವರನುಮತದಿಂದೇಕವಿಹಾರಿಯಾಗಿ [1]ಗ್ರಾಮೇ ಏಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ವಿಹಾರಿಸುತ್ತಂ [2]ಛಟ್ಠಟ್ಠಮ ದಸಮ ದುವಾಳ[2]ಸಾಷ್ಟೋಪವಾಸ ಪಕ್ಷೋಪವಾಸ ಮಾಸೋಪವಾಸಂಗಳಂ ಮಾಡುತ್ತಂ ಪಲಕಾಲಂ ತಪಂಗೆಯ್ಯುತ್ತಮಿರ್ದರ್

ಇತ್ತ ಜಯಾವತಿ ಮುಂ ಭಟ್ಟಾರರ್ ಪೇೞ್ದಾದೇಶಮಂ ನೆನೆದು ತನ್ನ ಮನೆಯಂ ರಿಸಿಯರಂ ಪುಗಲೀಯದಂತಿರೆ ಬಾಗಿಲ್ಗಾಪಿನವರಂ ಕಲ್ಪಿಸಿದೊಳ್ ಮತ್ತೆ ಸಿದ್ಧಾರ್ಥರಿಷಿಯರ ಮೇಗೆ ಕ್ರೋಧಮಂ ಭಾವಿಸಿ ಬಾಲವದ್ದೆಯಂ ಕೂಸಂ ಸಿಸುವನವ್ಯಕ್ತನಂ ವಿಸುಟ್ಟಿಂತು ತಪಂಬಟ್ಟೆ ಪಾಪಕರ್ಮ ದಯೆಯಿಲ್ಲದೊಂ ನಿಷ್ಕರುಣಿ ಎಂದು ಬಯ್ದಳ್ ಮತ್ತೆ ಸುಕೌಸಳ ಸ್ವಾಮಿಯಂ ಮೊಲೆಯೂಡುವ ದಾದಿ ಸುಬ್ರತೆಯೆಂಬೊಳ್ ಸುಮತಿಯೆಂಬೊಳೂಡುವ ದಾದಿ ನಂದೆಯೆಂಬೊಳಾಡಿಸುವ ದಾದಿ ಸುಪ್ರಭೆಯೆಂಬೊಳ್ ಮಜ್ಜನಂಬುಗಿಸುವ ದಾದಿ ಮೇಘಮಾಲೆಯೆಂಬೊಳ್ ಪಸದನಂಗೊಳಿಸುವ ದಾದಿ ಇಂತಯ್ವರ್ ದಾದಿಯರ್ಕ್ಳ್ ನಡಪೆ ಸುಖದಿಂದಂ ಬಳೆದು ಪದಿನಾಱುಂ ವರುಷಂಬೋಗಿ ಯೌವನವಾದೊಡೆ ಮೂವತ್ತಿರ್ವ್ವರರಸು ಮಕ್ಕಳ ಕೂಸುಗಳನತ್ಯಂತ ಲಾವಣ್ಯಸೌಭಾಗ್ಯಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳಿಂ ಕೂಡಿದೊರಂ ಬೇಡಿಯೊಂದೆ ಪಸೆಯೊಳ್ ಮದುವೆ ನಿಱಿಸಿದಳ್ ಮತ್ತೇಕಶಾಲ ದ್ವಿಶಾಲ ತ್ರಿಶಾಲ ಚತುಃಶಾಲ ಸ್ವಸ್ತಿಕ ನಂದ್ಯಾವರ್ತ್ತಂ ಮೊದಲಾಗೊಡೆಯ ಮಾಡಂಗಳುಂ ಮೂವತ್ತೆರಟ್ಬಿಳ್ಳಿಮಾಡಂಗ [3][ಳುಮಂ][3] ಮಾಡಿಸಿ ತನ್ನ ಮನೆಯಂಗಣದೊಳ್ ಸೆಂಡಾ[4]ಡುವ ತಱಿಯುಮಾನೆಯನೇಱುವ ವಿನೋದಂ[4] ಮೊದಲಾಗೊಡೆಯ ವಿನೋದ ಸ್ಥಾನಂಗಳೆಲ್ಲಮಂ ಮಾಡಿಸಿ ಪೊಱಮಡಲೀಯದಂತು ಕಾಪಂ ಮಾಡಿ ಮಗನೈಶ್ವರ್ಯಮಂ ವಿನೋದಮುಮನಟ್ಟಿಯಿಂದಂ ದಿವಸಕ್ಕಂ ನೋಡುತ್ತಿರ್ಕ್ಕುಮಾ ಸುಕೌಶಳ ಸ್ವಾಮಿಯುಂ ಮೂವತ್ತಿರ್ವ್ವರ್ ಪೆಂಡಿರ್ಕ್ಳೊಡನೆ ಇಷ್ಟವಿಷಯ ಕಾಮಭೋಗಸುಖಂಗಳಂ ಪಲಕಾಲಮನುಭವಿಸುತ್ತಿರೆ

ಮತ್ತೊಂದು ದಿವಸಂ ಸುಕೌಶಳಸ್ವಾಮಿಯುಂ ಪೃಥ್ವೀ[5]ಧರ[5]ಮೆಂಬ ಪ್ರಾಸಾದದೇೞನೆಯ ನೆಲೆಯ ಮೇಗೆ ತಾನುಂ ತಾಯುಂ ಸುವ್ರತೆ ಮೊದಲಾಗೊಡೆಯ ಅಯ್ವರ್ ದಾದಿಯರುಂ ಸ್ವಯಂಪ್ರಭೆ ಮೊದಲಾಗೊಡೆಯ ಮೂವತ್ತಿರ್ವ್ವರ್ ಪೆಂಡಿರ್ಕ್ಳಿಂತಿನಿಬರಿಂದಂ ಪರಿವೇಷ್ಟಿತನಾಗಿ ಗವಾಕ್ಷಜಾಲಾಂತರದೊಳ್ ದಿಶಾವಳೋಕನಂಗೆಯ್ಯುತ್ತಂ ಸುಖಸಂಕಥಾವಿನೋದದಿಂದಿರ್ಪ್ಪನ್ನೆಗಮಿತ್ತ ಸಿದ್ಧಾರ್ಥರಿಸಿಯರ್ ಗ್ರಾಮನಗರಖೇಡಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ

---

[1] (ಖ) ಪ್ರತಿಯಲ್ಲಿ ನಷ್ಟವಾಗಿದೆ. [2] ಛಷ್ಟಾಷ್ಟವ:ದಂ ದಶಮ ದ * * * (ಕಖಗ) "ಷಷ್ಠಾಷ್ಟಮದಶಮದ್ವಾದಶ" ಎಂದು ಇದಕ್ಕೆ ಸರಿಯಾದ ಸಂಸ್ಕೃತ ಪಾಠ. [3] ಳ್ಳಂ (ಕ). [4] ಡಲುಂ ವೈಹಾಳಿ (ಘಚಛ). [5] ತಿಲಕ (ಘಚಛ).

ವಿಹಾರಿಸುತ್ತಯೋಧ್ಯಾನಗರಮಂ ಬಂದು ಮಾಸೋಪವಾಸದ ಪಾರಣೆಯಂದು ಚರಿಗೆವೊಕ್ಕು ಕಿಱುಮನೆ ಪೆರ್ಮನೆಯೆನ್ನದುಣಲ್ ತಕ್ಕ ಮನೆಗಳಂ ಯಥಾಕ್ರಮದಿಂ ಪುಗುತ್ತಂ ಬರ್ಪರ್ ಸುಕೌಶಳಸ್ವಾಮಿಯ ಮನೆಯಂ ಪೊಕ್ಕು ಪೋಱಮಡುವರ್ ಗಿಡಿಗಿಡಿಜಂತ್ರಂ ಮಿಳಿಮಿಳಿನೇತ್ರರಪ್ಪ ಮಾಸೋಪವಾಸಂಗೆಯ್ದ ರಿಸಿಯರ್ ಪೋಪುದಂ ಸುಕೌಶಳಸ್ವಾಮಿ ಕಂಡೀ ಪೋಪರೇನೆಂಬರಬ್ಬಾ ಅಪೂರ್ವರೂಪರಿನ್ನರನೆಂದುಂ ಕಂಡಱಿಯೆನೆಂದು ತಾಯಂ ಬೆಸಗೊಂಡೊಡೆ ತಾಯ್ ಇಂತೆಂದು ಪೇೞ್ದಳ್ ಮಗನೆ ಈತನಂ ಗ[1]ಡಿಯಲವಡಂ ಪೆಱುಕಿ ತಿಂದು ಬಾೞ್ವೊಂ[1] ಬೈಕಂಗುಳಿ ಬೇಡಿ ಪೊೞಲೆಲ್ಲಮಂ ತೊೞಲ್ದು ಬಸಿಱಂ ಪೊರೆವೊಂ ದೇಸಿಗನಾರುಮಿಲ್ಲದೊಂ ಕೋವಣಕ್ಕಪ್ಪೊಡಂ ಭಾಗಸಮಿಲ್ಲದೊನೆಂದು ಜಯಾವತಿ ಪೇೞ್ದೊಡೆ ಸುಪ್ರತೆಯೆಂಬ ದಾದಿ ಮಾರ್ಕೊಂಡಿಂತೆಂದಳ್ ಹಾ ಪೊಲ್ಲ[2]ದಂ ನು[2]ಡಿದಯ್ ಸ್ವಾಮಿಯುಂ ಪರಮೇಶ್ವರನಂ ನೀಂ ಮೊದಲಾಗೊಡೆಯ ಮೂವತ್ತಿರ್ಪ್ಪರುಮೊಳ್ಪೆಂಡಿರ್ಕ್ಕಳುಮಂ ಮೂವತ್ತೆರೞ್ಕೋಟಿ ಕಸವರಮುಮಂ ಕೊ[3]ಳದ[3] ಪುಲ್ಲ ದರ್ಕ್ಕಂ ತೊಱೆ[3]ವಂತನಿತುಮಂ ತೊಱೆ[3]ದು ಕರ್ಮಕ್ಷಯಾರ್ಥಂ ತಪಂಬಟ್ಟಾತನನಿಳಿಸಿ ಪರಿಭವಿಸಿ ಮುಟ್ಟಿಗಿಡಿಸಿ ನುಡಿಯಲ್ವೇಡೆಂದು ಬಾರಿಸಿದೊಳಂ ಜಯಾವತಿ ಕಣ್ಕೆತ್ತಿ ಬಾರಿಸಿದೊಡೆ ಕೆಮ್ಮಗಿರ್ದ್ದ ಪೆಱಪೆಱವನೆ ನುಡಿಯಲ್ ತಗುಳ್ದೊಡೆ ಸುಕೌಶಳಸ್ವಾಮಿಯುವರಿರ್ವರ ನುಡಿಗಳ್ ಸಗ[4]ರ್ಭ[4]ವಚನಂಗಳೆಂದು ತನ್ನ ಮನದೊಳ್ ಬಗೆಯುತ್ತಿರ್ಪಿನಂ ಬಾಣಸಿಗಂ ಬಂದು ಬೋನಮೆತ್ತಿಯೋಗರಮಾಱಿದಪ್ಪುದೆಂದು ಪೇೞ್ದೊಡೆ ತಾಯುಂ ಸುಪ್ರತೆ ಮೊದಲಾಗೊಡೆಯ ದಾದಿಯರಯ್ವರುಮಾತನ ಪೆಂಡಿರ್ಕ್ಕಳ್ ಸ್ವಯಂಪ್ರಭೆ ಶ್ರೀದತ್ತೆ ಬಂಧುಮತಿ ಭಾನುಮತಿ ಮಿತ್ರಸೇನೆ ಪ್ರಿಯಂಗು ಸುಂದರಿ ಪ್ರಿಯದೆ ಶ್ಯಾಮಲತೆ ವಿದ್ಯುಲ್ಲತೆ ಅಚಲೆ ವಿಮಳಮತಿ ಶ್ರೀಕಾಂತೆ ಶಶಿಪ್ರಭೆ ಸೂರಸೇನೆ ಅನಂತಮತಿ ಸರಸ್ವತಿ ವಿಜಯೆ ವೈಜಯಂತೆ ಅಪರಾಜಿತೆ ಕನಕಮಾಳೆ ಧಾನ್ಯೆ ಧನಶ್ರೀ ವಸುಂಧರೆಯೆಂದಿವರ್ ಮೊದಲಾಗೊಡೆಯರೆಲ್ಲರ್ ನೆರೆದಿಂತೆಂದರ್ ವೇಳಾತಿಕ್ರಮಮಾದಪುದಾರೊಗಿಸಲ್ಕೇೞಿಮೆಂದು ನುಡಿದೊಡೆ ಸುಕೌಶಳಸ್ವಾಮಿಯಿಂತೆಂದನೀ ವೃತ್ತಾಂತಮೆಲ್ಲಮನಱಿದೊಡಲ್ಲದುಣ್ಬೆನಲ್ಲೆನದಱಿಂ ಪೇೞಿಮ್ ಸುಪ್ರತೆ ಏನಂ ಕಂಡಿರಾರುಳ್ಳುದನುಳ್ಳಂತೆ ಪೇೞಿಯಪ್ಪೊಡೆ ನಿನಗೆನ್ನಾಣೆಯೆಂದು ತನ್ನ ಮೇಗೆ ಸೂರುಳಿಸಿ ಬೆಸಗೊಂಡೊಡೆ ಸುಪ್ರತೆಯೆಂಬೊಳ್ ಮೊಲೆಯೂಡಿದ ದಾದಿಯಿಂತೆಂದು ಪೇೞ್ದಳ್ ಕೇಳ್ ಮಗನೆ ಇವರ್ ನಿನ್ನ ತಂದೆವಿರ್ ಸಿದ್ಧಾರ್ಥರೆಂಬೊರ್ ನೀನ್ ತೊಟ್ಟಿಲೊಳಿರ್ದ್ದಂತೆ ನಿನಗೆ ಸೆಟ್ಟಿವಟ್ಟಂಗಟ್ಟಿ ಸಂಸಾರಕ್ಕೆ ಪೇಸಿ ಕರ್ಮಕ್ಷಯಾರ್ಥಂ ತಪಂಬಟ್ಟೀ ಮೆಯ್ಯಂ ನಿಱಿಸಲ್ವೇಡಿ ಪೊೞಲೊಳಗೆ ಚರಿಗೆವೊಕ್ಕು [5]ಬಾವರಿವುಗುತ್ತುಂ[5] ಬಂದು ನಿನ್ನ ಮನೆಯಂ ಪೊಕ್ಕು ಪೋಱಮಟ್ಟು ಪೋದರೆಂದು ಪೇೞ್ದೊಡಿನ್ನಾರೋಗಿಸಲ್ವೇೞ್ಕುಂ ಏೞು ಮಗನೆ ಎಂದೊಡೆ ಸುಕೌಶಳಸ್ವಾಮಿಯೆಂದನಂತಪ್ಪೊಡಾನುಮವರಂತಪ್ಪ ರೂಪಂ ಕೈಕೊಂಡಲ್ಲದುಣ್ಣೆನೆಂದು

[1] ಗಡಿಯಲವಟು ಪೆಱುಕಿ ತಿಂ .... (ಕಖ), ಗಡಿಯಲವಟು ಪೆಱುಕಿ ತಿ. ಬಾಳ್ವೆಂ (ಗ). ಗಡಿಯಲವಡಂ ಪಿಱುಕಿ ತಿಂದು ಬಾಳ್ವೊಂ (ಚಛ). [2] ದುಮಾ (ಕಖಗ). [3] ಳಿದ (ಘಚಛ). [4] ರ್ವ (ಕಖಗ). [5] ತಿರಿಯುತ್ತಂ (ಘಚ), ತಿರುಗುತ್ತಂ (ಛ).

ಪ್ರತಿಜ್ಞೆಗೆಯ್ದಿರ್ದೊಡೆ ಸ್ವಜನ ಪರಿಜನ ಬಂಧುವರ್ಗಮೆಲ್ಲಂ ನೆರೆದಿಂತೆಂದರ್ ನೀನಿನ್ನುಂ [1]ಕೂಸಯ್[1] ಕಾಮಭೋಗಂಗಳನುಭವಿಸುವ ದಿವಸಂಗಳ್ ತಪಂಬಡುವ ದಿವಸಮಲ್ಲಂ ಪ್ರಾಯಂಬೋದಿಂಬಟಿಕ್ಕೆ ನಿನ್ನಮ್ಮನೆಂತು ನಿನಗೆ ಸೆಟ್ಟಿವಟ್ಟಂಗಟ್ಟಿ ಸಮಸ್ತಭಾರಮಂ ಸಮರ್ಪಿಸಿ ತಪಂಬಟ್ಟನಂತೆ ನೀನುಂ ನಿನಗೆ ಮಗನಾದೊಡೆ ಮಗಂಗೆ ಸೆಟ್ಟಿವಟ್ಟಂಗಟ್ಟಿ ಸಮಸ್ತ ಭಾರಮಂ ನಿರೂಪಿಸಿ ತಪಂಬಡುವುದೆಂದೆಲ್ಲರುಂ ನುಡಿದೊಡಿಂತೆಂದನನ್ನೆಗಮೇಂ ಸಾವರೊ ಬಾಳ್ವರೊ ಎಂತಱಿಯಲಕ್ಕುಂ ಮಾನಸಮಾಟಿಂಬುದು ಪನಿಪುಲ್ಲ ಮುಗಿಲ ಸಂಜೆಯೊಳೋರಂತಪ್ಪುದಱಿಂದಾರ್ ಬಾರಿಸಿದೊಡಂ ನಿಲ್ವೆನಲ್ಲೆಂದು ಸ್ವಯಂಪ್ರಭೆಯೆಂಬೊಳ್ ಬಸಿಱ ಪೆಂಡತಿಯಾಕೆಯ ಬಸಿಱ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಮನೆಯಿಂದಂ ಪೊಱಮಟ್ಟು ರಿಸಿಯರಿರ್ದ್ದೆಡೆಯಂ ಬೆಸಗೊಳುತ್ತಂ ಪೋಗಿ ಬಹಿರುದ್ಯಾನವನದೊಳ್ ಸ್ಫಟಿಕಶಿಲಾತಲದ ಮೇಗಿರ್ದ್ದ ಸಿದ್ಧಾರ್ಥ ಭಟ್ಟಾರರಂ ಕಂಡು ಸುಕೌಶಳಸ್ವಾಮಿ ಜಾತಿಸ್ಮರನಾಗಿ ದರ್ಶನವಿಶುದ್ಧಿಯೊಳ್ ಕೂಡಿದ ಶುಭಪರಿಣಾಮದಿಂದಂ ಬಂದಿಸಿದಾಗಳವಧಿಜ್ಞಾನಮುಮಾಗೆ ಅವರ ತನ್ನ ಮುನ್ನಿನ ಭವಾಂತರಂಗಳೆಲ್ಲಮಂ ಪ್ರತ್ಯಕ್ಷಮಾಗಱಿದು ಮನದೊಳಿಂತೆಂದು ಬಗೆದನಿವಂ ಮುನ್ನಿನ ಭವಾಂತರದೊಳ್ ಪ್ರಿಯದರ್ಶನನೆಂಬ ಸೆಟ್ಟಿ ಕಾಲಂಗೆಯ್ದು ಮಲಯ ಸುಂದರನೆಂಬಾನೆಯಾಗಿ ಪುಟ್ಟಿದನಲ್ಲಿಂ ಬಟಿಯಂ ಕುಬೇರಕಾಂತನೆಂಬೊನಾದನಲ್ಲಿಂ ಬಟಿಯಂ ವಿದ್ಯುನ್ಮಾಳಿಯೆಂಬ ವಿದ್ಯಾಧರನಾದನಲ್ಲಿಂ ಬಟಿಯಂ ಸಿದ್ಧಾರ್ಥನೆಂಬೊನೀಗಳಾಗಿ ತಪಂಬಟ್ಟನೆಂತು ಸಿದ್ಧಾರ್ಥ ಭಟ್ಟಾರರ ಭವಂಗಳೈದು ಮತ್ತಾಂ ಮುನ್ನಿನ ಭವದೊಳ್ ಪ್ರಿಯಸೇನೆಯೆಂಬ ಮಾಲೆಗಾರ್ತಿಯೆಂ ಕಾಲಂಗೆಯ್ದು ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದೆನಲ್ಲಿಂ ಬಟಿಯಂ ವರಾಂಗನಾದೆನಲ್ಲಿಂ ಬಟಿಯಂ ಶ್ರೀಧರನಾದೆನಲ್ಲಿಂ ಬಟಿಯಂ ಚಂಡವೇಗನೆಂಬ ವಿದ್ಯಾಧರನಾದೆನಲ್ಲಿಂ ಬಟಿಯಂ ಸಿದ್ಧಾರ್ಥಂಗಂ ಜಯಾವತಿಗಂ ಮಗನೆನಾಂ ಸುಕೌಶಳಸ್ವಾಮಿಯಾಗಿ ಪುಟ್ಟಿದೆನಿಂತೆನ್ನ ಭವಾಂತರಮಾಱು ಮತ್ತಾಂ ಪ್ರಿಯಸೇನೆಯಪ್ಪಂದೆನ್ನ ಕೆಳದಿ ಸುಕೀರ್ತಿಯೆಂಬಳ್ ಪ್ರಿಯದರ್ಶನನ ಭಾರ್ಯೆ ಕಾಲಂಗೆಯ್ದು ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದೊಳಲ್ಲಿಂ ಬಟಿಯಂ ಸುಕೇಶಿನಿಯಾದಳಲ್ಲಿಂ ಬಟಿಯಂ ಮನೋಹರಿಯಾದಳಲ್ಲಿಂ ಬಟಿಯಂ ವಿರಳವೇಗೆಯೆಂಬ ವಿದ್ಯಾಧರಿಯಾದಳಲ್ಲಿಂ ಬಟಿಯಂ ಶ್ರೀಕಾಂತೆಯಾದೊಳಾಕೆಯಂ ಸಿದ್ಧಾರ್ಥಂಗೆ ಕೊಟ್ಟುದಂತು ಶ್ರೀಕಾಂತೆಯ ಭವಾಂತರಮಾಱಿಂತು ಮೂವರ ಭವಾಂತರಂಗಳನಱಿದು ಸಂಸಾರಕ್ಕೆ ವೈರಾಗ್ಯಮಾಗಿ ಸಿದ್ಧಾರ್ಥ ಭಟ್ಟಾರರ [2]ಪಕ್ಕದೆ[2] ಸುಕೌಶಳಸ್ವಾಮಿ ತಪಂಬಟ್ಟಂ ಸುಪ್ರಭೆಯುಟಿಯೆ ಉಟಿದ ಮೂವತ್ತಿರ್ವ್ವರ್ ಪೆಂಡಿರುಂ ಸಿದ್ಧಾರ್ಥ ಭಟಾರರ್ ಗುರುಗಳಾಗೆ ಗುಣಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ಸಮಾಧಿ ಮರಣದಿಂ ಮುಡಿಪಿ ದೇವಲೋಕದೊಳ್ ಪುಟ್ಟಿದರ್

ಮತ್ತಿತ್ತ ಜಯಾವತಿಯುಂ ತನ್ನಂ ಬಾರಿಸೆವಾರಿಸೆ ಸುಕೌಶಲಸ್ವಾಮಿ ತಪಂ

---

[1] ಕಿಱುಕೂಸನೈ (ಘಚ). [2] ಪಾದಮೂಲದೊಳ್ (ಘಚಛ).

ಬಟ್ಟೆನೆಂದು ಮುಳಿದು ಜಿನಧರ್ಮವಂ ಪೞಿದು [1]ಉನ್ಮಾರ್ಗೋಪದೇಶದಿಂದಾರ್ತ[1] ಧ್ಯಾನದೊಳ್ ಕೂಡಿ ಸತ್ತು ಮೊಗ್ಗಳಗಿರಿಯೆಂಬ ಪರ್ವತದೊಳ್ ಪೆಣ್ಬುಲಿಯಾಗಿ ಪುಟ್ಟಿದಳ್ ಮತ್ತಿತ್ತ ಸುಕೌಸಲಸ್ವಾಮಿ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳೊಡನೆ ಗ್ರಾಮನಗರಖೇಡಖರ್ವಡ ಮಡಂಬಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪಲಕಾಲಂ ತಪಂಬಟ್ಟು ಮೊಗ್ಗಳಗಿರಿಯೆಂಬ ಪರ್ವತಕ್ಕೆ ವಂದು ಮೞೆಗಾಲದೊಳಿರ್ವರುಮೊಂದೆ ಗುಹೆಯೊಳ್ ಜೋಗುಗೊಂಡು ನಾಲ್ಕು ತಿಂಗಳಿರ್ವರುಮುಪವಾಸಂಗೆಯ್ದು ಜೋಗು ನೆಱೆದೊಡೆ ಚಾತುರ್ಮಾಸದ ಪಾರಣೆಯೆಂದು ಸುಕೌಶಲಸ್ವಾಮಿಯುಪ್ಪ ರಿಸಿಯರ್ ಗುಹೆಯಿಂದಂ ಮುನ್ನ ಪೊಱಮಟ್ಟು ದೆಸೆಗಳಂ ನೋೞ್ಪನ್ನೆಗಂ ತಾಯಪ್ಪ ಪೆಣ್ಬುಲಿ ಪಲವು ದಿವಸಮಾಹಾರಮಂ ಪೆಱದೆ ಪಸಿದು ಮಲ್ಕಲ ಮಱುಗುತ್ತಿರ್ದ್ದ ರಿಸಿಯರಂ ಕಂಡು ಮುಳಿದು ಮಸಗಿ ಮೇಲ್ವಾಯಲ್ ಪರಿತಪ್ಪುದಂ ಕಂಡು ಸುಕೌಸಲಸ್ವಾಮಿ ಆಹಾರ ಶರೀರಕ್ಕೆ ಯಾವಜ್ಜೀವಂ ನಿವೃತ್ತಿಯೆಂದು ಕಾಯೋತ್ಸರ್ಗಂ ಗೆಯ್ದು

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜಿವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಣ ಕೇಣಚಿ ॥
ಮಜ್ಝ ಸ[2]ಹಾವಂ ಣಾ[2]ಣಂ ದಂಸಣಚರಣಂ ಣಕೋವಿ ಲಾವ[3]ಣ್ಣಂ[3]
ಜೋ ಸವ್ವಯಣಗ್ಗಹಿ ಸೋ ಹಂ ಣೋ ಗಾಹವೇಯದಾ ॥ (?)
ಛಿಜ್ಜಉ ಭಿಜ್ಜಉ ಜಾಉ ಖಉ ಜೋಇಯ ಏಹು ಸರೀರು
ಅಪ್ಪಾ ಭಾ[4]ವ[4]ಹಿ ಣಿ[5]ಮ್ಮ[5]ಲಉ ಜೇಂ ಪಾವಹಿ ಭವತೀರು ॥

ಎಂದಿಂತು ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲ ಧ್ಯಾನಂಗಳಂ ಧ್ಯಾನಿಸುತ್ತ ವಿ:ರೆ ಪುಲಿ ಬಂದು ಪಾಯ್ದು ಬಸಿಱಂ ಪೋೞ್ದು ನೆತ್ತರಂ ಕುಡಿದು ತೆಗಲೆಯಂ ಪೋೞ್ದು ತಿನ್ವಾಗಳ್ ಸಿದ್ಧಾರ್ಥರಿಸಿಯುಂ ಗುಹೆಯಂ ಪೊಱಮಟ್ಟು ಬಂದು ಕಂಡು ಹಾ ಪಂಚಮಹಾಪಾತಕಿ ಮಗನನೇಕೆ ಕೊಂದು ತಿಂದೆ ಮುನ್ನೆ ಕುಂಕುಮಪಂಕಿತಮಪ್ಪ ದಿಬ್ಯದೇಹದೊಳ್ ಬೆಮರ ಬಿಂದುಗಳಂ ಕಂಡು ನೆತ್ತರೆಂದು ಬಗೆದು ಮೂರ್ಛೆಗೆ ಸಲ್ವಾಕೆಯೆ ಈಗಳ್ ಮಗನಂ ಪೋೞ್ದು ತಿಂದಪ್ಪಯ್ ಅಹೋ ಕಷ್ಟಂ ಸಂಸಾರಮೆಂದು ಸಿದ್ಧಾರ್ಥ ಭಟ್ಟಾರರ್ ನುಡಿವ ವಚನಮಂ ಕೇಳ್ದು ವಕ್ಷಃಸ್ಥಳದ ಶ್ರೀಲಾಂಛನಮಂ ಕಂಡು ಜಾತಿಸ್ಮರೆಯಾಗಿ ಮೂರ್ಛೆಗೆ ಸಂದು ನೀಡಱಿಂದೆೞ್ಚತ್ತು ಹಾ ಪಂಚಮಹಾಪಾತಕಿಯೆನೆನ್ನ ಮಗನಂ ಪೋಳ್ದು ತಿಂದೆನೆಂದು ತನ್ನಂ ತಾಂ ನಿಂದಿಸಿ ತಲೆಯಂ ಕಾಲ್ಗಳಂ ಪಾಷಾಣವೃಕ್ಷಂಗಳೊಳ್ ಶತಚೂರ್ಣಮಾಗೆ ಬಡಿದುಕೊಂಡು ಹಾ ಮಗನೆ ಪೊಲ್ಲದಂಗೆಯ್ದೆನೆಂದು ಪ್ರಳಾಪಂಗೆಯ್ದು [6]ಮಹಾಶೋಕಂಗೆಯ್ಯುತ್ತಿರೆ ಭಟ್ಟಾರರದರ್ಕೆ ಧರ್ಮಶ್ರವಣಂ ಗೆಯ್ದು ಸಂಸಾರ ಸ್ಥಿತಿಯನಱಿಯೆ ಪೇೞ್ದು ವ್ರತಂಗಳನೇೞಿಸಿದೊಡುಪಶಮಕ್ಕೆ ಸಂದಾಹಾರ ಶರೀರಕ್ಕೆ ಯಾವಜ್ಜೀವಂ ನಿವೃತ್ತಿಗೆಯ್ದು[6]

---

[1] (ಖ) ದಲ್ಲಿ ನಷ್ಟವಾಗಿವೆ. [2] ಹೋವಣೊ (ಕ). [3] ವರಣಂ (ಕ). [4] ವಾ (ಗ). [5] ವಾ (ಕ). ಕೊನೆಯ ಎರಡು ಗಾಹೆಗಳು (ಖಘಚಛ) ಗಳಲ್ಲಿ ದೊರೆಯುವುದಿಲ್ಲ. [6] ಈ ಭಾಗ (ಕಖಗ) ಪ್ರತಿಗಳಲ್ಲಿಲ್ಲ. ಇದಕ್ಕೆ ಬದಲಾಗಿ 'ತೊಱೆದು' ಎಂದಿಷ್ಟೇ ಇದೆ.

ಶುಭಪರಿಣಾಮದೊಳ್ ಕೂಡಿ ಮುಡಿಪಿ ಸೌಧರ್ಮ ಕಲ್ಪದೊಳ್ ಪುಟ್ಟಿತ್ತು [1]ಸಿದ್ಧಾರ್ಥರಿಸಿಯರುಂ ಸಮ್ಯಗ್ದರ್ಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಕರ್ಮಕ್ಷಯಂಗೆಯ್ದು ಮೋಕ್ಷಮನೆಯ್ದಿದರ್[1] ಸುಕೌಸಲಸ್ವಾಮಿಯುಂ ತಿರಿಕೋಪಸರ್ಗ್ಗಮಂ ಸೈರಿಸಿ ಸರ್ವಾರ್ಥಸಿದ್ಧಿಯೊಳ್ ಸಯಸತ್ತಮ ದೇವನಾಗಿ ಪುಟ್ಟಿ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯನಪ್ಪ ಹಮಿಂದ್ರನಾದೊನ್

ಎಂಬಿದೆಲ್ಲಮಂ ಯಶೋಧರ ಕೇವಲಿಗಳ್ ಪೇೞೆ[3] ಚಂಪಾಪುರಾಧಿಪತಿಯಪ್ಪ ಗಂಧಭಾಜನನೆಂಬರಸಂ ಕೇಳ್ದಾದಮಾನುಂ ಸಂತುಷ್ಟಚಿತ್ತನಾಗಿ ಭಟಾರರ್ಗ್ಗೆಱಗಿ ಪೊಡೆವಟ್ಟು ಸಂಸಾರ ಶರೀರ ಭೋಗ ನಿರ್ವ್ವೇಗ ಪರಾಯಣನಾಗಿ ಧಾತ್ರಿವಾಹನನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ನೂರ್ವರರಸು ಮಕ್ಕಳ್ವೆರಸು ಯಶೋಧರ ಕೇವಲಿಗಳ ಪಕ್ಕದೆ ತಪಂಬಟ್ಟಂ ಮತ್ತಪ್ಪರಸೆಯರ್ಕ್ಕಳೊಳೋರನ್ನರಪ್ಪ ರಸಿಯರಯ್ನೂರ್ವರುಂ ಯಶೋಧರ ಕೇವಲಿಗಳ್ ಗುರುಗಳಾಗೆ ಪದ್ಮಾವತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು [2]ಸಮಾಧಿ ಮರಣದಿಂದಂ ಮುಡಿಪಿ ಸೌಧರ್ಮಂ ಮೊದಲಾಗೊಡೆಯ ದೇವಲೋಕದೊಳ್ ಪುಟ್ಟಿದರಿತ್ತ ಗಂಧಭಾಜನ ಮುನಿಯುಂ ದ್ವಾದಶಾಂಗ ಚತುರ್ದಶ ಪೂರ್ವಮುಪ್ಪಾಗಮುಮೆಲ್ಲಮಂ ಕಲ್ತು ಪಲ ಕಾಲ[2]ಮುಗ್ರೋಗ್ರ ತಪಶ್ಚರಣಂಗೆಯ್ದು ಗ್ರಾಮನಗರಖೇಡಖರ್ವಡಮಡಂಬಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪೋಗಿ ಪಾಂಡ್ಯ[3] ವಿಷಯದೊಳ್ [4]ಪಳಿ ಕುಂತಳೆಯಂ[4]ಬ ಪರ್ವತದ ಮೇಗಿರ್ದು ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗ ಪೂರ್ವಕಂ ಕಾಯೋತ್ಸರ್ಗಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ಕರ್ಮಕ್ಷಯಂಗೆಯ್ದು ಸುರಾಸುರೇಂದ್ರರ್ಕ್ಕಳಿಂ ಪೂಜೆಯನೆಯ್ದಿ ಮೋಕ್ಷಕ್ಕೆ ವೋದರ್

ಮತ್ತಾರಾಧಕರಪ್ಪವರ್ಗಳ್ ಸುಕೌಶಲಸ್ವಾಮಿಯ ತಿರಿಕೋಪಸರ್ಗಮಂ ಮನದೆ ಬಗೆದು ಪಸಿವುಂ ನೀರಱ್ಕೆದಾಹವಾತಂ ಸೂಲೆಯೆಂದಿವು ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿ ಮರಣದಿಂ ಮುಡಿಪಿಯಭ್ಯುದಯ ನಿಶ್ಶ್ರೇಯಸ ಸುಖಂಗಳನೆಯ್ದುಗೆ

---

1 ಈ ಭಾಗ (ಕಖಗ) ಪ್ರತಿಗಳಲ್ಲಿಲ್ಲ. 2 ಈ ಭಾಗ (ಕಖಗ) ಗಳಲ್ಲಿಲ್ಲ. 3 ಡು (ಘಚಛ). 4 ಪಿಳಿಕುಂಥಮೆಂ (ಘಚಛ).

## ೩. ಗಜಕುಮಾರನ ಕಥೆ

ಗಜಕುಮಾರನ ಕಥೆಯಂ ಪೇೞ್ವೆಂ :

ಗಾಹೆ॥ ಭೂಮಿಏ ಸಮಂ ಖೀಲಾಭಾ ಇದ ದೇಹೋವಿ ಅಲ್ಲಚಮ್ಮಂ ವ।
ಭಗವಂ ಪಿ ಗಜಕುಮಾರೋ ಪಡಿವಣ್ಣೋ ಉತ್ತಮಂ ಅಟ್ಠಂ॥

[[1]ಭೂಮಿಏ ಸಮಂ—ನೆಲದೊಳೋರಂತಾಗೆ ಮಲರ್ಚಿಕ್ಕಿಯುರದಿಂ ತಗುಳ್ದು ನಾಭಿವರೆಗಂ ಬಸಿಱಿಂ ಪೋೞ್ದು, ಅಲ್ಲಚಮ್ಮಂ—ಪಂದೊವಲಂ ತೆಗೆದು, ಖೀಲಾಭಾ ಇದ ದೇಹೋವಿ[1]—ಕಾಯ್ದ ಕಬ್ಬೊನ್ನ ನಿಡಿಯವುಂ ತೋರವುಮಪ್ಪ ಕೀಲ್ಗಳಿಂದಂ ಮೆಯ್ಯೆಲ್ಲಮುಂ ನಿರಂತರಮುರ್ಚಿ ಪೋಗಿ ನೆಲನಂ [2]ತಾಪಿನಂ ಕೀ[2]ಲಿಱಿಯೆಪಟ್ಟ ಮೆಯ್ಯನೊಡೆಯನಾಗಿಯುಂ, ಭಗವಂ—ಪಿರಿದಪ್ಪ ಪೆರ್ಮೆಯನೊಡೆಯಂ, ಗಜಕುಮಾರೋಪಿ—ಗಜಕುಮಾರನುಂ, ಪಡಿವಣ್ಣೋ—ಪೊ[3]ರ್ದಿ[3]ದೊಂ, ಉತ್ತಮಂ ಅಟ್ಠಂ—ಮಿಕ್ಕದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಸುರ[4]ಟ[4]ಮೆಂಬುದು ನಾಡಲ್ಲಿ ದ್ವಾರಾವತಿಯೆಂಬುದು ಪೊೞಲದನಾಳ್ವೊಂ [5]ವಿಷ್ಣು ಅರ್ಧಚಕ್ರಿ[5]ಯಾತನ ತಂದೆ ವಸುದೇವಸ್ವಾಮಿಯೆಂಬೊನಾ [6]ವಸುದೇವಸ್ವಾಮಿಯ[6]ರಸಿ ಗಾಂಧರ್ವದತ್ತೆಯೆಂಬೊಳಾಯಿರ್ವರ್ಗಂ ಗಜಕುಮಾರನೆಂಬೊಂ ಮಗ[7]ನಪ್ಪೊನಂತವರ್ಗಳಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತಿತ್ತ ಸೂರದತ್ತಮೆಂಬುದು ನಾಡಲ್ಲಿ ಪೌದನಪುರಮೆಂಬುದು ಪೊೞಲದನಾಳ್ವೊನಪರಾಜಿತನೆಂಬೊನರಸ[7]ನಾದಮಾನುಂ ಪ್ರಚಂಡ ಬಳಗರ್ವಿತನಾರುಮನುಱಿದೊಂ ವಿಷ್ಣು[8]ಗಂ ಬೆಸ[8]ಕೆಯ್ಯನೊಂದು ದಿವಸಂ ವಿಷ್ಣು ಪೊೞಲೊಳ್ [9]ಗೋಸಣೆ[9]ಯಂ ತೊೞ[10]ಲ್ಚಿದನಾ[10]ವನೊರ್ವಂ ಪೌದನಪುರಾಧಿಪತಿಯಪ್ಪಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿ[11]ಡಿ[11]ಕೊಂಡು ಬರ್ಕುಮಾತಂಗೆಯಾತನ ಬೇಡುವುದೆಲ್ಲಮಂ ಕುಡುವೆನೆಂದು ತೊೞಲ್ವ ಗೋಸಣೆಯಂ ಗಜಕುಮಾರಂ ಪಿಡಿದೊಡಾ ಮಾತನರಸಂ ಕೇಳ್ದು ಗಜಕುಮಾರನಂ ಕರೆಯಿಸಿಯಾತನೊಡನೆ ಚಾತುರ್ದಂತ ಬಳಮಂ ಕೂಡಿಯಟ್ಟಿದೊಡಾತನುಂ ಪೋಗಿಯಪರಾಜಿತನೊಡನೆ ಮಹಾಯುದ್ಧಂಗೆಯ್ದು ಗೆಲ್ದು ಪೆಡಂಗೆಯ್ಯುಡಿಯೆ ಕಟ್ಟಿ ಗಜತುರಗವಸ್ತುವಾಹನಸಹಿತಂ ತಂದು ವಿಷ್ಣುಗೊಪ್ಪಿಸಿದೊಡಾತನುಮೊಸೆದು ನೀನ್ ಮೆಚ್ಚಿದುದಂ ಬೇಡಿ

---

[1] ಭೂಮಿಏ-ಸಮನೆಲ ತೆವರಂ, ಅಲ್ಲಚಮ್ಮಮಂ ಪಪಟ-ಒರ್ವನ ತೋಳಂ ತೆಗೆದು, ನಿರಖಾ ಇರದೇ ಹೋಪಿ (ಘಚಛ). [2] ತಾಂಗ (ಘಛ). [3] ಳ್ದಿ (ಕಖಗ). [4] ಥ (ಘಚಛ). [5] ವಿಷ್ಣು ಅರ್ಧಚಕ್ರವರ್ತಿ (ಗ) ವಿಷ್ಣುವರ್ಧನ ಚಕ್ರವರ್ತಿ (ಘಛ). ಅರ್ಧ ಚಕ್ರವರ್ತಿಯಪ್ಪ ವಿಷ್ಣುವೆಂಬನಾ (ಚ). [6] ತನ (ಘಚಛ). [7] (ಕಖಗ) ಗಳಲ್ಲಿ ಇಲ್ಲ. [8] ಗಮಿಂಬು (ಘಚಛ). [9] ಘೋಷಣೆ (ಕಖಗ). [10] ಚ್ಚಿರ್ಯಾ (ಕಖಗ). [11] ಡಿದು ಕಟ್ಟಿ (ಘಛ).

ಕೊಳ್ಳೆನೆ ಪೆಱತೇನುಮನೊಲ್ಲೆನ್ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂ ಬೇೞ್ಪೆಂ ನಿಮ್ಮಂತಃಪುರಮುೞಿಯೆ ಪೊೞಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಛೆಯೊಳ್ ಮೆಚ್ಚಿದಂತೆ ಬಾೞ್ವೆನೀ ದಾಯಮಂ ಬೇಡಿರ್ದೆನಿದನೆನಗೆ ದಯೆಗೆಯ್ದು ಸಲಿಸುವುದೆಂದೊಡರಸನುಮಂತೆಗೆಯ್ಯೆಂದು ಗಜಕುಮಾರಂಗೆ ಬೇಡಿದುದಂ ಕೊಟ್ಟಂ

ಗಜಕುಮಾರನುಂ ತನ್ನ ಬೇಡಿ[1]ದ ವರಮಂ[1] ಪೆತ್ತು ಪರದರ ಪಾರ್ವರೊಕ್ಕಲಿಗರ ಸಾಮಂತರ ಪೊೞಲೊಳಗುಳ್ಳ ಒಳ್ಪೆಂಡಿರೆಲ್ಲರಂ ಕಣ್ಗಂ ಮನಕ್ಕಂ ಮೆಚ್ಚಿದವರೊಳ್ ತನ್ನಿಚ್ಛೆಯಿ[2]ಂದಂ ಮೊಱೆದು[2] ಮೊಟ್ಟಯಿಸಿ[3]ಯುಯ್ದು[3]ಬಾೞುತ್ತಿರೆ ಮತ್ತಮಾ ಪೊೞಲೊಳ್ [4]ಪಂಗುಳ[4]ನೆಂಬ ಸುವರ್ಣ[5]ಗಾಱ[5]ನ ಪೆಂಡತಿ ವಸುಂಧರಿಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವಭಾವವಿಲಾಸ ವಿಭ್ರಮಂಗಳನೊಡೆಯೊಳಂ ಕಂಡು ಗಜಕುಮಾರನಾಕೆಗಾಟಿಸಿ ತನ್ನ ಮನೆಯೊಳಿಟ್ಟಾಕೆಗಾಸಕ್ತನಾಗಿ ಬಾೞುತ್ತಿರ್ಕುಮಾ ಏರಣಿಗನುಂ ಪೆಂಡತಿಯ ವಿಯೋಗದೊಳ್ ಸಂತಾಪದಿಂದಮಿರುಳುಂ ಪಗಲುಮನವರತಂ ಬೇ[6][ಯು][6]ತ್ತಮಸಮರ್ಥನಪ್ಪುದಱಿಂದಂ ಮನದೊಳ್ ಗಜಕುಮಾರಂಗೆ ಮುಳಿಯುತ್ತಿರ್ಕುಂ

ಇಂತು ಪಲಕಾಲಂ ಸಲೆ ಮತ್ತೊಂದು ದಿವಸಮರಿಷ್ಟನೇಮಿ ಭಟ್ಟಾರರ ಸಮವಸರಣಂ ವಿಹಾರಿಸುತ್ತಂ ದ್ವಾರಾವತಿಗೆ ವಂದೊಡೆ ವಿಷ್ಣುವಿನೊಡನೆ ಗಜಕುಮಾರಂ ತ್ರಿಭುವನ ಪರಮೇಶ್ವರನಲ್ಲಿಗೆ ಪೋಗಿ ವಂದಿಸಿ ಪೂಜಿಸಿರ್ದು ಭಟಾರರ್ ಧರ್ಮಮಂ ಪೇೞ್ವಲ್ಲಿಯುಗಮ್ಯಾಗಮನಂಗೆಯ್ವೊಡಂ ಪೆಱರ ಸಜ್ಜನಂಗಳೊಳ್ ಬ[7]ದ್ದೊಡಮೆಯ್ದುವ[7] ದುರ್ಗತಿಗಳೊಳಪ್ಪ ದುಃಖಂಗಳಂ ಪೇೞೆ ಕೇಳ್ದು ನಾನ್ಯಥಾಜಿನಭಾಷಿತಮೆಂದು ನಂಬಿ ಭೋಗಂಗಳ್ಗೆ ಪೇಸಿ ವೈರಾಗ್ಯಮಾಗಿ ಎಲ್ಲಮಂ ತೊಱೆದರಿಷ್ಟನೇಮಿ ಭಟ್ಟಾರರ ಪಕ್ಕದೆ ತಪಂಬಟ್ಟುಗ್ರೋಗ್ರ ತಪಶ್ಚರಣಂಗೆಯ್ದು ಪನ್ನೆರಡು ವರ್ಷಂ ಪೋದೊಡೆ [8]ಗ್ರಾಮನಗರಖೇಡಖರ್ವಡ ಮಡಂಬಪಟ್ಟಣ ದ್ರೋಣಾಮುಖಂಗಳಂ[8] ವಿಹಾರಿಸುತ್ತಂ ಮತ್ತಮಾ ದ್ವಾರಾವತಿಗೆ ವಂದು [9]ರೇವತೋ[9]ದ್ಯಾನ ವನದೊಳ್ ರಾತ್ರಿ ಪ್ರತಿಮೆನಿಂದೊನಂ ಸ್ವಜನ ಪರಿಜನ ಬಂಧುವರ್ಗಮುಂ ಶ್ರಾವಕರ್ಕಳುಂ ಬಂದರ್ಚಿಸಿ ಪೊಡೆವಂಟು ಪೋಪರಂ [10]ಪಂಗುಳ[10]ನೆಂಬ ಸುವರ್ಣಕಾರಕಂ ಕಂಡು ಬೆಸಗೊಂಡು ಭಟಾರರ ಬರವಂ ಕೇಳ್ದಱಿದು ಪಗೆ[11]ವನ[11]ನಿಱಿಯಲ್ಪೆತ್ತೆನೆಂದು ರಾಗಿಸಿ ಪಲವು ನಿಡಿಯವುಂ ತೋರಮುಮಪ್ಪ ಕಬ್ಬೊನ್ನ ಕೀಲ್ಗಳಂ ಕೊಂಡು ಬಂದು ಕ್ಷಮಾಂಗನಾಲಿಂಗಿತನಪ್ಪ ಮಹಾಮುನಿಯಂ [12]ಮಲರ್ಚಿ[12] ಪಟ್ಟಿರಿಸಿಯುರಃಸ್ಥಲಮಂ ನಾಭಿವರೆಗಂ[13]ವಿದಾರಿಸಿ ಪಂದೊವಲ್ ಪೊರೆತಾಪಿನೆಗಂ[13] ಸಮ[14]ನ್ತ[14]ವಯವ

1 ದುಪಂ (ಛ). 2 ದ ಮೆಳೆದು (ಕಖಗ), ದಂ ಮೆಱೆದು (ಘಚ). 3 (ಘಚಛ) ಗಳಲ್ಲಿಲ್ಲ. 4 ಪಿಂಗಲ (ಘಚ), ಪಿಂಗಳ (ಛ). 5 ಕಾರ (ಘಚ), ಕಾರಕ (ಛ). 6 ವು (ಕಖಗಘಚಜ). ಡು (ಛ). 7 ದುರ್ಗೆಯ್ಪ (ಚ), ದರ್ಡುಮೆಯ್ದುವ (ಕಖಗ). 8 (ಘ) ದಲ್ಲಿ ಇಲ್ಲ; ಗ್ರಾಮೇಕರಾತ್ರಂನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ನಾನಾ ದೇಶಂಗಳಂ (ಚಛ). 9 ಪ್ರಮದೋ (ಘಚಛ). 10 ಪಿಂಗಲ (ಘಚಛ). 11 ಯ (ಕಖಗ). 12 ಮರಳ್ಚಿ (ಘಛ), ಮರಲ್ಚಿ (ಚ). 13 ಬೆಂದೋಲ್ತೊಲುಗಿದು (ಕಖಗ), ವಿದಾರಿಸಿಬಂದೊಲ್ಪರೆತಾಪಿನೆಗಂ (ಘಛ). 14 ಸ್ತ (ಕಖಗ).

ಪ್ರದೇಶಂಗಳೊಳ್ ಕಾಯ್ದ ಕರ್ಬೊನ್ನ ಕೀಲ್ಗಳಂ ನೆಲನಂ ತಾಪಿನಮುೞ್ಚಿ ಪೋಗಿ[1]ಱಿ[1]ದೊಡೆ ಕ್ಷಮೆಯುಂ ಭಾವಿಸಿ ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ರತ್ನತ್ರಯಮಂ ಸಾಧಿಸಿ ಸಮಾಧಿಮರಣದಿಂ ಮುಡಿಪಿ ದೇವಲೋಕಮೆಂಬ ಪ್ರಾಸಾದಕ್ಕೆ ಕಳಸಮಾಗುತ್ತಿರ್ದ್ದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಸ್ಥಿತಿಯನೊಡೆಯನೇಕ ಹಸ್ತಪ್ರಮಾಣನುಂ [2]ಪುಂಡರೀಕವರ್ಣಂಗಳನೊಡೆಯೊ[2]ನಹಮಿಂದ್ರ ದೇವನಾಗಿ ಪುಟ್ಟಿದೊಂ

ಮತ್ತಂ ಪೆಱರುಮಾರಾಧಕರಪ್ಪವರ್ಗಳ್ ಗಜಕುಮಾರನ ಮನುಷ್ಯೋಪಸರ್ಗದೊಳಾದ ವೇದನೆಯುಂ ಮನದೊಳ್ ಭಾವಿಸುತ್ತಂ ಪಸಿವು ನೀರೞ್ಕೆ ದಾಹವಾತಂ ಸೂಲೆ ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿಮರಣದಿಂದಂ ಮುಡಿಪಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

[1] ಳಿ (ಛ). [2] (ಕಖಗ) ಗಳಲ್ಲಿಲ್ಲ.

## ೪. ಸನತ್ಕುಮಾರ ಚಕ್ರವರ್ತಿಯ ಕಥೆ

ಸನತ್ಕುಮಾರ ಚಕ್ರವರ್ತಿಯ ಕಥೆಯಂ ಪೇೞ್ವೆಂ :

ಗಾಹೆ ॥ [1]ಕಚ್ಛುಜರಖಾಸ ಸೋಸೋ ಭತ್ತಚ್ಛದಿ ಅಚ್ಛಿಕುಚ್ಛಿದುಕ್ಖಾಣಿ ।
ಅ[2][ಧಿಯಾಸಿ][2]ದಾಣಿ ಸಮ್ಮಂ ಸಣಂಕುಮಾರೇಣ ವಾಸಸದಂ ॥

[[3]ಕಚ್ಛು—ಕೆರಕುಂ, ಜರ—ನರೆಯುಂ,[3] ಖಾಸ—ಕೆಮ್ಮುಂ, ಸೋಸೋ—ಬಾಯರ್ ಬತ್ತುವುದುಂ, ಭತ್ತಚ್ಛದಿ—ಛರ್ದಿಯುಂ, ಅಚ್ಛಿಕುಚ್ಛಿದುಕ್ಖಾಣಿ—ಕಣ್ಣ ಬಸಿಱ ಬೇನೆಗಳುಮೆಂದಿವು ಮೊದಲಾಗೊಡೆಯ, ಅ[ಧಿಯಾಸಿ]ದಾಣಿ—ಸೈರಿಸೆಪಟ್ಟವು, ಸಮ್ಮಂ—ಒಳ್ಳಿತ್ತಾಗಿ, ಸಣಂಕುಮಾರೇಣ—ಸನತ್ಕುಮಾರ ಚಕ್ರವರ್ತಿರಿಸಿಯಿಂದಂ, ವಾಸಸದಂ—ನೂಱು ವರುಷಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕುರುಜಾಂಗಣಮೆಂಬುದು ನಾಡಲ್ಲಿ ಹಸ್ತಿನಾಪುರಮೆಂಬುದು [4]ಪೊೞಲ[4]ದನಾಳ್ವೊಂ ವಿಶ್ವಸೇನ ಮಹಾರಾಜನೆಂಬರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವರ್ಗ್ಗಂ ಸನತ್ಕುಮಾರನೆಂಬೊಂ [5]ಪುಟ್ಟಿದೊನಾತಂ ಸರ್ವಲಕ್ಷಣಸಂಪೂರ್ಣಂ ಸಕಳಕಳಾಪಾರಗಂ ಚೆಲ್ವಿನಿಂ ದೇವಾಸುರರ್ಕ[6]ಳಂ[6] ಗೆಲ್ವ ರೂಪನೊಡೆಯನಾತಂಗೆ ಕೆಳೆಯಂ ಸಿಂ[7]ಹ[7]ವಿಕ್ರಮನೆಂಬ ಸಾಮಂತನ ಮಗಂ ಮಹೇಂದ್ರಸಿಂಹನೆಂಬೊನಂತವರ್ಗ್ಗನ್ಯೋನ್ಯ ಪ್ರೀತಿಯಿಂದಂ ಕಾಲಂ ಸಲೆ

ಮತ್ತೊಂದು ದಿವಸಂ ಏಕಚಕ್ರಪುರಾ[8]ಧೀಶಂ[8] ಭೂರಾಮನಾಮಧೇಯನಪ್ಪ [9]ಶತ್ರುಂದಮಂ[9] ವಿಶ್ವಸೇನ ಮಹಾರಾಜಂಗೆ ಪಾಗುಡ[10]ಮನಟ್ಟಿ[10] ಪಟ್ಟ[11]ವಾರಮರಗಮೆಂಬ[11]ದುಷ್ಟಾಶ್ವಮಂ ಕುಮಾರನೇಱಿ ಲಕ್ಷ್ಮೀಗೃಹಮೆಂಬುದ್ಯಾನವನದ ಮಧ್ಯ[12]ಸ್ಥಮಪ್ಪ[ಸ್ಥಲದೊಳ್]ಸಲ್ವನಾ ದುಷ್ಟಾಶ್ವಮಂ ಕೊಸೆಗೊಳೆ ಗಾಳಿಯಿಂದಂ ಬೇಗಮಾಗಿ ವಾರಿತಪೂರಿತಂ ಪರಿದು ಕುಮಾರನಂ ಕೊಂಡು ಮಹಾಟವಿಯಂ ಪೊಕ್ಕೊಡಿತ್ತ ವಿಶ್ವಸೇನ ಮಹಾರಾಜನ ಮಹಾಸಾಮಂತರ್ಕಳುಂ ಪರಿವಾರಮುಮೆಲ್ಲಂ ಕುದುರೆನಡಿವಜ್ಜೆಯಂ ನೋಡಿ ನಾಡೆ*ಗೆಟ್ಟುಪೋಗಿ [12]ಮೂಱನೆಯ ದಿವಸಮಂದು

---

[1] ಕಂಭಂಕಂ ಕಂಭ (ಘಚಛ). [2] ಡಿಹಾಸಿ (ಕಖಗ), ವಿಹಾಸ (ಘಚಛ). [3] ತತ್ಸ ಕೆರಕುಂ ಜ್ವರನೆಯ್ಗಳುಂ (ಕಖಗ), ಕಂಭಂಕಂ-ಕೆರಕುಂ ಜ್ವರನರೆಯುಂ (ಛ). [4] ಪುರಮ (ಕಖಗ). [5] + ಮಗಂ (ಛ). [6] ಳ್ಮಂ (ಗ). [7] ಗ (ಕಖಘ). [8] ಧಿಪತಿ (ಕಖ) ಧಿಪಂ (ಗ). [9] ಸತ್ರುವಿಂದಂ (ಕಗ), ಶತ್ರುವಿಂದಂ (ಖ). [10] ಮಟ್ಟೆ (ಕಖಗ). [11] ವಾರತುರಗವೆಂಬ (ಗ), ವಾಂತ (ಘಛ), ವಾಹನ (ಚ). [12] ಈ ಭಾಗ (ಕಖಗ) ಗಳಲ್ಲಿ ಮಾತ್ರವಿದೆ; ಸ್ಥಲದೊಳ್ ಕುಮಾರನಂದು ದುಷ್ಟಾಶ್ವಮೆತ್ತಿಕೊಂಡು ಪೋಗೆ (ಘಚ), ಸ್ಥಿತಿಕದೊಳ್ (ಛ).
*ಗೆಂಟು ಎಂದಿರಬಹುದೆ ?

ಅಡಿವಜ್ಜೆ ಕೆಟ್ಟೊಡೆ ಪೋದ ದೆಸೆಯನಱಿಯದೆ ಹಾ ಪುತ್ರಾ ಎಂದು ಮಹಾ ದುಃಖಾಕ್ರಾಂತನಾಗಿ ಪ್ರಲಾಪಂಗೆಯ್ವ ನೃಪತಿಯಂ ಮಹೇಂದ್ರಸಿಂಹಂ ಸಂತಯಿಸಿ ಇಂತೆಂದು ನುಡಿದಂ ಕುಮಾರನಂ ಪಾತಾಳಮಂ ಪೊಕ್ಕನಪ್ಪೊಡಮಱಸಿಕೊಂಡು ಬರ್ಪೆಂ ನಿಮ್ಮಡಿ ನೀಮುಬ್ಬೆಗಂಬಡದೆ ಮಗುೞಿಮೆಂದರಸನಂ ಮಗುೞ್ಚಿ ಪರಿವಾ[1]ರಂಬೆರಸು[1] ಮಹಾಟವಿಯಂ [2]ಪೊಕ್ಕು[2] ತೊೞಲ್ದು ನೋ[3][ಟ್ಟಿ][3]ನಂ ಪರಿ[4]ಜನಂಗಳ್ ಕುಮಾರನನಱಸಿ ಕಾಣದೆ ಬೇಸತ್ತು ಮಹೇಂದ್ರಸಿಂಹನಂ ಬಿಸುಟು ಪೊೞಲ್ಗೆ ಪೋದರ್

ಇತ್ತ ಮಹೇಂದ್ರಸಿಂಹನೊರ್ವನೆ ನಾನಾ ವಿಧ ಗಿರಿಗಹನ ವಿಷಯ ವಿಷಮ ಪ್ರದೇಶಂಗ[5][ಳುಮಂ][5] ವ್ಯಾಧನಿವಾಸಂಗ[5][ಳುಮಂ][5] ಯಥಾ[6]ಕ್ರಮದಿಂದಂ ಕೞಿದು ಪೋಗಿ ಪ್ರಿಯಂಗು[7]ಷಂಡ[7]ಮೆಂಬ ವನಮನೆಯ್ದಿ ತದ್ವನ ಮಧ್ಯಸ್ಥ ಗೃಹದೊಳಿರು[8]ತಿರ್ದ್ದ[8] ಮಿತ್ರನ ವಿಯೋಗದೊಳಪ್ಪ ದುಃಖದಿಂದಂ ಕಾರುಣ್ಯಮಾಗೆ ಪ್ರಳಾಪಂ ಗೆಯ್ದು[9]ಟ್ಟು[9] ದೇವತೆಯ ಮುಂದೆ ನಿದ್ರೆಗೆಯ್ದೊಂ ಮನೋಹರಿಯೆಂಬ ಜಾವ[10]ದಾಗಳ್[10] ಕರಿಣೀ ಶತಂಗಳಿಂ ಪರಿವೇಷ್ಟಿತನಾಗಿ ತಿಳಿನೀರ ಕೊಳದೊಳಗೆ ಕ್ರೀಡಿಸುವ ಸೊಕ್ಕಾನೆಯುಮಂ ಫಲಭರಿತಮಾದ ಮಾವಿನ ಮರನುಮಂ ಕನಸಿನೊಳ್ ಕಂಡು ಮನೋರಥ ಸಿದ್ಧಿಯಾಯ್ತೆಂದು ಒಸೆದು ಮಗುೞ್ದು ನಿದ್ರಾವಶಗತನಾದೊನಂ ಕಂಡು ಕರುಣಿಸಿ ಭೂತಾಂಬರನೆಂಬ ವ್ಯಂತರ ದೇವನೆತ್ತಿಕೊಂಡು ಪೋಗಿ ವಿಜಯಾರ್ಧ ಪರ್ವತಕ್ಕಾಸನ್ನಮಪ್ಪ ಭೂತರಮಣಮೆಂಬ ವನದ ನಡು[11]ವಿನೊಳಿರ್ದ್ದ[11] ಕ್ಷುಲ್ಲಕ ಮಾನಸಮೆಂಬ ಸರೋವರದ ತಡಿಯೊಳಿಕ್ಕಿ ಪೋದನ್

ಆಗಳಾತನುಂ ನೇಸಮ್ಮೂಡುವಾಗಳ್ ತೊಂಕಡುಗೆಟ್ಟು ದೆಸೆಗಳಂ ನೋ[12]ಟ್ಟಿಂ[12] ಸಮುದ್ರದೊಳೋರಂತಪ್ಪ [13]ಕೋಕನದ[13] ಕುಮುದ ಕುವಲಯ ಕಲ್ಹಾ[14]ರೇಂದೀವರಾದಿಗಳಿಂದಂ[14] ಹಂಸ ಚಕ್ರ[15]ವಾ[15]ಕ ಬಳಾಕವಿಪಕ್ಷಿಗಣಂಗ[16]ಳ್[16] ನೀರೊಳಗಾಡುತ್ತುಂ[17] ಮುೞುಗುತ್ತುಂ ನಾನಾ ಪ್ರಕಾರದಿಂ[18]ದಂ ಮಾ[18]ೞಲಿವ ದನಿಗಳಿಂದ ಮತಿರಮಣೀಯಮಪ್ಪ ಕೊಳನಂ ಕಂಡಾದನೂನುಂ ವಿಸ್ಮಯಚಿತ್ತನಾಗಿ ಆ ಭೂತರಮಣಮೆಂಬ ವನದೊಳಶೋಕ ಪುನ್ನಾಗ ವಕುಲ ಚಂಪಕ ಸಹಕಾರ ಲವಂಗ ಕ್ರಮುಕ ನಾಳಿಕೇರನಾಗವಲ್ಲೀ[19]ಪಿನದ್ಧ[19]ದ್ರುಮಷಂಡ ಮಂಡಿತ[20]ಮನಿ[20]ಂದ್ರವನದೊಳೋರಂತಪ್ಪುದಂ ನೋಡುತ್ತುಂ ತೊೞಲ್ವೊಂ ತನಗನುಕೂಲಮಪ್ಪ ಶಕುನನಿಮಿತ್ತಂಗ[21][ಳುಮಂ][21] ಕಂಡಿಂದಮೋಘಮೆನ್ನ ಸ್ವಾಮಿಯಂ ಕಾಣ್ಬೆನೆಂದು ಸಂತುಷ್ಟಚಿತ್ತನಾಗಿಯಾ ಬನದ ನಡುವೆ ತೊೞಲ್ವೊಂ ಮೃದುಮಧುರಗಂಭೀರಧ್ವನಿಯೊಳ್

---

1 ರಜನಂಗಳಿಂ ಬೆರಸಿ (ಕಖಗ). 2 (ಕಖಗ) ಗಳಲ್ಲಿಲ್ಲ. 3 ಪ್ಪರ್ (ಕಖಗ). 4 + ವಾರ (ಕಖಗ). 5 ಳ್ಕಂ (ಸ). 6 ಮಂಗಳಿಂ (ಕಖಗ). 7 ಷ್ಮ (ಘಚಛ). 8 ರ್ಳ್ (ಘಚ). 9 ತ್ತು (ಕಖಗಛ). 10 ಜೊಳ್ (ಘಚ). 11 ವೆ (ಚಛ). 12 ಳ್ಪನ್ನೆಗಂ (ಚ). 13 ಕೊಳದ (ಘ). 14 ರ ಕಲ್ಪಾಮರೇಂದ್ರ ದೇವಾದಿಗಳಿಂದಂ (ಕಖಗ). 15 ಬ (ಘ). 16 ಳಿಂದಂ (ಕಖಗ). 17 + ಮೂಡುತ್ತುಂ (ಘಚಛ). 18 ದವ (ಕಖಗ). 19 ವಿನಮ್ರ (ಘಚಛ). 20 ಮಹೇಂ (ಕಖ). 21 ಳ್ಕಂ (ಸ).

ಕೂಡಿದ ಮೃದಂಗವಂಶ ತಾಳಾದಿಗಳ ಧ್ವನಿಗ[1][ಳುಮಂ] ಮಂದ್ರತಾರಲಯಾನ್ವಿತಮಾಗೆ[2] ಕಿವಿಗಂ ಮನಕ್ಕಂ ಸೊಗಯಿಸುವಂತಪ್ಪ [3]ಪಾಟವು[3]ಮಂ ಕೇಳ್ದು ಹರಿಚಂದನ ಕಾಳಾಗರು ಮಲಯಜ ತುರುಷ್ಕಾದಿಗಳ ಕಂಪು ಬಂದು ತೀಡಿದೊಡಿದು ದೇವನಿವಾಸಮಕ್ಕುಮೆಂದು ಬಗೆದು ಭಯಾಶ್ಚರ್ಯದಿಂದಂ ವ್ಯಾಕುಳಿತ ಮನದೊನಾಗಿ ಇನ್ನಿದನಮೋಘಂ ನೋೞ್ಪೆನೆಂದಾ ದೆಸೆಗಾಗಿ [4]ಸಲ್ವನಂ[4] ಕನತ್ಕನಕವಿನಿರ್ಮಿತಮಂ ನಾನಾಮಣಿಗಣ [5]ಪಿನದ್ಧಮುಂ ಚಳತ್ಕೇತುಪತಾಕಾದ್ಯಮುಂ[5] ವಿದ್ಯಾಧರ ಯುವತೀ ಜನಕ್ರೀಡನಾರ್ಥಮಪ್ಪ ಪ್ರಾಸಾದಮಂ ಕಂಡು ವಿಸ್ಮಯಚಿತ್ತನಾಗಿಯದಱ ಸಮೀಪಕ್ಕೆ ಸಾರ್ದೊಂದು ಮರನಂ ಮಱೆಗೊಂಡು ನೋೞ್ಪೊಂ ತತ್ಪುರಃಸ್ಥಿತಮಪ್ಪ ಮಣಿಮಂಟಪದೊಳ್ ದಿವ್ಯಸ್ತ್ರೀಜನಂಗಳ್ [6]ವಿಲಾಸದಿಂ[6] ಚಾಮರಮಿಕ್ಕೆ ದಿವ್ಯಶಯ್ಯಾತಳದ ಮೇಗಿರ್ದು ನಾಟಕಮಂ ನೋೞ್ಪ ಕುಮಾರನಂ ಕಂಡು ಹರ್ಷಚಿತ್ತದಿಂದಂ ಕುಸುಮಿತ ಕದಂಬ ವೃಕ್ಷಂಬೊಲ್ ಕಂಟಕಿತ ರೋಮಾಂಚಿತಗಾತ್ರನಾಗಿ[7] ಘರಿದು ಮರ್ಪೊನಂ [8]ಕಂಡಿದಿರೆ[9]ಯ್ದೆ[ಯಾ][9]ತನಂ ಕುಮಾರನ ಚರಣಾರವಿಂದಂಗಳ್ಗೆ[10]ಱಗಿ ಬಿರ್ದು ಮೂರ್ಛಾಗತನಾದೊಡಾಗಳ್ ಶೀತಳ ಕ್ರಿಯೆಗಳಿಂದೆೞ್ಚತ್ತುಱುದಿಂಗ[11]ಳಿಂ[11]ಕಂಡೆಂ ಸ್ವಾಮಿ [12]ನಿನ್ನಂ ನಂಬಿರ್ದೆ[12]ನಾನೆಂದು ಮಹಾದುಃಖದಿಂದೞ್ವನಂ ಸಂತಯಿಸಿ ವಿಪುಳಶ್ರೀಯೆಂಬ[13]ವಿದ್ಯಾಧರ[13]ವಿಳಾಸಿನಿಯುಂ ಕರೆದಿಂತೆಂದು ಪೇೞ್ದಿನೆನ್ನ ಸಹೋದರನೆಂತುಂ ಶ್ರಮಮಂ ನೀಗಿ ಸುಖದಿಂ ತಣಿದೊನಕ್ಕುಮಂತಾಗೆ ಸ್ನಾನಪಾನಭೋಜನಾದಿ ಕ್ರಿಯೆಗಳಿಂ ಬೇಗಂ ಮಾಡೆಂದು ಪೇೞ್ದೊಡಾಕೆಯುಮಂತೆಗೆಯ್ವೆನೆಂದಾತನಂ ಮಹಾ ವಿಭೂತಿಯಿಂದಂ ವಿದ್ಯಾಧರ ವಿಲಾಸಿನಿ ಮಜ್ಜನಂಬುಗಿಸಿ ದಿವ್ಯಾಹಾರಮನೂಡಿ ವಸ್ತ್ರಾಭರಣ ಗಂಧಮಾಲ್ಯಾದಿ ತಾಂಬೂಲಾದಿಗಳಿಂ ತಣಿಪಿದಾಗಳಾತನುಂ ಮುನ್ನಿನ ದುಃಖಮೆಲ್ಲಮಂ ಮಱೆದಂ ಮುನ್ನಂ ಕ್ಲೇಶಭಾಗಿಯಪ್ಪ ಪುರುಷಂ ಸ್ವರ್ಗಮನೆಯ್ದಿ [14]ಮಾಱ[ಪ್ಪೊ]ಲೆ[ಆ]ಯ್ತಾ[14]ಗಳಲ್ಲಿಂ ಬಂದು ಕುಮಾರನೋರಾಸನದೊಳಿರ್ದು ಸರ್ವಾಭರಣ ಭೂಷಿತನಾಗಿ ನೇತ್ರ ಮನೋ[15]ಹರಿಯೆಂಬ[15] ದಿವ್ಯ ಸಭೆಯಂ ನೋಡಿ ವಿಸ್ಮಯಚಿತ್ತನಾಗಿ ಇಂತೆಂದಂ ಸ್ವಾಮಿ ವ್ರತಶೀಲೋಪವಾಸ ತಪಶ್ಚರಣ ಸಂನ್ಯಸನಾದಿ [16]ಶುಭಾ[16]ನುಷ್ಠಾನ ಕ್ರಿಯೆಗಳಿಂ ಸತ್ಪುರುಷಂ ಮಱುಭವದೊಳ್ ದೇವಾಂಗನೆಯ[17]ರ್ಕಳ[17]ಱಿಯನಕ್ಕುಂ ನೀಮೀ ಭವದಿಂದಿಂತಪ್ಪ ವಿಭವಮನೆಯ್ದಿದಿರಿದೆನಗೆ ಮಹಾವಿಸ್ಮಯಮೆನೆ ಕುಮಾರನಿಂತೆಂದ ನಿಮರ್ಗ್ಗಳ್ ದೇವಕನ್ನೆಯರಲ್ಲರ್ ವಿದ್ಯಾಧರಿಯರ್ಕಳಿನೆ ಇವರ್ಗ್ಗಳಂ ನೀಮೆಂತು

---

1 ಳ್ಕಂ (ಸ). 2 + ಪಾಡುವಂ (ಕಖಗ). 3 ಗೀತಮು (ಘಚಛ). 4 ಸಾರ್ವಂ (ಘಚಛ). 5 ವಿನಪಮಪ್ಪ ಪಲತೆಱದ ಕೌತುಕಮಂ (ಘಚಛ). 6 ಲಟಪದಿಂ (ಘಚಛ). 7 + ಮಹೇಂದ್ರಸಿಂಹಂ (ಘಚಛ). 8 + ಸನತ್ಕುಮಾರಂ (ಘಚಛ). 9 ಳ್ದುಮಾ (ಕಖಗ). ಯ್ದುಮಾ (ಖ), ಳ್ದು ಬಂದ (ಘಚಛ). 10 + ಮಹೇಂದ್ರಸಿಂಹನೆ (ಘಚಛ). 11 ಳಿಂಗೆ (ಘಚಛ). 12 ನಿನ್ನಿಂಬಾೞ್ವೆ (ಘಚಛ). 13 ಬಿಂಬಾಧರ (ಘಚಛ). 14 ಮಾಱಪ್ಪೊಲೆಯಾ (ಗ), ಮಾಱಪ್ಪೊಲೆಂದಾ (ಕಖ), (ಘಚಛ). 15 ಹಾರಿಯಪ್ಪ (ಘಚಛ). 16 ಸುಖಾ (ಕಖಗ). 17 ರ್ಗೆ (ಘಚಛ).

ಪೆತ್ತಿರೆಲ್ಲಿ ಮೇಣಾವ ಸ್ವರೂಪದಿಂ ಬಂದಿರಿದನೆನಗೆ ತಿಳಿಯೆ ಪೇೞ್ವೆನೆ ಕುಮಾರ ನಿರುಳೆಲ್ಲಮತಿರಂಜನೆಯೆಂಬ ನಾಟಕಮಂ ನೋಡಿ ನಿದ್ರಾಸುಖಮಂ [1]ಪೆಱದೊನಾ[1] ಕಮಳಮತಿಯೆಂಬ ವಿದ್ಯಾಧರ ವಿಳಾಸಿನಿಯಂ ವಿದಗ್ಧೆಯುಂ ಕರೆದೆನ್ನ ಸಂಬಂಧಿಯಪ್ಪ ಕಥೆಯೆಲ್ಲಮಂ ಮಹೇಂದ್ರಸಿಂಹಂಗೆ ಪೇೞ್ಮೆಂದು ನಿದ್ರಾವಶಗತನಾಗಿ ವಾಸಗೃಹಮಂ ಪೊಕ್ಕನಿತ್ತಾಕೆಯುಮಾತಂಗಿಂತೆಂದು ಪೇೞಲ್ ತಗುಳ್ದಳ್

ಕುಮಾರನಿಂದಾರೂಢಮಪ್ಪ ದುಷ್ಟಾಶ್ವಂ ಕುಮಾರನಂ ಕೊಂಡು ಮನೋವೇಗದಿಂ ಗಿರಿ ವನ ದರಿ ನದೀಪ್ರದೇಶಂಗಳೊಳ್ ಮೂಱುದಿವಸಮಿರುಳುಂ ಪಗಲುಂ ಪರಿಯುತ್ತಿರ್ದುದು ಕರುಳ್ ಪಱಿದು ತೆಗಲೆಯೊಡೆದು ಕಾಲಂಗೆಯ್ದತ್ತಾಗಳ್ ಕುಮಾರನುಂ ಪಸಿವುಂ ನೀರ್ಅಟ್ಕೆಯಿಂ[2]ದಮಾದಂ ಬಾಧಿಸೆಪಟ್ಟು[2] ಬಸಮೞಿದು ಪಿರಿದೊಂದಾಲದ ಮರದ ಕೆೞಗೆ ಶಿಲಾತಳದ ಮೇಗೆ [3]ಪಟ್ಟಿರ್ದ್ದ[3]ನಾಗಳಲ್ಲಿಯಾ ವಟವೃಕ್ಷವಾಸಿಯಪ್ಪ ಮನೋಹರನೆಂಬ ಯಕ್ಷಂ ಕಂಡೀ ಪುರುಷಂ ಸಕಲಚಕ್ರವರ್ತಿಯಪ್ಪನೆಂದಱಿದು ಗಂಧೋದಕಮಂ ಮೇಲೆ ತಳಿದು ತಣ್ಗಾಳಿಯಂ ವಿಗುರ್ವ್ವಿಸಿ ದೇಹಕ್ಕಾಪ್ಯಾಯನಂ ಮಾಡಿ ಸ್ವರ್ಣ ಭಾಜನದಿಂದಾಮೋದ ಸುಗಂಧಮಪ್ಪ ಕೋಡುವ ನೀರನಾತಂಗೆ ಕುಡಿಯಲೆಱ್ದನಾಗಳ್ ಕುಮಾರಂ ನೀನಾರ್ಗ್ಗೀ ನೀರನೆಲ್ಲಿಂ ತಂದಯ್ ಪೇೞ್ಮೆಂದು ಬೆಸಗೊಂಡೊಡಾತನಿಂತೆಂದನಾನೀ ವಟವೃಕ್ಷನಿವಾಸಿಯೆನ್ ಮನೋಹರನೆಂಬ ಯಕ್ಷನೆನ್ ಕ್ಷುಲ್ಲಕಮಾನಸಮೆಂಬ [4]ಸರೋವರದಿಂ[4] ತಂದೆನೀ ನೀರನೆನೆ ಅಂತಪ್ಪೊಡೆ ನೀನೆನ್ನನಾ ಕೊಳ್[5]ಕ್ಕೊಡಗೊಂಡು[5] ಪೋಗಲ್ಲಿಯಾ ನೀರಂ ಮಿಂದು ಕುಡಿದೊಡಲ್ಲದೆನಗೆ ನೀರಟ್ಕೆ ಕಿಡದೆಂದು ಪೇೞ್ದೊಡೆ ಕುಮಾರನನೆತ್ತಿಕೊಂಡು ಪೋಗಿ ಯಕ್ಷನಾ ಸರೋವರದ ತಡಿಯೊಳ್[6]ಟಿಸಿ[6] ಪೋದನ್

ಆ [7]ಅನಸರದೊಳ್[7] ಸಿತಕ್ಷಯನೆಂಬ ವ್ಯಂತರದೇವಂ [8]ಕುಮಾರನ ಪೂರ್ವವೈರಿ ಭೌಮವಿಹಾರಕ್ಕೆ ಬಂದು ಕುಮಾರನಂ ಕಂಡು ಕ್ರೋಧಾಗ್ನಿ ಪೆರ್ಚ್ಚೆ ಭೈರವ ರೂಪಧಾರಿಯಾಗಿ ಕಳಕಳಧ್ವನಿಯಿಂದಂ ಗರ್ಜಿಸಿ ಬರ್ಪ್ಪನಂ ಕಂಡಾಗಳ್ ಸಿಂಹನಾದಂಗೆಯ್ದು ಖಟ್ಗಸನ್ನಿಭಮಪ್ಪ ಮಹಾಶಿಲೆಯಂ ಕಿೞ್ತಿತ್ತಿಕೊಂಡು ಪ್ರತಿರಾಕ್ಷಸಂಬೊಲ್ ನಿಂದ ಕುಮಾರನಂ ನೋಡಿ ವ್ಯಂತರದೇವಂ[8] ನಾಗಪಾಶದಿಂದಂ ವೇಷ್ಟಿಸಿದೊಡೆ ಕುಮಾರನದಂ ಹಸ್ತತಳದಿಂ ಪಱಿಯೆ ಪೊಯ್ದನಾಗಾಳಾ ದೇವಂ ನಾನಾವಿಧ ಮಾಯಾ ಯುದ್ಧಂಗಳಿಂ ಕಾದೆ ಕುಮಾರನಂ ಯಷ್ಟಿ ಮುಷ್ಟಿ ಪ್ರಹಾರಾದಿಗಳಿಂ ಗೆಲ್ದಿರ್ದ್ದನನೆತ್ತಿಕೊಂಡು ಸಮುದ್ರದ ಬಡವಾಮುಖದೊಳಿಕ್ಕಿ ಕೊಲ್ವೆನಮೋಘಮೆಂದು ನೆಲದಿಂದು[9]ರ್ಬಿ[9] ಬಂದಾಕಾಶಕ್ಕೆ ನೆಗಪಿದೊನ ಸ್ಕಂಧಮಂ ತಿವಿದೊಂ ಕುಮಾರನ [10]ಅವೃಷ್ಟಿ ವಜ್ರಘಾತಂಬೊಲಪ್ಪ[10] ಮುಷ್ಟಿಯಿಂ ದಿವ್ಯಪುರುಷನ

[1] ಪಿರಿದೊಂವ (ಕಖ), ಪಿರಿದೊಂವ (ಗ), ಪಿಱುದೊನನಾ (ಘಛ). [2] ಸೇದೆವಟ್ಟು ಮಱೆವಂತಾ (ಘಚಛ). [3] ನಿದ್ರೆಗೆಯ್ದ (ಕಖಗ). [4] ಕೊಳದಿಂ (ಘಚಛ). [5] ಕ್ಕೆ ಕೊಂಡು (ಕಖಗ). [6] ರಿಸಿ (ಚಛ). [7] ಸರೋವರದೊಳ್ (ಘಚಛ). [8] (ಘಚಛ) ಗಳಲ್ಲಿ ಇಲ್ಲ. [9] ರ್ಚಿ (ಕಗ). [10] ನುಂ ಅಮುಷ್ಟಿ ವಜ್ರಘಾತಮೆಂಬೊಲಾ (ಕಗ), ನವಜ್ರಘಾತಂಬೊಲಪ್ಪ (ಘಚಛ).

ಹಸ್ತ ಪ್ರಹಾರಮೆಂಬ [1]ಮುದ್ರಾಪೀಡೆಯಿಂ[1] ತ್ರಸ್ತಾ[2]ಭಿಭೂ[2]ತನಾಗಿ ಬೆನ್ನಿತ್ತೋಡಿದ ನಾಗಳ್ ತನ್ನಿವಾಸಿಗಳಪ್ಪ ಯಕ್ಷ ಕಿನ್ನರಾದಿಗಳ್ ಮಸ್ತಕದೊಳ್ ನ್ಯಸ್ತಹಸ್ತರ್ಕ್ಕಳಾಗಿ ಜಯಜಯ [3]ಶಬ್ದಂಗಳಿಂದಂ[3] ಪು[4]ಷ್ಪಾ[4]ದಿಗಳಿಂ ಕುಮಾರನಂ ಪೂಜಿಸಿದರ್

ಆ ಅವಸರದೊಳಿಂದ್ರಪ್ರಭನೆಂಬ ವಿದ್ಯಾಧರಂ ಬಂದು ಕುಮಾರನ ಚರಣಾರವಿಂದಂಗಳ್ಗೆಱಗಿ ಪೊಡೆವಟ್ಟಿಂತೆಂ[5]ದನ್ ಸ್ವಾ[5]ಮಿ ಮೂವತ್ತಾಱು[6] ವರುಷಂ ನಿನ್ನ ಬರವನಾನೆನ್ನರಸನ ಬೆಸದಿಂ ಪಾರುತ್ತಿರ್ದ್ದೆಂ ನೀನೆನ್ನ ಭಾಗ್ಯದಿನಿಲ್ಲಿಗೆ ಬಂದಯ್ ಏಱು ವಿಮಾನವನೆನೆ ಅಂತೆಗೆಯ್ವೆನೆನ್ನ ಬಯಕೆಯಂ ತೀರ್ಚಿ[7]ದಬೞಿಕ್ಕೇ[7]ಱುವೆನೆಂದು ಕೊಳನಂ ಪೊಕ್ಕು ಸ್ವೇಚ್ಛೆಯಿಂ [8]ಕ್ರೀಡಿಸಿ[8] ಪೊಱಮಟ್ಟನನಾ ಖೇಚರಂ ಕೊಂಡು ಪೋಗಿ ತದ್ವನದೊಳತಿ ರಮಣೀಯಮಪ್ಪ ಪ್ರದೇಶದೊಳಾಡುತ್ತಿರ್ದ್ದ ವಿದ್ಯಾಧರ ಕನ್ನೆಯರ್ಕ್ಕಳ ಪಕ್ಕದಿರಿಸಿ ಪೋದನ್ ಇತ್ತ ಖೇಚರ ಕನ್ನೆಯರ್ಕಳ ಕಣ್ಗಳೆಂಬ ಮೀಂಗಳ್ ಕುಮಾರನ ರೂಪೆಂಬ ಗಾಳದಿಂ ತೆಗೆಯೆಪಟ್ಟು [9]ತಪನ[9] ತಾಪನ ದಹನ ವಿ[10]ಮೋಹನ ಮ[10]ರಣ ಸ್ವರೂಪದ ಕಾಮ ಶರಂಗಳವರ್ಗ್ಗಳೆರ್ದೆಯನುರ್ಚಿಪೋಗಿ ಪರವಸೆಯರಾಗಿ ಮಱುಗಿದಱುನೀರ ಮೀಂಗಳ್ವೊಲಾದರಿದೇಂ ಚೋದ್ಯಮೊ ಕುಸುಮ ಬಾಣನ ಬಿಲ್ಬಲ್ಮೆ

ಶ್ಲೋಕ ॥ ಅಹೋ ಧನುಷಿ ಕೌಶಲ್ಯಂ ಮನ್ಮಥಸ್ಯ ಮಹಾತ್ಮನಃ ।
ಅಸ್ಪೃಶನ್ನಪಿ ಗಾತ್ರಾಣಿ ಭಿನತ್ತ್ಯಂತರ್ಗತಂ ಮನಃ ॥

ಇವರ್ಗ್ಗಳ್ [11]ತ[11]ನ್ಮುಖ ನಿರೀಕ್ಷಣದೊಳಾಸಕ್ತೆಯರಾಗಿರ್ದ್ದರಾಗಳಾ ಇಂದ್ರಪ್ರಭನೆಂಬ ವಿದ್ಯಾಧರಂ ಪ್ರಿಯ[12]ಸಂಗ[12]ಮಮೆಂಬ ಪೊಬಿಲನೆಯ್ದಿ ಭಾನುವೇಗನೆಂಬ ವಿದ್ಯಾಧರಂಗೆ ಪೇೞ್ದಿನಾದೇಶ ಪುರುಷನಂ ತಂದು ಭೂತರಮಣದ ಜ್ಯೋತಿರ್ವಿತಾನಮೆಂಬ ಮಣಿಮಂಟಪದೊಳ್ ಕನ್ನೆಯರ ಪಕ್ಕದಿರಿಸಿ ಬಂದೆನೆನೆ ಆಗಳಾತಂಗೆ ತಣಿವಿನೆಗಂ ತುಷ್ಟಿದಾನಂಗೊಟ್ಟು ವಿಪುಳಶ್ರೀಯೆಂಬ ಖೇಚರಿಯಂ ಕರೆದಿಂತೆಂದಂ ಶೀಘ್ರಂ ಪೋಗಿ ಕೀರ್ತಿಧವಳಂಗೆ ಭೋಜನಾದಿ ವಿಧಿಯಂ ಮಾಡೆಂದು ಪೇೞ್ದೊಡಾಕೆಯುಮಂತೆಗೆಯ್ವೆನೆಂದು ಸಪರಿವಾರಂಬೆರಸು ಬಂದಾತಂಗೆ ಮಜ್ಜನ ಭೋಜನ [13]ಪ್ರಸಾಧ[13]ನಾದಿಗ[14]ಳುಮಂ ಮಾಡಿ[14] ಮತ್ತೆ ಕುಮಾರನಂ ದಿವ್ಯಶಯ್ಯಾತಳದೊಳ್ ಸುಖದಿನಿರಿಸಿ ಅನಂಗ[15]ಸುಂ[15]ದರಿಯೆಂಬ ವಿದ್ಯಾಧರಿಯನಾಡವೇೞ್ದು ನಾಟಕಮ [16]ನಭಿನಯಿ[16]ಸುತ್ತಂ ಕುಮಾರನ ಮುಂದೆ ವಿನಯಾನ್ವಿತೆಯಾಗಿರ್ದೊಳಂ ಕುಮಾರಂ ನೋಡಿ ಇಂತೆಂದಂ ನೀಮೆನಗೀದೃಗ್ವಿಧಮಪ್ಪುಪಕಾರಮನೇಕೆ ಗೆಯ್ದಪ್ಪಿರ್ ನೀಮೇನಾಗ್ಗೆಂದು ಬೆಸಗೊಂಡೊಡಾಕೆಯಿಂತೆಂದಳ್

---

[1] ಮಹಾಮುದ್ರೆಯಂ ಪಿಡಿಯೆ (ಘಚಛ). [2] ಭೀ (ಕಖಗ). [3] ನಿನಾದಪೂರ್ವಕಂ (ಘಚಛ). [4] ಜ್ವಾ (ಕಖಗ). [5] ದನಾ (ಸ—ಛ). [6] ತ್ತು (ಘಚಛ). [7] ದೊಡೇ (ಛ). [8] ನೀರಂಕುಡಿದು (ಘಚಛ). [9] ತೊಟ್ಟನೆ (ಘಚಛ). ತರ್ಪಣ (ಖ). [10] ರಹಕಾ (ಘಚಛ). [11] ಮ (ಕಖಗ). [12] ವಂಶ (ಘಛ). [13] (ಘಚಛ) ಗಳಲ್ಲಿಲ್ಲ. [14] ಳಿಂ ಸಂತೊಸಂಬಡಿಸಿ (ಘಚಛ). [15] ಸಾಂ (ಕಖಗ). [16] ನಾಡಿ (ಘಛ).

ಕೇಳ್ ಪೇೞ್ವೆಂ ಸ್ವಾಮಿ ವಿಜಯಾರ್ಧ ಪರ್ವತದೊಳ್ ಪ್ರಿಯಸಂಗಮ ಪುರಾಧಿಪತಿಯಪ್ಪ ಭಾನುವೇಗನೆಂಬ ವಿದ್ಯಾಧರಂಗೆ ಶ್ರೀಮಾಲೆ ಮೊದಲಾಗೊಡೆಯ ಮಹಾದೇವಿಯರೆಣ್ಬರವರ್ಗ್ಗೆ ಪುಟ್ಟಿದೊರೀಯೆಣ್ಬರುಂ ಕನ್ನೆಯರ್ಕಳ್ ಲ[1]ಕ್ಷ್ಮಿ[1]ಮತಿ ಕನಕಕಾಂತೆ ಮಂದಾರಸೇನೆ ಅಳಕೆ ಅಲಂಭೂಷೆ ಹೇಮವತಿ ಹೇಮಮಾಲಿನಿ ವಿಜಯಾರ್ಧವತಿಯೆಂದೀ ಪೆಸರ್ಗಳನೊಡೆಯರೆಣ್ಬರುಂ ಮ[2]ಕ್ಕ[2]ಳನಾರ್ಗೆ ಕುಡುವಮೆಂದೊಂದು ದಿವಸಂ ನೈಮಿತ್ತಿಕನಂ ಭಾನುವೇಗಂ ಬೆಸಗೊಂಡೊಡಾತನಿಂತೆಂದಂ ಕ್ಷುಲ್ಲಕಮಾನಸಮೆಂಬ ಕೊಳದೊಳ್ ಸಿತಯಕ್ಷನೆಂಬ ದೇವನಂ ಸಂಗ್ರಾಮದೊಳಾವೊಂ ಗೆಲ್ಗುಮಾತಂಗೆ ಕೂಸುಗಳಂ ಕುಡಿಮೆಂದು ಪೇೞ್ದನದಱಿಂ ನೀನೆಮ್ಮ ಸ್ವಾಮಿಯೆಂದು ಪೇೞ್ದವಸರದೊಳ್ ಮಹಾವಿಭೂತಿಯಿಂ ಬರ್ಪ ಖೇಚರೇಂದ್ರನಂ ತೋಱಿದೊಡೀತಂ ನಿನ್ನ ಮಾವನೆಂದಾಗಳ್ ಕುಮಾರನುಮಿದಿರೆೞ್ದು ತದ್ಯೋಗ್ಯಮಪ್ಪ ವಿನಯಮುಮಂ ಗೆ[3]ಯ್ದಿರ್ದೊನಂ[3] ವಿದ್ಯಾಧರೇಂದ್ರಂ ಕುಮಾರನಂ ನೋಡಿ ತ್ರಿಭುವನಕ್ಕೆಲ್ಲಂ ತಿಳಕಮಾಗಿರ್ದ್ದಳಿಯನಂ ನಾನೆ ಪೆ[4]ತ್ತೆ[4]ನೆಂದಾದಮಾನುಂ ಸಂತುಷ್ಟಚಿತ್ತನಾಗಿ ಕುಮಾರನಂ ಕೊಂಡುಪೋಗಿ ತನ್ನ ಪೊೞಲಂ ಪೊಕ್ಕಾ ದೆವಸದೊಳೆಣ್ಬರ್ ಕನ್ನೆಯರ್ಕ್ಕಳಂ ಕೈನೀರೆಱೆ[3]ದು ಕುಮಾರಂಗೆ ಕೊಟ್ಟಂ ಕುಮಾರನುಂ ದಿವ್ಯಾಂಗನೆಯರ್ಕ್ಕ[5]ಳೊಡನೆ[5] ಸುಖದಿಂ[6]ದೊಂದಿದ[6]ನಾಗಳೊಂದು ವನದೇವತೆ ಬಂದು ಸುನಂದೆಯೆಂಬ ಕನ್ನೆಯ ದುಃಖಮಂ ಕಾಣಲಾಱದೆ ಕರುಣಿಸಿ ಕುಮಾರನನೆತ್ತಿಕೊಂಡು ಪೋಗಿ ಹರಿಕೂಟಮೆಂಬ [7]ಪರ್ವತದ[7] ಜ್ಯೋತಿರ್ವನದೊಳ್ ದಿವ್ಯಶಯ್ಯಾತಳಮಂ ವಿಗುರ್ವಿಸಿಯದಱ ಮೇಗೆ ಕುಮಾರನನಿಟ್ಟು ಪೋದೊಡಾತನುಂ ಪ್ರಭಾತಸಮಯದೊಳೆೞ್ಚತ್ತು ದೆಸೆಗಳಂ ನೋೞ್ಪೊನಾ ವನಮುಮಂ ತನ್ನಿರ್ದ್ದ ಲತಾ[8]ಮಂಟಪ[8]ಮುಮಂ ನೋಡಿ ಎನಗಿದು ಮಹಾ ವಿಸ್ಮಯಂ ರಾತ್ರಿಯೊಳ್ ವಿವಾಹಕಲ್ಯಾಣಮೆನಗೆ ಸ್ವಪ್ನದೊಳಾದುದೊ ನಿರು‌ತ[9]ಮೊ[9] ಎಂದು ಸಂ[10]ದೇಹ[10]ಚಿತ್ತನಾಗಿ ತನ್ನ ಕೈಯೊಳ್[11]ಕಟ್ಟಿದ[11] ಕಂಕಣಮುಂ ನೋಡಿ ಕಂಡು ಕುಮಾರನಿಂತೆಂ[12]ದು ಬಗೆದಂ[12]

ಶ್ಲೋಕ ॥ ಭವಿತವ್ಯಂ ಭವತ್ಯೇವ ಕರ್ಮಣಾಮೇಷ ನಿಶ್ಚಯಃ ।
ವಿಪತ್ತೌ ಕಿಂ ವಿಷಾದೇನ ಸಂಪತ್ತೌ ವಿಸ್ಮಯೇನ ಕಿಂ ॥

ಎಂದಿಂತು ವಸ್ತುಸ್ವರೂಪಮಂ ಕುಮಾರಂ ಬಗೆಯುತ್ತಿರ್ಪಿನೆಗಂ ದೂರಾಂತರದೊಳ್[13]ಸಂಛ[13]ನ್ನಮಾಗುತ್ತಿರ್ದ್ದ[14]ವನದೊಳಿರ್ದ[14] ಕನ್ನೆಯಿಂತೆಂದು ಪುಯ್ಯಲಿಟ್ಟಳ್ ಸಾಕೇತಪುರಾಧಿಪತಿಯಪ್ಪ ಸುರಥನೆಂಬರಸಂಗಂ ಚಂದ್ರ[15]ಯಶಿ[15]ಯೆಂಬ ಮಹಾದೇವಿಗಂ ಪುಟ್ಟಿದೆನ್ ಸನತ್ಕುಮಾರನ ಭಾರ್ಯೆಯೆನ್ ಸುನಂದೆಯೆನೆಂಬೆನೆನ್ನನನ್ಯಾಯದಿಂ ವಜ್ರವೇಗನೆಂಬ ವಿದ್ಯಾಧರಂ ತಂದಂ ಕಿನ್ನರ ಕಿಂಪುರುಷ ಗರುಡ ಗಂಧರ್ವ ಯಕ್ಷರಾಕ್ಷಸಾದಿ ದೇವರ್ಕ್ಕಳಿರಾ ವಿದ್ಯಾಧರರ್ಕ್ಕಳಿರಾ ಶರಣಾಗಿಮಾರ

---

[1] ಕ್ಷ (ಕಖ). [2] ಕ್ಕ (ಕಖಗ). [3] ಯ್ದಿರ್ದನಂ (ಕಖಗ). [4] ಕ್ತಿ (ಕಗ). [5] ಳುಂತಾನುಂ (ಕಖಗ). [6] ನಿದ್ರೆಗೈದ (ಘಚಛ). [7] (ಘಚಛ) ಗಳಲ್ಲಿಲ್ಲ. [8] ವನ (ಕಖಗ). [9] ಮೇಯಾಮುದೊ (ಕಖಗ). [10] ದೆಗ (ಕ), ತುಷ್ಟ (ಚಛ). [11] (ಘಚಛ) ಗಳಲ್ಲಿಲ್ಲ. [12] ದಂ (ಘಚಛ). [13] ಸ್ವಚ್ಛ (ಕಗ). [14] (ಕಗ) ಗಳಲ್ಲಿಲ್ಲ. [15] ಲೇಖೆ (ಘಚಛ).

ಪ್ಪೊಡಮೆನ್ನಂ ರಕ್ಷಿಸಿಮೆಂಬ ಕಾರುಣ್ಯಸ್ವರಮಂ ಕೇಳ್ದಾಶ್ಚರ್ಯ ಮನದೊನಾಗಿ ದೆಸೆಯಂ ನೋಡಿ ಸಲ್ವೊಂ ಸ್ಫಟಿಕಮಯಮಪ್ಪ ಶಿಲಾ[1]ಗೃಹ[1]ದ ಕೆೞಗಿರ್ದ್ದ [2]ಯಕ್ಷ[2] ಕನ್ನೆಯಂ ಕಂಡು ನೀನಾರ್ಗ್ಗೇನೆಂಬೆಯಾ ಸನತ್ಕುಮಾರನೆಂಬೊನಾರ್ಗ್ಗೆಂದು ಕುಮಾರಂ ಬೆಸಗೊಂಡೊಡಾಕೆಯಿಂತೆಂದು ಪೇೞ್ದಳ್

ಅಯೋಧ್ಯಾಪುರಮನಾಳ್ವೊಂ ಸುರಥನೆಂಬೊನರಸನಾತನ ಮಹಾದೇವಿ ಚಂದ್ರ ಯಶಿಯೆಂಬೊಳಾಯಿರ್ವರ್ಗ್ಗಂ ಪುಟ್ಟಿದೆಂ ಸುನಂದೆಯೆಂಬೆಂ ಸನತ್ಕುಮಾರಂಗೆ ಗರ್ಭದೊಳಿರ್ದ್ದಂತೆ ನಿವೇದಿ[3]ಸೆಪಟ್ಟೆ[3]ನೆನ್ನಂ ಮದನೋದ್ಯಾನದೊಳುಯ್ಯಲಾಡು ತ್ತಿರ್ದ್ದೊಳಂ ಭೌಮವಿಹಾರಾರ್ಥಂ ಬಂದು ವಜ್ರವೇಗನೆಂಬ ವಿದ್ಯಾಧರಂ ಕಂಡೆನ್ನ ನೆತ್ತಿಕೊಂಡು [4]ಪುಯ್ಯಲಿಡೆಯಿಡೆ[4] ಬಂದನಿಂದಿಂಗೇೞು ದಿವಸಮುಂಟು ಮತ್ತಾ ಸನತ್ಕುಮಾರನೆಂಬೊಂ ಹಸ್ತಿನಾಪುರಮನಾಳ್ವೊಂ ವಿಶ್ವಸೇನ ಮಹಾರಾಜನೆಂಬೊ ನರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವ್ವರ್ಗ್ಗಂ ಪುಟ್ಟಿದಂ ಸನತ್ಕು ಮಾರನೆಂಬೊನೆಂದು ಪೇೞ್ದೊಡೆ ಕುಮಾರನೆಂದನಾತನಂ ಕಂಡೊಡೇನಱಿ[5]ವೋ[5] ಎಂದು ಬೆಸಗೊಂಡೊಡೆ ಸುನಂದೆಯಿಂತೆಂದಳ್ ಎನ್ನ ತಂದೆ ವಿಶ್ವಸೇನ ಮಹಾರಾಜ ನೊಳಪ್ಪ ಮಿತ್ರಸಂಬಂಧದಿನೊಂದು ದಿವಸಂ ಹಸ್ತಿನಾಪುರಕ್ಕೆ ಪೋಗಿ ಕುಮಾರನಂ ಕಂಡಾತನ ರೂಪಂ ಪಟದೊಳ್ ಬರೆದು ತಂ[6]ದಾ ರೂಪನೆಲ್ಲಾ ಪೊೞ್ತುಂ ನೋೞ್ಪೆನುಂ ಬರೆವೆನುಂ ಭಾವಿಸುತ್ತಿರ್ಪೆನಪ್ಪುದಱಿಂದಱಿವೆನಾ ರೂಪುಂ ನಿಮ್ಮನೆ ಪೋಲ್ಕುಮೆನೆಯುಂತಪ್ಪೊಡಾಂ ಸನತ್ಕುಮಾರನೆನಪ್ಪೆನೆಂದಾಗಳ್ ಹರ್ಷರೋಮಾಂಚ ಕಂಚುಕಿತೆ ವಿಕಸಿತವದನೆಯಾಗಿ [7]ಯಱಿಪಬಳ್ಳಿ ಕಾಲ್ತೊಡರ್ದತ್ತೆಂಬಂತೆವೊಲಾಯ್ತೆನ್ನ[7] ಭಾಗ್ಯದಿಂದಂ ಸ್ವಾಮಿ ನೀಮಿಲ್ಲಿಗೆ ಬಂದಿರಾ ವಜ್ರವೇಗಂ ತನ್ನ ತಂಗೆಯನೆನಗೆ ಕಾಪಿಟ್ಟು ತನ್ನ ಪೊೞಲ್ಗೆ [8]ನಿದ್ರೆಗೆಯ್ಯೆ[8] ಪೋದನಾಕೆಯುಂ ಜಳಕ್ರೀಡೆಗೆ ಪೋದ ಳವಳ್ ಬಾರದನ್ನೆಗಂ ಬೇಗಂ ಪೋಪಮೆನೆ ಕುಮಾರನಿಂತೆಂದನಂಜದಿರ್ ನಿನ್ನ ತಂದೊನನಮೋಘಂ ಮೃತ್ಯುಮುಖ[9]ಕ್ಕುಯ್ಯೊಡಲ್ಲದೆ[9] ಪೋಗೆನೆನೆ ಭಯದಿಂದಂ ನಡುಗಿ ಇಂತೆಂದಳಾತನಾಕಾಶಗಾಮಿ ನೀಮೆಂತುಕೊಲ್ವಿರೆನೆ ಕುಮಾರಂ ನಕ್ಕಿಂತೆಂದಂ ಆಕಾಶಗಾಮಿಯಪ್ಪ ಕಾಗೆಯನೇಂ ಕೊಲ್ವುದರಿದೆ ಎಂದು ನುಡಿಯುತ್ತಿರ್ಪನ್ನೆಗಂ ವಜ್ರವೇಗನ ಬರವಂ ಕಂಡಾ ಕನ್ನೆಯಂಜಿ ಪ್ರಾಸಾದದೊಳಗೆ ಪೋಗಿ ಪೊಕ್ಕಿರ್ದಳ್

ಖೇಚರನುಂ ಕುಮಾರನಂ ಕಂಡು ಪುರುಡಿಂ ಮುಳಿಸು ಪೆರ್ಚ್ಚೆಯೆನ್ನ ಪೆಂಡತಿಯೊಡನೆ ನುಡಿಯುತ್ತಿರ್ದ್ದೊನನಮೋಘಂ ಕೊಲ್ವೆನೆಂದು ಕಿೞ್ತು ಬಾಳ್ವೆರಸು ಬಂದೆಱಗಿ ಇಱಿದಾತನೇಱಂ ಬಂಚಿಸಿ ಸಿಂಹಲಂಘನದಿಂ ಮೇಗೆ ನೆಗೆದು ವಜ್ರ ಸಮಾನಮಪ್ಪ ಕೈಯಿಂದಂ ಕುಮಾರನಾತನ ತೆಗಲೆಯಂ ತಿವಿದೊಡಾತನಲ್ಲಿ ತನ್ನ ವಿದ್ಯಾಧರ[10]ಕರಣ[10]ಮುಂ ತೋರ್ಪ್ಪಂಬೊಲೆ ಮೇಗುಚ್ಚಳಿಸಿ ಬಿೞ್ದಾಗಡೆ ಮಡಿದಂ

1 ತಳ (ಕಗ). 2 ಳ್ವ (ಘಚ). 3 ಸಲ್ಪಟ್ಟೆ (ಕಗ). 4 (ಕಖಗ) ಗಳಲ್ಲಿಲ್ಲ. 5 ವಾ (ಕಖಗ), ವೆಯೊ (ಚ). 6 ದೊಡಾ (ಘಚಛ). 7 ಯಱಿಸಿ ಪೋಪಬಳ್ಳಿ ಕಾಲೊಳ್ ತಗುಳ್ದ ತ್ತೆಂಬ ವೊಲೆನ್ನ (ಘಚಛ). 8 (ಘಚಛ) ಗಳಲ್ಲಿಲ್ಲ. 9 ಕ್ಕೊಯ್ದಲ್ಲದೆ (ಕಖಗ). 10 ಗುಣ (ಚ), ಗರಣ (ಛ).

ಕುಮಾರನಿಂತೆಂದು ಬಗೆದನೊರ್ವಳೆ ಇರ್ದ ಸ್ತ್ರೀಯ ಪಕ್ಕದೆ ಸತ್ಪುರುಷಂಗಿರಲ್ ತಕ್ಕುದಲ್ಲೆಂದು ಮುನ್ನೆ ತನ್ನಿರ್ದ ಲತಾಮಂಟಪದೊಳ್ ಪೋಗಿರ್ದನನ್ನೆಗಮಿತ್ತ ವಜ್ರವೇಗನ ತಂಗೆ ಸಂಧ್ಯಾವಳಿಯೆಂಬೊ[1]ಳ್ ಮಾನಸ[1] ಸರೋವರದೊಳ್ ಜಲ ಕ್ರೀಡೆಯಾಡಿ ಬರ್ಪೊಳನ್ನೆಗಂ ತಮ್ಮಣ್ಣಂ ಸತ್ತುದಂ ಕಂಡು ಮೂರ್ಛಾಗತೆಯಾಗಿ ಬಿಬ್ಬಿ ನೀಡಱಿಂದೆಚ್ಚತ್ತು ಕ್ರೋಧಾಗ್ನಿ ಪೆರ್ಚಿ ಎಮ್ಮಣ್ಣನಂ ಕೊಂದ ದುರಾತ್ಮನಂ ಪಾತಾಳಮಂ ಪೊಕ್ಕಿರ್ದನಪ್ಪೊಡಮಱಸಿ ಕೊಲ್ವೆನನೋಘಮೆಂದು ಭಯಂಕರ ರೂಪಂ ಕೈಕೊಂಡು ದೆಸೆಗಳಂ ನೋೞ್ಪಳನ್ನೆಗಮಾರುಮಂ ಕಾಣದೆ ಸುನಂದೆಯಂ ಬೆಸಗೊಂಡೊಡಾಕೆಯಿಂತೆಂದಳ್ ದುಷ್ಟನಿಗ್ರಹ ಶಿಷ್ಟಪ್ರತಿಪಾಲನ ಸ್ವರೂಪದಿಂ ಪೃಥ್ವಿಯಂ ರಕ್ಷಿಸುವ ಸ್ವಾಮಿ [2]ಚೋರದಾರ ಪಾದರಿಗ[2]ರ್ಕ್ಕಳಂ ಕೊಲ್ಲದಿರ್ಕ್ಕುಮೆ ಎಂದೊಡಾತನಾವೊನೆಲ್ಲಿದೊಂ ತೋಱಿಂದು ಬೆಸಗೊಂಡೊಡೆ ಸುನಂದೆಯುಂ ಪೋಗಿ ಕುಮಾರನಂ ತೋಱಿದೊಡಾಕೆಯುಮಸಿಖೇಟಕಹಸ್ತೆಯಾಗಿ ವಿಭೀಷಣಮಪ್ಪ ರೂಪುಮಂ ವಿಗುರ್ವಿಸಿ ಕೊಲ್ವೆನೆಂದು ಸಾರ್ದಾಗಳ್ ಕುಮಾರಂ ಸೌಪ್ತಮ ದೊಳಿರ್ದ್ದನಂ ನೋಡಿ ಕ್ರೋಧಂಗೆಟ್ಟು ಸ್ನೇಹಂ [3]ಪೆರ್ಚಿ[3] ಕಾಮಶರಂಗಳಿಂ [4]ಸ್ಮರ[4]ವಶಹೃದಯೆಯಾಗಿ ಇಂತೆಂದು ತನ್ನೊಳ್ ಬಗೆದೊಳೆಮ್ಮಣ್ಣಂ ತನ್ನ ದೋಷದಿಂ ಸತ್ತೊನೀತಂಗೇನುಂ ದೋಷಮಿಲ್ಲೆಂದು ವಿಕಾರ[5]ಮಪ್ಪ[5] ರೂಪಮ ನುಪಸಂಹರಿಸಿ ತನ್ನ ಮುನ್ನಿನ ಸ್ವಾಭಾವಿಕಮಪ್ಪ ರೂಪಂ ಕೈಕೊಂಡು ತಮ್ಮಣ್ಣನಂ ಸಂಸ್ಕರಿಸಿ ನೀರಿಬಿದು ತದ್ವಿರಹಾನಳನಿಂ ಬೆಂದು ಕರಗಿ ಕೊರಗಿ ಬಸಮೞ್ದಿರ್ದ್ದ ಮೆಯ್ಯನೊಡೆಯೊಳ್ ಬಂದು ಸುನಂದೆಗಿಂತೆಂದಳ್ ನಿನ್ನ ಪ್ರಸಾದದಿಂ ಬಾೞ್ವೆಂ ನೀನೆನಗೆ ಸೋದರಮುಂ ಕಲ್ಯಾಣಮಿತ್ರೆಯುಮಾದಯ್ ಅದಱಿಂ ನೀನೀಕುಮಾ ರಂಗೆ ಪೋಗಿ ಇಂತೆಂದು ಪೇೞು ವಿಜಯಾರ್ಧ ಪರ್ವತದೊಳಗ್ರಮಂದಿರಪುರಾಧಿ ಪತಿಯಪ್ಪಶನಿವೇಗನೆಂಬ ವಿದ್ಯಾಧರಂಗಂ ವಿದ್ಯುತ್ಪ್ರಭೆಯೆಂಬ ಮಹಾದೇವಿಗಂ ಮಗಳ್ ಸಂಧ್ಯಾವಳಿಯೆಂಬೊಳ್ ನೀಮೆ ಶರಣೆಂದಿರ್ದ್ದೊಳಾಕೆಯಂ ನೀಮ ಮೋಘಂ ಕೈಕೊಳಲ್ವೇೞ್ಕುಮೆಂದಿಂತು ನುಡಿಯೆಂದು ಕಲ್ಪಿಸಿಯಟ್ಟಿದೊಡಾಕೆಯುಂ ಕುಮಾರಂಗೆ ತದ್ವೃತ್ತಾಂತಮೆಲ್ಲಮಂ ಪೇೞ್ದೊಡಾತನುಂ ಪಿತೃಮಾತೃಗಳೀಯದ ಸ್ತ್ರೀಯರಂ ಕೈಕೊಳ್ವುದೆನಗಯೋಗ್ಯಮೆಂದು ಮಱುಮಾತುಗೊಟ್ಟೊಡೆ ಸುನಂದೆ ಯೆಂಬೊಳ್ ಮಿತ್ರಸಂಬಂಧಿಗಳಪ್ಪ ಜನಂಗಳ್ ಮುಂ[6]ತಿಟ್ಟು[6] ಕುಡೆ ಕೊಳಲ್ ತಕ್ಕುದೆಂದು ನುಡಿದೊಡಂಬಡಿಸಿ ದಿವ್ಯದೇವತೆಗಳನೆ ಬಾಂಧವಜನಮಾಗೊಡೆಯುಳಂ ಮಹಾವಿಭೂತಿಯಿಂದಂ ಪಾಣಿಗ್ರಹಣ ಪುರಸ್ಸರಂ ಸಂಧ್ಯಾವಳಿಯಂ ಕುಮಾರಂಗೆ ಕೊಟ್ಟಳ್ *ಸಂಧ್ಯಾವಳಿಯುಂ ಸುನಂದೆಯಂ ಕುಮಾರಂಗೆ ಕೊಟ್ಟಳಿಂ*ತನ್ಯೋನ್ಯ ಸಂಬಂಧದಿಂ ಗಾಂಧರ್ವವಿವಾಹದಿಂ [7]ಕಲ್ಯಾಣದೊಳ್ಕೂಡಿ[7] ಸುಖದಿಂದಿರ್ಪ್ಪೊರ್

ಅನ್ನೆಗಮಿತ್ತಶನಿವೇಗಂ ತನ್ನ ಮಗಂ ಪಿರಿದು ಪ್ರೊೞ್ತು ಪೋಗಿ ತಡೆದನೆಂದು

---

[1] ಳಾ (ಚಛ). [2] ಚಾರ ಚೋರ (ಘಜ), ಚೋರ ಜಾರ (ಛ). [3] ಪುಟ್ಟಿ (ಛ). [4] ಪರ (ಚಛ). [5] ಸ್ವ (ಕಗ). [6] ದಿರ್ದು (ಕಖಘ). *-* (ಘಚಛ) ಗಳಲ್ಲಿಲ್ಲ. [7] ಕಯ್ಕೂಡಿ (ಘಚಛ).

ಮಗನವಸ್ಥೆಯನಱಿದು ಬಾಯೆಂದವಳೋಕಿನಿಯೆಂಬ ವಿದ್ಯೆಯನಾರಯ್ಯಲಟ್ಟಿದೊಡಾ ವಿದ್ಯೆಯುಂ ಪಾರಾವತ ರೂಪದಿಂದಾರೈದು ಪೋಪುದಂ ಸಂಧ್ಯಾವಳಿಯಱಿದಿಂತೆಂದು ತನ್ನ ಭರ್ತಾರಂಗೆ ಪೇಳ್ಗುಂ ಸ್ವಾಮಿ ಎನ್ನ ತಂದೆ ವಿದ್ಯಾಧರನಾದಮಾನುಂ ಪ್ರಚಂಡ ಮಹಾಬಳ ಪರಾಕ್ರಮಂ ವಜ್ರವೇಗನ ಸಾವನಱಿದಮೋಘಂ ನಿಮ್ಮ ಮೇಲೆ ಬರ್ಕುಮದಱಿಂ ನೀಮೀ ಪ್ರಜ್ಞಪ್ತಿಯೆಂಬ ಮಹಾವಿದ್ಯೆಯಂ ಕೊಳ್ವಿಮೆನೆ ಕುಮಾರಂ ನಕ್ಕು ಪ್ರಹಸಿತವದ[1]ನ[1]ನಾಗಿ ಖೇಚರರೆಂ[2]ಬೆರಲೆ[2]ಗಳಂ [3]ನಿಪಾತಿ[3]ಸಲ್ಕೆನಗೆ ವಿದ್ಯೆ[4]ಯುಂ ಬೇಳ್ಕುಮೆ ಎಂ[4]ದೊಲ್ಲದಿರ್ದೊನ ಪಾದದ್ವಯಂಗಳ್ಗೆಱಗಿ ಪೊಡೆವಟ್ಟ ಮೋಘಂ ಕೊಳಲೆವೇಳ್ಕುಮೆಂದು ಬಲಾತ್ಕಾರದಿಂ ವಿದ್ಯೆಯಂ ಕೊಟ್ಟೊಡಾ ಅವಸರದೊಳ್

ಮತ್ತಿತ್ತ ರಥನೂಪುರ ಚಕ್ರವಾಳ ಪುರಾಧಿಪತಿಯಪ್ಪ ಚಂದ್ರಯಶನೆಂಬ ವಿದ್ಯಾಧರಂಗಂ ವಿದ್ಯುದ್ವೇಗೆಯೆಂಬ ಮಹಾದೇವಿಗಮಂತಿರ್ವರ್ಗಂ ಪುಟ್ಟಿದರ್ ಚಂದ್ರವೇಗನುಂ ಭಾನುವೇಗನುಮೆಂಬರ್ ಮಕ್ಕಳಾಗಿ ಇಂತಿಷ್ಟವಿಷಯಕಾಮ ಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ ನೃಪತಿಗೆ ಸಂಸಾರವೈರಾಗ್ಯಮಾಗಿ ಚಂದ್ರವೇಗನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಕಿಱಿಯಾತನಪ್ಪ ಭಾನುವೇಗಂಗೆ ಯುವರಾಜಪಟ್ಟಮಂ ಕಟ್ಟಿ ಗುಣಧರರೆಂಬ ಚಾರಣರಿಸಿಯರ ಪಕ್ಕದೆ ಜೈನದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಸಮ್ಮೇದ ಪರ್ವತದೊಳ್ ಮೋಕ್ಷಕ್ಕೆ ಪೋದರ್ ಮತ್ತಾ ಚಂದ್ರವೇಗಂಗೆ ನೂರ್ವರ್ ಪೆಣ್ಗೂಸುಗಳಾದೊರವರ್ಗ್ಗಳತಿಶಯ ರೂಪುಲಾವಣ್ಯಮನೊಡೆಯೊರವರನಾ ಅಶನಿವೇಗಂ †ತನ್ನ ಮಗಂ ವಜ್ರವೇಗಂಗನವರತಂ ಪಾಗುಡಮುಂ ಪೆರ್ಗ್ಗಡೆಗಳುಮನಟ್ಟುತ್ತಿರ್ಕುಂ ಮತ್ತಂ ಪೆಱರುಂ ವಿದ್ಯಾಧರರ್ಕ್ಕಳನವರತಂ ಕೂಸುಗಳಂ ಬೇಡಿಯಟ್ಟುತ್ತಿರೆ ಆರ್ಗಂ ಕುಡಲೊಲ್ಲದೆ ಮತ್ತೊಂದು ದಿವಸಂ ಮಕ್ಕಳನಾರ್ಗೆ ಕುಡುವಮೆಂದು ದೈವಜ್ಞನಂ ಬೆಸಗೊಂಡೊಡಾತನಿಂತೆಂದು ಪೇಳ್ದಂ ಮಾನಸಸರೋವರದೊಳ್ ಸಿತಯಕ್ಷನಂ ಯುದ್ಧದೊಳಾವೊಂ ಗೆಲ್ವೊಂ ಮತ್ತಶನಿವೇಗನ ಮಗಂ ವಜ್ರವೇಗನುಮಂ ಮುಷ್ಟಿ ಪ್ರಹಾರದಿಂ ಕೊಲ್ವೊನಾ ಅಶನಿವೇಗನುಮಂ ಸಂಗ್ರಾಮದೊಳ್ ನಿಪಾತಿಸುವ ನಾವನೊರ್ವ್ವನಾತಂಗೆ ನಿಮ್ಮ ಮಗಳಂ ಕುಡಿಮೆಂದು ದೇವಗುರುವೆಂಬ ನೈಮಿತ್ತಿಕಂ ಪೇಳ್ದಂ ಮತ್ತೆಯಾತನುಪದೇಶದಿಂ ತಱಿಸಂದ ಮನದೊನಾಗಿ ಸರ್ವಾಯುಧ ಸನ್ನದ್ಧರಾಗಿ ದಿವ್ಯರಥಂಬೆರಸು ಹರಿಶ್ಚಂದ್ರ ಚಂದ್ರಸೇನರ್ಕ್ಕಳೆಂಬ ಮಕ್ಕಳನಟ್ಟಿದೊಡವರ್ಗ್ಗಳುಂ ಬಂದು ಕುಮಾರಂಗೆಱಗಿ ಪೊಡೆವಟ್ಟಂತೆಂದರ್ ರಥನೂಪುರ ಚಕ್ರವಾಳಪುರೇಶ್ವರನಪ್ಪ ಚಂದ್ರವೇಗಂಗಂ ಮಣಿದೇವಿಗಂ ಪುಟ್ಟಿದೆವು ಹರಿಶ್ಚಂದ್ರ ಚಂದ್ರಸೇನರ್ಕ್ಕಳೆಮ್ಮಮ್ಮನ ಬೆಸದಿಂ ನಿಮ್ಮನೋಲಗಿಸಲ್ ಬಂದೆಮೆಂದು ಪೇಳ್ದು ಸುಖಸಂಕಥಾವಿನೋದದಿಂದಿರ್ಪ್ಪನ್ನೆಗಮವರ ಬೞಿಯನೆ ಸಹೋದರರ್ಕ್ಕಳಪ್ಪ ಚಂದ್ರವೇಗನುಂ ಭಾನುವೇಗನುಂ ತಮ್ಮುಳ್ಳ ಸಮಸ್ತಬಲಂಬೆರಸು ಕುಮಾರನಂ ಕೂಡಿದರ್

[1] ನಾರವಿಂದ (ಘಚ). [2] ಬೊರತಿ (ಕಖ). ಬೊರತ್ತಲೆ (ಗ). [3] ಹತಿಯಿ (ಘಚಛ). [4] ಯೇವುದೆಂ (ಘಚಛ). †† (ಘಚಛ) ಗಳಲ್ಲಿ ಈ ಭಾಗ ಇಲ್ಲ.

ಮತ್ತಿತ್ತ ಶನಿವೇಗಂ ತನ್ನ ಮಗನ ಕೞಿದ ವೃತ್ತಾಂತಮೆಲ್ಲಮನವಳೋಕಿನಿಯೆಂಬ ವಿದ್ಯೆ ಪೇೞೆ ಕೇಳ್ದಱಿದು ಮುಳಿದು ಗರ್ಜಿಸಿ ಮಸಗಿ ಸಮಸ್ತ ಬಲಂ ಬೆರಸಿಂಪ್ರನ ಮಱೆವೊಕ್ಕಡಮಮೋಘಂ ಕೊಲ್ವೆನೆಂದು ಮೇಲೆತ್ತಿಂದನಂ ಚಂದ್ರವೇಗಂ ಕಂಡು ಸನತ್ಕುಮಾರಂಗಿಂತೆಂದಂ ದೇವಾ ನಾನಾವಿಧಮಪ್ಪ ವಿದ್ಯಾಧರ ಯುದ್ಧಮಂ ನೀಂ ಕೆಮ್ಮನೆ ನೋಡುತ್ತಿರಾನೆ ಸಾಲ್ವೆನೆಂದು [1]ಸಂಗ್ರಾಮಕ್ಕ[1]ಭಿಮುಖನಾಗಿ ಕಾದಲ್ ತಗುಳ್ದನಿತ್ತ ಕುಮಾರನುಂ ಗಗನ ತಳದೊಳ್ ವಜ್ರಸಾರಮೆಂಬ ರಥಮನೇಱಿ ಛತ್ರಚಾಮರ ಪಿಂಛಾತಪತ್ರ ಪಾಳಿಧ್ವಜ ಪತಾಕಾದ್ಯನೇಕ ಮಹಾ ವಿಭೂತಿಯೊಳ್ ಕೂಡಿ ಸಂಗ್ರಾಮಮಂ[2] ನೋಡುತ್ತಮಿರೆ ಮತ್ತ ಶನಿವೇಗಂ ಕುಮಾರನಂ ಕಂಡು ಕ್ರೋಧಾಗ್ನಿ ಪೆರ್ಚೆ ಎನ್ನ ಮಗನಂ ಕೊಂದೊನಂ ಬೇಗಂ ವೃತ್ಯ[3]ರಾಜನಂ ಕಾಣ್ಬಂತಿರೆ ನೂೞ್ಪೆ[3]ನೆಂದು ಮುಳಿದು ಮಸಗಿ ಬರ್ಪ್ಪನಂ ಕುಮಾರಂ ಕಂಡಾಗಡೆ ಬಾಣಾಸನ ಹಸ್ತನಾಗಿ ಅರ್ಧಚಂದ್ರಮೆಂಬ ಸರದಿಂದಾತನ ತಲೆಯುಂ ಮೊಕ್ಕನೆಪೋ[4]ಗೆಚ್ಚಂ ಅ[4]ದು ಜ್ವಲನ್ಮಣಿಮಕುಟಕುಂಡಲಂಗಳಿಂದೊಪ್ಪುತ್ತಿರ್ದುದು ವಿದ್ಯುತ್ಕಪಾಲಂಬೊಲ್ ನೆಲದೊಳ್ ಬಿದ್ದಿತ್ತಾಗಳಾ ತಲೆಯುಂ ಮಱುವಕ್ಕದರ್ ಕಂಡು ಕೆಲರಂಜಿ ತ್ರಸ್ತಾ[5]ಭಿಭೂ[5]ತರಾಗಿಯೋಡಿ ಕೆಲರ್ ಶರಣೆಂದು ಕುಮಾರನ ಕಾಲ್ಗೆಱಗಿ ಪುಲ್ಲಂ ಕರ್ಚಿ ಪೊಡೆವಟ್ಟರ್ ಕುಮಾರನುಮಾಗಳಭಯ ಘೋಷಣೆಯುಂ ಪೊಯ್ಸಿಯವರ್ಗ್ಗಭಯ ದಾನಮುಂ ಕೊಟ್ಟನಾಗಳ್ ಚಂದ್ರವೇಗನುಂ ಸಂಗ್ರಾಮ ಭೂಮಿ[6]ಯನರ್ಚಿಸಿ[6] ಮಹಾವಿಭೂತಿಯಿಂ ಕುಮಾರನನೊಡಗೊಂಡು ಪೋಗಿ ಪೊೞಲಂ ಪೊಕ್ಕು ಪ್ರಶಸ್ತ ದಿನ ವಾರ ನಕ್ಷತ್ರ ಹೋರಾ ಮುಹೂರ್ತ ಲಗ್ನದೊಳ್ ತನ್ನ ಮಕ್ಕಳ್ ಚಂದ್ರಮತಿ ಚಂದ್ರಶ್ರೀ ಚಂದ್ರಲೇಖೆ ಶಶಿಕಾಂತೆ ಮನೋ[7]ಹಾರಿಣಿ[7] ಹರಿಣಾಂಕೆ ಕಮಲಮುಖಿ ಪ್ರಿಯದರ್ಶನೆಯುಂದಿವರ್ ಮೊದಲಾಗೊಡೆಯ ನೂರ್ವರ್ ಕನ್ನೆಯರ್ಕಳಂ ಪಾಣಿಗ್ರಹಣ ಪುರಸ್ಸರಂ [8]ಕೊಟ್ಟೆನಂತಾ ನೂರ್ವರ್ ಕನ್ನೆಯರ್ಕಳುಂ [9]ಮುನ್ನಿನ ಖೇಚರಿಯರ್ಕಳುಂ[9] ಪೆಱ[10]ವುಮೆಂದಿವರೊಳ್[10] ಕೂಡಿ ಕುಮಾರಂ ವಿದ್ಯಾಧರ ಶ್ರೇಣಿಯೊಳ್ ಸುಖಮನನುಭವಿಸುತ್ತಿರ್ಪನ್ನೆಗಂ

*ಮತ್ತೊಂದು ದಿವಸಂ ಚಂದ್ರವೇಗಂ ಸಿದ್ಧಕೂಟಕ್ಕೆ ವಂದನಾಭಕ್ತಿಗೆ ಪೋಗಿ ದೇವರನರ್ಚಿಸಿ ವಂದಿಸಿ ಸುಮಾಳಿಗಳೆಂಬ[11]ವಧಿ[11]ಜ್ಞಾನಿಗಳಪ್ಪ ಚಾರಣರಿಸಿಯರಂ ಗುರುಭಕ್ತಿಗೆಯ್ದು ವಂದಿಸಿ ಧರ್ಮಮಂ ಕೇಳ್ದು ತದನಂತರಮಿಂತೆಂದಂ ಭಟಾರಾ ಸನತ್ಕುಮಾರಂಗಂ ಸಿತಯಕ್ಷಂಗಂ ವೈರಸಂಬಂಧಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಭಟಾರರುಂ ತತ್ಸಂಬಂಧಿಯಪ್ಪ ಕಥೆಯನಿಂತೆಂದು ಪೇೞಲ್ ತೊಡಗಿದರ್

1 ಕುಮಾರಂಗ (ಘಚಛ). 2 + ನಡೆ (ಘಚಛ). 3 ಜಂಗೆ ಪಾಗುಡಮಟ್ಟುವೆ (ಘಚಛ). 4 ಗಲೆಸುವುದುಮ (ಘಚಛ). 5 ಭೀ (ಕಖಗ). 6 ಱಂ ಪೊಱಮಟ್ಟು (ಛ). 7 ರಮೆ (ಘಚ). 8 + ಕುಮಾರಂಗೆ (ಘಚಛ). 9 (ಘಚಛ) ಗಳಲ್ಲಿಲ್ಲ. 10 ರ್ ಕನ್ನೆಯರೊಳು (ಘಚಛ). * (ಖ) ದಲ್ಲಿ ನಷ್ಟವಾಗಿದೆ. 11 ದಿವ್ಯ (ಘಚಛ).

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಂಚನಮೆಂಬುದು ಪೊೞಲದನಾಳ್ವೊಂ ಪ್ರತಿಮುಖನೆಂಬರಸನಷ್ಟಶತಮಂತಃಪುರಕ್ಕಧಿಪನಾಗಿ ಕಾಲಂ ಸಲೆ ಮತ್ತಾ ಪೊೞಲೊಳ್ ನಾಗಚಂದ್ರನೆಂಬೊಂ ಸಾರ್ಥಾಧಿಪತಿಯಾತನ ಭಾರ್ಯೆ ವಿಷ್ಣುಶ್ರೀಯೆಂಬೊಳತ್ಯಂತ ರೂಪಲಾವಣ್ಯಸೌಭಾಗ್ಯಕಾಂತಿಹಾವಭಾವವಿಳಾಸವಿಭ್ರಮಂಗಳಿಂ ಕೂಡಿದೊ[1]ಳೊಂದು ದಿವಸಂ ಅರಸನು[1]ದ್ಯಾನವನಕ್ಕೆ ಪೋಗುತ್ತಂ ಪ್ರಾಸಾದ[2]ದೊಳಿರ್ದ ದೇವಾಂಗನಾಸನ್ನಿಭೆಯಪ್ಪ[3]ಳಂ ಕಂಡು ಕಾಮಶರಂಗಳಿಂ ಜರ್ಝರಿತ ಹೃದಯನಾಗಿ [4]ಮಂ[ತ್ರ][4] ಪ್ರಯೋಗದಿಂದಂ ವಿಷ್ಣುಶ್ರೀಯನೊಳಕೊಂಡನಾಕೆಯುಮಾತಂಗಗ್ರ ವಲ್ಲಭೆಯಾಗಿ ಸಲ್ವೊಳಂ [5]ಸಮಸ್ತಮಂತಃಪುರಮಾ[5]ಕೆಗೆ ಮುಳಿಯುತ್ತಿ[6]ರ್ಕುಮೊಂ[6]ದು ದಿವಸಂ ಸಾರ್ವಭೌಮನೆಂಬ ಪಟ್ಟವರ್ಧನ ಗಜಂ ಸೊರ್ಕಿ ಮಸಗಿ [7]ಕ[7]ಟ್ಟುಗಳೆಲ್ಲಮಂ ಪಱಿದು ಹತತವಿತತ ಕೋಳಾಹಳಮೆಱೆದು ಪೊೞಲೆಲ್ಲಮಂ ಕೊಲ್ವುದನರಸಂ ಕೇಳ್ದಾನೆಯುಂ ಕಟ್ಟಿಸಲೆಂದು ಪೋದನನ್ನೆಗಮಿತ್ತ ಅನಿಬರರಸಿಯರ್ಕಳ್ ನೆರೆದು ವಿಷಪ್ರಯೋಗದಿಂದಂ[8] ಕೊಂದಾರುಮಱಿಯದಂತಿರೆ ಶ್ಮಶಾನದೊಳೀಡಾ[9]ಡಿದೊ[9]ರನ್ನೆಗಮರಸನುಮಾನೆಯುಮಂ ಕಟ್ಟಿಸಿ ಬಂದರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಡೆ ಸತ್ತಳೆಂ[10]ಬಾ[10] ಮಾತಂ ಕೇಳ್ದು ಮೂರ್ಛಿತನಾಗಿ ನೀಡಱಿಂದೆಚ್ಚೆತ್ತು ಮಹಾದುಃಖಂಗೆಯ್ದು ಶ್ಮಶಾನಕ್ಕಾಕೆಯ ದೇಹಮಂ ನೋಡಲೆಂದು ಪೋಗಿಯದಱ ಭೀಭತ್ಸಮಂ ಕಂಡಾದಮಾನುಂ ಪೇಸಿ ಶರೀರವೈರಾಗ್ಯಮನೊಡೆಯನಾಗಿ ಅನ್ಯಾಯದಿಂ ಪರಸ್ತ್ರೀಹರಣಂಗೆಯ್ದೆಂ ಮಹಾಪಾತಕನೆನೆಂದು ತನ್ನಂ ತಾನಾದಮಾನುಂ ನಿಂದಿಸಿ ವಿಮಳವಾಹನನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಸುವ್ರತರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು[11] ಸಮಾಧಿ ಮರಣದಿಂ ಮುಡಿಪಿ ಪ್ರಾಣತ ಕಲ್ಪದೊಳಿಪ್ಪತ್ತು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊಂ ಪ್ರತೀಂದ್ರನಾಗಿ ಪುಟ್ಟಿ ದೇವಲೋಕದ ದಿವ್ಯಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕನಕ[12]ಮೆಂಬುದು ಪೊೞಲದನಾಳ್ವೊಂ ಹರಿವಾಹನನೆಂಬರಸಂ ಮತ್ತಮಾ ಪೊೞಲೊಳ್ ರಾಜಶ್ರೇಷ್ಠಿ ಅರ್ಹದ್ದಾಸನೆಂಬೊನಾತನ ಭಾರ್ಯೆ ಜಿನದತ್ತೆಯೆಂಬೊಳಾ ಇರ್ವ್ವರ್ಗಂ ಮಗಂ ಜಿನವರ್ಮನೆಂಬೊನಾಗಿ ಪುಟ್ಟಿ ರೂಪಲಾವಣ್ಯ ಸೌಭಾಗ್ಯ ಕಾಂತಿತ್ವದಿಂದಾದಮಾನುಂ ನೆಱೆದೊನಾಗಿ ಇಂತು ಕಾಲಂ ಸಲೆ ಅರ್ಹದ್ದಾಸಂಗೇನಾನುಮೊಂದು ಕಾರಣದಿಂ[13]ದಂ[13] ವೈರಾಗ್ಯಮಾಗಿ ಜಿನವರ್ಮಂಗೆ ರಾಜಶ್ರೇಷ್ಠಿ ಪದಮಂ ಕೊಟ್ಟು

---

1 ಳ್ ಮತ್ತಾ ಪ್ರತಿಮುಖನೊಂದುದಿವಸಂ ಬಹಿರು (ಘಚಛ). 2 + ತಳ (ಘಚಛ). 3 + ವಿಷ್ಣುಶ್ರೀಯುಂ (ಘಚಛ). 4 ಮಂತ್ರಿಯ (ಕಖಗ), ಮಂತ್ರಿ (ಘಚಛ). 5 ಕಂಡಾತನುಳಿದರಸಿಯರಾ (ಘಚಛ). 6 ದ್ದೊರ್ದಂ (ಘಚಛ). 7 ಕಾಲ್ಗ (ಘಚಛ). 8 + ವಿಷ್ಣುಶ್ರೀಯಂ (ಘಚಛ). 9 ಡಿಸಿದೋ (ಚ). 10 ದೊಡಾ (ಚ). 11 + ಸಮ್ಯಗ್ದರ್ಶನ ಜ್ಞಾನ ಚಾರಿತ್ರಮಂ ಸಾದಿಸಿ (ಘಚಛ). 12 + ಪುರ (ಛ). 13 ದಾದಮಾನುಂ (ಘಚಛ).

ಶಿವಗುಪ್ತಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು [1]ತಪಂಗೆಯ್ದು[1] ಮೋಕ್ಷಕ್ಕೆ ವೋದನ್ ಮತ್ತಿತ್ತ ಜಿನವರ್ಮನುಂ ಪಲವುಂ ಜಿನಾಲಯಂಗಳಂ ಮಾಡಿಸಿ ದಾನ ಪೂಜೆ ಶೀಲೋಪವಾಸಮೆಂದಿಂತು ಚತುರ್ವಿಧಮಪ್ಪ ಶ್ರಾವಕಧರ್ಮದೊಳಗ್ಗಳನಾಗಿ ನೆಗೞುತ್ತಮಿಂತು ಪಲಕಾಲಂ ಸಲೆ

ಮತ್ತಾ ಮುನ್ನಿನ ಭವದ ನಾಗಚಂದ್ರನೆಂಬೊಂ ಸಾರ್ಥಾಧಿಪತಿ ವಿಷ್ಣುಶ್ರೀಯೆಂಬ ತನ್ನ ಭಾರ್ಯೆಯ ವಿಯೋಗಂ ಕಾರಣಮಾಗಿ ಆರ್ತಧ್ಯಾನದಿಂ ಸತ್ತು [2]ತಿರ್ಯಙ್ನರ[2]ಕಾದಿಗಳೊಳ್ ಪಲಕಾಲಂ ತೊೞಲ್ದೀ ಭರತಕ್ಷೇತ್ರದೊಳ್ ಕಪಿಲನೆಂಬ ಪಾರ್ವಂಗಂ ಗಂಗೆಯೆಂಬ ಪಾರ್ವಂತಿಗಂ ಭಾರದ್ವಾಜನೆಂಬ ಮಗನಾಗಿ ಪುಟ್ಟಿ ಕನಕದಂಡಿಯೆಂಬ ಪರಿವ್ರಾಜಕಂಗೆ ಶಿಷ್ಯನಾಗಿ ನಾನಾ ದೇಶಂಗಳಂ ವಿಹಾರಿಸುತ್ತಂ ಕನಕಪುರಕ್ಕೆ ವಂದು ಮಾಸೋಪವಾಸಂಗೆಯ್ಯುತ್ತಂ ಮಹಾತಪಸ್ವಿಯಾಗಿ ನೆಗೞುತ್ತಿರೆ ತತ್ಪುರಾಧಿಪಂ ಹರಿವಾಹನನೆಂಬರಸಂ ಕಂಡಾದಮಾನುಮಾ ತಪಸ್ವಿಗೆ ಭಕ್ತನಾಗಿ ಬೆಸಕೆಯ್ಯೆ ಕಾಲಂ ಸಲೆ ಮತ್ತೊಂದು ದಿವಸಮರಸನೊಡನೆ ಜಿನವರ್ಮನಾ ಪರಿವ್ರಾಜಕನ ನಿವಾಸಕ್ಕೆ ವೋದೊಡೆ ಜಿನವರ್ಮನಂ ಕಂಡು [3]ಪೂರ್ವ ವೈರ[3] ಸಂಬಂಧದಿಂದಾದ ಕ್ರೋಧಾಗ್ನಿ ಪೆರ್ಚೆ ಮಱುಗುತ್ತಿರ್ದ್ದ ಮನಮನೊಡೆಯ [4]ತಪಸ್ವಿಯ[4]ನರಸನಿಂತೆಂದಂ ನೀಮೆಮ್ಮ ಮನೆಯೊಳ್ [5]ಪಾರಿಸಲ್ವೇೞ್ಪುದೆಂ[5]ದು ಪ್ರಾರ್ಥಿಸಿದೊಡಾತನಿಂತೆಂದಂ ಒಂದು ಪಾಂಗಿನೊಳ್ ನಿಮ್ಮ ಮನೆಯೊಳ್ [6]ಪಾರಿಸು[6]ವೆನೀ ಜಿನವರ್ಮನ ಬೆನ್ನೊಳಡಿಯಿಲ್ಲದ ತಳಿಗೆಯನಿಟ್ಟು ಬಿಸಿಯ ತುಯ್ಯಲನುಣ್ಬುದೆನಗೞ್ತಿಯಿಾ ಪಾಂಗಿನೊಳೆನ್ನನೂಡಲಾರ್ಪೊಡುಣ್ಬೆನಲ್ಲದಾಗಳುಣ್ಣೆನೆಂದು ಪೇೞ್ದೊಡೆ ಕೇ[7][ಳ್ದ ಚ್ಚಿ][7]ಗನಾದರಸನಂ ಜಿನವರ್ಮಂ ಕಂಡಿಂತೆಂದಂ ದೇವಾ ತಪಸ್ವಿಗಾವ ಪಾಂಗಿನೊಳ್ ಮೆಚ್ಚು ಮೆಚ್ಚಿದ ಪಾಂಗಿನೊಳುಣ್ಗೆಂದೊಡಂಬಟ್ಟನಾಗಳಾ ಗರ್ಭಸುಖಿಯ ಬೆನ್ನೊಳ್ ಪಿರಿಯ [8]ಪರಿಯಾಣಮ[8]ನಿಟ್ಟದಂ ತೆಕ್ಕನೆ ತೀವಿ ಬಡ್ಡಿಸಿದೊಡೆ ಕುದಿಯುತ್ತಿರ್ದ್ದ ತುಯ್ಯಲಂ [9]ತಣ್ಣಿತ್ತಾಗಿಯಾ[9]ಱುವನ್ನೆಗಂ ಪಾರುತ್ತಿರ್ದ್ದ ನೀಡುಂ ಬೇಗಮುಂಡು ಸಮೆದ ಬೞಿಕ್ಕೆ ತಳಿಗೆಯನೆತ್ತಿದೊಡಾ ತಳಿಗೆಯೊಡನೆ ಬೆನ್ನ ತೊ[10]ವ[10]ಲೆಲ್ಲಮೆರ್ದುಪೋದುದನರಸಂ ಕಂಡೀತಂ ತಪಸ್ವಿಯಲ್ಲಂ* ರಾಕ್ಷಸಂ ಪಂಚಮಹಾಪಾತಕನನೀ ಪೊೞಲೊಳಿರಲೀಯದಟ್ಟ ಕ[11]ಳೆಯಿ[11]ಮೆಂದು ನೃಪತಿ ಮುಳಿದೊಡೆ ಜಿನವರ್ಮಂ ತಪಸ್ವಿಗೆ ಮುಳಿಯಲ್ವೇಡೆಂದು ಬಾರಿಸಿ ಈತಂಗೇನುಂ ದೋಷಮಿಲ್ಲೆನ್ನ ಪೂರ್ವಕೃತ[12]ಕರ್ಮ[12]ಫಳವಿಪಾಕಮೆಂದು ನೃಪತಿಗೆ ಪೇೞ್ದು ಪರಿವ್ರಾಜಕಂಗೆ ನಿಶ್ಶಲ್ಯಂಗೆಯ್ದರಸನುಮಂ ಸ್ವಜನ ಪರಿಜನ ಬಂಧುವರ್ಗಮುಮಂ ಬಿಡಿಸಿ ಶ್ರೀವರ್ಮರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಮಹಿಷಗಿರಿಯೆಂಬ ಪರ್ವತದೊಳೀ ಪು[13][ಣ್][13] ತೀರ್ವನ್ನೆಗಂ ಕೈಯನೆತ್ತಿಕೊಳ್ಳೆನೆಂದು ಕಾಯೋ

---

1 ಸಮ್ಯಗ್ದರ್ಶನ ಜ್ಞಾನ ಚಾರಿತ್ರಮುಂ ಸಾದಿಸಿ (ಚಛ). 2 ನರಕತಿರಿ (ಕಗ). 3 (ಘಕಗ) ಗಳಲ್ಲಿಲ್ಲ. 4 (ಕಗ) ಗಳಲ್ಲಿಲ್ಲ. 5 ಪರಸಲ್ವೇಳ್ಪುದೆಂ (ಕಖಗ). 6 ಪರಸು (ಕಖಗ). 7 ಕಗಿಜ್ಜಿ (ಘಕಗ), ಳ್ದ ಜ್ಜ (ಘಚಛ). 8 ತಳಿಗೆಯ (ಚಛ). 9 ತನ್ನಿಂ ತಾನಾ (ಕಗ). 10 ಗ (ಕಗ). 11 ಳಿಪಿ (ಘಚಛ). 12 (ಕಖಗ) ಗಳಲ್ಲಿಲ್ಲ. 13 ಂಣು (ಸ).

ತ್ಸರ್ಗದಿಂ ನಿಂದೊನಂ ಗೃಧ್ರವಾಯಸಾದಿಗಳ್ ಪುಣ್ಣಂ ತೋಡಿ ತಿನೆ ಮೇರುಪರ್ವತಂ ಬೊಲಚಳಿತ ಧೈರ್ಯನಾಗೊಂದು ತಿಂಗಳ್ವರೆಗಂ ಸೈರಿಸಿ[1] ಸರ್ವಾಥಿಮರಣದಿಂ ಮುಡಿಪಿಯಚ್ಯುತಕಲ್ಪದೊಳಿಪ್ಪತ್ತೆರಡು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊನಚ್ಯುತೇಂದ್ರನಾಗಿ ಪುಟ್ಟಯಲ್ಲಿಯ ದೇವಲೋಕದ ದಿವ್ಯಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಸನತ್ಕುಮಾರನಾದನಾ ಪರಿವ್ರಾಜಕನುಮಾಯಚ್ಯುತೇಂದ್ರಂಗೆ ವಾಹನ [ದೇವನಾ[2]ದೊನ[2]ಲ್ಲಿಂ ಬಟ್ಟಿಬಂದಿಲ್ಲಿ ಚತುರ್ಗತಿ ಸಂಸಾರದೊಳ್ ನೀಡುಂ ತೊಳಲ್ದಂಜನಗಿರಿಯೆಂಬ ಪರ್ವತದ ತಟದೊಳ್ ತಾಪಸಾಶ್ರಮದೊಳ್ ವಸಿಷ್ಠನೆಂಬ ತಾಪಸಂಗಂ [3]ಘೂಕೆ[3]ಯೆಂಬ ತಾಪಸಿಗಂ [4]ಬಕ[4]ನೆಂಬೊಂ ಮಗನಾಗಿ ಪುಟ್ಟಿ ತಾಪಸ ತಪಮಂ ಕೈಕೊಂಡು ನೆಗಟ್ದು ಮಡಿದು ಸಿತಯಕ್ಷನಾದನೆಂದಿಂತಿವ್ವರ ಪೂರ್ವಭವವೈರಸಂಬಂಧಿಯಪ್ಪ ಕಥೆಯಂ ಸವಿಸ್ತರಮಾಗಿ ಸುಮಾಳಿಗಳೆಂಬವಧಿಜ್ಞಾನಿಗಳಪ್ಪ ಚಾರಣರಿಸಿಯರ್ ಪೇಟೆ ಎನ್ನ ಸ್ವಾಮಿಯಪ್ಪ ಖಚರೇಂದ್ರಂ ಕೇಳ್ದಾದಮಾನುಂ ಸಂತುಷ್ಟಚಿತ್ತನಾಗಿ ಭಟಾರರಂ ಬಂದಿಸಿ ತನ್ನ ಪೊಟಲ್ಗೆವೋದನ್

ಎಂದಿಂತು ಕಥಾಸಂಬಂಧಮೆಲ್ಲಮಂ ಕಮಳಮತಿಯೆಂಬ ಖೇಚರವಿಳಾಸಿನಿ ಸನತ್ಕುಮಾರಂ ಪೇಟವೇಟ್ದೊಡೆ ಮಹೇಂದ್ರಸಿಂಹಂಗೆ ಪೇಟ್ದೊಳಾ [5]ಅವಸರ[5]ದೊಳ್ ಕುಮಾರಂ ನಿದ್ರಾಸುಖವಿಮುಕ್ತನಾದೊಡಾತನ ಸಮೀಪಕ್ಕೆ ಮಹೇಂದ್ರಸಿಂಹಂ ಪೋಗಿ ಇಂತೆಂದಂ[6] ನಿನ್ನ ವಿಯೋಗದೊಳಪ್ಪ ದುಃಖದಿಂದಂ [7]ವಿಶ್ವಸೇನ ಮಹಾರಾಜನುಂ ಸಹದೇವಿ ಮಹಾದೇವಿ ಮೊದಲಾಗೊಡೆಯವರ್ಗ್ಗಳೆಲ್ಲಂ ಪ್ರಾಣಸಂದೇಹಮಾಗಿರ್ಕ್ಕು[7]ಮದಱಿಂ ನಿಮ್ಮ ಪೊಟಲ್ಗೆ [8]ಪೋಗಲ್ವೇಟ್ಕು[8]ಮೆಂದು ಪೇಟ್ದೊಡಾತನುಮಂತೆಗೆಯ್ವೆನೆಂದು ತಮ್ಮ ಮಾವಂಗಳಂ [9]ಬಿಡಿ[9]ಸಿ ವಿಚಿತ್ರಮಪ್ಪ ರಥಗಜ ತುರಗ ಗರುಡ ಕಳಹಂಸ ಮಯೂರ ಮಕರ ಸಿಂ[10]ಹ ವಿಮಾನಾಧಿರೂಢರ್ಕ್ಕಳಪ್ಪ[10] ವಿದ್ಯಾಧರರ್ಕ್ಕಳುಮಷ್ಟಸಹಸ್ರ ಸಂಖ್ಯಾ ಪ್ರಮಾಣಮಪ್ಪರಸಿಯರ್ಕ್ಕಳುಂ ಬೆರಸು ಮಹಾವಿಭೂತಿಯಿಂದಂ ಬಂದು ಹಸ್ತಿನಾಪುರಮಂ ಪೊಕ್ಕನಿಬರುಂ ವಿಶ್ವಸೇನ ಮಹಾರಾಜಂಗಂ ಸಹದೇವಿ ಮಹಾದೇವಿಗಂ ಸಾಷ್ಟಾಂಗಮೆಱಗಿ ಪೊಡೆವಟ್ಟು ಅನರಾಶೀರ್ವಚನ ಶತಸಹಸ್ರಂಗಳನಾಂತು ಕೊಂಡು ಸುಖದಿಂದಿರೆ ಸನತ್ಕುಮಾರಂಗೆ ಚಕ್ರಂಪುಟ್ಟೆ ಸಕಳ ಚಕ್ರವರ್ತಿಯಾಗಿ ಭೋಗೋಪಭೋಗಂಗಳೆಂಬ ಮಹಾಸಮುದ್ರದೊಳ್ ಪಲಕಾಲಂ ಕ್ರೀಡಿಸುತ್ತಿರ್ಪ್ಪನ್ನೆಗಂ

ಮತ್ತೊಂದು ದಿವಸಂ ಸೌಧರ್ಮ ಕಲ್ಪದೊಳಾ ಸೌಧರ್ಮೇಂದ್ರಂ ತನ್ನ ದೇವಸಭೆಯ ನಡುವೆ ಸಿಂಹಾಸನ ಮಸ್ತಕಸ್ಥಿತಂ ದೇವರ್ಕ್ಕಳಿಂ ಪರಿವೇಷ್ಟಿತನಾಗಿ [11]ಸೌದಾ[ಮಿ]ನಿ[11]ಯೆಂಬ ನಾಟಕಮಂ ನೋಡುತ್ತಿರ್ಪ್ಪನ್ನೆಗಂ ಈಶಾನಕಲ್ಪದಿಂದಂ

[1] + ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ (ಘಚಛ). [2] ಗಿನಾ ಪುಟ್ಟಿಯ (ಕಖಗ). [3] ಗರ್ಘ್ಯಂಗೆ (ಕಖಗ). [4] ಜಠರ (ಕಖಗ). [5] ಪ್ರಸ್ತಾವ (ಘಚಛ). [6] + ನಿನ್ನ ತಾಯ್ಗಂ ತಂದೆಗಂ (ಚಛ). [7] ಪ್ರಾಣಸಂದೇಹಕ್ಕೆ ವಂದಿರ್ಕುಂ (ಚಛ). [8] ಬೇಗಂಪೋಪ (ಚಛ). [9] ಬರಿ (ಕಗ). [10] ಹಾದ್ಯನೇಕ ವಿವಿಧ ವಾಹನಾರೂಢರ್ಕಳುಮಪ್ಪ (ಛ). [11] ಸೋಕಾಮಣಿ (ಕಖಗ), ಸೌದಃಮುನಿ (ಘಚಛ).

[1]ಸಹೋ[1]ತ್ಪನ್ನ ಸಂಗಮದೇವಂ ಬಂದು ಸೌಧರ್ಮೇಂದ್ರನ ಸಭೆಯ[2]ನವಯವ[2]ದಿಂ ಪೊಕ್ಕಿರ್ದ್ದಾಗಳಾ ಸಭೆಯೊಳಿರ್ದ್ದ ದೇವರ್ಕಳ ರೂಪುಂ ತೇಜಮುಂ ಲಾವಣ್ಯಮು ಮೆಲ್ಲಮಂ ಮಾಸಿಸಿ ತನ್ನ ತೇಜಮೆಯುಗ್ಗಳಮಾಗಿರ್ದ್ದೊಡೆಂತು ಚಂದ್ರನುದಯಂ ಗೆಯ್ದಾಗಳ್ ಗ್ರಹನಕ್ಷತ್ರತಾರೆಗಳ ತೇಜಂ ಕುಂದುಗುಮಂತೆಲ್ಲರ ತೇಜಮುಮಂ ಕುಂದಿಸಿ ತಾನೆಯುಗ್ಗಳಮಾಗೆ [3]ಬೆಳಗುತ್ತಿರ್ದೊನಂ[3] ದೇವರ್ಕ್ಕಳೆಲ್ಲಂ ವಿಸ್ಮಯಂಬಟ್ಟು ನೋಡಿ ಸೌಧರ್ಮೇಂದ್ರನನಿಂತೆಂದು ಬೆಸಗೊಂಡರ್ ಸ್ವಾಮಿ ಈ ಸಂಗಮನೆಂಬ ದೇವನತಿಶಯಮಪ್ಪ ರೂಪುಂ ಲಾವಣ್ಯಮುಂ ತೇಜಮುಂ ದ್ವಾದಶಾದಿತ್ಯರ್ಕ್ಕ ಳೊರ್ಮೊದಲೆ ಉದಯಂಗೆಯ್ದಂತೆ ಬೆಳಗಿದಪ್ಪುದೇಕಾರಣದಿಂದಾದುವೆಂದು ಬೆಸ ಗೊಂಡೊಡಿಂತೆಂದು ಸೌಧರ್ಮೇಂದ್ರಂ ಪೇೞಲ್ ತೊಡಗಿದನ್

ಈತಂ ಮುನ್ನಿನ ಭವದೊಳ್ ಈ ಜಂಬೂದ್ವೀಪದ[4] ಪೂರ್ವವಿದೇಹದೊಳ್ [5]ಸೀತೆಯೆಂಬ ತೊಱೆಯ ಬಡಗಣ ದೆಸೆಯೊಳ್[5] ಪುಷ್ಕಳಾವತಿಯೆಂಬುದು ನಾಡಲ್ಲಿ ಪುಂಡರೀಕಿಣಿಯೆಂಬುದು ಪೊೞಲದನಾಳ್ವೊಂ ಸಕಳ ಚಕ್ರವರ್ತಿ ವಿಮಳವಾಹನ ನೆಂಬರಸನಾತನ ಮಹಾದೇವಿ [6]ವಿಮಳ[6]ಮತಿಯೆಂಬೊಳಾ ಇರ್ವ್ವರ್ಗ್ಗಂ ಪುಟ್ಟಿದೊಂ ಮಗಂ ಕ್ಷೀರಕುಮಾರನೆಂಬೊನಾತಂ ವೈರಾಗ್ಯಮನೊಡೆಯನಾಗಿ ತಪಂಬಡಲ್ಕೆಂದು ಬಗೆದಿರ್ದ್ದೊಡೆ ತಾಯ್ ತಪಂಬಡಲೀಯದೆನಿತಾನುಂ ತೆಱದಿಂ ನುಡಿದು [7]ತಗುಳ್ದೊಡೆ[7] ತಾಯ ವಚನಮನತಿಕ್ರಮಿಸಲಾಱದೆ ಮನೆಯೊಳಿರ್ದ್ದಂತೆ ಬ್ರಹ್ಮಚರ್ಯಂ ಮೊದ ಲಾಗೊಡೆಯ ಬ್ರತಂಗಳಂ ಪ್ರತಿಪಾಳಿಸಿ [8]ಆಚಾಮ್ಲವರ್ಧನ[8]ಮೆಂಬ ನೋಂಪಿಯಂ ಪನ್ನೆರಡು ವರ್ಷಂಬರಂ ನೋಂತು ಸಮಾಧಿಮರಣದಿಂ ಮುಡಿಪೆ ಇಂತಪ್ಪ ರೂಪುಂ ತೇಜಮುಂ ಲಾವಣ್ಯಮುಮುದಱಿಂದೀತಂಗಾದುದೆಂದು ಸೌಧರ್ಮೇಂದ್ರಂ ಪೇೞ್ದೊಡೆ ಮತ್ತಂ ದೇವರ್ಕ್ಕಳಿಂತೆಂದು ಬೆಸಗೊಂಡರ್ ಸ್ವಾಮಿ ಈತನಂತಪ್ಪ ರೂಪುಂ ತೇಜಮುಂ ಲಾವಣ್ಯಮುಮನೊಡೆಯರ್ ಪೆಱರಾರಾನುಮೊಳರೆ ಎಂದು ಬೆಸಗೊಂಡೊಡೆ ಸೌಧರ್ಮೇಂದ್ರ[9]ನೆಂದನೊಳನ್[9] ಹಸ್ತಿನಾಪುರದೊಳ್ ಕುರು ವಂಶದಾತಂ ಸನತ್ಕುಮಾರನೆಂಬೊಂ[10] ಚಕ್ರವರ್ತಿಯಾತಂ[11] ದೇವರ್ಕಳ ರೂಪುಂ ಲಾವಣ್ಯಮುಂ ತೇಜಮುಮನೊಡೆಯನಾದಮಾನುಮುಗ್ಗಳಮೆಂದು ಪೇೞ್ದೊಡೆ

ಇಂದ್ರನ ಮಾತಂ ನಂಬದೆ ವಿಜಯ ವೈಜಯಂತರೆಂಬರಿರ್ವರ್ ದೇವರ್ಕ್ಕಳ್ ಪಾರ್ವರ ರೂಪಂ ಕೈಕೊಂಡು ಹಸ್ತಿನಾಪುರಕ್ಕೆ ಸನತ್ಕುಮಾರ ಚಕ್ರವರ್ತಿಯ ರೂಪಂ ನೋಡಲೆಂದು ಬಂದು ಬಾಗಿಲೊಳಿರ್ದ್ದ ಪಡಿಯಱರನೆಂದರ್ ನಿಮ್ಮರ ಸಂಗಿಂತೆಂದು ಪೇೞಿಂ ಗೆಂಟಱಿಂ ಬಂದೆ[12]ವು[12] ನಿಮ್ಮ ರೂಪನಱಿತ್ತಿವಟ್ಟು ನೋಡ ಲ್ಕೆಂದೊಡವರುಂ ಪೋಗಿ ತಮ್ಮರಸಂಗಱಿಪಿದೊಡೆ ಅರಸನನುಮತದಿಂದವರರ ಮನೆಯಂ ಪೊಕ್ಕರಸನ ಸಾರೆವೋಗಿ ನೋೞ್ಪಾಗಳರಸಂ ಸುಗಂಧ ತೈಲದಿಂ

---

[1] ಸಾಹಸೋ (ಘಚಛ). [2] ನೆವ (ಘಚಛ). [3] ಸಭೆಯೊಳಿರ್ದ (ಕಖಗ). [4] + ಭರತದ (ಖ). [5] (ಘಚಛ) ಗಳಲ್ಲಿಲ್ಲ. [6] ಲಕ್ಷ್ಮೀ (ಘಚಛ). [7] ನಿಲಿಸಿದೊಡೆ (ಘಚಛ). [8] ಯಾಯಲವರ್ಧಮಾನ (ಕಗ), ಯಾಯಲವರ್ಗಮಾನ (ಖ), ಯಾಯಬಿಲಂವರ್ಧಮಾನ (ಚ). [9] ನೋರ್ವನೊಳನಾತಂ (ಛ). [10] + ಸಕಲ (ಚಛ). [11] + ಗೆ (ಸ). [12] ಮುಂ (ಕಖಗಛ).

ಮೆಯ್ಯನಭ್ಯಂಗನಂಗೆಯ್ದು ಮಜ್ಜನಂಬುಗಲೆಂದಿರ್ದ್ದವಸರದೊಳ್ ದೇವರ್ಕ್ಕಳ್ ಸನತ್ಕುಮಾರ ಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂಬರೆಗಂ ನಖಾಗ್ರದಿಂ ತೊಟ್ಟು ವಾಳಾಗ್ರಂಬರೆಗಂ [1]ಏಱೆಯುಮಿೞಿಯೆಯುಂ[1] ನೀಡುಂ ಭಾವಿಸಿ ನೋಡಿ ಚೋದ್ಯಂಬಟ್ಟಂತು ರೂಪುಂ ತೇಜಮುಂ ಗಾಡಿಯುಂ ಯೌವನಮುಂ ದೇವರ್ಕ್ಕಳ್ಗಮಿಲ್ಲೆಂದು ಚಕ್ರವರ್ತಿಯ ರೂಪಂ ಪೊಗೞ್ದೊಡರಸನಿಂತೆಂದಂ ನೀಮಾರ್ಗೇನೆಂಬಿರೆಲ್ಲಿಂ ಬಂದಿರೆಂದು ಬೆಸಗೊಂಡೊಡವರೆಂದರ್ ದೇವಲೋಕದಿಂ ಬಂದೆ[2]ವು ದೇವರ್ಕಳೆವು ಸೌಧರ್ಮಕಲ್ಪದೊಳ್ ದೇವರ್ಕಳ ಸಭೆಯ ನಡುವೆ ಸೌಧರ್ಮೇಂದ್ರಂ ನಿಮ್ಮ ರೂಪನಾದಮಾನುಂ ನಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿಮ್ಮಂ ನೋಡಲ್ ಬಂದೆವಿಂದ್ರನ ವ್ಯಾವರ್ಣಿಸುವುದರ್ಕ್ಕಗ್ಗಳಮೆ ನಿಮ್ಮ ರೂಪುಂ[3] ಯವ್ವನಮುಂ ಲಾವಣ್ಯಮುಮಂ ಕಂಡೆವೆಂದು ಪೇೞ್ದಾಮಿನ್ನೆಮ್ಮ ದೇವಲೋಕಕ್ಕೆ ಪೋಪೆಮೆಂದೊಡರಸಂ ಮನಂ ಪೆರ್ಚಿ [4]ತನ್ನೊಳ್ ತನ್ನ ರೂಪಂ ನಚ್ಚಿ[4] ಕಿಱಿದುಬೇಗಂ ಮಾಣಿಮಭ್ಯಂಗನಂ ಗೆಯ್ದು ರೂಪಂ ಕಂಡಿರಿಂ ಮಜ್ಜನಂ ಬೊಕ್ಕು ಪಸದನಂಗೊಂಡಿರ್ದ್ದ ರೂಪಂ ನೋಡಿ [5]ಪೋಗಿ[5]ಮೆಂದರಸಂ ನುಡಿದೊಡಂತೆ ಗೆಯ್ವೆಮೆಂದು ದೇವರ್ಕ್ಕಳಿರ್ದ್ದೊಡರಸನುಂ ಮಜ್ಜನಂಬೊಕ್ಕು ಬೇಗಂ ಸರ್ವಾಭರಣ ಭೂಷಿತನಾಗಿ ಆಸ್ಥಾನ ಮಂಟಪದೊಳ್ ಸಿಂಹಾಸನ ಮಸ್ತಕ ಸ್ಥಿತನಾಗಿ ಸಾಮಂತ ಮಹಾಸಾಮಂತರ್ ಮೂವತ್ತಿರ್ಛಾಸಿರ್ವರ್ ಮಕುಟ ಬದ್ಧರ್ಕಳುಂ ವಿದ್ಯಾಧರರ್ಕಳುಂ [6]ಯಕ್ಷದೇವರ್ಕಳುಂ[6] ಬಳಸಿಯುಮಿರ್ದೋಲಗಿಸೆ [7]ಮೂವತ್ತೆರಡುಂ[7] ಚಾಮರಂಗಳಿಕ್ಕೆ ಸೌಧರ್ಮೇಂದ್ರನಿಪ್ಪಂತಿರ್ದು ದೇವರ್ಕಳ್ಗೆ ಬೞಿಯಟ್ಟಿ ಬರಿಸಿ ನೋಡಿಮಿನ್ನೆನ್ನ ರೂಪನೆಂದು ತನ್ನಂ ತೋಱಿದೊಡೆ ದೇವರ್ಕಳ್ ನೋಡಿ ವಿಸ್ಮಯಂ ಬಟ್ಟದೇಂ ಚೋದ್ಯಮೊ

ಶ್ಲೋಕ ॥ ಅನೇಕ ರಾಗ ಸಂಕೀರ್ಣಂ ಘನಲಗ್ನಮಪಿ ಕ್ಷಣಾತ್ !
ಮಾನುಷಂ ಯೌವನಂ ಕಷ್ಟಂ ನಶ್ಯತೀಂದ್ರಧನುರ್ಯಥಾ ॥

ಎಂ[8]ದೀ ಕ್ಷಣಮಾತ್ರದೊಳೆ ಮನುಷ್ಯರ ರೂಪುಂ ಗಾಡಿಯುಂ ಚೆಲ್ವುಂ ತೇಜಮುಂ ಯೌವನಮುಂ ಕುಂದಿತ್ತೆನೆ ಚಕ್ರವರ್ತಿಯೆಂದನೆನ್ನ ರೂಪಂ ಮುನ್ನೆ ನೀ[9]ಮೆ[9] ಪೊಗೞ್ದಿರೀಗಳೇಕೆ ಪೞಿದಪ್ಪಿರೆನೆ[10] ದೇವರೆಂದರ್ ಕೇಳರಸಾ[10] ದೇವರ್ಕಳ [11]ತೇಜಮುಂ ಲಾವಣ್ಯಮುಂ[11] ಪುಟ್ಟಿದ ಪ್ರಥಮ ಸಮಯದಿಂ ತೊ[12]ಟ್ಟು ಪೆರ್ಚುತ್ತುಂ ಪೋಕುಮಾಯುಷ್ಯದ ನಡುವರೆಗಮಲ್ಲಿಂದತ್ತ ಕುಂದುತ್ತುಂ ಪೋಕುಮಾಯುಷ್ಯಾಂತಂಬರೆಗಂ[12] ಮತ್ತಾಮುಂ ನಿಮ್ಮ ರೂಪಂ ಯೌವನ ಭರದೊಳಿರ್ದ್ದುದುಮಂ ಕಂಡೆ

[1] ಏಱಲುಮಿೞಿಯೆ (ಕ), ಏಱೆಮುಂ ಇೞಿಯೆಯು (ಖಘಚ), ನೇರಲುಮಿೞಿಯೆ (ಗ). [2] ಮುಂ (ಕಖಗ). [3] + ತೇಜಮುಂ (ಛ). [4] ತನ್ನ ರೂಪ ನಚ್ಚಿ (ಕಖಗ). [5] (ಕಖಗ) ಗಳಲ್ಲಿಲ್ಲ. [6] (ಘಚ) ಗಳಲ್ಲಿಲ್ಲ. [7] ಮೂವತ್ತಿರ್ವರ್ ವಿಲಾಸಿನಿಯರ್ (ಘಚ), ಮೂವತ್ತಿರ್ವರ್ ಕನ್ನೆಯರ್ (ಛ). [8] ದೊಡೀ (ಘ), ದಾಡಿ (ಚಛ). [9] ಮುಂ (ಕಖಗಘಛ). [10] ದೇವರ್ಕಳರಸಾ (ಛ). [11] ಚೆಲ್ವುಂ ಯೌವನಮುಂ ವಿಭವಮುಂ (ಘಚಛ), ರೂಪುಂ ಗಾಡಿಯುಂ (ಛ). [12] ಟ್ಟೞಿದಿಂಗಳಾಯುಷ್ಯಮುಂಟೆನೆಯೆಡೆಯೊಳಿಲ್ಲಿಯುಂ ಕಿಡದೇಕಸ್ಥಿಯೊಳ್ ಸ್ಥಿರಮಾಗಿರ್ಕ್ಕುಮಲ್ಲಿಂದತ್ತ ಕುಂದುತ್ತಂ ಪೋಕು (ಘಚಛ).

ಮೀಗಳಾಯುಷ್ಯಮುಂ ತೇಜಮುಂ ರೂಪುಂ ಲಾವಣ್ಯಮುಂ ಯೌವನಮುಂ[1] ಕಿಱಿದು ಕುಂದಿದುದಂ ಕಂಡೆಮೆನೆ ಚಕ್ರವರ್ತಿ ನೀಮೆಂತಱಿದಿರೆಂದು ಬೆಸಗೊಂಡೊಡೆ ದೇವರ್ಕ್ಕಳೆಂದರೆಮಗವಧಿಜ್ಞಾನಮುಂಟಪ್ಪುದಱಿಂದಱಿ[2]ದೆವು[2] ಮನುಷ್ಯರ್ಗ್ಗಱಿಯಲಾಗದೆಂದೊಂದು ದೋಣಿ[3]ಕೊಂ[3]ಡಮಂ ತರಿಸಿ ನೀರಂ ತೆಕ್ಕನೆ ತೀವಿಯದಱೊಳಗೆ ಚಮರಿಯನದ್ದಿ ತೆಗೆದು ಬಳಸಿಯುಂ ಬೀಸಿದಾಗಳ್ ಸಭೆಯೊಳಿರ್ದ ಮಾನಸರ ಮೇಗೆಲ್ಲಂ ನೀರ್ ಪನಿತುದಂ ತೋಱಿ ದೇವರೆಂದರ್ ಪೇೞಿಮೀ ಚಮರಿಯೊಳ್ ತಗುಳ್ದು ಬಿಯಮಾದನಿತು ನೀರಂ ಕೊಂಡದೊಳ್ ಕುಂದಿ[4]ದುದಂ[4] ತೋಱಿಮೆಂದೊಡವರುಮಱಿಯದಿರ್ದ್ದೊಡೆಂತಿದಂ[5]ನೀಮಱಿ[5]ಯಲಾಗದಂತೆ ಮಾನಸರಾಯುಷ್ಯಮುಂ ತೇಜಮುಂ ಲಾವಣ್ಯಮುಂ ಯೌವನಮುಂ ಪ್ರತಿಸಮಯಂ ಕುಂದು[6]ತಿರ್ಕುಮಾವೀಚಿಮರಣಮಂ[6] ನಿಮಗಱಿಯಲಾಗದೆಂದು ಪೇೞ್ದು ಹೇತು ದೃಷ್ಟಾಂತಂಗಳಿಂದಂ ಪ್ರತ್ಯಕ್ಷಮಂ ತೋಱಿ ಚಕ್ರವರ್ತಿಯಂ ನಂಬೆ ನುಡಿದು ದೇವರ್ಕ್ಕಳ್ ತಮ್ಮ ಸೌಧರ್ಮಕಲ್ಪಕ್ಕೆ ಪೋದರ್

ಮತ್ತಿತ್ತ ಸನತ್ಕುಮಾರ ಚಕ್ರವರ್ತಿಗದುವೆ [7]ನಿರ್ವೇಗ[7]ಕ್ಕೆ ಕಾರಣಮಾಗಿ ಶರೀರಭೋಗಕ್ಕೆ ಪೇಸಿ ಇಂತೆಂದು ಮನದೊಳ್ ಬಗೆಗುಂ :

ವೃ ॥ ರೂಪಂ ಯೌವನಮಾಯುರಕ್ಷವಿಷಯಾ ಭೋಗೋಪಭೋಗಾ ವಪುಃ ।
ವೀರ್ಯಂ ಸ್ವೇಷ್ಟಸಮಾಗಮೋ ವಸುಮತಿಸ್ಸೌಭಾಗ್ಯಭಾಗ್ಯಾದಯಃ ॥
ನೋ ನಿತ್ಯಾಃ ಸ್ಫುಟಮಾತ್ಮನಸ್ಸಮುದಿತ ಜ್ಞಾನೇಕ್ಷಣಾಭ್ಯಾಮೃತೇ ।
ಶೇಷಾ ಇತ್ಯನುಚಿಂತಯಂತು ಸುಧಿಯಃ ಸರ್ವೇ ಸದಾಽನಿತ್ಯತಾಂ ॥

ಶ್ಲೋಕ ॥ ಆದೌ ಜನ್ಮ ಜರಾರೋಗೌ ಮಧ್ಯೇಪ್ಯಂತೇ ಖಳಾಂತಕಃ ।
ಇತಿ ಚಕ್ರೈಕ ಸಂಭ್ರಾಂತಿರ್ಜಂತೋರ್ಮಧ್ಯೇ ಭವಾರ್ಣವಂ ॥

ಎಂದಿಂತು ವೈರಾಗ್ಯಮಂ ಭಾವಿಸಿ ವಿಜಯಕುಮಾರನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪರಿವಾರಕ್ಕೆಲ್ಲಂ ನಿಶ್ಶಲ್ಯನಾಗಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದು ಪಲಂಬರ್ ಮಕುಟಬದ್ಧ[8]ರ್ಕಳರಪ್ಪರಸುಮಕ್ಕಳ್ವೆರಸು[8] ವಿನಯಂಧರ ಭಟಾರರಪಕ್ಕದೆ ತಪಂಬಟ್ಟು ದೀಕ್ಷೋಪವಾಸತ್ರಿರಾತ್ರಂ ಗೆಯ್ದು ಶರೀರಸಂಧಾರಣ ನಿಮಿತ್ತಂ ಚರಿಗೆವೊಕ್ಕೊಡೊರ್ವರ್ಳ್ ಬಡ[9]ಬಿರ್ದ್ದಿ[9] ನಿಱಿಸಿ ಪ್ರಥಮ ದಿವಸದೊಳೆ ಪಾರಕಿನ ಕೂೞ[10]ಮವರೆಯುಮೆಣ್ಣೆ[10]ಯುಮಾಡಿನಳೆಯುಮಂ ಬಡ್ಡಿಸಿದೊಡದನಮೃತಮನುಣ್ಬಂತುಂಡು ಮತ್ತಂ ತ್ರಿರಾತ್ರಕ್ಕೆ [11]ಪಚ್ಚಖ್ಖಾಣಂ[11]ಗೊಂಡರಾ ಕಾಲದಿಂ ತೊಟ್ಟಾಹಾರದೊಳಪ್ಪ ದೋಷದಿಂದಂ 'ಕಚ್ಛುಜರಖಾಸಸೋಸೋ ಭತ್ತಚ್ಛದಿ ಅಚ್ಛಿಕುಚ್ಛಿದುಕ್ಖಾಣಿ' ಎಂದಿವು ಮೊದಲಾಗೊಡೆಯವೇೞುನೂಱು

1 + ಕಿಱಿ (ಘಚಛ). 2 ವೆಮುಂ (ಕಖಗ). 3 ಗೊಂ (ಘಚ). 4 ದೆಡೆಯಂ (ಘಜಛ). 5 ನಿಮಗ (ಘಚಛ). 6 ತಿರ್ದುವೀಚಿಯೆಂಬ ಮರಣಮುಮಂ (ಕಖಗ), ರ್ಕುಮಾವಿಚಿಮರಮಂ (ಘಚ). 7 ವೈರಾಗ್ಯ (ಛ). 8 ರ್ ವೆರಸು ಅರಸಿಯರ್ ಬೆರಸಿ (ಕಗ), ರ್ ವೆರಸು ಅರಸಿಯುರುಂವೆರಸಿ (ಖ), (ಘಚ) ಗಳಲ್ಲಿಲ್ಲ. 9 ಳ್ದಿ (ಕಖಗ), ದ್ದಿ (ಚಛ). 10 ಮಾವರೆಯೆಣ್ಣೆ (ಕಗ). 11 ಪ್ರತ್ಯಾಖ್ಯಾನಂ (ಘಚ).

ವ್ಯಾಧಿಗಳಂ ನೂಱು ವರುಷಂಬರಂ ಒಳ್ಪಿತ್ತಾಗಿ ಸೈರಿಸಿ ಉಗ್ರೋಗ್ರ ತಪದಿಂ ದೀಪ್ತತಪಂ ಮಹಾತಪಂ ಘೋರತಪಮೆಂದಿವು ಮೊದಲಾಗೊಡೆಯ ತಪಂಗಳಂ ಗೆಯ್ಯೆ ತಪದ ಮಹಾತ್ಮ್ಯದಿಂದಂ ಆಮೋಷಧಿ ಖೇಳೋಷಧಿ ಜಲ್ಲೋಷಧಿ ವಿಪ್ರೋಷಧಿ ಸರ್ವೋಷಧಿಯೆಂದಿವು ಮೊದಲಾಗೊಡೆಯ ಋದ್ಧಿಗಳ್ ಪುಟ್ಟಿದೊ[1]ಡಂ[1] ವ್ಯಾಧಿಗೆ ತಕ್ಕ ಪ್ರತೀಕಾರಮಂ ಮಾಡದಿಂತು ಘೋರವೀರ ತಪಶ್ಚರಣಂ ಗೆಯ್ಯೆ

ಮತ್ತೊಂದು ದಿವಸಂ ಸೌಧರ್ಮೇಂದ್ರಂ ತನ್ನ [2]ಸಭೆಯೊಳ್[2] ಸಿಂಹಾಸನಮಸ್ತಕಸ್ಥಿತನಾಗಿ ಧರ್ಮಶ್ರವಣಾನಂತರಂ ರಿಸಿಯರ್ಕಳ ಗುಣಂಗಳಂ ವ್ಯಾವರ್ಣಿಸುತ್ತಿರ್ದು ಸನತ್ಕುಮಾರ ರಿಸಿಯ ಗುಣಗಣಮನಾದಮಾನುಂ ಕೈಕೊಂಡಿಂತೆಂದು ಪೇೞಲ್ ತಗುಳ್ದೊನ್ ವಾತಪಿತ್ತಶ್ಲೇಷ್ಮ ಶ್ವಾಸ ಖಾಸ ಜರಾರು[3]ಚಿಛರ್ದ್ಯತಿ[3]ಸಾರಾಕ್ಷಿಕುಕ್ಷಿವೇದನಾಸ್ಫೋಟಕಂ ಪಿಟಕಂ ಶೂಲ ಭಗಂದರಂ ಕುಷ್ಠಕ್ಷಯ ಗಂಡ[4]ಶಿರೋವೇದನೆ ಮೊದಲಾಗೊಡೆಯವೇೞುನೂಱು ವ್ಯಾಧಿಗಳೊರ್ಮೊದಲೆ ಮೆಯ್ಯೊಳ್ ಪುಟ್ಟಿದೊಡಂತು ತಾಮುಂ ಋದ್ಧಿಸಂಪನ್ನರಾಗಿಯುಂ ವ್ಯಾಧಿಗೆ ತಕ್ಕ ಪ್ರತೀಕಾರಂಗೆಯ್ಯದೆ ನೂಱು ವರುಷಂಬರೆಗಂ ಒಳ್ಪಿತ್ತಾಗಿ ಸೈರಿಸಿ ತಪಂಗೆಯ್ದಪ್ಪರೆಂದು ಸೌಧರ್ಮೇಂದ್ರಂ ಪೊಗೞ್ದೊಡೆ ಕೇಳ್ದು ಮುನ್ನೆ ಬಂದ ದೇವರ್ಕಳಿರ್ವರುಂ ವೈದ್ಯರ ರೂಪಿನೊಳ್ ಮರ್ದುಗಳಂ ಪಸುಂಬೆಯೊಳ್ ತೆಕ್ಕನೆ ತೀವಿ ಪರೀಕ್ಷಿಸಲ್ಕೆಂದು ಸಾರೆವಂದು ವಂದಿಸಿ ಇಂತೆಂದರ್ ಭಟಾರಾ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮಂ ಮರ್ದಂ ಮಾಡಿ ಕಿಡಿಸಲ್ ನೆಱೆವೆ[5]ವು[5] ಮರ್ದಂ ಮಾ[6]ಡು[6]ವುದನೊಡಂಬ[7]ಡಮೇೞ್ಕುಮೆಂದೊಡೆ[7] ಭಟ್ಟಾರರುಂ ಮೋನಂಗೊಂಡು ನುಡಿಯದೆ ಕೆಮ್ಮಗಿರ್ದೊಡೆ ಪಿರಿದುಂ ಬೇಗಮಿ[8]ರ್ದೆ[8]ೞ್ದು ಪೋಗಿ ಮಱುದಿವಸಂ ಮಗುೞ್ದು ಬಂದಿಂತೆಂದರ್ ಭಟಾರಾ ವೈದ್ಯಶಾಸ್ತ್ರದೊಳಾ[9]ದಮಾನುಂ[9] ಕುಶಲರೆ[10]ಮುಂ[10] ಗ್ರಂಥಾರ್ಥ [11]ಸ್ವರೂಪದಿಂದೆಲ್ಲಾ ಕುಶಲರೆಮುಂ[11] ಕರ್ಮಜ್ಞರೆಮುಂ ಮರ್ದುಗಳುಮಭಿನವಂಗಳಾದಮೊಳ್ಳಿದಮಿರ್ದುವುಂ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮನೇೞು ದಿವಸದಿಂದೊಳಗೆ ಕಿಡಿಸಿ ನೀರೋಗಮಪ್ಪಂತಿರೆ ಮಾಡುವೆವು ಬೞಿಕ್ಕೇನುಂ ಸಂಕ್ಲೇಶಮಿಲ್ಲದೆ ತಪಂಗೆಯ್ಮಿಮೆಂದೊಡೆ ಭಟಾರರವರೊಡನೆ ನುಡಿವಾಗಳುಗು[12]ೞ ಸೀ[12]ಕರಂಗಳ್ ತಮ್ಮ ಮುಂಗೆಯ್ಯ ಮೇಗೆ ಬೀೞ್ದೊಡೆ ಬೆರಲಿಂ [13]ಸೀಂಟೆ[13] ತೋೞಿದಾಯೆಡೆ ಸುವರ್ಣಾಯಮಾನಮಾಗಿ ತೊಳಗುತ್ತಿರ್ದ ಮೆಯ್ಯ ತೇಜಮುಮಂ ದೇವರ್ಕಳ್ ವಿಸ್ಮಯಂಬಟ್ಟು ನೋಡುತ್ತಿರೆ ಭಟಾರರಿಂತೆಂದರೆಮಗೆ ಮರ್ದು ಬಾೞ್ತೆಯಪ್ಪೊಡೆಮಗಾಮೆ ಮರ್ದಂ ಬಲ್ಲೆ[14]ಮೆ[14]ಮಗದು ಬಾೞ್ತೆಯಲ್ತು ನೀಮುಂ ಜಾತಿಜರಾಮರಣಂಗಳೆಂಬೆಮ್ಮ ಕುತ್ತಮಂ ಕಿಡಿಸಲಾರ್ಪೊಡಾ ಮರ್ದನೊಡಂಬಡುವೆಮುೞಿದಾವ ಮರ್ದುಮ

1 ಡನಂ (ಕಖಗ). 2 ಪರಿವಾರಂಬೆರಸು (ಘಚಛ). 3 ಜಿರಾದ್ಯೋ (ಕಖಗ). 4 + ಮಾಲಾ (ಘಚ). 5 ಮುಂ (ಕಖಗ). 6 ಡಿ ಕೆಡಿಸು (ಛ). 7 ಡುವಿರಪ್ಪೊಡೆನೆ (ಚಛ). 8 ಳ್ದ (ಕಖಗ). 9 ದಂ (ಘಚಛ). 10 ವು (ಘಚಛ). 11 ಪ್ರಯೋಗಂಗಳೆಲ್ಲಮೆಮಗೆ ಪಾಠಂ (ಘಚಛ). 12 ಡಳಸಿಖ (ಖ). 13 ತೊಡೆದು (ಘಚಛ). 14 ವೆ (ಛ).

ನೊಡಂಬಡುವೆ[1]ಮಲ್ಲೆಮೆಂ[1]ದೊಡೆ ದೇವರ್ಕಳುಮಿಂತೆಂದರ್ ಜಾತಿಜರಾಮರಣಂಗಳೆಂಬ ಕುತ್ತಮುಂ ಕಿಡಿಸಲ್ಕಾಮಾಱೆಮಾ ಕುತ್ತಮುಂ ಕಿಡಿಸಲ್ಕೆ ಭಟಾರಾ ನೀಮೆ ಸಮ[2]ರ್ಥರಿರ್ ಪರಮ[2]ವೈದ್ಯರಿರದರ್ಕ್ಕೆಂದು ಮತ್ತಂ ದೇವರ್ಕಳೆಂದರ್ ಭಟಾರಾ ಸೌಧರ್ಮೇಂದ್ರಂ ನಿಮ್ಮ ತಪದೊಳಪ್ಪ ಗುಣಂಗ[3][ಳುಮಂ][3] ವ್ಯಾಧಿಗಳಂ ಸೈರಿಸಿ ನೆಗೞ್ತೆ ನೆಗೞ್ತಿಯುಮಂ ದೇವರ್ಕಳ ಸಭೆಯ ನಡುವೆಯಾದಮಾನುಂ ಕೈಕೊಂಡು ಪೊಗೞ್ದೊಡಾಮಿಂದ್ರನ ಮಾತಂ ನಂಬದೆ ನಿಮ್ಮಂ ಪರೀಕ್ಷಿಸಲ್ಕೆಂದು ಬಂದೆ[4]ವು[4] ಸೌಧರ್ಮೇಂದ್ರನ ಪೊಗೞ್ದುದೇನುಂ ತಪ್ಪಿಲ್ಲೆಂದು ನುಡಿದು ಗುಣಂಗೊಂಡು ಮುಗುೞ್ದು ವಂದಿಸಿ ಮರ್ದುಗಳೆಲ್ಲಮನೊಂದು ಪೞವಾವಿಯೊಳ್ ಪೊಯ್ದು ದೇವರ್ಕಳ್ ತಮ್ಮ ದೇವಲೋಕಕ್ಕೆ ವೋದೊರಾ ಮರ್ದಿನ ಬಾವಿಯ ನೀರಂ ಮಿಂದೊರ್ಗ್ಗೆಲ್ಲಂ ಕುತ್ತಂಗಳ್ ಕಿ[5]ಡುವುವಾದವು[5]

ಸನತ್ಕುಮಾರ ಭಟಾರರುಮೇೞುನೂಱುಂ ವ್ಯಾಧಿಗಳಂ [6]ನೂಱುವರುಷಂ ಬರೆಗಂ[6] ಸೈರಿಸಿ [7]ಘೋರವೀರತಪಶ್ಚರಣಂಗೆಯ್ದು ಆಲದ ಮರದ ಕೆೞಗೆ ಸಂನ್ಯಸನಂಗೆಯ್ದು ಸಮಾಧಿಮರಣದಿಂ ಮುಡಿಪಿ ಮಿಕ್ಕ ರತ್ನತ್ರಯಂಗಳಂ ಸಾಧಿಸಿ[7] ಸನತ್ಕುಮಾರಕಲ್ಪದೊಳ್ ಏೞು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊನಿಂದ್ರನಾಗಿ ಪುಟ್ಟಿದೊಂ

ಮತ್ತಾರಾಧಕರಪ್ಪ ಭವ್ಯರ್ಕಳೆಲ್ಲಂ ಸನತ್ಕುಮಾರ ಭಟಾರರಂ ಮನದೊಳ್ ಬಗೆದು ವ್ಯಾಧಿಗಳೊಳಪ್ಪ ವೇದನೆಗ [ಳುಮಂ] ಪಸಿವುಂ ನೀರೞಿಕ್ಕೆ ಮೊದಲಾಗೊಡೆಯ [8]ಬಾಧೆಯುಮಂ ಸೈರಿಸಿ [9]ದೇವರಂ ಧ್ಯಾನಿಸುತ್ತಂ ಪಂಚನಮಸ್ಕಾರಮಂ ಮನದೊಳುಚ್ಚರಿಸುತ್ತಂ[9] [10]ಮಿಕ್ಕ ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ[10] ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

1 ವಲ್ಲೆಮೆಂ (ಘ). 2 ರಃಂ ಖಿಪ್ಪರ್ಂರಸು (ಕ). 3 ಳ್ರಂ (ಸ). 4 ಮುಂ (ಸ.ಛ). 5 ಟ್ಟುಪೋಪವಾ (ಚ), ಟ್ಟುವಾ (ಛ). 6 (ಘಚಛ) ಗಳಲ್ಲಿಲ್ಲ. 7 (ಘಚಛ) ಗಳಲ್ಲಿಲ್ಲ. 8 + ಪರೀಷಹಂಗಳೊಳಾದ (ಘಚಛ). 9 ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ). 10 ಮುಡಿಪಿ (ಘಚಛ).

## (೫) ಅಣ್ಣಿಕಾಪುತ್ರನ ಕಥೆ

ಅಣ್ಣಿಕಾಪುತ್ರನ ಕಥೆಯಂ ಪೇೞ್ವೆಂ :

ಗಾಹೆ ॥ ಣಾವಾಏ ಣಿಬ್ಬುಡಾಏ ಗಂಗಾಮಜ್ಝೇ ಅಮೂಢಮಾಣಮದೀ ।
ಆರಾಧಣಂ ಪವಣ್ಣೋ ಕಾಲಗದೋ[1][ಏಣಿಯಾ][1] ಪುತ್ತೋ ॥

[ಣಾವಾಏ—ನಾವೆ, ಣಿಬ್ಬುಡಾಏ—ಮುೞುಗಿದುದಾದೊಡೆ, ಗಂಗಾಮಜ್ಝೇ—ಗಂಗಾಮಹಾನದಿಯ ನಡುವೆ, ಅಮೂಢಮಾಣಮದೀ—ಮೋಹಿಸದ ಬುದ್ಧಿಯ ನೊಡೆಯನಾಗಿ, ಆರಾಧಣಂ—[2]ನಿಜಾತ್ಮಾರಾಧನೆಯಂ[2], ಪವಣ್ಣೋ—ಲೇಸಾಗಿ ಪೊರ್ದಿದೋಂ, ಕಾಲಗದೋ—ಕಾಲಂಗೆಯ್ದೊನಾಗಿ, [1][ಏಣಿಯಾ][1]ಪುತ್ತೋ—ಅಣ್ಣಿಕೆಯ ಮಗಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಉತ್ತರ ಮಧುರೆಯೆಂಬುದು ಪೊೞಲದನಾಳ್ವೊಂ ಪ್ರಜಾಪಾಳನೆಂಬೊನರಸನಾತನ ಮಹಾದೇವಿ ಸುಪ್ರಭೆಯೆಂಬೊಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊೞಲೊಳ್ ಸಾರ್ಥಾಧಿಪತಿ ಧನದತ್ತನೆಂಬೊಂ ಪರದಂ ಧನಕನಕ ಸಮೃದ್ಧನಾತನ ಭಾರ್ಯೆ ಧನಶ್ರೀಯೆಂಬೊಳಾಯಿರ್ವರ್ಗಂ ಮಗಂ ಧನದೇವನೆಂಬೊನಂತವರ್ಗಳ್ಗೆ ಸುಖದಿಂ ಕಾಲಂ ಸಲೆ

ಮತ್ತೊಂದು ದಿವಸಂ ಧನದೇವಂ ಪರದಿಂಗೆಂದು ಪಿರಿದುಂ ಸಾರ[3]ಮಪ್ಪ ಭಂಡಮಂ ತೀವಿಕೊಂಡು ಪಿರಿದುಂ ಸಾರ್ಥಂಬೆರಸು ದಕ್ಷಿಣ ಮಧುರೆಗೆ ವೋದೊಡಾ ಪೊೞಲ ರಾಜಶ್ರೇಷ್ಠಿ ತಿಳಕಶ್ರೇಷ್ಠಿಯೆಂಬೊನಾತನ ಭಾರ್ಯೆ ನಂದೆಯೆಂಬೊಳಾಯಿರ್ವರ್ಗಂ ಮಕ್ಕಳ್ ಪದ್ಮಾವತಿ[4] ಸುಮತಿ ಗುಣಮತಿಯೆಂದಿವರ್ ಮೊದಲಾಗೊಡೆಯ ಎಣ್ಬರ್ ಪೆಣ್ಗೂಸುಗಳಾದೊ[5]ಡ[5]ವರೊಳಗೆಲ್ಲರಿಂ ಕಿಱಿಯಳಣ್ಣಿಕೆಯೆಂಬೊಳಾಕೆಯಂ ಧನದತ್ತನ ಮಗನಪ್ಪ ಧನದೇವನಂ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಗುಣಂಗಳಿಂ ಕೂಡಿದೊನಂ *ತಿಳಕಶ್ರೇಷ್ಠಿಯುಂ ನಂದೆಯುಂ ಕಂಡಾತಂಗೆ ಬಯಸಿ ಅಣ್ಣಿಕೆಯೆಂಬ ಕೂಸಂ ಕೊಟ್ಟೊಡೆ ಕೆಲವು ದಿವಸಮಾ ಪೊೞಲೊಳಿರ್ದ್ದು ತಮ್ಮ ಕೊಂಡು ಪೋದ ಭಂಡಮಂ ಮಾಱಿ ಪೆಱದಂ ತಮ್ಮನಾ[6]ಟ್ಕಿ[6]ಪೂರ್ವಮಪ್ಪ ಭಂಡಮಂ ತೀವಿಕೊಂಡು ತಮ್ಮ ಪೊೞಲ್ಗುತ್ತರ ಮಧುರೆಗೆ ಬಂದಿರ್ದ್ದರನ್ನೆಗಮಣ್ಣಿಕೆಗೆ ಗರ್ಭಮಾಗಿ ಮಗಂ ಪುಟ್ಟಿದೊಡೆ ಧನದೇವನ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದಣ್ಣಿಕೆಯ ಮಗನೆಂ[7]ದಾತಂ[7]ಗಣ್ಣಿಕಾಪುತ್ರನೆಂದು ಪೆಸರನಿ[8]ಟ್ಟೊಡಾ[8]ತಂ ಕ್ರಮಕ್ರಮದಿಂ ಸುಖದಿಂ [9]ಬ[9]ಳೆದು ನವಯೌವನನಾಗಿ[10]ರ್ಪನ್ನೆಗಂ

---

[1] ಅಣ್ಣಿಕಾ (ಸ). [2] ದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ (ಘಚಛ). [3] + ಧನ (ಘಚಛ). [4] + ಪ್ರಭಾವತಿ (ಘಚಛ). [5] ರ (ಘಚ). *ಪು ೬೬–೬೯* (ಖ) ದಲ್ಲಿ ನಷ್ಟವಾಗಿದೆ. [6] ಳ್ಗೆಳ್ಗೆ ಅ (ಕಗ). [7] ದೊಡಾತಂ (ಘಛ). [8] ಟ್ಟರಾ (ಘಚಛ). [9] ಬೆ (ಕಗಚ). [10] + ಸುಖಮಿ (ಘಚಛ).

ಇತ್ತ [1]ದಮ[1]ಸೂರಿಗಳೆಂಬವರವಧಿಜ್ಞಾನಿಗಳಪ್ಪ ಆಚಾರ್ಯರ್ ಪಿರಿದುಂ ರಿಸಿ ಸಮುದಾಯಂಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರುತ್ತರ ಮಥುರೆಗೆ ಬಂದು ಬಹಿರುದ್ಯಾನ ವನದೊಳಿರ್ದ್ದರನಣ್ಣಿಕಾಪುತ್ರಂ ಪೋಗಿ [2]ವಂದಿಸಿ ಧರ್ಮಮಂ ಕೇಳ್ದು ಸಮ್ಯಕ್ತ್ವ ಪೂರ್ವಕಂ ಶ್ರಾವಕವ್ರತಂಗಳೆಲ್ಲಮಂ ಕೈಕೊಂಡು ತದನಂತರಮೆ ಭಟಾರಾ ಎನಗಾಯುಷ್ಯವೆನಿ[3]ತೆಂದು[3] ತನ್ನಾಯುಷ್ಯ ಪ್ರಮಾಣಮಂ ಬೆಸಗೊಂಡೊಡೆ ಭಟಾರರುಂ ಕಿಱಿದೆ ನಿನಗಾಯುಷ್ಯಮೆಂದು ಪೇೞ್ದೊಡೆ ವೈರಾಗ್ಯಪರಾಯಣನಾಗಿ ತಾಯುಂ ತಂದೆಯುಮಂ ನಂಟರುಮಂ ಬಿಡಿಸಿ ನಿಶ್ಶಲ್ಯಂಗೆಯ್ದು [1]ದಮ[1]ಸೂರಿಗಳೆಂಬಾಚಾರ್ಯರ ಪಕ್ಕದೆ ತಪಂಬಟ್ಟು ದ್ವಾದಶಾಂಗ ಚತುರ್ದಶಪೂರ್ವಮುಪ್ಪಾಗಮುಮೆಲ್ಲಮಂ ಕಲ್ತು ಗುರುಗಳನೊಡಂಬಡಿಸಿ ಏಕವಿಹಾರಿಯಾಗಿ ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ [4]ಗ್ರಾಮನಗರಖೇಡಖರ್ವಡಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ[4] ತೀರ್ಥಂಗಳೆಲ್ಲಮಂ ವಂದಿಸಲ್ಕೆಂದು ಗಂಗಾಮಹಾನದಿಯಂ ಪಾಯ್ದು ಪೋಪ ಬಗೆಯಿಂದಂ ನಾವೆಯನೇಱಿದೊಡದೊಂದುತ್ಪಾತ ವಾತದಿಂದಂ [5]ಗಂಗಾಮಹಾನದಿಯ[5] ನಡುವೆ ಮಡುವಿನೊಳ್ ಭಯಂಕರಮಾಗುತ್ತಿರ್ದ್ದ ತೆರೆ[6]ಯ[6]ನೊಡೆಯದಱೊಳ್[7] ಮುೞುಗಿದೊಡಾ ಅಣ್ಣಿಕಾಪುತ್ರನೆಂಬ ರಿಸಿ ಪಿರಿದಪ್ಪ ಮಹಾತ್ಮ್ಯಮಂ ಮೋಹಿಸದ ಬುದ್ಧಿಯನೊಡೆಯೊಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು [8]ಕಾಯೋ[8]ತ್ಸರ್ಗಂ ನಿಂದು [9]ಧರ್ಮಧ್ಯಾನ[9] ಶುಕ್ಲಧ್ಯಾನಂ[10]ಗಳಂ[10] ಜಾನಿಸಿ ಸಕಳ ಕರ್ಮಂಗಳಂ ಕಿಡಿಸಿ [11]ಅಂತರ್ಗತ[11] ಕೇವಲಿಯಾಗಿ ಮೋಕ್ಷಕ್ಕೆ ಪೋದರ್

ಮತ್ತಂ ಪೆಱರಾರಾಧಕರಪ್ಪವರ್ಗಳೆಲ್ಲಮಣ್ಣಿಕಾಪುತ್ರನೆಂಬ ರಿಸಿಯಂ ಮನದೊ[12]ಳಿಟ್ಟು [ಅ][12]ಚೇತನೋಪಸರ್ಗಂ ಮೊದಲಾಗೊಡೆಯ ಉಪಸರ್ಗಂಗಳುಮಂ [13]ನೀರಱ್ಕೆ ಮೊದಲಾಗೊಡೆಯ ಪರೀಷಹಂಗಳುಮಂ ಸೈರಿಸಿ[14] ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗ[15]ಳಂ ಭವ್ಯರ್ಕಳೆ[15]ಯ್ದುಗೆ

---

[1] ದಮುದರ (ಘ), ದಮವರ (ಚ), ಯಮಧರ (ಛ). [2] + ಕಂಡು (ಛ). [3] ತುಂಟೆಂದು (ಘಚ). [4] (ಘಚಛ) ಗಳಲ್ಲಿಲ್ಲ. [5] (ಘಚಛ) ಗಳಲ್ಲಿಲ್ಲ. [6] ಗಳ (ಘಚಛ). [7] + ನಾವೆ (ಘಛ). [8] ಉ (ಕಗ). [9] ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ). [10] ಮ (ಚ). [11] ಅನಂತರಂ (ಘಚಛ). [12] ಳ್ ಬಗೆದ (ಘಚಛ). [13] + ಪಸಿವುಂ (ಘಚಛ). [14] + ಸಮ್ಯಕ್ (ಘಚಛ). [15] ಳನೆ (ಚ).

## (೬) ಭದ್ರಬಾಹು ಭಟ್ಟಾರರ ಕಥೆ

ಭದ್ರಬಾಹು ಭಟ್ಟಾರರ ಕಥೆಯಂ ಪೇೞ್ವಿಂ :

ಗಾಹೆ ॥ ಓಮೋದರಿಏ ಘೋರಾಎ ಭದ್ದಬಾಹೂ ಅಸಂಕಿಲಿಟ್ಠಮದೀ ।
ಘೋರಾಎ ತಿಗಿಂಛ್ಛಾಏ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಓಮೋದರಿಏ—ಅರೆ ಉಣಿಸಿನಿಂದಂ, ಘೋರಾಎ—ಆದಮಾನಂ ಕಡಿದಪ್ಪುದಱಿಂದಂ, ಭದ್ದಬಾಹೂ—ಭದ್ರಬಾಹು ಭಟ್ಟಾರರ್, ಅಸಂಕಿಲಿಟ್ಠಮದೀ—ಸಂಕ್ಲೇಶ [1]ಪರಿಣಾಮಮಿಲ್ಲದೊನಾಗಿ,[1] ಘೋರಾಎ—ಕಡಿದಪ್ಪ, ತಿಗಿಂಛ್ಛಾಏ—ಪಸಿವಿನಿಂದಂ,* ಪಡಿವಣ್ಣೋ—ಪೊ[2]ರ್ದಿ[2]ದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನಜ್ಞಾನ ಚಾರಿತ್ರಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ [3]ಪುರವರ್ಧನಮೆಂಬುದು ನಾಡಲ್ಲಿ[3] [4]ಕೌಂಡಿನೀ[4] ನಗರಮೆಂಬುದು ಪೊಬಲದನಾಳ್ವೊಂ ಪದ್ಮರಥನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳಂತವರ್ಗಳಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಅರಸನ [5]ಪುರೋಹಿತಂ[5] [6]ನಾಲ್ಕು ವೇದಮುಮಾಱಂಗಮುಂ[6] ಪದಿನೆಂಟು ಧರ್ಮಶಾಸ್ತ್ರಂಗಳುಮಂ ಬಲ್ಲೊಂ ಸೋಮಶರ್ಮನೆಂಬೊಂ ಪಾರ್ವನಾತನ ಭಾರ್ಯೆ ಪ್ರತ್ಯಕ್ಷ ಶ್ರೀಯಾದೇವತೆಯನೆ ಪೋಲ್ವ ಸೋಮಶ್ರೀಯೆಂಬೊಳಾಯಿರ್ವರ್ಗ್ಗಂ ಮಗಂ ಪುಟ್ಟಿದೊಂ ತಾಯ್ಗಂ ತಂದೆಗಮೆಲ್ಲಾನಂಟರ್ಗೆಯುತ್ಸಾಹಮುಂ ಸುಖಮುಂ ವಿಭವಮುಮಂ ಪಡೆವುದಱಿಂದಮಾ ಕೂಸಿಂಗೆ ಭದ್ರಬಾಹುವೆಂಬ ಪೆಸರನೆಲ್ಲರುಂ ನೆರೆದಿಟ್ಟೊಡಾತನುಂ ಬಿದಿಗೆಯ ಚಂದ್ರನಂತೆ ಕ್ರಮಕ್ರಮದಿಂ ಸುಖದಿಂ ಬೆಳೆದು ಮುಂಜಿಗಟ್ಟುವ ಪ್ರಾಯಮಾದೊಡೆ ಪ್ರಶಸ್ತ ದಿವಸ ವಾರ ನಕ್ಷತ್ರ ಮುಹೂರ್ತದೊಳ್ [7]ಮುಂಜಿಬಂಧನ ಕ್ರಿಯೆಯಂ[7] ಮಾಡಿದ ಬೞಿಕ್ಕೆ ತನ್ನೋರಗೆಗಳಪ್ಪ ಪಲಂಬರ್ [8]ಮಾಣಿಗ[8]ಳ್ವೆರಸು ಪೊಱಪೊೞಲೊಳ್ ಬಟ್ಟಾಡುತ್ತಿರೆ ಭದ್ರಬಾಹು[9]ವೆಂಬ ಮಾಣಿ[9]ಯೊಂದು ಬಟ್ಟಿನ ಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪನ್ನೆಗಂ

ಇತ್ತ ವರ್ಧಮಾನಭಟ್ಟಾರರ್ ಮೋಕ್ಷಕ್ಕೆವೋದಿಂಬೞಿಕ್ಕೆ ಚತುರ್ದಶಪೂರ್ವಧಾರಿಗಳಪ್ಪ ಶ್ರುತಕೇವಳಿಗಳ್ ನಾಲ್ಕನೆಯವರ್ ಗೋವರ್ಧನರೆಂಬ ಭಟಾರರುಜ್ಜಯಂತ[10]ಮಂ[10] ವಂದಿಸಲೆಂದು ವಿಹಾರಿಸುತ್ತಂ ಬರ್ಪೊರಾ [11]ಕೌಂಡಿನೀ[11]

---

[1] ಮಿಲ್ಲದ ಪರಿಣಾಮಮನೊಡೆಯನಾಗಿ (ಘಚಛ). * + ಅಪಿ— ಮತ್ತೆ (ಸ). [2] ಳ್ದಿ (ಕಖಗ). [3] (ಘಚಛ) ಗಳಲ್ಲಿಲ್ಲ. [4] ಕಾಳಿಂಗ (ಘಛ), ಕಳಿಂಗ (ಚ). [5] ಪಾರ್ವಂ (ಘಚಛ). [6] (ಘಚಛ) ಗಳಲ್ಲಿಲ್ಲ. [7] ಮುಂಜಿಗಬದ್ಧನ ಕ್ರಿಯೆಗಳಂ (ಕಗ). [8] ಮಕ್ಕ (ಗ), + ಬ್ರಹ್ಮಚಾರಿಗಳಪ್ಪ (ಘಚಛ). [9] (ಘಚಛ) ಗಳಲ್ಲಿಲ್ಲ. [10] ಗಿರಿಯಂ(ಛ). [11] ಕಳಿಂಗ (ಘಚಛ).

ನಗರಕ್ಕೆ ವಂದು ಪೊಱವೊೞಲೊಳೊಂದು ಬಟ್ಟೆನ ಮೇಗೆ ಪದಿನಾಲ್ಕುಂ ಬಟ್ಟೆ [1]ನೊಂದೊಂದಱ ಮೇಗೋಳಿಯೊಳಿಟ್ಟಾ[1]ಡುತ್ತಿರ್ಪ್ಪ ಭದ್ರಬಾಹುಮಾಣಿಯಂ ಗೋವರ್ಧನ ಭಟ್ಟಾರರ್ ಪಿರಿದುಂ ಬೇಗಂ ನೋಡುತ್ತಿರ್ದಿಂತೆಂದು[2]ದ್ದೇ[2]ಶಂ ಗೆಯ್ದೊ ರೀತನೆಮ್ಮಿಂಬೞಿ[3]ಕ್ಕೆ ಚತುರ್ದಶಪೂರ್ವಧಾರಿಯ[3]ಪ್ಪ ಮಹಾತ್ಮ್ಯಮನೊಡೆಯೊಂ ಭದ್ರಬಾಹು ಭಟಾರರೆಂಬೊರಪ್ಪೊರೆಂದು ಬಗೆದಾತನವರ ಮನೆಗೊಡಗೊಂಡು ಪೋಗಿಯವರ ತಾಯ್ತುಂದೆಗಮಿಂತೆಂದರೀತನನೆಮಗೊಪ್ಪಿಸಿಮೆಲ್ಲಾ ಶಾಸ್ತ್ರಂಗ[4]ಳುಮಂ[4] [5]ಕಲ್ಪಿಸಿ[5] ಪಂಡಿತನಂ ಮಾಡಿ ನಿಮಗೊಪ್ಪಿಸುವೊಮೆಂದೊಡವರುಮಂತೆ* ಗೆಯ್ಯಿಮೆಂದೊಡಾತನನೊಡಗೊಂಡು ಪೋಗಿ ಕೆಲವು ದಿವಸದಿಂದೊಳಗೆ ವ್ಯಾಕರಣಂ ಪ್ರಮಾಣಂ ಛಂದಮಲಂಕಾರ ನಿಘಂಟು ಕಾವ್ಯ ನಾಟಕಂ ಮೊದಲಾಗೊಡೆಯ ಲೋಕದೊಳುಳ್ಳ ಶಾಸ್ತ್ರಂಗಳೆಲ್ಲ[6]ಮಂ ಕಲ್ಪಿಸಿ[6]ದೊಡಧಿಗಮ ಸಮ್ಯಗ್ ದೃಷ್ಟಿಯಾಗಿ ಯಾಗಮದೊಳೆಲ್ಲಮನಱಿದು ಸಂಸಾರ ಶರೀರ ಭೋಗ ವೈರಾಗ್ಯಪರಾಯಣನಾಗಿ ಭಟ್ಟಾರಾ ಎನಗೆ ದೀಕ್ಷೆಯಂ ದಯೆಗೆಯ್ಯಿಮೆನೆ ಭಟಾರರೆಂದರೆಮಗಂತು ದೀಕ್ಷೆಯಂ ಕುಡಲಾಗ ಮಗನೆ ನಿನ್ನ ಪೊೞಲ್ಗೆ ನೀಂ ಪೋಗಿ ನಿನ್ನ ಕಲ್ತವಿದ್ಯೆಯಂ ಪಂಡಿತಿ[7]ಕ್ಕೆ[7] ಯುಮನಾ ಪೊೞಲೊಳ್ ನೆಗೞ್ಚಿ ನೆಗೞ್ದ ಪಂಡಿತರ್ಕಳೊಡನೆ ವಾದಂಗೆಯ್ದವರಂ ಗೆಲ್ದು ದಶದಿಶೆಗಳೊಳೆಲ್ಲಂ ನಿನ್ನ ಪಾಂಡಿತ್ಯದ ಯಶಮಂ ಪ[8]ಸರಿ[8]ಸಿ ನಿನ್ನನಾಮೊಡಗೊಂಡು ಬಂದುದರ್ಕೆ ತಾಯ್ತುಂದೆಗಂ ಸಂತೋಸಂಮಾಡಿಯವರಂ ಬಿಡಿಸಿಯೊಡಂಬಡಿಸಿ ಬಂದೊಡೆ ತ[9]ಪಮಂ ಕು[9]ಡಲಕ್ಕುಮಂತೆಯಾಗದೆಂದೊಡೆ ಭದ್ರಬಾಹು [10]ಮಾಣಿಯುಂ[10] ಭಟ್ಟಾರರಂ ವಂದಿಸಿ ತನ್ನ ಪೊೞಲ್ಗೆವೋಗಿ ತಾಯುಂ ತಂದೆಯುಮಂ ಕಂಡು ಪೊೞಲೊಳ್ ನೆಗೞ್ದ ಪಂಡಿತರ್ಕಳೊಡನೆ ವಾದಂಗೆಯ್ದು ಗೆಲ್ದು ದಶದಿಶೆಗಳೊಳೆಲ್ಲಂ ತನ್ನ ಪಾಂಡಿತ್ಯದ ಯಶಮಂ ಪಸರಿಸಿ ತಾಯ್ತುಂದೆಗಂ ಸಂತೋಸಂ ಮಾಡಿಯವರನೊಡಂಬಡಿಸಿ ಬಂದು ಗೋವರ್ಧನ ಭಟ್ಟಾರರ ಪಕ್ಕದೆ ಕುಮಾರಬ್ರಹ್ಮಚಾರಿಯಾಗಿ ಭದ್ರಬಾಹು ತಪಂಬಟ್ಟು ಕೆಲವು ದಿವಸದಿಂದೊಳಗೆ ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಗ್ರಂಥಾರ್ಥ ಸ್ವರೂಪದಿಂ ಕಲ್ತು ಸಕಲ ಶಾಸ್ತ್ರ ಪಾರಾವಾರಗನಾಗಿ ಎಲ್ಲಾ ವೋದುಗಳುಮಂ ನೆಱೆಯೋದಿ ಕಲ್ತು[11] ಶ್ರುತದೊಳಪ್ಪ ಭಕ್ತಿಕಾರಣಮಾಗಿ ಪ್ರತಿಮಾಯೋಗಂ ನಿಂದೊರಂ ದೇವರ್ಕಳುಂ ಮನುಷ್ಯರ್ಕಳುಂ ಬಂದು ಪಿರಿದಪ್ಪ ಪೂಜೆಯಂ ಮಾಡಿಯರ್ಚಿಸಿ [12]ಪೂಜಿಸಿ ಬಂದಿಸಿದೊಡೆ[13]ಲ್ಲಾ ಋಷಿಸಮುದಾಯಮುಮಂ ಪ್ರತಿಪಾಲಿಸಲ್ಕೆ ಸಮರ್ಥರಾಗಿರ್ಪ್ಪನ್ನೆಗಂ ಗೋವರ್ಧನ ಭಟ್ಟಾರರ್ ಸಮಾಧಿ ಮರಣದಿಂದಂ ರತ್ನತ್ರಯಮಂ ಸಾಧಿಸಿ ಮುಡಿಪಿ ದೇವಲೋಕಕ್ಕೆ ವೋದರ್

---

[1] ನೋೞಿಯೋೞಿ (ಘಚಛ). [2] ಪದೇ (ಗ). [3] + ಯ್ದನೆಯ ಶ್ರುತಕೇವಳಿಯವಧಿ ಜ್ಞಾನಿ ಪಲವು ರುದ್ಧಿಗಳಿಂದಂ ಕೂಡಿದೊಂ ದೇವರಿಂದಂ ಮನುಷ್ಯರಿಂದಂ ಅರ್ಚಿಸೆ ಪೂಜಿಸೆ ಪಡುವೊಂ ಪಿರಿದ (ಘಚಛ). [4] ಳ್ಮಂ (ಘಚಛ). [5] ನೋದಿಸಿ (ಘಚಛ). [6] ಮನೋದಿಸಿ (ಘಚಛ). [7] ಕೆರ್ (ಕಗ). [8] ರಪಿ (ಘಚಛ). [9] ಪಂಗು (ಘಚಛ). [10] ಭಟ್ಟನುಂ (ಚಛ). [11] + ಬೞಿಕನವರತಿ ಸ್ಥಿತಿಯಿಂ (ಘಚಛ). [12] ದರಿಂತೆ (ಘಚಛ).

ಇತ್ತ ಭದ್ರಬಾಹು ಭಟ್ಟಾರರ್ ಚತುರ್ದಶಪೂರ್ವಧಾರಿಗಳುಂ [1]ಕಡೆ [ಯಾ] ರಿಸಿ[1]ಯಯ್ದನೆಯ ಶ್ರುತಕೇವಳಿಗಳವಧಿಜ್ಞಾನಿಗಳುಂ ಪಲವುಂ ಋದ್ಧಿಗಳಿಂ ಕೂಡಿ ದೊರೆಲ್ಲಾ ಋಷಿಸಮುದಾಯಮುಮಂ ಪ್ರತಿಪಾಳಿಸುತ್ತಂ ಗ್ರಾಮನಗರಖೇಡ ಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸು[2]ತ್ತಿರ್ಪ್ಪನ್ನೆಗಂ[2] ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ಪಾಟಳೀಪುತ್ರಮೆಂಬುದು ಪೊಲದನಾಳ್ವೊಂ ನಂದನೆಂಬರಸಂ ಪಲಕಾಲಮರಸುಗೆಯ್ಯುತ್ತಿರೆ ಮತ್ತೊಂದು ದಿವಸಂ ಚಾಣಾಕ್ಯನೆಂಬ ಭಟ್ಟನಂ ನಂದಂ ಪರಿಭವಿಸಿ ನೂಂಕಿಯಟ್ಟೆ ಕಳೆಯಿಸಿದೊಡಾತನುಂ ಮುಳಿದು ನಂದನಂ ಕೆಡಿಸಿ ನಂದನ ರಾಜ್ಯಸ್ಥಾನದೊಳ್ ಪೆಱನೊರ್ವನಂ ಚಂದ್ರಗುಪ್ತನೆಂಬೊನಂ ನಿಱಿಸಿದೊಡಾತನುಂ ಪಲಕಾಲಮರಸುಗೆಯ್ದು ಕೞಿದೊಡಾತನ ಮಗಂ ಬಿಂದುಸಾಗರನೆಂಬೊನರಸುಗೆಯ್ದು ಕೞಿದ ಬೞಿಕ್ಕಾತನ ಮಗನಶೋಕನೆಂಬೊನರಸುಗೆಯ್ಯುತ್ತಿರೆ ಆತನ ಮಗಂ ಪ್ರತಾಪದಿಂ ತೇಜದಿಂದಾದಿತ್ಯನೊಳೋರನ್ನನಪ್ಪೊಂ ಕುಣಾಳನೆಂಬೊನಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮಶೋಕ ಮಹಾರಾಜಂ ಪರಚಕ್ರದ ಮೇಗೆತ್ತಿ ಪೋಗಿ [3]ಅಲ್ಲಿಂದಂ[3] ಮಂತ್ರಿ ಪುರೋಹಿತ ತಳವಱಾದಿಗಳ್ಗಿಂತೆಂದೋಲೆಯನಟ್ಟಿದೊನುಪಾಧ್ಯಾಯಂಗೆ ಕೞಮೆಯ ಕೂೞುಂ ತುಪ್ಪಮುಂ [4]ತೊವೆಯು[4]ಮನುಣಲ್ಕೊಟ್ಟು ಕುಮಾರನನೋದಿಸುಗೆಂದೋಲೆಯನಟ್ಟಿದೊಡೆ ವಾಚಕನೋಲೆಯರ್ಥಮನಱಿಯದೆ ವಿಪರೀತಮಾಗಿಂತೆಂದು [5]ಬಾಚಿಸಿದನ್[5]

[6]ಉಪಾಧ್ಯಾಯಂ ಶಾಲಿಂ ಕೂರಂಚ ಮಶಿಂ ಘೃತಂ ದತ್ವಾ ಕುಮಾರಮಂಧಾಪಯೇತ್ ಎಂದಿಂತು ವಿಪರೀತಮಾಗಿ ಲೇಖಾರ್ಥಮುಂ ಬಾಚಿಸಿದೊಡನಿಬರುಂ ಕೇಳ್ದು ಅಪ್ರತಿಹತಶಾಸನನಪ್ಪ ನೃಪತಿಯಾಜ್ಞೆಗೆ ಭಯಸ್ಥರ್ಕಳಾಗಿ ಉಪಾಧ್ಯಾಯಂಗೆ ಕೞಮೆಯ ಕೂೞುಂ ಮಸಿಯುಂ ತುಪ್ಪಮುಮನುಣಲ್ಕೊಟ್ಟು ಕುಣಾಳನೆಂಬ ಕುಮಾರನೆರಡುಂ ಕಣ್ಗಳುಮನೊಡೆದು ಕುರುಡಂ ಮಾಡಿದ ಕೆಲವು ದಿವಸದಿಂದರಸಂ ಪರಚಕ್ರಮಂ ಸಾಧಿಸಿ ಬಂದು ಮಗಂ ಕುರುಡಾದುದಂ ಕಂಡಾದಮಾನುಮುಬ್ಬೆಗಂಬಟ್ಟು ಸೈರಿಸಲಾಱದೆ ಕುಣಾಳನರಸಿ ಚಂದ್ರಾನನೆಯೆಂಬೊಳ್ಗೆ ಮಗಂ ಪುಟ್ಟಿದೊಡಾತಂಗೆ [7]ಸಂಪ್ರತಿ[7] ಚಂದ್ರಗುಪ್ತನೆಂದು ಪೆಸರನಿಟ್ಟು ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ ಸಮಸ್ತ ರಾಜ್ಯ[8]ಭಾರಮೆಲ್ಲ[8]ಮಂ ನಿರೂಪಿಸಿ ಕುಣಾಳನುಮನೆಂದಂ ಮಗನೆ ಬೇಡು ನೀನೆಂದೊಡಾತನುಂ ಕಾಕಿಣೀ ರತ್ನಮಂ ಬೇಡಿದೊಡಾ ರತ್ನಂ ಚಕ್ರವರ್ತಿಗಲ್ಲದಿಲ್ಲೆಂದು ಮಗಂಗೆ ಮಱುಮಾತುಗೊಟ್ಟು ಸಂಸಾರ ವೈರಾಗ್ಯಮಾದಮಾನುಂ ಪೆರ್ಚಿ ಸುವ್ರತರೆಂಬ ಭಟ್ಟಾರರ ಪಕ್ಕದೆ ಜಿನದೀಕ್ಷೆಯಂ ಕೈಕೊಂಡು ಪರತ್ರೆಯಂ ಸಾಧಿಸಿದೊಂ ಮತ್ತಿತ್ತ ಸಂಪ್ರತಿ ಚಂದ್ರಗುಪ್ತಮಹಾರಾಜನರಸುಗೆಯ್ಯುತ್ತಿರೆ ಸಮಾಧಿ

---

[1] ಕಂಡುಮಾರುಷಿನ (ಖ), ಕಡೆ (ಘಚಛ), ಕಡಮಾರಿಸಿ (ಕಗ). [2] ತ್ತಂ ಕಾಲಂಸಲೆ, (ಚ). [3] ಅಲ್ಲಿರ್ದು (ಘಚಛ). [4] ತೋಯ (ಕಗ). [5] ಬಾಜಿಸಿದನ್ (ಖಗಘ). ಬೆಸಸಿದರ್ (ಛ). [6] + ಶ್ಲೋಕ॥ (ಚ). [7] ಪ್ರತಿ (ಘಚಛ) ಮುಂದೆಯೂ ಈ ಪ್ರತಿಗಳಲ್ಲಿ ಇದೇ ಪಾಠ. [8] (ಘಚಛ) ಗಳಲ್ಲಿಲ್ಲ.

ಗುಪ್ತರೆಂಬಾಚಾರ್ಯರವಧಿಜ್ಞಾನಿಗಳ್ ವಿಹಾರಿಸುತ್ತಂ ಬರ್ಪರಾ ಪಾಟಳೀಪುತ್ರಕ್ಕೆ ವಂದು ಪೊೞಲಿವೊೞಲ ಬಹಿರುದ್ಯಾನವನದೊಳಿರ್ದೊರಂ ಸಂಪ್ರತಿ ಚಂದ್ರಗುಪ್ತಂ ಪೋಗಿ ವಂದಿಸಿ ಧರ್ಮಮಂ ಕೇಳ್ದು ತದನಂತರಂ ತನ್ನ ಭವಾಂತರಂಗಳಂ ಬೆಸ [1]ಗೊಂಡೊಡೆ[1] ಭಟಾರ[2]ರ್ ಪೇೞಲ್ ತೊಡಗಿ[2]ದರ್

ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ವೈದಿಶ ಮೆಂಬುದು ಪೊೞಲದನಾಳ್ವೊಂ ಜಯವರ್ಮನೆಂಬೊನರಸನಾತನ ಮಹಾದೇವಿ [3]ಧಾರಿಣಿ[3]ಯೆಂಬೊಳಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊೞಲ ಸಾರೆ [4]ಪರಾಳ[4]ಕೂಟಮೆಂಬೂರೊಳ್ ದೇವಿಲನೆಂಬೊಂ ಶಾಕ[5]ಟಿ[5]ಕಂ ಪರದನಾತನ ಭಾರ್ಯೆ ಪೃಥ್ವಿಶ್ರೀಯೆಂಬೊಳಾಕೆಯ ಗರ್ಭದೊಳ್ ಪಾಪಕರ್ಮ ಜೀವಂ ನೆಲಸಿದೊ[6]ಡೇನುಂ[6] ನೆವಮಿಲ್ಲದೆ ಕಸವರಮೆಲ್ಲಂ ಕೆ[7]ಟ್ಟತ್ತು[7] ಮತ್ತೊಂದು ದಿವಸಂ ಪಲಂಬ[8]ರ್ ಶಾಕಟಿಕ[8]ಪರದರುಂಬೆರಸು ಬಂಡಿಗಳೊಳ್ ಪ[9]ಟ್ಟಿ[9]ಯುಂ ಧಾನ್ಯಮಂ ತೀವಿಕೊಂಡು ಪೊೞಲ್ಗೆ ಮಾಱಲೆಂದು ಪೋಪನ್ನೆಗಮೆಡೆಯೊಳಡವಿ ಯೊಳ್ [10]ಕಳ್ಳರ್[10] ಬಟ್ಟೆಗಟ್ಟೆ [11]ಮೇಲ್ವಾಯ್ದಿಱ[11]ದೊಡೆ ದೇವಿಲಂ ಮೊದಲಾ [12]ಗೊಡೆಯ[12] ಪಲಂಬರ್ ಪರದರ್ ಸತ್ತರುೞಿದರೆಲ್ಲಮೋಡಿ ಕೆಟ್ಟೊಡೆ ಬಂಡಮುಂ ಮೆಟ್ಟುಗಳುಂ ಮೊದಲಾಗೆಲ್ಲಮಂ ಕಳ್ಳರ್ ಕೊಂಡುಪೋದರಾ ಪ್ರಸ್ತಾವದೊಳ್ ಪೃಥ್ವಿಶ್ರೀ ಬೆಸಲೆಯಾಗಿ[13] ನಂದಿಮಿತ್ರನೆಂದಾ ಕೂಸಿಂಗೆ ಪೆಸರನಿಟ್ಟು ಎರ[14]ಡುಮೂಱು ತಿಂಗಳಿಂಗೆ[14] ತಾಯ್ ಕೞಿದೊಡೆ [15]ಬಂದ ನಂಟರ್ ನಡಪೆ ಬಳೆದೊಡಾ ನಂಟರುಂ ಕೞಿದುಳ್ಳರೆಲ್ಲಂ ಸತ್ತು[15] ಕುಲಕ್ಷಯಮಾದೊಡೂರವರೆಲ್ಲಮಿಂತೆಂದರೀ ತರುವಲಿ ನಮ್ಮೂರೊಳಿರೆ ನಮಗೆ ಸಾವುಂ ಕೇಡುಮಮೋಘಮಕ್ಕುಮಿವನನಟ್ಟಿ[16] ಕಳೆ[17]ಯಿ[17] ಮೆಂದೂರಿಂದನಿಬರುಮಟ್ಟಿ ಕಳೆದೊಡಾತನ್ ಕೆಲದೂರ್ಗಳುಮಂ ನಾ[18]ಟ್ಗಳುಮಂ[18] ತೊೞಲ್ದು ಬೈಕಂದಿರಿದೆಲ್ಲಿಯಾನುಂ ಪೆತ್ತುಂ ಪೆಱದೆಯುಮಿಂತು ಬಾೞುತ್ತಂ ಪದಿನೈದು ಪದಿನಾಱು ವರುಷದ ಪ್ರಾಯದಾತನಾಗಿ ವೈದಿಶಮೆಂಬ ಪೊೞಲ್ಗೆವರ್ಪೊನ್

ಅನ್ನೆಗಂ ಕಾಷ್ಠಕೂಟನೆಂಬ ಬೆಸದವಂ ಪುಳ್ಳಿಯ ಪೊಱೆ[3]ಯಂ ಪೊತ್ತು [19]ಪೊೞಲ್ಗೆ[19] ವರ್ಪೊನಂ ಕಂಡಾತನೊಡನೆ ಗೊಟ್ಟೆಯೊಳ್ ಬಂದು ಪೊಱವೊೞ ಲೊಳಾರಮೆಯೊಳ್ [20]ಕಾಷ್ಠಕೂಟಂ ಸೇದೆಗೆಟ್ಟು ಪುಳ್ಳಿಯ ಪೊಱೆ[3]ಯನಿೞಿಪಿ ಪಟ್ಟಿರ್ದೊಡೆ ತಾನುಂ ಪಟ್ಟಿರಲೆಂದು ಬಗೆದು ತಲೆಯತ್ತಿಡಲ್ಕಱಸಿಯೇನುಮಂ ಕಾಣದೆ ತರ್ಪೊನೆಣ್ಬರಿಂದಂ ತಳರ್ಚಲಾಱದಂತಪ್ಪ ಪಿರಿದೊಂದು ಸಿಲೆಯುಂ ತಂದು ತಲೆಯತ್ತಿಟ್ಟು ಪಟ್ಟಿರ್ದುದಂ ಕಾಷ್ಠಕೂಟನಾತನ ಬಲಮುಂ ಕಂಡು ತನ್ನ[20] ಮನೆ

[1] ಳೆ (ಘಚಛ). [2] ರಿಂತೆಂ (ಚ). [3] ವಾರಣಿ (ಕಖ). [4] ಪಲಾಲ (ಘಚಛ). [5] ದಿಕಂ (ಕಖಗ). [6] ಡೊಂದುಂ (ಘಚಛ). [7] ಟ್ಟು (ಘಚಛ). [8] ರುಂ ಶಾಕದಿಕ (ಕಖಗ). [9] ತ್ತಿ (ಸ-ಕ). [10] ಬೇಡರುಂ (ಕಖಗ). [11] ಮೇಲ್ವಾಯ್ದಿಱಿಗಿ (ಕ), ಮೇಲ್ವೊಯ್ದಿಱಿಗಿ (ಗ), ಇಱುಳು ಹಾದಿಯನಿಱಿ (ಘಛ), ಹಾದಿಯನಿರುಳು ತಾಗಿ (ಚ). [12] ಗಿ (ಕಖಗ). [13] + ಯಾ ಪೂರ್ಗೆವಂದು (ಘಚಛ). [14] ಡು ಮೂಱು ತಿಂಗಳೊಳಗೆ (ಸ-ಕ). [15] ಬಡ ನಂಟರುಂ ಕಳಿದು (ಕಖಗ). [16] + ಕಟ್ಟಿ (ಘಚಛ). [17] ವ (ಘಚಛ). [18] ಡ್ಗಳುಮಂ (ಖ), ಟ್ಗಿ ಳ್ಮಂ (ಗಘಚಛ). [19] ಪೋಗಲ್ಗೆ (ಕಖಗ). [20] ಪುಳ್ಳಿಯಂ ಮಾಱಿ (ಕಖಗ).

ಗೊಡಗೊಂಡು ಪೋಗಿಯೂಡಿ ನಿನಗೀ ಪೊೞಲೊಳಾರಾನುಂ ನಂಟರೊಳರೆಯೆಂದು ಬೆಸಗೊಂಡೊಡಾರುಮಿಲ್ಲೆಂದೊಡಂತಪ್ಪೊಡೆ [1]ನೀನೆನ್ನೊಡನಿರೆತ್ತಲುಂ ಪೋಗದಿರೆಂದು[1] ತಾಂಗಿ ತಾನುಮಾತನುಮಂತಿರ್ಪರುಂ [2]ದಿವಸಕ್ಕಂ[2] ಪುಳ್ಳಿಯಂ ತರೆ ಪದಿಂಬರ್ ತರ್ಪ ಪೊಱೆಯನೊರ್ವನೆ ತರ್ಪನಂತು ಪಲವು ದಿವ[3]ಸಂ ಸಲೆ[3] ಕಾಷ್ಠಕೂಟಂ ತನ್ನ ಪೆಂಡತಿ[4]ಜಯ[4]ಘಂಟೆಯೆಂಬೊಳನಿಂತೆಂದು ಕಲ್ಪಿಸಿದನೀತಂಗೆ ನೀಂ ಬಸಿಱ್ತೀವೆ ಬಡ್ಡಿಸದಿರೆಣ್ಣೆಯಂ ತಿಣ್ಣಮೆಱೆಯದಿರ್ ಮೀಯಲ್ ಬೇಡದೊಡಮೆಱೆಯದಿರೆಂದು [5]ಕಲ್ಪಿಸಿದೊ[5]ಡಾಕೆಯುಮಾ ಪಾಂಗಿನೊಳ್ [6]ದಿವಸಕ್ಕಂ[6] ಬಡ್ಡಿಸೆ ನಂದಿಮಿತ್ರನುಂ ಪಿರಿಯ[7] ಪುಳ್ಳಿಯ ಪೊಱೆಗಳಂ ದಿವಸಕ್ಕಂ ತಂದು ಕುಡಲವಂ ಮಾಱಿ ಕಾಷ್ಠಕೂಟ ನೊಡೆಯನಾದೊನಿಂತು ದಿವಸಂಗಳ್ ಸಲೆ ಮತ್ತೊಂದು ದಿವಸಂ ಜಯಘಂಟೆ ಕರುಣಿಸಿ ತಣಿಯೆ ಬಡ್ಡಿಸಿದೊಡುಂಡು ಮಱುದಿವಸಮಿರ್ವರುಂ ಪುಳ್ಳಿ[8]ಗೆ ಪೋ[8]ದಲ್ಲಿ ನಂದಿಮಿತ್ರನೆಂದನಯ್ಯಾ [9]ಎನಗುಡಲಿಲ್ಲೇನುಮೊಂದು ದಮ್ಮಕ್ಕಾದೊಡಂ[9] ಸೀರೆಯಂ [10]ಕೊಂಡೀಯಿ[10]ಮೆಂದೊಡಂತೆ ಗೆಯ್ವಮೆಂದು ಮಱುಮಾತುಗೊಟ್ಟಿರ್ವರುಂ [11]ಪುಳ್ಳಿಯ ಪೊಱೆಯಂ[11] ಮನೆಗೆ [12]ತಂ[12]ದ ಬೞಿಕ್ಕೆ [13]ಕಾಷ್ಠಕೂಟಂ[13] ಪೆಂಡತಿಯ ನೆಂದನೀತಂಗೆ ನೀಂ ಬಸಿಱ್ತೀವೆಯುಣಲಿಕ್ಕಿದಾ ಎಂದೊಡೆ ಕರುಣಿಸಿ ಪರ್ವ ಮೆಂದು ತಣಿಯೆಯುಣಲಿಕ್ಕಿದೆನೆಂದೊಡೆ ಮುಳಿದು ಸಾಯೆಬಡಿದು ಮನೆಯಿಂ ಪೆಂಡತಿಯನಟ್ಟಿ ಕಳೆದೊಡೆ ನಂದಿಮಿತ್ರಂ ಪೋಗಿ ಜಯಘಂಟೆಯಂ ಬೆಸಗೊಂಡನ್ ನಿನ್ನನೇಕೆ ಕಾಷ್ಠಕೂಟಂ ಬಡಿದ[14]ನಬ್ಬಾ ಎಂದು ಬೆಸಗೊಂಡೊಡೆ[14] ನಿನಗೆ ನಿನ್ನೆ ತಣಿಯೆಯುಣಲಿಕ್ಕಿದೆನೆಂದು ಮುಳಿದು ಬಡಿದಟ್ಟಿಕಳೆದೊನೆಂದೊಡಿಂತಪ್ಪ ಪಂಚ ಮಹಾಪಾತಕನ ಮನೆಯೊಳ್ ಮಾರಿಯಿರ್ಕೆಂದು ಕಾಷ್ಠಕೂಟನಂ ಬಿಸುಟ್ಟು ಪೋಗಿ ಬೇಱೆ ತನಗೆ ಪುಳ್ಳಿಗಳಂ ದಿವಸಕ್ಕಂ ತಂದು ಮಾಱಿಲ್ತಗುಳ್ದೊಡೆಂಟು ದಮ್ಮದ ಪುಳ್ಳಿಯಂ ತಂದೊಡಮೊಂದು [15]ಪಣ[15]ಮನಪ್ಪೊಡಂ ಪೆಱದೆ ಬಸಿರ್ಗೊಟ್ಟಿಮಂಬಲಿಗ ಮೆಣ್ಣೆಗಂ ಕೞಿಗಂ ಕೊಟ್ಟು ಪೋಕುಮಿಂತು ಬಾೞುತ್ತುಮಿರೆ

ಮತ್ತೊಂದು ದಿವಸಂ ಪುಳ್ಳಿಗೆ ಪೋಗಿ ಪುಳ್ಳಿ[16]ಯ ಪೊಱೆಯಂ[16] ಪೊ[17]ತ್ತು[17] ಬರ್ಪೊನನ್ನೆಗಮೆಡೆಯೊಳ್ ಶಿವಗುಪ್ತಾಚಾರ್ಯರಷ್ಟಾಂಗ ನಿಮಿತ್ತಂಗಳಂ ಬಲ್ಲೊರ ಡವಿಗೆ ವೋಗಿ ಸಿದ್ಧಾಂತಮಂ ಪರಿವಿಡಿಗೆಯ್ದಂದಿನ ದಿವಸಮಲ್ಲಿಯೆ ದೇವರಂ ವಂದಿಸಿ ಪಕ್ಷೋಪವಾಸದ ಪಾರಣೆಗೆಂದು ಪೊೞಲ್ಗೆ ಚರಿಗೆವುಗುತಂ[18]ದೊಡೆ[18] ನಂದಿಮಿತ್ರಂ ಕಂಡಾಶ್ಚರ್ಯಭೂತನಾಗಿ ನೀಡುಂ ನೋಡಿಯಿವರೆಲ್ಲಿಗೆ ವೋದಪ್ಪರೋ

---

1 ನೀನೆತ್ತಲುಂ ಪೋಗಲ್ವೇಡೆನ್ನೊಡವಿರೆಂದು (ಘಚಛ). 2 ನಿಚ್ಚ ನಿಚ್ಚಂ (ಘಚಛ). 3 ಮಂತರ (ಕಖಗ). 4 ಯಮು (ಘಚಛ); ಮುಂದಕ್ಕೂ ಇದೇ ಈ ಪ್ರತಿಗಳ ಪಾಠ. 5 ಪೇಳ್ದೊ (ಘಚ). 6 (ಘಚಛ) ಗಳಲ್ಲಿಲ್ಲ. 7 + ವಪ್ಪ (ಘಚಛ). 8 ಯತರವೋ (ಘಚಛ). 9 ಎಮಗುಡಲಿಲ್ಲೇನುಮೊಂದು ದಮ್ಮಕ್ಕಪ್ಪಡಂ (ಘ), ಎನಗೊಂದು (ಚ), ಎಮಗುಡಲೊಂದು ದಮ್ಮಕ್ಕಪ್ಪಡಂ (ಛ). 10 ಕುಡಿ (ಕಗ). 11 (ಘಚಛ) ಗಳಲ್ಲಿಲ್ಲ. 12 ವಂ (ಘಚಛ). 13 (ಕಖಗ) ಗಳಲ್ಲಿಲ್ಲ. 14 ಟ್ಟಿ ಕಳೆದನೆಂದೊಡೆ (ಘಚಛ). 15 ದಮ್ಮ (ಘಚಛ). 16 ಯಂತಲೆವೊಱೆ (ಘಚಛ). 17 ಳ್ತು (ಕಖಗ). 18 ದರಂ (ಘಚಛ).

ಎಂದು ಬೞಿವೞಿಯನೆ ವಂದು ಪೊಱವೊೞಲ ಬಸದಿಯ ಪ್ರಾಕಾರದೊಳಗೆ ಪುಳ್ಳಿಯ ಪ್ರೊಱ[1]ಯನಿಕ್ಕಿ ನೋೞ್ಪಿನನ್ನೆಗಮಿವರನೆಂದವರಂ ಬೞಿವೞಿಯನೆ ಬರ್ಪನ್ನೆಗಮಾ[1] ದಿವಸಮರಸಂ ಶಿವಗುಪ್ತ ಭಟ್ಟಾರಕರ್ಗ್ಗಂ ಪಾರಣೆಯಂ ಮಾಡುವೆಂ ಪೆಱರಾರುಂ ನಿಱಿಸಲ್ ಸಲ್ಲೆಂದು ಪೊೞಲೊಳಗೆಲ್ಲಂ [2]ಗೋಸನೆ[2]ಯಂ [3]ತೊೞಲ್ಚಿ[3]ದೊಡಂಜಿಯಾರುಂ ನಿಱಿಸುವರಿಲ್ಲದೆ ಭಟಾರರುಂ ಕಿಱುಮನೆ ಪೆರ್ಮನೆಯೆನ್ನ[4]ದುಣಲ್ತಕ್ಕ[4] ಮನೆಗಳಂ ಚರಿಗೆವ್ರಗುತ್ತಂ ಬರ್ಪೋರರಮನೆಯಂ ಪೊಕ್ಕಾಗಳ್ ಕಂಡರಸನುಂ ಮಹಾದೇವಿಯುಂ [5]ಸುವರ್ಣ[5]ಪೂರ್ಣ ಕಳಶಮುಂ ಕನ್ನಡಿಯುಂ ಪೂವುಮಕ್ಕಿಯುಂ ಮಾದುಫಲಮುಂ ಮೊದಲಾ[6]ಗೊಡೆಯನೇಕಾರ್ಚನೆಯಿಂದಿದಿರಂ[6] ಬಂದು ನಿಱಿಸಿ ಬಲಗೊಂಡುಬಂದು ಭಟಾರರ ಕಾ[7]ಲಂ[7] ಮಹಾದೇವಿ ನೀ[8]ರ್ವೊಯ್ಯೆ[8] ಅರಸಂ ತಾನೆ [9]ಪ್ರಕ್ಷಾಳಿಸಿ[9] ಬೞಿಕ್ಕೊಡವೋದ ಬೋೞದಲೆಯ ದೇಸಿಗನ ಕಾಲಂ ಬ್ರಹ್ಮಯ್ಯಾ ನೀಡಿಂ ನಿಮ್ಮ ಕಾಲಂ [10]ತೊೞೆ[10]ವೆಮೆಂದು ಮಹಾದೇವಿ ತಾನೆ ಕಾಲಂ ಕರ್ಚಿ ಭಟ್ಟಾರಕರ್ಗೆ[11]ಱಗಿ ಕುಳ್ಳಿರಿಸಿ[11] ಪಿರಿಯ ಪೊನ್ನ ತಳಿಗೆಯುಮುಚ್ಚಮಪ್ಪಡ್ಡಣಿಗೆಯುಮನಿಟ್ಟು ಬ್ರಹ್ಮಚಾರಿಗಂ ಪೊನ್ನ ತಳಿಗೆಯುಮಡ್ಡಣಿಗೆಯುಮನಿಟ್ಟು ಭಟ್ಟಾರಕರ್ಗರಸಂ ತಾನೆ ಬಡ್ಡಿಸಲ್ತಗು[12]ಳ್ದ ಬೞಿಯಂ[12] ರಾಜಾನ್ನದ ಕೂೞುಂ ಪೆಸಱ ತೊವೆಯುಂ ಬೆಣ್ಣೆಗಾಸಿದಾಮೋದ ಸುಗಂಧ ಪರಿಮಳಂ [13]ನಾರ್ಪ[13] ತುಪ್ಪಮುಂ ಪಲವುಂ ತೆಱದ [14]ಬಾಡು[14]ಗಳುಂ ತುಯ್ಯಲುಂ ಪೂರಿಗೆಯಿಡ್ಡಲಿಗೆ[15] [16]ಸೋದಿಗೆ[16] ಲಾವಣಿಗೆ ಘೃತಪೂರಂ ಲಡ್ಡುಗೆ ಮಂಡಗೆ ಮೊದಲಾಗೊಡೆಯ ಪದಿನೆಂಟುಂ ತೆಱದ ಭಕ್ಷ್ಯರೂಪಂ[17]ಗಳುಮಂ[17] ನಾನಾಪ್ರಕಾರದ ಪಾನಂ[17]ಗಳುಮಂ[17] ಭಟ್ಟಾರರ್ಗೆ ಬಡ್ಡಿಸಿದಂತೆ ಬ್ರಹ್ಮಯ್ಯಂಗೆ ಮಹಾದೇವಿ ಬಡ್ಡಿಸಿದೊಡೆ ದೇಸಿಗಂ ಕಂಡು ಬೆಱಗಾಗಿ ಪುಟ್ಟಿದಂದಿಂ ತೊಟ್ಟಂತಪ್ಪುಣಿಸಂ ಕನಸಿನೊಳಪ್ಪೊಡಂ ಕಂಡಱಿಯದ [18]ಮಗಂ[18] ಚೋದ್ಯಂಬಟ್ಟಿಂದಪ್ಪೊಡಂ ತಣಿಯೆಯುಣ[19]ಲ್ಪೆಱದ[19] ದೇಸಿಗಂ ನಾನಾಪ್ರಕಾರದುಣಿಸಂ ಸುಗಂಧಮಪ್ಪ ದಿವ್ಯಾಹಾರಮ[20]ನಾಕಂಠ[20]ಪ್ರಮಾಣಂಬರೆಗಂ ತಣಿಯುಂಡು ಬೞಿಕ್ಕೆ ಕರ್ಪೂರ ಸಮ್ಮಿಶ್ರಮಪ್ಪ [21]ನೆಲವತ್ತಿ[21]ಯಡಕೆಯ ಪೋೞ್ಗಳುಮಂ [22]ಕೈತೀವಿದೆಲೆಯುಮಂ[22] ಬ್ರಹ್ಮಯ್ಯಂಗೆ ಕೊಟ್ಟು ಭಟಾರ[23]ರ್ ಚರಿಗೆ ಮಾಡಿದ ಬೞಿಕ್ಕರಸನುಮಂ ಮಹಾದೇವಿಯುಮಂ ಕರ್ಮಕ್ಷಯಮುಮಕ್ಷಯದಾನಮುಮಕ್ಕೆಂದು ಪರಸಿ ಪೊಱಮಟ್ಟು ಬಸದಿಗೆ ಪೋಪಾಗಳ್ ಭಟ್ಟಾರರ ಬೞಿವೞಿಯನೆ

[1] ಯಂ ಬೞ್ತುವರಂ ನೋೞ್ಪೆನೆಂದವರ ಬಳಿವಳಿಯನೆ ಬರ್ಪೋನನ್ನೆಗಮಾ (ಘಚಛ). [2] ಘೋಷಣೆ (ಕಗ). [3] ತಗುಳ್ಚಿ (ಘಚಛ). [4] ದೆಯೋಗ್ಯಮಪ್ಪ (ಕಖಗ). [5] ಪೊನ್ನ (ಘಚಛ). [6] ಗರ್ಚನೆಯನಿದಿರಂ ಕೊಂಡು (ಘಚಛ). [7] ಲಮೇಲೆ (ಘಚಛ). [8] ರನೆಱದೊಡೆ (ಘಛಚ). [9] ಕರ್ಚಿದ (ಘಚಛ). [10] ಕರ್ಚುವೆ (ಘಛ), ಕರ್ಚುವ (ಚ). [11] (ಘಚಛ) ಗಳಲ್ಲಿಲ್ಲ. [12] ಳ್ದಂ ಪಳೆಯ (ಘಚಛ). [13] ತೋರ್ಪ (ಛ). [14] ಶಾಕಂ (ಘಛ). [15] + ಯಶೋವರ್ತಿಯುಂ ಅವಣಿಗೆಯುಂ (ಘಚಛ). [16] ಸೊಂಡಿಗೆ (ಗ), ಪೋಳಿಗೆಯುಂ (ಘಚಛ). [17] ಗಳ್ಮಂ (ಗಘಚಛ). [18] ನಂ (ಘಛ), ವಂ (ಚ). [19] ಲ್ಪಡೆಯದ (ಕಖಗ). [20] ೦ಕಂಠೋಪ್ಪ (ಘಚಛ). [21] ಮೆಲುವೆತ್ತ (ಚ). [22] ಕೈಯುಂ ತೀವಿ (ಕಖಗ). [22] ರುಂಡಿಂ (ಘಚಛ).

ಪೋದಂ ಭಟ್ಟಾರರ್ ಬಸದಿಯಂ ಬಲಗೊಂಡು ಕಾಲಂ ಕರ್ಚೋಳಗಂ ಪೊಕ್ಕೀಯರ್ಾ [1]ಪತ್ತಿ[1]ಯುಂ ಬಿಡಿಸಿ ಗೋಚಾರನಿಯಮಂಗೆಯ್ದುದಂ ನಂದಿಮಿತ್ರಂ ನೋಡು ತ್ತಿರ್ದ್ದಿಂತೆಂದು ಮನದೊಳ್ ಬಗೆದಪ್ಪನಿಂತಪ್ಪ ರೂಪುಮಂ ಕೈಕೊಂಡೊಡೆ[2] ಲೋಕದೊಳ್ ಗೌರವಮುಂ ಪೂಜೆಯುಮಂ ಪೆಱಲಕ್ಕುಮೊಂದುಂ ಕ್ಲೇಶಮಿಲ್ಲದೆ ದಿವ್ಯಾಹಾರಮನೆಲ್ಲಾ ಕಾಲಮುಣಲ್ಪೆಱಲಕ್ಕುಮೆಂದು ಬಗೆದು ಭಟಾರರ್ ನಿಯಮಂ ಗೆಯ್ದು ಸಮೆದಿರ್ದ ಬೞಿಕ್ಕೆ ಬಂದು ಮುಂದೆ ನಿಂದು ಕೈಗಳಂ ಮುಗಿದಿಂತೆಂದನ್ ಭಟಾರಾ ಎನ್ನಂ ನಿಮ್ಮಂತೆ ಮಾಡಿಮೆಂದೊಡೆ ಭಟಾರರಾತನಂ ನೋಡಿಯಲ್ಪಾಯುಷ್ಯನುಮಾಸನ್ನ ಭವ್ಯನಪ್ಪುದನಱಿದೊಳ್ಳಿತಪ್ಪ ಮುಹೂರ್ತದೊಳ್ ತಪಂಬಡಿಸಿದೊಡಾತನುಂ ತಪಂಬಟ್ಟು ದೀಕ್ಷೋಪವಾಸಂ ಗೆಯ್ದಿರ್ದನ್

ಅನ್ನೆಗಮರಸನುಮರಸಿಯುಂ ಭಟ್ಟಾರರೊಡವಂದ ಬ್ರಹ್ಮಚಾರಿ ತಪಂಬಟ್ಟನೆಂಬುದಂ ಕೇಳ್ದೊಸೆದು ಮುನ್ನೆಮ್ಮ ಮನೆಯೊಳುಂಡು ತಪಂಬಟ್ಟನಿಂ ನಾಳೆ ನಮ್ಮ ಮನೆಯೊಳ್ ಪಾ[3]ನಿ[3]ಗಟ್ಟುವಮೆಂದು ಬಗೆದಿರ್ದು ಮಱುದಿವಸಂ ಸಾಮಂತ ಮಹಾಸಾಮಂತರ್ಕಳುಂ ರಾಜ್ಯಚಿಹ್ನಂಗಳುಂ ಬೆರಸು ಮಹಾವಿಭೂತಿಯಿಂದರಸಂ ಪೊತ್ತಿಡಿನ ಬೇಗಂ ಬಸದಿಗೆ ವಂದು ವಾಹನದಿಂದಿೞಿದು ಬಲಗೊಂಡು ಬಂದು ಗಂಧ ಪುಷ್ಪ ದೀಪ ಧೂಪಾಕ್ಷತೆಗಳಿಂ ದೇವರನರ್ಚಿಸಿ ಕ್ರಿಯಾ ಪೂರ್ವಕಂ[4] ವಂದಿಸಿ ಭಟ್ಟಾರರ್ಗೆ ಗುರುಭಕ್ತಿಗೆಯ್ದು ಪಂಚಮುಷ್ಟಿಯಿಂ ವಂದಿಸಿ*ಯಂತೆ ಕಿ[5]ತ್ತ[5]ಯ್ಯಂಗಳುಮನಾ ಮಾರ್ಗದಿಂ ವಂದಿಸಿ ಭಟಾರರಲ್ಲಿಗೆ ವಂದು ಕುಳ್ಳಿರ್ದು ಧರ್ಮಮಂ ಕೇಳ್ದ ತದನಂತರಮೆರ್ದು ಭಟಾರಾ ಬಿನ್ನಪಂ ಕಿತ್ತಯ್ಯಂಗಳನಿಂದೆಮಗೆ ಕಾರುಣ್ಯಂಗೆಯ್ವುದಾವು ನಿಱಿಸಿ ಪಾನಿಗಟ್ಟಿ ಪುಣ್ಯಮಂ ನೆರಪಿಕೊಳ್ವಮೆಂದೊಡಂತೆ ಗೆಯ್ಯಿ ಮೆಂದಾ ನುಡಿಯಂ ಕಿ[5]ತ್ತ[5]ಯ್ಯಂಗಳ್ ಕೇಳ್ದು ಸಾಮಂತ ಮಹಾಸಾಮಂತರ್ಗೆ ಸ್ವಾಮಿಯಪ್ಪೀ ಪೃಥ್ವೀಶ್ವರಂ ಬಂದೆನ್ನುಮನರ್ಚಿಸಿ ಬಂದಿಸಿ ನೀಚವೃತ್ತಿಯಿಂ ಕಿಂಕುರ್ವಾಣಂಗೆಯ್ದಪ್ಪನಹೋ ಆಶ್ಚರ್ಯಮೀ ತಪದ ಧರ್ಮದ ಫಲಮಿಲ್ಲಿಯೆ ಪ್ರತ್ಯಕ್ಷಮಾಯ್ತಿನ್ನುಂ ಮುಂದೆ ಪಿರಿದಾಗದೆ ಮಾಣದೆಂದು ತನ್ನೊಳೆ ತಱಿಸಂದು ಮತ್ತಮಾ ದಿವಸಮುಪವಾಸಮುಂ ಕೈಕೊಂಡರ್

ಇತ್ತಲ್ ಜಯವರ್ಮ ಮಹಾರಾಜಂ ಭಟಾರರುಮಂ ಕಿತ್ತಯ್ಯಂಗಳುಮಂ ಬಂದಿಸಿದುದಂ ಭಟಾರರಱಿದೆ ಕಿತ್ತಯ್ಯಂಗಳ್ಗೆ ಏಷಣಾಸಮಿತಿ ಮೊದಲಾಗೊಡೆಯ ಬ್ರತಂಗಳಂ ಮತ್ತಂ ಸಂಕ್ಷೇಪದಿಂ ಪೇೞ್ದು ಕಿತ್ತಯ್ಯಂಗಳಿರಾ ನಿಮಗೆ ಶ್ರಮ ಮಾದಪ್ಪುದು ದೇವರಂ ಬಂದಿಸಿ ಚರಿಗೆಗೆ ಪೋಱಮಡುವುದೆನೆ ಮತ್ತಂ ತಾವು ಕೊಂಡುಪವಾಸಮುಂ ಗುರುಗಳ್ಗೆ ಪ್ರಕಟಿಸಿದನರಸಂ*ಜಯವರ್ಮ ಮಹಾರಾಜಂ

---

[1] ಪತಿ (ಕಖಗ), ಪಥ (ಚ), ವತಿ (ಚ). [2] + ದೇವ (ಕಖಗ). [3] ನೆ (ಖ). [4] + ದೇವರ (ಕಖಗ). [5] ಳ್ತ (ಕಗ), ಎಲ್ಲೆಡೆಯಲ್ಲೂ ಹೀಗೆಯೇ. *–* ಭಟಾರಾ ಇಂದೆಮ್ಮ (ರ) ಮನೆಗೆ ಚರಿಗೆ ವರಲ್ವೇಳ್ಕುಂ ಕಿತ್ತಯುಂ (ಚಿಕ್ಕಯ್ಯಂ) ಗಳನೊಡಗೊಂಡು ಬಂದು ಪಕ್ಕಡಿರ್ದು ಪಾನಿಗಟ್ಟುಸುವುದೆಂದಡೆ ಭಟಾರರೆಂದರಾಮುಂ ತಪಂಬಡಿಸಬಲ್ಲೆವು ಕಿತ್ತಯ್ಯಂಗಳಂ ನೀಮೊಡಂಬಡಿಸಿದೊಡೊಡಗೊಂಡು ಬರ್ಪೆಮು (ಪೋಗಿಮೆಂ) ನಾಮುಂ ನೋಂತಿರ್ದುಣ್ಬವಲ್ಲೆಂದೊಡರಸಂ

ಕೇಳ್ದು ಬಿನ್ನನೆ ಮೊಗಂ [1]ಮಾ[1]ಡಿ ಭಟಾರರುಮಂ ಕಿತ್ತ್ರಯ್ಯಂಗಳುಮಂ ಬಂದಿಸಿ ತನ್ನರಮನೆಗೆ ವೋಗಿ ಮಹಾದೇವಿಗೆಂದನಿಂದೆನಗೆ ರಿಸಿಯ[2]ರಂ ನಿಱಿಸಿ[2] ಪುಣ್ಯಂಗೊಳ್ವ ಭಾಗ್ಯಮಿಲ್ಲೆಂದೊಡೆ ಮಹಾದೇವಿಯಂತಪ್ಪೊಡೆ ನಾಳೆಯಾಂ ನಿಱಿಸಿ ಪುಣ್ಯಮಂ ಕೈಕೊಳ್ವೆನೆಂದೊಡರಸನೆಂದೊಂ ನಿನಗಮೆನಗಂ ಸಮಭಾ[3]ಗಂ ಪುಣ್ಯಮೆಂದುಸಿರೆ[3] ನೀಮೇಕೆನಗಿಂದು ಸಮಭಾಗಮಿಾಯದಾ[4]ದಿರಿ[4] ಪುಣ್ಯಮನಾನಿಂದು ನಿಱಿಸಿ [5]ಕೈಕೊಳ್ವೆಂ[5] ನೀಂ ನಾಳೆ ನಿಱಿ[6]ಸೆಂದು[6] ನುಡಿದು ಬಸದಿಗೆ ವೋಗಿ[7]ರೆ[7]ನ್ನ ಭಾಗ್ಯಮೆಂ ಕಿಡಿಸುಗುಮೆ ನಾಳೆ[8]ಯುಂ[8] ನಿಱಿಸಿ[9]ಯಾವಗಂ[9] ಪುಣ್ಯಮಂ ಕೈಕೊಳ್ವೆನೆಂ[10]ದರಸಂಗೆ[10] ಮಱುಮಾತುಗೊಟ್ಟು ಮಱುದಿವಸಂ ಧಾರಿಣಿ ಮಹಾದೇವಿಯಯ್ಯೂರ್ವರರಸಿಯರ್ಕಳುಂ ಪೆಂಡವಾಸದಗ್ಗಳದ ಸೂಳೆಯರ್ಕಳುಂ [11]ಬೆರಸು ವೇಸರಿಗಱ್ತಿಗಳುಂ ಪಿಡಿಗಳುಂ ಸಿಬಿಗೆಗಳುಮನೇಱಿ ಸೀಗುರಿಗಳುಮಂ ಕೊಡೆಗಳುಮಂ[11] [12]ಪಿಡಿಯಿಸಿ[12] ಎಕ್ಕ ಮದ್ದಳೆಯ ಕೊಱಲ ಝುಂಕಾರದ ಪಱೆಗಳ್ ಮುಂದೆ ಬಾಜಿಸುತ್ತಂ ಬ[13]ಱಿಯಂ[13] ಕಾಪಿನವರ್ ವರೆ ಮುಂದಣ ಮಾನಸರಂ ಪಡಿಯಱರ್ ತೊಲಗಿಸುತ್ತಂ [14]ಬರೆ[14] ವಿದ್ಯಾಧರಿಯರ್ಕಳ್ ಬರ್ಪಂತೆ ಬಂದು ಬಾಗಿಲ್ಮಾಡದ [15]ಪೊ[15]ಱಗಣ ದೆಸೆಯೊಳ್ ತಂತಮ್ಮ ವಾಹನಂಗಳಿಂದಿೞಿದು ಪೊಕ್ಕು ಬಸದಿಯಂ ಬಲಗೊಂಡು ಬಂದೊಳಗಂ ಪೊಕ್ಕು ದರ್ಶನ ವಂದನೆಗಳುಮಂ ಪೇೞ್ದೀಯರ್[16]ಪತ್ತಿ[16]ಯಂ ಬಿಡಿಸಿ †ಗಂಧ ಪುಷ್ಪ ದೀಪ ಧೂಪಾ[17]ಕ್ಷತಂಗಳಿಂ ದೇವರನರ್ಚಿಸಿ[17] ಕ್ರಿಯಾ[18]ಪೂರ್ವಕಂ[18] ದೇವರಂ† ಬಂದಿಸಿ ಶಿವಗುಪ್ತಭಟ್ಟಾರರುಮನರ್ಚಿಸಿ ಗುರುಭಕ್ತಿಗೆಯ್ದು ಬಂದಿಸಿ ಶ್ರಾವಕ ಬ್ರತಂಗಳನೇಱಿಸಿಕೊಂಡು ಬೞಿಕಿಂತೆಂದಳ್ ಭಟ್ಟಾರಾ ಇಂದೆಮ್ಮಲ್ಲಿಗೆ ನೀಮುಂ ಕಿ[19]ತ್ತ್ರ[19]ಯ್ಯಂಗಳನೊಡಗೊಂಡು ಬಂದು ಪಕ್ಕದಿರ್ದು

---

ಕಿತ್ತಯ್ಯಂಗಳಲ್ಲಿಗೆ ವೋಗಿ ಕಾಲಂ ಪಿಡಿದು ಬಂದಿಸಿ ಇಂತೆಂದಂ ಕಿತ್ತಯ್ಯಾ ನೀಮೆಮ್ಮ ಮನೆಯೊಳ್ ಪಾರಿಸಲ್ವೇಳ್ಕುಮಿನಿತೊಂದನೆಮಗೆ ನೀವು ದಯೆಗೆಯ್ಯಲ್ವೇಳ್ಕುಮೆಂದೊಡೆ ಕಿತ್ತಯ್ಯಂಗಳ ನರಸಂಸಾಮಂತ ಮಹಾ ಸಾಮಂತರ್ಕಳಿಂ ಪರಿವೇಷ್ಟಿತನಾಗಿ ಕಾಲಂ ಪಿಡಿದು ಪೊಡೆವಟ್ಟಿರ್ದೊಸಂ ಕಂಡಹೋ ತಪದ ಮಾಹಾತ್ಮ್ಯಮಿಂತುಟಾನೆಲ್ಲಿ ಪುಟ್ಟಿದನೆಲ್ಲಿ ಬಳೆದೆಂ ದೇಸಿಗನೆಂ ಬೈಕಂಗುಳಿ ಎನಿವಿರಿದು ಸಿರಿಯೆನಗೆಂತಾದುದಿಂತಪ್ಪ ಪರಮೇಶ್ವರಂ ಪೃಥ್ವೀಪತಿಯೆನ್ನ ಕಾಲ್ಗೆಱಗಿ ಪೊಡೆವಟ್ಟುಣಲ್ಬರವೇಳ್ಕುಮೆಂದು ಕಿಂಕುರುವಾಣಂಗೆಯ್ದಪ್ಪನೀ ತಪದ ಫಲಮಿಂತುಟೆಂದು ಮಾಣ್ದನಪ್ಪೊಡೆ ಪಿರಿದುಂ ಫಲಮುಂಟೆಂದು ಮನದೊಳೆ ಬಗೆದಿಂತೆಂದರಿಂದೆಮಗುಣಲ್ ಮನಮಿಲ್ಲುಪವಾಸಂಗೆಯ್ದಪ್ಪೆವೆಂದು ಪರಿಚ್ಛೇದಿಸಿ ನುಡಿದೊಡೆ (ಘಚಛ). 'ಕಿತ್ತಯ್ಯ' ಎಂಬುದಕ್ಕೆ (ಛ)ದಲ್ಲಿ 'ಚಿಕ್ಕಯ್ಯ' ಎಂದು ಎಲ್ಲೆಡೆಯಲ್ಲೂ ಪಾಠವಿದೆ.

[1] ಬಾ (ಘಚಛ). [2] ರಿಗೆ ಮಾಡಿ (ಘಚ), ರಿಗೆ ಊಡಿ (ಚ). [3] ಗ ಮೆಂದೊಡರಸಿ (ಘಚಛ). [4] ವಗಂ (ಕಖಗ). [5] ಪಡೆವೆಂ (ಘಚಛ). [6] ಸಿಮೆಂ (ಘಚಛ). [7] ಮೆ (ಘಚಛ). [8] ಯಾಂ (ಘಚ), ನಾಂ (ಛ). [9] (ಘಚಛ) ಗಳಲ್ಲಿಲ್ಲ. [10] ದುಭೂಪಾಳಂಗೆ (ಘಚಛ). [11] ನಡೆಯ ಕಳ್ತಿಗಳ್ಮನೇಱಿ ಕೊಡೆ ಸೀಗುರಿಗಳ್ಮಂ ಪಿಡಿಯಿಸಿ (ಘ). ನಿಡಿಯ ಕಳ್ತಿಗಳ್ಮನೇಱು ಕೊಡೆ ಸೀಗುರಿಗಳ್ಮಂ ಪಿಡಿಯಿಸಿ (ಚ), ನಡೆಗತ್ತೆಗಳ್ಮನೇಱು ಕೊಡೆ ಸೀಗುರಿಸಳ್ಮಂ ಪಿಡಿಯಿಸಿ (ಛ). [12] (ಕಖಗ) ಗಳಲ್ಲಿಲ್ಲ. [13] ಳಸಿಯುಂ (ಕಖಗ). [14] (ಕಖಗ) ಗಳಲ್ಲಿಲ್ಲ. [15] ಪೆ (ಕಖಗ). [16] ಪತಿ (ಖ), ಪಥೆ (ಗ), ವತಿ (ಘಛ), ಗತಿ (ಚೆ). †–† ದೇವರನಷ್ಟವಿಧಾರ್ಚನೆಯಿಂದರ್ಚಿಸಿಕ್ರಿಯಾಸಹಿತಂ (ಚ). [17] ದಿಗಳಿನರ್ಚಿಸಿ (ಘಛ). [18] ಸಹಿತಂ (ಘಛ). [19] ಳ್ತ (ಕಗಛ)

ಪಾ[1]ನಿಗಟ್ಟ ಮಾರ್ಗಮಂ ತೋಱಿ[3] ಮಗುೞಿ[3] ಬಿಜಯಂಗೆಯ್ಯಿಮೆನೆ[1] ಕಿ[2]ತ್ತ[2]ಯ್ಯಂಗಳಂ ನೀಮೆ ಬೆಸಗೊಳ್ಳಿಮವರೊಡಂಬಟ್ಟೊಡಾನೊಡಗೊಂಡು ಬರ್ಪೆಮೆಂದೊಡೆ ಧಾರಿಣಿ ಮಹಾದೇವಿ ಕಿತ್ತಯ್ಯಂಗಳಲ್ಲಿಗೆ ಪೋಗಿ ಕಾಲಂ ಪಿಡಿದು ವಂದಿಸಿ *ಇಂತೆಂದಳ್ ಕಿತ್ತಯ್ಯಾ ನಿಮಗಿಂದು ನಾ[3]ಮ್[3] ಪಾನಿಗಟ್ಟುವೆಮೆಮ್ಮ ಮನೆಗೆೞ್ತರವೇೞ್ಪುದೆಂದು ಕಾಲಂ ಪಿಡಿದು ಪೊಡೆವಟ್ಟಿರ್ದಾಗಳರಸಿಯ ಮೊಗಮಂ ನೋಡಿ ನೆಱೆ[3]ಯೆ ತೊಟ್ಟುಟ್ಟು ಪಸದನಂಗೊಂಡಿರ್ದ ದೇವಗಣಿಕೆಯರನೆ ಪೋಲ್ವಯ್ನೂರ್ವರರಸಿಯರ್ಕಳಿಂದಂ ಸೂಳೆಯರ್ಕಳಿಂದಂ ಪರಿವೇಷ್ಟಿತೆಯಾಗಿರ್ದ* ಶಚೀಮಹಾದೇವಿಯನೆ ಪೋಲ್ವ ಧಾರಿಣಿ ಮಹಾದೇವಿಯೆನ್ನ ಕಾಲ್ಗೆಱಗಿ ಪೊಡೆವಟ್ಟಿರ್ದಳಿದೆಲ್ಲಮೀ ತಪದ ಫಲಮಿನ್ನುಂ ಮುಂದೆ ಪಿರಿದುಂಟೆಂದು ಬಗೆದರಸಿಗೆಂದರಬ್ಬಾ ಇಂದೆಮಗುಣಲ್ಕೆ ಬಗೆಯಿಲ್ಲುಪವಾಸಂಗೆಯ್ದಪ್ಪೆಮೆಂದು ಪರಿಚ್ಛೇದಿಸಿ ನುಡಿದೊಡೆ ಬಿನ್ನನೆ ಮೊಗಂ [4]ಮಾ[4]ಡಿ ಭಟಾರರಂ ವಂದಿಸಿ ಪೋಗಿ[5]ಯರಸಂಗೆ[5] ಕಿತ್ತಯ್ಯಂಗಳಿಂದು†ಪವಾಸಂಗೆಯ್ದೊರೆಂದು ಪೇ[6]ೞ್ದಾಗಳ್[6] ಮತ್ತಿರುಳಿನ ಕರಣವೇಳೆಯೊಳ್ ವಜ್ರಸೇನನೆಂಬ ಮಂತ್ರಿಯರಸಂಗಿಂತೆಂದು ಬಿನ್ನಪಂ ಗೆಯ್ದಂ ದೇವಾ ನಾಳೆಯಾಂ ನಿಱಿಸಿ ಕಿತ್ತಯ್ಯಂಗಳ್ಗೆ ಪಾರಣೆಯಂ ಮಾಡುವೆನೆನೆ ಅಂತೆಗೆಯ್ಯೆಂದೊಡೆ ಮಱುದಿವಸಂ ಬಸದಿಗೆ ವಂದು[7] ಭಟ್ಟಾರಾ ಕಿತ್ತಯ್ಯಂಗಳನೆಮ್ಮಲ್ಲಿಗೊಡಗೊಂಡು [8]ಬಂದು ಚರಿಗೆದೋಱಿ ನೀಮುಂ ಬಿಜಯಂ ಗೆಯ್ಯಿಮೆನೆ[8] ಕಿತ್ತಯ್ಯಂಗಳೊಡಂಬಟ್ಟೊಡೊಡಗೊಂಡು ಬರ್ಪೆಮವರನೊಡಂಬಡಿಸಿಮೆಂದೊಡೆ ಕಿತ್ತಯ್ಯಂಗಳಲ್ಲಿಗೆ ಪೋಗಿ ಕಿತ್ತಯ್ಯಾ ಇಂದೆಮ್ಮ ಮನೆಯೊಳ್ [9]ಪಾರಿ[9]ಸಲ್ವೇೞ್ಕುಮೆಂದು ಕಾಲಂ ಪಿಡಿದು ಪೊಡೆಮಟ್ಟಿರ್ದೋನಂ ನೋಡಿ 'ರಾಜೋ ವಾ ರಾಜ[10]ಮ[10]ತ್ರೋರ್ಯ್ಯೇವಾ' (?) ಎಂದು ಸಾಮಂತ ಮಹಾಸಾಮಂತರ್ಕಳಿಂ[11] ಪರಿವೇಷ್ಟಿತನಾಗಿರ್ದ ಮಂತ್ರಿಯೆನಗೆ ಪೊಡೆಮಟ್ಟನಿವೆಲ್ಲಂ ತಪದ ಮಹಾತ್ಮ್ಯಮಿನ್ನುಂ ಮುಂದೆ ಪಿರಿದುಂಟೆಂದು ಬಗೆದಿಂತೆಂದರಾಮಿಂದುಪವಾಸಂಗೆಯ್ದೆಮೆಂದೊಡಾತನೆನಗೆ ಪುಣ್ಯಮಿಲ್ಲಾಗದೆ ಎಂದು ನುಡಿದು ಭಟ್ಟಾರರಂ ವಂದಿಸಿ ಪೋದಂ ಮತ್ತಮಿರುಳಿನ ಕರಣ ವೇಳೆಯೊಳರ್ಹದ್ದಾಸನೆಂಬೊಂ ರಾಜಶ್ರೇಷ್ಠಿಯರಸಂಗೆ ಬಿನ್ನಪಂಗೆಯ್ದಂ ನಾಳೆಯಾಂ ಕಿತ್ತಯ್ಯಂಗಳ್ಗೆ ಪಾರಣೆಯಂ ಮಾಡುವೆನೆಂದೊಡರಸನಂತೆ ಗೆಯ್ಯಿಮೆಂದೊಡಾತನುಂ ಬಸದಿಗೆ ಪೋಗಿ ಭಟ್ಟಾರರಂ ವಂದಿಸಿ [12]ಕಿತ್ತಯ್ಯಂಗಳುಮಂ ವಂದಿಸಿ ಗುರುಗಳನುಮತದಿಂದೆಮ್ಮ ಮನೆಗೆ ಚರಿಗೆವರಲ್ವೇೞ್ಕುಮೆಂದು ನುಡಿದೊಡುಪವಾಸಂಗೆಯ್ದೆನೆಂದೊಡಾತನುಂ[12] ಭಟ್ಟಾರರಂ ವಂದಿಸಿ ಪೋದಂ

---

[1] ನೆಗಟ್ಟೆಪ್ರದೆಂದೊಡೆ ಭಟಾರರೆಂದರಾಮುಂ ತಪಂಬಡಿಸಿದೆಮಿಂ (ಘಚಛ). [2] ಳ್ತ (ಕಗ); ಈ ಪ್ರತಿಗಳಲ್ಲಿ ಎಲ್ಲೆಡೆಯೂ ಹೀಗೆಯೇ. [3] ಮು (ಖಗ). * *ತನ್ನಭಿಪ್ರಾಯಮನಱಿಪೆ ಕಿತ್ತಯ್ಯಂಗಳೆಂದರ್ (ಘಚಛ). [4] ಬಾ (ಕಛ). [5] (ಕಖಗ) ಗಳಲ್ಲಿಲ್ಲ. † ಪು. ೭೫–೮೩ † (ಖ) ದಲ್ಲಿ ನಷ್ಟವಾಗಿದೆ. [6] ಳ್ದಿರ್ದರ್ (ಕಗ). [7] + ದೇವರಂ ಬಂದಿಸಿ ಗುರುಗಳ್ಗೆ ಗುರುಭಕ್ತಿಗೆಯ್ದಿಂತೆಂದಂ (ಘಚಛ). [8] ಚರಿಗೆವರ್ಪುದೂಂದೊಡೆ (ಘಚಛ). [9] ಪರ (ಕಗ). [10] ಮಾ (ಘಚಛ). [11] + ಪರಿವಾರ ಜನಂಗಳಿಂ (ಘಚಛ). [12] ಭಟಾರಾ ಇಂದು ನೀಮೆಮ್ಮ ಮನೆಗೆ ಕಿತ್ತಯ್ಯಂಗಳನೊಡಗೊಂಡು ಬಂದು ಪಾರಣೆಯಂ ಮಾಡಿಸಿಮೆಂದು ಪೇಳ್ವುದೆ ಕಿತ್ತಯ್ಯಂಗಳಿಂದು ಮೆಮಗುಪವಾಸಮೆಂದೊಡಾತನುಂ (ಘಚಛ).

ಇತ್ತ ನಂದಿಮಿತ್ರ ಕಿತ್ತ್ರಯ್ಯಂಗಳ್ಗೆ ಶ್ರಮಮಂ ಭಟ್ಟಾರರಱಿದು ಕಿತ್ತ್ರಯ್ಯಾ ಪಂಚನಮಸ್ಕಾರಮಂ ಮಾಣದಿರುಳುಂ ಪಗಲುಮೋದುತ್ತಮಿರಿಮೆಂದು ಕಲ್ಪಿಸಿದೊಡವರುಮಿರುಳುಂ ಪಗಲುಮೋದುತ್ತಿರೆ ಮತ್ತಿತ್ತ ಇರುಳಿನೋಲಗದೊಳ್ ನೆರೆದಿರ್ದ ನೆರವಿಯೊಳರಸನುಂ ಮಹಾದೇವಿಯುಂ ಕಿತ್ತ್ರಯ್ಯಂಗಳ ತಪಮುಂ ಗುಣಮುಮಂ ಪೊಗೞುತ್ತೆ ತಪಂಬಟ್ಟದಿವಸದಿಂ ತಗುಳ್ದಿಂದಿಂಗಯ್ದು ದಿವಸಮುಣ್ಬುದಿಲ್ಲ ಕುಡಿವುದಿಲ್ಲುಪವಾಸಂಗೆಯ್ದಿರ್ದರಾಮೆನಿತು ಕೀೞ್ ನುಡಿದೊ[1]ಡಂ ಚರಿಗೆಮಾಡ[1]ಲೊಲ್ಲರಿನ್ನವು ಸಾಹಸಮುಂ ಸತ್ವಮುಮಾರ್ಗಮೊಳವೆ ಎಂದರಸನುಮರಸಿಯುಂ ಪೊಗೞ್ವುದಂ ಕೇಳ್ದು [2]ಯುವರಾಜ[2]ನೆರ್ದು ಬಿನ್ನಪಂಗೆಯ್ದು ದೇವಾ ಕಿತ್ತ್ರಯ್ಯಂಗಳ್ಗೆ ನಾಳೆಯಾಂ ಪಾರಣೆಯಂ ಮಾಡಿಸುವೆನೆಂದೊಡರಸನಂತೆಗೆಯ್ಯೆಂದೊಡೆ ಮಱುದಿವಸಂ [3]ಯುವರಾಜಂ[3] ಮಹಾವಿಭೂತಿವೆರಸು ಬಸದಿಗೆ ಪೋಗಿ ದೇವರಂ ಭಟ್ಟಾರರುಮನರ್ಚಿಸಿ ಬಂದಿಸಿ ಭಟಾರಾ ಕಿತ್ತ್ರಯ್ಯಂಗಳಿಂದೆಮ್ಮ ಮನೆಯೊಳ್ [4]ಪಾರಿ[4]ಸುವಂತಿ[5]ರೆಬೆಸಸಿಮೆನೆ ಕಿತ್ತ್ರಯ್ಯಂಗಳನೊಡಂಬಡಿಸಿ ನಿಱಿಸಿಮೆನೆ[5] ಕಿತ್ತ್ರಯ್ಯಂಗಳ ಕಾಲಂ ಪಿಡಿದು ಪೊಡೆಮಟ್ಟು ಕಿತ್ತ್ರಯ್ಯಾ ಎಮ್ಮ ಮನೆಯೊಳಿಂದು [6]ನೀಮುಂ[6] [7]ಪಾರಿ[7]ಸಲ್ವೇೞ್ಪುದೆಂದೊಡೆ ಕಿತ್ತ್ರಯ್ಯಂಗಳಾತನ ಶ್ರೀಯುಂ ವಿಭೂತಿಯುಂ [8]ತೇಜಮುಮಂ[8] ಕಂಡು ಇಂತಪ್ಪ [9]ಕ್ಷತ್ರಿಯ ಪುತ್ರಾದಿಗ[9]ಳೆಲ್ಲಮೆನಗೆಱಗಿ ಪೊಡೆಮಟ್ಟು ಕಿಂಕುರ್ವಾಣಂಗೆಯ್ದಪ್ಪರುಣ್ಬುದರ್ಕೇನೀಗಳ್ ಸಂಕಟಮೀ ತಪದ ಫಲಮಿನ್ನುಂ ಮುಂದೆ ಪಿರಿದುಂಟೆಂದು ಬಗೆದಿಂದುಪವಾಸಂಗೆಯ್ದೆವೆಂದು ಮಱುಮಾತುಗೊಟ್ಟೊಡೆ ವಿರಾಗ[10]ನಾಗಿ ಯುವರಾಜಂ ಭಟಾರರಂ ವಂದಿಸಿ ಪೋದನಿಂತಾಱುದಿವಸಂ ಪೋದ ಬೞಿಕ್ಕೇೞನೆಯ ದಿವಸದಂದು ನೇಸಱ್ ಮೂಡಿದೊಡೆ ಭಟಾರರಲ್ಲಿಗೆ [11]ನಂದಿಮಿತ್ರಂ[11] ವಂದು ಬಂದಿಸಿ ಇಂತೆಂದಂ ಭಟಾರಾ ಇನಿತು ಕಾಲಮುಂ[12]ಡುದು[12] ಸಾಲ್ಗುಮೆಮಗೆ ಯಾವಜ್ಜೀವಂ ಬಾೞ್ವನ್ನೆಗಮುಪವಾಸ ಪಚ್ಚಕ್ಖಾಣಂಗುಡುವುದೆಂದೊಡೆ ಭಟಾರರೆಂದರ್ ನೀಮುಂ ಮಹಾಪುರುಷ[13]ರಿರ್ ನಿಮ್ಮನ್ನರ್[13] ಧೈರ್ಯವಂತರುಂ ಸತ್ವವಂತರುಮಾರುಮಿಲ್ಲಂ ಇನಿತು ಕಾಲಂ ತಪಂಗೆಯ್ದಪ್ಪೆಮಗಪ್ಪೊಡಮಿನಿತು ಧೈರ್ಯಮುಂ ಸತ್ವಮುಮಿಲ್ಲೆಂದು ಗುರುಗಳ್ ಪೊಗೞ್ದೊಡೆ ಗುರುಗಳ ಪೊಗೞ್ತೆಗೆ ರಾಗಿಸಿ ಸಂತೋಸಂಬಟ್ಟಿರ್ದೊಡೆ ಭಟಾರರೆಂದರ್ ನಿಮಗಿಂದಿನ ದಿವಸವನಿತೆಯಾಯುಷ್ಯಮೆಂದು [14]ಪೇೞ್ವುದುಂ[14] ಜಾವಜ್ಜೀವಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ನಿವೃತ್ತಿಗೆ[15]ಯ್ಯೆಂದು ಪಚ್ಚಕ್ಖಾಣಂಗೊಟ್ಟು[15] ಬಸದಿಯೊಳೊಂದು ಕೋ[16]ಣೆಯೊಳೀ ಎಡೆಯೊಳ್[16] [17]ಸೀಮೊಂದು ಕೆಲದೊಳ್ ಮಗುೞಿದೆ[17] ತಳರದೆ[18]

---

[1] ಡಮುಣ (ಘಚಛ). [2] ಸಾಮಂತ ತಳಾಱನಪ್ಪ ಶ್ರಾವಕಂ (ಘಚಛ). [3] ಸಾಮಂತಂ (ಘಚಛ). [4] ಪರ (ಕಗ). [5] ರೊಡಗೊಂಡು ಬನ್ನಿಮೆಂದೊಡೆ ಕಿತ್ತ್ರಯ್ಯಂಗಳನೊಡಂಬಡಿಸಿದೊಡೊಡಗೊಂಡು ಬರ್ಪೆಮೆಂದೊಡೆ (ಘಚಛ). [6] ನಿಮ್ಮಡಿ (ಘಚಛ). [7] ಪರ (ಕಗ). [8] ಪ್ರಭುತ್ವಮುಮಂ (ಘಚಛ). [9] ಮಹಾಪುರುಷರ್ಕ (ಘಚಛ). [10] + ಚಿತ (ಘಚಛ). [11] (ಕಗ) ಗಳಲ್ಲಿಲ್ಲ. [12] ಡುಣಸು (ಕಗ). [13] ರೀ ನಿಮ್ಮಂತು (ಕಗ). [14] ಳ್ದೊಡೆ (ಕಗ). [15] ಯ್ದು ಪ್ರತ್ಯಾಖ್ಯಾನಂಗೊಂಡು (ಘಚಛ). [16] ಣದೆಸೆಯೊಳ್ (ಘಚಛ). [17] (ಘಚಛ) ಗಳಲ್ಲಿಲ್ಲ. [18] + ಮಸಗದೆ (ಘಚಛ).

ಕೈಯುಂ ಕಾಲ್ಗಳುಮನುಡುಗದೆ ನೀಡದೆ ಬಾೞ್ವನ್ನೆಗಂ ಪಟ್ಟಿರ್ದು ಪಂಚನಮಸ್ಕಾರಮಂ ಮನದೊಳೋದುತ್ತಿರಿಮೆಂದು ಕಲ್ಪಿಸಿ [1]ಪಟ್ಟಿರಿಸಿ[1] ಆರಾಧನೆಯನರ್ಚಿಸಿ ಭಟ್ಟಾರರಾರಾಧನೆಯಂ ವಕ್ಖಾಣಿಸುವುದಂ ಕೇಳುತ್ತಿರ್ದಂ ಮತ್ತಿತ್ತ ಕಿತ್ತಯ್ಯಂಗಳ್ ಸಂನ್ಯಸನಂ ಗೆಯ್ದರೆಂಬಾ ಮಾತನರಸನಾದಿಯಾಗಿ ಪೊೞಲ ಜನಂಗಳೆಲ್ಲಂ ಕೇಳ್ದು ಪಿರಿದುಂ ಸಂಭ್ರಮಮಾಗಿಯರಸನುಂ ಮಹಾದೇವಿಯುಂ ಮಂತ್ರಿಯುಂ ರಾಜಶ್ರೇಷ್ಠಿಯುಂ [2]ಯುವರಾಜಂ[2] ಮೊದಲಾಗಿ ಪೊೞಲ ಜನಮೆಲ್ಲ[3]ಮಿರ್ಪೊತ್ತು ಮ[3]ರ್ಚನೆಯಂ ಕೊಂಡುಬಂದರ್ಚಿಸಿ [4]ಕಿಱಿದು ಬೇಗಮಿರ್ದಾರಾಧನೆಯಂ ವಕ್ಖಾಣಿಸುವುದಂ[4] ಕೇಳ್ದು ಮಿಥ್ಯಾದೃಷ್ಟಿಗಳಪ್ಪವರ್ ಶ್ರಾವಕ ಬ್ರತಂಗಳಂ ಕೈಕೊಂಡರ್ ಶ್ರಾವಕರುಂ ದೃಢಸಮ್ಯಗ್‌ದೃಷ್ಟಿಗಳಾಗಿ ಬಂದಿಸಿ ಪೋದರ್

ಇತ್ತ ನೇಸಱ್ ಪಟ್ಟೊಡೆ ಕಿತ್ತಯ್ಯಂಗಳ್ಗಾಸನ್ನಕಾಲಮಾದುದೆಂಬುದಂ ಭಟಾರರಱಿದಿಂತೆಂದರ್ ಕಿತ್ತಯ್ಯಾ ನಿಮಗೀಗಳ್ ಪ್ರಾಣಂ ಪೋಗಲ್ ಬಗೆದಪ್ಪುದು ದೇವರಂ [5]ಜಾನಿಸುವುದು[5] ಪಂಚನಮಸ್ಕಾರ[6]ಮನೋ[6]ದುತ್ತಮುಚ್ಚಾರಿಸುವುದಂ ಕೇಳುತ್ತಮಿ[7]ರಿಮೆಂ[7]ದು ಕಲ್ಪಿಸಿ ಭಟ್ಟಾರರ್ ಪಂಚನಮಸ್ಕಾರಮಂ ಪಿರಿದು ಬೇಗಂ ಪೇೞೆ ಪ್ರಾಯೋಪಗಮನ[8]ದಿನೆಂತಂತೆ[8] ಶುಭಪರಿಣಾಮದಿಂ [9]ಸಮ್ಯಗ್[9]ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಮುಡಿಪಿ ಸೌಧರ್ಮ ಕಲ್ಪದೊಳೆರಡು ಸಾಗರೋಪಮಾಯುಷ್ಯಮನೊಡೆಯೊಂ ಕನಕಧ್ವಜನೆಂಬೊಂ ದೇವನಾಗಿ ಪುಟ್ಟಿಯವಧಿಜ್ಞಾನದಿಂ ತನ್ನ ಭ[10]ವಮನ[10]ಱಿದೀ ಶರೀರದಿಂದಮಿಂತಪ್ಪದಿವ್ಯಶರೀರಮುಂ ದೇವಲೋಕದೊಳಪ್ಪ ಸುಖಮೈಶ್ವರ್ಯಮುಮಾದುದೆಂದು ಮೂಱುಕೋಟಿ ಪರಿವಾರ ದೇವರ್ಕಳುಂ ಮೂಱು ಲಕ್ಕೆ ದೇವಿ[11]ಯರಪ್ಪ[11]ರಸಿಯರ್ಕಳುಂ ಗಣಿಕೆಯರ್ಕಳುಂ ಬೆರಸು ಸುರತ್ನಮಯಮಪ್ಪ ದಿವ್ಯವಿಮಾನಮುಂ ಘಂಟಾಜಾಳ ಮುಕ್ತಾಜಾಳ ಹೇಮಜಾಳಂಗಳಿಂದೊಪ್ಪುವ ವಿಮಾನಮನೇಱಿ ಮಹಾ ವಿಭೂತಿ[12]ಯಿಂ ತಗುಳ್ದರ[12]ಗಾಮರಂ (?) ಬೆರಸು ಪಾಡುತ್ತಂ[13] ಬರ್ಪನ್ನೆಗಮಿತ್ತ ವೈದಿಶಮೆಂಬ ಪೊೞಲೊಳ್ ನಂದಿಮಿತ್ರ ಕಿತ್ತಯ್ಯಂಗಳ್ ಮುಡಿಪಿದರೆಂಬುದಂ ಕೇಳ್ದರಸನುಂ ಮಹಾದೇವಿಯುಂ ಮಂತ್ರಿಯುಂ [14]ಪೆರ್ಗಡೆಯುಂ[14] ಮೊದಲಾಗಿ ಪೊೞಲೊಳಗುಳ್ಳ ಜನಮೆಲ್ಲಮರ್ಚನೆಗಳಂ ಕೊಂಡು ಬಂದರಸಂ ತಾಂ ಪಕ್ಕದಿ[15]ರ್ದು[15] ಕ್ಷಪಣಕನನುಯ್ವ ವಿಮಾನಮುಮಂ ಮತ್ತಂ ಶೋಭೆಗೆಂದು ಪಲವು ವಿಮಾನಂಗಳುಮ[16]ನೊಳ್ಳಿ[16]ದುವಾಗಿ ಮಾಡಿಸಿ ಪಲವುಂ ನೇತ್ರದ ಪೞಿ [17]ಮುಲ್ಲವಂಗಳ್[17] ಧ್ವಜಪತಾಕೆಗಳುಮ[18]ನೆತ್ತಿ[18]ಸಿ ಚಾತುರ್ವರ್ಣ ಶ್ರವಣ ಸಂಘ ಸಹಿತಂ ಪಟುಪಟಹ ತುಣವ ಭಂಭಾ ಮರ್ದಳೆ ಝುಲ್ಲರಿ ಮುಕುಂದ ತಾಳ ಕಾಹಳ

---

[1] (ಘ ಚ ಛ) ಗಳಲ್ಲಿಲ್ಲ. [2] ತಳಾಜಿನುಂ (ಘ ಚ ಛ). [3] ಂ ಪಗಲಪ್ಪನ್ನೆವರಮಿರ್ದಾರಾಧನೆಯಂ (ಘ ಚ ಛ). [4] (ಘ ಚ ಛ) ಗಳಲ್ಲಿಲ್ಲ. [5] ಧ್ಯಾನಿಸುತ್ತಂ (ಘ ಚ ಛ). [6] ಮಂಮನದೊಳೋ (ಘ ಚ ಛ). [7] ರ್ಕೆ (ಕ ಗ). [8] ಮರಣದಿನಂತೆ (ಘ ಚ ಛ). [9] ಸಹಜ (ಕ ಗ). [10] ವಾಂತರಮನ (ಘ ಚ ಛ). [11] ಯರ್ಕಳುಮಪ್ಪ (ಘ). [12] ಯಿಂತಗುಳ್ವಾಗಾ (ಕ ಗ), ವೆರಸುತಗುಳ್ದಗಾ (ಘ ಚ). [13] + ಆಸುತ್ತಂ (ಘ ಚ ಛ). [14] ಶ್ರೇಷ್ಠಿಯುಂ ತಳಾಜಿನುಂ (ಘ ಚ ಛ). [15] ಳ್ದು (ಕ ಗ). [16] ನೇಳಿ (ಕ ಗ). [17] ಯ (ಘ ಚ ಛ). [18] ನರ್ತಿ (ಕ ಗ).

ಶಂಖ ವಂಶ ವೀಣಾಸ್ವರಂಗಳಿಸೆಯೆ ಕವಿವರರುಂ ಪೆಂಡವಾಸದೊಳ್ಪೆಂಡಿರ್ಕಳುಂ ವಿಮಾನಂಗಳ ಮುಂದಾಡುತ್ತಂ ದನ್ಮಮುಮಂ ಪೊನ್ನುಮಂ ಕೇಳಿ ಮಾಡಿ ಮುಂದೆ ಸೂಸುತ್ತ[1]ಮೊ[1]ಯ್ಯುಪ್ಪದಂ ಕನಕಧ್ವಜನೆಂಬ ದೇವಂ ಕಂಡೆನ್ನ ದೇಹಕ್ಕಿವರೆಲ್ಲಮಿನಿವಿರಿ ದರ್ಶನೆಯುಮಂ ಪೂಜೆಯುಮಂ [2]ವಿಭವಮುಂ ಪ್ರಭಾವನೆಯುಮಂ[2] ಮಾಡಿದಪ್ಪ ರೆಂದೊಡಾನೆನ್ನ ದೇಹಕ್ಕೆ ಮಾಡದಿರ್ಪನೆಯೆಂದು ಪಲವು ವಿಮಾನಂಗಳಂ ವಿಗುರ್ವಿಸಿ ಕ್ಷಪಣಕನ ವಿಮಾನದ ಮುಂದೆ ಬಳಸಿಯುಂ ಪೋಪಂತು ಮಾಡಿಯಾಕಾಶಮೆಲ್ಲಮಂ ವಿಮಾನಮಯಮಾಗೆ ವಿಗುರ್ವಿಸಿ ದೇವಲೋಕದ ಪಱೆಗಳಂ ಬಾಜಿಸುತ್ತಂ ನಮೇರು ಮಂದಾರ ಸಂತಾನಕ ಪಾರಿಜಾತಂಗಳೆಂಬ ಪೂಗಳಂ ಸುರಿಯುತ್ತಂ ದೇವರ್ಕಳ [3]ದೇವಿ ಯರ್ಕಳ್[3]ಸಹಿತಂ ಕ್ಷಪಣಕನ ವಿಮಾನದ ಮುಂ[4]ದೆ ಇಂತೆಂದು ಪೇೞ್ದಾಡಿ[4]ದಂ :

ಗಾಹೆ ॥ ಪೆಚ್ಛಹ ಪೆಚ್ಛಹ ಓದಣ ಮುಂಡಂ
ಅಚ್ಚರ ಮಜ್ಝಗಯಂ ರಮಣಿಜ್ಜಂ ॥
ಜಂಜೆಣ ಮಂತೆಣ ಕಾರಣ ಯೇಣ
ಪಚ್ಚ ಇಯವ್ವಂಹೋ ಇಣರೇಣ ॥

ಎಂದು [5]ಛಂದ ಛಂ[5]ದದಿಂ ಪೇ[6]ೞ್ದಾಡು[6]ವುದಂ ಕಂಡರಸಂ ಮೊದಲಾಗಿ ಪೊೞಲ ಜನವೆಲ್ಲಂ ಚೋದ್ಯಂಬಟ್ಟು ಬೆಱಗಾಗಿ ನೋಡುತ್ತಿರ್ದಿಂತೆಂದರಸಂ ಬೆಸಗೊಂಡಂ ನೀಮಾರ್ಗೇನೆಂಬಿರೆಲ್ಲಿಂ ಬಂದಿರಿಂತೇಕೆ ಪೇೞ್ದಾಡಿದಪ್ಪಿರೆಂದು ಬೆಸಗೊಂಡೊಡಾನಲ್ತೆ ನಂದಿಮಿತ್ರನಪ್ಪ ಕಿತ್ತಯ್ಯನೆನುಣಿಸಿಂಗೆಂದು ತಪಂಬಟ್ಟೇೞುದಿವಸಮುಪವಾಸಂ ಗೆಯ್ದು ಮುಡಿಪಿ ಸಂನ್ಯಸನಂಗೆಯ್ದು ಮುಡಿಪಿ ದೇವಲೋಕದೊಳ್ ಕನಕಧ್ವಜ ನೆಂಬೊಂ ದೇವನಾಗಿ ಪುಟ್ಟಿ ಎನ್ನ ದೇಹಮಂ ಪೂಜಿಸಲುಂ ನಿಮಗೆನ್ನ ವಿಭವಮಂ ತೋಱಲ್ ಬಂದೆನೆಂದು ಪೇೞ್ದು ತನ್ನ ಶರೀರಮುಂ ದಿವ್ಯಮಪ್ಪ ಗಂಧ ಪುಷ್ಪ ದೀಪ ಧೂಪಾಕ್ಷತೆಗಳಿಂದರ್ಚಿಸಿ ತನ್ನ ಗುರುಗಳಪ್ಪ ಶಿವಗುಪ್ತರೆಂಬಾಚಾರ್ಯರುಮಂ ಪೂಜಿಸಿ ನಿಮ್ಮ ಪ್ರಸಾದದಿಂದೆನಗಿನಿವಿರಿದು ಶ್ರೀಯುಂ ಮಹಾವಿಭೂತಿಯು ಮೈಶ್ವರ್ಯಮುಂ ದೇವತ್ವಮುಮಾದುದೆಂದು ಪೇೞ್ದು ಬಂದಿಸಿ ತನ್ನ ದೇವಲೋಕಕ್ಕೆ ಪೋದನ್

ಇತ್ತಲರಸನುಮದೆಲ್ಲಮಂ ಕಂಡು ಸಂಸಾರ ಶರೀರ ಭೋಗ ವೈರಾಗ್ಯ ಪರಾಯಣನಾಗಿ ಶ್ರೀವರ್ಮನೆಂಬ ತನ್ನ ಪಿರಿಯ ಮಗಂಗೆ ರಾಜ್ಯ ಪಟ್ಟಂಗಟ್ಟಿ ಪಲಂಬರರಸುಮಕ್ಕಳುಂ ಮಹಾದೇವಿ ಮೊದಲಾಗಿ ಪಲಂಬರರಸಿಯರ್ಕಳುಂ ಪರಿ ವಾರದವರುಂ ಪೊೞಲ ಪಲಂಬರ್ ಜನಂಗಳಿಲ್ಲಂ ಬೆರಸು ಶಿವಗುಪ್ತ ಭಟ್ಟಾರರ ಪಕ್ಕದೆ ತಪಂಬಟ್ಟು ಸಮ್ಯಗ್‌ಜ್ಞಾನ ಚಾರಿತ್ರಂಗಳೊಳಗೊಳ್ಳಿತಾಗಿ ನೆಗೞ್ದು ಪಶ್ಚಾತ್ಕಾಲದೊಳ್ ಸಂನ್ಯಸನಂಗೆಯ್ದು ಮುಡಿಪಿಯನಿಬರುಂ ದೇವಲೋಕಕ್ಕೆ ಪೋದರ್ ಮತ್ತಂ ಕನಕಧ್ವಜನೆಂಬ ದೇವಂ ಪಲಕಾಲಂ ದೇವಲೋಕದ ಸುಖಮು ನನುಭವಿಸಿ ಬಂದಿಲ್ಲಿ ನೀಂ ಸಂಪ್ರತಿ ಚಂದ್ರಗುಪ್ತನಾಗಿ ಪುಟ್ಟಿದೆಯೆಂದು ಸಮಾಧಿ

[1] ಮು (ಘಚಛ). [2] (ಘಚಛ) ಗಳಲ್ಲಿಲ್ಲ. [3] (ಘಚಛ) ಗಳಲ್ಲಿಲ್ಲ. [4] ದಿರ್ದಿಂತೆಂದು ಪೇೞ್ದೀದಿ (ಘಚಛ). [5] ಚಂದ ಚಂ (ಗ), ನಾನಾ ಛಂ (ಘಚಛ). [6] ೞ್ದೀಪ (ಘಚಛ).

ಗುಪ್ತ ಭಟ್ಟಾರರ್ ತನ್ನ ಭವಮಂ ಪೇೞ್ದೊಡಾದಮಾನುಮೊಸೆದು ಸಂತೋಷಂ ಬಟ್ಟು ಭಟ್ಟಾರರಂ ವಂದಿಸಿ ತನ್ನರಮನೆಗೆ ವೋಗಿ ಇಂತು ಸಂಪ್ರತಿ ಚಂದ್ರಗುಪ್ತ ಮಹಾರಾಜಂ ಪೃಥ್ವಿಯನೇಕಚ್ಛತ್ರಚ್ಛಾಯೆಯಿಂದಮಾಳುತ್ತಮುಜ್ಜೇನಿಯೊಳ್ ಸುಖದಿಂದಿರ್ಪನ್ನೆಗಂ

ಇತ್ತ ದ್ವಾದಶಾಂಗ ಚತುರ್ದಶ ಪೂರ್ವಧಾರಿಗಳಪ್ಪ ಭದ್ರಬಾಹುಭಟ್ಟಾರರ್ ಪಿರಿದು ಋಷಿಸಮುದಾಯಂ ಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರುಜ್ಜೇನಿಗೆ ವಂದಾ ಪೊೞಲ ಬಹಿರು ದ್ಯಾನ ವನದೊಳಿರ್ದರದನರಸಂ ಕೇಳ್ದು [1]ಪರಿವಾರಸಹಿತಂ[1] ಪೋಗಿ ಭಟಾರರಂ ವಂದಿಸಿ ಸದ್ಧರ್ಮಮಂ ಕೇಳ್ದು ಶ್ರಾವಕ ಬ್ರತಂಗಳನೇಱಿಸಿಕೊಂಡು ವಂದಿಸಿ ತನ್ನರ ಮನೆಗೆ ವೋದನಿತ್ತ ಭಟಾರರುಂ ಪಲವು ದಿವಸಮಾ ಪೊೞಲೊಳಿರೆ ಮತ್ತೊಂದು ದಿವಸಂ ಋಷಿಸಮುದಾಯವೆಲ್ಲಮಂ ಚರಿಗೆ[2]ವೊ[2]ಗಿಸುತ್ತಮೆಲ್ಲರುಮಂ ನಿಱಿಸಿ ತಾವೊರ್ವ[3]ರೆಯೊಂ[3]ದು ಮನೆಯಂ[4] ಪೊಕ್ಕಾಗಳಾ ಮನೆಯೊಳಾ[5]ರುಮಿಲ್ಲೊಸರಿಗೆ[5] ಯೊಳ್ ತೊಟ್ಟಿಲೊಳಿರ್ದವ್ಯಕ್ತ ಕಿಱುಗೂಸು ಬೋಳಹ ಬೋಳಹ ಭಟ್ಟಾರಾ ಎಂದತ್ತಾಗಳಾ ವಚನಮಂ ಭಟ್ಟಾರರ್ ಕೇಳ್ದು ದಿವ್ಯ ವಾಕ್ಯಮೆಂದಱಿದು ಕಾಲ ಪ್ರಮಾಣಮಂ ಬೆಸಗೊಂಡೊಡೆ ದ್ವಾದಶವರ್ಷಮೆಂದು ಪೇ[6]ೞ್ದಿತ್ತು[6] ಭಟ್ಟಾರರ್ ಕಾಲದೋಷದಿಂ ಪ್ರಜಾಪೀಡೆಯಾದಪ್ಪುದೆಂದಱಿದು ಕಾರುಣ್ಯ ಬುದ್ಧಿಯಿಂದಾಹಾ ರಮಂ ಕೊಳ್ಳದೆ [7]ಅಲಾಭಂ[7] ಮಾಡಿಯಂತೆ ಬಸದಿಗೆ ವೋಗಿ ಗೋಚಾರ ನಿಯಮಂ ಗೆಯ್ದು ಬೞಿಕ್ಕೆ ರಿಸಿಯರ್ಕಳ್ಗೆಲ್ಲಂ ಬೞಿಯನಟ್ಟಿ ಬರಿಸಿ ಇಂತೆಂದರೀನಾಡೊಳ್ ಪನ್ನೆರಡು ವರುಷಂಬರೆಗಮನಾವೃಷ್ಟಿಯಾಗಿ ದುರ್ಭಿಕ್ಷಮಾದಪ್ಪುದೀನಾಡೊಳಗಿರ್ದ ರಿಸಿಯರ್ಕಳ್ಗೆಲ್ಲಂ ಬೇಗಂ ಬೞಿಯಟ್ಟಿ ಬರಿಸಿಂ ಪೋಪಂ ದಕ್ಷಿಣಾಪಥಕ್ಕೆಂದು ರಿಸಿಯರ್ಕಳ್ಗೆಲ್ಲಂ ಬೞಿಯನಟ್ಟಿದರಿತ್ತರಸನುಮಾ ದಿವಸದಿರುಳ್ ಪದಿನಾಱುಂ ಪೊಲ್ಲ ಕನಸುಗಳಂ ಕಂಡನವಾವುವೆಂದೊಡೆ ಆದಿತ್ಯನಸ್ತಮಾನಕ್ಕೆ ಸಲ್ವುದುಮಂ ಕಲ್ಪ ವೃಕ್ಷದ [8]ಕೋಡು[8]ಡಿವುದುಮಂ ನೆಲಕ್ಕೆ ವರುತಿರ್ದ ವಿಮಾನಂ ಬಾರದೆಡೆಯಿಂದೆ ಮೇಗೆ ಮಗುೞ್ದುದುಮಂ ಪನ್ನೆರಡು ತಲೆಯ ಪಾವುಮಂ ಚಂದ್ರನೊಡೆದುದುಮಂ ಕಡು[9]ಗಡಿಯುವ[9]ಪ್ಪೆರಡಾನೆಗಳ್ ತಮ್ಮೊಳ್ [10]ಪೋರಲ್[10]ಸಾರ್ದು ಪೆಱಸಿಂಗಿ ಪೋದುದುಮಂ ಮಿಂನಂಬುೞುವುಮಂ ನೀರಿಲ್ಲದ ಕೆಱೆಯ ನಡುವುಮಂ ಪೊಗೆ [11]ಪೆರ್ಚಿ[11] ಸೆಗೆದ ಕಾೞ್ಕಿಚ್ಚುಮಂ ಸಿಂಹಾಸನದ ಮೇಗೇಱಿದ ಕೋಡಗ ಮುಮಂ ಪೊನ್ನತಳಿಗೆಯೊಳ್ ನಾಯ್ ತುಯ್ಯಲುಣ್ಬುದುಮಂ ಕೋಡಗವೇಱಿರ್ದ ಸೊರ್ಕಾನೆಯುಮಂ ಕಸಕುಪ್ಪೆಯೊಳ್ ತಾಮರೆ ಮೂಡಿದುದಂ ಸಮುದ್ರಂ ಮೇರೆದಪ್ಪಿದುದುಮಂ ಬೆಳ್ಗೞ್ತಿ[12] ಪೂಡಿದ ಪೊನ್ನ ರಥಮಂ ಬೆಳ್ಗೞ್ತಿಯನರ

---

[1] ಸಪರಿವಾರ ಬೆರಸು (ಕಗ). [2] ವು (ಘಜ). [3] ರುಮೊಂ (ಕಗ). [4] + ಪೋಗಿ (ಕಗ). [5] ರುಮಿಲ್ಲಾ ಸರಿಗೆ (ಚ), ರೂಮಿಲ್ಲಸರಿಗೆ (ಛ). [6] ೞೆ (ಘಜಛ). [7] ಮುಟ್ಟುಪವಾಸಂ (ಘಜಛ). [8] ತುದಿಗೊಂಬು (ಘಜಛ). [9] ಗಲಿಗಳ (ಘಜಛ). [10] ಪೆಜಿ (ಕಗ). [11] ಪೊಣ್ಮೆ (ಘಜಛ). [12] + ಗಳಲು (ಘಜಛ).

[1]ಸರ್ಕ[1]ಳೇಱುವುದುಮಂ—ಇಂತೀ ಪದಿನಾಱುಂ ಕನಸುಗಳಂ ಸಮ್ಯಗ್‌ದರ್ಶನ ಶುದ್ಧಿ ಮೊದಲಾಗೊಡೆಯ ಗುಣಂಗಳಿಂ ಕೂಡಿದ ಸಂಪ್ರತಿ ಚಂದ್ರಗುಪ್ತಮಹಾರಾಜಂ ಪೊಲ್ಲ ಕನಸುಗಳಂ ಕಂಡೆನೆಂದಂಜಿ ನೇಸಱ್ ಮೂಡಿದಾಗಳ್ ಭದ್ರಬಾಹು ಭಟ್ಟಾರರಲ್ಲಿಗೆ ಪೋಗಿ ವಂದಿಸಿ ತನ್ನ ಕಂಡ ಕನಸುಗಳಂ ಭಟಾರರ್ಗೆ ಪೇೞ್ದವಱ ಫಲಂಗಳಂ ಬೆಸಗೊಂಡೊಡೆ ಭಟಾರರಿಂತೆಂದು ಪೇೞಲ್ ತೊಡಗಿದರ್

ಆದಿತ್ಯನಸ್ತಮಾನಕ್ಕೆ ಸಲ್ವುದಂ ಕಂಡುದಱಿಂದೀ ಭರತ ಕ್ಷೇತ್ರದೊಳ್ ಚತುರ್ದಶ ಪೂರ್ವಧಾರಿಗಳುಮವಧಿಜ್ಞಾನಿಗಳುಮಿಲ್ಲಿಂದಿತ್ತಲಾಗರ್ ಕಲ್ಪವೃಕ್ಷದ [2]ಕೋಡುಡಿದುದುಮಂ[2] ಕಂಡುದಱಿಂದಿಂದಿನ ದಿವಸಂ ಕೞಿದೊಡೆ ಕುಲಬಲ ವಿಭವದಿಂ ಪಿರಿಯರಪ್ಪ [3]ಮಕುಟಬದ್ಧರ[3]ಪ್ಪರಸುಗಳ್ ತಪಂಬ[4]ಡುವರಲ್ಲ[4]ರ್ ನೆಲಕ್ಕೆ ವರುತ್ತಿರ್ದ ವಿಮಾನಮೆಡೆಯಿಂದಂ ಮೇಗೆ ಮಗುೞ್ದುದಂ ಕಂಡುದಱಿಂ ದೇವರ್ಕಳುಂ ವಿದ್ಯಾಧರರ್ಕಳುಮಿಲ್ಲಿಂದಿತ್ತೀ ಕ್ಷೇತ್ರಕ್ಕೆ ವಾರರ್ ಪನ್ನೆರಡು ತಲೆಯ ಪಾಪಂ ಕಂಡುದಱಿಂದಿಲ್ಲಿಂ ತೊಟ್ಟೀ ನಾಡೊಳ್ ಪನ್ನೆರಡು ವರ್ಷಂಬರಂ ರೌದ್ರಪಸವಮಕ್ಕುಂ ಚಂದ್ರನೊಡೆದುದಂ ಕಂಡುದಱಿಂ ಸದ್ಧರ್ಮದ [5]ಮೊದಲ ಪೊರ್ದಿದ ಮಾರ್ಗದಿಂಬೆಳೆಯೊಳ್ ಪುಲ್ಗಳ್[5] ಪಲವಕ್ಕುಂ ಕಡುಗಡಿಯುವಪ್ಪೆರಡಾನೆಗಳ್ ತಮ್ಮೊಳ್ [6]ಪೋರಲ್[6] ಸಾರ್ದು ಪೆಱಪಿಂಗುವುದಂ ಕಂಡುದಱಿಂ ಪ್ರಜೆಗಳ ಮೆಚ್ಚಿದಂತೆ ಮೞೆ ಕೊಳ್ಳವು ಮಂಡಲವರ್ಷಂಗಳಕ್ಕುಂ ಮಿಾನಂಬುೞುವಂ ಕಂಡುದಱಿಂ ಮಿಾನಂಬುೞಿವಿನೊಳೋರನ್ನವು ಶಾಸ್ತ್ರಂಗಳುಮಂ[7]ಗ[7]ಬಾಹ್ಯಮಪ್ಪ ಚತುರ್ದಶ ವಿದ್ಯಾಸ್ಥಾನಂಗಳುಂ ಕುಂದಿಯುಪದೇಶ [8]ತನುಮಾತ್ರಮೆ[8] ನಿಲ್ಕುಂ ನೀರಿಲ್ಲದ ಕೆಱೆಯ ನಡುವಂ ಕಂಡುದಱಿಂ ತೀರ್ಥಂಕರ ಚಕ್ರವರ್ತಿಗಳ ಪುಟ್ಟಿದ ಮಧ್ಯದೇಶದೊಳ್ [9]ಪಿನ್ನ[9] ನೆಗೞ್ತಿಯಾಗದು ಆ ಮಧ್ಯ ದೇಶಕ್ಕೆ ಸಂಬಂಧಿಯೀಗಾಹೆ :

> ಪುವ್ವೇಣ ಅಂಗವಿಸಓ ದಕ್ಖಿಣದೋ ಜಾವಹೋ ಇ ಕೋಸಂಬೀ ।
> ಅವರೇಣ ಜಾವ [10]ದೂಣಾ[10] (?) ಕುಣಾಳ ವಿಸಯೋಯ ಉತ್ತರದೋ ॥

ಎಂದು ಮಧ್ಯದೇಶ ಪ್ರಮಾಣಂ ಮತ್ತಂ ಪೊಗೆಯಿಂದಂ ಪೆರ್ಚೆ ನೆಗೆದ ಕಾೞ್ಕಿರ್ಚಂ ಕಂಡುದಱಿಂ ಧೂರ್ತರಪ್ಪ ಪೊಲ್ಲಲಿಂಗಿಗಳ ಪೆರ್ಚಕ್ಕುಂ ಮತ್ತಂ ದಯೆ ಮೊದಲಾಗೊಡೆಯ ಸದ್ಧರ್ಮಕ್ಕೆ ವಿರುದ್ಧಮಾಗಿ ನೆಗೞ್ವ ಪಿರಿದಪ್ಪ ಹಿಂಸಾದಿಗಳಂ ಗೆಯ್ವ ವೇದಾದಿಶಾಸ್ತ್ರಂಗಳ ಪೆರ್ಚಕ್ಕುಂ ಸಿಂಹಾಸನಮನೇಱಿರ್ದ ಕೋಡಗಮಂ ಕಂಡುದಱಿಂ ಕುಲಜರಲ್ಲದವರರಸುಗೆಯ್ವರ್ ಪೊನ್ನ ತಳಿಗೆಯೊಳ್ ನಾಯ್ ತುಯ್ಯಲನುಣ್ಬುದಂ ಕಂಡುದಱಿಂ ಪೊಲ್ಲಲಿಂಗಿಗಳರಸರ್ಕಳಿಂದಂ ಪೂಜಿಸೆಪಡುವರ್ ಕೋಡಗಮಾನೆಯನೇಱುವುದಂ ಕಂಡುದಱಿಂದಾದಮಾನ್ಯಂ ಶುದ್ಧ ಕುಲದೊಳ್ ಪುಟ್ಟಿದರಸುಮ[11]ಕ್ಕ[11]ಳುತ್ತಮ ಕುಲದೊಳಪ್ಪಭಿಮಾನಮುಂ ತೊಱೆದು ಬಾೞ್ಕ್ಕಾರಣ

---

[1] ಸಮಕ್ಕ (ಘಚಛ). [2] ತುದಿಗೊಂಬುಡಿದುದಂ (ಘಚಛ). [3] ಮಂಡಲಿಕ ಮಕುಟಬುದ್ಧಾದಿಗಳ (ಘಚಛ). [4] ಡ (ಘಚಛ). [5] ಮಾರ್ಗಂ (ಘಚಛ). [6] ಪೆಜಿ (ಕಗ). [7] ಗಾಂಗ (ಚಛ). [8] ತನ್ಮಾತ್ರಮೆಯಿಂ (ಘಚಛ). [9] ಧರ್ಮದ (ಘಚಛ). [10] ಮಾಣಾ (ಘಚಛ), ದೂಣ (ಕ). [11] ಕ್ಕ (ಘ).

ಮಾಗಿ ಕುಲಜರಲ್ಲದವರ್ಗಳಾಗಿ ಬಾಳ್ವರ್ ಕುಸಕುಪ್ಪೆಯೊಳ್ ತಾವರೆ [1]ಮೂಡಿ[1]ದುದಂ ಕಂಡುದಱಿಂ ದಯೆಯುಪಶಮಮುಂ ಪರಿಗ್ರಹಪರಿತ್ಯಾಗಮುಂ ಸಮಾಧಿಯುಂ ಸತ್ಯಮುಂ ಶೌಚಮುಂ ಕ್ಷಮೆಯುಮೆಂದಿವು ಮೊದಲಾಗೊಡೆಯವಱ[3]ೊಳ್ ಕೂಡಿದ ಮಿಕ್ಕ ಸದ್ಧರ್ಮ ಮಾರ್ಗಮಂ ದ್ರವ್ಯಪತಿಗಳುಮರಸುಮಕ್ಕಳುಂ ತಮ್ಮ ದ್ರವ್ಯಾದಿ ಮದದಿಂದಂ ತೊಱ[3]ವರ್ ನೀಚಜಾತಿಗಳುಂ ಬಡವರುಂ ಸದ್ಧರ್ಮಮಂ ಕೈಕೊಂಡು ನೆಗಳ್ವರ್ ಸಮು[2]ದ್ರಂ ಮೇರೆದಪ್ಪುವುದಂ[2] ಕಂಡುದಱಿಂದರಸುಮಕ್ಕಳ್ ತಮ್ಮ ಮರ್ಯಾದೆಯುಂ ಮಿಕ್ಕ ದ್ರವ್ಯಂ ಮೊದಲಾಗೊಡೆಯವಱ[3]ೊಳ್ ಲೋಭಿಷ್ಠರಪ್ಪರ್ ಒಳ್ಳಿತಪ್ಪ ಸತ್ಯ ಶೌ[3]ಚ[3] ಚಾರಿತ್ರವೆಂದಿವಱಿಂ ಕುಂದಿಯಾದಮಾನುಂ ನಿರ್ದಯರ್ಕಳಪ್ಪರ್ ಬೆಳ್ಗ[4]ಱ್ತಿ[4]ಪೂಡಿದ ಪೊನ್ನರಥಮಂ ಕಂಡುದಱಿಂದಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಿಂದಂ ಪವಿತ್ರಮಪ್ಪ ನಿಗ್ರ್ರಂಥಲಿಂಗಮುಪ್ಪುದನ*ಱಿದೊಳ್ಳಿತಪ್ಪ [5]ತಪ[5]ಮಂ [6]ಕೈ[6]ಕೊಳಿಪಟ್ಟು[7]ಂ[7] ಪಿರಿದಪ್ಪ ಪುರುಷಕಾರಮುಂ ಸತ್ಯಮುಂ ಮನೋಬಲಮುಂ ವೀರ್ಯಮುಮೆಂದಿವಱಿಂದಂ ಕೂಡಿದ[8]ವರ್ಗಳಿಂ[8]ದಮೊಳ್ಳಿದರಪ್ಪ ತೀರ್ಥಕರ ಪರಮ ದೇವರ್ಕಳಿಂದಂ[9] ಚಕ್ರವ*ರ್ತಿಗಳಿಂದಂ[10] ಚರಮದೇಹಧಾರಿಗಳಿಂದಂ ನೆಗಱ[3]ಪಟ್ಟುದನೊಳ್ಳಿತಪ್ಪ ಮೋಕ್ಷಮಾರ್ಗಮಂ ಪೊರ್ದಿಯುಂ ವಿಷಯ ಸುಖಂಗಳೊಳ್ ಮೋಹಿತರ್ಕಳಾಗಿ ಕಿಡುವರ್ ಬೆಳ್ಗಱ್ತಿಯನರಸರ್ಕಳೇಱುವುದಂ ಕಂಡುದಱಿಂದುತ್ತಮ ಕುಲ[11]ದವರ್ಗಳ್ಗೆ[11] ಕುಲಜರಲ್ಲದವರೊಡನೆ ಮದುವೆ[12]ಯೊಳ್ ತೊಟ್ಟ ನಣ್ಪು[12]ಗಳಕ್ಕುಮೆಂದಿಂತು ಪದಿನಾಱುಂ ಕಂಡ ಕನಸುಗಳ ಫಲಂಗಳಂ ಸಂಪ್ರತಿ ಚಂದ್ರಗುಪ್ತ ಮಹಾರಾಜಂಗೆ ಭದ್ರಬಾಹು ಭಟ್ಟಾರರ್ ಪೇೞ್ದು ಮತ್ತಮಾ ಕಲಿಯುಗ ಮಹಾರಾಜನ ಸ್ವರೂಪಮನಿಂತೆಂದು ಪೇೞಲ್ ತೊಡಗಿದರ್ :

ಹರಿಣಿ ॥ ಅನೃತವಚನೇ ನಿತ್ಯಾಭ್ಯಾಸಃ ಖಲೇಷು ವಿದಗ್ಧತಾ
ಗುಣವತಿ ಜನೇ ವೈರಾಬುದ್ಧಿಃ ಖಲೇಷ್ವತಿಗೌರವಂ ।
ಯತಿಷು ನಿಯತಂ ವಾಕ್ಪಾರುಷ್ಯಂ ವಿಪತ್ತಿಷು ಚ ಕ್ರಿಯಾ
ಕಲಿಯುಗ ಮಹಾರಾಜಸ್ಯೈತಾನಿ ರಾಜವಿಭೂತಯಃ ॥

ಕಾಲೇ ಸಂಪ್ರತಿವರ್ತತೇ ಕಲಿಯುಗೇ ಸತ್ಯಾ ನರಾ ದುರ್ಲಭಾ
ನಾನಾ ಚೋರಗಣಾ ಮುಷಂತಿ ಪೃಥಿವೀಮಾರ್ಯೋ ಜನಃ ಕ್ಷೀಯತೇ
ದೇವಾಶ್ಚ ಪ್ರಲಯಂಗತಾಃ ಕರಭ[13]ವಲ್ಲಾಲ್ಯಂ[13]ಗತಾಃ ಪಾರ್ಥಿವಾಃ
ಪುತ್ರಸ್ಯಾಪಿ ನ ವಿಶ್ವಸಂತಿ ಪಿತರಃ ಕಷ್ಟಂ ಯುಗಂ ವರ್ತತೇ ॥

ನಿರ್ವೀರ್ಯಾ ಪೃಥಿವೀ ಗತೌಷಧಿರಸಾ ನೀಚಾ ಮಹತ್ವಂ ಗತಾಃ
ರಾಜಾನೋಽರ್ಥಪರಾಃ ಕುಧರ್ಮ ನಿರತಾ ವಿಪ್ರಾವಿಕರ್ಮಸ್ಥಿತಾಃ ।

---

[1] ಪುಟ್ಟ (ಘಚಛ). [2] ದ್ರ ವೇಳೆ ತನ್ನ ಮರ್ಯಾದೆಯುಂ ಮಿಕ್ಕುವರಿದುದಂ (ಕಗ). [3] ಚಾ ಚಾರ (ಚಛ). [4] ಳ್ತಿಗಳಿಂ (ಘಚಛ), ತ್ತಿಯ (ಗ), ತ್ತಿ (ಕ). ** (ಕ) ದಲ್ಲಿ ನಷ್ಟವಾಗಿದೆ. [5] ಪದ (ಗ). [6] (ಗ) ದಲ್ಲಿ ಇಲ್ಲ. [7] ದಂ (ಗ). [8] ಮಹಾಪುರುಷರ್ಕಳಿ (ಘಚ). [9] + ಸಕಲ (ಘ). [10] + ಬಲದೇವರ್ಕಳಿಂದಂ (ಘಚ). [11] ಜರಿಗೆ (ಕಗ). [12] ವೆಳ್ದೊತ್ತಟ್ಟ ನಂಬು (ಕಗ). [13] ವೈಲೋಕ್ಯಂ (ಚ), ವಲ್ಲಾರ್ಲ್ಯಂ (ಛ), ಈ ಪದ್ಯ (ಕಖಗ) ಗಳಲ್ಲಿಲ್ಲ.

ಭಾರ್ಯಾ ಭರ್ತರಿ ನೈವ ಬದ್ಧಹೃದಯಾ ಪುತ್ರಾಃ ಪಿತೃದ್ವೇಷಿಣಃ
ಇತ್ಯೇವಂ ಸಮುಪಸ್ಥಿತೇ ಕಲಿಯುಗೇ ಧನ್ಯಾ ಪನಂ ಪ್ರಸ್ಥಿತಾಃ ॥

ಎಂದಿಂತು ಭಟ್ಟಾರರ್ ಪೇೞೆ ಸಂಪ್ರತಿ ಚಂದ್ರಗುಪ್ತಮಹಾರಾಜಂ ಕೇಳ್ದು ಮತ್ತಂದಿನ ದಿವಸಂ ಕೞಿದೊಡೆ ಮಂಡಳಿಕರ್ ಜಿನದೀಕ್ಷೆಯಂ ಕೈಕೊಳ್ಳರೆಂಬುದಂ ಕೇಳ್ದಾದಮಾನುಂ[1] ಭೀತನಾಗಿ ಸಿಂಹಸೇನನೆಂಬ ತನ್ನ ಪಿರಿಯ ಮಗಂಗೆ ರಾಜ್ಯ ಪಟ್ಟಂಗಟ್ಟಿ ಭದ್ರಬಾಹು ಭಟ್ಟಾರರ ಪಕ್ಕದೆ ಪಲಂಬರರಸುಮುಕ್ಕಳ್ವೆರಸಾ ದಿವಸಮೆ ತಪಂಬಟ್ಟಂ

ಮತ್ತಿತ್ತ ಮಧ್ಯದೇಶದೊಳಿರ್ದ ರಿಸಿಯರ್ಕಳ್ಗೆಲ್ಲಂ ಬೞಿಯಟ್ಟೆ ಬರಿಸಿ ಭಟ್ಟಾರರಿಂತೆಂದರ್ ಪನ್ನೆರಡು ವರ್ಷಂಬರೆಗಮೀ ನಾಡೊಳನಾವೃಷ್ಟಿಯಾಗಿ ಮಹಾರೌದ್ರ ಪಸಮಕ್ಕುಂ ಮಧ್ಯಮದೇಶಮೆಲ್ಲಂ ಪಾೞಕ್ಕುಮೀ ನಾಡೊಳಿರ್ದ ರಿಸಿಯರ್ಕಳ್ಗೆ ಬ್ರತಭಂಗಮಪ್ಪುದದಱಿಂ ಪೋಪಂ ದಕ್ಷಿಣಾಪಥಕ್ಕೆಂದಾಚಾರ್ಯರ್ಕಳ್ ಸಹಿತ [2]ಮಿಚ್ಛಾರ್[2]ಸಿರ ರಿಸಿಸಮುದಾಯ[3]ಮುಂ ಸಂಪ್ರತಿ ಚಂದ್ರಗುಪ್ತಮುನಿಯುಂ ಬೆರಸು ದಕ್ಷಿಣಾಪಥಕ್ಕೆ ಪೋದರಿತ್ತ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ *[ಸ್ಥೂಲಭದ್ರಾ]* ಚಾರ್ಯರುಮಿಂತೀ ಮೂವರಾಚಾರ್ಯರುಂ ಭಟಾರರೊಡನೆ ಪೋಗಲೊಲ್ಲದೆ ತಂತಮ್ಮ ಋಷಿಸಮುದಾಯಂ ಬೆರಸು[3] ಸಿಂಧು ವಿಷಯಕ್ಕೆ ಪೋದರಿತ್ತ ಭಟ್ಟಾರರುಂ ಪಿರಿದು ಋಷಿ ಸಮುದಾಯಂ ಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ಕೞಿದು ಪೋಗಿ ಕ[4]ಟ್ಬ[4]ಪ್ಪ ನಾಡಸೆಯ್ದಿ ಪೋಗುತ್ತಂ ಭದ್ರಬಾಹು ಭಟ್ಟಾರರ್ ತಮ್ಮಾಯುಷ್ಯಪ್ರಮಾಣಮಱಿದಾಮಿಲ್ಲಿ ಸಂನ್ಯಸನಂ ಗೆಯ್ದಪ್ಪೆವು ನೀಮೆಲ್ಲಂ ಪೋಗಿಮೆಂದು ತಮ್ಮ ಪಿರಿಯ ಶಿಷ್ಯರ್ ದಶಪೂರ್ವ ಧಾರಿಗಳ್ ವಿಶಾಖಾಚಾರ್ಯರೆಂಬೊರಲ್ಲಿಂ ಬೞಿಯಮಾರ್ಯ ಸುಹಸ್ತಿ[5]ಗಳು[5]ಮರ ಭದ್ರರುಂ ಸುಭದ್ರಮಿತ್ರರುಂ ಮಹಾ[6]ಗಿರಿ[6]ಯುಂ ಸುಮತಿಯುಂ ಮಹಾಮತಿಯುಂ [7]ವಿಶಾಖನಂದಿಯುಮೆಂದಿವರ್ಗಳೆಲ್ಲರುಮನಾಚಾರ್ಯರ್ ಮಾಡಿ ದ್ರವಿ[8]ೞ[8]ವಿಷಯಕ್ಕೆ ಪೋಗಿಮೆಂದು ವಿಶಾಖಾಚಾರ್ಯರೊಡನೆ ಎಣ್ಬಾಸಿರ್ವರ್ ರಿಸಿಯರನಟ್ಟಿದರ್ ಚಂದ್ರಗುಪ್ತಮುನಿಯುಮನಿವರೊಡನೆ ಪೋಗಿಮೆಂದು ಭಟ್ಟಾರರ್ ಕೇೞೆ ಪೋಗಲ್ವೇೞ್ದೊಡಾಮುಂ ಪೋಗಲೊಲ್ಲೆವು ನಿಮ್ಮಡಿಗಳ್ಗೆ ವಿನಯಂಗೆಯ್ಯುತ್ತಮಿರ್ದಪ್ಪೆಮೆಂದು ಪೋಗಲೊಲ್ಲದೆ ಪಕ್ಕದಿರ್ದರುೞಿದರೆಲ್ಲಂ ಪೋದರಿತ್ತ[9] ಭದ್ರಬಾಹುಭಟ್ಟಾರರ್ ಕ[10]ಟ್ಬ[10]ಪ್ಪ ನಾಡಡವಿಯ ಬೆಟ್ಟದ ಮೇಗ[11]ಣೆಕಸಱೆ[11]ಯ ಮೇಗಿ[12]ರ್ದು[12] ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಪೂರ್ವಕಂ ಸಂನ್ಯಸನಂಗೆಯ್ದರ್

---

[1] + ಸಂಸಾರಕ್ಕೆ ಪೇಸಿ (ಘಚಛ). [2] ಮೆಣ್ಬಾ (ಘಚಛ). [3] (ಕಖಗ) ಗಳಲ್ಲಿಲ್ಲ. [4] ಬ್ಬ (ಘಛ), (ಚ) ದಲ್ಲಿ ತ್ರುಟಿತವಾಗಿದೆ. [5] ಗಹಾ (ಘಚಛ). [6] ರಿ ರುಷಿ (ಘಚಛ). ರಿಗಿರಿ (ಕಗ). * ವಿಶಾಖಾ (ಘಚ), ಶಾಖಾ (ಚ). [7] + ರಾಮಿಲ್ಲರುಂ ಪ್ರೋಷ್ಠಿಲ್ಲರುಂ (ಕಗ). [8] ಡ(ಕಗ), ಳ(ಘಚಛ). [9] + ಚಂದ್ರಗುಪ್ತ ಮುನಿಯುಮಷ್ಟೋಪವಾಸಂಗೆಯ್ದಿರ್ದೊರ್ (ಕಗ). [10] ಬ್ಬ (ಘಛ). [11] ಣೆಕಸಱೆ (ಕಗ), ಣೆಕಸಿಲೆ (ಘಛ), ಣೆಕಶಿಲೆ (ಚ). [12] ಳ್ದು (ಕಗ).

ಇತ್ತ ಚಂದ್ರಗುಪ್ತ ಮುನಿಯುಮಷ್ಟೋಪವಾಸಂಗೆಯ್ದಿರ್ದೋರಂ ಭಟ್ಟಾರರೆಂದರಾ[1]ಮುಂ ನೋಂತಿರ್ಪೆವು ನೀಮುಂ ಚ[1]ರಿಗೆವುಗುವುದಲ್ತೆಯೆಂದೊಡೆ ಭಟ್ಟಾರಾ ಊರಿಲ್ಲ ಕೇರಿಯಿಲ್ಲೀಯಡವಿಯೊಳೆಲ್ಲಿಗೆ ಚರಿಗೆ[2]ವುಗುವುದೆಂ[2]ದೊಡೆ ಭಟ್ಟಾರರೆಂದರ್ ಕಾಂತಾರ ಭೈಕ್ಷಮೆಂಬುದಾಗಮದೊಳ್ ಪೇೞ್ದುದಾರಾನುಂ ಬಟ್ಟೆವೋಪರ್ ಬೀಡಂ ಬಿಟ್ಟಿರ್ದರ್ ಸಿಱಿಸುವರಪ್ಪುದಱಿಂದೆ ಚರಿಗೆವುಗುವುದೆಂದೊಡೆ ಅಂತೆಗೆಯ್ವೆನೆಂದು ದೇವರಂ ಬಂದಿಸಿ ಚರಿಗೆವೊಕ್ಕಡವಿಯಂ ತೊೞಲ್ವಲ್ಲಿಯೊಂದು ಮರದ ಪೊೞಲೊಳಿರ್ದ ಮಾಣಿಕದ ಮುತ್ತಿನ ಪಿಂಡುಗಂಕಣಮಂ ತೊಟ್ಟ ಕೈಯಿಂದಂ ಪೊನ್ನ ಸಟ್ಟುಗಮಂ ತೀವಿ ಭೈಕ್ಷಮಂ ಪಿಡಿಯೆಂದು ನೀಡಿದ ಕೈಯನಿತನೆ ಕಂಡು ತೊೞಲ್ದಲಾಭಮಾಗಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರ್ ನಿಲೆವಟ್ಟುದೆಯೆಂದು ಬೆಸಗೊಂಡೊಡವರುಂ ತಮ್ಮ ಕಂಡುದಂ ಪೇೞ್ದೊಡೆ ಬೇಸಱದೆ ದಿವಸಕ್ಕಂ ಚರಿಗೆವೊಗುವುದೆಂದು ಭಟ್ಟಾರರ್ ಕಲ್ಪಿಸಿದೊಡಂತೆಗೆಯ್ವೆನೆಂದು ಮಱುದಿವಸಂ ಚರಿಗೆವೊಕ್ಕಡವಿಯಂ ತೊೞಲ್ವಲ್ಲಿಯೊಂದು ಮರದ ಕೆೞಗೆ ಪೊನ್ನ ಮಡಕೆಯೊಳ್ ಬೋನಮನೊಡ್ಡಿ ನೆಱೆಯೆ ತೊಟ್ಟುಟ್ಟು ಮಂಗಳವಸದನಂಗೊಂಡು ದಿವ್ಯಸ್ತ್ರೀ ಬಂದು ನಿಱಿಸಿದೊಡೆ ಇಂತೆಂದರಬ್ಬಾ ನೀ[3]ನೊರ್ವಳೆಯೆ ಪೆಱರಾ[3]ರುಮಿ[4]ಲ್ಲಿಂತು[4] ರಿಸಿಯರ್ಕಳ್ಗೆ ನಿಲಲಾಗದೆಂದು ಪೇೞ್ದು ತಮ್ಮಿರ್ದೆಡೆಗೆ ವೋದೊಡೆ ಭಟ್ಟಾರರಿಂತೆಂದರ್ [5]ನಿಲೆ[5]ವಟ್ಟುದೆ ಎಂದು ಬೆಸಗೊಂಡೊಡವರಿಂತೆಂದರ್ ಒರ್ವಳ್ ದಿವ್ಯಸ್ತ್ರೀ ಸರ್ವಾಭರಣ ಭೂಷಿತೆಯೊಂದು ಮರದ ಕೆೞಗೆ ಬೋನಮನೊ[6]ಡ್ಡಿ[6]ರ್ದಿದಿರಂ ಬಂದು ನಿಱಿಸಿದೊ[7]ಡೊರ್ವಳೆ[7] ಪೆಱರಾರುಮಿಲ್ಲೆಂದೆನೆ ನಿಲ್ಲದೆ [8]ಬಂದೆ[8]ವೆಂದೊಡೊಳ್ಳಿಕೆಯ್ದಿರೆಂದೊರಿಂತು ಪತ್ತು[9]ಪವಾಸಂಗೆಯ್ದು ಪನ್ನೊಂದನೆಯ ದಿವಸದಂದು ಚರಿಗೆವೊಕ್ಕಡವಿಯಂ ತೊೞಲ್ವನ್ನೆಗಂ ಪಿರಿದೊಂದು ಪೊೞಲುಂ ಧವಳಾರಂಗಳುಂ ನೆಲೆಯ ಮಾಡಂ[10]ಗಳುಂ[10] ಸೂಳೆಗೇರಿಗಳುಂ ದೇವಾಲಯಂಗಳುಮಾನೆ ಕುದುರೆಗ[11]ಳುಂ[11] ಮಾನಸರ ಬರುವುಮಂ ಪೋಗುವುಮಂ ಕಂಡಿನಿತು ದಿವಸಮೀಮರಗಳ ಗಿ[12]ಡು[12]ಗಳ ಪೊದಱುಗಳ ಮಱೆಗಳೊಳೀ ಪೊೞಲಂ ಕಂಡೆಮಿಲ್ಲೆಂದು ಮನದೊಳ್ ಬಗೆದು ಪೊೞಲೊಳಗೆ ಚರಿಗೆವೊಕ್ಕಾಗಳೊರ್ವಳ್ ದಿವ್ಯಸ್ತ್ರೀ ಪರಿವಾರಸಹಿತಮಿದಿರಂ ಬಂದು ನಿಱಿಸಿ ತನ್ನ ಮಾಡಕ್ಕೊಡಗೊಂಡು ಪೋಗಿ ಕಾಲಂ ಕರ್ಚಿಯರ್ಚಿಸಿ ಗುರುಭಕ್ತಿಗೆಯ್ದು ವಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಮಂ ಮುಗುೞ್ ಮುಗುೞ್ ಬಡ್ಡಿಸೆ[13]ಚರಿಗೆಮಾಡಿ[13] ಪರಸಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರ್ ನಿಲೆವಟ್ಟುದೆಯೆಂದು ಬೆಸಗೊಂಡೊಡೆ ನಿಲೆವಟ್ಟುದೆಂದೊಡೆಲ್ಲಿ ನಿಂದಿರೆಂದು ಬೆಸಗೊಂಡೊಡಿಂತೆಂದರ್ ಭಟ್ಟಾರಾ ಇನಿತು ದಿವಸಂ ಮರಂಗಳ ಪೊದಱುಗಳ ಮಱೆಗಳೊಳೀ ಪೊೞಲಂ ಕಂಡೆಮಿಲ್ಲಿಂದಿನಿಸಾನುಂ†

1 ರಿಂತು ದಿವಸಕ್ಕಂ ನಾಮುಂಸೋನುವಿರ್ಚರಿಗೆ (ಕಗ). 2 ವುಗುವೆಮೆಂಬು (ಘಚಛ).
3 ಮುನ್ನೊರ್ವರೆ ನಾಮುನ್ನೂರ್ವರೆ ಪೆಱರಾ (ಗ), ಮೊರ್ವರೆಮಾಮುನ್ನೊರ್ವರೆ ಪೆಱಗಾ (ಘಛ), ಮೊರ್ವರೆ ಮಾಮೊರ್ವರೆ ಪೆಱಗಾ (ಚ). 4 ಲ್ಲಮೆ (ಕಗ). 5 ನೆಱೆ (ಘಚ), ನೆಲೆ (ಚ).
6 ಟ್ಟ (ಚ). 7 ಡಿರ್ವರೆ (ಚಛ), ಡಿರ್ಮರುಮೆ (ಛ). 8 ಬಂದೆ (ಕ). 9 ದಿವಸನು (ಘಚಛ).
10 ಳ್ಮಂಗಡಿಗಳಂ (ಘಚಛ). 11 ಳನೇಕ (ಚ). 12 ರಿ (ಘಚಛ). 13 ಯುಂಡು (ಘಚಛ).
† ಪು. ೭೫-೮೩ † (ಖ) ದಲ್ಲಿ ನಷ್ಟವಾಗಿದೆ.

ತಿಣ್ಣಂ ತೊೞಲ್ವಲ್ಲಿ ಪಿರಿದೊಂದು ಪೊೞಲಂ ಕಂಡು ಚರಿಗೆವೊಕ್ಕೊಡೊರ್ವಳ್ ದಿವ್ಯಸ್ತ್ರೀ ಪರಿವಾರಸಹಿತಮಿದಿರಂ ಬಂದು ನಿಱಿಸಿ ತನ್ನ ಮನೆಗೊಡಗೊಂಡುಪೋಗಿ ಕಾಲಂ ಕರ್ಚಿಯರ್ಚಿಸಿ ಗುರುಭಕ್ತಿಗೆಯ್ದು ವಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಂಗಳಂ ಬಡ್ಡಿಸೆ ಶ್ರಮಂ ಪೋಗೆ ಚರಿಗೆಮಾಡಿ ಪರಸಿ ಬಂದೆವೆಂದು ಭಟ್ಟಾರರ್ಗೆ ಪೇೞ್ದೊಡೊಳ್ಳಿತ್ತಾಯಿತ್ತೆಂದು ಸಂತೋಸಂಬಟ್ಟರ್ದರಿಂತು ದಿವಸಕ್ಕಂ ಪೊೞಲ್ಗೆ ಪೋಗಿ ಚರಿಗೆ[1]ಮಾಡುವರಿತ್ತ[1] ಭದ್ರಬಾಹುಭಟ್ಟಾರರ್ ಮುನ್ನೆ ತಮ್ಮ ತಪಂಗೆಯ್ವಂದೆಲ್ಲಾ ಕಾಲಮುಮವನೋದರ್ಯ ಚರಿಗೆಮಾಡಿ ಪಸಿವಂ ಸೈರಿಸಿ ತಮ್ಮ ಮೆಯ್ಯಂ ಕ್ಷಯಕ್ಕೆ ತಂದು ಸಂನ್ಯಸನಂಗೆಯ್ದು ಪಲವು ದಿವಸದಿಂದಂ ಪಸಿವುಂ ನೀರೞ್ಕೆಯುಮಂ ಸೈರಿಸಿ ಶುಭಪರಿಣಾಮದಿಂದಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಮುಡಿಪಿ ಬ್ರಹ್ಮಕಲ್ಪದೊಳ್ ಪತ್ತು ಸಾಗರೋಪಮಾಯುಷ್ಯಮನೊಡೆಯೊಂ ಅಮಿತ ಕಾಂ[2]ತಿಯೆಂ[2]ಬೊಂ ದೇವನಾಗಿ ಪುಟ್ಟಿದೊಂ

ಚಂದ್ರಗುಪ್ತಮುನಿಯುಂ ಭಟ್ಟಾರರ ನಿ[3]ಸಿದಿಗೆ[3]ಯುಂ ಬಂದಿಸುತ್ತಮಾದೇವತೆ ಬೆಸಕೆಯ್ಯೆ ಚರಿಗೆ ಮಾಡಿ ತಪಂಗೆಯ್ಯುತ್ತಂ ಪನ್ನೆರಡು ವರುಷಂಬರೆಗಮಿಂತಿರ್ಪನ್ನೆಗಮಿತ್ತ [4]ತಿಮುೞನಾೞ್ಗೆ[4] ಪೋದ ಋಷಿಸಮುದಾಯಮೆಲ್ಲಂ ಪನ್ನೆರಡು ವರುಷಂಬರೆಗಂ ಸುಖ[5]ದೊಳಿ[5]ರ್ದು ನಿರುಪಸರ್ಗದಿಂ[6] ದರ್ಶನ ಜ್ಞಾನಚಾರಿತ್ರಂಗಳಂ ಪ್ರತಿಪಾಳಿಸಿ ಬಡಗನಾಡ ಪಸವು ತಿಳಿದುದೆಂಬುದನಾ ನಾಡಿಂದಂ ಬಂದರ್ ಪೇೞೆ ಕೇಳ್ದಱಿದು ಭಟ್ಟಾರರ ನಿ[7]ಸಿದಿಗೆ[7]ಯುಂ ಬಂದಿಸಿ ಪೋಪಮೆಂದು ವಿಶಾಖಾಚಾರ್ಯರ್ ಮೊದಲಾಗೊಡೆಯ ಋಷಿಸಮುದಾಯಮೆಲ್ಲಂ ದಕ್ಷಿಣಾಪಥದಿಂದಂ ಬಂದು ಭಟ್ಟಾರರ ನಿ[7]ಸಿದಿಗೆ[7]ಯನೆಯ್ದಿದಾಗಳ್ ಚಂದ್ರಗುಪ್ತ ಮುನಿಯುಂ ರಿಸಿಯರ್ಕಳ ಬರವಂ ಕಂಡಿದಿರಂ [8]ಬಂದು[8] ಋಷಿಸಮುದಾಯಮೆಲ್ಲಮಂ ಬಂದಿಸಿದೊಡೆ ರಿಸಿಯರ್ಕಳಿಂತೆಂದು ಬಗೆದೀಯಡವಿಯೊಳಿನ್ನೆಗಮಿವರ್ ಕಂದಮೂಲಫಲಂಗಳಂ ತಿಂದು ತೊಱೆಯ ಪಳ್ಳದ ನೀರ್ಗಳಂ ಕುಡಿದು ಪನ್ನೆರಡು ವರುಷಂಬರೆಗಮೆಂತು ಬರ್ದೋರೆಂದು ತಮ್ಮೊಳ್ ನುಡಿದು ಮತ್ತಂ ತಲೆನವಿರ್ ಬೆಳೆದುದುಮಂ ಕಂಡಾರಪ್ಪೊಡಂ ಪ್ರತಿವಂದನೆಯುಂ ಕೊ[9]ಟ್ಟುದಿ[9]ಲ್ಲ ಮತ್ತಾ ರಿಸಿಯರ್ಕಳನಿಬರುಮಾ ದಿವಸಮುಪವಾಸಂಗೆಯ್ದು ಚರ್ಚಿಸಿ ಕ್ರಿಯೆಗೆಯ್ದು ಭಟ್ಟಾರರ ನಿ[7]ಸಿದಿಗೆ[7]ಯಂ ಬಂದಿಸಿಯಾ ದಿವಸಮಲ್ಲಿ[10]ಯಿಕೆಂದು[10] ಮಱುದಿವಸಂ ಪೋಪಾಗಳ್ ಚಂದ್ರಗುಪ್ತ [11]ಮುನಿಗಳೆಂ[11]ದರ್ ಭಟಾರಾ ನಿನ್ನೆ [12]ಬಟ್ಟೆವಂದು[12]ಪವಾಸಂಗೆಯ್ದು ಸೇದೆ[13]ವಟ್ಟೆರಿಂ[13]ದಿನ ದಿವಸಮಿಲ್ಲಿರ್ದು ಚರಿಗೆ ಪೊಕ್ಕು ಸೇದೆಯನಾಱಿಸಿ ನಾಳೆ ಪೋ[14]ಕೆಂ[14]ದೊಡೆ ಭಟ್ಟಾರರೆಂದರೂರಿಲ್ಲ ಕೇರಿಯಿಲ್ಲೆಲ್ಲಿ ಚರಿಗೆವುಗುವಮೆಂತು ಕೆಮ್ಮನೇಕೆಮ್ಮಂ ತಾಂಗಿದಪಿರೆಂದೊಡೆ[15] ಪಿರಿದೊಂದು

---

[1] ಪೋಗಿಯುಣ್ಬರಿತ್ತ (ಘಚಝ). [2] ತನೆಂ (ಚಝ). [3] ಷಿದ್ದಿ (ಘಚಝ). [4] ದ್ರವಿಳನಾಳ್ಕೆ (ಘಚ), ದ್ರವಿಳನಾಡಿಂಗೆ (ಝ). [5] ಮಿ (ಘಚಝ). [6] + ಸಮ್ಯಕ್ (ಘಝ). [7] ಷಿದಿ (ಘಚಝ). [8] ಪೋಗಿ (ಘಚಝ). [9] ಟ್ಟರಿ (ಘಚಝ). [10] ರ್ದು (ಘಚಝ). [11] ಮಹಾಮುನಿಯರೆಂ (ಘಚಝ). [12] ನಾಮುಂ ಶ್ರಮಂ ಬಟ್ಟೆರು (ಕಖಗ). 3 ಗೆಟ್ಟೆಂದಿನ (ಕಖಗ) ಗೆಟ್ಟೆರಿಂ (ಘಚ). [14] ಗಿಮೆಂ (ಘ). [15] + ಭಟಾರಾ (ಘಚಝ).

ಪೊೞಲುಂಟು [1]ನೀಮುಂ[1] ಸಂಕ್ಲೇಶಂ [2]ಬಡದಿರಿಂ[2]ದಿನ ದಿವಸಮಿರ್ಕೆಂದೊಡನಿಬರುಮೆಂದರಿಂದಿನ ದಿವಸಮುಪವಾಸಂಗೆಯ್ದುಪ್ಪೊಡಮಿವ[3]ರೆಂಬುದನಿಂಬು[3]ಕೆಯ್ವೆಮೆಂದಿರ್ದೊಡೆ ಮಧ್ಯಾಹ್ನಮಪ್ಪಾಗಳ್ [4]ದೇವರಂ ಬಂದಿಸವೇೞ್ದೊಡನಿಬರುಂ[4] ಬಂದಿಸಿ ಚಂದ್ರಗುಪ್ತಮುನಿಯ ಬೞಿಯಂ ಋಷಿಸಮುದಾಯಮೆಲ್ಲಂ ತಗುಳ್ದು ಕಿಱಿದಂತರಮಂ ಪೋಪನ್ನೆಗಂ ಪಿರಿದೊಂದು ಪೊೞಲಂ ಕಂಡು ಚರಿಗೆವೊಕ್ಕನಿಬರುಮಂ ನಿಱಿಸಿ ಕೆಲ ರಿಸಿಯರುಮಾಚಾರ್ಯರ್ಕಳುಂ ಬೆರಸು ತಾಮೊಂದುಮನೆಯೊಳ್ ನಿಂದರಿಂತನಿಬರುಂ ದಿವ್ಯಾಹಾರಂಗಳಂ ಶ್ರಮಂ ಪೋಗೆ ಚರಿಗೆಮಾಡಿ ತಮ್ಮಾವಾಸಕ್ಕೆ ಬಂದು ವಿಶಾಖಾಚಾರ್ಯರೆಂದರ್ ಬ್ರಹ್ಮಯ್ಯಾ ಕಾಲಂಕರ್ಚಲ್ ಗುಂಡಿಗೆಯಂ ಕೊಂಡು ಬನ್ನಿಮೆಂದೊಡೆ ಬ್ರಹ್ಮಯ್ಯನೆಂದಂ ಗುಂಡಿಗೆಯನುಂಡ ಮನೆಯೊಳ್ ಮಱೆದು ಬಂದೆನೆನೆ ಬೇಗಂ ಪೋಗಿ ಕೊಂಡು ಬಾಯೆನೆ ಬ್ರಹ್ಮಯ್ಯಂ ಪೋಗಿ[5]ಪೊೞಲೆಡೆಯಂ ಕಾಣದಡವಿಯೆಲ್ಲಮಂ ತೊೞಲ್ದು [6]ಸೋಡಿ[6] ಗುಂಡಿಗೆಯಂ ಕಾಣದತ್ತಮಿತ್ತಂ ನೋೞ್ಪನ್ನೆಗಮೊಂದು ಮರದ ತುತ್ತತುದಿಯೊಳಿರ್ದೆೞಲ್ವ ಗುಂಡಿಗೆಯಂ ಕಂಡು ಬಂದು ಗುರುಗಳ್ಗಿಂತೆಂದಂ ಭಟ್ಟಾರಾ [8]ನಾಮುಂ[8]ಡೆಡೆಯೊಳಾ ಪೊೞಲಿಲ್ಲ ನಮ್ಮುಂಡ ಮನೆಯುಮಿಲ್ಲ ಗುಂಡಿಗೆಯುಮೊಂದು ನಿಡಿಯ ಮರದ ತುತ್ತತುದಿಯೊಳಿರ್ದುದಾರಾನುಮೇಱಲ್ ಬ[9]ಲ್ಲೋರ[9]ನಟ್ಟುಗೆಂದೊಡನಿಬರುಂ ರಿಸಿಯರ್ಕಳೆಲ್ಲಂ ಚೋದ್ಯಂಬಟ್ಟು ನೋಡಲ್ಪೋಗಿ ಪೊೞಲಂ ಕಾಣದಡವಿಯೊಳ್ ನಿಡಿಯ ಮರದ ತುತ್ತತುದಿಯೊಳಿರ್ದೆೞಲ್ವ ಗುಂಡಿಗೆಯಂ ಕಂಡು ತೆಗೆಯಿಸಿಕೊಂಡು ಪೋಗಿ ಚಂದ್ರಗುಪ್ತಮುನಿ[10]ಯನನಿಬರುಂ ರಿಸಿಯರ್ಕಳ್ ನೆ[10]ರೆದಿಂತೆಂದರಾಮುಂ ನಿಮ್ಮನೀಯಡವಿ[11]ಯೊಳ್[11]ಕಂದಮೂಲಫಲಂಗಳಂ ತಿಂದು ಪಳ್ಳದ [12]ನೀರಂ[12] ಕುಡಿದು ಇನಿತು ಕಾಲಂ ಬ[13]ರ್ದಿರೆಂ[13]ದು ನಿಮ್ಮಂ ಬಗೆದು ಬಂದಿಸಿದೆವಿಲ್ಲಿದರ್ಕೆ ನೀಮುಂ ಮನದೊಳೇವಂಗೊಳ್ಳದೆ ಕ್ಷಮಿಯಿಸಿಮೆಂದು ನುಡಿದು ವಂದಿಸಿ ಮತ್ತಮಿಂತೆಂದರ್ ನೀಮುಂ ದೇವತಾಧಿಷ್ಠಿತರಿರ್ ನಿಮಗೆ ದೇವತೆಗಳ್ ಬೆಸಕೆಯ್ವುವು ದೇವತೆಗಳ್ ಮಾಡಿದಾಹಾರಮಂ ನೀಮಿನ್ನೆಗಮುಂಡು ತಪಂಗೆಯ್ದಿರಿನ್ನುಣಲ್ವೇಡ ದೇವತೆಗಳ ಮಾಡಿದಾಹಾರಮಂ ರಿಸಿಯ[14]ರ್ಗೆ ಚರಿಗೆ ಮಾಡಲಾಗ[14]ದೆಂದು ಬಾರಿಸಿಯವರ್ಗೆ ಲೋಚುಗೆಯ್ದು ಬ್ರತಂಗಳನೇಱಿಸಿ ಪಡಿಕಮಣಂಬೇೞ್ದೊಡಗೊಂಡುತ್ತರಾಪಥಕ್ಕೆ ಪಯಣಂಬೋಗಿ ಕತಿಪಯ ದಿವಸಂಗಳಿಂದಂ ಮಧ್ಯದೇಶಮನೆಯ್ದಿಯಾ ನಾಡೊಳ್ ಋಷಿಸಮುದಾಯಮೆಲ್ಲಂ ನಿರುಪಸರ್ಗಮಿರ್ದತ್ತು

ಮತ್ತಿತ್ತ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ ಸ್ಥೂಲಭದ್ರಾಚಾರ್ಯರುಮಂತು ಮೂವರುಂ ಸಿಂಧು ವಿಷಯಕ್ಕೆ ತಂತಮ್ಮ ಋಷಿಸಮುದಾಯಂ ಬೆರಸು

---

[1] ನಾಮುಂ (ಕಖ), (ಘಚಛ) ಗಳಲ್ಲಿಲ್ಲ. [2] ಬೇಡಿಂ (ಘಚಛ). [3] ರಿಂಬು (ಖ), (ಗ) ದಲ್ಲಿಲ್ಲ. [4] (ಘಚಛ) ಗಳಲ್ಲಿಲ್ಲ. [5] + ನೋೞ್ಪನ್ನೆಗಂ (ಘಚಛ). [6] (ಘಚಛ) ಗಳಲ್ಲಿಲ್ಲ. [7] + ಮುಗುಳ್ದು (ಚ). [8] ನಮ್ಮುಂ (ಚಛ). [9] ಲ್ಲಾತ (ಕಖಗ). [10] ಯನನಿತು ರುಷಿಸಮುದಾಯಂ ನೆ (ಘಚಛ). [11] ಯ (ಚ). [12] ತೊೞಿಯ ನೀರ್ಗಳಂ (ಘಛ), ಕೊಳ್ಳದ ತೊೞಿಯ ನೀರಂ (ಚ). [13] ದ್ದಿರೆ (ಖ), (ಗ) ದಲ್ಲಿ ನಷ್ಟವಾಗಿದೆ. [14] ರ್ಕಳುಣಲ್ಬಾರ (ಘಚಛ).

ಪೋದೊಡಾ ನಾಡೊಳ್ ಮಾನಸರ್ ಮಾನಸರಂ ತಿಂಬಂತುಟಪ್ಪ ಮಹಾಘೋ[1]ರಂ[1] ಪಸವಾದೊಡಲ್ಲಿಯ ಶ್ರಾವಕರೆಲ್ಲಂ ನೆರೆದು ರಿಸಿಯರಲ್ಲಿಗೆ ಪೋಗಿ ಇಂತೆಂದರ್ ಭಟಾ[2]ರಾ ಲ[2]ವಟಂಗಳ (?) ಕೈಯಲ್ ಪಗಲುಣ[3]ಲುಮಡಲುಂ ಪೆಱಲಾಗ[3] ಮೇಲ್ವಾ ಯ್ದೆಱ[3]ದು ಕೊಂಡುಂಬ[4]ರ್[4] ಲೋಗರೆಲ್ಲಮವರ ಭಯಕ್ಕೆ ಪಗಲಡುಗೆಯುಂ ಬಿಸುಟ್ಟಿರುಳಟ್ಟುಣಲ್ ತಗುಳ್ದರದಱಿಂ ನೀಮುಮಿಂದಿತ್ತಿರುಳ್ ಭೈಕ್ಷಭಾಜನಂಗಳಂ ಕೊಂಡು ಪೋಗಿ ಶ್ರಾವಕರ ಮನೆಗಳಂ ತೊಱಲ್ದು ಭೈಕ್ಷಂ ಬೇಡಿಕೊಂಡು ಕೂಱನಿರುಳ್ ತಂದಿಟ್ಟು ಪಗಲುಣ್ಬುದೆಂದೊಡಂತೆ ಗೆಯ್ವಮೆಂದು ಇರುಳ್ ತೊಱಲ್ದು ಭೈಕ್ಷಮಂ ತಂದು ಮಡಗಿಟ್ಟು ಪಗಲುಣ್ಬೊರಾದರಿಂತೀ ಪಾಂಗಿನೊಳ್ ಕಾಲಂ ಸಲೆ ಮತ್ತೊಂದು ದಿವಸಮೊರ್ವ ನಿಗ್ಗ್ರಂಥ[5]ಯತಿ[5] ಭೈಕ್ಷಭಾಜನಮಂ ಕೊಂಡು ಶ್ರಾವಕರ ಮನೆಗಳನಿರುಳ್ ಭೈಕ್ಷಂ ಬೇಡಿ ತೊಱಲುತ್ತಂ ಪೋಪರೊಂದು ಮನೆಯುಂ ಪೊಕ್ಕು ಭೈಕ್ಷಮಂ ಬೇಡಿದೊಡೊರ್ವಳ್ ಪೊಸ ಶ್ರಾವಕಿ [6]ಬಸಿಪ್ಪೆಂಡತಿ[6] [7]ವೇ[7]ಳಾಸ್ವಾಮಿನಿಯೆಂಬೊಳ್ ಕ[8]ರ್ದಿಂ[8]ಗ[9]ಳಿರುಳೊಳ್[9] ಕತ್ತಲೆಯೊಳ್ ನಿಗ್ಗ್ರಂಥಮಪ್ಪ[10] ರೂಪಂ[11] ಕಂಡು ಬೆರ್ಚಿಮೊಡಾಕೆಗೆ ಬಸಿಱುಱಿದತ್ತದಂ ಕಂಡು ಶ್ರಾವಕರೆಲ್ಲಂ ನೆರೆದು ರಿಸಿಯರಲ್ಲಿಗೆ ಪೋಗಿ ಇಂತೆಂದರ್ ಭಟ್ಟಾರಾ ಕಾಲಮಪ್ಪೊಡೆ ಕೆಟ್ಟತೊಳ್ಳಿತ್ತಪ್ಪ ಕಾಲಮಾದಂದು ಪ್ರಾಯಶ್ಚಿತ್ತಂಗೊಂಡು ನಿಮ್ಮ ತಪಂಗಳೊಳ್ ನಿಲ್ಲಿ[12]ಮಾಗಳೀ ಪಸವು ಕಱ[12]ವನ್ನೆಗಂ[12] ನೀಮುಮೆಡದ ಕೈಯನೆಱಲಿಕ್ಕಿಯರ್ಧಗಪ್ಪಡಮನೆಡದ ಮುಯ್ಪಿನಮೇ[13]ಗಿಕ್ಕಿ[13] ಒಳಗೆ ನಿಗ್ಗ್ರಂಥಮಪ್ಪ ರೂಪಂ ತಾಳ್ದಿ ಬಲದ ಕೈಯೊಳ್ ಭೈಕ್ಷದ ಭಾಜನಮಂ ಪಿಡಿದು ತೊಱಲ್ದು ಭೈಕ್ಷಮಂ ಬೇಡಿ ಮಡಗಿಟ್ಟು ಪಗ[14]ಲುಣ್ಣಿಮೆಂ[14]ದೊಡವರ್ಗಳುಮಂತೆ ಗೆಯ್ವಮೆಂದವರ ಪೇೞ್ದ ಪಾಂಗಿನೊಳ್ ನೆಗೞ್ದು ಪಸವಂ ನೀಗಿ ಕಾಲಮೊಳ್ಳಿತ್ತಾದೊಡೆ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ ಸ್ಥೂಲಭದ್ರಾಚಾರ್ಯರುಮಂತು ಮೂವರುಂ ತಂತಮ್ಮ ಋಷಿಸಮುದಾಯಂ ಬೆರಸು ವಿಹಾರಿಸುತ್ತಂ ಮಧ್ಯದೇಶಕ್ಕೆ ರಿಸಿಯರ್ಕಳಿರ್ದಲ್ಲಿಗೆ ಬಂದೊಡೆ ವಿಶಾಖಾಚಾರ್ಯರ್ ಮೊದಲಾಗೊಡೆಯ ಆಚಾರ್ಯರ್ಕಳವರನಿಂತೆಂದರ್ ನೀಮೆಲ್ಲಮರ್ಧಗಪ್ಪಡಮಂ ಬಿಸುಟ್ಟು ನಿಗ್ಗ್ರಂಥರೂಪುಮಂ ಕೈಕೊಂಡು ಬ್ರತಂಗಳನೇಱಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂಗೇಳ್ದು ತಪದೊಳ್ ನಿಲ್ಲಿಮೆಂದೊಡಂತೆಗೆಯ್ವಮೆಂದು ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ[15] ತಂತಮ್ಮ ಋಷಿಸಮುದಾಯಂ ಬೆರಸು ವಿಶಾಖಾಚಾರ್ಯರ ಪಕ್ಕದೆ ಅರ್ಧಗಪ್ಪಡಮಂ ಬಿಸುಟ್ಟು ಪಡಿಕಮಣಂಗೇಳ್ದು [16]ಪ್ರಾಯಶ್ಚಿತ್ತಂಗೊಂಡು ಯಥೋಕ್ತಮಪ್ಪ ಚಾರಿತ್ರದೊಳ್ ನಿಂದರ್ ಸ್ಥೂಲ

---

[1] ರಮಪ್ಪ (ಘಚಛ). [2] ರಾ ಅ (ಖ), ರಕಾ ರಾಲ (ಛ). [3] ಲ್ವಾರದು (ಘಚಛ). [4] ರುಂ (ಖ). [5] ರುಷಿಯರ್ (ಘಚಛ). [6] (ಘಚಛ) ಗಳಲ್ಲಿಲ್ಲ. [7] ಮೇ (ಕಗ), [8] ಳ್ದಿಂ (ಘಚಛ). [9] ಳೊಳ್ ಇರುಳ್ ಕಡು (ಘಚಛ). [10] + ಯತಿ (ಘಚಛ). [11] + ತೊಟ್ಟನೆ (ಘಚಛ). [12] ಮನ್ನೆಗಂ (ಕಖಗ). [13] ಗೆಳಲಿಕ್ಕಿ (ಘಚಛ). [14] ಲಿರ್ಪ್ಪದೆಂ (ಘಛ), ಲಣ್ಬುದೆಂ (ಚ). [15] + ಸ್ಥೂಲಭದ್ರಾಚಾರ್ಯರುಂ (ಕಖ). [16] + ತಪದೊಳ್ ನಿಂದು (ಕಗಚ).

ಭದ್ರಾಚಾರ್ಯರ್ ಮೊದಲಾಗಿ ಕೆಲಂಬರ್ ಕೊಳಲೊಲ್ಲದವರ್ [1]ಜಿನಕಲ್ಪಂ ಸ್ಥವಿ[ರಕಲ್ಪ][1]ಮೆಂದೆರಡು ಭೇದಂ ಮಾಡಿ ಅರ್ಧಗಪ್ಪಡದ ತೀರ್ಥಮಂ ನೆಗಬ್ಚಿದರ್

ಇಂತರ್ಧಗಪ್ಪಡದ ತೀರ್ಥ ಪಾರಂಪರ್ಯದಿಂದಂ ಸುರಥಮೆಂಬುದು ನಾಡಲ್ಲಿ ವ[2]ಳಭಿ[2]ಯೆಂಬುದು ಪೊೞಲದನಾಳ್ವೊಂ ವಪ್ರಪಾ[3]ಳ[3]ನೆಂಬೊನರಸನ ರಾಜ್ಯಂ ಬರೆಗಮರ್ಧಗಪ್ಪಡದ ತೀರ್ಥಂ ನೆಗಟ್ದಿತ್ತು ಮತ್ತಂ ವಪ್ರಪಾಳನೆಂಬರಸಂ ಮಿಥ್ಯಾದೃಷ್ಟಿಯಾತನ ಮಹಾದೇವಿ [4]ಸ್ವಾ[4]ಮಿನಿಯೆಂಬೊಳರ್ಧಗಪ್ಪಡದ ತೀರ್ಥದ ತಪಸ್ವಿಯರ ಶ್ರಾವಕಿಯಾಗಿ ಇಂತು ಕಾಲಂಸಲೆ ಮತ್ತೊಂದು ದಿವಸಂ ನಡುವಗಲರಸನುಂ ಮಹಾದೇವಿಯುಮಿಂತಿರ್ವರುಂ ಪ್ರಾಸಾದದ ಮೇಗಿರ್ದು ಗವಾಕ್ಷ ಜಾಳಾಂತರಂಗಳಿಂದಂ ದಿಶಾವಲೋಕನಂ ಗೆಯ್ಯುತ್ತಿರ್ಪನ್ನೆಗಮರ್ಧಗಪ್ಪಡದ ಸಂಘಂ ಭೈಕ್ಷಂ ಕಾರಣಮಾಗಿಯರಮನೆಯಂ ಪುಗುವುದನರಸಂ ಕಂಡರಸಿಯನಿಂತೆಂದನೆಲೆ ಮಹಾದೇವಿ ಈ ನಿನ್ನ[5]ರ್ಧಗಪ್ಪಡದ ಯತಿಯರ [6]ಧರ್ಮ[6]ಮೊಳ್ಳಿತ[7]ಲ್ತಿ[7]ವರುಟ್ಟರುಮಲ್ಲ[8]ರ್ ಬತ್ತ[8]ಲೆಗರುಮಲ್ಲರೆಂದು ನುಡಿದು ಮತ್ತೊಂದು ದಿವಸಮರ್ಧಗಪ್ಪಡದ ಸಂಘಮನರಸಂ ಬೞಿಯಟ್ಟೆ ವರಿಸಿ ಇಂತೆಂದಂ ನೀಮರ್ಧಗಪ್ಪಡಮಂ ಬಿಸುಟ್ಟು ನಿರ್ಗ್ರಂಥಮಪ್ಪ ರಿಸಿರೂಪಂ ಕೈಕೊಂಡು [9]ಬೞಿ[9]ಯೆ ತಪಂಗೆಯ್ವುದೆಂದೊಡವರೊಲ್ಲದಿರ್ದೊಡರಸಂ ಮತ್ತಮಿಂತೆಂದಂ ನಿರ್ಗ್ರಂಥಮಪ್ಪ ರೂಪಂ ಕೈಕೊ[10]ಳಲೊಲ್ಲಿ[10]ರಪ್ಪೊಡರ್ಧಗಪ್ಪಡಮಂ ಬಿಸುಟ್ಟು [11]ಪೞಿ[11]ಯಂ ಸ[11]ಯ್ತುಟ್ಟುಕೊಂಡಿರಿಮೆಂದೊಡಂತೆ ಗೆಯ್ವೆಮೆಂದಾ ದಿವಸಂ ತಗುಳ್ದು ಬಡಗನಾಡವರ್ ವಪ್ರಪಾಳನ ರಾಜ್ಯದೊಳರ್ಧಗಪ್ಪಡಮಂ ಬಿಸುಟ್ಟು ಕಚ್ಚೆಗಟ್ಟದೆ ಸಯ್ತುಡುವರುಂ ಕುಱಿ[12]ವಡವಂ ಪೊ[12]ದೆವರು ಮಾಡೊರಲ್ಲಿಂದಿತ್ತ ಕಂಬ[13]ಳ[13]ತೀರ್ಥಮೆಂಬುದಾದುದನರುಂ ಶ್ವೇತಪಟರೆಂಬೊರಾದರ್ ದಕ್ಷಿಣಾಪಥದೊಳ್ ಸಾ[14]ಮ[14]ಳಿಪುತ್ರನೆಂಬರಸನ[15]ಪ್ಪನವರಯೆ[15] ಸಂತತಿ[16]ಯ[16] ಶ್ವೇತಭಿಕ್ಷುಃಜಾಪ್ರುಲಿ ಸಂಘಕ್ಕೆ ಮೊದಲಿಗನಾದಂ

ಮತ್ತಿತ್ತ ಸಂಪ್ರತಿ ಚಂದ್ರಗುಪ್ತಮುನಿಯುಮುಗ್ರೋಗ್ರ ತಪಶ್ಚರಣಂಗೆಯ್ದು [17]ಸಂನ್ಯಸನವಿಧಾನದಿಂದಂ ಪರಮಶುದ್ಧಸಹಜ ರತ್ನತ್ರಯಮಂ ಸಾಧಿಸಿ[17] ಮುಡಿಪಿ ಬ್ರಹ್ಮಕಲ್ಪದೊಳ್ ಪತ್ತುಸಾಗರೋಪಮಾಯುಷ್ಯಮನೊಡೆಯೊಂ ಶ್ರೀ[18]ಧ[18]ರನೆಂಬೊಂ ದೇವನಾಗಿ ಪುಟ್ಟಿದೊನಿಂತಿದು ಭದ್ರಬಾಹುಭಟಾರರ ಕಥೆ *ಪೇೞ್ದುದು.

---

1 ಜಿನಕಲ್ಪಸ್ಥಂ ಸ್ಥವಿತರಪ್ಪೆ (ಕ), ಜಿನಕಲ್ಪಂ ಸ್ಥವಿತರಪ್ಪ (ಖಗ), ಜಿನಕಲ್ಪ (ಘಛ), ಜಿನಕಲ್ಪದಿಂ (ಚ). 2 ಳಂಬೆ (ಕಖಗ). 3 ಡ (ಘಚಛ), ಮುಂದಕ್ಕೂ ಈ ಪ್ರತಿಗಳಲ್ಲಿ ಹೀಗೆಯೇ. 4 ವಿಶ್ವಾ (ಕಖಗ). 5 + ಯ (ಕಗ). 6 ರ್ಥ (ಖ). 7 ಲ್ಲಿ (ಕಖಗಘ), 8 ರ್ಬೆ (ಘಛ). 9 ಪಾಳಿ (ಘಚಛ). 10 ಳ್ಳಿ (ಘಚಛ). 11 ಪಳಿಯೆಸ (ಗ), ಪಾಳಿಯೆಸೆ (ಘ), ಪಾಳಿಯಸ (ಛ), (ಚ) ದಲ್ಲಿ ನಷ್ಟವಾಗಿದೆ. 12 ವಡಂಜೊ (ಕಗ), ಕಡಂಬೊ (ಖ), 'ಕುಱುವಡಿಯಂ ಪೊದೆವರು' ಎಂದು ಸರಿಯಾದ ಪಾಠವಿರಬಹುದೆ? 13 ಳಿ (ಕಖಗ), ಲ (ಚ). 14 ವೆ (ಘಚ). 15 ಮಗನಪ್ಪನಾತನ (ಘಚಛ), ಪ್ಪನವರೆಯೆ (ಖಗ). 16 (ಘಚಛ) ಗಳಲ್ಲಿಲ್ಲ. 17 ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ ಸಂನ್ಯಸನಂಗೆಯ್ದು ಸಮಾಧಿಮರಣದಿಂ (ಘಚಛ). 18 ವ (ಚ). * ಯಂ ಕೇಳ್ದು ಪೇಳ್ದುದು (ಪೆರರ್), ಸಂನ್ಯಸನಂ ಗೆಯ್ವೊರೆಲ್ಲಂ ಭದ್ರಬಾಹು ಭಟಾರರಂ ಮನದೊಳ್ (ಘಚಛ).

ಪೆಱರುಂ ಸಂನ್ಯಸನಂ †ಗೆಯ್ದೊರೆಲ್ಲಂ ಭದ್ರಬಾಹುಭಟಾರಕರ ಮನದೆ* ಬಗೆದವೆರೆಂತು ಪಸಿವುಂ ನೀರಟ್ಟಿಕೆ ಶೀತಮುಷ್ಣದಂಸಮಸಕಾದಿ ಪರೀಷಹಂಗಳಂ ಸೈರಿಸಿ [1]ಪರಮ ಶುದ್ಧ ರತ್ನತ್ರಯಮುಂ ಸಾಧಿಸಿದರಂತೆ[1] ಸಂನ್ಯಸನಂ† ಗೆಯ್ದ ಭವ್ಯರ್ಕಳುಂ ಪಸಿವುಂ ನೀರಟ್ಟಿಕೆ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸಮಾಧಿಮರಣದಿಂ[2] ಮುಡಿಪಿ [3]ಪರಮಶುದ್ಧಸಹಜ ರತ್ನತ್ರಯಂಗಳಂ ಸಾಧಿಸಿ[3] ಸ್ವರ್ಗಾಪವರ್ಗ ಸುಖಂಗ[4]ಳನೆಯ್ದುಗೆ[4]

* ಯಂ ಕೇಳ್ದು ಪೇಳ್ದರು (ಪೆರರ್), ಸಂನ್ಯಸನಂ ಗೆಯ್ದೊರೆಲ್ಲಂ ಭದ್ರಬಾಹು ಭಟಾರರಂ ಮನದೊಳ್ (ಘಚಛ). †–† (ಕಗ) ಗಳಲ್ಲಿಲ್ಲ. [1] ಸುತ್ತಂ ತಮ್ಮ ಕಾರ್ಯಮುಂ ಸಾಧಿಸಿ ಸಂದರಂತೆ (ಘಚಛ). [2] + ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳವಾರಿಧಿಸಿ (ಳಸಾಂದಿಸಿ) (ಘಚಛ). [3] (ಘಚಛ) ಗಳಲ್ಲಿಲ್ಲ. [4] ಳನೆಯ್ದುಗೆಂಬುದು (ಕಗ) ಳಂ ನೆಗಳ್ಗೆ (ಛ).

## (೭) ಲಲಿತಘಟೆಯ ಕಥೆ

**ಲಲಿತಘಟೆಯ ಕಥೆಯಂ ಪೇೞ್ವೆಂ :**

ಗಾಹೆ ॥ ಕೋಸಂಬೀ ಲಲಿತಘಟಾ ಓಢಾ ಣದೀಎ ಪೂರೇಣ ತಿವ್ವೇಣ ।
ಆರಾಧಣಂ ಪವಣ್ಣಾ ಪಾಓವಗಯಾ ಅಮೂಡಮದೀ ॥

[ಕೋಸಂಬೀ—ಕೌಶಾಂಬಿಯೆಂಬ ಪೊೞಲೊಳ್, ಲಲಿತಘಟಾ—ಲಲಿತಘಟೆ, ಓಢಾ—ಎೞೆ[3]ಯೆಪಟ್ಟತ್ತು, ಣದೀಎ ಪೂರೇಣ—ತೊಱೆ[3]ಯ ಪೂರದಿಂದಂ, ತಿವ್ವೇಣ ಆದಮಾನುಂ ಕಡಿದಪ್ಪುದಱಿಂದಂ, ಆರಾಧಣಂ—[1]ನಿಜಾತ್ಮಾ[1]ರಾಧನೆಯಂ, ಪವಣ್ಣಾ—ಪೊ[2]ರ್ದಿ[2]ತ್ತು, ಪಾಓವಗಯಾ—ಪ್ರಾಯೋಪಗಮನಕ್ಕೆ ಸಂದುದಾಗಿ, ಅಮೂಡ ಮದೀ—ಮೋಹಿಸಿದ ಬುದ್ಧಿಯನೊಡೆಯ[3]ದು[3]]

**ಅದೆಂತೆಂದೊಡೆ :**

ಈ ಜಂಬೂ ದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಶಂಬಿಯೆಂಬುದು ಪೊೞಲದನಾಳ್ವೊಂ ಹರಿಧ್ವಜನೆಂಬೊನರಸನಾತನ ಮಹಾದೇವಿ [4]ವಾರುಣಿ[4]ಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಶ್ರೀವರ್ಧನಂ ವಿಜಯಂಧರಂ ವೀರಬಾಹು ಮೊದಲಾಗಿ ಮೂವತ್ತಿರ್ವರ್ ಕುಮಾರರುಂ ಸಾಮಂತ ಮಹಾಸಾಮಂತರ ಮಕ್ಕಳುಮಂತೆಲ್ಲಮಯ್ನೂರ್ವರುಂ ರೂಪಿನೊಳಂ ತೇಜದೊಳಂ ಯೌವನದೊಳಂ ಶ್ರೀಯೊಳಂ ತಮ್ಮೊಳೋರನ್ನರಪ್ಪರ[5]ದಱಿಂ[5] ಲಲಿತಘಟೆಯೆಂಬೊರನಿಬರುಂ ಮಿಥ್ಯಾದೃಷ್ಟಿಗಳ್ ಪಂಡಿತ[6]ರುಮೊ[6]ಂದು ದಿವಸಂ ಶ್ರೀಕಾಂತಮೆಂಬ ಪರ್ವತದ[7]ಡವಿಗ[7]ನಿಬರುಂ ಬೇಂಟೆಯಾಡಲ್ ಪೋದಲ್ಲಿ ಇ[8][ರ್ದೊ][8]ರಭಯಘೋಷರೆಂ[9]ಬ ಭಟಾ[9]ರರವರ್ಗ್ಗಭಯಘೋಷರೆಂಬ ಪೆಸರೆಂತಾದುದೆಂದೊಡವರ್ ಗರ್ಭದೊಳಿರ್ದಂ[10]ತೆ ಅ[10]ವರ ತಾಯ್ಗೆ ಜೀವಂಗಳಂ ಕೊಲ್ಲದಂತಪ್ಪ ಬಯಕೆಯಾಗಿ ಅಭಯಘೋಷಣೆಯಂ ಪೊೞಲೊಳಂ ನಾಡೊಳಂ ಪೊಯ್ಸಿ ಜೀವಂಗಳ್ಗಭಯದಾ[11]ನಂಗೊ[11]ಟ್ಟು ಪುಟ್ಟಿದರಪ್ಪುದಱಿಂದವರ್ಗ್ಗಭಯಘೋಷರೆಂಬ ಪೆಸರಾದುದಂತಪ್ಪ ಭಟ್ಟಾರರಡವಿಯೊಳಿರೆ ಅವರ ತಪೋಮಾಹಾತ್ಮ್ಯದಿಂ ಲಲಿತಘಟೆಗೊಂದು ಮಿಗಮುಪ್ಪೊಡಂ ಬೇಂಟೆ[12] ಸಮನಿಸದೆ ಪೊೞಲ್ಗೆವೋದೊರಿಂತೇೞು ದಿವಸಮುಂ ಬಿಡದಡವಿಗೆ ಬೇಂಟೆಯಾಡಲ್ ಪೋಗಿ ಒಂದು ಮೃಗಮುಪ್ಪೊಡಂ ಸಮನಿಸದೆ ಬೇಸ[13]ತ್ತ[13]ೞಲ್ದು ಪೊೞಲ್ಗೆವೋಗಿ ಎಂಟನೆಯ ದಿವಸದಂದು ಶ್ರೀಕಾಂತಮೆಂಬ [14]ಪರ್ವತದ[14]ಡವಿಗೆ ಲಲಿತಘಟೆ ಬೇಂಟೆಯಾಡಲ್

---

1 ಸಮ್ಯಗ್ದರ್ಶನ ಜ್ಞಾನ ಚಾರಿತ್ರಾತ್ಮಕಮಪ್ಪಾ (ಘಚಛ). 2 ೞ್ದಿ (ಕಖಗ). 3 ರ್ (ಚಛ). 4 ವಾರಣಿ (ಚ), ಧಾರುಣ (ಛ). 5 ವರ್ಗಳ್ (ಘಚಛ). 6 ರೊಂ (ಘಚಛ). 7 ಮೇಗ (ಘಚಛ). 8 ಲ್ಲಿಯಳ್ದೊ (ಕಖಗ), ರಲ್ಲಿರ್ದ (ಘಚ) ಲ್ಲಿರ್ದ (ಚ). 9 ಬಾಚಾರ್ಯ (ಘಚಛ). 10 ದು ಅ (ಘಚಛ). 11 ನಮಂಕೊ (ಘಚಛ). 12 + ಯೊಳ್ (ಕಖಗ). 13 ತ್ತ್ (ಕಖಗ). 14 (ಕಖಗ) ಗಳಲ್ಲಿಲ್ಲ.

ಪೋಗಿ ಅಡವಿಯೊಳ್ ಮೃಗಂಗಳನಱಸುತ್ತಂ ತೊಱಲ್ವರನ್ನೆಗಮಭಯಘೋಷ ಭಟಾರರಾಯತಿಯಿಂ ತೊಟ್ಟ[1]ನೆ[1] ಸರ್ವಾಂಗಮಲಧಾರಿಗಳೊಂದು ಶಿಲಾತಳದ ಮೇಗಿರ್ದಾಗಮಮಂ ಪರಿವಿಡಿಗೆಯ್ಯುತ್ತುಮರ್ಥಮಂ ಭಾವಿಸುತ್ತಂ ಸ್ವಾಧ್ಯಾಯದೊಳ್ ತಗುಳ್ದಿರ್ದೋರಂ ಸಂಛನ್ನಮಪ್ಪಡವಿಯ ಮಱೆಯೊಳ್ ಗೆಂಟಱಿಂದಂ ಲಲಿತಘಟೆ ಕಂಡಪೂರ್ವಮಿದೊಂದು ಕರಿಯ ಮೃಗಮಿರ್ದುದೆಂದು ಬಗೆದು ಶ್ರೀವರ್ಧನಕುಮಾರಂ ಮೊದಲಾಗನಿಬರುಂ ಬಿಲ್ಗಳನೇಱಿಸಿ ತಿರುವಾ[2]ಯೊಳಂಬನಿಟ್ಟೆಸಲೆಂದು ತೆಗೆದಿಸುವನ್ನೆಗಮನಿಬರ ಬಿಲ್ಗಳುಂ ಮುಱಿದುದವರ್ಗ್ಗಳನಿಬರುಂ ಪೆಱಗಣ್ಗುರುಳ್ದು ಬಿೞ್ದೊಡಿದು ಮಹಾಚೋದ್ಯಂ ಸಾರೆ ಪೋಗಿ ನೋೞ್ಪಮೆಂದು ಪೋಪರನ್ನೆಗಂ ಋಷಿಯರ ರೂಪಂ ಕಂಡಿವರ್ ಋಷಿಯರ್ ಮೃಗಮಲ್ತೆಂದು ಸಾರೆ ಪೋಗಿ ಅವರುಪಶಮುಮಂ ತಪಮುಮಂ ಕಂಡನಿಬರ್ಗ್ಗುಪಶಮಮಾಗಿ ಕುಳ್ಳಿರ್ದು ಧರ್ಮಮಂ ಪೇೞಿಂ ಭಟ್ಟಾರಾ ಎಂದು ಬೆಸಗೊಂಡೊಡೆ ಭಟ್ಟಾರರಿಂತೆಂದು ಪೇೞಲ್ ತೊಡಗಿದರ್:

ಗಾಹೆ ॥ ಸೋ ಧಮ್ಮೋ ಜತ್ಥ ದಯಾ ಸೋ ವಿ ತಓ ವಿಸಯಣಿಗ್ಗಹೋ ಜತ್ಥ ।
ದಸಅಟ್ಠದೋಸರಹಿಓ ಸೋ ದೇವೋ ಣತ್ಥಿ ಸಂದೇಹೋ ॥

ಎಂದಿಂತು ಜೀವಂಗಳಂ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದಯ್ದುಮಿಂದ್ರಿಯಂಗಳಂ ಗೆಲ್ದು ಇಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಯಮನಿಯಮ ಸ್ವಾಧ್ಯಾಯ ಧ್ಯಾನಾನು[3]ಷ್ಠಾನಪರಾಯಣ[3]ರಾಗಿ ತಪಂಗೆಯ್ವ ರಿಸಿಯರ್ಕಳೆ ತಪಸ್ವಿಯರ್ ಪಸಿವು ನೀರಟ್ಟೆ ಮೊದಲಾಗೊಡೆಯ ಪದಿನೆಂಟು ದೋಷಂಗಳನಿಲ್ಲದೊಂ ಪರಮಾತ್ಮನೆಂದಿಂತು ಪೇೞ್ದು ಮತ್ತಮಿಂತೆಂದರ್ :

ಗಾಹೆ ॥ ಪಾವೇಣ ಣಿರಯತಿರಿಯಂ ಗಮ್ಮಇ ಧಮ್ಮೇಣ ದೇವಲೋಗಂ ತು ।
ಮಿಸ್ಸೇಣ ಮಾಣುಸತ್ತಂ ದೋಣ್ಹಂ ಪಿ ಖಯೇಣ ಣಿವ್ವಾಣಂ ॥

ಎಂಬುದಂ ಪಾಪಂಗೆಯ್ದವರುಂ ಬೇಂಟೆಯಾಡುವರುಂ ಮಧುಮದ್ಯಮಾಂಸಂಗಳಂ ಸೇವಿಸುವರುಂ ಬಾಲವಧೆ ಸ್ತ್ರೀವಧೆ ಗೋವಧೆ ಬ್ರಾಹ್ಮಣವಧೆ ಋಷಿವಧೆಯೆಂ[4]ದೀ ಪಂಚಮಹಾಪಾತಕಂಗಳಂ ಗೆಯ್ದ[4]ವರುಮಗಮ್ಯಾಗಮನಮಪೇಯಾಪೇಯಮಭಕ್ಷ್ಯಾಭಕ್ಷ್ಯಂ ಮೊದಲಾಗೊಡೆಯ ಪೊಲ್ಲಮೆಗಳೊಳ್ ನೆಗೞ್ದು ಘೋರಮುಂ ಪಿರಿಯುವುಮಪ್ಪ ಪಾಪಂಗಳಂ ಗೆಯ್ದೀೞಿಸೆಯ ನರಕದೊಳ್ ಮೂವತ್ತುಮೂಱು ಸಾಗರೋ*ಪಮಾಯುಷ್ಯಮನೊಡೆಯರ್ ನಾರಕರಾಗಿ ಪುಟ್ಟೆ ಛೇದನ ಭೇದನ [5]ಪೂರಣ ಚೂರಣ ಪೀಡನ ಬಂಧನಂಗಳುಮಂ[5] ಮುಟ್ಟೆಗೆಯೊಳಿಟ್ಟು ತೆಗಪುವುದುಂ ಕೊಂತಂಗಳಿಂಡಮಿಟ್ಟೆಗಳಿಂದಂ ಕರು[6]ಳ್ಗಳಂ ಸೋರೆ[6] ಕುತ್ತುವುದುಂ ಚಕ್ರಂಗಳಿಂದಂ [7]ತೆಗಲೆ[7]ಯಂ ಮೊಕ್ಕನೆವೋಗಿಡುವುದುಂ ಮರಂಗಳಂ ಪೋೞ್ವಂತೆ ಕರಗಸಂಗಳಿಂದ

---

[1] ಂತೆ (ಘ ಚ ಛ). [2] + ಳಿ (ಘ ಚ ಛ). [3] ಷ್ಠ (ಕ ಖ ಗ). [4] ದಿವು ಮೊದಲಾಗೊಡೆಯ ಪಲವು ಪಾಪಂಗಳಂ ಮಾಡಿ (ಘ ಚ ಛ). * ಪು. ೯೧–೯೩ * (ಚ) ದಲ್ಲಿ ನಷ್ಟವಾಗಿದೆ. [5] ದಹನ ತಾಪದ ಮರಣ ಪೀಡನ ಬಂಧನಂಗಳುಂ ಪುಟಂಗಳೊಳಿಟ್ಟು (ಘ ಚ ಛ). [6] ಳ್ ಸುರಿಯೆ (ಘ ಚ ಛ). [7] ತಲೆ (ಕ ಖ ಗ).

ಮುದ್ದಂ [1]ಪಿಡಿದು[1] ಪೋೞ್ಪುದುಮೆಂದಿವು ಮೊದಲಾಗೊಡೆಯ [2]ದುಃಖಂಗಳಂ ಕಣ್ಣೆಮೆಯಿಕ್ಕುವನಿತು ಪೊೞ್ತುಪ್ಪೊಡಮುಸಿರ್ [3]ಪತ್ತಿ[3]ಲ್ಲದೆ ದುಃಖಂಗಳನನುಭವಿಸುವ[4]ರ್ ಮತ್ತೊ್ರಯ್ಯ[4]ನೆ ಪಾಪಂಗಳಂ ಗೆಯ್ದವರಾನೆಯುಂ ಸಿಂಹಮುಂ ಪುಲಿಯುಂ ಕರಡಿಯುಂ ಪುಲ್ಲೆಯುಂ ಮೊಲನುಂ ಪಂದಿಯುಂ ತೋಳನುಂ [5]ಸೀ[5]ರ್ನಾಯುಂ [6]ಮತ್ತಮೆೞ್ತುಕೞ್ತೆಯುಂ ಪಶುವುಮೆರ್ಮೆಯುಂ ಕುದುರೆನಾಯೊಟ್ಟೆಯುಮುಡುವುಂ ಪಾವುಮಿಲಿಯುಂ ಬೆಕ್ಕುಮೊಂತಿಯುಂ ಕಪ್ಪೆಯುಂ ಮುಂಗುರಿಯುಂ[6] ಮೊದಲಾಗೊಡೆಯ [7]ಸ್ಥಲಚರಂಗಳುಂ[7] ಮೀನುಂ ಮೊಸಳೆಯುಂ ನೆಗಱುಮಾಮೆಯುಂ ಮಕರಮುಂ ತಿಮಿತಿಮಿಂಗಿಳಂ ಮೊದಲಾಗೊಡೆಯ ಜಲಚರಂಗಳುಂ ಕಾಗೆ ಗೂಗೆ ಪರ್ದು ಚಕೋರಂ ಹಂಸೆ [8]ಕು[8]ರ್ಕು ಗಿಳಿ[9] ಪುರುಳಿ [10]ಪೆಂಗುರು[10] ಕಾರಂಡಮಾಂದೆ ಮೊದಲಾಗೊಡೆಯ ಗಗನಚರಂ [11]ಪಂಚೇಂದ್ರಿಯಂ[11]ಗಳುಮಾಗಿ ಮತ್ತಮೇಕೇಂದ್ರಿಯ ದ್ವೀಂದ್ರಿಯ ತ್ರೀಂದ್ರಿಯ ಚತುರಿಂದ್ರಿಯಂಗಳಾಗಿ ತಿರಿಕಗತಿಯೊಳ್ ಪುಟ್ಟಿ ಜೀವಂಗಳಿಂತು ಮಾಡಿದ ಪಾಪದ ಫಲಂಗಳಿಂದಂ ದುಃಖಂಗಳನೆಯ್ದುಗುಂ ||ವಾಕ್ಯ|| ಮಿಸ್ಸೇಣ ಮಾಣುಸತ್ತಮೆಂಬುದು ಪುಣ್ಯಪಾಪಂಗಳೆರಡುಮಂ ನೆಗೞ್ವರ್ ಮನುಷ್ಯಗತಿಯೊಳ್ ಪುಟ್ಟಿ ಮುಂಗೆಯ್ದ ಪಾಪಕರ್ಮದುದಯದಿಂದಂ ಶಾರೀರ ಮಾನಸಾಗಂತುಕ ಸಹಜಮಪ್ಪ ದುಃಖಂಗ[12]ಳುಮ[12]ನಿಷ್ಟ ಸಂಯೋಗಮಿಷ್ಟವಿಯೋಗಮುಂ [13]ರಾ[13]ಗಶೋಕಂಗಳುಂ ದಾರಿದ್ರ್ಯಮೆಂದಿವು ಮೊದಲಾಗೊಡೆಯ ವಱಿಂದಮಪ್ಪ ದುಃಖಂಗಳನೆಯ್ದಿ ಮತ್ತಮಾ ಜೀವಂಗಳ್ ಶುಭಕರ್ಮದುದಯದಿಂದಂ ಶ್ರೀಯುಂ ಸಂಪತ್ತುಂ ವಿಭವಮುಂ ಐಶ್ವರ್ಯಮುಮಾರೋಗ್ಯಶರೀರಂಗಳುಮಾಗಿ ಪುತ್ರ ಮಿತ್ರ ಕಳತ್ರ ಸ್ವಜನ ಬಂಧುವರ್ಗದೊಳ್ ಕೂಡಿ ಸುಖಂ ಬಾೞ್ವುದುಮಕ್ಕುಮಿಂತು

ಶ್ಲೋಕಂ || ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ |
ಚಕ್ರವತ್ ಪರಿವರ್ತಂತೇ ದುಃಖಾನಿ ಚ ಸುಖಾನಿ ಚ ||

ಇಂತು ಮನುಷ್ಯಗತಿಯೊಳ್ ಪುಟ್ಟಿ ಸೂೞ್ಸೂೞೊಳೆ ಸುಖದುಃಖಂಗಳಂ ಜೀವಂಗಳನುಭವಿಸುಗುಮಂತೆ ಗಮ್ಮಇ ಧಮ್ಮೇಣ ದೇವಳೋಯಮ್ಮಿ ಎಂಬುದುಂ ಕೇವಳಮೆ ಧರ್ಮಂಗೆಯ್ದವರ್ ಸೌಧರ್ಮ ಈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರ ಆನತ ಪ್ರಾಣತಾರಣಾಚ್ಯುತಮೆಂಬ ಪದಿನಾಱುಂ ಕಲ್ಪಂಗಳೊಳಮಲ್ಲಿಂ ಮೇಗಣ ಸುದರ್ಶನಾಮೋಘ ಸುಪ್ರಬುದ್ಧ ಯಶೋಧರ ಸುಭದ್ರ ಸುವಿಶಾಳ ಸುಮನಸ ಸೌಮನಸ [14]ಪ್ರೀತಿಂಕರ[14]ಮೆಂಬ ನವಗ್ರೈವೇಯಕಂಗಳೊಳಮಲ್ಲಿಂ ಮೇಗಣ ಲಚ್ಛಿ[15]ಮಹಾಲಚ್ಛಿ[15] ಮಾಳಿನಿ ವೈರೆ ವೈರೋಚನೆ ಸೋಮೆ ಸೋಮರೂಪೆ ಅಂಕೆ

---

[1] ಬರಿಯೆ (ಘಭ). [2] + ಘೋರ (ಘಭ). [3] ಪನಿತಿ (ಘ), ಪತಿ (ಭ). [4] ರೊಯ್ಕ (ಘಭ). [5] ನೀ (ಘಭ). [6] (ಕಗ) ಗಳಲ್ಲಿಲ್ಲ. [7] ಅಡವಿ ಮೃಗಂಗಳುಂ (ಖಘಭ). [8] ಕೊ (ಘಭ). [9] + ಬಕಂ (ಘಭ). [10] ಪಿಂಗುರಿ (ಘಭ). [11] (ಘಭ) ಗಳಲ್ಲಿಲ್ಲ. [12] ಳ್ಮ (ಘ). [13] ರೋ (ಗಘಭ). [14] ಸಂಪ್ರತಿಕ (ಘಭ). [15] ಲಚ್ಛಣೆ (ಭ).

[1]ಪಳಿಕೆ[1] ಅಯಿಚ್ಛೆಯೆಂಬ ನವಾನುದ್ದಿಸೆಗಳೊಳಮಲ್ಲಿಂ ಮೇಗಣ ವಿಜಯ ವೈಜಯಂತ ಜಯಂತಾಪರಾಜಿತ ಸರ್ವಾರ್ಥಸಿದ್ಧಿಯೆಂದಿಂತು ಪಂಚಾಣುತ್ತರೆಗಳೊಳಮೆರಡು ಘಳಿಗೆಯಿಂದೊಳಗೆ ಪಾಸಿನ ಪೊರೆಯೊಳ್ ಪುಟ್ಟಿ ಇಂದ್ರಪ್ರತೀಂದ್ರ ಸಾಮಾನಿಕ ತ್ರಯಸ್ತ್ರಿಂಶ ಪಾರಿಷದಾತ್ಮರಕ್ಷ ಲೋಕಪಾಲಾಹಮಿಂದ್ರತ್ವಮೆಂದೀ ಮಹರ್ಧಿಕ ದೇವರಾಗಿ ಅಣಿಮಾ ಮಹಿಮಾ ಲಘಿಮಾ ಪ್ರಾಪ್ತಿಪಾ[2]ಗಲ್ಭ್ಯ[2]ಮಿಾಶಿತ್ವ ವಶಿತ್ವ ಕಾಮರೂಪಿತ್ವಮೆಂದೀ ಅಷ್ಟಗುಣೈಶ್ವರ್ಯಂಗಳೊಳ್ ಕೂಡಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವಮುಂ ಸುಗಂಧಮಪ್ಪ ಶ್ವಾಸನಿಶ್ವಾಸಂಗ[3]ಳು[3]ಮನೊಡೆಯರಾಗಿ ಆಯುಷ್ಯಾಂತಂ ಬರೆಗಂ ನವಯೌವನರಾಗಿ ಮುಪ್ಪುಮಪಮೃತ್ಯು ಮೂತ್ರ ಪುರೀಷಂಗಳುಂ [4]ಗಂಡ[4]ಕಕ್ಷಾ ಕುಕ್ಷಿಪ್ರದೇಶಂಗಳ ರೋಮಂಗಳುಂ ರೋಗ ಶೋಕ ದುಃಖಂಗಳುಂ ರಸ ರುಧಿರ ಮಾಂಸ ಮೇದೋಸ್ಥಿ ಮಜ್ಜಶುಕ್ಲಮೆಂದಿಂತು ಸಪ್ತ ಧಾತುಗ[5]ಳುಮೆಂ[5]ದಿವು ಮೊದಲಾಗೊಡೆಯವಿಲ್ಲದೊರ್ ಸಹಜಮಪ್ಪ ಕಟಕ ಕಟಿಸೂತ್ರ ಕುಂಡಲಾಭರಣಂ ಮೊದಲಾಗೊಡೆಯ ಪದಿನಾಱುಮಾಭರಣಂಗಳಂ ತೊಟ್ಟು ದಿವ್ಯ ವಸ್ತ್ರಂಗಳನುಟ್ಟಾದಿತ್ಯನ ತೇಜದಿಂದಗ್ಗಳಮಪ್ಪ ತೇಜದೊರಾಗಿ ಕಣ್ಣೆಮೆಯಿಕ್ಕುವನಿತು ಪೊೞ್ತುಪ್ಪೊಡಂ ದುಃಖಮಿಲ್ಲದೊರೆರಡು ಸಾಗರೋಪಮಂ ಮೊದಲಾಗಿ ಮೂವತ್ತುಮೂಱು ಸಾಗರೋಪಮಂಬರೆಗಮಾಯುಷ್ಯಮನೊಡೆಯರಾಗಿ ಆಟ ಪಾಟ ವಿನೋದಂಗಳಿಂದಂ [6]ದೇವಿಯರ್[6]ಪ್ಸರಸಿಯರ್ಕಳೊಡನೆ ಪಲಕಾಲಂ ದಿವ್ಯಸುಖಮನನುಭವಿಸಿ ಆಯುಷ್ಯಾಂತದೊಳಿಂತಿಲ್ಲಿ ಮನುಷ್ಯಗತಿಯೊಳ್ ಕುರುವಂಶ [7]ಭೋಜವಂಶ[7]ಮಿಕ್ಷ್ವಾಕುವಂಶ ನಾಥವಂಶ ಹರಿವಂಶಮುಗ್ರವಂಶಂ ಸೂರ್ಯವಂಶ ಸೋಮವಂಶ[7] ಮಯೂರವಂಶ ನಂದವಂಶ[7]ಮೆಂದಿವು ಮೊದಲಾಗೊಡೆಯ ಉತ್ತಮಕುಲದೊಳ್ ಶ್ರಾವಕರ ಬಸಿಱೊಳ್ ಪುಟ್ಟಿ ಪೂರ್ವಕೋಟಿ ಪರಮಾಯುಷ್ಯಮನೊಡೆಯರಾಗಿ* ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವದೊಳ್ ಕೂಡಿ ಏಕಚ್ಛತ್ರಚ್ಛಾಯೆಯಿಂದಂ ಪೃಥ್ವಿಯೆಲ್ಲಮನಾಳ್ದು ಪಶ್ಚಾತ್ಕಾಲದೊಳೇನಾನುಮೊಂದು ವೈರಾಗ್ಯ ಕಾರಣಮಾಗಿ ಮಗಂಗೆ ರಾಜ್ಯಪಟ್ಟಂಗಟ್ಟಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದೆಲ್ಲರೊಳ್ ನಿಶ್ಶಲ್ಯಂಗೆಯ್ದು ತಪಂಬಟ್ಟು ಘೋರವೀರತಪಶ್ಚರಣಂಗೆಯ್ದು ಉತ್ಕೃಷ್ಟದಿಂದಂ ಮೂಱು ಭವಂಗಳೊಳ್ ಮಧ್ಯಮದಿಂದಮಯ್ದು ಭವಂಗಳೊಳ್ ಕನಿಷ್ಠದಿಂದೇೞು ಭವಂಗಳೊಳಗೆ ಅಷ್ಟವಿಧ ಕರ್ಮಂಗಳಂ ಕಿಡಿಸಿ[8] ಮೋಕ್ಷಮನೆಯ್ದುವರ್ ದೊಣ್ಣಂಪಿ ಖಯೇಣ ಣಿವ್ವಾಣಂ ಎಂದು ತಪದಿಂದಂ ಶುಭಾಶುಭ ಕರ್ಮಮೆಂದಿರ್ತೆಱದ ಕರ್ಮದ ಕೇಡಿನಿಂದಂ ಮೋಕ್ಷಮನೆಯ್ದುವರಂತಪ್ಪ ಮೋಕ್ಷಮೆಂತೆಂದೊಡೆ ಜಾತಿಜರಾಮರಣಂಗಳುಂ ಭಯಮುಮನಿಷ್ಟಸಂಯೋಗಮುಮಿಷ್ಟವಿಯೋಗಮುಂ ಶಾರೀರಮಾನಸಾಗಂತುಕ ಸಹಜಮಪ್ಪ

---

[1] ಹಳಿಕೆ (ಕ), ವಳಿಂಕೆ (ಘಛ). [2] ಕಾಮ್ಯ (ಘಛ). [3] ಳ್ತ (ಸ). [4] ಗಡ್ಡಮುಂ (ಕಖಗ), ಗುಂಡ (ಘ). [5] ಳ್ತಿಂ (ಘಛ). [6] ಗಣಿಕೆಯರ (ಘ), ದೇವಗಣಿಕೆಯರ (ಛ). [7] (ಘಛ) ಗಳಲ್ಲಿಲ್ಲ. * ಪು. ೯೧–೯೩* (ಚ)ದಲ್ಲಿ ನಷ್ಟವಾಗಿದೆ. [8] + ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ).

ದುಃಖಂಗಳುಂ ಆಹಾರ ಭಯ ಮೈಥುನ ಪರಿಗ್ರಹಂಗಳುಂ ವಾತ ಪಿತ್ತ ಶ್ಲೇಷ್ಮ ಖಾಸ ಶ್ವಾಸ ಜ್ವರಾರುಚಿ ಛರ್ದ್ಯತಿಸಾರಾಕ್ಷಿ ಕುಕ್ಷಿವೇದನಾಸ್ಫೋಟಕ ಶೂಲ ಭಗಂದರ ಕುಷ್ಠ ಕ್ಷಯ ಗಂಡ ಶಿರೋವೇದನೆಯುಮೆಂದಿವು ಮೊದಲಾಗೊಡೆಯ ಅಯ್ದು ಕೋಟಿಯುಮಱುವತ್ತೆಂಟು ಲಕ್ಕೆಯುಂ ತೊಂಬತ್ತೊಂಬಯ್ ಸಾಸಿರ[1]ದ ಇನ್ನೂ[1]ಱೆ[2]ಣ್ಬ[2]ತ್ತು ನಾಲ್ಕು ವ್ಯಾಧಿಗಳುಂ ಕ್ರೋಧ ಮಾನ ಮಾಯಾ [3]ಲೋ[3]ಭಂಗಳುಂ ರಾಗದ್ವೇಷ ಮೋಹಂಗಳ [4]ಮಗುೞ್ದು ಮಗುೞ್ದು[4] ಬರವುಂ ಶೋಕ[5]ಮೆಂದಿವು[5] ಮೊದಲಾಗೊಡೆಯ ದುಃಖಂಗಳವಿಲ್ಲದುದನುಪಮಾರಹಿತಮುಪ್ಪುದನಳವಿಯಿಲ್ಲದುದ ನಾವಕಾಲಮುಂ ಕಿಡದುದಂ ಪಾಪದಿಂ ಪೊರೆಯದುದಂ ಸುಖಮನೊಡೆ[6]ತ[6]ಪ್ಪುದಂ ತನ್ನಿಂ [7]ತಾನಾದುದನಂ[7]ತಪ್ಪ ಮೋಕ್ಷಸುಖಮನೆಯ್ದಿ ಅನಂತಜ್ಞಾನ ಅನಂತದರ್ಶನ ಅನಂತವೀರ್ಯ ಅನಂತಸುಖಮೆಂಬ ಅನಂತಚತುಷ್ಟಯದೊಳ್ ಕೂಡಿ ಲೋಕಾಲೋಕಮನೆಲ್ಲಮನೊರ್ಮೊದಲೆ ಕಾಣುತ್ತಮಱಿಯುತ್ತು[8]ಮನಂತಕಾಲಂ ಮೋಕ್ಷದೊಳಿರ್ಪರೆಂಬುದುಮಂ ಅಭಯಘೋಷ ಭಟಾರರ್ ಲಲಿತಘಟೆಗೆ ಧರ್ಮಶ್ರವಣಂಗೆಯ್ಯೆ ಕೇಳ್ದು

ಶ್ರೀವ[9]ರ್ಧನಂ[9] ಮೊದಲಾಗಿ ಅನಿಬರುಂ ಪಶ್ಚಾತ್ತಾಪಮಾಗೆ ಪಂಚಮಹಾಪಾತಕರೆಮುಂ ಪೊಲ್ಲಕೆಯ್ದೆಮುಂ ಭಟ್ಟಾರರಂ [10]ಕೊಂದೆಮುಮ[10]ವರ್[11]ತಪದ ಮಹಾತ್ಮ್ಯದಿಂದಂ ಬರ್ದುಂಕಿದರೆಂದನಿಬರುಂ ಮನದೆ ಬಗೆದೀ ಗೆಯ್ದ ಪಾಪಮಿಂತಲ್ಲದೆ ಪಿಂಗದಿವರ ಕಾಲಡಿಗಳನೆಮ್ಮ ತಲೆಗಳೆಂಬ ತಾಮರೆಯ ಪೂಗಳಿಂದರ್ಚಿಸಿದೊಡಲ್ಲದೆ ಪಾಪಂ ಪಿಂಗದೆಂದು ಬಗೆದು ಕೈದುಗಳತ್ತ ಕೈಯಂ ನೀಡಲ್ ಬಗೆವನ್ನೆಗಂ ಭಟ್ಟಾರರ್ ವಾರಿಸಿದರಂತು ಬಗೆಯಲ್ವೇಡೆಂದೊಡೆ ಶ್ರೀವರ್ಧನ ಕುಮಾರ ನಾಮೇನಂ ಬಗೆದೊಮೆಂದೊಡೆ ನೀಮುಂ ನಿಮ್ಮ ತಲೆಗಳನರಿದೆಮ್ಮ ಕಾಲಡಿಗಳನರ್ಚಿಸು[12]ವಮೆಂ[12]ದು ಬಗೆದಿರೆಂದೊಡಿಂತು ಮನದೆ ಬಗೆದುದನಾರಾನುಮಱಿ[13]ವ[13]ರೊಳರೆ ಎಂದನಿಬರುಂ ಚೋದ್ಯಂಬಟ್ಟು ಭಟ್ಟಾರರ್ಗೆಱಗಿ ಪೊಡೆವ[14]ಟ್ಟು[14] ಶ್ರೀವರ್ಧನ ಕುಮಾರನೆಂದಂ ಭಟ್ಟಾರಾ ನಿಮ್ಮಡಿಯನೆಮ್ಮ ತಲೆಗಳಿಂದರ್ಚಿಸ[15]ದಾಗಳೆಮ್ಮ [16]ಗೆಯ್ದ[16] ಪಾಪಮೆಂತು ಕಿಡುಗು [17]ಮೆಂದೊಡಾ ಪಾಂಗಿನಿಂ ಕಿಡದೆನೆಯುಂ[17] ತಪ್ಪೊಡೆ ದೀಕ್ಷೆಯಂ ದಯೆಗಯ್ಯಿಮೆಂದೊಡೆ ಭಟಾರರೆಂದೊರೊಳ್ಳಿತ್ತಂ ಬಗೆದಿರ್ ನಿಮಗೆಲ್ಲರ್ಗಂ ಕಿಱಿದೆಯಾಯುಷ್ಯಮೆಂದೊಡೆ

ಶ್ರೀವರ್ಧನ ಕುಮಾರನ ತಮ್ಮಂ ಮೂವತ್ತಿರ್ವರಿಂ ಕಿಱಿಯೊಂ ನಂದಿಮಿತ್ರ[18]ನೆಂಬೊಂ ಭಟಾರರ ಮಾತಂ ಕೇ[19]ಳ್ದು ನಕ್ಕಿಂತೆಂದ[19]ನಾಮೆಲ್ಲಂ ಕೂಸು

---

[1] ದೈನೂ (ಘಚಛ). [2] ಳ್ಪ (ಘಛ), ಪ್ಪ (ಚ). [3] ಲಾ (ಕಖಗ). [4] (ಘಚಛ) ಗಳಲ್ಲಿಲ್ಲ. [5] ಮುಮಾವ ಬಾಧೆಗಳ್ ಇಂತಿವು (ಕಖಗ). [6] ಯ (ಖ). [7] ದೆಯಾದುದಂ (ಕಖಗ). [8] + ಮನಂತಸುಖಮುಮನಂತವೀರ್ಯಮನೊಡೆಯರಾಗಿ (ಕಖಗ), + ಮಷ್ಟಗುಣೋಪೇತರಾಗಿ (ಘಚಛ). [9] ಧರ್ಮಾನ ಕುಮಾರಂ (ಘಚ), ರ್ಮ ಕುಮಾರಂ (ಚ). [10] ಕೊಲಲೊಡರ್ಚಿದೆವಿ (ಘಚಛ). [11] + ತಮ್ಮ (ಘಚಛ). [12] ವೆಮೆಂ (ಕಗ), ವೆನೆಂ (ಖ), ವೆಮೊಂ (ಘಛ). [13] ದ (ಕಖಗ). [14] ಟ್ಟರಲ್ಲಿಂ (ಕಖಗ). [15] + ಲ್‌ಪಿರಿ (ಕಖಗ). [16] ಒಗೆದ (ಘಚಛ). [17] ಮಂ (ಕಖಗ). [18] + ಕುಮಾರ (ಘಚಛ). [19] ಳ್ದಂತಪ್ಪೊಡೆ ಭಟಾರಾ (ಘಚಛ).

ಗ[1]ಳಿಮುಂ[1] ನವಯೌವನ[2]ರಿಮುಂ[2] ತೇಜದೊಳಂ [3]ಸತ್ವದೊಳಂ[3] ಬಲಪರಾಕ್ರಮ ದೊಳಂ ಕೂಡಿದೆಮೆಮಗೆಲ್ಲೊಗ್ಗರ್ಗಂ ಕಿಱಿದೆಯಾಯುಷ್ಯಮೆಂಬುದನೆಂತು ನಂಬಲಕ್ಕು ಮೆಂದೊಡೆ ಭಟಾರರೆಂದರ್ ನೀನೇಕೆ ನಕ್ಕಪ್ಪೆಯಮ್ಮಾ ನಿಮಗೆಲ್ಲಗ್ಗರ್ಗವಿಪ್ಪರ್ತ್ತೊಂದು ದಿವಸಮಾಯುಷ್ಯಂ ನೀರದೆಸೆಯಿಂ[4]ದಂ ನಿಮಗೆ[4] ಸಾವಕ್ಕುಮೆಂದೊಡೆ ಶ್ರೀವರ್ಧನ ಕುಮಾರನೆಂದಂ ಭಟಾರಾ [5]ಎ[5]ಮಗಿಪ್ಪರ್ತ್ತೊಂದು ದಿವಸವಮಾಯುಷ್ಯ ಮೆಂಬುದರ್ಕೆ ಸಾಭಿಜ್ಞಾನಮೇನೆಂದು ಬೆಸಗೊಂಡೊಡೆ ಭಟಾರರೆಂದರ್ ನೀ[6]ವಿಮಾಗಳ್[6] ಪೊೞಲ್ಗೆ [7]ಪೋಪಾಗಳ್[7] ನಿಮ[8]ಗೆರಬ್ಬೆ[8]ಳಿಂಗ ನಾಗಂಗಳ್ ಪೆಡೆಗಳನೆತ್ತಿ ನಾಲಗೆ ಗಳಂ ಪೊಳೆಯಿಸುತ್ತಂ ಬಂದೊಡೆ [9]ನೀಮೊದಱಿಯ[9]ವಂ ಬಗ್ಗಿಸಿದೊಡದೃಶ್ಯಂಗಳಾಗಿ ಪೋಕುಮಿದೊಂದು ಸಾಭಿಜ್ಞಾನಂ ಮತ್ತಂತೆ ಪೋಪಾಗಳೊಂದು ಕಿಱುಗೂಸು [10]ಕೋ[10]ಲಂ ಪಿಡಿದು ನಿಮ್ಮಂ ಬಡಿಯಲ್ಕೆಂದು ಬಂದೊಡದಱ [11]ಕೆಯ್ತ[11]ವಂ ಕಂಡು ನೀವುಂ ನಕ್ಕೊಡೆ ನಿಮ್ಮ ನೋಡೆನೋಡೆ ಭಯಂಕರಮಪ್ಪ ಪಿರಿದೊಂದು ಬೇತಾಳ ರೂಪಂ ಕೈಕೊಂಡಾಕಾಶಂಬರೆಗಂ ಬಳೆದದೃಶ್ಯಮಕ್ಕುಮಿದೊಂದು ಸಾಭಿಜ್ಞಾನಂ ಮತ್ತಂತೆ ಪೋಪನ್ನೆಗಂ ತೊಱೆ ತೀವುಗುಮಿದೊಂದು ಸಾಭಿಜ್ಞಾನಂ ಮತ್ತಮಿಂದಿ ನಿರುಳ್ ನಿಮ್ಮ ತಾಯ್ ನಿಮ್ಮ ಮೂವತ್ತಿರ್ವರುಮಂ ರಾಕ್ಷಸಂ ನುಂಗಿ ತಿಂಬುದಂ ಕನಸು[12]ಗಂಡು ಪೇೞ್ಗು[12]ಮಿದೊಂದು ಸಾಭಿಜ್ಞಾನಮೆಂದು[13] ಪೇೞ್ದೊಡೆ

ಅನಿಬರುಂ ಭಟಾರರಂ ಬಂದಿಸಿ ತಮ್ಮ ಪೊೞಲ್ಗೆವೋಪಾಗಳ್ ಭಟಾರರ್ ಪೇೞ್ದುದೆಲ್ಲಮಂ ಪೇೞ್ದ ಪಾಂಗಿನೊಳೆ ಬಟ್ಟೆಯೊಳ್ ಪೋಗುತ್ತುಂ ಕಂಡು ಪ್ರತ್ಯಕ್ಷ ಮಾಗಿ ಮತ್ತಿರುಳ್ ತಮ್ಮ ಮೂವತ್ತಿರ್ವರುಮಂ ರಾಕ್ಷಸಂ ನುಂಗಿದುದಂ ತಾಯ್ ಕನಸುಗಂಡುದಂ ತಮಗೆ ನೇಸಮರ್ೞಡೆ ಪೇೞ್ದೊಡೆ ನಂಬುಗೆಯಾಗಿ ಉಬ್ಬೆಗಂ [14]ಬ[14]ಟ್ಟಂತಿರ್ಪನ್ನೆಗಂ ವರ್ಧಮಾನ ಭಟ್ಟಾರರ ತೀರ್ಥಂ ವಿಹಾರಿಸುತ್ತಂ ಕೌಶಂಬಿಗೆ ವಂದೊಡೆ ಲಲಿತಘಟೆ ಪಿರಿದರ್ಚನೆಯಂ ಕೊಂಡುಪೋಗಿ ಭಟಾರರನರ್ಚಿಸಿ ಬಂದಿಸಿ ಧರ್ಮಶ್ರವಣಾನಂತರ[15]ಮಿಂತೆಂದು ವರ್ಧಮಾನ ಭಟ್ಟಾರರಂ ಬೆಸಗೊಂಡಂ ಭಟಾರಾ ಎಮಗಾಯುಷ್ಯಮೆನಿತುಂಟೆಂ[16]ದು ಬೆಸಗೊಂಡೊ[16]ಡೆ ಭಟಾರರೆಂದರ್ ನಿಮಗನಿ ಬರ್ಗಂ ಕಿಱಿದೆ ಆಯುಷ್ಯಮೆಂದು ಪೇೞ್ದೊಡಾ[17]ಮೇನೊ[17] ಭವ್ಯರೆಮೊ ಅಭವ್ಯ ರೆಮೊ [18]ಎಂದು ಬೆಸಗೊಂಡೊಡೆ[18] ನೀಮೆಲ್ಲಂ ಭವ್ಯರಿರ್ ಭವ್ಯರಿರಾದೊಡಂ [19]ಪರಮ ಶುದ್ಧ ಸಹಜ[19] ದರ್ಶನ ಜ್ಞಾನಚಾರಿತ್ರಂಗಳಂ ಕೈಕೊಂಡು ನೆಗೞ್ದೊಡಲ್ಲದೆ ಮೋಕ್ಷಮಾಗದೆಂ[20]ತು[20] ಸ್ವರ್ಣಪಾಷಾಣದೊಳ್ ಸುವರ್ಣಮುಂಟಾಗಿಯುಂ ದಹನ

---

[1] ಳಂ (ಖಘಚ), ಳುಂ (ಗ). [2] ರಂ (ಘಚ), ದೊಳಂ (ಛ). [3] (ಘಚಛ) ಗಳಲ್ಲಿಲ್ಲ. [4] (ಘಚಛ) ಗಳಲ್ಲಿಲ್ಲ. [5] ನ (ಕಖಗ). [6] ಮುಂಮಗುಳ್ದು (ಘಚಛ). [7] ಗುತ್ತಂ (ಖ), ಗುತ್ತಮಿರೆ (ಘಚಛ). [8] ಗಿದಿರನೇಳುಕಾ (ಘಚ), ಗಿದಿರೇಳುಕಾ. [9] ಮೆಳಱುಮ (ಘ), ಮೆಲ್ಲಱುಯದ (ಛ), [10] ಕಾ (ಸ-ಚ). [11] ಕೇಯಱು (ಕಖಗ). [12] ಗಾಣ್ಬುಂ (ಘಚಛ). [13] + ಭಟಾರರ್ ಪೇೞ್ದರ್ (ಕಖಗ). [14] ಪು (ಘಚ). [15] + ಂ ಲಲಿತಘಟೆ ಶ್ರೀವರ್ಧ ಮಾನ ಭಟ್ಟಾರಕರನಿಂ (ಘಚಛ). [16] ದೊ (ಘಚಛ). [17] ಮುಂ (ಘಚಛ). [18] ಪೇೞಿಮೆನೆ (ಚ), ಎಂದೊಡೆ (ಘಚ). [19] ಸಮ್ಯಗ್ (ಚ). [20] ದು (ಕಖಗ).

ತಾಪನ ಪಿಂಡಿಬದ್ಧನಾದಿ ಕ್ರಿಯೆ[1][ವೆ]ಱ[1]ದನ್ನೆಗಂ ಪೊನ್ನಾಗದಂತೆ ತಪದಿಂದಲ್ಲದೆ ಮೋಕ್ಷಮಾಗದೆಂ[2]ದು ಪೇೞ್ದೊಡನಿಬರುಂ[2] ವರ್ಧಮಾನ ಭಟ್ಟಾರರ್ಗ್ಗೆ ಶಿಷ್ಯರಾಗಿ ತಪಂಬಟ್ಟು ಪಂಚಮಹಾವ್ರತಂಗಳನೇಱಿಸಿಕೊಂಡು ಪ್ರಾಯೋಪಗಮನದ [3]ಮರಣದ[3] ವಿಧಾನಮಂ ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್ :

ಶ್ಲೋಕ ॥ ಸ್ಥಿತಸ್ಯ ವಾ ನಿಷಣ್ಣಸ್ಯ ಯಾವತ್ ಸುಪ್ತಸ್ಯ ವಾ ಪುನಃ।
ಸರ್ವಾಭೀಷ್ಟಪರಿತ್ಯಾಗಃ ಪ್ರಾಯೋಪಗಮನಂ ಸ್ಮೃತಂ ॥

ಇಂತುಟಾ ಪ್ರಾಯೋಪಗಮನದ ಲಕ್ಷಣಮೆಂದು ಭಟಾರರ್ ವಕ್ಖಾಣಿಸಿ ಪೇೞೆ ಕೇಳ್ದಱಿದು

ಲಲಿತಘಟೆಯನಿಬರುಂ ಭಟಾರರ ಪಕ್ಕದೆ ಚತುರ್ವಿಧಮಪ್ಪಾಹಾರಮುಮಂ ಶರೀರಮುಮಂ ಯಾವಜ್ಜೀವಂ[4] ತೊಱೆದು ಭಟಾರರಂ ಬಂದಿಸಿ ಪೋಗಿ [5]ವಿಶಾಳೆಯೆಂಬ ತೊಱೆಯ[5] ತಡಿಯೊಳ್[6]ನಿಬರುಮೇಕಪಾರ್ಶ್ವದೊಳ್[6]ಪಟ್ಟಿರ್ದು ಕೈಯುಂ ಕಾಲುಮನಾ[7]ಡಿ[7]ಸದೊಂದು ಕೆಲದಿಂದೊಂದು ಕೆಲಕ್ಕೆ ಮಗುೞದೆ ಕುಳ್ಳಿರದೆ ನಿಂದಿರದೆ ನುಡಿಯದೆ ಕೆಲಂಗಳಂ ನೋಡದಿಂತು ಪ್ರಾಯೋಪಗಮನಂಗೆಯ್ದು ಪದಿನಯ್ದು ದಿವಸಂ ಮೆಯ್ಯಂ ತೊಱೆದಿರ್ದೋರನ್ನೆಗಂ ಮೇಗೆ ಪಿರಿದೊಂದು ಮೞೆ ಕೊಂಡು ಪೂರಂ ಬಂದವರನೆೞೆದುಕೊಂಡು ಪೋಗಿ ಪಿರಿದೊಂದು ಮಡುವಿನೊಳಿಕ್ಕಿದೊಡೆ ನೀರೊಳಗಿರ್ದು[8] ಮೋಹಿಸದ ಬುದ್ಧಿಯನೊಡೆಯರಾಗಿ ದೇವರಂ ಜಾನಿಸುತ್ತಂ ಪಂಚನಮಸ್ಕಾರಮಂ ಮನದೊಳುಚ್ಚಾರಿಸುತ್ತಂ ಶುಭಧ್ಯಾನದೊಳ್ ಪರಿಣತರಾಗಿ [9]ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ[9] ಮುಡಿಪಿ [10]ಅಯ್ನೂ[10]ರ್ವರುಂ ವೈಜಯಂತಮೆಂಬ ಪಂಚಾಣುತ್ತರೆಯೊಳುತ್ಕೃಷ್ಟಮಪ್ಪ ಮೂವತ್ತುಮೂಱುಸಾಗರೋಪಮಾಯುಷ್ಯಮನೊಡೆಯೊರೇಕಹಸ್ತಪ್ರಮಾಣ[11]ಶ್ವೇತ[11] ವರ್ಣದೊಳಹಮಿಂದ್ರ ದೇವರಾಗಿ ಪುಟ್ಟಿದರ್

ಮತ್ತೆ ಪೆಱರುಂ ರತ್ನತ್ರಯಂಗಳನಾರಾಧಿಸುವಾರಾಧಕರ್ಕಳುಂ ಲಲಿತಘಟೆಯಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗಮುಂ ಪಸಿವುಂ ನೀರೞ್ಕೆ ಮೊದಲಾಗೊಡೆಯವಿಪ್ಪತ್ತೆರಡು ಪರೀಷಹಂಗ[12]ಳಂ[12] ಸೈರಿಸಿ ಶುಭಪರಿಣಾಮದಿಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳ[13]ನಾರಾ[13]ಧಿಸಿ[14] ಸ್ವರ್ಗಾಪವರ್ಗಸುಖಂಗಳನೆಯ್ದುಗೆ

[1] ವಿರ (ಕಖಗ), ಮಿಱ (ಘ), ವಿಱ (ಚಛ). [2] ಬುದುಂ (ಘಚಛ). [3] (ಘಚಛ) ಗಳಲ್ಲಿಲ್ಲ. [4] + ಬರೆಗಂ (ಘಚಛ). [5] ಜಗ್ನೆಯ (ಘಚಛ). [9] ಯ್ನೂರ್ವರುಮೊಂದುಕೆಲದೊಳ್ (ಘಚಛ). [7] ಟ (ಛ). [8] + ೦ (ಚಛ). [9] ರತ್ನತ್ರಯಮಂ ಸಾಧಿಸಿ ಸಮಾಧಿ ವಿಧಿಯಿಂ (ಚ). [10] ಮೂವತ್ತಿ (ಘಚಛ). [11] ಸ್ಫೀತ (ಕ). [12] ಳ್ಗ್ರಂ (ಘಛ), ಳುಮಾ (ಚ). [13] ಳಂ ಸಾ (ಘಚಛ). [14] + ಮುಡಿಪಿ (ಚ).

## (೮) ಧರ್ಮಘೋಷ ಭಟಾರರ ಕಥೆ

ಧರ್ಮಘೋಷ ಭಟಾರರ ಕಥೆಯಂ ಪೇೞ್ವಿಂ:

ಗಾಹೆ ॥ ಚಂಪಾಏ ಮಾಸಖವಣಂ ಕರಿತ್ತು ಗಂಗಾತಟಮ್ಮಿ ತಣ್ಹಾಏ ।
ಘೋರಾಏ ಧಮ್ಮಘೋಸೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಚಂಪಾಏ—ಚಂಪೆಯೆಂಬ ಪೊೞಲೊಳ್, ಮಾಸಖವಣಂ ಕರಿತ್ತು—ಮಾಸೋಪವಾಸಂಗೆಯ್ದು, ಗಂಗಾತಟಮ್ಮಿ—ಗಂಗಾಮಹಾನದಿಯ ತಡಿಯೊಳ್, ತಣ್ಹಾಏ—ನೀರೞ್ಕೆಯಿಂದಂ, ಘೋರಾಏ—ಆದಮಾನುಂ ಕಡಿದಪ್ಪುದಱಿಂದಂ, ಧಮ್ಮಘೋಸೋ—ಧರ್ಮಘೋಷನೆಂಬ ಭಟ್ಟಾರಕಂ, ಪಡಿವಣ್ಣೋ—ಪೊರ್ದಿದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ:

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ [1]ಕೌಶಂಬಿ[1]ಯೆಂಬುದು ನಾಡಲ್ಲಿ ವಾರಣಾಸಿಯೆಂಬುದು ಪೊೞಲದನಾಳ್ವೊಂ ಕೀರ್ತಿಧರನೆಂಬೊನರಸನಾತನ[2] ಮಹಾದೇವಿ[3]ಯರ್ಕಳ್ ಅರತಿ ರತಿಯೆಂಬೊರಾ[3] ಇರ್ವರ್ಗ್ಗಂ ಮ[4]ಕ್ಕ[4]ಳ್ ಧರ್ಮಘೋಷನುಂ ಧರ್ಮಕೀರ್ತಿಯುಮೆಂಬೊರಂತವರ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ [5]ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ[5] ವಿಹಾರಿಸುತ್ತಂ ಬರ್ಪೊರಾ ವಾರಣಾಸಿಗೆ ವಂದು ಬಹಿರುದ್ಯಾನ ವನದೊಳ್ ಸ್ಫಟಿಕಶಿಲಾತಲದ ಮೇಗೆ ಪಂಥಾತಿಚಾರ ನಿಯಮಂಗೆ[6]ಯ್ದಿರ್ದ[6] [7]ಗುಣೋತ್ತಮರೆಂಬ ಭಟಾರರಂ[7] ವನಕ್ರೀಡೆಗೆವೋದ ಧರ್ಮಘೋಷನುಂ ಧರ್ಮಕೀರ್ತಿ ಕುಮಾರನುಂ ಕಂಡು ಬಂದಿಸಿ ಭಟಾರಾ ಎಮಗೆ ಧರ್ಮಮಂ ಪೇೞಿಮೆಂದೊಡೆ ಭಟಾರರಿಂತೆಂದು ಧರ್ಮಮಂ ಪೇೞ್ದರ್:

ವೃ ॥ ಕೋ ಧರ್ಮ ಪ್ರವರೋ ದಯಾತ್ಮಸುಭಗಃ ಕಃ ಸ್ಯಾನ್ನರಃ ಪಂಡಿತಃ ।
ಕಾಯೋಷಿದ್ವಶಗಾ ಕಲಿಷ್ಯತಿ (?) ಚೇತ್ ಕ್ರೋಧ್ರೋऽಶುಭಸ್ಯೋದಯಃ ॥
ಕಾऽಲಕ್ಷ್ಮೀರ ವಿಚಾರ ಕಾರ್ಯಘಟನಾ ಕಿಂ ಮಿತ್ರಮಾತ್ಮಾऽऽತ್ಮನಃ ।
ಕಿಂ ಸೌಖ್ಯಂ ಭುವಿ ಶಾಸ್ತ್ರವಾಚನಮತಿಃ ಕಾವಾ ಗತಿರ್ನಿರ್ವೃತಿಃ ॥
ಸಮ್ಯಕ್ತ್ವೇತ್ತ ಮಹಸ್ತಿ ಮಸ್ತಕಗತಃ ಸುಜ್ಞಾನಕೇತುವ್ರಜೋ ।
ನಾನಾಶೀಲಗುಣವ್ರತೋರುಪೃತನಃ ಸ್ವಾಧ್ಯಾಯಶಂಖಧ್ವನಿಃ ॥
ಭಾಸ್ವತ್ಸಂವರ ಭೂರಿಚಾರುಕವಚೋ ನಾತೀವ ತೀಕ್ಷ್ಣಾಯುಧಃ ।
ಸೇವ್ಯೋ ಧರ್ಮಮಹಾನೃಪೋ ಬುಧಭಟೈಃ ಸ್ವರ್ಮೋಕ್ಷವೃತ್ತಿಪ್ರದಃ ॥

---

[1] ಕಾಶಿ (ಘಚಝ). [2] + ರಸಿ (ಘಚಝ). [3] ಯೆಂಬೊಳಾ (ಘಚಝ). [4] ಕ್ಕರ್ (ಘ). [5] ಗುಣೋತ್ತಮ ಭಟಾರರೆಂಬ ದಿವ್ಯಜ್ಞಾನಿಗಳು ನಾನಾ ದೇಶಂಗಳಂ (ಚ). [6] ಯಿದುಇಳ್ದು (ಕ), ಗೆಯಿದಿಳ್ದ (ಖ). [7] (ಚ) ದಲ್ಲಿ ಇಲ್ಲ.

ಶ್ಲೋಕ ॥ ಧರ್ಮಾರ್ಥಕಾಮಮೋಕ್ಷಾಣಾಂ ಯಸ್ಯೈಕೋಪಿ ನ ವಿದ್ಯತೇ ।
ಅಜಾಗಲಸ್ತನಸ್ಯೈವ ತಸ್ಯ ಜನ್ಮ ನಿರರ್ಥಕಂ ॥

ವೃ ॥ ಯೇಷಾಂ ನ ವಿದ್ಯಾನ ತಪೋ ನ ದಾನಂ ।
ನಾಪ್ಯೇವಶೀಲಂ ನ ಗುಣೋ ನ ಧರ್ಮಃ ॥
ತೇ ಮರ್ತ್ಯಲೋಕೇ ಭುವಿ ಭಾರಭೂತಾ ।
ಮನುಷ್ಯರೂಪೇಣ ಮೃಗಾಶ್ಚರಂತಿ ॥

ಶ್ಲೋಕ ॥ ಕ್ರಿಮಯಃ ಕಿಂ ನ ಜೀವಂತಿ ಭಕ್ಷಯಿತ್ವಾ ಪರಸ್ಪರಂ ।
ಪರಲೋಕಾವಿರುದ್ಧೇನ ಯೋ ಜೀವತಿ ಸ ಜೀವತಿ ॥
ಅಪವಾದೋ ಭವೇದ್ಯೇನ ಯೇನ ಚಾಪ್ರತ್ಯಯೋ ಭವೇತ್ ।
ನರಕೋ ಗಮ್ಯತೇ ಯೇನ ತತ್ಕರ್ಮ ನ ಸಮಾಚರೇತ್ ॥

ಇಂತು ಸಂಕ್ಷೇಪದಿಂ ಭಟಾರರ್ ಧರ್ಮಮಂ ಪೇೞೆ[3] ಕೇಳ್ದಿರ್ವರ್ಗ್ಗಂ ವೈರಾಗ್ಯಮಾಗಿ ತಾಯುಮಂ ತಂದೆಯುಮಂ ಸ್ವಜನ[1] ಬಂಧುವರ್ಗಮುಮಂ ಬಿಡಿಸಿ ನಿಶ್ಶಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆ[3]ದು ಗುಣೋತ್ತಮ ಭಟಾರರ ಪಕ್ಕದೆ ತಪಂಬಟ್ಟು ಪನ್ನೆರಡು ವರ್ಷಂಬರೆಗಂ ಗುರುಗಳೊಡನಿರ್ದು ಪ್ರಥಮಾನುಯೋಗ ಚರಣಾನುಯೋಗ ಕರಣಾನುಯೋಗ ದ್ರವ್ಯಾನುಯೋಗಂಗಳಂ ಕಲ್ತು ಶಾಸ್ತ್ರಪಾ[2]ರ[2]ಗರಾಗಿ ಭಟಾರರಂ ಬೆಸಗೊಂಡವರನುಮತದಿಂದಿರ್ವರುಂ ಬೇಱೆ[3]ವೇಱೆ[3] ವಿಹಾರಿಸಲ್ ತಗುಳ್ದು ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಚಂಪಾನಗರಕ್ಕೆ ಪೋಗಿ ತಾಮರೆಗೊಳದ ತಡಿಯ ಮ[3]ಱ[3][3]ಯೊಳಿರ್ವರುಂ ಮಾಸೋಪವಾಸಂಗೆಯ್ದು ಪಾರಣೆಯ ದಿವಸದಂದು ಚಂಪಾನಗರದ ಶ್ರಾವಕರ್ಕಳೆಲ್ಲಂ ನಮ್ಮ ನೋಂತುದನಱಿವರದು ಕಾರಣದಿಂ ನಮಗೆ ಪಾರಣೆಯಂ [4]ಮಾಳ್ಪಾಗಳಯಥಾಕರ್ಮದ[4] ದೋಷಂ ಸಾರ್ತರ್ಕುಮದಱಿಂ ನಾಮಿಲ್ಲಿ ಚರಿಗೆವುಗದೆ ಗಂಗೆಯ ತಡಿಯೊಳಿರ್ದ ತುಱುಪಟ್ಟಿಗೆ ಪೋಪಮೆಂದಿರ್ವರುಂ ಪೋಪರ್

ಅನ್ನೆಗಮಾ ತುಱುಪಟ್ಟಿಯುಮಲ್ಲಿಂದೆರ್ದು[5] ನಾಡೆ ಗೆಂಟು ಪೋದತ್ತು ಪೋದೊಡೆ ಧರ್ಮಕೀರ್ತಿ ಭಟಾರರ್ ಪೆಱತೊಂದು ತುಱುಪಟ್ಟಿಗೆ ಪೋದರ್ ಧರ್ಮಘೋಷ ಭಟಾರರ್ ಪೋಗಲಾಱದೆ ಗಂಗೆಯ ತಡಿ[6]ಯ[6] ಮರದ ಕೆೞಗೆ ಪಸಿವು ನೀರಳ್ಕೆಯಿಂ ಸೇದೆಗೆಟ್ಟು ಬಸಮೞ[8]ದಿರ್ದೋರಂ ಗಂಗಾದೇವತೆ ಕಂಡನುಕಂಪೆಯುಮಂ ಭಕ್ತಿಯುಮಂ ಕಾರಣಮಾಗಿ ಸರ್ವಾಭರಣಭೂಷಿತೆಯಾಗಿ ದಿವ್ಯಮಪ್ಪ ಶ್ವೇತವಸ್ತ್ರಮನುಟ್ಟು ಸುವರ್ಣಮಯಮಪ್ಪ ಪಿರಿಯ ಕರಗಮಂ ತೆಕ್ಕನೆ ತೀವಿ ತಣ್ಣಿದಮುಂ ಸುಗಂಧ[7]ಮ[7]ಪ್ಪ ನೀರ್ಗಳಂ ತಂದು ಧರ್ಮಘೋಷ ಭಟಾರರನಿಂತೆಂದಳ್ ಭಟಾರಾ ಪ್ರಾಸುಕಮಪ್ಪ ನೀರಂ ಪೊ[8]ತ್ತ್ರಿದೊ[8]ಳ್ ಬಂದುದಂ ಕುಡಿದು ನಿಮ್ಮ ಸೇದೆಯ [9]ನಾಱಿಸಿಂ ನಿಮಗರಮನೆಗೆ ಪೋಗಿ ಕೂೞಂ ತಂದಪೆನನ್ನೆವರಂ[9] ನೀರಂ ಕುಡಿದು

[1] + ಪರಿಜನ (ಘ ಚ ಛ). [2] ರಾವಾರ (ಘ ಚ ಛ). [3] ನೆ (ಘ ಚ ಛ). [4] ಮಾಡುವರಲ್ಲಿಯಾದ (ಘ ಚ ಛ). [5] + ಪೆಱತೊಂದೆಡೆಗೆ (ಘ ಚ ಛ). [6] ಯಾಲದ (ಘ ಚ ಛ). [7] ಮುಮ (ಖ ಘ). [8] ಳ್ತ ಱಿಂೊ (ಘ ಚ ಛ). [9] ನನ್ನೆಗಮಾಱಿಸಿ ಮನೆಗಪೋಗಿ ಕೂೞುಮಂ ನಿಮಗೆ ತಂದಪ್ಪೆನನ್ನೆಗಂ (ಕ ಖ ಗ).

ತೃಷೆಯುಂ ಪಿಂಗಿಸುವುದೆಂದೊಡೆ ಭಟಾರರಾವೊಲ್ಲೆವಬ್ಬಾ ಕುಡಿಯಲ್ಕಾಗದೆಂದೊಡೆ ಗಂಗಾದೇವತೆ ಪೂರ್ವವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಂಕರ ಪರಮದೇವರಂ ಕಂಡು ಬಂದಿಸಿ ಇಂತೆಂದು ಬೆಸಗೊಂಡಳ್

ಭಟಾರಾ ಒರ್ವರ್ ಋಷಿಯರ್ ನೀರೞ್ಕೆಯಿಂದಂ ಕರಂ ಸೇದೆಗೆಟ್ಟು ಬಸಮೞಿದಿರ್ದೊರಂ ಕಂಡು ಪಿರಿದೊಂದು ಪೊನ್ನಕರಗಮಂ ತೆಕ್ಕನೆ ತೀವಿಯಾದಮಾನುಂ ಶಣ್ಣಿದುವುಂ ಕಮ್ಮಿದುವುಮಪ್ಪ ನೀರ್ಗಳಂ ಪೊ[1]ಟ್ರಿದೊ[1]ಳ್ ಕೊಂಡು ಪೋಗಿ ಕುಡಿಯಲೆೞ[2]ಯೆ ಕೊಳ್ದ[2]ರಿಲ್ಲೆಂದೊಡೆ ಭಟಾರರೆಂದರ್ ಪ್ರಾಸುಕಮಾದೊಡಂ ಪೊ[3]ಟ್ರಿದೊ[3]ಳ್ ತಂದೊಡಂ ದೇವರ್ಕ್ಕಳ ದೇವಿಯರ್ಕಳ ಕೈಯೊಳ್ ಋಷಿಯರ್ಕ್ಕಳ್ಗುಣಲುಂ ಕುಡಿಯಲುಂ ತಗದು ನಿಮಗೆ ಸಮ್ಯಕ್ತ್ವಮುಂ ಪೂಜೆಯುಂ. ಋಷಿಯರ್ಕಳ್ಗೆ ಪ್ರಾತಿಹಾರ್ಯಮಂಗೆಯ್ವುದುಂ ನಿಮ್ಮ[4]ಭಿಪ್ರಾಯ[4]ಮಿನಿತೆಯೆಂದು ಪೇೞ್ದೊಡೆ ತೀರ್ಥಂಕರ ಪರಮ ದೇವರ ಮಾತಂ ಕೇಳ್ದು ಬೇಗಂ[5] ಗಂಗಾದೇವತೆ ಧರ್ಮಘೋಷ ಭಟಾರರ್ಗ್ಗೆ ತಣ್ಣಿತಪ್ಪ ಗಾಳಿಯುಂ ಸುಗಂಧ ಜಲವರ್ಷಮುಮಂ ಮಾಡಿದೊಡಾಪ್ಯಾಯನಮಾಗಿ ಶುಕ್ಲಧ್ಯಾನಮಂ ಧ್ಯಾನಿಸಿ[6] ಘಾತಿಕರ್ಮಂಗಳಂ ಕಿಡಿಸಿ[7] ಕೇವಲ ಜ್ಞಾನಿಯಾದೊಡೆ ಚತುರ್ವಿಧಮಪ್ಪ ದೇವನಿಕಾಯಂ ಬಂದರ್ಚಿಸಿ ಪೂಜಿಸಿ ಪೋದೊಡವರುಂ ಬೞಿಕ್ಕಘಾತಿಕರ್ಮಂಗಳಂ ಕಿಡಿಸಿ[7] ಮೋಕ್ಷಕ್ಕೆ ಪೋದರ್

ಮತ್ತಮವರಿಂ ಕಿಱಿಯರ್ ಧರ್ಮಕೀರ್ತಿ ಭಟಾರರ್ [8]ಪೆಱತೊಂದು ತುಱುಪಟ್ಟಿಗೆ ಪೋದೊಡಾ[8] ತುಱುಪಟ್ಟಿಯುಮಲ್ಲಿಂದೆರ್ದು ಪೆಱತೊಂದು ದೆಸೆಗೆ ನಾಡೆ ಗೆಂಟುಪೋದೊಡೆ ನಿರಾಶೆಯಾಗಿ ಪಸಿವುಂ ನೀರೞ್ಕೆಯಿಂದಂ ಬಾ[9]ಧಿ[9]ಸೆ ಪಟ್ಟೊರಾಗಿ [10]ಸೇದೆಗೆಟ್ಟು[10] ಬಸಮೞಿದು ಶುಭಪರಿಣಾಮಕ್ಕೆ ಸಂದೊರಂ ಮುನ್ನಿನ ದೇವತೆ ಕಂಡೞಿದು ಪ್ರತಿಬೋಧಿಸಲ್ ತಗುಳ್ದವರಂ ತಿಳಿಪಲಾಱದೆ ಮತ್ತೆ ಪೂರ್ವವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಕರ ಪರಮಸ್ವಾಮಿಯುಂ ಕಂಡು ಪೊಡೆವಟ್ಟು ಅವರ ಸಮಾವಸ್ಥೆಯೆಲ್ಲಮಂ ಭಟಾರರ್ಗ್ಗೆ ಪೇೞ್ದು ಸಮಾಧಿಸಂಧಾನೋಪಾಯಮಂ ಬೆಸಗೊಂಡೊಡೆ ಸರ್ವಜ್ಞರಿಂತೆಂದು ಪೇೞ್ದರಾಸನ್ನಭವ್ಯರ್ ಮೂಱನೆಯ ಭವದೊಳ್ ಮೋಕ್ಷಕ್ಕೆವೋಪರೆಂದು ಸೀಮಂಧರ ತೀರ್ಥಂಕರ ಪರಮದೇವರ್ ಪೇೞ್ದರೆಂಬುದಂ ಕೇಳ್ದಾಗಡೆ ಅಶುಭಪರಿಣಾಮಮಂ ತೊಱೆದು ನೀಗಿ ಶುಭಪರಿಣಾಮದೊಳ್ ಕೂಡಿ ಸಮಾಧಿಯನೊಡೆಯರಪ್ಪರ್ ನೀಂ ಬೇಗಂ ಪೋಗಿ ಪ್ರತಿಬೋಧಿಸೆಂದು [11]ಪೇೞ್ದೊಡೆ ಗಂಗಾದೇವತೆಯಂತೆಗೆಯ್ವೆನೆಂದು ಪೊಡೆವಟ್ಟು ಪೋಗಿ ಆ ರಿಸಿಯ[12]ರನೆಯ್ದಿ ಇಂ[12]ತೆಂದಳ್ ಭಟಾರಾ ನೀಮೀ ಭವದಿಂ ತೊಟ್ಟು ಮೂಱನೆಯ ಭವದೊಳ್

---

1 ಳ್ತಱೊ (ಘಚಛ). 2 ಯಲ್ ಪೋದೊಡೊಲ್ದ (ಘಛ), ಯಲ್ ಪೋದೊಡೆ ಕುಡಿದ (ಚ), ಯೆಕೊಲ್ದ (ಖ). 3 ಳ್ತಱೊ (ಘಚಛ). 4 ಗೆಯ್ವುಧರ್ಮ (ಘಚಛ). 5 + ಬಂದು (ಘಚಛ). 6 + ಸಮ್ಯಗ್ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ). 7 (ಘಚಛ) ಗಳಲ್ಲಿಲ್ಲ. 8 ಪೇಳ್ದಂತೆಯೊಂದು (ಘ), ಪೇಳ್ದಂತೊಂದು (ಚ), ಪೇಳ್ದಂತೆ ಬಂದು (ಛ). 9 ರಿ (ಚ), ಡಿ (ಛ). 10 ದೆಸೆಗೆಡೆ (ಛ). 11 + ಗಣಧರ ದೇವರ್ (ಘಚಛ). 12 ಗ್ಗಿಗಂ (ಘಚಛ).

ಕರ್ಮಕ್ಷಯಂಗೆಯ್ದು ಕೇವಳ ಜ್ಞಾನಿಯಾಗಿ ಮೋಕ್ಷಕ್ಕೆ ವೋದಪಿರೆಂದು ಸೀಮಂಧರ ತೀರ್ಥಕರ ಪರಮದೇವರ್ ಪೇೞ್ದಿರೆಂದೊಡಾ ಮಾತಂ ಧರ್ಮಕೀರ್ತಿ [1]ಭಟಾರರ್[1] ಕೇಳ್ದು ಉನ್ಮಾರ್ಗ[2]ದಿಂದಂ[2] ಮನಮನುಡುಗಿ ಸನ್ಮಾರ್ಗದೊಳ್ ನಿಱಿಸಿ :

ಗಾಹೆ ॥ ಹಾ ದುಟ್ಠು ಕಯಂ ಹಾ ದುಟ್ಠು ಕಾರಿಯಂ ಹಾ ದುಟ್ಠು ಅಣುಮೋದಿಯಂ ।
ಜೀವೋ ಅಂತೋ ಅಂತೋ ದಜ್ಝ ಇ ಪಚ್ಛತ್ತಾವೇಣ ವೇವಂತೋ ॥

ಎಂದು ಪೊಲ್ಲದಂ ಬಗೆದೆನೆಂದು ತನ್ನಂ ತಾಂ ಪೞಿಯುತ್ತಂ ಸೀಮಂಧರ ಸ್ವಾಮಿಗಳ ನಾಮಗ್ರಹಣಂ[3]ಗೊಂಡಾಗಳ[3]ಶುಭಪರಿಣಾಮದಿಂ ಪಿಂಗಿ ಶುಭಶುದ್ಧ ಪರಿಣಾಮದೊಳ್ ಕೂಡಿ ಮಿಕ್ಕ ರತ್ನತ್ರಯಂಗಳನಾರಾಧಿಸಿ ಪದಿನಾಱನೆಯ ಕಲ್ಪದೊಳ್ ಉತ್ಕೃಷ್ಟಮಪ್ಪ ಇರ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯೊನಚ್ಯುತೇಂದ್ರನಾಗಿ ಪುಟ್ಟಿದಂ

ಮತ್ತಂ ಪೆಱರುಮಾರಾಧಕರಪ್ಪವರ್ಗಳ್ ಧರ್ಮಘೋಷ ಭಟಾರರಂ ಮನದೊಳ್ ಬಗೆದು ಪಸಿವುಂ ನೀರೞ್ಕೆ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸಮ್ಯಗ್ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

[1] ರಿಸಿಯರ್ (ಕಖಗ). [2] ಕ್ಕೆ ಸಂದ (ಘಚಛ). [3] ಗೊಳಲೊಡನೆ (ಘಚಛ).

## (೯) ಸಿರಿದಿಣ್ಣನೆಂಬ ಭಟ್ಟಾರರ ಕಥೆ

ಸಿರಿದಿಣ್ಣ[1]ಭಟಾರರ[1] ಕಥೆಯಂ ಪೇೞ್ವೆಂ :

ಗಾಹೆ ॥ ಸೀದೇಣ ಪುವ್ವವೇರಿಯ ದೇವೇಣ ವಿಗುವ್ವಿದೇಣ ಘೋರೇಣ।
ಸಂಸಿತ್ತೋ ಸಿರಿದಿಣ್ಣೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಸೀದೇಣ—ಅಯ್ಕಿಲಿಂದಂ, ಪುವ್ವವೇರಿಯ ದೇವೇಣ—ಮುನ್ನಿನ ಭವದ ಪಗೆವನಪ್ಪ ದೇವನಿಂದಂ, ವಿಗುವ್ವಿದೇಣ—ವಿಗುರ್ವಿಸೆಪಟ್ಟುದಱಿಂದಂ, ಘೋರೇಣ—ಆದಮಾನುಂ ಕಡಿವಪ್ಪುದಱಿಂದಂ, ಸಂಸಿತ್ತೋ—ತಳಿಯಪಟ್ಟೊನಾಗಿ, ಸಿರಿದಿಣ್ಣೋ—ಸಿರಿದಿಣ್ಣನೆಂಬ ಭಟಾರಕಂ, ಪಡಿವಣ್ಣೋ—ಪೊ[2]ರ್ದಿ[2]ದೊಂ, ಉತ್ತಮಂ ಅಟ್ಠಂ—ಮಿಕ್ಕದರ್ಶನಜ್ಞಾನಚಾರಿತ್ರಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂ ದ್ವೀಪದ ಭರತಕ್ಷೇತ್ರದೊ[3]ಳಂಗಮೆಂ[3]ಬುದು ನಾಡಲ್ಲಿ [4]ಚಂಪಾ[4] ನಗರಮೆಂಬುದು ಪೊೞಲದನಾಳ್ವೊನಧಿಗಮ ಸಮ್ಯಗ್‌ದೃಷ್ಟಿಶ್ರಾವಕಂ ಸಿಂಹರಥನೆಂಬೊನರಸಂ ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ಸಾಕೇತ[5]ಮೆಂಬುದ[5]ದನಾಳ್ವೊಂ [6]ಶ್ರಾವಕಂ ಸು[7]ಮಂತ[7]ನೆಂಬೊನರಸಂ ಮತ್ತಿತ್ತ ಮಂಗಳಾವತಿಯೆಂಬುದು ನಾಡಲ್ಲಿ [8]ಇ[8]ಳಾಪಟ್ಟಣಮೆಂಬುದು ಪೊೞಲದನಾಳ್ವೊನಧಿಗಮ ಸಮ್ಯಗ್ ದೃಷ್ಟಿ ಶ್ರಾವಕಂ ಜಿತಶತ್ರುವೆಂಬೊನರಸನಾತನರಸಿ ಇಳಾಮಹಾದೇವಿಯೆಂಬೊಳಾ [9]ಅರಸನ ದಾದಿ[9] ವಿನಯಮತಿಯೆಂಬೊಳಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ[10] ಫಾಲ್ಗುನ[11] ನಂದೀಶ್ವರಂ ಬಂದೊಡೆ ಮೂವರುಂ ಮಂಡಲಿಕರುಂ ತಂತಮ್ಮ ಪೊೞಲ್ಗಳೊಳೆಂಟು ದಿವಸಮರ್ಹ[12]ದ್ಭಟ್ಟಾರಕರ್ಗೆ[12] ಮಹಾಮಹಿಮೆಗಳಂ ಮಾಡಲ್‌ತೊಡಗಿದರಿತ್ತ ಜಿತಶತ್ರುವುಂ ತನ್ನ ಪೊೞಲೊ[13]ಳೆಂಟು ದಿವಸಂ ಜಿನ[13]ಮಹಾಮಹಿಮೆಯಂ ಮಾಡಲ್ ತೊಡಗಿದನಾತನ ದಾದಿ ವಿನಯಮತಿಯೆಂಬೊಳ್ ಗುಜ್ಜಿ ವಿರಳದಂತೆ ಆದಮಾನುಂ ವಿರೂಪೆ ಪೇ[14]ಸೆಪ[14]ಡುವಳ್ ನೋಡಿದ ಜನಕ್ಕೆ [15]ಭಯಮಂ[15] ಪಡೆವೊಳ್ ನಾ[16]ಣಿಸೆ[16]ಪಡುವೊಳಂತಪ್ಪಾಕೆ ಅರಸನೊಡನೆ ಜಿನಮಹಾಮಹಿಮೆಯಂ ನೋಡಲ್ ಪೋಪಾಗಳರಸನೆಂದೊನಬ್ಬಾನೀ[17]ಮುಂ[17] ಮಹಿಮೆಗೆ ಬರಲ್ವೇಡ ನಿಮ್ಮಂ ಕಂಡು ಮಹಿಮೆಗೆ ವಂದ ನೆರವಿಯಂ

---

[1] ನೆಂಬ ರುಷಿಯರ (ಘಚಛ). [2] ಳ್ದಿ (ಕಖಗ). [3] ಳ್ ಗಂಗೆಯೆಂ (ಕಖಗ). [4] ಪಂಚಾ (ಛ). [5] ಪುರಮ (ಘಚ). [6] + ನಧಿಗಮಸಮ್ಯಗ್ ದೃಷ್ಟಿ (ಘಚ). [7] ಮನ (ಘಚಛ). [8] ಎ (ಘಚ), ಯೇ (ಛ). [9] ಇವರ್ಗಗ್ರಂಮಗಳ್ (ಕಖಗ). [10] + ಮತ್ತೊಂದು ದಿವಸಂ (ಘಚಛ). [11] + ಮಾಸದ (ಘಚಛ). [12] ತ್ಪರಮೇಶ್ವರಂಗೆ (ಚ). [13] ಳಷ್ಟಾಹ್ನಿಕ (ಘಚಛ). [14] ಸರ್ಪ (ಕ). [15] ನಗೆಯಂ (ಘಚಛ). [16] ಣ್ಸೆ (ಖಗ), ಣ್ಚೆ (ಘಚಛ). [17] ವು (ಕಖಗ).

ಜುಗುಂ ಪೇಸುಗುಮಮಂಗಳಮೆಂಗುಮದಱಿಂ ನೀಮುಂ ಮನೆಯೊಳಿರಿಮೆಂದಿರಿಸಿ ತಾನುಂ ಸಹಸ್ರಕೂಟಮೆಂಬ ಚೈತ್ಯಾಲಯಕ್ಕೆ ಮಹಾಮಹಿಮೆಯಂ ಮಾಡಲ್ ಪೋದನ್

ಇತ್ತ ದಾದಿಯುಂ ಮಗನ ಮಾಡುವ ಮಹಾಮಹಿಮೆಯಂ ನೋಡಲ್ ಪೆತ್ತೆ ನಿಲ್ಲೆಂದುಬ್ಬೆಗಂಬಟ್ಟು ತನ್ನಂ ತಾಂ ಪೞಿದು ನಂದೀಶ್ವರದೆಂಟು ದಿವಸ[1]ಮಭಿಷೇಕಮುಮರ್ಚನೆಯುಮಷ್ಟೋಪವಾಸಮುಮಂ[1] ಮಾಡಿ ದೇವರಂ ಬಂದಿಸುತ್ತಂ ಪೂಜಿಸುತ್ತಿರ್ದಳಿತ್ತರಸನುಮೆಂಟು ದಿವಸಂ ಮಹಾಮಹಿಮೆಯಭಿಷೇಕಮುಮಂ ಮಾಡಿ ಸಮೆಯಿಸಿದ ಬೞಿಕ್ಕೆ ದಾದಿಗೆ ಬೞಿಯಟ್ಟನರಿಸಿ ಇಂತೆಂದನಬ್ಬಾ ನೀಮಿಂತೇಕೆ ಕರಂ ಬಡಪಟ್ಟಿರ್ದ್ದಿರೆಂದೊಡೆ ದಾದಿಯಿಂತೆಂದಳ್ ಮಗನೆ ಎಂಟು ದಿವಸಮುಪವಾಸಂಗೆಯ್ದು ಮನೆಯೊಳ್ ದೇವರ್ಗ್ಗಭಿಷೇಕಮುಂ ಪೂಜೆಯುಮಂ ಮಾಡಿ[2]ಸುತ್ತಿರ್ದೆನೆಂದೊಡೆ[2] ಅದಂ ಕೇಳ್ದಾದಮಾನುಮರಸನೊಸೆದು ಬಡವಾದುದುಮಂ ಕಂಡು ಕರುಣಿಸಿ ಅಬ್ಬಾ ನಿಮಗೊಸೆದೆಂ ವರಮಂ ಬೇಡಿಕೊಳ್ಳಿಮೆಂದೊಡಾಕೆಯಿಂತೆಂದಳ್ ಮಗನೆ ನೀನೆನಗೊಸೆದೆಯಪ್ಪೊಡೆನಗೆಂದು ಮತ್ತಮೆಂಟು ದಿವಸಂ ದೇವರ್ಗ್ಗೆ ಮಹಾಮಹಿಮೆಯಂ ಮಾಡೆಂದು ಪೇೞ್ದೊಡಂತೆಗೆಯ್ವೆನೆಂದರಸಂ ದಾದಿ ಕಾರಣಮಾಗಿ ಮತ್ತಮೆಂಟುದಿವಸಂ ಮಹಾಮಹಿಮೆಯಂ ಮಾಡಲ್ ತೊಡಂಗಿದೊಡೆನ್ನ ಮಹಾಮಹಿಮೆಯೊಳೆಂತುಣ್ಬೆನೆಂದು ಪಾರಿಸಡೆ ಮತ್ತಮಷ್ಟೋಪವಾಸಂಗೆಯ್ದು ಪಾರಣೆಯ ದಿವಸದಂದಾಕೆಯ ಶ್ರಮಮುಂ ಸೇದೆಯುಮಂ ಹಿಮವಂತಪರ್ವತದ[3] ಪದ್ಮೆಯೆಂಬ ಕೊಳದೊಳ್ ವಸಿಯಿಸಿರ್ಪ ಶ್ರೀಯಾದೇವತೆ ಕಂಡಱಿದು ತನ್ನ ಪರಿವಾರ ಸಹಿತಂ ವಿಮಾನಂಗಳನೇಱಿ ಮಹಾವಿಭೂತಿಯಿಂ ಬಂದು ಸ್ವರ್ಣಪೀಠದೊಳ್ ದಾದಿಯನಿರಿಸಿ ಸುಗಂಧೋದಕಂಗಳಿಂ ತೀವಿದ ಸುವರ್ಣಕಲಶಂಗಳಿಂದಮಭಿಷೇಕಂಗೆಯ್ದು ನಮೇರು ಮಂದಾರ ಸಂತಾನಕ ಪಾರಿ[4]ಯಾತ್ರಕಮೆಂ[4]ಬ ಪೂಗಳಂ ಸುರಿದು ಕಮ್ಮಿತಪ್ಪತಂಬೆಲರ್ ವೀಸಿ ದೇವದುಂದುಭಿಗಳಂ ಬಾಜಿಸಿ[5] ಶ್ರೀಯಾದೇವತೆ ತನ್ನಾವಾಸಕ್ಕೆವೋದಳ್

ಇತ್ತ ದಾದಿಯುಂ ಶ್ರೀಯಾದೇವತೆಯ ವಿಭೂತಿಯಂ ಕಂಡು ನಿದಾನಂಗೆಯ್ದು ಕೆಲವುದಿವಸದಿಂ ಕಾಲಂಗೆಯ್ದೀ ಜಂಬೂದ್ವೀಪದ ಹಿಮವಂತ ಪರ್ವತದ ಪದ್ಮೆಯೆಂಬ ಕೊಳದೊಳ್ ಶ್ರೀಯಾದೇವತೆಯಾಗಿ ಪುಟ್ಟಿ [6]ಇ[6]ಳಾಪಟ್ಟಣಕ್ಕೆ ಬಂದಾ ಪೊೞಲ ಜನಂಗಳ್ಗೆಲ್ಲಮಿರುಳ್ ಕನಸಿನೊಳಾಂ ಶ್ರೀಯಾದೇವತೆಯೆಂ ನಿಮ್ಮ ಪೊೞಲ್ಗೆ ವಂದೆನೆನಗೆ [7]ಶ್ರೀವಿಹಾರಮಂ[7] ಮಾಡಿ ಎನ್ನ ಪ್ರತಿಮೆಯನಿಟ್ಟು ಪೂಜಿಸುತ್ತುಮೋಲಗಿಸುತ್ತುಮಿರಿಮಾನುಂ ನಿಮಗೆ ಬೇಡಿದ ವರವನೀವೆನೆಂದು ಕನಸಿನೊಳ್ ತೋಱಿದೊಡೆ ಪೊೞಲ ಜನಮೆಲ್ಲಂ ನೆರೆದು [8]ಶ್ರೀವಿಹಾರಮಂ[8] ಮಾಡಿ ಶ್ರೀಯಾದೇವತೆಯ ಪ್ರತಿಮೆಯಂ ಸ್ಥಾಪಿಸಿ ಮಹಿಮೆಯಂ ಮಾಡುತ್ತಂ ಪೂಜಿಸುತ್ತಮೋಲಗಿಸುತ್ತ

---

[1] + ಬಂದಿಸಿರ್ದೆಮೆಂದುದಂ (ಘಛ), + ಬಂದಿಸುತ್ತಿರ್ದೆನೆಂದು ಪೇಳೆ (ಛ). [2] ಮೊಂದು (ಕಖಗ). [3] + ಮೇಗೆ (ಘಛ). [4] ಜಾತಂಗಳಿಂ (ಘಚಛ). [5] + ಪೂಜಿಸಿ (ಘಛ). [6] ಐ (ಘಛ). [7] ಸಿರಿಪುರಮಂ (ಘಚಛ). [8] ಮಷ್ಟೋಪವಾಸಂ ಗೆಯ್ದು ಮನೆಯೊಳೆಂಟು ದಿವಸ ಮುನ್ನ ಹಣಮುಮನರ್ಚನೆಯುಮಂ (ಕಖಗ).

ಮಿರ್ಪುದಂ ಕಂಡಿಳಾಮಹಾದೇವಿ ಅಪುತ್ರಿಕೆ ಮಕ್ಕಳಂ ಬೇಡಿ ಪನ್ನೆರಡು ವರುಷಂ ಬ[1]ರೆಗಂ ನಿಚ್ಚಲುಂ ಶ್ರೀವಿಹಾರಕ್ಕೆ[1] ವೋಗಿ ಶ್ರೀಯಾದೇವತೆಯನರ್ಚಿಸುತ್ತಂ ಪೂಜಿಸುತ್ತಂ ಮಹಾಮಹಿಮೆಯುಂ ಮಾಡುತ್ತಂ ಆಡುತ್ತಂ ಪಾಡುತ್ತಮೋಲಗಿಸುತ್ತಮಿರೆಯದಂ ಕಂಡಱಿದು ಶ್ರೀಯಾದೇವತೆ ಪೂರ್ವವಿದೇಹಕ್ಕೆ ಪೋಗಿ ಸ್ವಯಂಪ್ರಭರೆಂಬ ತೀರ್ಥಕರ ಪರಮದೇವರಂ ಕಂಡೆಱಗಿ ಪೊಡೆಮಟ್ಟಿಂತೆಂದು ಬೆಸಗೊಂಡಳ್ ಭಟಾರಾ ಎನ್ನ ಪೊಱಲೊಳಿರ್ಪ ಇಳಾಮಹಾದೇವಿಗೆ ಮಕ್ಕ[2]ಳೇನಕ್ಕುಮೊ[2] ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ಸ್ವರ್ಗದಿಂದ ಬಱ್ಜಿ ಬಂದಿಲ್ಲಿ ಒರ್ವ ದೇವಂ ಇಳಾಮಹಾದೇವಿಗೆ ಮಗನಾಗಿ ಪುಟ್ಟುಗುಮೆಂದೊಡದಂ ಕೇಳ್ದು ಭಟ್ಟಾರರ್ಗ್ಗೆಱಗಿ ಪೊಡೆವಟ್ಟು ಇಳಾಪಟ್ಟಣಕ್ಕೆ ಪೋಗಿ [3]ಇ[3]ಳಾಮಹಾದೇವಿಗೆ ಕನಸಿನೊಳಿಂತೆಂದು ಪೇೞ್ದಳಿಳಾಮಹಾದೇವಿ ನಿನಗೆನ್ನ ಪ್ರಸಾದದೆ ಸೌಧರ್ಮಕಲ್ಪದೊಳ್ ಮೇಘಮಾಲಮೆಂಬ ವಿಮಾನದಿಂ ಬಱ್ಜಿ ವರ್ಧಮಾನನೆಂಬ ದೇವಂ ಬಂದು ನಿನಗೆ ಮಗನಾಗಿ ಪುಟ್ಟುಗುಮೆಂದು ಶ್ರೀಯಾದೇವತೆ ಪೇೞ್ದೊಡಿಳಾ ಮಹಾದೇವಿಯಾದಮಾನುಂ ಸಂತಸಂಬಟ್ಟಿರ್ದು ಕೆಲವು ದಿವಸದಿಂ ಗರ್ಭಮಾಗಿ ನವಮಾಸಂ ನೆಱೆ[3]ದು ಮಗನಂ ಪೆತ್ತೊಡೆ ಶ್ರೀಯಾದೇವತೆ ಮಗನಂ ಕೊಟ್ಟಳೆಂದಾ ಕೂಸಿಂಗೆ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದು ಸಿರಿದಿಣ್ಣನೆಂದು ಪೆಸರನಿಟ್ಟರ್

ಆತನುಂ ಶುಕ್ಲಪಕ್ಷದ ಚಂದ್ರನಂತೆ ಕ್ರಮಕ್ರಮದಿಂ [4]ಬ[4]ಳೆದು ನವಯೌವನನುಂ ಸರ್ವಕಳಾಕುಶಳನುಮಾಗಿರ್ಪನ್ನೆಗಮಿತ್ತ ಸಾಕೇತಪುರಾಧಿಪತಿಯ[5]ಪ್ಪ[5] ಸು[6]ಮಂತನೆಂ[6]ಬರಸನ ಮಗಳ್ ಸುಮತಿಯೆಂಬೊಳಾಕೆಯ ಸ್ವಯಂವರಕ್ಕರಸುಮಕ್ಕಳೆಲ್ಲಂ ನೆರೆದಿರ್ದಲ್ಲಿಗೆ ಸಿರಿದಿಣ್ಣಂಗಂ ಬಱಿಯಟ್ಟಿ ಬಱಿಸಿದೊಡೆ ಸ್ವಯಂಬರದೊಳ್ ಸುಮತಿ [7]ಯೆಲ್ಲರಂ[7] ನೋಡಿಯಾರುಮಂ ಮೆಚ್ಚದೆ ಸಿರಿದಿಣ್ಣಂಗೆ ಮಾಲೆಸೂಡಿದೊಡೆ ಮದುವೆಯಾಗಿ ಕೆಲವು ದಿವಸಮಲ್ಲಿರ್ದು ಮಾವನವರಂ ಬೆಸಗೊಂಡಿಳಾಪಟ್ಟಣಕ್ಕೆ [8]ವೋಪೆಮೆಂದೊಡಾತಂ ತನ್ನ ಮಗಳಪ್ಪ ಸುಮತಿಗೆ[8] ಬಱಿವಱಿಗೊಟ್ಟು ಮಗಳೊಡನೆ ದಾಚಾಳನಪ್ಪ ಗಿಳಿಯುಮನಟ್ಟಿದೊಡವರ್ಗಳುಂ ಕತಿಪಯ ದಿವಸಂಗಳಿಂದಿಳಾಪಟ್ಟಣ[9]ಕ್ಕೆ ಪೋಗಿ[9] ಸುಖದಿಂದಿರೆ

ಮತ್ತೊಂದು ದಿವಸಂ ಗಿಳಿಯುಂ ಸಾಕ್ಷಿಮಾಡಿ ಇರ್ವರುಂ ಚದುರಂಗ ಮಾಡುತ್ತಿರೆ [10]ಅರಸಿಯರಸನಂ ಗೆಲ್ದೊಡೆ ಗಿಳಿ ನೆಲದೊಳೆರಡು ಬರೆಯುಂ ಬರೆಗುಮರಸನರಸಿಯುಂ ಗೆಲ್ದೊಡೆ ಒಂದೆ ಬರೆಯಂ[10]ಬರೆಗುಮಿಂತು ಪಿರಿದುಂ ಬೇಗಮಾಡಿ ಅರಸನರಸಿಯುಂ ಗೆಲ್ದೊಡೆರಡು ಬರೆಯಂ [11]ತ್ರಿಗೆದು[11]ದನರಸಂ ಕಂಡು ಕಡುಮುಳಿ

[1] ರಂ ನಿಚ್ಚನಿಚ್ಚಂ ಸಿರಿಪುರಕ್ಕೆ (ಘಛ). [2] ಳಕ್ಕುಮೊ ಆಗದೊ (ಘಚಛ). [3] ಇರುಳೇ (ಘಚಛ). [4] ಬೆ (ಕಖಗ). [5] ಪ್ಪಾತಂ (ಕಖಗ). [6] ಮತಿಯೆಂ (ಘಚಛ). [7] + ಸಮಸ್ತ ರಾಜಪುತ್ರರಂ (ಛ). [8] ಪೋಪಮೆಂದೊಡಂ ಸುಮಂತಂ, ಮಗಳ್ಗೆ (ಕಖಗ). [9] ಮನೆಯ್ದಿ (ಘಚಛ). [10] ಯರಸಿಯರಸನಂ ಗೆಲ್ದಡೆ ನೆಲದೊಳೊಂದು ಬರೆಯಂ ಬರೆಗುಮರಸನನರಸಿ ಗೆಲ್ದೊಡೆರಡು ಬರೆಯಂ (ಘ), ಯರಸಿಯನರಸಂ ಗೆಲ್ದೊಡೆ ನೆಲದೊಳೊಂದು ಬರೆಯಂ ಬರೆಗುಮರಸನನರಸಿ ಗೆಲ್ದೊಡೆರಡು ಬರೆಯುಂ (ಚಛ); ಬರೆಯಂ ಎಂಬುದಕ್ಕೆ (ಖಗ) ಗಳಲ್ಲಿ ಗರೆಯಂ ಎಂದು ಪಾಠ. [11] ತೇವು (ಘಛ).

ದದಱ[1]ಗೋಣಂ ಮುಱಿ[1]ದೊಡಾ[1] ಗಿಳಿಯುಂ ಸತ್ತಾ ಪೊೞಲ ಬಹಿರುದ್ಯಾನವನದೊಳ್ ವ್ಯಂತರದೇವನಾಗಿ ಪುಟ್ಟೆ[2]ತಿಂ[2]ತಿರ್ದರುಂ ಪಲಕಾಲಮಿಷ್ಟವಿಷಯಕಾಮಭೋಗಂಗಳನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ ಸಪ್ತತಳಪ್ರಾಸಾದದ ಮೇಗಿರ್ದರುಂ ದಿಶಾವಳೋಕನಂ ಗೆಯ್ಯುತ್ತಿರ್ಪನ್ನೆಗಂ ಸಹಸ್ರಕೂಟಾಕಾರಮಪ್ಪುದೊಂದು ಮುಗಿಲಂ ಕಂಡಿಂತುಟೊಂದು ಚೈತ್ಯಾಲಯಮುಮಂ ಮಾಡಿಸುವೆನೆಂದು ಪಲಗೆಯೊಳ್ ರೇಖೆ[3]ಗೊಂಡು[3] ಮತ್ತೆ ನೋೞ್ಪನ್ನೆಗಂ ಕರಗಿದುದಂ ಕಂಡದುವೆ ನಿರ್ವೇಗಕ್ಕೆ ಕಾರಣಮಾಗಿ ತಾಯುಂ ತಂದೆಯುಂ ನಂಟರುಮಂ ಬಿಡಿಸಿ ನಿಶ್ಶಲ್ಯಂ ಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂ[4]ಗಳಂ[4] ತೊಱೆ[3]ದು ವರಧರ್ಮಭಟ್ಟಾರರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಂಬರೆಗಂ ಗುರುಗಳನಗಲದಿರ್ದುದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಬೞಿಕ್ಕೆ ಗುರುಗಳಂ ಬೆಸಗೊಂಡವರನುಮತದಿಂದೇಕವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಮಾಘಮಾಸದಂದಿಳಾವಟ್ಟಣಕ್ಕೆ ವಂದಾ ಪೊೞಲ ಬಹಿರುದ್ಯಾನವನದೊಳಿರ್ದು ರಾತ್ರಿ ಪ್ರತಿಮಾಯೋಗದೊಳ್ ನಿಂದರ್

ಅನ್ನೆಗಂ ಮುನ್ನವರ ಕೈಯೊಳ್ ಸತ್ತ ಗಿಳಿ ವ್ಯಂತರ ದೇವನಾಗಿ ಅಲ್ಲಿ ಪುಟ್ಟಿದುರ್[5][ದು][5] ಕಂಡೇನುಂ ಕಾರಣಮಿ[6]ಲ್ಲೆ[6]ನ್ನಂ ಕೊಂದನೆಂದು ಮುಳಿದಾದಮಾನುಂ ಘೋರಮಪ್ಪ ವಾತಮುಂ ಶೀತಮುಮಂ ವಿಗುರ್ವಿಸಿ ನೀರ್ಗಳಂ ಮೇಗೆ ಸುರಿದು ಬೀಸುತ್ತ[7]ವಿಂ[7]ತು ನಾಲ್ಕು ಜಾವಮುಂ ಘೋರಾಕಾರಮಾಗಿಯುಪಸರ್ಗಮಂ ಮಾಡೆ ಭಟಾರರುಂ ದೇವೋಪಸರ್ಗಮೆಂಬು[1]ದನಱಿದು

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ ।
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝಣ ಕೇಣ ಚಿ ॥
ಶ್ಲೋಕ॥ †ಅಚ್ಛೇದ್ಯೋಽನಂತ ಸೌಖ್ಯೋಽಹಂ ವೇತ್ತಾಽಪೂರ್ವೋ ನಿರಂಜನಃ ।
ಸರ್ವದುಃಖಾಕರಂ ದೇಹಂ ತ್ಯಜಾಮೇತತ್ ಪರಿಸ್ಫುಟಂ ॥

ಎಂದಿಂತು ಸಮತ್ವೀಭಾವನೆಯುಂ ಭಾವಿಸಿ[8] ಶುಕ್ಲಧ್ಯಾನ[9]ಮಂ ಜಾನಿಸಿ ಎಂಟು[9] ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್

ಮತ್ತಂ ಪೆಱರುಂ ರತ್ನತ್ರಯಂಗಳನಾರಾಧಿಸುವ ಭವ್ಯರ್ಕಳ್ ಸಿರಿದಿಣ್ಣಭಟ್ಟಾರರಂ ಮನದೊಳ್ ಬಗೆದು ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪಸರ್ಗಮೆಂದಿಂತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವು ನೀರೞ್ಕೆ ಮೊದಲಾಗೊಡೆಯವಿಪ್ಪತ್ತೆರಡು ಪರೀಷಹಂಗಳಂ ಸೈರಿಸಿ ವ್ಯಾಧಿಗಳಿಂದಪ್ಪ ವೇದನೆಯುಂ ಸೈರಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

1 ಗೊಂಕೆಯಂ ನುಲಿದು ಕೊಂದನಾ (ಘಚಛ). 2 ದೊಂ ಇಂ (ಕಗ), ಟ್ಟಿಂತಿ (ಖ). 3 ಯಂತಗೆದು (ಛ). 4 ಹಮೆಲ್ಲಮಂ (ಘಚಛ). 5 ದಂ (ಘಛ), ದುಂ (ಚ), (ಕಖಗ) ಗಳಲ್ಲಿಲ್ಲ. 6 ಲ್ಲದೆ (ಘಚಛ). 7 ಮಿರುಳಿಂ (ಘಚ). † ಇದು (ಘಚಛ) ಗಳಲ್ಲಿಲ್ಲ. 8 + ಸಮ್ಯಗ್ ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ (ಘಚಛ). 9 ದಿಂದಷ್ಟವಿಧ (ಘಚಛ).

# (೧೦) ವೃಷಭಸೇನ ಭಟ್ಟಾರರ ಕಥೆ

ವೃಷಭಸೇನಭಟ್ಟಾರರ ಕಥೆಯಂ ಪೇೞ್ವೆಂ :

ಗಾಹೆ ॥ ಉಣ್ಹಂ ವಾದಂ ಉಣ್ಹಂ ಸಿಳಾತಳಂ ಆದವಂ ಚ ಅತಿ ಉಣ್ಹಂ ।
ಸಹಿಊಣ ಉಸಹಸೇಣೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಉಣ್ಹಂ ವಾದಂ—ಬಿಸಿದಪ್ಪ ಗಾಳಿಯುಮಂ, ಉಣ್ಹಂ—ಬಿಸಿದಪ್ಪುದಂ, ಸಿಳಾತಳಂ—[1]ಯೋಗಪೀಠದ[1] ಸಿಲೆಯ ಮೇಗುಮಂ, ಆದವಂ ಚ—ಬಿಸಿಲುಮಂ, ಅತಿ ಉಣ್ಹಂ—ಆದಂ ಬಿಸಿದಪ್ಪುದಂ, ಸಹಿಊಣ—ಲೇಸಾಗಿ ಸೈರಿಸಿ, ಉಸಹಸೇಣೊ—ವೃಷಭಸೇನರೆಂಬ ಮುನಿ, ಪಡಿವಣ್ಣೋ—ಪೊ[2]ರ್ದಿ[2]ದೊಂ, ಉತ್ತಮಂ ಅಟ್ಠಂ—ಮಿಕ್ಕದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ಉಜ್ಜೇನಿಯೆಂಬುದು ಪೊೞಲದನಾಳ್ವೊಂ ಪ್ರದ್ಯೋತನೆಂಬರಸನಾತನ ಮಹಾದೇವಿ ಜ್ಯೋತಿರ್ಮಾಲೆಯೆಂಬೊಳಂತವರ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮರಸಂ ಕಾಡಾನೆಯಂ ಪಿಡಿಯಲ್ವೇಡಿ[3]ಯಾ[3]ನೆಯನೇಱಿ ಅಡವಿಗೆವೋದೊಡದು ಮದವಿಹ್ವಳಿತನಾಗಿ ಮೆಯ್ಯಱಿಯದೆ ದಿಶಾಪಟ್ಟಂಗೊಂ[4]ಡೊಂ[4]ದೆಸೆಗೆ ಕೊಂಡೋಡಿ [5]ದಂಡಕಾ[5]ರಣ್ಯ[6]ಮಪ್ಪ[6]ಡವಿಯ ನಡುವೆ[7] ತನ್ನ ಬೇಗದಿಂ[7] ಪರಿಯೆ ನಾಡೆಯಂತರಂಬೋದೊಡೊಂದು ಮರದಡ್ಡ[8]ಬಿ[8]ರ್ದ ಕೊಂಬಂ ಕಂಡರಸಂ ಪಿಡಿದು [9]ನೇ[3]ಲ್ದಿರ್ದೊಡಾನೆಯುಂ ಪೆಱತೊಂದು ದೆಸೆಗೆ ಪೋ[10]ಯ್ತಂತ[10]ರಸನುಂ ಮರದಿಂದಿೞಿದು ನಾಡ ಬಟ್ಟೆಯೊಳ್ ತಗುಳ್ದು ಅಡವಿಯಂ ಪೊಱಮಟ್ಟು ಬಂದೊಂದು ಖೇಡಮೆಂಬೂರನೆಯ್ದಿಯದಱ ಸಾರೆಯೊಂದು ಕೆಯ್ಯುಂ[11]ಟದಱ ಸಾರೆಯೊಳ್ ಬಾವಿಯುಂ[11]ಟದಱ ತಡಿಯೊಳ್ ಬಂದು ಕುಳ್ಳಿರ್ದು ಪಸಿವಿನಿಂದಂ ತೃಷೆಯಿಂದಂ [12]ಪಥ[12]ಶ್ರಮದಿಂದಾದಮಾನುಂ ಸೇದೆಗೆಟ್ಟು ಬಂಬಳಂ ಬಾಡಿರ್ಪನ್ನೆಗಮ್

ಆವೂರ ಗಾವುಂಡಂ ಜಿನವಾದಿಕನೆಂಬೊನಾತನ ಗಾವುಂಡಿ ಜಿನಮತಿಯೆಂಬೊಳಾಯಿರ್ವರ್ಗ್ಗಂ ಮಗಳ್ ಜಿನದತ್ತೆಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ[13]ಯು[13]ಮೆಂದಿವನೊಡೆಯೊಳ್ ನೀರಂ ತರಲ್ಕೆಂದು ಬಾವಿಗೆ

---

[1] (ಘಚಛ) ಗಳಲ್ಲಿಲ್ಲ. [2] ಳ್ದಿ (ಕಖಗ). [3].ಸೊರ್ಕಾ (ಘಚಛ). [4] ಡೊಂದು (ಕಖಗ). [5] ದೊಡದು ಅ (ಖ). [6] ಮೆಂಬ (ಘಚಛ). [7] (ಘಚಛ) ಗಳಲ್ಲಿಲ್ಲ. [8] ವಿ (ಘಚ), ಮಿ (ಛ). [9] ನಿ (ಖಚ). [10] ದಡಂ ಅ (ಕಗ), ದಡಂತ (ಖ). [11] ಬಾವಿಯುಮುಂ (ಘಚ), ಬಾವಿಯುಮೆಂಬುದುಂ (ಛ). [12] ಬಟ್ಟೆಯ (ಘಚ). (ಛ) ದಲ್ಲಿಲ್ಲ. [13] ಯೌವನ (ಘಚಛ).

ವೋ[1]ದಾ[1]ಕೆಯ[2]ಂ ಕಂಡರಸನೆಲೆ[2] ಕೂಸೆ ನೀ[3]ರಂ ಕು[3]ಡಿ[4]ಯಲೆಱೆ[3]ಯಾ ಎಂದೊಡಂತೆಗೆಯ್ವೆನೆಂದಾತನ ರೂಪುಂ ಗಾಡಿಯುಂ ತೇಜಮುಂ ಲಾವಣ್ಯಮುಮಂ ಕಂಡಾಟಿಸಿ ನೀರಂ ಸೇದಿಕೊಂಡು ಬಂದು[4] ಕುಡಿಯಲೆಱೆ[3]ಯೆ ಕುಡಿಯೆ [5]ಕು[5]ಡಿಯೆ ಕರಗದ ದಾರೆಯನು[6]ಗಿದುಕೊಂಡೊಡ[6]ರಸನಾಕೆಯ ಮೊಗಮಂ ನೋಡಿ ನಕ್ಕೇಕೆ ಕಾಡುವೌ ಕೂಸೆ ಕಾಡದೆ ಕುಡಿಯಲೆಱೆ[3]ಯಾ ಎಂದೊಡಾಕೆಯುಂ ಕುಡಿಯಲ್ಕೆಱೆ[3]ದು ತನ್ನ ಮನೆಗೆವೋಗಿ ತನ್ನ ತಂದೆಗಿಂತೆಂದಳಮ್ಮಾ ಊರ ಪೊಱಗಣ ಬಾವಿಯೊಳೊರ್ವಂ ಮಹಾಪುರುಷಂ ಬಂದಿ[7]ರ್ದೊ[7]ನಾತನಂ ನೀವೊಡಗೊಂಡು ಮನೆಗೆ ಬನ್ನಿಮೆಂದೊಡಂತೆಗೆಯ್ವೆನೆಂದಾತನುಂ ಪೋಗಿಯೊಡಗೊಂಡು ಬಂದಾತನ ಶ್ರಮಂ ಪೋಗೆ ದಿವ್ಯಮಪ್ಪಾಹಾರಮನೂಡಿ[8]ರ್ದ[8]ನ್

ಅನ್ನೆಗಮರಸನ[9]ಡಿವಜ್ಜೆಯಂ ನೋಡುತ್ತಂ ಪೆಱಗಣಿಂದಂ ತಂತ್ರಮೆಲ್ಲಂ ಬಂದರಸನಿಲ್ಲಿಗೆ ವಂದೊನೆಯೆಂದೂರೊಳಗೆಲ್ಲಮಱಿಸಿ ಬೆಸಗೊಂಡವರರಸನಂ ಕಂಡೆಱಗಿ ಪೊಡೆವಡುವುದುಮಂ ಜೀಯ ಮಹಾಪ್ರಸಾದವೆಂಬುದುಮಂ ಗಾವುಂಡಂ ಕಂಡೆಲೆ ಈತನರಸನೆಂದಱಿದಗ್ಗಳಂ ಪ್ರತಿಪತ್ತಿಯುಂ ಗೌರವಮುಮಂ ಮಾಡಿದೊಡರಸಂ ತನ್ನ ಪೆರ್ಗಡೆಗಳಿಂದಂ ಕೂಸಂ ಬೇಡಿ ಪೆತ್ತು ಮದುವೆನಿಂದಾಕೆಗೆ ಮಹಾದೇವಿವಟ್ಟಂಗಟ್ಟಿ ತನ್ನ ಪೊೞಲ್ಗೆ ವೋಗಿ ಕರುಮಾಡಮಂ ಬಳಸಿಯುಮಿರ್ದಂತಃಪುರದೊಳಗೊಂದೊಳ್ಳಿತಪ್ಪ ಮಾಡಮಂ ಕೊಟ್ಟಿರಿಸಿ ಎಲ್ಲಾ ಅರಸಿಯರ್ಕಳುಮನುೞಿದು ಜಿನದತ್ತೆಗಾಸಕ್ತನಾಗಿ ಪಲಕಾಲಮಾಕೆಯೊಳಿಷ್ಟವಿಷಯಕಾಮಭೋಗಂಗಳನನುಭವಿಸುತ್ತಿರ್ಪನ್ನೆಗಮೊಂದು ದಿವಸಮುಡವಿಯ ಸೊರ್ಕಿದಾನೆ [10]ಗಣಿಯಾನೆ[10]ಗಳ್ವೆರಸು ಬಂದು [11]ಬಾವಿ[11]ಯಂ ಪೊಕ್ಕೊಡೆ ಪಿರಿದುಂ ಕಳಕಳಮಾಗಿ ಅರಸಂಗಱಿಪಿದೊರಸನುಂ ಕೇಳ್ದು ತುರಿಪದಿಂ ಪೊಱಮಟ್ಟು ಕಾಡಾನೆಯಂ ಕಟ್ಟಿಸಲೆಂದು [11]ಬಾವಿ[11]ಗೆ ವೋದೊನಾ ಪ್ರಸ್ತಾವದೊಳ್ ಜಿನದತ್ತೆ ಪಸದನಂ [12]ಗೊಂಡಿ[12]ರ್ದಾಕೆ ಎನ್ನಂ ಬಿಸುಟ್ಟರಸಂ ಪೋದೊನೆಂದು ಮುಳಿದು ನುಡಿವುದುಮರಸನಾಕೆಯನೊಡಗೊಂಡು ಪೋಗದುದಂ ಕಂಡರಸಿಯರ್ಕಳೆಲ್ಲಂ ಸಂತೋಸಮಾಗಿ ಇನ್ನೆಮಗಮರಸಂ [13]ಸೂೞುಂ ಪಾೞಿಯುಂ[13]ಮನೀಗುಮೆಂದು ರಾಗಿಸಿ ನುಡಿವ ಮಾತುಗಳಂ ಜಿನದತ್ತೆ ಕೇಳ್ದು ಕಿನಿಸಿ [14]ಇನ್ನಾತ[14]ನೆನಗೆ ಬಾೞ್ತೆಯ[15]ಲ್ಲನೆಂ[15]ದು ತನ್ನ ಮಾಡದಿಂ ಪೊಱಮಟ್ಟು ಪೆಱತೊಂದು ಪ್ರಾಸಾದದೊಳ್ ಪೋಗಿ[16]ರ್ದೊ[16]ಳ್

ಅನ್ನೆಗಮಿತ್ತರಸನಾನೆಯಂ ಕಟ್ಟಿಸಿ ಜಿನದತ್ತೆಯ ಮಾಡಕ್ಕೆ ವೋಗಿ ಅರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಡೊರ್ವನಿಂತೆಂದಂ ನೀಮೊಡಗೊಂಡು ಪೋದಿ

---

[1] ದಡಾ (ಕಗ), ದೊಡಾ (ಖ). [2] ನರಸಂ ಕಂಡೇಂ (ಘಚಛ). [3] ಗುರ್ಱ (ಘಚಛ). [4] (ಕಖಗ) ಗಳಲ್ಲಿಲ್ಲ. [5] ಗು (ಘಚಛ). [6] ಡುಗಿದಾಗಳ (ಘಚಛ). [7] ಳ್ದೊ (ಖ). [8] ಯಿಳ್ದ (ಖ). [9] + ಪೋದ (ಘಚಛ). [10] ಗಳು ಕರಿಣಿ (ಘಚಛ). [11] 'ಬಾರಿ' ಎಂದಿರಬಹುದೆ? [12] ಗೊಳುತ್ತಿ (ಘಚಛ). [13] ಸೂಳುಂಪಾಳಯು (ಕಗ), ಸೂಳುಂ ಪಾಳೆಯು (ಖ), ಸೂಳುಪಾಳಿಯ (ಘಚಛ). [14] ತಾ (ಘಚಛ). [15] ಲ್ಲೆಂ (ಘಚಛ). [16] ಳ್ದೊ (ಖ).

ರಿಲ್ಲೆಂದರಸಿ ಮುಳಿದು ಪುರುಷ ವ್ರತಮಂ [1]ಕೊಂಡು ತಪಸ್ವಿನಿಯಾಗಿ ಪೆಱತೊಂದು ಮಾಡದೊಳಿರ್ದೊಳೆಂದು ಪೇೞ್ದೊಡಾ ಮಾತನರಸಂ ಕೇಳ್ದಾದಮಾನುಂ ಮುಳಿದಿಂತಪ್ಪ ವ್ರತಮುಂ ತಪಮುಮೆನ್ನಲ್ಲಿ ಕೂಡದೆಂದು ನುಡಿದಾಕೆಯಂ ಬೆಳ್ಕಾಡೊಳ್ ಮಸಣದೊಳ್ ಕೊಂಡುಪೋಗಿಕ್ಕಿಮೆಂದಾಳ್ಗಳ್ಗೆ ಬೆಸನಂ ಪೇೞ್ದೊಡವರುಮಂತೆ ಗೆಯ್ವೆಮೆಂದರಸಿಯನೊಡಗೊಂಡುಪೋಗಿ ಮಸಣದೊಳೊಂಬತ್ತು ತಿಂಗಳ ಗರ್ಭಿಣಿಯಂ ಪೊ[2]ತ್ತು[2] ಪೋಗಿಯಾಕೆಯನಲ್ಲಿಕ್ಕಿ ಇಂತೆಂದರಬ್ಬಾ ಎಮಗೇನುಂ ದೋಷ[3]ಮುಂ ಪಾಪಮು[3]ಮಿಲ್ಲ ಕ್ಷಮಿಯಿಸಿಮರಸನ ಬೆಸದೊಳ್ ತಂದಿಕ್ಕಿದೆವೆಂದು ನುಡಿದು ಪೋದರನ್ನೆಗಮಾ ಇರುಳೊಳರಸಿ ಬೆಸಲೆಯಾಗಿ ಮಗನಂ ಪೆತ್ತೊಳ್

ಇತ್ತರಸನುಮಾ ಇರುಳೊಳ್ ಶ್ವೇತವೃಷಭನಂ ಕನಸಿನೊಳ್ ಕಂಡು ಪೊತ್ತ[4]ಱ[4]ನೋಲಗ[5]ದೊಳ್ ಆಸ್ಥಾನದ[5] ನಡುವೆ ಸಿಂಹಾಸನಮಸ್ತಕಸ್ಥಿತನಾಗಿ ತನ್ನ ಕಂಡ ಕನಸಂ ಮಂತ್ರಿಗೆ ಪೇೞ್ದೊಡೆ ಮಂತ್ರಿಯುಮಿಂತೆಂದು ಕನಸಿನ ಫಲಮು ನರಸಂಗೆ ಪೇೞ್ದಂ ದೇವಾ ನಿಮಗಿಂದು ಪುತ್ರಲಾಭಮಾದುದೆಂದು ಪೇೞ್ದೊಡದಂ ಕೇಳ್ದರಸಿಯರ್ಕಳೊ[6]ಳಗಾರ್ವೆ[6]ಸಲೆಯಾಗಿ ಮಗನಂ ಪೆತ್ತ[7]ಳೆಂದಾ[7]ರಯ್ದು ಬನ್ನಿಮೆಂದು ಪಡಿಯಱರ್ಗೆ ಬೆಸವೇೞ್ದೊಡವರ್ ರಾಣಿ[8]ವಾಸಕ್ಕೆ ಪೋಗಿ ಅರಸಿಯರ್ಕಳೆಲ್ಲರುಮಂ ಬೇಱೆವೇಱೆ ನಿಮ[9]ಗಂ[9] ಪುಟ್ಟಿದನೆ ಎಂದು ಬೆಸಗೊಂಡೊಡವರ್ಗಳನಿಬರುಮಿಂತೆಂದರೆಮಗೆ ಸೌಭಾಗ್ಯಮಿಲ್ಲದವರ್ಗೆ ಭರ್ತಾರನ ದೆಸೆಯಿಂದಪ್ಪ ಸೂೞುಂ ಪಾೞಿಯುಮಿಲ್ಲದೊರ್ಗೆ ಬಸಿಱುಂ ಮಗನುಮೆಂತಕ್ಕುಂ ನೀಮಾರಾನುಂ ಸೌಭಾಗ್ಯಮುಳ್ಳೊರಲ್ಲಿ ಬಸಿಱುಂ ಮಗನುಮನಾರಯ್ಯಿಮೆಮ್ಮಲ್ಲಿ ಏನನಾರಯ್ವಿರೆಂದು ನುಡಿದೊಡವರ್ಗ್ಗಳುಂ ಶ್ಮಶಾನಕ್ಕೆ ಪೋಗಿ ಜಿನದತ್ತೆ ಬೆಸಲೆಯಾಗಿ ಮಗನಂ ಪೆತ್ತಿರ್ದೊಳಂ ಕಂಡರಸಂಗೆ ಪೋಗಿ ಇಂತೆಂದರ್ ದೇವಾ ಶ್ಮಶಾನದೊಳ್ ಜಿನದ[10]ತ್ತೆಯರಸಿ[10] ಬೆಸಲೆಯಾಗಿ ಮಗನಂ ಪೆತ್ತಿರ್ದ[11]ಳೆಂ[11]ದು ಪೇೞ್ದೊಡದಂ ಕೇಳ್ದರಸಂ ಕೂಸುಮನರಸಿಯುಮನೊಡಗೊಂಡು ಬನ್ನಿಮೆಂದು ತರಿಸಿ ಮುನ್ನಿ[12]ನಂದ[12]ದೊಳಿರಿಸಿ ಕನಸಿನೊಳ್ ವೃಷಭನಂ ಕಂಡುದಱಿಂದಾ ಕೂಸಿಂಗೆ ವೃಷಭಸೇನನೆಂದು ಪೆಸರನಿಟ್ಟರಸಿಯಂ ದಾನಸನ್ಮಾನಾದಿಗಳಿಂ ಪೂಜಿಸಿಯಾಕೆಯೊಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಮಿರೆ

ವೃಷಭಸೇನ ಕುಮಾರನುಮೆಂಟುಂ ವರುಷದ ಪ್ರಾಯದಾತನಾಗಿರ್ಪನ್ನೆಗ [13]ಮೊಂದು ದಿವಸ[13]ಮರಸಂ ತಪಂಬಡುವ ಬಗೆಯಿಂದಂ ವೃಷಭಸೇನ ಕುಮಾರಂ [14]ಗಿಂ[14] ತೆಂದಂ ಮಗನೆ ನಿನಗೆ ಪಟ್ಟಂಗಟ್ಟಲ್ ಬಗೆದ[15]ಪ್ಪೆ[15]ನೆಂದೊಡಾತನಿಂತೆಂ[16]ದನಯ್ಯಾ[16]

---

[1] + ಕೈ (ಘಚಛ). [2] ಳ್ತು (ಛ). [3] (ಘಚಛ) ಗಳಲ್ಲಿಲ್ಲ. [4] ದಿ (ಘ). [5] ದೊಳಾಸಭೆಯ (ಘಚ), ಸಾಲೆಯ (ಛ). [6] ಳಾರ್ವ್ಸ (ಘ), ಳಾರ್ಬೆ (ಛ), ಳೆಲ್ಲರುಮಂ ನೋಡಿಯಾರ್ಬೆ (ಚ). [7] ರೆಂಬುದನಾ (ಘಚಛ). [8] + ಯ (ಘ), + ಯಾ (ಛ). [9] ಗೆ (ಘ), ಗೆಮಗಂ (ಚಛ). [10] ತ್ತರಸಿಯರ್ (ಘಚಛ). [11] ರೆಂ (ಘಚಛ). [12] ನ ಮಾಡ (ಘಛ). [13] (ಘಚಛ) ಗಳಲ್ಲಿಲ್ಲ. [14] ರನಂ ಕರೆದಿಂ (ಘಚಛ). [15] ಪೆ (ಘಚಛ). [16] ದಂ ದೇವಾ (ಘಚಛ).

ಎನಗೆ ನೀ[1]ಮುಂ[1] [2]ರಾಜ್ಯಂಪಟ್ಟಂಗಟ್ಟಿದ[3]ಪಿ[3]ರೊ ಮೋಕ್ಷಪಟ್ಟಂಗಟ್ಟಿದ[3]ಪಿ[3]ರೊ ಎಂ[4]ದು ತಂದೆಯಂ ಬೆಸಗೊಂಡೊ[4]ಡೆ ಮಗನೆ ನಿನಗೆ ಮನುಷ್ಯರಾಜ್ಯಪಟ್ಟಂಗಟ್ಟಿದಪ್ಪೆ [5]ನೆಂಬುದುಂ[5] ದೇವಾ ರಾಜ್ಯಪಟ್ಟ[6]ಬಂಧನ[6]ಮುಂ ಮೋಕ್ಷ[7]ಸುಖ[7] ರಾಜ್ಯಪಟ್ಟ [8]ಬಂಧನ[8]ಮುಮೆಂತೆನೆ [9]ಮೋಕ್ಷಸುಖರಾಜ್ಯಪಟ್ಟಮುಂ[9] ತಪಂಗೆಯ್ವೊಂಗೆ ಕಟ್ಟುವು ದೆಂದೊಡಂತಪ್ಪೊಡೆ ಮನುಷ್ಯರಾಜ್ಯಪಟ್ಟಮನೊಲ್ಲೆನೆನಗೆ ಮೋಕ್ಷರಾಜ್ಯಪಟ್ಟಂಗಟ್ಟಿ ಮೆಂದು ನುಡಿದೊಡರಸನೆಂದಂ ಮಗನೆ ನೀನಿನ್ನುಂ ಕೂಸ[10]ನೈ ಬಾಲವದ್ದೆ[10]ಯಿನ್ನೆಗಂ ಬಳೆದರಸುಗೆಯ್ದಿಷ್ಟ ವಿಷಯ ಕಾಮ ಭೋಗಂಗಳನುಭವಿಸು[11]ತ್ತಂ[11] ಬೞಿಕ್ಕೆ ಪಶ್ಚಾತ್ಕಾಲದೊಳ್ ತಪಂಬಡುವುದೆಂದೊಡೆ ಕುಮಾರನಿಂತೆಂದನನ್ನೆಗಂ ಸಾವರೊ ಬಾೞ್ವರೊ ಎಂತಱಿಯಲಕ್ಕುಂ ಮನುಷ್ಯರ ಬಾ[12]ೞುಂ[12]

ಕಂದ ॥ ಪನಿಪುಲ್ಲ ಮುಗಿಲ ಸಂಜೆಯ
ಕನಸಿನ ಸುರ[13]ಧನುವ ನೆಗೆದ ನೊರೆಗಳ ತೆಱನಂ
ತನಿತುಂ[13] ನಿಲ್ಲವು [14]ಬಗೆವೊಡೆ[14]
ಮನು[15]ಜ[15]ರ [16]ಯೌವನಮುಮರ್ಥಮುಂ [16]ಬಾೞ್ಕೆಗಳುಂ ॥

ಶ್ಲೋಕ ॥ ಭೋಗಸ್ತೃಷ್ಣಾಗ್ನಿ ಸಂವೃದ್ಧ್ಯೈ ದೀಪನೀಯೋ ವನೋಪಮಃ ।
ಏಭಿಃ ಸ್ತ್ರೀವೃದ್ಧತೃಷ್ಣಾಗ್ನಿಶಾಂತ್ಯೈ ಚಿಂತ್ಯಮಿಹಾಪರಂ ॥

ಗಾಹೆ ॥ ಸಣ್ಣಂ ವಾ ಬದರಂ ತಂ ಮಜ್ಜಂ ವಿಮುತ್ತಾಣ ಮುತ್ತಿಪಹಂ ।
ಅ[17]ಮಿಸಾ[17]ಮಂ (?) ಭೋಗಸುಹಲೋಹವಿರದೋ ಮೊಕ್ಖೇಮಡಿಂ ಕುಜ್ಜಾ ॥

ಆರ್ಯೆ ॥ ಯದ್ಯಪಿ ನಿಷೇವ್ಯಮಾಣಾ ಮನಸ್ಸಂತುಷ್ಟಿಕಾರಕಾ ವಿಷಯಾಃ ।
ಕಿಂಪಾಕಫಲಾಶನವದ್ಭವಂತಿ ಪಶ್ಚಾದತಿದುರಂತಾಃ ।

ಎಂಬುದಱಿಂ ಭೋಗಂಗ[18]ಳುಂ ಕಿಂಪಾಕಫಳದೊಳೋರನ್ನ[18]ವದು ಕಾರಣದಿಂ ರಾಜ್ಯದೊಳಪ್ಪ ಭೋಗಸುಖಂಗಳನೊಲ್ಲೆಂ ಜಾತಿಜರಾಮರಣಗಳಿಂದ[19]ಪ್ಪ ಬಾಧೆ ಯಿ[19]ನಗಲ್ದ ಶಾಶ್ವತಮಪ್ಪ ಮೋಕ್ಷಸುಖಮನೆ ಬೇೞ್ಪೆನೆಂದು ತಱಿಸಂದು ನುಡಿ ದೊಡರಸಂ ಜ್ಯೋತಿರ್ಮಾಲೆಯೆಂಬರಸಿಯ ಮಗಂ ವಸುಪಾಳನೆಂ[20]ಬೊಂಗೆ[20] ರಾಜ್ಯಪಟ್ಟಂಗಟ್ಟಿ ತಂದೆಮಕ್ಕಳಿರ್ವರುಮೆಲ್ಲರೊಳಂ ನಿಶ್ಶಲ್ಯಂಗೆಯ್ದು ಬಾಹ್ಯಾ ಭ್ಯಂತರ ಪರಿಗ್ರಹ ಪರಿತ್ಯಾಗಂಗೆಯ್ದು ಗುಣಧರರೆಂಬಾಚಾರ್ಯರ ಪಕ್ಕದೆ[21] ದೀಕ್ಷೆಯಂ ಕೈಕೊಂಡು[21]ಪನ್ನೆರಡು ವರುಷಂಬರೆಗಂ ಗುರುಗಳನಗಲದಿರ್ದಾಗಮಂಗಳೆಲ್ಲಮಂ

---

[1] ಮ (ಘಚಛ). [2] + ಮನುಷ್ಯ (ಘಚಛ). [3] ಪ (ಕಗ). [4] ದೊ (ಘಚಛ), [5] (ಘಚಛ) ಗಳಲ್ಲಿಲ್ಲ. [6] ಬೇಡ (ಕಖಗ). [7] (ಘಚಛ) ಗಳಲ್ಲಿಲ್ಲ. [8] (ಕಖಗ)ಗಳಲ್ಲಿಲ್ಲ. [9] (ಕಖಗ)ಗಳಲ್ಲಿಲ್ಲ. [10] ನೈ ಬಾಳವದ್ದೆ (ಖ), ನೈ ಬಾಲಕನೆ (ಘಚ), ನೆಯಬ್ಬಾಳಕನೆ (ಛ). [11] ದಿಂ (ಘಚಛ). [12] ಳಂ (ಘಚಛ). [13] ಚಾಪದ ವನದಿ ಲಹರಿಕಾ ನಿಕರದವೊಲೆನಸುಂ (ಘಚ), ಚಾಪದ ವನದಿ ಲಹರಿಕಾನಿಲದವೊಲೆನಸುಂ (ಛ). [14] (ಕಖಗ) ಗಳಲ್ಲಿಲ್ಲ. [15] ಷ್ಯ (ಖ). [16] ಧನಮುಂ ಯೌವನಮುವಿದ್ಯೆಯುಂ (ಕಗ), ಯೌವನಮು ಅರ್ಥಮುಂ (ಖ), ಜೌವನಮುಮರ್ಥಮುಂ (ಘಚಛ). [17] ವಿಸ್ಸಾ (ಕಖಗ). [18] ಳ್ಗಳ್ಕಿ ಕಿಡುಗುಂ ಮೋಕ್ಷ ಫಲದೊಳೋರನ್ನವಲ್ಲ (ಘಚಛ). [19] (ಘಚಛ) ಗಳಲ್ಲಿಲ್ಲ. [20] ಬ ಕುಮಾರಂಗೆ (ಕಖಗ). [21] ತಪಂಬಟ್ಟು (ಘಚಛ).

ಕಲ್ತು ಭಟಾರರಂ ಬೆಸಗೊಂಡವರನುಮತದಿಂ ವೃಷಭಸೇನಮುನಿಯುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೊರ್ ವತ್ಸೆಯೆಂಬುದು ನಾಡೊಳ್ ಕೌಶಂಬಿಯೆಂಬ ಪೊೞಲ್ಗೆನಂದದಱ ಸಾರೆ [1]ಉ[1]ದಯಾವತ [2]ಪರ್ವತ[2]ಮೆಂಬ ಪರ್ವತಮುಂಟದಱ ಮೇಗೆ ವೃಷಭಸೇನ ಭಟಾರ[3]ರ್ ನಾಲ್ಕು ತಿಂಗಳುಮಾತ[3]ಪಸ್ಥಿತ[3]ಯೋಗಮಂ ಕೈಕೊಂಡು ದಿವಸಕ್ಕಂ ಕಲ್ನಿಲೆನಿಲೆ ಪೊೞಲವರ್ಗಳ್ ಕಂಡನಿಬರುಂ [4]ಶ್ರಾವಕಭಕ್ತರುಂ[4] ಬೆಸಕೆಯ್ವರು[5] ಮಾದರ್

ಮತ್ತಾ ಪೊೞಲೊಳ್ ಬುದ್ಧ[6]ಜ[6]ನೆಂಬೊನುಪಾಸಕನಾತಂ ಋಷಿಯರೊಳಪ್ಪ ಮಾತ್ಸರ್ಯಂ ಕಾರಣಮಾಗಿ ಭಟಾರರ್ ಚರಿಗೆವೋದರನ್ನೆಗಂ ಪಿಂದೆ ಪಾಪಕರ್ಮಂ ಯೋಗಶಿಲೆಯ ಮೇಗುಮುಂ ಕೆೞಗುಮಂ ಬಳಸಿಯುಂ ಪಲವುಂ ಪಿರಿಯವುಮಪ್ಪ ತಱಿಯ ಪುಳ್ಳಿಗಳಂ ಕಡಿದೊಟ್ಟಿ ಕಿಚ್ಚನಿಕ್ಕಿ ಸುಟ್ಟು ಕಿಚ್ಚಿನ ಬಣ್ಣದಂತಾಗಿ ಸಿಲೆಯುಂ ಮಾಡಿ ಕೆಂಡಂಗಳನೊಂದು ಕೆಲಂ ಸಾರ್ಚಿ ಪೋದನನ್ನೆಗಂ ಭಟಾರರ್ ಚರಿಗೆವೋಗಿ ಬರ್ಪೊರ್ ಧಗಧ್ಧಗಿಸುತ್ತಿರ್ದ ಕಿಚ್ಚಿನ ಬಣ್ಣದಂತಪ್ಪ ಕೆಚ್ಚನಾಗಿ[7]ರ್ದ[7] ಸಿಲೆಯುಂ ಕಂಡೆಮಗಿನಿತೆಯಾಯುಷ್ಯಮೆಂದಱಿದು ಕ್ರಿಯೆಗೆಯ್ದು ಚತುರ್ವಿಧಮಪ್ಪಾಹಾರಮುಮಂ ಶರೀರಮುಮಂ ಜಾವಜ್ಜೀವಂ ತೊಱೆದು ಕಾಯ್ದಿರ್ದ ಯೋಗಪೀಠಮನೇಱ ಕಾಯೋತ್ಸರ್ಗಂಗೆಯ್ದು ಜ್ಯೇಷ್ಠ ಮಾಸದ ಬಿಸಿಲುಂ ಝುಳಮುಂ ಬೆಂಕೆಯುಂ ಕಿಚ್ಚುಮಂ ಸೈರಿಸಿ ನೀರೊಳಗಿರ್ಪಂತಿರ್ದು ಶುಕ್ಲಧ್ಯಾನಮಂ ಧ್ಯಾನಿಸಿ ಎಂಟು ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ಪೋದರ್ [9]ಮತ್ತೆ ಪ್ರದ್ಯೋತನೆಂಬ ಋಷಿ ಸಮ್ಯಗ್ದರ್ಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಸ್ವರ್ಗದೊಳ್ ಪುಟ್ಟಿದಂ[9]

ಮತ್ತಂ ಪೆಱರುಮಾರಾನುಂ ಸಹಜರತ್ನತ್ರಯಮನಾರಾಧಿಸುತ್ತಿರ್ದ ಭವ್ಯರ್ಕಳ್ ವೃಷಭಸೇನ ಭಟಾರರಂ ಮನದೊಳ್ ಬಗೆದು ಝುಳಮುಂ ಬೆಂಕೆಯುಮಂ ದಾಹಮುಮುಷ್ಣಮುಂ ಶೀತಮುಂ ವಾತಮುಂ [10]ಬೇ[10]ನೆಯುಂ ಪಸಿವುಂ ನೀರಟ್ಕೆ ಮೊದಲಾಗೊಡೆಯವಿರ್ಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಶುಭಪರಿಣಾಮದಿಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗಸುಖಂಗಳನೆಯ್ದುಗೆ

---

1, 2 (ಘಚಛ) ಗಳಲ್ಲಿಲ್ಲ. 3 ರ್ ನಾಲ್ಕು ತಿಂಗಳುಮಾತಾಪನಸ್ಥಿತ (ಕಖಗ), ರಾತಪಸ್ಥಿರ (ಘಛ). 4 (ಘಚಛ) ಗಳಲ್ಲಿಲ್ಲ. 5 + ಂ ಶ್ರಾವಕರು (ಘಚಛ). 6 ಜನ (ಘಚಛ). 7 ಳ್ದ (ಖ). 8 + ಸಮ್ಯಗ್ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ (ಘಚಛ). 9 (ಕಖಗ) ಗಳಲ್ಲಿಲ್ಲ. 10 ವೇದ (ಘಚಛ).

# (೧೧) ಕಾರ್ತಿಕ ಋಷಿಯ ಕಥೆ

ಅಗ್ನಿರಾಜನ ಮಗನಪ್ಪ ಸ್ವಾಮಿ ಕಾರ್ತಿಕ ಋಷಿಯ ಕಥೆಯಂ ಪೇೞ್ವೆಂ :

ಗಾಹೆ ॥ [1]ರೋಹೇದಯಮ್ಮಿ[1] ಸತ್ತೀಎ ಹದೋ ಕೊಂಚೇಣ ಅಗ್ಗಿದಯಿದೋ ವಿ ।
ತವ್ವೇದಣಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[[1]ರೋಹೇದಯಮ್ಮಿ[1]—*ರೋಹೇ*ದಕಮೆಂಬ ಪೊೞಲೊಳ್, ಸತ್ತೀಎಹದೋ—ಶಕ್ತಿಯೆಂಬಾಯುಧದಿಂದಿಱಿಯೆ ಪಟ್ಟೊನಾಗಿ, ಕೊಂಚೇಣ—ಕ್ರೌಂಚನೆಂಬರಸಿನಿಂದಂ, ಅಗ್ಗಿದಯಿದೋ ವಿ—ಅಗ್ನಿರಾ[2]ಜನ ಕಾದಲಿಸೆ[2]ಪಡುವ ಮಗಂ, ತವ್ವೇದಣಂ—ಆ ವೇದನೆಯಂ, ಅಧಿಯಾಸಿಯ—ಲೇಸಾಗಿ ಸೈರಿಸಿ, ಪಡಿವಣ್ಣೋ—ಪೊ[3]ರ್ದಿ[3]ರ್ದೊರ್ಗಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

**ಈ** ಜಂಬೂದ್ವೀಪದ ಭರತಕ್ಷೇತ್ರದೊಳ್ ಲಾಳವಿಷಯದೊಳ್ ಕೃತ್ತಿಕಾಪುರಮೆಂಬುದು ಪೊೞಲದನಾಳ್ವೊನಗ್ನಿರಾಜನೆಂಬರಸನಾತನ ಮಹಾದೇವಿ ವೀರಮತಿಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಬಂಧುಮತಿ ಶಿವಸೇನೆ ಶ್ರೀಮತಿ ಸ್ವಯಂಪ್ರಭೆ ಲಕ್ಷ್ಮೀಮತಿ ಕೃತ್ತಿಕೆಯೆಂದಿಂತಱುವರ್ ಪೆಣ್ಗೂಸುಗಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಫಾಲ್ಗುಣ ಮಾಸದ ನಂದೀಶ್ವರದಂದಱುವರುಂ ಕೊಡಗೂಸುಗಳುಪವಾಸಂಗೆಯ್ದು ಬಸದಿಗರ್ಚನೆಯಂ ಕೊಂಡುಪೋಗಿ ದೇವರನರ್ಚಿಸಿ ನಂದೀಶ್ವರಂಗೆಯ್ದು ಬಂದಿಸಿ ರಿಸಿಯರ್ಕಳುಮಂ ಗುರುಪರಿವಿಡಿಯಿಂ ವಂದಿಸಿ ವ್ರತಂಗಳನೇಱಿಸಿಕೊಂಡು ಸಿದ್ಧಶೇಷೆಯಂ ಕೊಂಡುಬಂದು ತಾಯ್ಗಂ ತಂದೆಗಂ ಕೊಟ್ಟು ಪೋಪಾಗಳರಸಂ ಕಿಱಿಯ ಮಗಳಪ್ಪ ಕೃತ್ತಿಕೆಯ ರೂಪುಂ ತೇಜಮುಂ ಗಾಡಿಯುಮಂ ಕಂಡಾ[4]ಕೆಗಾಟಿಸಿ[4] ಸಾಮಂತ ಮಹಾಸಾಮಂತರ್ಕ್ಕಳ್ಗಂ ಪರಿವಾರಕ್ಕಂ ಮಂತ್ರಿವರ್ಗಕ್ಕಂ ವೀರಮತಿ ಮಹಾದೇವಿಗಮೆಲ್ಲ ಸಮ[5]ಯಿ[5]ಗಳ್ಗಂ ಬೞಿಯಟ್ಟಿ ಬರಿಸಿಯರಸನಿಂತೆಂದನೆನ್ನಾಳ್ವ ಮಂಡಳಂಗಳೊಳ್ ಪುಟ್ಟಿ[6]ದ ಲೇಸ[6]ಪ್ಪ ವಸ್ತುವಾರ್ಗಕ್ಕುಮೆಂದು ಬೆಸ[3]ವೇ[7]ೞ[3]ಯರಸನ[7] ನಿಬರುಮಂ ಬೆಸಗೊಂಡೊಡವರ್ಗ್ಗಳೆಲ್ಲಮಿಂತೆಂದರೊಳ್ಳಿತಪ್ಪಾನೆಯುಂ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪುಗ್ಗಳ

---

[1] ಮಹೋದಕಂ ಹಿ (ಕಖಗ). * ಮಹೋ (ಕಗ), ಮಾಹೋ (ಖ). [2] ಜನ ಕಾಲದಲ್ಲಿಸೆ (ಕಗ), ಜನಕಾಲದಲ್ಲಿರಿಸೆ (ಖ), ಜಂ ಕಾದಲಿಸೆ (ಘಚಛ). [3] ರ್ದಿ (ಕಖಗ). [4] ಕೂಸಿಗೆ (ಖ). [5] ಯಂ (ಖ). [6] ದೊಳ್ಳಿತ (ಘಚಛ). [7] ೞ (ಘಚಛ).

ವಸ್ತುವೆಲ್ಲಂ ಪೃಥ್ವಿಯನಾಳ್ವೊಂಗಕ್ಕುಮೆಂದು ಪೇೞ್ದೊಡರಸಂ ಋಷಿಯರುಮಂ ಬೆಸಗೊಂಡೊಡೆ ಋಷಿಯರೆಂದ[1]ರಾ[1]ನ ವಸ್ತು [2]ಪೇೞ್ಗುಂ[2] ಪೇೞ್ದೊಡೆ ತಕ್ಕು[3]ದು ತಗ[3]ದುದುಮನಱಿಯಲಕ್ಕುಮೆಂದೊಡರಸನಿಂತೆಂದನಿವರೆಲ್ಲ[4]ರ್[4] ಪೇ[5]ೞ್ವಿಂತು ಪೇೞ್ವಿರಲ್ಲರೊ[5]ಡಂಬ[6]ಡುವರಲ್ಲ[6]ರ್ ಬಹು ಪ್ರಳಾಪಿಗಳಿವರಂ ಪೊಱಲಿಂದ[7]ಟ್ಟಿ ಕಳೆಯಿಮೆಂದಟ್ಟಿ ಕಳೆಯೆ ಮಱಿದರೆಲ್ಲರುಮಂ ಬೆಸಗೊಂಡೊಡನಿಬರುಮೊಡಂಬಟ್ಟೊಳ್ಳಿತ್ತಪ್ಪ ವಸ್ತು ನಿನಗಕ್ಕುಮೆಂಬೊಡೆ ಅರಸನೆನಗಕ್ಕುಂ ಬಲವೆಂದು ಮೂಱು ಸೂೞ್ವರಂ ಸಾಱಿ ನುಡಿದೊಡಂಬಡಿಸಿ ವೀರಮತಿ ಮಹಾದೇವಿಯುಂ ಬೇಡಿ ಕೃತ್ತಿಕೆಯಪ್ಪ ಕಿಱಿಯ ಮಗಳಂ ಮದುವೆನಿಂದೊನಾ ದಿವಸಮೆ ವೀರಮತಿ ಮಹಾದೇವಿಯುಂ ಬ್ರಹ್ಮಚರ್ಯ ವ್ರತಮಂ ಕೈಕೊಂಡು ನೆಗೞ್ದಳ್

ಮತ್ತೆ ಕೃತ್ತಿಕೆಗೆ ನವಮಾಸಂ ಗರ್ಭ[8]ಮಾ[8]ದಂದು [9]ಸರವಣ[9]ಮೆಂಬುದ್ಯಾನ ವನದೊಳಗಣ [10]ಸರವಣ[10]ಮೆಂಬ ಬಾವಿಯೊಳ್ ಜಲಕ್ರೀಡೆಯಾಡಲ್ ಬಯಕೆಯಾದುದೆಂದರಸಂಗಱಿಪಿದೊಡರಸನನುಮತದಿಂ ಜಲಕ್ರೀಡೆಯಾಡಿ ಮಗನಂ ಪೆತ್ತೊಡಾತಂಗೆ ಸ್ವಾಮಿ ಕಾರ್ತ್ತಿಕನೆಂದು ಪೆಸರನಿಟ್ಟರ್ ಮತ್ತಾತನಿಂ ಬೞಿಯಂ ಪೆಣ್ಗೂಸುಮಂ [11]ಪೆತ್ತೊಡೆ[11] ಆಕೆಗೆ ವೀರ[12]ಶ್ರೀ[12]ಯೆಂದು ಪೆಸರನಿಟ್ಟು ಬಳೆದೊಡಾಕೆಯುಂ [13]ಕೋಗ[13]ಳಿಯನಾಳ್ವ ಕ್ರೌಂಚನೆಂಬರಸಂಗೆ ಕೊಟ್ಟರಿಂತು ಕಾಲಂ ಸಲೆ [14]ಮತ್ತಿತ್ತ ನಮಿ[14] ಮೊದಲಾಗೊಡೆಯ ತಮ್ಮಂದಿರಪ್ಪ ಕುಮಾರರೊಡನೆ ಸ್ವಾಮಿ ಕಾರ್ತ್ತಿಕಂ ಬಳೆದು ಪದಿನಾಱು ವರುಷದ ಪ್ರಾಯಮಾದಂದು ಮತ್ತೊಂದು ದಿವಸಮನಿಬರುಂ ಕುಮಾರರ್ಕಳುದ್ಯಾನವನಕ್ಕೆ ವನಕ್ರೀಡೆಯಾಡಲ್ ಪೋಗಿಯಾಡುತ್ತಿರ್ಪನ್ನೆಗಮೆಲ್ಲಾ ಕುಮಾರರ್ಕಳ್ಗಂ ತಾಯ್ತಂದೆಯಜ್ಜರ್ಕಳ ಮನೆಯಿಂದಂ ಪೂಸಲುಮುಡಲುಂ ತುಡಲುಂ ಪೂವುಂ ತಂಬುಲಮುಂ ತಿಂ[15]ಬ[15]ಡಂಗಳುಂ ಬಂದುವು ಸ್ವಾಮಿ ಕಾರ್ತ್ತಿಕಂಗಾರುಮಟ್ಟದಿರ್ದೊಡೆ ಮನದೊಳ್ ಬೞ್ದಿದೊನಾಗಿ ವನಕ್ರೀಡೆಯನಾಡಿ ಮನೆಗೆ ವಂದು ತಾಯನಿಂತೆಂದನಬ್ಬಾ ನಿಮ್ಮ ತಂದೆಯಪ್ಪೆಮ್ಮಜ್ಜನೊಳನೊ ಇಲ್ಲೆಯೊ ಎಂದು ಬೆಸಗೊಂಡೊಡೆ ತಾಯ್ ಮನದೊಳ್ ಬೞ್ದಿದೊಳಾಗಿ ಏನಂ ಪೇೞ್ವೆಂ ಮಗನೆ ನಿನಗೆ ತಂದೆಯಪ್ಪಾತನೆನಗಂ ತಂದೆಯೆಂದು ಪೇೞ್ದೊಡದಂ ಕೇಳ್ದು [16]ಅದುವೆ[16]ವೈರಾಗ್ಯ ಕಾರಣಮಾಗಿ ಶ್ರೀ[17]ವ[17]ರರೆಂಬಾಚಾರ್ಯರ ಪಕ್ಕದೆ ತಪಂಬಟ್ಟಾಗಮಂಗಳೆಲ್ಲಮಂ ಕಲ್ತು ಗುರುಗಳಂ ಬೆಸಗೊಂಡವರನುಮತದಿಂ[18]ದೇಕ ವಿಹಾರಿಯಾಗಿ[18]ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ತೆಂಕನಾಡ ಕಿಷ್ಕಿಂಧ

---

1 ರದಾ (ಘ ಚ ಛ). 2 ಕೇೞಿಂ (ಖ). 3 ತಾ (ಖ). 4 ರ್ (ಘ ಚ ಛ). 5 ಳ್ದಂತೆ ಪೇಳ್ದರಿಪ್ಪೊ (ಘ ಚ ಛ). 6 ಡ (ಖ ಘ ಚ ಛ). 7 + ಪೋಳ್ಪ (ಘ ಛ). 8 ರ್ಭಂ ನೆಱೆ (ಘ ಛ). 9 ಸರವುಣ (ಕ), ಸರವನ (ಘ ಛ), ಸುರವನ (ಚ). 10 ಶರವೇಣು (ಘ ಚ ಛ). 11 ಪೆಳ್ತೊಡೆ (ಕ ಗ), ಪೊತ್ತೊಳ್ (ಛ). 12 ಸ್ತ್ರೀ (ಕ ಖ ಗ). 13 ಕೋಗು (ಘ ಚ ಛ). 14 ಮತ್ತಿನವರ್ (ಕ ಖ ಗ). 15 ಬಿ (ಖ), ಬು (ಚ). 16 ಸಂಸಾರಕ್ಕೆ ಪೇಸಿ (ಘ ಚ ಛ). 17 ಧ (ಘ ಚ). 18 (ಘ ಚ ಛ) ಗಳಲ್ಲಿಲ್ಲ.

ಮೆಂಬ [1]ಪರ್ವತ[1]ಮನೆಯ್ದಿಯದಱ ಮೇಗೆ ರಾತ್ರಿಪ್ರತಿಮಾಯೋಗಂ [2]ಗೆಯ್ದೊರಾ[2] ಇರುಳ್ ಪಿರಿದೊಂದು ಮೞಿ ಕೊಂಡು ಮೆಯ್ಯ ಮಳಮೆಲ್ಲಮಂ ಕರ್ಚಿ ಕಳೆದು ಪಾಷಾಣಮೆಂಬ ಮಡುವಂ ನೀರ್ ಪೊಕ್ಕಾಗಳಾ ಮಡುವಿನ ನೀರ್ ಸರ್ವೌಷಧಿಯಾದೊಡಂತಲ್ಲಿಯ ನೀರಂ ಮಿಂದವರ್ಗ್ಗೆಲ್ಲಾ ವ್ಯಾಧಿಯುಂ ಕಿಡುವುವಾದುವಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು

ಮತ್ತೆ ಸ್ವಾಮಿ ಕಾರ್ತ್ತಿಕ [3]ಋಷಿ[3]ಯುಂ ವಿಹಾರಿಸುತ್ತಂ ಬಂದು ಕೋಗಳಿಯ ನೆಯ್ದಿಯಲ್ಲಿಯ ಬಸದಿಯೊಳ್ ಪಂಥಾತಿಚಾರ ನಿಯಮಂಗೆಯ್ದು ದೇವರಂ ಬಂದಿಸಿ ಮಧ್ಯಾಹ್ನದಾಗಳ್ ಚರಿಗೆವೊಕ್ಕು ಚಾತುರ್ವರ್ಣ್ಯದ ಮನೆಗಳುಮಂ[4] ತೊೞಲುತ್ತಂ ಬಂದರಮನೆಯಂ ಪೊಕ್ಕಾಗಳಾ ಪ್ರಸ್ತಾವದೊಳ್ ಕರುಮಾಡದ ಮೇಗಣ ನೆಲೆಯೊಳಿರ್ದ್ದ ವೀರಶ್ರೀ ಮಹಾದೇವಿಯರಸನ ತಲೆಯಂ ತನ್ನ ತೊಡೆಯ ಮೇಲಿಟ್ಟುಗುರಿಸುತಿರ್ದ್ದಾಕೆ ಭಟಾರರ ಬರವಂ ಕಂಡಱಿದೆಮ್ಮಣ್ಣಂಗಳಪ್ಪ ಭಟಾರರ್ ಚರಿಗೆವಂದಪ್ಪೊರೆಂದು ಮ[4]ಱಿಲುಂದಿದ[5]ರಸನ ತಲೆಯಂ ಕೆೞಗೊಂಡಾಧಾರಮನಿಟ್ಟು ನಿಱಿಸಲೆಂದು ಕರುಮಾಡದಿಂದಿೞಿದು ಪರಿತರ್ಪನ್ನೆಗಂ ಭಟಾರರ್ ವಂದರಮನೆಯಂಗಣಮಂ ಪೊಕ್ಕು ಮಗುಟ್ದುಪೋಗಿ ಬಾಗಿಲ್ಮಾ[6]ಡಮನೆಯ್ದಿದಾ[6]ಗಳರಸಿ ಪೆಱಗಣಿಂ ಪರಿತಂದು ಬಂದು ಮುಂದೆ ನಿಂದು ಕೈಗಳಂ ಮುಗಿದೆಱಗಿ ನಿಲ್ಕೆ ಭಟಾರಾ ಎಂದು ನಿಱಿಸಿದೊಡೆ ಭಟಾರರೆಂದರಬ್ಬಾ ಮನೆಯಂ ಪೊಕ್ಕು ಬಂದೊಮಿನ್ನೆಮಗೆ ನಿಲಲಾಗದೆಂದೊಡರಸಿಯಿಂತೆಂದಳ್ ಭಟಾರಾ ನೀಮೆನಗೆ ದಯೆಗೆಯ್ದುಮೋಘಂ ನೀಲಲ್ವೇೞ್ಕುಮೆಂದು ಪೋಗಲೀಯದೆ ಕಾಲಂ ಪಿಡಿದು ತಾಂಗುತ್ತಿರ್ಪನ್ನೆಗಮ್

ಇತ್ತರಸನೆೞ್ಚತ್ತು ದೆಸೆಗಳಂ ನೋಡಿಯರಸಿಯಂ ಕಾಣದ[7]ರ[7]ಸಿಯೆಲ್ಲಿರ್ದೊಳೆಂದು ಕೆಲದವರಂ ಬೆಸಗೊಂಡೊಡವರೆಂದೊರರಸಿಯೊರ್ವ [8]ಸ[8]ವಣಂ ಬಂದೊಡಾತನಂ ಕಂಡು ಕರುಮಾಡದಿಂದಿೞಿದು ಪರಿದು ಬೞಿಯಂ ತಗುಳ್ದು ಬಾಗಿಲ್ ಮಾಡದಲ್ಲಿ ಸವಣನೊಡನಾ ಪೋರುತ್ತಿರ್ಪ್ಪೊಳ್ ನೋಡಿಮೆಂದರಸಂಗೆ ತೋಱಿದೊಡರಸಂ ಕಂಡೆನ್ನನಗಲ್ದು [9]ನಿಚ್ಚಲೀ[9] ಸವಣನಲ್ಲಿಗೆ ಪರಿ[10]ವ[10]ಳೆಂದು ಕಿನಿಸಿ ಕರುಮಾಡದಿಂದಿೞಿದು ರಿಸಿಯರಿರ್ದಲ್ಲಿಗೆವೋಗಿ ಶಕ್ತಿಯೆಂಬಾಯುಧದಿಂದುರಮನುರ್ಚಿಪೋಗಿಟ್ಟರಸಿಯುಮಂ ತಲೆನವಿರಂ ಪಿಡಿ[21]ದು ದಱವಱನೆ[11]ೞಿದುಕೊಂಡು ಬಂದಂ

ಸ್ವಾಮಿ ಕಾರ್ತ್ತಿಕಋಷಿಯುಂ ಕ್ಷಮೆಯಂ ಭಾವಿಸಿ ನೆತ್ತರೊಕ್ಕು ಬಸಮೞಿದು ಬೇಸಗೆಯ ಕಡುವಿಸಿಲಿಂದಂ ಝಳದಿಂದಂ ಬೆಂಕೆಯಿಂದಂ ನೀರೞಿಕ್ಕೆಯಧಿಕಮಾಗಿ ತಣ್ಪಿ[12]ನೊಳೊ[13]ಳ್ಪಿತ್ತು ಸಮಾಧಿಯಕ್ಕುಮೆಂದು ಮನದೊಳ್ ಬಗೆದಿರ್ದ್ದನನ್ನೆಗಂ ತಮ್ಮಜ್ಜಿಯಪ್ಪ ವೀರಮತಿ ಮಹಾದೇವಿ ಬ್ರಹ್ಮಚರ್ಯವ್ರತಮಂ ಕೊಂಡು

---

[1] ಪುರ (ಛ). [2] ನಿಂದೊಡಾ (ಘಚಛ). [3] ಮುನಿ (ಘಚಛ). [4] + ತೊಳಲ್ದು (ಕಗ). ಱಿದು ನಿದ್ರೆಗೈದ (ಘಚಛ). [6] ಡದ ಮನೆಯನೆಯ್ದಿದರಾ (ಘಚಛ). [7] ಱ (ಕಖಗ). [8] ಶ್ರ (ಕಖಗ). [9] ನಿಚ್ಚಲೆ (ಘ), ನಿಚ್ಚಿಲ (ಛ), (ಚ) ದಲ್ಲಿಲ್ಲ. [10] ವ (ಘಚಛ). [11] ದೆ (ಘಚಛ). [12] ಣ್ಪಾದೊಡೊ (ಘಚಛ).

ಕಾಲಂ ಗೆಯ್ದು ವ್ಯಂತರದೇವತೆಯಾಗಿ ಪುಟ್ಟಿ[1]ದಾ[1]ಕೆಗಾಸಕನಂಪಮಾಗಿಯಱಿದು ಬಂದು ಭಟಾರಾ ಬೆಸನೇನಿವರೆಲ್ಲರುಮಂ ಕೊಂದ[2]ಪ್ಪೆನೆಂ[2]ದೊಡೆ ಭಟಾರರೆಂದ ರಂತೇ[3]ನುಂ ಬೇ[3]ಡ ನೀನೆಮ್ಮಂ ತಣ್ಪಿನೆಡೆಗೆ ಕೊಂಡುಪೋಗೆಂದೊಡೆ ದೇವತೆ ನವಿಲ ರೂಪಿನಿಂದೆತ್ತಿಕೊಂಡು ಬೆನ್ನೊಳಿಟ್ಟು ಕೋಗಳಿಯ ಮೂಡಣ ದೆಸೆಯ ಪರ್ವತದ ಕೊಳದ ತಡಿಯೊಳ್ ಲತಾಮಂಟಪದೊಳಿರಿಸಿ ಪೋದೊಡೆ ಬೆಟ್ಟದ ಮೇಗಣಿಂ [4]ಪಾಯ್ತ[4]ರ್ಪ ನಿರ್ಝರಶೀ[5]ಕ[5]ರಂಗಳಿಂ ಮೆಯ್ಗಾಪ್ಯಾಯನಮಾಗಿ ಸಂನ್ಯಸನಂ ಗೆಯ್ದು ಶುಭಪರಿಣಾಮದಿಂ ಮುಡಿಪಿ[6] ಸರ್ವಾರ್ಥಸಿದ್ಧಿಯೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯೊನಹಮಿಂದ್ರನಾಗಿ ಪುಟ್ಟಿದೊಂ

ಮತ್ತಿತ್ತ ಭಟಾರರ ತಂಗೆಯಪ್ಪ ವೀರಶ್ರೀಯುಂ ಹಾ ಭಟಾರ ಎಂದಿರುಳುಂ ಪಗಲುಂ ಪಲವು ದಿವಸನೊಂದೆ ಪಾಂಗಿನೊಳ್ ಪ್ರಳಾಪಿಸಿ ದುಃಖಂಗೆಯ್ಯೆ ಅರಸನು ಮಾಕೆಗೆ ಕಡು[7]ನಲ್ಲನಪ್ಪುದಱಿಂದಾದಮಾನುಮುಬ್ಬೆಗಂ ಬಟ್ಟಿ[8]ರ್ದ್ದಿ[8]ರ್ದಂ ತೆಂದನಾರೊರ್ವ ರರಸಿಯಬಿಕ್ಕಿಯಂ ಮಱಿಸಿ ದುಃಖಮುಂ ಮಱೆ[3]ಯಿಸುವೊರವ[9]ರ್ಗ್ಗೊ[9]ಸಗೆಯಂ ಮಾಡುವೆನೆಂದು ಪೊೞಲೊಳಗೆ ಗೋಸಣೆಯಂ ತೊೞಲ್ಚಿದೊಡದಂ ಕೇಳ್ದು [10]ಲೋ[10]ಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರ ಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಮೆಂತು ಮಬಿಕ್ಕೆ[11]ಮಬ್ಬ[11]ದಿರ್ದೊಡೊರ್ವಂ ಕರಿಯ ಕಚ್ಚುಟಮನುಟ್ಟು ಮೆಯ್ಯೆಲ್ಲಂ ಮಸಿಯಂ ಪೂಸಿ ಬೋೞದಲೆವೆರಸು ಬಾಯೊಳ್ ಕವಡಿಕೆಗಳಂ ಪಲ್ಗಳಂತೆಮಾಡಿ ಕುಂಚಮುಂ ಗುಂಡಿಗೆಯುಮಂ ಪಿಡಿದು ಬರ್ಪೊನನರಸಂ ಕಂಡಿತೆಂದನೆಲೆಯರಸಿ ನಿನ್ನ ಸಹೋದರಂಗಳಪ್ಪ ಭಟಾರರಾ ಬರ್ಪೊರೆಯೆಂದು ಪೇೞ್ದಾಗಳೆಲ್ಲಿರ್ದರೆಂದೆೞ್ದು ನೋಡಿ ಕಾಣದಾ ರೂಪಂ ಕಂಡು ನಕ್ಕು ದುಃಖಮುಂ ಮಱೆ[3]ದೊಳಾಗಳಾ ನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊನಂದಿಂದಿತ್ತ ಬಾದು[12]ಬ್ಬೆ[12]ಯ ಪರ್ವಮುಂ ಪಗರಣದಾಟಪಾಟಮುಮಾದುವು ಮತ್ತೆ ಸ್ವಾಮಿ ಕಾರ್ತ್ತಿಕ ಋಷಿಯರ್ ಮುಡಿಪಿ ದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯಂ ಮಾಡಿ[13]ದೊಡಂದಿಂದಿತ್ತ[13] ಸ್ವಾಮಿಯೆಂಬ ತೀರ್ಥಮಾಯ್ತು ಮತ್ತಿತ್ತ ಕೃತ್ತಿಕೆಯೆಂಬ ಪೊೞಲನಾಳ್ವಗ್ನಿರಾಜ ನೆಂಬರಸಂ ತನ್ನ ಮಗಳಂ ತಾನೆ ಕೊಂಡು ಮೊಱೆ[3]ಯೞಿದನಪ್ಪುದಱಿಂದಲ್ಲಿಯ ಜನಮುಂ

ಶ್ಲೋಕ ॥ ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಸಮಾಶ್ರಿತಾಃ ।
ರಾಜಾನಮನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ ॥

---

1 ಳ್ದುಮಾ (ಕಖಗ). 2 ಪೆಂಬೆಸಸಿಮೆಂ (ಘಚಛ). 3 ನುಮುಂ ಬಗೆಯಲ್ವೇ (ಘಚಛ). 4 ಪರಿತ (ಛ). 5 ವ (ಘಛ). 6 + ಸಮ್ಯಗ್‌ದರ್ಶನಜ್ಞಾನ ಚಾರಿತ್ರಂಗಳಂ ಸಾದಿಸಿ (ಘಚಛ). 7 + ಗೂರ್ಪ (ಘಚಛ). 8 ಳ್ದಿಂ (ಖ). 9 ಗ್ಗಾಸೆ (ಘಚಛ). 10 ರೋ (ಘಛ). 11 ಮಾಣ (ಕಖಗ). 12 ಂಬೆ (ಕಖಗ). 13 + ಸಿಪ್ರತಿಮೆಯುಂ ಸ್ವಾಮಿ ಕಾರ್ತ್ತಿಕ ರುಷಿಯ ರೂಪಂ ಮಾಡಿಸಿ ದೆವಸ ದೆವಸಕ್ಕಮರ್ಚಿಸುತ್ತಿರ್ಕುಮಂದಿಂದಿತ್ತ (ಘಚಛ).

ಎಂದರಸನಂ ಕಂಡು ಪೊಱೆಯಱಿದು ನೆಗ[1]ಟಿಲ್[1] ತಗುಳ್ದೊಡಾ ಪೊೞಲ್ಗೆ [2]ಬೋಗಂ[2]ಕಾರೋಹಣಮೆಂದು ಪೆಸರನಿ[3]ಟ್ಟರಿದು[3] ಸ್ವಾಮಿ ಕಾರ್ತ್ತಿಕ ಋಷಿಯ ಕಥೆ ಮತ್ತೆ ಪೆಱರುಂ ಪರಮ ಸಹಜ ರತ್ನತ್ರಯಂಗಳನಾರಾಧಿಸುವವರ್ಗ್ಗಳ್ ಸ್ವಾಮಿ ಕಾರ್ತ್ತಿಕ ಋಷಿಯರಂ ಮನದೊಳ್ ಬಗೆದೇೞುಂ ಪುಣ್ಣುಂ ವ್ಯಾಧಿಯುಂ ಪಸಿವು ನೀರೞ್ಕೆ ಶೀತವಾತೋಷ್ಣಂಗ[4]ಳುಮಂ[5] ಸೈರಿಸಿ[5] ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

1 ಳ್ತಿ (ಘಚಛ), 2 (ಲೋಕ) ಘಚಛ). 3 ಟ್ಟು ನಿಟ್ಟು (ಕಖಗ). 4 ಳ್ರಂ (ಘ)
5 + ಸಮ್ಯಗ್ದರ್ಶನಜ್ಞಾನಚಾರಿತ್ರಂಗಳಂ ಸಾದಿಸಿ (ಘಛ), + ಮುಡಿಪಿ (ಚ).

## (೧೨) ಅಭಯಘೋಷರೆಂಬ ಮುನಿಯ ಕಥೆ

ಅಭಯಘೋಷರೆಂಬ ಮುನಿಯ ಕಥೆಯಂ ಪೇೞ್ವೆಂ :

ಗಾಹೆ ॥ ಕಾಕಂದಿ ಅಭಯಘೋಸೋ ವಿ ಚಂಡವೇಗೇಣ ಛಿಣ್ಣ ಸವ್ವಂಗೋ ।
ತವ್ವೇದಣ ಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಕಾಕಂದಿ—ಕಾಕಂದಿಯೆಂಬ ಪೊೞಲೊಳ್, ಅಭಯಘೋಸೋ ವಿ—ಅಭಯಘೋಷರೆಂಬ ರಿಸಿಯುಂ, ಚಂಡವೇಗೇಣ—ಚಂಡವೇಗನೆಂಬೊನರಸಿನಿಂದಂ, ಛಿಣ್ಣ ಸವ್ವಂಗೋ—ಕೊಱಿಯೆಪಟ್ಟೆಲ್ಲಾ ಮೆಯ್ಯೆನೊಡೆಯನಾಗಿ, ತವ್ವೇದಣಂ—ಆ ವೇದನೆಯಂ, ಅಧಿಯಾಸಿಯ—ಲೇಸಾಗಿ ಸೈರಿಸಿ, ಪಡಿವಣ್ಣೋ—ಪೊ[1]ರ್ದಿ[1]ದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಕಂ[2]ದಿ[2]ಯೆಂಬುದು ಪೊೞಲದನಾಳ್ವೊನಭಯಘೋಷನೆಂಬೊನರಸನಾತನ [3]ಮಹಾದೇವಿ[3] ಅಭಯಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮರಸಂ [4]ಪೊಱಮಟ್ಟು[4] ಪೊಱವೊೞಲ ಶೋಭೆಯಂ ತೊೞಲ್ದು ನೋಡುತ್ತಿರ್ಪ್ಪನ್ನೆಗಮೊರ್ವ ಮೀಂಗುಲಿ[5]ಗ[5]ನೊಂದಾಮೆಯಂ ಬಾೞಿವಾೞಿ[6] ನಾಲ್ಕು ಕಾಲಂಕಟ್ಟಿ[6] ಬಳ್ಳಿಯಂ ಕೊರಲೊ[7]ಳ್ ತಗುಳ್ಚಿಯೆೞಲೆ ಪಿಡಿದುಕೊಂಡು ಪೊೞಲ್ಗಿದಿರಂ ಬರ್ಪ್ಪೊನನರಸಂ ಕಂಡು ತನ್ನ ಬಿನ್ನಣಮಂ [8]ನೆರೆದ ನೆರವಿಗೆ[8] ಮೆಱಿಯಲ್ವೇಡಿ ಗೆಂಟಱಿಂ ಚಕ್ರದಿಂ ನಾಲ್ಕು ಕಾಲುಮನೊರ್ಮೊದಲೆ ಪಱಿಯಿಟ್ಟೊಡೆ ಮೀಂಗುಲಿಗಂ ಪ್ರಾಣಮುಳ್ಳಂತಿರಾಮೆಯಂ ತನ್ನ ಮನೆಗೆ ಕೊಂಡು ಪೋದೊಡಾ ಇರುಳೊಳಾಮೆ ಪಿರಿದು ವೇದನೆಯಿಂದಂ ನಮೆದು ಸತ್ತಾ ಪೊೞಲೊಳಭಯಘೋಷ ನೃಪತಿಗಭಯಮತಿ ಮಹಾದೇವಿಗಂ ಚಂಡವೇಗನೆಂಬ ಮಗನಾಗಿ ಪುಟ್ಟಿದನಂತವರ್ಗ್ಗಳಿಷ್ಟ ವಿಷಯ ಕಾಮ ಭೋಗ ಸುಖಂಗಳನನುಭವಿಸು[9]ತ್ತಿರ್ಪ್ಪನ್ನೆಗವ[9]

ಮತ್ತೊಂದು ದಿವಸಮರಸನುಮರಸಿಯುಂ ಕರುಮಾಡದ ಮೇಗಣ ನೆಲೆಯೊಳ್ ಭೋಗೋಪಭೋಗ ಸುಖಂಗಳನನುಭವಿಸುತ್ತಂ ವಿನೋದದಿಂದಿರ್ಪ್ಪನ್ನೆಗಂ ಚಂದ್ರಗ್ರಹಣಮಾದುದನರಸಂ ಕಂಡನಿತ್ಯಮಂ ಭಾವಿಸಿಯದುವೆ ವೈರಾಗ್ಯಕ್ಕೆ ಕಾರಣಮಾಗಿ ಚಂಡವೇಗನೆಂಬ ಮಗಂಗೆ ರಾಜ್ಯ[10]ಪಟ್ಟಂಗಟ್ಟಿ[10] ಬಾಹ್ಯಾಭ್ಯಂತರ ಪರಿಗ್ರಹ

---

1 ಳ್ದಿ (ಕಖಗ). 2 ಬಿ (ಖ). 3 ಭಾರ್ಯೆ (ಕಗ). 4 (ಘಚಛ) ಗಳಲ್ಲಿಲ್ಲ. 5 ಕ (ಖಘಚಛ). 6 + ಪಿಡಿದಂ (ಘಚಛ). 7 ಯೊಂದು ಕೈಯೊ (ಕಖಗ). 8 (ಕಖಗ) ಗಳಲ್ಲಿಲ್ಲ. 9 ತ್ತಂ ಪಲಕಾಲಂ ಸಲೆ (ಘಚಛ). 10 ಮಂ ಕೊಟ್ಟು (ಘಚಛ).

[1]ಪರಿತ್ಯಾಗಂಗೆಯ್ದು[1] ‌ನಂದನರೆಂಬಾಚಾರ್ಯರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಮುವರೊಡನಿರ್ದೆಲ್ಲಾ ವೋದುಗ[2]ಳುಮಂ[2] ಕಲ್ತು ಗುರುಗಳಂ ಬೆಸಗೊಂಡವರನುಮತದಿಂದೇಕ ವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೋರ್ ತಮ್ಮ ಮುನ್ನಿನ ಕಾಕಂದಿಯೆಂಬ ಪೊೞಲ್ಗೆ ವಂದುದ್ಯಾನವನದೊಳ್ ವೀರಾಸನ[3]ಮಿ[ರ್ದೊ][3]ರನ್ನೆಗಂ ಮುಸ್ನಾಮೆಯಪ್ಪ ಜೀವನವರ ಮಗನಪ್ಪ ಚಂಡವೇಗಂ ಕರುಮಾಡದ ಮೇಗಣ ನೆಲೆಯೊಳಿರ್ದು [4]ನೋಂಟಕ್ಕೆ ಗೆಂಟು ಪೋಗೆ[4] ಚಕ್ರಮನಿಟ್ಟೊಡಾ ಚಕ್ರಂ ವಂದು ಋಷಿಯರೆರಡು ಕೆಯ್ಯುಂ ಕಾಲ್ಗಳುಮಂ ಮೊಕ್ಕನೆ ಪೋಗೆ ಕೊಂಡೊಡೆ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ವೇದನೆಯಂ ಸೈರಿಸಿ ಶುಭಪರಿಣಾಮದಿಂ [5]ರತ್ನತ್ರಯಮಂ[5] ಸಾಧಿಸಿ ಪದಿನಾಲ್ಕನೆಯ ಪ್ರಾಣತಮೆಂಬ ಕಲ್ಪದೊಳಿರ್ಪ[6]ತ್ತು[6] ಸಾಗರೋಪಮಾಯುಷ್ಯಮನೊಡೆಯೊನಿಂದ್ರನಾಗಿ ಪುಟ್ಟಿದೊಂ

ಮತ್ತೆ ಪೆಱರು[7]ಮಾರಾಧಕರುಂ ರತ್ನತ್ರಯಮನಾರಾಧಿಸುತ್ತಿರ್ದ್ದ[7] ಭವ್ಯರ್ಕಳ ಭಯಘೋಷ ಭಟಾರರಂ ಮನದೆ ಬಗೆದು ಪಸಿವುಂ ತೃಷೆಯುಮೇಱುಂ ವ್ಯಾಧಿಯುಂ ಶೀತವಾತೋಷ್ಣಂಗಳುಮೆಂದಿವು ಮೊದಲಾಗೊಡೆಯ ದುಃಖಂಗಳಂ ಸೈರಿಸಿ [8]ಪರಮಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ[8] ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

1 ಂಗಳಂ ತೊಱೆದು (ಛ). 2 ಳ್ಮಂ (ಕಗ,) ಳಂ (ಘ). 3 ಮಿಳ್ದೊ (ಕಖಗ) ದನಿರ್ದ (ಘಚ), ದೊಳಿರ್ದ (ಛ) 4 ವಿನೋದದಿಂ ಗೆಂಟೆಱೆಕೊಳು (ಘಚ), (ಛ) ದಲ್ಲಿ ನಷ್ಟ. 5 ಮುಡಿಪಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ (ಘಚಛ) 6 ತ್ತೆರಡು (ಛ). 7 ಂ ರತ್ನತ್ರಯಂಗಳಂ ಸಾದಿಸುತ್ತಿರ್ಪ (ಘಚಛ). 8 ಸಮಾಧಿ ಮರಣದಿಂ ಮುಡಿಪಿ (ಘಚಛ).

## (೧೩) ವಿದ್ಯುಚ್ಚೋರನೆಂಬ ರಿಸಿಯ ಕಥೆ

ವಿದ್ಯುಚ್ಚೋರನೆಂಬ ರಿಸಿಯ ಕಥೆಯಂ ಪೇೞ್ವೆಂ :

ಗಾಹೆ ॥ ದಂಸೇಹಿಯ ಮಸಕೇಹಿ ಯ ಖಜ್ಜಂತೋ ವೇದಣಂ ಪರಮಘೋರಂ ।
ವಿಜ್ಜುಚ್ಚೋರೋ ಅಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[ದಂಸೇಹಿಯ—ಚಿಕ್ಕುಟುಗಳಿಂದಂ, ಮಸಕೇಹಿ ಯ—ಗುಂಗುಱುಗಳಿಂದಂ, ಖಜ್ಜಂತೋ—ತಿನೆಪಡುತಿರ್ದೋನಾಗಿ, ವೇದಣಂ—ವೇದನೆಯಂ, ಪರಮಘೋರಂ—ಆದಮಾನುಂ ಕಡಿದಪ್ಪುದಂ, ವಿಜ್ಜುಚ್ಚೋರೋ—ವಿದ್ಯುಚ್ಚೋರನೆಂಬ ರಿಸಿ, ಅಧಿಯಾಸಿಯ—ಲೇಸಾಗಿ ಸೈರಿಸಿ, ಪಡಿವಣ್ಣೋ—ಪೊ[1]ರ್ದಿ[1]ದೊಂ, ಉತ್ತಮಂ ಅಟ್ಠಂ—ಮಿಕ್ಕದರ್ಶನ ಜ್ಞಾನಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವಿದೇಹವೆಂಬುದು ನಾಡಲ್ಲಿ ಮಿಥಿಳೆಯೆಂಬುದು ಪೊೞಲದನಾಳ್ವೊಂ ಪದ್ಮರ[2]ಥ[2]ನೆಂಬೊನರಸ[3]ನ[3] ಸಂತತಿಯಿಂ ಬಂದ ವಾಮರಥನೆಂಬೊನರಸನಾತನ ಮಹಾದೇವಿ ಬಂಧುಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತಾ ಪೊೞ[4]ಲೊಳ್ ಯಮ[4]ದಂಡನೆಂಬೊಂ ತಳಾಱಂ ಮತ್ತಲ್ಲಿ ಇರ್ಪೊಂ ವಿದ್ಯುಚ್ಚೋರನೆಂಬೊಂ ಕಳ್ಳನಾತಂ ಜೃಂಭಿನಿ ಸ್ತಂಭಿನಿ ಮೋಹಿನಿ ಸ[5]ರ್ಷಪಿ[5] ತಾಳೋದ್ಘಾಟನಿ ವಿದ್ಯಾಮಂತ್ರ[6] ಚೂರ್ಣ ಯೋಗ ಘುಟಿಕಾಂಜನಮೆಂದಿವು ಮೊದಲಾಗೊಡೆಯ ತಸ್ಕರಶಾಸ್ತ್ರಂಗಳೊಳಾದಮಾನುಂ ಕುಶಲನಂತಪ್ಪ ಕಳ್ಳಂ ಪೊೞಲ ಕಸವರಂಗಳ ನಿರುಳ್ ಕ[7]ಳ್ದು[7] ಪೊೞಲ್ಗೆ ನಾಡೆಯಂತರದೊಳೊಂದು ಪರ್ವತಮುಂಟಲ್ಲಿ ಪಿರಿದೊಂದು ಗುಹೆಯುಂಟದಱೊಳಗೆ [8]ಕಳ್ದ[8] ಕಸವರಂಗಳೆಲ್ಲಮಂ ಪೂೞ್ದಿಟ್ಟು ಗುಹೆಯ ಬಾಗಿಲಂ ಪಿರಿದೊಂದು ಸಿಲೆಯಂ ತಂದಿಟ್ಟು ಮುಚ್ಚಿ ಬಂದು ಪಗಲೆಲ್ಲಂ ಪಾೞ್ದೇಗುಲದೊಳಂಜನಮನೆಚ್ಚಿ ತಾಂ ತೊನ್ನನಾಗಿ ಮುರುಂಟಿದ ಕೈಯುಂ ಕಾಲುಂ ಬೆರ[9]ಸು ಮೂಗೊಳಗರ್ದು[9] ರಸಿಗೆ ಸುರಿಯೆ ನೊೞವುಗಳ್ ಮುಸುಱ[10]ಕೊಂಡು[10] ತಿನೆ[11] ಪೇಸಿದ[11]ನಾಗಿ ಲೋಗರ ಮನೆಗಳೊಳ್ ಭೈಕ್ಷಮಂ ಬೇಡಿ ಮನೆಮನೆಯಂ ತೊೞಲ್ದು ತನ್ನ [12]ತೊನ್ನುಗೊಂಡಿರ್ಪುದನಱಿಪುತ್ತುಮಿಂತು ಪಗಲೆಲ್ಲಮಿರ್ದಿರುಳಪ್ಪಾಗಳ್ ದಿವ್ಯಮಪ್ಪ ತನ್ನ ಸ್ವಾಭಾವಿಕಮಪ್ಪ ಮುನ್ನಿನ ರೂಪಂ ಕೈಕೊಂಡು

---

1 ಕ್ಷಿ (ಕಖಗ). 2 ದರ (ಛ). 3 + ನಾತ (ಘಚ). 4 ಲ ಕಾವೊಂ ಜವ (ಘಚಛ). 5 ರ್ಷಪ (ಖ), ರಿಷಪ (ಘಚ), ರಿಷ ಪಾ (ಛ). 6 + ಯಂತ್ರ (ಘಚಛ). 7 ರ್ದು (ಚ) 8 ಕಳ್ದು ತಂದು (ಘಚ), ಕಳ್ದು ಕಳ್ದು ತಂದ (ಚ). 9 ಸೂರೊಳಗಿರ್ದು (ಕಖಗ). 10 ಕಡಿಯೆ(ಕಖಗ). 11 ದೇಸಿಗ(ಘಚಛ). 12 ಮಱುಯಿಸುತ್ತುಂ (ಕಗ), ಮಱುಯುತ್ತಂ(ಖ).

ಪುಟ್ಟೆಗೆಯನುಟ್ಟು ಮೆಯ್ಯಂ ಪೂಸಿ ಪೂವಂ ಮುಡಿದು ಕರ್ಪೂರ ಸಂಮಿಶ್ರಿತಮಪ್ಪ ತಂಬುಲಂದಿನುತ್ತುಂ ಸೂಳೆಗೇರಿಗಳಂ ತೊೞಲ್ದು ತನ್ನಂ ಮೆಱೆಯುತ್ತಂ[12] ಮನಕ್ಕೆ [1]ವಂದಗ್ಗಳದೊ[1]ಳ್ಪೆಂಡಿರೊಳೊತ್ತೆಯನಿಟ್ಟು ಭೋಗೋಪಭೋಗಂಗಳ್ಗೆ ಕಸವರಮಂ ಕೊಟ್ಟನುಭವಿಸುತ್ತಮಾರುಮಱಿಯದಂತಿ[2]ರ್ದು[2] ಬಚ್ಚರ ಮೂಸಿಗರ [3]ನಿಯೋಗಿಗಳ ಅಗ್ಗಯಿಲೆಯರಪ್ಪ[3] ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಳ್ದು ಮತ್ತೊಂದು ದಿವಸಂ[4] ಪದ್ಮರಥಂಗೊಸೆದಚ್ಯುತೇಂದ್ರನಟ್ಟಿದ ದಿವ್ಯಮಪ್ಪ ಸರ್ವರುಜಾಪಹಾರ ಮೆಂಬ ಹಾರಂ ಸಂತತಿಯಿಂ ವಾಮರಥಂಗೆ ಬಂದುದಂ ವಾಮರಥಂ ಕರುಮಾಡ ದೇೞನೆಯ ನೆಲೆಯೊಳ್ ತನ್ನ [5]ಉಂದುವೋವರಿಗೆಯ[5] ಪುಡಿಕೆಯೊಳಿಟ್ಟೆಲ್ಲಾ ಕಾಲಮುಂ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚಿಸುತ್ತಂ ಪೊಡೆಮಡುತ್ತ ಮಿರ್ಕ್ಕುಮಿಂತಪ್ಪ ಹಾರಮಂ ವಿದ್ಯುಚ್ಚೋರನಂಜನಮಂ ಕಣ್ಣೊಳೆಚ್ಚಿಯಾರುಂ ತನ್ನಂ ಕಾಣದಂ[6]ತಾಗಿರೆ ಅರಮನೆಯಂ[6] ಪೊಕ್ಕರಸನ [7]ಮಱಲುಂದುವೋ[7]ವರಿಯಂ ಪೊಕ್ಕು ತಲೆದೆಸೆಯೊಳರ್ಚಿಸಿರ್ದ ಪುಡಿಕೆಯಂ ತೆಱೆದು ಹಾರಮಂ ಕೊಂಡರಮನೆಯಿಂ ಪೊಱಮಟ್ಟು ಪೋಗಿ ಪೊಱವೊೞಲ ಗುಹೆಯೊಳ್ ಪೂೞ್ದಿಟ್ಟು ಪೊೞಲ್ಗೆವಂದು ಮುನ್ನಿನಂತೆ ತೊನ್ನರೂಪಂ ಕೈಕೊಂಡಿ[8]ರ್ದಂ[8]

ಮತ್ತಿತ್ತರಸಂ ನೇಸರ್ಮೂ[9]ಡೆ[9] ಹಾರಮಂ ಕಾಣದೆ ಆಸ್ಥಾನಮಂಟಪದೊಳ್ ಸಿಂಹಾಸನಮಸ್ತಕಸ್ಥಿತನಾಗಿ[10]ರ್ದು[10] ತಳಾಱನಪ್ಪ [11]ಯಮ[11]ದಂಡಂಗೆ ಬೞಿಯಟ್ಟಿ ವರಿಸಿ ಇಂತೆಂದನೆಲವೊ ಯಮದಂಡಾ ಪೊೞಲ ಪಾರ್ವರ [12]ಪರದರ[12] ಸೂಳೆಯರ [13]ಒಕ್ಕಲ ಮಕ್ಕಳ[13] ಕಸವರಮೆಲ್ಲಮಂ ಕಳ್ದೊಡಮಾರಯ್ಯದೆ ಕೆಮ್ಮಗಿರ್ಪೆಯಲ್ಲದೆ ಯುಮೆಮ್ಮ ಸೆಜ್ಜೆಯೋವರಿಯಂ ಕಳ್ಳಂ ಪೊಕ್ಕು ಪುಡಿಕೆಯಂ ತೆಱೆದಚ್ಯುತೇಂದ್ರ ನಿತ್ತ ಕುಲಧನಮಪ್ಪ ಹಾರಮಂ ಕೊಂಡುಪೋದಂ ಬೇಗಂ ಕಳ್ಳನನಾರಯ್ದು ಹಾರಮಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿ ದಪ್ಪೆನೆಂದೊಡೆ ತಳಾಱನೆಂದಂ ದೇವಾ ಏೞುದಿವಸಮೆನಗೆಡೆಯನೀವುದೇೞುದಿವಸ ದಿಂದೊಳಗೆ ಕಳ್ಳನನಾರಯ್ಯಲಾಱದಾಗಳ್ ದೇವರೆನ್ನಂ ಮೆಚ್ಚುಕೆಯ್ವುದೆಂದೊಡರಸ ನಂತೆಗೆಯ್ಯೆಂದೊಡರಮನೆಯಿಂದಂ ಪೊಱಮಟ್ಟು ಪೊೞಲೊಳಗೆ ಸೂಳೆಗೇರಿಗಳೊಳ ಮಂಗಡಿಗಳೊಳಂ [14]ಬಸದಿಗಳೊಳಂ ವಿಹಾರಂಗಳೊಳಂ ಕೇರಿಗಳೊಳಮಾರಮೆ ಗಳೊಳಂ ದೇವಾಲಯಂಗಳೊಳಂ[14] ಪೊಱವೊೞಲೊಳಂ ಕೆಲದ ಪೊೞಲ್ಗಳೊಳ ಮೇೞುಂ ದಿವಸಂ[15] ನಿರಂತರಮಾರಯ್ದೆಲ್ಲಿಯುಂ ಕಾಣದೇೞನೆಯ ದಿವಸ ದಂದು ಪಾೞ್ದೇಗುಲದೊಳಿರ್ದು ತೊನ್ನಂ ಪೋಪಾಗ[16]ಳ[ಳಿ]ಱು[16]ವಳ್ಳಮಂ

1 ಮೆಚ್ಚಿದಾಗಳೊ (ಕಖಗ). 2 ಳ್ದು (ಕಖಗ). 3 ನಿಯೋಗಿಗಳಗ್ಗಳಮಪ್ಪ (ಕಖಗ). 4 + ಪೂರ್ವದೊಳ್ (ಘಚಛ). 5 ಪವಡಿಪೋವರಿಯಲ್ (ಘಚಛ). 6 ತದೃಶ್ಯರೂಪದಿಂ (ಘಚಛ). 7 ಪವಡಿಪೋ (ಘಚಛ). 8 ಳ್ದಂ (ಕಗ). 9 ಡಿದಿಂ ಬಳಿಕ್ಕೆ (ಘಚಛ). 10 ಳ್ದು (ಕಗ). 11 ಜವ (ಘಚಛ), ಮುಂದೆಯೂ ಈ ಪ್ರತಿಗಳ ಪಾಠ ಹೀಗೆ. 12 (ಕಖಗ) ಗಳಲ್ಲಿಲ್ಲ. 13 ಏರಣಿಗರ (ಘಛ), (ಚ) ದಲ್ಲಿ ತ್ರುಟಿತ. 14 ದಿಂಟೆಗಳೊಳಂ ದೇಗುಲಂಗಳೊಳ ವಿಹಾರಂಗಳೊಳಂ ಕೆಱೆ ತೊಱೆಗಳೊಳಂ (ಘಚಛ). 15 + ಕಳ್ಳನಂ (ಘಚಛ). 16 ಪಿರಿದೊಂದು, ಕಿಱು (ಕಖಗ) ಅಱುಱು (ಘಚಛ).

[1]ಕಂಡದಂ ವಿದ್ಯಾಧರ[1]ಕರಣದಿಂ ಲಂಘಿಸಿ ಪೋಪುದಂ ಯಮದಂಡಂ ಗೆಂಟಱೊಳಿರ್ದು ಕಂಡಿವನೆ ಕಳ್ಳನೆಂದು ನಿಶ್ಚಯಿಸಿ ಪಿಡಿದರಮನೆಗೆ ಪುಯ್ಯಲಿಡೆಯಿಡೆ ಕೊಂಡುಪೋ[2]ಗಿಯ[2]ರಸಂಗೆ ಕಳ್ಳನಂ ತಂದೆ[3]ನೆಂದು[3] ತೋಱಿ ಈತಂ ಕಳ್ಳನೆಂದರಸಂಗೆ ವೇೞ್ದೊಡೆ ತೊಣ್ಣನಿಂತೆಂದಂ

ದೇವಾ ನಾಂ ಕಳ್ಳನಲ್ಲದುದಱ್ಕೆ ಪೊೞಲೆಲ್ಲಮಱಿಗುಂ ಕಳ್ಳನಾರಯ್ಯಲಾಱದೆನ್ನಂ ತನ್ನ ಸಾವಿಂಗಂಜಿ ಬಡವನಂ ದೇಸಿಗನಂ ಪೊೞಲೊಳ್ ಜೈಕಂದಿರಿದುಂಡು ಬಾೞ್ವನಂ ಪಿಡಿದುಕೊಂಡು ಬಂದು ಕೊ[4]ಲಿಸಿ[4]ದಪ್ಪನೆಂದೊಡೆ ತಳಾಱಂ ಕಳ್ಳರನಾರಯ್ವ ಶಾಸ್ತ್ರಂಗಳೊಳಾದಮಾನುಂ ಕುಶಲನಪ್ಪುದಱಿಂದರಸಂಗಿಂತೆಂದ ನೀತಂ ತನ್ನ ರೂಪುಗರೆದಿರುಳ್ ಪೊೞಲೆಲ್ಲಮಂ ಕಳ್ದು ದಿವಸಕ್ಕೀ ಪಾಂಗಿನೊಳ್ ತೊಣ್ಣನಾಗಿರ್ಪೊಂ ನೀಮುಂ ನಂಬದಾಗಳ್ ಪ್ರತ್ಯ[5]ಯಮಂ[5] ಮಾಡಿ ತೋರ್ಪೆನೆಂದಾಗಳ್ ಪ್ರತಿಘುಟಿಕಾಂಜನಂಗಳಂ ತೊಣ್ಣನ ಕಣ್ಣಿನೊಳೆಚ್ಚಿದೊಡೆ ದಿವ್ಯಮಪ್ಪ ತನ್ನ ಮುನ್ನಿನ ರೂಪಾ[6]ಗಿ[ರ್ದಿ]ಂತೆಂದನೀ[6]ತಂ ಘುಟಿಕಾಂಜನ ಕುಹಕಂ ಇಂದ್ರಜಾಲಂಗಳಂ ಬಲ್ಲೊನಪ್ಪುದಱಿಂದೆಲ್ಲಾ ರೂಪುಗಳಂ ಮಾಡಲ್ ಬಲ್ಲೊನೆಂದೊಡೆ ತಳಾಱನೆಂದಂ ಪೆಱರ್ಗೆ ಮಾಡೀ ಪ್ರತ್ಯಯಮಂ ತೋರ್ಪೆನೆಂದರಸನನುಮತದಿಂದರಸಿಯರ ಸೂಳೆಯರ ಕಣ್ಗಳೊಳ್ ಘುಟಿಕಾಂಜನಂಗಳನೆಚ್ಚಿದೊಡನಿಬರುಂ ತೊಣ್ಣೆಯರಾಗಿರ್ಪರನ್ನೆಗಂ

ಮತ್ತಂ ಬೞಿಕ್ಕೆ ಪ್ರತಿಘುಟಿಕಾಂಜನಂಗಳನೆಚ್ಚಿದೊಡೆ ಸ್ವಾಭಾವಿಕಮಪ್ಪ ತಮ್ಮ ಮುನ್ನಿನ ರೂಪುಗಳಂ ಕೈಕೊಂಡಿರ್ದೊರಾಗಳರಸಂಗೆ ನಂಬುಗೆಯಾಗಿ ನೆಟ್ಟನಿವಂ ಕಳ್ಳನಪ್ಪೊನೀತನಂ ದಂಡಿಸೆಂದು ಯಮದಂಡಂಗೆ ಬೆಸವೇೞ್ದೊಡಾತನಂತೆ ಗೆಯ್ವೆನೆಂದಾತನಂ ತನ್ನ ಮನೆಗೊಡಗೊಂಡು ಪೋಗಿ ಮಾಘಮಾಸದಿರುಳ್ ಕಡುಸೀತದೊಳ್ ಘೋರಮಪ್ಪ[7] ಮೂವತ್ತೆರಡು ದಂಡಣೆಗಳಿಂ ನೀಡುಂ ದಂಡಿಸೆಯುನಿತುಮಂ ಬಾೞಿವಾೞಿ ಅವಯವದೆ ಸೈರಿಸಿ[8]ಯುಂ[8] ಕಳ್ಳನಲ್ಲೆನಯ್ಯಾ ಬಲ್ಲಾಳ್ತನದಿಂದೆನ್ನಂ [9]ತಳಾಱಂ[9] ಕೊಂದಪ್ಪನೆಂದೊಳಱಿ ಪುಯ್ಯಲಿಡೆ ತಳಾಱಂಗೆ ಕಳ್ಳನೀತನಲ್ಲೆಂಬುದೊಂದು ನಂಬುಗೆಯಾಗಿ ನೇಸಱ್ ಮೂ[10]ಡೆಯ[10]ರಮನೆಗೆ ಪೋಗಿ ಅರಸಂಗಿಂತೆಂದು ಬಿನ್ನಪಂಗೆಯ್ದಂ

ದೇವಾ ಮೂವತ್ತೆರಡು ಘೋರಮಪ್ಪ ದಂಡಣೆಗಳಿಂದಂ ಕಳ್ಳನಂ ದಂಡಿಸಿ ನೋಡಿದೆನಾತನಮೋಘಂ ಕಳ್ಳನಲ್ಲೆನ್ನಂ ದೇವರ್ ಮೆಚ್ಚುಕೆಯ್ವುದೆಂದೊಡರಸಂ ಶ್ಮಶಾನದ ಸೂಲದೊಳ್ ಯಮದಂಡನನಿಕ್ಕಿಮೆಂದಾ[11]ಳ್ಗಳ್ಗೆ[11] ಬೆಸವೇೞ್ದೊಡವರುಮಾತನಂ ಶ್ಮಶಾನಕ್ಕೆೞೆದುಕೊಂಡು ಪೋಗಿ ದರ್ಕ್ಕಂ ಬಸಿದು ಸೂಲದೊಳಿಕ್ಕುವಾಗಳವರೊಡವೋಗಿ ತೊಣ್ಣಂ ರೂಪಪರಾವರ್ತನಂಗೆಯ್ದು ತನ್ನ ಸ್ವಾಭಾವಿಕಮಪ್ಪ

---

[1] ವಿದ್ಯುಚ್ಚೋರಂ ವಿದ್ಯುತ್ (ಕಖಗ). [2] ಪರನ್ನೆಗಮ (ಕಖಗ), [3] + ತೊಣ್ಣರ್ನಂ (ಘ), ತೊಣ್ಣನಂ (ಚ). [4] ಸಲ್ ಬಗೆ (ಘಚಛ). [5] ಕ್ಷಂ (ಘಚಛ). [6] ಳಿಂತೆಂದನೀ (ಕಖಗ); ದರ್ದಂ ಕಂಡಿರೆಯಿಱಾ (ಘಚಛ). [7] + ಕಳ್ಳನಂ (ಕಖಗ). [8] ಯಾಂ (ಘಚಛ) [9] (ಘಚಛ) ಗಳಲ್ಲಿಲ್ಲ. [10] ಡುವುದುಮ (ಘಚಛ). [11] ಗಳ್ (ಕಖಗ).

ವಿದ್ಯುಚ್ಚೋರನಪ್ಪ ದಿವ್ಯರೂಪಂ ಕೈಕೊಂಡು ಸೂಲದೊಳಿಕ್ಕಲೀಯದೆ ಅಡ್ಡ[1]ವಾಗಿರ್ದ[1]ರಸನ ಕಾಪಿನವರಸೆಂದನೆಲೆಯಣ್ಣಗಳಿರಾ ನೀವೀತನಂ ಕೊಂದಿರೀತನುಂ ಸೂಲದೊಳಿಕ್ಕೆ ಪಟ್ಟನಾಗಿ ಸತ್ತ್ರವನೆಂದವರೊಳ್ ನುಡಿದು ತಳಾಱನನಿಂತೆಂದ ನೆಲೆ ಗಳಾ ಯಮದಂಡಾ ನೀನುಮಾನುಂ ಕಿಱಿಯಂದೊರ್ವರುಪಾಧ್ಯಾಯರ ಪಕ್ಕದೊಳೋದುವಂದು ನಂದನವನದೊಳಗೆ ನೀನೆನ್ನ ಪೂಣ್ದ ಪ್ರತಿಜ್ಞೆಯಂ ನೆನ[2]ದಾಒಂದುಂ ದೋಷಮಿಲ್ಲದೆ ನಿನ್ನಂ ಕೊಲಿಸಿದೆನೊ ಕೊಲಿಸೆನೊ ಪೂಣ್ದ ಪ್ರತಿಜ್ಞೆಯಂ ನೆನೆವೆಯೊ ನೆನೆಯೆಯೊ ಎನೆ ಯಮದಂಡನೊಳ್ಳಿತ್ತಾಗಿ ನೆನೆದೆನೆಂದೊಡೆ[2] ವಿದ್ಯುಚ್ಚೋರನಿಂತೆಂದಂ ಮತ್ತೀಗಳ್ ನೀನೇನ್ ಸತ್ತೆಯೊ ಸಾಯೆಯೊ ಮ[3]ತ್ತೇನೊ[3] ಎಂದಾಗಳ್ ಯಮದಂಡನೆಂದಂ ದೇವಾ ನೀಂ ಗೆಲ್ದೆಯಾಂ ಸೋಲ್ತೆ[4]ನುಂ ಸತ್ತೆನುಮೆಂದಿರ್ವರ್ ಪದಿರಿನಿಂ[4] ನುಡಿವ ಸೂೞ್ಮಾತುಗಳಂ ಕಾಪಿನವರುಂ ಪೊೞಲ ಜನಮುಂ ಕೇಳ್ದು ಚೋದ್ಯಂಬಟ್ಟು ಬೆಱಗಾಗಿರ್ದೊಡೆ ವಿದ್ಯುಚ್ಚೋರಂ ಕಾಪಿನವರನಿಂತೆಂದ ನೆನ್ನುಮನೀತನುಮನರಸನಲ್ಲಿಗೆ ಕೊಂಡುಪೋಗಿಮರಸನ ಮುಂದೀತಂಗಮೆನಗಂ ಮಾತುಂಟಲ್ಲಿ ನುಡಿದ ಬೞಿಕ್ಕರಸನೀತನಂ ಮೆಚ್ಚುಕೆಯ್ಗೆ [5]ಎಂತುಂ ಕೊಲವೇೞ್ದೊಡಂ[5] ಮೂಱು ಸೂೞ್ ಬೆಸಗೊಂಡಲ್ಲದೆ ಕೊಲಲಾಗದೆಂದು ನೀತಿಶಾಸ್ತ್ರದೊಳ್ ಪೇೞ್ದುದಱಿಂದೆಮ್ಮಿರ್ವರುಮನರಮನೆಗೆ ಕೊಂಡುಪೋಗಿ ಅರಸಂಗೆ ತೋಱಿಮೆಂದೊಡಾ ಕಾಪಿನವರಿರ್ವರುಮನರಸನಲ್ಲಿಗೆ ಕೊಂಡುಪೋಗಿ ಇಂತೆಂದು ಬಿನ್ನಪಂಗೆಯ್ದರ್ ದೇವಾ ಈತಂ ಯಮದಂಡನಂ ಕೊಲಲೀಯದೆ ಬಾರಿಸಿದನೆಂದು ವಿದ್ಯುಚ್ಚೋರನಂ ತೋಱಿ ನುಡಿದೊಡರಸನೇಕೆ ನೀಂ ಬಾರಿಸಿದೆಯೆಂದು ಬೆಸಗೊಂಡೊಡೆ ವಿದ್ಯುಚ್ಚೋರನೆಂದಂ

ಯಮದಂಡಂಗೇನುಂ ಪೊಲ್ಲಮೆಯುಂ [6]ದೋಷ[6]ಮುಮಿಲ್ಲ ನಿಮ್ಮ ದೇವತಾ ರಕ್ಷಿತಮಪ್ಪ ಸರ್ವರುಜಾಪಹಾರಮೆಂಬುದು ಮೊದಲಾಗಿ ಪೊೞಲ[7] ಕಸವರಮನಿರುಳೀ ರೂಪಿನೊಳ್ ಕಳ್ದು ಪಗಲೆಲ್ಲಂ ತೊನ್ನನಾಗಿ ಪಾೞ್ದೇಗುಲದೊ[8]ಳಿ[8]ರ್ಪೆನದಱಿಂದೆನ್ನಂ ಕೊಲ್ಲಿಮೀತಂಗೇನುಂ ದೋಷಮಿಲ್ಲೆಂದೊಡರಸನೆಂದನಾ ಕಳ್ದ ಕಸವರಮನೆಲ್ಲಮನೇಗೆಯ್ದೆಯೆಂದು ಬೆಸಗೊಂಡೊಡನಿತುಮಿರ್ದುವಯ್ನೂಸಿರಮಱುಸಾಸಿರ ದೀನಾರ [9]ಮೆ[9]ನ್ನ ಸೂಳೆಗೆ ಬಿಯ[10]ಮಾದುದು[10]ೞಿ[11]ದು[11]ವೆಲ್ಲ[ಂ]ವಣ್ಣ[ಂ]ಚಳಿಯದಿ[11]ರ್ದುದೆಂದೊಡರಸಂ ವಿದ್ಯುಚ್ಚೋರನಂ ಹಾರಮುಂ ಕೊಂಡು ಬಾ ಪೊೞಲವಗ್ಗ೯ಂ ಕಸವರಮಂ ಮಡಗಿದೆಡೆಯಂ ತೋಱಿಂದಾತನೊಡನೆ ಪೊೞಲ ಜನಮುಮನಟ್ಟಿ ಕಾಪುವೆರಸು ಪೋಗಿ ಪೊೞಲ್ಗೆ ನಾಡೆಯಂತರದೊಳ್ ಪಿರಿದೊಂದು ಪರ್ವತಮುಂಟಲ್ಲಿ

---

[1] ವಾಗಿಲ್ದ (ಕಖಗ), ಮಿರ್ದು (ಘಚ). [2] ವೊ ಎನೆ ಜಮದಂಡನೊಳ್ಳಿತ್ತಾಗಿ ನೆನೆವೆನೆನೆಂದೊಡೆ (ಘಚಛ). [3] ತ್ತೆನ್ನ ಪೂಣ್ದಪ್ರತಿಜ್ಞೆ ಸಂದುದೊ ಸಲ್ಲದೊ ನಿನ್ನಂ ಕೊಲಿಸಿದೆನೊ ಕೊಲಿಸೆನೊ (ಘಚಛ). [4] ನೆಂದಿಂತಿರ್ವರುಂ (ಘಚಛ). [5] ಯುಂತುಂ ಕೊಲವೇೞ್ದೊರಂ (ಚಛ), ಯ್ಗತಂಕೊಲಲ್ ಪೇೞ್ದರಂ (ಘ). [6] ಪಾಪ (ಘಚಛ). [7] + ಜನಂಗಳ (ಘಚಛ). [8] ಳ್ದಿರಿದುಂಡಿ (ಚ). [9] ಮನೆ (ಘಚಛ). [10] ಂ ಮಾಡಿದೆನು (ಘಚಛ). [11] ದೆಲ್ಲನಣ್ಣವಳಿಯದಿ (ಕಗ), ದೆಲ್ಲಮಣ್ಣ ಮಱೆಯಲಿ (ಘಚಛ).

ಯೊಂದು ವಿಸ್ತೀರ್ಣ ಗುಹೆಯುಂಟದಱ ಬಾಗಿಲಂ ಮುಚ್ಚಿರ್ದ ಪಿರಿಯ ಸಿಲೆಯಂ ಕಳೆದವಱೊಳಗೆ ಪೊಕ್ಕು ಹಾರಮುಂ ಕೊಂಡು *ಪ್ರೊಬಿಲ ಜ[1]ನಮೆಲ್ಲಮನೆಂದಂ ನಿಮ್ಮ ನಿಮ್ಮ ಕಸವರಮುಪ್ಪುದನಾರಯ್ದು[1] ಪಲ್ಲಟಿಸಲೀಯದೆ ನೋಡಿಕೊಳ್ಳಿಮೆಂದು ತೋಱಿದೊಡವರುಂ ತಂತಮ್ಮ [2]ಕಸವರಮನೆಲ್ಲಮನಾರ[2]ಯ್ದು ಕೊಂಡರ್ ಮತ್ತೆ ವಿದ್ಯುಚ್ಚೋರನುಂ ಹಾರಮುಂ ಕೊಂಡು* ಪೋಗಿಯರಸಂಗೊಪ್ಪಿಸಿದೊಡರಸ ನಿಂತೆಂಸು ವಿದ್ಯುಚ್ಚೋರನಂ ಬೆಸಗೊಂಡಂ ಮಾಘಮಾಸದಿರು[3]ಳಿನ[3] ಸೀತದೊಳ್ ನಾಲ್ಕು ಜಾವಮುಂ ಮೂವತ್ತೆರಡುಂ ಘೋರಮಪ್ಪ ದಂಡಣೆಯನೆಂತು ಸೈರಿಸಿದೆ ಯೆಂದೊಡಾತನಿಂತೆಂದರಸಂಗೆ ಪೇೞ್ಗುಂ

ದೇವಾ ಒಂದು ದಿವಸಂ ಸಹಸ್ರಕೂಟ ಚೈತ್ಯಾಲಯಕ್ಕೆ ಕಿಱಿಯಂದೆನ್ನ ನೋದಿಸುವೋಜರುಮಾನುಂ ಪೋಗಿ [4]ಓಜಂ[4] ದೇವರಂ ಬಂದಿಸುವನ್ನೆಗಂ ಚರಿತ ಪುರಾಣಂಗಳಂ ವಖ್ಖಾಣಿಸುತ್ತಿರ್ದ ಶಿವಗುಪ್ತರೆಂಬಾಚಾರ್ಯರ ಪಕ್ಕದೆ ಕುಳ್ಳಿರ್ದು ವಖ್ಖಾಣೆಯಂ ಕೇಳುತ್ತಿರ್ಪನ್ನೆಗಂ ನರಕವ್ಯಾವರ್ಣನೆ[5]ಯನಾ[5] ಭಟಾರರಿಂತೆಂದು ಪೇೞ್ವುದಂ ಕೇಳ್ದೆಂ ವ್ರತಶೀಲ[6]ಚಾರಿತ್ರ ಗುಣಂಗಳನಿಲ್ಲದವರುಂ[6] ಜೀವಂಗಳಂ ಕೊಲ್ವರುಂ ಬೇಂಟೆಯಾಡುವರುಂ ರಾಗದ್ವೇಷ ಲೋಭಂ ಕಾರಣಮಾಗಿ ಪುಸಿ ನುಡಿದು ಜೀವಂಗಳ್ಗೆ ಸಂತಾಪ[7]ಮುಂ ವಧೆಯು[7]ಮಂ ಮಾಡಿಸು[8]ವರುಮಾಱಿಡಿ[8] ಗೊಳ್ವರುಂ ಕಳ್ವರುಂ ಪೆಱರ ಪೆಂಡಿರೊಳ್ ಮಱು[3]ವಾೞ್ವರುಮಪರಿಮಿತ ಪರಿಗ್ರಹಮುಂ ನೆರಪುವರುಂ ಮತ್ತಂ ಮಧುಮದ್ಯಮಾಂಸಂಗಳುಮುಯ್ದು ಪಾಲ್ಮರದ ಪಣ್ಗಳು ಮಾಳಂಬೆಯುಂ[9] ಪಣಂಬಿನ ಪೂವುಮೆಂದಿವಂ ಸೇವಿಸುವರುಂ ಮ[10]ತ್ತಮಮೋಘ[10] ಮಪೇಯಪೇಯಮಭಕ್ಷ್ಯಭಕ್ಷ[11]ಮೆಂದಿವಱೊಳ್ ನೆಗೞ್ವರುಂ ಪಂಚ ಮಹಾ ಪಾತಕಂಗ[12]ಳಂ ಗೆಯ್ದೊರುಮಿವರೆಲ್ಲಂ[12] ನಿವೃತ್ತಿ ಪರಿಣಾಮಮಿಲ್ಲದೆ ಕಾಲಂ ಗೆಯ್ದೇೞಿಂ ನರಕಂಗಳೊಳ್ ಪುಟ್ಟಿ ದುಃಖಂಗಳನೆಯ್ದುವರ್

ಗಾಹೆ ॥ ಅಚ್ಛಿಣಿಮಿಳಣ ಮೆತ್ತಂ ಣತ್ಥಿ ಸುಹಂ ದುಖ್ಖಮೇವ ಅಣುಬದ್ಧಂ।
ಣಿರಯೇ ಣಿರಯಿಯಾಣಂ ಅಹಣ್ಣಿಸಂ ಪಚ್ಚಮಾಣಾಣಂ ॥

ವೃ ॥ ಕರಜ ನಿವೇಶಿತ ತೀಕ್ಷ್ಣ ಶಲಾಕಾಃ
ಕ್ರಕಚ ವಿಪಾಟಿತ ಭಿನ್ನ ಶರೀರಾಃ ।
ನರಕ ಭವೇ ವಿರಸಾ ವಿಷಹಂತೇ
ಚಿರಮುಪಿ ತತ್ಕ್ಷಣ ದುಃಖವಿಷಾದಂ ॥

ಮತ್ತಂ

---

** (ಕಗ) ಪ್ರತಿಗಳಲ್ಲಿಲ್ಲ. 1 ನಂಗಳಂನಿಂನಿಂಮ ಕಸವರಮುಂ (ಘಚಛ). 2 ಮನಾ (ಘಚಛ). 3 ೞಿ (ಕಖಗ). 4 (ಘಚಛ) ಗಳಲ್ಲಿಲ್ಲ. 5 ಯೆಡೆಯಂ (ಘಚಛ). 6 ಗುಣಂಗಳಿಲ್ಲದ (ಕಖಗ). 7 ಮುಮಾಪತ್ತು (ಘಚಛ). 8 ಮಾಡಿ (ಕಗ). 9 + ಜೇನೆಯ್ಯುಂ (ಘಚಛ). 10 ತ್ತಂಗಮ್ಯಾಗಮ್ಯ (ಘಚ). 11 + ವ್ಯಾಚ್ಯಾವಾಚ್ಯ (ಘಚಛ). 12 ಳ್ ಮೊದಲಾಗೊಡೆಯಪಲತೆಱದ ಪಾಪದ ಫಲದಿಂದೆಯ್ದುವರೆಲ್ಲಂ (ಘಚಛ).

ಕಂ || ಇಱಿ [1]ಕಿಱುದನೊದಱು[1] (?) ಕೈರಂ
ದಱಿ ಮುಱಿ ನಿಟ್ಟೆ[2]ಲ್ವನರಿದು[2]ನೆಱ[3][ನೆ]ಡೆ[3]ಗಳ್ ಬಾ
ಯ್ಧ ಱ[3][4]ಯೆ[4] ಪೊಸವುಣ್ಣಳೊಳ್ ಪೊಯ್
ಮಱು[5]ಗುವಿನಂ[5] ಲೋಹ[6]ವಾರಿಯಂ[6] ಮಱುಗುವಿನಂ ||

ಕಡಿ ಕಟಿವಮನುಡಿ ತೊಡೆಯುಂ
ನಡನಡ ನಡುಗುವಿನಮುಡಸಿ ತಡೆಯದೆ ಖಳನಂ
ಪಿಡಿದುಡಿಯೆ ಕಟ್ಟು ಮಿಡ ಮಿಡ
ಮಿಡುಕುವಿನಂ ಬಡಿಯೊಳೊಡೆಯೆ ಪೊಡೆ ಪೆಡತಲೆಯುಂ ||

[7]ಬಡಿ ಕೊಲ್ ಕಟ್ಟೆಱ[7] ಮುಱಿ [8]ಕಡಿ[8]
ನಡುವಂ [9]ಕೊ[9]ಱ[3] [10]ಕುತ್ತಿ[10] ಕುರುಳ್ಗಳಂ ತೆಗೆ ಮೊಗಮಂ
ಸುಡು ಪಿಡಿ ಬಡಿ ನಿಮಿರ್ದಿಱು ಬರ್ಯ್
ಕಡಂಗಿ ನುಂಗೆಂದು ಮುಸುಱಿ ನಾರಕರಾಗಳ್ ||

ಮತ್ತಂ ಕೊಂತಂಗಳಿಂದಮಿಟ್ಟಿಗಳಿಂ[11]ದಂ ಕುತ್ತಿಸಿಱಿಂದಂ[11] ಕರುಳ್ಮಾಲೆಗಳ್ ನೆಲದೊಳ್ ಸುರಿಯೆ ಕುತ್ತುವುದುಂ [12]ಮುಟ್ಟಿ[12]ಗಳೊಳಿಟ್ಟು ತೆಗಪುವುದುಂ ಕರಗಸಂಗಳಿಂದಂ ಮರನಂ ಪೋೞ್ವಂತೆ ಕೆಯ್ಯಂ ಕಾಲನಗಲ್ಚಿ ಪಿಡಿದಡಸಿ ಕ[13]ಟ್ಟಿಯುದ್ದಂಬಿಡಿದು ಬಾೞ್ವುದು[13]ಮಿಂತಿವು ಮೊದಲಾಗೊಡೆಯ ದುಃಖಂಗಳಂ ಕಣ್ಣಮೆಯಿಕ್ಕುವನಿತು ಪೊೞ್ತುಪ್ಪೊಡಮುಸಿರ್ [14]ಪತ್ತಿಲ್ಲದುತ್ಕೃಷ್ಟ[14]ದಿಂದಮೇೞನೆಯ ನರಕದೊಳ್ ಮೂವತ್ತುಮೂಱು ಸಾಗರೋಪ[15]ಮಕಾಲಂ[15]ಬರೆಗಂ ದುಃಖಂಗಳನೆಯ್ದುವರ್

ಮತ್ತಂ ದಾನ ಪೂಜೆ ಶೀಲೋಪವಾಸಮೆಂದಿಂತು ಚತುರ್ವಿಧಮಪ್ಪ ಶ್ರಾವಕಧರ್ಮದೊಳ್ ನೆಗೞ್ವವರುಂ [16]ತಪಂಗೆಯ್ವರುಂ[16] ಸ್ವರ್ಗಾಪವರ್ಗ ಸುಖಂಗಳನೆಯ್ದುವರೆಂದಿಂತು ಪೇೞೆ[3] ಕೇಳ್ದು ಭಟಾರರ ಪಕ್ಕದೆ ಅನಣುವ್ರತ ಗುಣವ್ರತ ಶಿಕ್ಷಾವ್ರತಮೆಂದಿಂತು ದ್ವಾದಶ ವಿಧಮಪ್ಪ ಶ್ರಾವಕ ಧರ್ಮಮುಮನರ್ಹಂತ ಪರಮ ದೇವರೆ ದೇವರ್ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಮಿಲ್ಲದುದೆ ತಪಮರ್ಹಂತ ಪರಮ ದೇವರಾಗಮದೊಳ್ ಪೇೞೆ[3]ಪಟ್ಟ ಜೀವಾಜೀವ ಪುಣ್ಯಪಾಪಾಸ್ರವ ಸಂವರ ನಿರ್ಜರ [17]ಬಂಧಮೋಕ್ಷ[17] ಮೆಂದಿಂತು ನವಪದಾರ್ಥಂಗ[18]ಳುಮಂ[18] *ಪಂಚಾಸ್ತಿಕಾಯಂಗ[18]ಳುಮಂ[18]* ಷಡ್ದ್ರವ್ಯಂಗ[18]ಳುಮಂ ನಂಬುವುದು ಸಮ್ಯಕ್ತ್ವಮೆಂಬುದಕ್ಕುಮಾ ಸಮ್ಯಕ್ತ್ವದತಿಚಾರಂಗಳ್ ಶಂಕಾದ್ಯಷ್ಟ ಮಳಂಗಳುಮೆಂಟು ಮದಂಗಳುಂ ಮೂಱು ಮೂಢಮುಮಾಱನಾಯತನ ಸೇವೆಗಳುಮೆಂದಿಂತಿ

---

[1] ಕಡಿನೊಡಿಱು (ಘಚಛ). [2] ಲ್ವನಳಿದು (ಘಚಛ). ರಡೆ (ಕಖಗ). [3] ದೆಡೆ (ಘಚಛ). [4] ದ (ಘಚಛ). [5] ಗಿದ (ಘಚಛ). [6] ದ್ರವಂಗಳು (ಘಚಛ). [7] ಪಿಡಿಯಿಱು (ಘಚಛ). [8] ತಱಿ (ಖ). [9] ಕಾ (ಕಖಗ). [10] (ಕಖಗ) ಗಳಲ್ಲಿಲ್ಲ. [11] ದೂಬಸಿಱಿಂದ ಬಸಿಱಿ (ಖ), ದಂಬಸಿಱಿಂ (ಘಚಛ). [12] ಇ (ಕಗ), ಮಿ (ಖ). [13] ಟ್ಟುವುದು (ಘಚಛ). [14] ಪತ್ತಿಲ್ಲ ದುಷ್ಕೃತ (ಕಗ), ಪತಮಿಲ್ಲುತ್ಕೃಷ್ಟ (ಘಚಛ). [15] ಮಾಯುಷ್ಯಂ (ಕಗ). [16] (ಕಗ) ಗಳಲ್ಲಿಲ್ಲ. [17] ಧರ್ಮ (ಕಖಗ). [18] ಳ್ಮಂ (ಘಚಛ). ** (ಕಖಗ) ಗಳಲ್ಲಿಲ್ಲ.

ಪೂರ್ವತ್ರಯ್ಯದ್ಧಕ್ಕುಮುಮಂ ಪಿಂಗಿಸಿ ನಿಶ್ಶಂಕಾದ್ಯಷ್ಟ ಗುಣಂಗಳಿಂ ಕೂಡಿದ ಶುದ್ಧಮಪ್ಪ ಸಮ್ಯಕ್ತ್ವಪೂರ್ವಕಂ ವ್ರತಂಗಳನೇಱಿಸಿ[1]ಕೊಂಡು ಮತ್ತೆ ನರಕಂಗಳ ದುಃಖಂಗಳಂ ಕೇಳ್ದವಱ ಶತಸಹಸ್ರ ಭಾಗಕ್ಕಪ್ಪೊಡಮೀ ದುಃಖ[2]ಮಿಲ್ಲೆಂದು[2] ಮನದೊಳ್ ಬಗೆದು ಮೂವತ್ತೆರಡುಂ ದಂಡಣೆಗಳಂ ಸೈರಿಸಿದೆನೆಂದೊಡರಸಂ ಕೇಳ್ದು ನಿನಗೊಸೆದೆಂ ಬೇಡಿಕೊಳ್ ನಿನ್ನ ಬೇಡಿದುದೆಲ್ಲಮಂ ಕುಡುವೆನೆಂದೊಡೆ ಪೇಱ[3]ತೇ[3]ನುಮನೊಲ್ಲೆ ನೆನ್ನ ಕೆಳೆಯನಪ್ಪ ಯಮದಂಡಂಗೆ ಕ್ಷಮಿಯಿ[4]ಸುವುದನೆ ಬೇಡಿದೆ[4]ನೆಂದೊಡರಸ ನಿಂತೆಂದು ಬೆಸಗೊಂಡಂ ಯಮದಂ[5]ಡಂ ನಿನಗೆಂತು ಕೆಳೆಯನಾದಂ[5] ಮತ್ತೆ ನೀಂ ಶ್ರಾವಕ ವ್ರತಂಗಳಂ ಕೈಕೊಂಡೆಯಪ್ಪೊಡೇ[6]ಕೆ ಕ[6]ಳ್ವೆಯೆಂದು ಬೆಸಗೊಂಡೊಡಾತ ನಿಂತೆಂದಂ ಯಮದಂಡನೆನಗೆ ಕೆಳೆಯನಪ್ಪುದುಮಂ ನಿಮ್ಮ ಪೊೞಲ ಕಸವರಮಂ ಕಳ್ದುದರ್ಕೆ ಕಾರಣಮುಮಂ ಪೇೞ್ವೆಂ ಕೇಳರಸಾ ಎಂದು ವಿದ್ಯುಚ್ಚೋರನಿಂತೆಂದು ಪೇೞಲ್ತೊಡಂಗಿದಂ

ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ತಿಲಕಮನೆ ಪೋಲ್ವುದು ದಕ್ಷಿಣಾಪಥದೊಳಾಭೀರಮೆಂಬುದು ನಾಡಲ್ಲಿ [7]ವರ್ಣೆ[7]ಯೆಂಬ ತೊಱೆ[8]ಯಾ[8] ತಡಿಯೊಳ್ ವೇಣಾತಟಮೆಂಬುದು ಪೊೞ[9]ಲದು ಪೊೞಲ ಗುಣಂಗಳಿನಾ[9]ದಮಾನುಂ ರಮ್ಯಮಪ್ಪುದು ಸ್ವರ್ಗಮನೆ ಪೋಲ್ವುದದನಾಳ್ವೊಂ ಜಿತಶತ್ರುವೆಂಬೊನರಸನಾತನ ಮಹಾದೇವಿ ವಿಜಯಮತಿ[10]ಯೆಂಬೊಳಾ ಇರ್ವರ್ಗ್ಗಂ ಮಗನೆನಾಂ ವಿದ್ಯುಚ್ಚೋರನೆಂಬೆಂ ಮತ್ತಾ ಪೊೞಲೊ[11]ಳ್ ಯಮಪಾಶನೆಂಬೊಂ ತಳಾಱ[11]ನಾತನ ಪೆಂಡತಿ [12]ನಿಜಗುಣದೇವತೆ[12]ಯೆಂಬೊಳಾ ಇರ್ವರ್ಗ್ಗಂ ಮಗನೀತಂ ಯಮದಂಡನೆಂಬೊಂ ಮತ್ತಾಮಿ[13]ರ್ವರುಂ[13] ಸಮಾನವಯಸರೆಮಯ್ದಾಱು ವರ್ಷದ ಪ್ರಾಯದಂದು ಶ್ರಾವಕನಪ್ಪ ಸಿದ್ಧಾರ್ಥನೆಂಬುಪಾಧ್ಯಾಯನ ಪಕ್ಕದೆ ಇರ್ವರುಮನೋದಲಿಟ್ಟೊಡೇೞೆಂಟು ವರುಷದೊಳಗೆ ವ್ಯಾಕರಣಂ ಪ್ರಮಾಣಂ ಚಂದಮಲಂಕಾರಂ ನಿಘಂಟು ಕಾವ್ಯಂ ನಾಟಕಂ ಸಾಮುದ್ರಿಕಂ ವಾತ್ಸ್ಯಾಯನಂ ಶಾಲಿಹೋತ್ರಂ ಪಾಲಕಾಪ್ಯಂ [14]ಚಾಣಕ್ಯಂ ವೈದ್ಯಂ[14] ಮೊದಲಾಗೊಡೆಯ ಶಾಸ್ತ್ರಂಗಳನೆಲ್ಲಮನಿರ್ವರುಂ ಕಲ್ತು ಬೞಿಕ್ಕೀತಂ ತಳಾಱನ ಮಗನಪ್ಪುದಱಿಂ ತನಗೆ ತಕ್ಕ ಕಳ್ಳರನಾ[15]ರಯ್ವ ತೆಱನಂ ಪೇೞ್ವ ಸುರಖಮೆಂಬೋದಂ ಕಲ್ತೊನಾನುಂ[15] ಕಳ್ವುಪಾಯಮಂ ಪೇೞ್ವ ಕರಪಟ ಶಾಸ್ತ್ರಮಂ ಕಲ್ತೆನಿಂತೆಮಗನ್ಯೋನ್ಯ ಪ್ರೀತಿಯಿಂದಂ ಕಾಲಂ ಸಲೆ

---

1 + ಕೈ (ಕಖಗ). 2 ಮಲ್ತೆಂ (ಘಚ), ೦ ದುಃಖಮಲ್ತೆಂ (ಛ). 3 ದೇ (ಖ) 4 ಸಿಂನಿಮ್ಮಡಿಯದನೆ ಬೇಡಿಕೊಂಡೆ (ಘಚಛ). 5 ಡಂಗಂ ನಿಂಗಮೆಂತುಕೆಳೆಯಾಯ್ತು (ಘಚಛ) 6 ಕೇ (ಕಗ), ಕ (ಖ). 7 ವೆರ್ಣೆ (ಖ), ವೆಂಣ್ಣೆ (ಘಚಛ). 8 ಯ (ಕಖಗ). ದಱ (ಚ), 9 ಲಾ (ಘಚಛ). 10 + ಮಹಾದೇವಿ (ಕಖಗ). 11 ಳೆ ತಳಾಱಂ ಜವದಂಡಪಾಶನೆಂಬೊ (ಘಚಛ). 12 ನಿಜಯ ಗುಣದೇವತೆ (ಖ), ಜಗುಣೆ (ಘಚಚ). 13 ರ್ವರುಂ (ಕಗ), ಬರ್ರೊಂ (ಘಛ). 14 ನರವೈದ್ಯಂ ಮಂತ್ರವಾದಂ ಜ್ಯೋತಿಷಂ (ಘಚಛ). 15 ರೈದುದಂ ಪೇೞ್ವಾಸುರಂಬಮೆಂಬೊದಂ ಕಲ್ತನಾಂ (ಘ), ರಯ್ವುದಂ ಪೇೞ್ವಾಸುರಂಖಮೆಂಬೋದಂ ಕಲ್ತನಾಂ (ಚಛ).

ಮತ್ತೊಂದು ದಿವಸಮಿರ್ವರುಂ ವನಕ್ರೀಡೆಯಾಡಲೆಂ[1]ದಿಂ[1]ದ್ರೋಪಮುಮೆಂಬ ವನಕ್ಕೆ ಪೋಗಿಯಲ್ಲಿಯಶೋಕ ಪುನ್ನಾಗ ವಕುಳ ತಿಳಕ ತಮಾಳ ಚಂಪಕ ಕ್ರಮುಕ ನಾಳಿಕೇರ ಖರ್ಜೂರ ಜಂಬು ಜಂಬೀರ ಪನಸ ದಾಡಿಮ ಕದಳೀ ದ್ರಾಕ್ಷಾ ಸಹಕಾರಂ ಮೊದಲಾಗೊಡೆಯ ಪಲವುಂ ತೆಱದ ವೃಕ್ಷ ಜಾತಿಗಳಿಂದಂ ಕಿಕ್ಕಿಱಿಗಿಱಿದಿರ್ದ ನಂದನವನದೊಳಿರ್ವ[2]ರುಮುಳಿಸೆಂ[ಡನಾ]ಡುತ್ತಿ[ರ]ಲೋಕ[ನ][2] ವಿದ್ಯೆಯನೀತಂ ಕಲ್ತನಪ್ಪುದಱಿಂದೆಲ್ಲಿಯುಳಿದೊಡಂ ಕಾಣಲಾಗದೀತನಂ ನೀಡುಮಱಸಿ ಕಾಣದೆ ದೆಸೆಗೆಟ್ಟು ಬೇಸತ್ತಾನಿಂತೆಂದೆನಕ್ಕುಂ ಮಗನೆ ನೀಂ ತಳಾಱನಪ್ಪಂದು ನಿನ್ನ ಕಾಪಿನೊಳ್ ಕಳ್ದು ನಿನ್ನಂ [3]ಕೊಲಿಸ[3]ದಾಗಳೇನಾಯ್ತೆಂದು ನುಡಿದೊಡೀತನುಮಿಂತೆಂದನಕ್ಕುಂ ಮಗನೆ [4]ನೀನೆನ್ನ ತಳಾಱು[4]ಗೆಯ್ವಂದು ಕಳ್ದೊಡೆ ನಿನ್ನಂ ಪಿಡಿದುಡಿಯೆ ಕಟ್ಟಿ ಕಳ್ಳರ ದಂಡಣೆಯಿಂ ದಂಡಿಸದಾಗಳೇನಾಯ್ತೆಂದು ನುಡಿದೊಡೀ ನುಡಿಯಂ ಮಱೆಯಲ್ವೇಡೆಂದಿರ್ವರುಮೋರೊರ್ವರಂ ಮೂದಲಿಸಿ ಪ್ರತಿಜ್ಞೆಗೆಯ್ದು. ಕೆಲಕಾಲದಿಂಬೆನ್ನ ತಂದೆಯೆನಗೆ ರಾಜ್ಯಪಟ್ಟಂಗಟ್ಟಿ ಶ್ರುತ ಸಾಗರರೆಂಬ ಭಟಾರರ ಪಕ್ಕದೆ ತಪಂಬಟ್ಟನೀತನ ತಂದೆಯುಂ ತನ್ನ ಸಂತಾನಮನೀತಂಗೆ ಕೊಟ್ಟರಸನೊಡನೆ ತಪಂಬಟ್ಟಂ ಮತ್ತಾನುಂ ರಾಜ್ಯಂಗೆಯ್ಯುತ್ತಿರೆ ಈತನುಮಾ ಪೊೞಲೊಳ್ ತಳಾಱುಗೆಯ್ಯುತ್ತಿರ್ಕುಮಿಂತು ಸುಖದೊಳಿರ್ವರ್ಗ್ಗಂ ಕಾಲಂ ಸಲೆ ಮತ್ತೊಂದು ದಿವಸಮೀತಂ ತನ್ನ ಮನದೊಳಿಂತೆಂದು ಬಗೆ[5]ದ[5]ನೆನ್ನರಸಂ ಕಳ್ಳ ನಾನುಮೀ ಪೊೞಲೊಳ್ ತಳಾ[6]ಱುಗೆಯ್ವನಿದು ಕಜ್ಜಮೊ[6]ಳ್ಳಿತ್ತಲ್ತೆಂದೆನಗಂಜಿ ನಾಡಂ [7]ಬಿಟ್ಟು[7] ಬಂದು ನಿಮಗಾಳಾದನಾನುಮೀತನನೆನ್ನಾಳ್ವ ನಾಡೆಂಟುದೆಸೆಯ ಗ್ರಾಮನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳೊಳಾರಯ್ಸಿಯುಂ ಕಾಣದೆ ಪರಮಂಡಲಂಗಳೊಳಮಾರಯ್ಸಿಯುಂ ಕಾಣದಿಲ್ಲಿಗಾರಯ್ಯಲಟ್ಟಿದೊಡೆ ಚರಪುರುಷರಾರಯ್ದು ಕಂಡು ಬಂದೆನಗಿಂತೆಂದು ಪೇೞ್ದರ್

ದೇವಾ ಮಿಥಿಳೆಯೆಂಬ ಪೊೞಲದನಾಳ್ವಂ ವಾಮರಥನೆಂಬರಸಂಗೆ ಯಮದಂಡಂ ಪೋಗಿಯಾಳಾಗಿ ಪೊೞಲ ಕಾಪಂಬೆತ್ತು ತ[8]ಳಾಱ[8]ನಾಗಿ ಸುಖದೊಳಿರ್ದೋನೆಂದು ಪೇೞ್ದೊಡಾ ಮಾತನಾಂ ಕೇಳ್ದು ಪುರುಷೋತ್ತಮನೆಂಬ ಮಂತ್ರಿಗೆ ಮಿಥಿಳೆಯೆಂಬ ಪೊೞಲ್ಗಾನಾರುಮಱಿಯದಂತಿರೆ ಪೋಗಿ ಯಮದಂಡನ[9]ನೊ[9]ಡಗೊಂಡು ಬಂದಪೆನೆಂದು ಪೇೞ್ದು ವಜ್ರಸೇನನೆಂಬ ಪೆರ್ಗಡೆಯುಂ ಕರೆಯಿಸಿ ಆನೊಂದು ಮನೆ ವಾೞ್ತೆಗೆ ಪೋಗಿ ಬಂದಪೆನೆನ್ನ ಬರ್ಪನ್ನೆಗಂ ರಾಜ್ಯಮಂ ಪ್ರತಿಪಾಲಿಸುತ್ತಿರೆಂದು ಕಲ್ಪಿಸಿ ಸಮಸ್ತ ರಾಜ್ಯಭಾರಮಂ ಸಮರ್ಪಿಸಿ ಅರ್ಧರಾತ್ರದಾಗಳ್ ಕಪ್ಪಡಮಂ ಪಱಿದುಟ್ಟು ಬೞಿಕಾರುಮಱಿಯಲೀಯದೊರ್ವನೆ ಪೊಱಮಟ್ಟು ಬಂದೀಪೊೞಲಂ ಪೊಕ್ಕು ಪ್ರತಿಜ್ಞೆ ಕಾರಣಮಾಗಿ ಕಸವರಮಂ ಕಳ್ದೀತನಂ ಕೊಲಿಸುವಂತು

1 ದು ಇಂದಿಂ (ಕಖಗ). 2 ರುಂ ಮುಳಿಸೆಂಡೆಯಾಡುತ್ತಿರೆ ಲೋಕ (ಕಗ), ರುಂ ಮುಳಿಸಿಂದಿಯಾಡುತ್ತಿರೆ ಲೋಕ (ಖ), ರು ಮು ಮುಳಿಸುಟ್ಟಲೋಡುತ್ತೀ (ಘ), ರು ಮುಳಿಸುಟ್ಟಲಾಡುತ್ತಿ (ಚಛ). 3 ಕೋಪಿಸಿ (ಕಗ). 4 ನಿನ್ನನೆನ್ನತಳಾಱಿಕೆ (ಘಚಛ). 5 ವ (ಕಖಗ). 6 ಱನೆನೊ (ಘಚಛ). 7 ಬಿಸುಟ್ಟು (ಘಚಛ). 8 ಳವರ (ಚ). 9 ನಾರಯ್ದೊ (ಘಚಛ).

ಮಾಡಿದೆನಿದು ಕಳ್ದುದರ್ಕೆ ಕಾರಣಮಿಾತನುಮೆನಗೀ ಪಾಂಗಿನೊಳ್ [1]ಮಿತ್ರ[1]ನೆಂದು ಪೇೞ್ದು ಮತ್ತಮಿಂತೆಂದಂ ನಿಮ್ಮ ದೇವತಾ[2]ಧಿಷ್ಠಿ[2]ತಮಪ್ಪ ಸರ್ವರುಜಾಪಹಾರ ಮೆಂಬ ಹಾರಮಧಿಗಮ ಸಮ್ಯಗ್‌ದೃಷ್ಟಿಯೆನಪ್ಪುದಱಿಂದೆನ್ನ ಕೆಯ್ಗೆವಂದುದುೞಿದ ಮಿಥ್ಯಾದೃಷ್ಟಿಗಳ ಕೆಯ್ಗೆ ವಾರದೆಂದೊಡರಸಂ ತನ್ನ ಸಭೆಯೊಳಿರ್ದ ನೆರವಿಗೆಲ್ಲಂ ಹಾರಂ ಬಂದ ತೆಱನನಿಂತೆಂದು ಪೇೞಲ್ ತೊಡಗಿದೊಂ

ಧನ್ವಂ[3]ತರಿ[3]ವಿಶ್ವಾನುಲೋಮರ್ಕಳ ಕ[4]ಥೆ[4]ಯಂ ಮೊದಲಿಂ ತಗುಳ್ದು ಪೇೞುತ್ತುಮಿಂತೆಂದನೆಮ್ಮ ಸಂತತಿಯ ಪದ್ಮರಥನೆಂಬರಸನೊಂದು ದಿವಸಂ ವಾಸು ಪೂಜ್ಯತೀರ್ಥಕರ ಪರಮದೇವರಂ ಬಂದಿಸಲ್ ಪೋಗುತ್ತಿರ್ದೊನನೆಡೆಯೊಳಚ್ಯು ತೇಂದ್ರನುಂ ವಿಶ್ವಾನುಲೋಮ[5]ಚರ[5]ನಪ್ಪ ವಾಹನದೇವನುಮಿಂತಿರ್ವರುಂ ಕಂಡು ಅಚ್ಯುತೇಂದ್ರಂ ವಾಹನದೇವನನಿಂತೆಂದನೀತಂ [6]ಅ[6]ಧರ್ಮಿಯಿಂದೆ ಧರ್ಮಮಂ ಕೆಯ್ಕೊಂಡು ವಾಸುಪೂಜ್ಯತೀರ್ಥಕರ ಪರಮದೇವರಂ ಬಂದಿಸಿದಲ್ಲದುಣ್ಣೆನೆಂದಾಗ್ರ ಹಂಗೊಂಡು ಚಂಪಾನಗರಕ್ಕೆವೋದಪ್ಪೊನೀತನಂ ಪೋಗಲೀಯದೆ ಮಗುೞ್ಚಿ ಲಾರ್ಪೊಡೆ ಮಗುೞ್ಚೆಂದು ನುಡಿದೊಡೆ ವಾಹನದೇವನುಂ ತನ್ನಾರ್ಪ ತೆಱದಿಂದೆಲ್ಲ ಮೆನಿತಾನುಂ ತೆಱದುಪಸರ್ಗಂ ಗೆಯ್ದು ಮಗುೞ್ಚಲಾಱದೆ ಬೇಸತ್ತುೞಿದೊಡೆ ಅಚ್ಯುತೇಂದ್ರಂ ಪದ್ಮರಥಂಗೊಸೆದು ತನ್ನ ತೊಟ್ಟ ಸರ್ವರುಜಾಪಹಾರಮೆಂಬ ಹಾರಮನಾತನ ಕೊರಲೊಳ್ ತಾ[7]ನೆ ಕಟ್ಟಿ[7] ಪೊಗೞ್ದು ಪೂಜಿಸಿಪೋದೊನಿಂತೀ ಪಾಂಗಿನೊಳೆಮಗೀ ಹಾರಂ ಸಂತತಿಯಿಂ ಬಂದುದೆಂದು ಪೇೞ್ದಿರ್ದ ತದನಂತರಂ

ಇರ್ವ[8]ರ್ ಪರಿವೊಟ್ಟೆ[8]ಯುಮರೋಲೆಯಂ ಕೊಂಡು ಬಂದರಸನ ಮನೆಯ ಬಾಗಿಲೊಳ್ ನಿಂದು ಪಡಿಯಱಂಗೆ ಪೇೞ್ದೊಡೆ ಪಡಿಯಱಂ ತನ್ನರಸಂಗೆ ಪೇೞ್ದೊ ಡರಸನನುಮತದಿಂದರಮನೆಯಂ ಪೊಕ್ಕಾಸ್ಥಾನಮಂಟಪದೊಳಿರ್ದ ವಿದ್ಯುಚ್ಚೋರನಂ ಕಂಡು[9] ಪೊಡೆವಟ್ಟಾತನ ಮುಂದೋಲೆಯನಿಕ್ಕಿದಾಗಳ್ ಸಂಧಿವಿಗ್ರಹಿ ಓಲೆಯಂ ಕೊಂಡರಸನ ಮುಂದಿಂತೆಂದು ಬಾಚಿಸಿದಂ[10] ವಿದ್ಯುಚ್ಚೋರ ಪರಮಸ್ವಾಮಿಗೆ ಮಂತ್ರಿ ಪುರುಷೋತ್ತಮನುಂ ಪೆರ್ಗಡೆ ವಜ್ರಸೇನನುಂ ಸಾಷ್ಟಾಂಗವೆಱಗಿ ಪೊಡೆವಟ್ಟು ಕಾರ್ಯಮಂ ಬಿನ್ನವಿ[11]ಪ್ಪರ್ ತಾ[11]ಮುಂ ಪಲವು ದಿವಸಂ ಪೋಗಿ ರ್ದರ್ ಪೆಱ[12]ತ[12]ಣ ಮನೆವಾೞ್ತೆಯಂ ಮಱೆದಿರ್ದರ್ ತಾಮಿಲ್ಲದೆ ರಾಜ್ಯ[13]ಮಂ ಪ್ರತಿ ಪಾಲಿಸುವೊರಾರುಮಿ[14]ಲ್ಲೀಯೋ[14]ಲೆಯಂ [15]ಕಾಣಲೊಡಂ[15] ತಡೆಯದೆ ಪೊಱಮಟ್ಟು ಬೇಗಂ ಬರ್ಕೆಂದು ಬಾಚಿಸಿದುದಂ ವಾಮರಥಂ ಕೇಳ್ದು ಮುನ್ನೀತನ ಪೇೞ್ದುದು ಮೋಲೆಯ ಮಾತುಮೊಂದಾದುದೆಂದು ಸಂದೇಹಮಿಲ್ಲದಾಗಳ್ ನಂಬಿ ಈತಂ

---

[1] ಕೆಳೆಯ (ಘಚಛ). [2] ರಕ್ಷಿ (ಘಚಛ). [3] ತ್ರಿ (ಕಖಗ). [4] ಡೆ (ಛ). [5] (ಕಖ) ಗಳಲ್ಲಿಲ್ಲ, (ಚ) ದಲ್ಲಿ ತ್ರುಟಿತ. [6] ನೆವಲ (ಘಚಛ). [7] ನಿಕ್ಕಿ (ಕಖ). [8] ರೊಟ್ಟೆಯನೇಱ (ಘಚಛ). [9] + ಸಾಷ್ಟಾಂಗಮೆಱಗಿ (ಘಚಛ). [10] + ಸ್ವಸ್ತಿ ಶ್ರೀಮತ್ (ಘಚಛ). [11] ಕ್ಕಿ ಮತ್ತಪ್ಪುದುಂ ಆ (ಕಗ). [12] ಗ (ಘಚಛ). [13] + ತಂತ್ರ (ಘಚಛ). [14] ಲ್ಲೆಂದೋ (ಕಖಗ). [15] ಕಂಡಾಕಡೆ (ಘಚಛ).

ಮಂಡಳಿಕನೆಂದಱಿದು ತನ್ನ ಸಿಂಹಾಸನದೊಳೊರಂತಪ್ಪಾಸನಮ[1]ನಿಕ್ಕಲ್ವೇೞ್ದಿರಿಸಿ ಇಂತೆಂದನೆನ್ನ[1] ತಂಗೆಯ ಮಗನಯ್ ಸೋದರದಳಿಯನಯ್ ನಿನಗೆನ್ನ ಮಕ್ಕಳಂ ಶ್ರೀಮತಿ ವಸುಮತಿ ಗುಣಮತಿ ಸುಲೋಚನೆ ಸುಪ್ರಭೆ ಸುಕಾಂತೆ ಸುಶೀಲೆ ಮನೋಹರಿಯೆಂಬೆಣ್ಬರುಂ ಕನ್ನೆಯರತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯರ್ ನವಯೌವನೆಯರಕ್ಷ [2]ರಾಲೇಖ್ಯ[2] ಗಣಿತ ಗಾಂಧರ್ವ[3] ನೃತ್ಯ[4] ಚಿತ್ರಕರ್ಮ ಪತ್ರಚ್ಛೇದ್ಯಮೆಂದಿವು ಮೊದಲಾಗೊಡೆಯ ಚತುಷ್ಷಷ್ಟಿ ಕಲೆಗಳೊಳಾದಮಾನುಂ ಕುಶಲೆಯರ್ ಪರಮಂಡಲಿಕರ್ ಪಲರ್ ಪಾಗುಡಂಗಳುಮೋಲೆಗಳುಂ ಪೆರ್ಗಡೆಗ[5]ಳುಮ[5]ನನವರತಂ ಕೂಸುಗಳಂ ಬೇಡಿ ಯಟ್ಟುತ್ತಿರ್ಪರವರಾರುಮಂ ನಾಂ ಮೆಚ್ಚದೆ ಕುಡದಿ[6]ನ್ನೆ[6]ಗಮಿಂತಿರ್ಪರ್ಗಳಂ ತಾಂಗಿ ರ್ದೆನೀ ಕನ್ಯಾರತ್ನಂಗಳ್ಗೆ ನೀನೆ ಯೋಗ್ಯನಯ್ ನಿನಗೆಣ್ಬರುಮಂ ಕೊಟ್ಟೆನ್ ಮದುವೆನಿಲ್ಲೆಂದೊಡಾತನಿಂತೆಂದನಾನೊರ್ವಳ್ಗೆ ಬೇಂಟಂಗೊಂಡಿರ್ದೆನಿವರಂ ಕೊಂಡೇ ವೆನೆಂದೊಡರಸನಾರ್ಗೆ ಬೇಂಟಂಗೊಂಡಿರ್ದೆಯೆಂದು ಬೆಸಗೊಂಡೊಡೆ ಮುಕ್ತಿ ಶ್ರೀಯೆಂಬೊಳ್ ಪೆಂಡತಿಗೆ ಬೇಂಟಂಗೊಂಡಿ[7]ರ್ದೆ[7]ನಾಕೆಯಂ ಮದುವೆ ನಿಲಲ್ವೇೞ್ಕು ಮೆಂದು ಪರಿಚ್ಛೇದಿಸಿ ನುಡಿದು ಮತ್ತಮಿಂತೆಂದನೆನ್ನ ಕೆಳೆಯನನೆನಗೊಪ್ಪಿಸಲ್ವೇೞ್ಕು ಮೆಂದೊಡರಸನು[8]ಮೊಪ್ಪಿಸಿದೆನೆಂದೊಡೆ ಅರಸನಂ[8] ಬೀೞ್ಕೊಂಡು ಯಮದಂಡ ಪುರಸ್ಸರಮಿರ್ವರುಮೊಟ್ಟೈಯನೇಱಿ ತುರಿಪದಿಂ ಕತಿಪಯ ದಿವಸಂಗಳಿಂ ವೇಣಾತಟ[9] ಮನೆಯ್ದಿ ಪೊೞಲ್ಮೊೞಲೊಳಿರ್ದು ಪೇೞ್ದಿಟ್ಟಯುಷ್ಟಶೋಭೆಯಂ ಮಾಡಿಸಿ ಮಂತ್ರಿ ಮಹತ್ತರ ಪರಿವಾರ ಸಾಮಂತ [10]ಮಹಾಸಾಮಂತರುಂ[10] ಪೆಂಡವಾಸದ ಸೂಳೆಯರುಂ [11]ಪೊೞಲ ಜನಮೆಲ್ಲಮಿದಿರಂ ಬಂದು ಕಂಡು ಪೊಡೆವಟ್ಟು ಸೇಸೆಗಳನಿಕ್ಕಿದ ಬೞಿಕ್ಕೆ ಪಟ್ಟವರ್ಧನಮನಿರ್ವರುಮೇಱಿ ಬೆಳ್ಗೊಡೆ ಮೊದಲಾಗೊಡೆಯ ರಾಜ್ಯಚಿಹ್ನಂಗಳ್ ಮುಂದೆ ಪರಿಯೆ ಪಂಚಮಹಾಶಬ್ದಂಗಳುಂ ಬದ್ದವಣದ ಪಱೆಗ[12]ಳುಂ[12] ಬಾಜಿಸೆ ಅರಮನೆಯಂ ಪೊಕ್ಕು ಮಱುದಿವಸಮಾಸ್ಥಾನಮಂಡಪದೊಳ್ ಸಿಂಹಾಸನಮಸ್ತಕ ಸ್ಥಿತನಾಗಿ ಸಾಮಂತ ಮಹಾಸಾಮಂತರ್ಕಳಂ ಮಂತ್ರಿಮಹತ್ತರ ಪುರೋಹಿತ ಪರಿವಾರದವರ್ಗಳಮರಸಿಯರ್ಕಳಂ ಬೞಿಯಟ್ಟೆ ಬರಿಸಿ ಇಂತೆಂದು ನುಡಿದನಾನೀ ಸಂಸಾರದೊಳಪ್ಪ ಭೋಗೋಪಭೋಗಂಗಳ್ಗೆ ಪೇಸಿ ವಿರಕ್ತನಾಗಿ ತಪಂಬಡಲ್ ಬಗೆದಪ್ಪೆನೆಂದೊಡನಿಬರುಂ ನೆರೆದಿಂತೆಂದರಿನ್ನುಮಾವುದು ಕಾಲಂ ತಪಂಬಡಲಿನ್ನುಂ ನೀಂ ಕೂಸನಯ್ ನವಯೌವನನಯ್ ಕೆಲಕಾಲಮರಸುಗೆಯ್ದು ಪಶ್ಚಾತ್ಕಾಲ ದೊಳ್ ತಪಂಬಡಲಕ್ಕುಮೆಂದೊಡರಸನಿಂತೆಂದನೆಂತಱಿಯಲಕ್ಕುಮನ್ನೆಗಂ ಸಾವರೊ ಬಾೞ್ವರೊ ಎಂದೀ ಪ್ರಸ್ತುತಂಗಳನವರ್ಗ್ಗಾಡಿ ಪೇೞಲ್ ತೊಡಂಗಿದಂ

---

[1] ನೇಱಿಕ್ಕಲ್ವೇೞ್ದಿಂತೆಂದಂ ನೀನೆನ್ನ (ಘ ಚ ಛ). [2] ರ ಲೆಕ್ಕ (ಕಗ). [3] + ಗೀತ (ಘ ಚ ಛ). [4] + ವಾದ್ಯ (ಘ ಚ ಛ). [5] ಳ್ಮ (ಘ ಚ ಛ). [6] ಳ್ದಿನನ್ನೆ (ಕಖಗ). [7] ಳ್ದೆ (ಖ). [8] ಸನೊಪ್ಪಿಸುವುದು ಮಾತನುಂ ತಾನುಂ (ಘ ಚ ಛ). [9] + ನಗರ (ಘ ಚ ಛ). [10] (ಕಖಗ) ಗಳಲ್ಲಿಲ್ಲ. [11] + ಪೊೞ (ಕಖಗ). [12] ಳ್ಮಂ (ಘ ಚ ಛ).

ಶ್ಲೋಕ ॥ ಡಿಂಡೀರ ಪಿಂಡ ಸಂಕಾಶಮಾಯುಃ ಸಂಸಾರವರ್ತಿನಾಂ ।
ಅಖಂಡಲಧನುಷ್ಕಾಂಡಸನ್ನಿಭಂ ರೂಪಯೌವನಂ ॥

ವೃ ॥ ರೂಪಂ ಯೌವನಮಾಯುರಕ್ಷ ವಿಷಯಾ ಭೋಗೋಪಭೋಗಾ ವಪುಃ
ವೀರ್ಯಂ ಸ್ವೇಷ್ಟ ಸಮಾಗಮೋ ವಸುಮತಿಃ ಸೌಭಾಗ್ಯ ಭಾಗ್ಯೋದಯೋ । [1]
ಯೇಽನಿತ್ಯಾಃ ಸ್ಫುಟಮಾತ್ಮನಃ ಸಮುದಿತಾ ಜ್ಞಾನೇಕ್ಷಿಣಾಂ (?) ಭೂಭೃತಾಂ
ಶೇಷಾ ಇತ್ಯನುಚಿಂತಯಂತು ಸುಧಿಯಃ ಸರ್ವೇ ಸದಾಽನಿತ್ಯತಾಂ ॥

ಯದಿ ಜಾತಿಜರಾಮರಣಂ ನ ಭವೇತ್ ಯದಿ ಚೇಷ್ಟವಿಯೋಗಭಯಂ ನ ಭವೇತ್ ।
ಯದಿ ಸರ್ವಮನಿತ್ಯಮಿದಂ ನ ಭವೇತ್ ಇಹ ಜನ್ಮನಿ ಕಸ್ಯ ರತಿರ್ನಭವೇತ್ ॥

ಅದಱಿಂ ಮಾನಸರ ರೂಪುಂ ಯೌವನಮುಂ ತೇಜಮುಂ ಲಾವಣ್ಯಮುಂ ಸೌಭಾಗ್ಯಮುಂ ಆಯುಷ್ಯಮುಂ ಶ್ರೀಯುಂ ಸಂಪತ್ತುಂ [1]ವಿಭವಮುಂ[1] ನಲ್ಮೆಯುಂ ಎಂದಿವು ಮೊದಲಾಗೊಡೆಯುವನಿತ್ಯಂಗಳ್ ಮತ್ತಂ ಮೆಯ್ಯೊಳ್ಪಿತ್ತೆಯೆಂದೊಡದುವುಂ ತಾನಿಂತುಟಿ

ಗಾಹೆ ॥ ಏದಂ ಸರೀರಮಸುಚಿಂ ಣಿಚ್ಚಂ ಕಲಿ ಕಲುಸ ಭಾಜಣಮಚೊಕ್ಖಂ ।
ಅಂತೋ[2]ಬಾಹಿರದಿಟ್ಠಂ[2] (?) ಸಕ್ಕಿಬ್ಬಿಸ ಭರಿದಂ ತು ಅಮೇಜ್ಝಪುರಂ ॥

ರಸಮಜ್ಜ ಮಾಂಸ ಸೋಣಿದಪುಪ್ಪಸ ಕಾಲಿಜ್ಜ ಸೇಮ್ಮ ಸೀಹಾಣಂ ।
ಬಿಡಜಾಲ ಅಟ್ಠಿ ಸಕಲ (?) ಚಮ್ಮಾಣದ್ಧಂ (?) ಸರೀರಪುರಂ ॥

ಅಟ್ಠಿಹಿ ಛಣ್ಣಂ ಣಾಳಿಹಿ ಬದ್ಧಂ ಕಲಿಮಲಭರಿದಂ ಕಿಮಿಕುಲಪುಣ್ಣಂ ।
ಮಾಂಸವಿಲಿತ್ತಂ ತಯಪಡಿಛಣ್ಣಂ ಸರೀರಪುರಂತಂ ಸಂತತಮಚೊಕ್ಖಂ ॥

ಏದಾರಿಸೇ ಸರೀರೇ ದುಗ್ಗಂಧೇ ಕುಣಿಮಪೂತಿಏ ಯಚೊಕ್ಖೇ ।
ಸಡಣಪಡಣಯ ಸಾರೇ ರಾಗಂ ಣ ಕರೇಂತಿ ಸಪ್ಪುರಿಸಾ ॥

ಛಾಯೇವ ಸಕದಕಮ್ಮಂ ಅಣುಯಾದಿ ಕಾರಗಂ ಣ ಸೇಸಂ । (?)
ಪಲಾಯಿದುಂ ದುಸ್ಸಕ್ಕಂ ಅಣ್ಣತ್ಥ ಜಿಣಸಾಸಣೇ ॥ (?)

*ಶ್ಲೋಕ ॥ ದುರ್ಗಂಧೇ ದುರ್ಧರೇ ದುಃಖೇ ದುಃಸ್ವಭಾವೇ ಚ ನಶ್ವರೇ ।
ದುರ್ವಿಲೋಕೇ ವೃಥಾ ಕಾಯೇ ಕಿಂ ತು ಜ್ಞಾನಿ ತವಾಗ್ರಹಃ ॥
ಅಚ್ಛೇದ್ಯೋಽನಂತ ಸೌಖ್ಯೋಽಹಂ ವೇತ್ತಾ ಪೂರ್ವೋ ನಿರಂಜನಃ ।
ಸರ್ವದುಃಖಾಕರಂ ದೇಹಂ ತ್ಯಜಾಮ್ಯೇತತ್ ಪರಿಸ್ಫುಟಂ ॥*

ವೃ ॥ ಜಾತಿಕ್ಷ್ಮಾಜತತೇ (?) ಕೃತಾಂತ ಕುಪಿತಕ್ರೂರೋರು ದುಃಶ್ವಾಪದೇ ।
ವ್ಯಾಧಿ ವ್ಯಾಧಭಯೇ ದುರಂತದುರಿತ ಸ್ಫೂರ್ಜದ್ದವಾಗ್ನಿಚ್ಛದೇ ॥
ನಿಸ್ತ್ರಾಣಸ್ಯ ವಿಚೇತಸೋ ದೃಢತೃಷಾ ದುಃಖಾಕುಳಸ್ಯಾಂಗಿನೋ ।
ಜೈನಂ ಶಾಸನಮೇಕಮೇವ ಶರಣಂ ಜನ್ಮಾಟವೀಸಂಕಟೇ ॥

ಬಲ್ಮೆಯುಂ (ಘಛ), (ಚ) ದಲ್ಲಿ ತ್ರುಟಿತ. [2] ಛಾಯಗ ದಿಟ್ಠ (ಕಖಗ), ಅಚ್ಛಾದಿ ಸದ್ದಿ (ಘಚಛ). * (ಘಚಛ) ಗಳಲ್ಲಿಲ್ಲ.

ಅದಱಿಂ

ವೃ ॥ ಯಾವತ್ ಸ್ವಸ್ಥಮಿದಂ ಶರೀರಮರುಜಂ ಯಾವಜ್ಜರಾ ದೂರತಃ ।
ಯಾವಚ್ಚೇಂದ್ರಿಯಶಕ್ತಿ ರಪ್ರತಿಹತಾ ಯಾವತ್ ಕ್ಷಯೋ ನಾಯುಷಃ ॥
ಆತ್ಮಶ್ರೇಯಸಿ ತಾವದೇವ ವಿದುಷಾ ಕಾರ್ಯಃ ಪ್ರಯತ್ನೋ ಮಹಾನ್ ।
ಪ್ರೋದ್ದೀಪ್ತೇ ಭವನೇ ತು ಕೂಪಖನನಂ ಪ್ರತ್ಯುದ್ಯಮಃ ಕೀದೃಶಃ ॥

ಎಂದಿವು ಮೊದಲಾಗೊಡೆಯವನೋದಿಯವಱರ್ಥಮಂ ನೆರವಿಗೆಲ್ಲಂ ವಖ್ಖಾಣಿಸಿ ಪೇೞ್ದು ಮತ್ತ[1]ವಿಂ[1]ತೆಂದಂ

ಕಂ ॥ ಆನಾ[2]ಳ್ದ[2]ನಾಳ್ಗಳಿವರೆನ
ಗೇನಾಯ್ತೆಂದಱಿದು[3]ಮಱಿಯದುಱದಾಂ[3] ನುಡಿದೊಂ
ದೇನಾನುಮೇವಮುಳ್ಳೊಡ
ವಾ ನುಡಿಯಂ ಮಱೆಯಿಮೆಲ್ಲ[4]ಮಿಂ[4] ನಿಶ್ಶಲ್ಯಂ

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ ।
ಮೇತ್ತೀ ಮೇ ಸವ್ವಭೂದೇಸು ವೇರಂ ಮಜ್ಝ ಣ ಕೇಣಚಿ ॥

ಎಂದೆಲ್ಲರುಮಂ ಕ್ಷಮೆಗೊಳಿಸಿ ನಿಶ್ಶಲ್ಯಂಗೆಯ್ದು ವಿದ್ಯುದಂಗನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ರಾಜ್ಯಾಭಿಷೇಕಂ ಗೆಯ್ದಾತನಂ ಪಿಡಿದು ನೀಮೆಲ್ಲಂ ಸುಖಂಬಾೞಿ ಮೆಂದು ಕಲ್ಪಿಸಿ ಯಮದಂಡಂಗಂ ಪೊೞಲ ತಳಾಱಿಕೆಯಂ ಕೊಟ್ಟು ಮಂಗಳ ವಸದನಂಗೊಂಡು ಪಟ್ಟವರ್ಧನಮನೇಱಿ [5]ಸತಿಯರ್ ಸಂಗಡಂ ಬರೆ[5] ಪೆಂಡವಾಸದ ಸೂಳೆಯರಿರ್ಬರ್ [6]ಪೆ[6]ಱಗೇಱಿಕ್ಕೆಲದೊಳಂ ಚಾಮರಂಗಳನಿಕ್ಕುತ್ತಂ ಬರೆ ಬೆಳ್ಗೊಡೆಗಳುಂ ಪಾಳಿ[7]ಧ್ವಜಂಗಳುಂ [8]ತಜಿನೆವಟಿಯಿಗೆಗಳುಂ[8] ಚಂದ್ರಾದಿತ್ಯರ್ಕಳುಂ ಸಿಂಹ ವ್ಯಾಘ್ರ ಮಕರ ಮತ್ಸ್ಯಂ[9]ಗಳೆಂ[9]ದಿವು ಮೊದಲಾಗೊಡೆಯ ರಾಜ್ಯಚಿಹ್ನಂಗಳ್ ಮುಂದೆ ಪರಿಯೆ ಪಂಚಮಹಾಶಬ್ದಂಗಳುಂ ಬದ್ದವಣದ ಪಱೆಗಳುಂ ಬಾಜಿಸೆ ವಂದಿ ಮಾಗಧ ಯಾಚಕಪ್ರಭೃತಿ[10]ಗಳ್ಗಂ ದೀನಾನಾಥಾಂಧರ್ಕಳ್ಗಂ ತುಷ್ಟಿದಾನಮಂ [11]ಕೊ[11]ಡುತ್ತಂ ಪೋಗಿ ಸಹಸ್ರಕೂಟ ಚೈತ್ಯಾಲಯಮನೆಯ್ದಿ ಪಟ್ಟವರ್ಧನ ದಿಂದಿೞಿದು ಬಸದಿಯಂ ತ್ರಿಃಪ್ರದಕ್ಷಿಣಂಗೆಯ್ದು ದೇವರಂ [12]ವಂ[12]ದಿಸಿ ಗುಣಧರ ರೆಂಬಾಚಾರ್ಯರಂ ಗುರುಭಕ್ತಿಗೆಯ್ದು ವಂದಿಸಿ ಇಂತೆಂದಂ ಭಟಾರಾ ಸಂಸಾರಮೆಂಬ ಸಮುದ್ರದೊಳ್ ಮುೞುಗುತ್ತಿರ್ದೆನ್ನಂ ಮುೞುಗಲೀಯದೆತ್ತಿಮೆನಗೆ ದೀಕ್ಷೆಯಂ ಪ್ರಸಾದಂಗೆಯ್ಯಿಮೆಂದು ನುಡಿದೊಡಂಬಡಿಸಿ [13]ಸಾ[13]ಸಿರ್ವರರಸುಮಕ್ಕಳ್ವೆರಸು ಕಟಕ ಕಟಿಸೂತ್ರ ಕುಂಡಲಾಭರಣಾದಿಗಳಂ ಕಳೆದು ಬಾಹ್ಯಾಭ್ಯಂತರ ಪರಿಗ್ರಹ ಮೆಲ್ಲಮಂ ತೊಱೆದು ಗುಣಧರ ಭಟ್ಟಾರರ ಪಕ್ಕದೆ ತಪಂಬಟ್ಟಂ ಮತ್ತಂ ದೇವಗಣಿಕೆ

---

1 ಮರಸನಿಂ (ಘಚಛ). 2 ಳ್ವೆ (ಕಖಗ). 3 ಮುಱಿದೆ (ಕಖಗ). 4 ಮಿದು (ಕಖಗ). 5 ಸುತ್ತೆಪಿಂಗಡ (ಕ), ಸುತ್ತೆಸಂಗಡ (ಖಗ). 6 ಪೊ (ಕಗ). 7 + ಕೇತನ (ಘಚಛ). 8 (ಘಚಛ) ಗಳಲ್ಲಿಲ್ಲ. 9 ಧ್ವಜಂಗಳೆಂ (ಘಚಛ). 10 + ಜನಂ (ಘಚಛ). 11 ಕು (ಚ). 12 ನಿವೇ (ಕಗ). 13 ನಿರ್ಹಾ (ಚ).

ಯರನೆ ಪೋಲ್ವ [1]ಸೌಂದರಿ[1] ಮಹಾದೇವಿ ಮೊದಲಾ[2]ಗೇೞ್ನೂ[2]ರ್ವರರಸಿಯರ್ಕಳ್ ಗುಣಧರ ಭಟಾರರೆ ಗುರುಗಳಾಗೆ ತವ್ಮುತ್ತೈವಿರಪ್ಪ ವಿಜಯವತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಗಿಡಿಗಿಡಿಜಂತ್ರ [೦] ಮಿ[3]ಳಿಮಿಳಿ[3]ನೇತ್ರವಾಗಿ ಘೋರವೀರ ತಪಶ್ಚರಣದೊಳ್ ನೆಗೞುತ್ತಿರ್ದರ್

ಇತ್ತ ವಿದ್ಯುಚ್ಚೋರ ಮುನಿಯುಂ ಪೆನ್ನೆರಡು ವರ್ಷಂಬರೆಗಂ ಗುರುಗಳ ನಗಲದೆ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತುಗ್ರೋಗ್ರ ತಪಶ್ಚರಣದೊಳ್ ನೆಗೞುತ್ತುಮಾಚಾರ್ಯರಾಗಿ ಅಯ್ನೂರ್ವರ್ [4]ಶಿಷ್ಯರ್ಕಳ್[4]ವೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪೋಗಿ ಪೂರ್ವದೇಶದೊಳ್ [5]ಖಾಳಿಮಂಡಳ[5]ಮೆಂಬ ನಾಡೊಳ್ ತಾ[6]ಮ್ರಲಿಪ್ತಿಯೆಂ[6]ಬ ಪೊೞಲ ಪೊಱವೊೞಲನೆಯ್ದಿದಾಗಳಲ್ಲಿ [7]ವರಾಂಗಾ[7]ಯಿಯೆಂ[8]ಬೊಳುಗ್ರ[8] ದೇವತೆಗೞುದಿಂಗ[9]ಳಱುದಿಂಗಳಿಂಗೆಲ್ಲಾ ಕಾಲಮುಂ[9] ಜಾತ್ರೆಯಪ್ಪುದಾ ಜಾತ್ರೆ[10]ಗೆ ನಾಡೆಯ[10]ಷ್ಟಮಿಯಂದು ಬಂದು ನೆರೆದು ಜಾತ್ರೆಯಂ ಮಾಡೆ ದುರ್ಗಾದೇವತೆ ರಿಸಿಯರ ಬರವಂ ಗೆಂಟೞ[3]ೊ[11]ಳಿರ್ದು ಕಂಡಿದಿರಂ ಪೋಗಿ[11] ಇಂತೆಂದಳೆನ್ನ ಜಾತ್ರೆ ಸಮೆವನ್ನೆಗಂ ನೀವಿಾ ಪೊೞಲಂ ಪುಗದಿರಿಮೆಂದು ಬಾರಿಸಿದೊಡೆ ಶಿಷ್ಯರ್ಕಳೆಂದರ್ ನಮ್ಮಂ ದೇವತೆಯೇಗೆಯ್ದಪ್ಪಳ್ ಪೋಪಂ ಭಟಾರಾ ಎಂದು ಭಟಾರರನೊಡಗೊಂಡು ದೇವತೆ ಬಾರಿಸೆವಾರಿಸೆ ಪೊೞಲಂ ಪೊಕ್ಕು ಮತ್ತಿರುಳ್ ಪೊೞಲ ಪಡುವಣ ದೆಸೆಯ ಕೋಂಟೆಯಿಂ ಪೊಱಗಣ ದೆಸೆಯೊಳ್ ವಿದ್ಯುಚ್ಚೋರ ಭಟಾರರ್ ಪ್ರತಿಮಾಯೋಗಂ ನಿಂದೊಡೆ ದೇವತೆ ಮುಳಿದು [12]ಪೊ*ಱ*ಸುಗಳನಿವಿರಿಯುವು[12] ದಂಸಮಸಕಂಗಳಂ ವಿಗುರ್ವಿಸೆ ಮೆಯ್ಯೆಲ್ಲಮನಿರುಳ್ ನಾಲ್ಕು ಜಾವಮುಂ ತಿನೆ ನರಕ ವೇದನೆಯಿಂದಮುಗ್ಗಳಮೆ ವೇದನೆಯಪ್ಪಂತುಪಸರ್ಗಂಗೆಯ್ಯೆ ಅಂತಪ್ಪ ದುಃಖಮುಂ ವೇದನೆಯುಮಂ ಮನದೊಳಿಲ್ಲದಂತಿರೆ ಸೈರಿಸಿ[13] ಆಜ್ಞಾವಿಚಯಮಪಾಯವಿಚಯ ವಿಪಾಕವಿಚಯ ಸಂಸ್ಥಾನವಿಚಯಮೆಂಬೀ ನಾಲ್ಕುಂ ಧರ್ಮಧ್ಯಾನಂಗಳಂ ಧ್ಯಾನಿಸಿ ಬೞಿಕ್ಕೆ ಪೃಥಕ್ತ್ವ ವಿತರ್ಕವೀಚಾರಮೆಂಬ ಪ್ರಥಮ ಶುಕ್ಲಧ್ಯಾನಮಂ ಧ್ಯಾನಿಸುತ್ತಂ ಕ್ಷಪಕಶ್ರೇಣಿಯನೇಱಿ ಏಕತ್ವವಿತರ್ಕವೀಚಾರಂ ಸೂಕ್ಷ್ಮಕ್ರಿಯಾಪ್ರತಿಪಾತಿ ಸಮುಚ್ಛಿನ್ನ ಕ್ರಿಯಾನಿವೃತ್ತಿಯೆಂಬ ಶುಕ್ಲಧ್ಯಾನಂಗಳಂ ಧ್ಯಾನಿಸಿ ಘಾತಿಕರ್ಮಂಗಳಂ ಕಿಡಿಸಿ ಅಂತರ್ಗತಕೇವಳಿಯಾಗಿ ಅಘಾತಿಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್[14]

---

1 ವಸುಂಧರೆ (ಘ ಚ ಛ). 2 ಗಯ್ನೂ (ಘ ಚ ಛ). 3 ಳಮಿಳ (ಘ ಚ ಛ). 4 ರುಷಿಯರ್ (ಘ ಚ ಛ). 5 ಮಂದರ (ಕ) ಮುಂಡಳ (ಖ ಗ). 6 ಮಲಿಪ್ತಮೆಂ (ಘ ಚ ಛ). 7 ಯವಂಗಾ (ಘ ಚ), ಯವರುಗಾಯಿ (ಛ). 8 ಬದುರ್ಗಿ (ಘ ಚ ಛ). 9 ಳ್ವರಂ (ಘ ಚ), ಳ್ವರೆಗಂ (ಛ). 10 ಗಾ ನಾಡೆಲ್ಲಮ (ಘ ಚ ಛ). 11 ಳ್ ಕಂಡಿದಿರ್ವೋಗಿ (ಘ ಚ ಛ). 12 ರುಷಿಯರ್ಗೆ (ಘ ಚ ಛ) *ರ (ಕ ಖ ಗ). 13 + ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾದಿಸಿ (ಘ ಚ ಛ). 14 + ಉಳಿದಯ್ನೂರ್ವರ್ ರುಷಿಯರ್ಕಳುಮುಪಸರ್ಗಂಗಳಂ ಸೈರಿಸಿ ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾದಿಸಿ ಸ್ವರ್ಗಂಗಳನೆಯ್ದಿದರ್ (ಘ ಚ ಛ).

ಮತ್ತೆ ಸಂನ್ಯಸನಂ ಗೆಯ್ಯುತ್ತಿರ್ದ ಭವ್ಯರ್ಕಳ್ [1]ಪರಮ ಶುದ್ಧಸಹಜ[1]ರತ್ನತ್ರಯಮನಾರಾಧಿಸುತ್ತಿ[2]ರ್ದೊ[ರ್][2] ವಿದ್ಯುಚ್ಚೋರ [3]ಋಷಿ[3]ಯರಂ ಮನದೊಳ್ ಬಗೆದು ದಂಡಣೆಗಳುಮಂ ವೇದನೆಗಳುಮಂ ವ್ಯಾಧಿಗಳುಮಂ ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಟಿಕೆಯುಂ ಶೀತೋಷ್ಣವಾತದಂಸಮಸಕಂ ಮೊದಲಾಗೊಡೆಯುವಱಿಂದಪ್ಪ ವೇದನೆಗಳುಂ ದುಃಖಂಗಳುಮಂ ಸೈರಿಸಿ [4]ಪರಮ ಶುದ್ಧಸಹಜರತ್ನತ್ರಯಂಗಳಂ[4] ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

[1] (ಘ ಚಛ) ಗಳಲ್ಲಿಲ್ಲ. [2] ರ್ದೊ (ಕಖಗ), ರ್ದವರ್ಗಳ್ (ಘ ಚಛ). [3] ಮುನಿ (ಘ ಚಛ). [4] ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ (ಘ ಚಛ).

## ೧೪. ಗುರುದತ್ತ ಭಟಾರರ ಕಥೆ

ಗುರುದತ್ತ ಭಟಾರರ ಕಥೆಯಂ ಪೇೞ್ವೆಂ :

ಗಾಹೆ ॥ ಹತ್ಥಿಣಪುರ ಗುರುದತ್ತೋ* [ಸಮ್ಮಲಿ]*[1]ಥಾಳೀವ[1] ದೊಣ್ಣಿಮಂತಮ್ಮಿ
ದಜ್ಝಂತೋ ಅದಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಹತ್ಥಿಣಪುರ—ಹಸ್ತಿನಾಪುರಮುಮಂ ಮುನ್ನಾ[2]ೞ್ವ[2], ಗುರುದತ್ತೋ—ಗುರುದತ್ತ ರಿಸಿ, ಸ*[ಮ್ಮಲಿ]*ಥಾಳೀವ—[3]ಸೂಡಿವೊತ್ತಿಸೆಪಟ್ಟನಂತೆ[3], ದೊಣ್ಣಿಮಂತವಿಹ್ನ—ದೋಣಿಮಂತಮೆಂಬ ಪರ್ವತದ ಸಾರೆ, ದಜ್ಝಂತೋ—ಬೇಯುತ್ತಿರ್ದೋನಾಗಿ, ಅಧಿಯಾಸಿಯ—[4]ಉ[4]ಪಸರ್ಗಮಂ ಸ್ಯೆರಿಸಿ, ಪಡಿವಣ್ಣೋ—ಪೊ[5]ರ್ದಿ[5]ದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ].

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ [6]ಕುಣಾಳ[6]ಮೆಂಬುದು ನಾಡಲ್ಲಿ ಸಾವಸ್ತಿಯೆಂಬುದು ಪೊೞಲದನಾಳ್ವೊನುಪರಿಚರ[7]ನೆಂಬೊನರಸನಾತನ ಮಹಾದೇವಿಯರ್ ಪದ್ಮಾವತಿ ಅಮಿತಪ್ರಭೆ ಸುಪ್ರಭೆ ಪ್ರಭಾವತಿ ಅಂತು ನಾಲ್ವರುಂ ಮಹಾದೇವಿಯರ್ ಮೊದಲಾಗಿ ಅರಸಿಯರ್ಕಳಯ್ನೂರ್ವರ್ ಪದ್ಮಾವತಿ ಮಹಾದೇವಿಯ ಮಗನನಂತ ವೀರ್ಯನಮಿತಪ್ರಭೆಯ ಮಗಂ ವಜ್ರಪಾಣಿ ಸುಪ್ರಭೆಯ ಮಗಂ ವಜ್ರಬಾಹು ಪ್ರಭಾವತಿಯ ಮಗಂ ವಜ್ರ[8]ಧ[8]ರನಿಂತೀ ನಾಲ್ವರುಂ ಮಹಾದೇವಿಯರ ಮಕ್ಕಳ್ ಉೞಿದರಸಿಯರ ಮಕ್ಕಳಯ್ನೂರ್ವರಂತವರ್ಗ[9]ಳಿ[9]ಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ವಸಂತಕಾಲದೊಳ್ ಅಂಕುರಿತ ಪಲ್ಲವಿತ ಕೋರಕಿತ ಕುಸುಮಿತ ಫಲಿತಮಪ್ಪ ಮನೋಹರೋದ್ಯಾನಕ್ಕಯ್ನೂರ್ವರರಸಿಯರ್ಕಳು[10]ಮಣುಗರ್ಕಳುಂ[10] ಬೆರಸು ಪೋಗಿ ಮಹಾವಿಭೂತಿಯಿಂ ವನಕ್ರೀಡೆಯಂ ಪಿರಿದುಂ ಬೇಗಮಾಡಿ ಬೞಿಕ್ಕಾನಂದನವನದೊಳಗಣ ಸುದರ್ಶನಮೆಂಬ ಮಣಿಕುಟ್ಟಿಮಮಪ್ಪ [11]ಬೊಡ್ಡಣ[11] ಬಾವಿಯೊಳ್ ಕರ್ಪೂರ ಕಾಳಾಗರು ತುರುಷ್ಕ ಕುಂಕುಮ ಚಂದನಾದಿ ಸುಗಂಧ ದ್ರವ್ಯಂಗಳಿಂ ಬೆರಸೆ ಪಟ್ಟುದಱೊಳ್ ಮತ್ತಂ [12]ನೀಲೋತ್ಪಲ ಕುವಳಯಂ ಮೊದಲಾಗೊಡೆಯ ನಾನಾ ಪ್ರಕಾರದ ಪುಷ್ಪಜಾತಿಗಳಿಂದಂ ಸಂಛನ್ನಮಪ್ಪುದ[13]ಱೊಳ್ ಚಕ್ರವಾಕ ಬಕ

---

* ಪ್ಪಳಿ (ಸ). [1] ತಾಳಿರ (ಖಗ), ದಾಳಿವ (ಘಚ) ದಾಳಿದ (ಛ). [2] ಳ್ದ (ಗ), ಳ್ದನಾಗಿ (ಘಚಛ). [3] ಕವೆಲೆಪ್ರೊಲು (ಕಗ), ಕವಿಲೆವೊಲ್ (ಖ). [4] ಆಮನುಷ್ಯೋ (ಘಚಛ). [5] ಳ್ದಿ (ಕಖಗ). [6] ಕುಣಾಣ (ಕಗ), ಕಣಾಳ (ಖ) ಕುಳಾಳ (ಘಚಛ). [7] + ಮಹಾರಾಜ (ಘಚಛ). [8] ವ (ಘಚಛ). [9] ಳೆಲ್ಲಮಿ (ಘಚ). [10] ಮನಿಬರ್ ಮಕ್ಕಳುಂ (ಕಖಗ). [11] ಒಡ್ಡ (ಕಗ), ವೊಡ್ಡ (ಖ), ಬೊಂಡಣ (ಘಛ). [12] + ಪದ್ಮ (ಛ). [13] + ದ.

ಬಳಾಕ ಹಂಸ ಮಂಡೂಕ ಜೀವಂ ಜೀವಕ ಚಕೋರಾದಿ ಜಲಚರವಿಹಂಗ ಸಮೂಹಂಗಳನೊಡೆಯದ[1]ಱ[3]ೊಳ್ ನಾಲ್ವರುಂ ಮಹಾದೇವಿಯರ್ವೆರ[2]ಸೊಂದೊ[2]ರ್ವರಂ ನಾನಾ ಪ್ರಕಾರದ ಯಂತ್ರಂಗಳಿಂದಂ ಜೀರ್ಕೊಟಿವಿಗಳಿಂದಂ ತಳಿಯುತ್ತಂ ನೀರ್ಗಳಂ ಸೂಸುತ್ತಂ ಜಲಕ್ರೀಡೆಯಂ ಮನಕ್ಕೆ[3]ವಂದ[3]ರಸಿಯರ್ಕಳೊಡನೆ ನೀಡುಂ ಬೇಗಮಾಡುತ್ತಿರ್ಪನ್ನೆಗಂ

ಮತ್ತಿತ್ತ ವಿಜಯಾರ್ಧ ಪರ್ವತದ ಉತ್ತರ ಶ್ರೇ[4]ಣಿ[4]ಯೊಳಳಕಾಪುರಮೆಂಬುದು ಪೊೞಲದನಾಳ್ವೊಂ ವಜ್ರದಾಡನೆಂಬ ವಿದ್ಯಾಧರನನೇಕ ವಿದ್ಯಾ[5]ಬಲ[5]ಗರ್ವಿತನಾತನ ಮಹಾದೇವಿ ಮದನವೇಗೆಯೆಂಬೊಳಂತವರಿರ್ವರುಮೊಂದು ದಿವಸಂ ರಮ್ಯ ಪ್ರದೇಶಂಗಳೊಳ್ ಕ್ರೀಡಿಸಲ್ವೇಡಿ ಭೌಮವಿಹಾರಕ್ಕೆಂದು ವಿಚಿತ್ರಮಾಗುತ್ತಿರ್ದ ವಿಮಾನಮನೇಱ[1]ಯಾಕಾಶಪಥದೊಳ್ ಪೋಗುತ್ತಿ[6]ರ್ದವರ್ಗಳ್[6] ದೇವಸಮಾನರಪ್ಪ ಸಾಮಂತ ಮಹಾ ಸಾಮಂತರ್ಕಳಿಂದಂ ದೇವಗಣಿಕೆಯ[7]ರಪ್ಸರೆಯರ್ಕಳಂ[7] ಪೋಲ್ವಯ್ನೂರ್ವರರಸಿಯರ್ಕಳಿಂದಂ ಪೆಂಡವಾಸ[8]ದೆಳವೆಂಡಿರಿಂ[8]ದಂ ಪರಿವಾರ ಜನಂಗಳಿಂದಮಿಂತು ದಿವ್ಯಮಪ್ಪ [9]ಸ[9]ಭೆಯಿಂದಂ ಪರಿವೇಷ್ಟಿತನಾಗಿ ಪಟು ಪಟಹ ಪಣವ ತುಣವ ಭಂಭಾ ಮರ್ದಳ ಝಲ್ಲರಿ ಮುಕುಂದ ಶಂಖ ವಂಶ ತಾಳ ಭೇರೀಮೃದಂಗ ವೀಣಾ[10] ಕಹಳಾದಿ ನಾನಾ ಪ್ರಕಾರದ ತೂರ್ಯ[11]ಧ್ವನಿ[11]ಗಳ್ ದೇವದುಂದುಬಿ ಮೊೞಗುವಂತೆ ಭೋರ್ಗರೆದು ಮೊೞಗೆ ಮಹಾ ವಿಭೂತಿಯಿಂದಂ ಜಲಕ್ರೀಡೆಯನಾಡುತ್ತಿರ್ಪ ಪರಿಚರ ಮಹಾ[12]ನೃಪತಿಯ[12]ನಿರ್ವರುಂ ಕಂಡು ವಿಮಾನಮಂ ನಿ[13]ಱ[3][13]ಸಿ ನೀಡುಂ [14]ಬೇಗಂ[14] ನೋಡಿ ಮದನವೇಗೆಯಿಂತೆಂದಳ್ ನಾ[15]ಮಾ[15]ಕಾಶದೊಳ್ ಕಾಗೆಗಳಂತಿರೆ ಪಾಱುವನಿತಲ್ಲದೆ ನಮ[16]ಗಿನಿತು[16] ವಿಭವಮು[17]ಮೈಶ್ವರ್ಯ[17]ಮುಂಟೆ ಶ್ರೀಯೊಳಂ ರೂಪಿನೊಳಂ[18] ವಿಭವದೊಳಂ[19] ನಾನಾ ಪ್ರಕಾರದ ವಿನೋದಂಗಳಿಂದಮುಪರಿಚರ ಮಹಾರಾಜನಿಂದಗ್ಗಳಂ ಪೆಱರಾರುಮಿಲ್ಲಮೀ ಸಂಸಾರದೊ[20]ಳ್ ಬರ್ದ ಬಾೞ ನೀ[20]ತನೆ ಬರ್ದನೆಂದು ಪೊಗೞೆ[3]ಡೆ ವಜ್ರದಾಡಂ ಕೇಳ್ದು [21]ಮನದೊಳ್[12] ಮು[22]ಳಿ[22]ದು ಪುರುಡಿಸಿ ತನ್ನ ಪೊೞಲ್ಗೆ ಪೋಗಿ ಮದನವೇಗೆಯನಲ್ಲಿಟ್ಟು ತಾನೊರ್ವನೆ ವಿಮಾನಮನೇಱ ತುರಿಪದಿಂ ಬಂದು ಜಳಕ್ರೀಡೆಯನಾಡುತ್ತಿರ್ಪ್ಪುಪರಿಚರ ಮಹಾ ನೃಪತಿಯ ಮೇಗೆ ವಿದ್ಯೆಯಿಂದಂ ವಿಗುರ್ವಿಸಿ ಪಿರಿದೊಂದು ಶಿಲೆಯನೆತ್ತಿಕೊಂಡು [23]ಬಂದು ಮಣಿಕುಟ್ಟಿಮಮಪ್ಪ ಸುದರ್ಶನಮೆಂಬ ಬಾವಿಯ ಬಾಗಿಲೆಲ್ಲಮಂ ನಿಶ್ಛಿದ್ರಮಾಗಿ ಮುಚ್ಚಿ ಕವಿದಿಕ್ಕಿ ಪೋದಂ[23] ಪೋದೊಡೆ ಪದ್ಮಾವತಿ ಮೊದಲಾ

---

1 + ದ (ಕಖಗ). 2 ಸು ಓೞೊ (ಕಖಗ). 3 ಮೆಚ್ಚುವ (ಘಚಛ). 4 ಢಿ (ಘಚಛ). 5 (ಛ) ದಲ್ಲಿಲ್ಲ. 6 ದಾರ್ಗಗಳ್ (ಘಚಛ). 7 ರುಮಪ್ಸರೆಯರ್ಕಳಂ (ಖ), . ರಿಗೆ ಸಮಾನೆಯರಪ್ಪರಸಿಯರ್ಕಳ್ಮಂ (ಛ). 8 ದ ಪಲಬರು ಮೊಳ್ಪೆಂಡಿರ್ಕಳಿಂ (ಖಘಚ), ದ ಪಲಬರೊಳ್ಪೆಂಡಿರ್ಕಳಿಂ (ಛ). 9 ಶೋ (ಘಚಛ). 10 + ಜಯಘಂಟಾ (ಘಚಛ). 11 ರವಂ (ಖಘಚಛ). 12 ರಾಜನ (ಘಚಛ). 13 ಲಿ (ಘಚಛ). 14 (ಘಚಛ) ಗಳಲ್ಲಿಲ್ಲ. 15 ವಾ (ಕಗ). 16 ಗಿಂತಪ್ಪ (ಘಚಛ). 17 (ಚಛ) ಗಳಲ್ಲಿಲ್ಲ. 18 + ತೇಜದೊಳಂ (ಘಚಛ). 19 + ಮೈಶ್ವರ್ಯದೊಳಂ (ಘಚಛ). 20 ಳೀ (ಘಚಛ). 21 (ಘಚಛ) ಗಳಲ್ಲಿಲ್ಲ. 22 ನಿ (ಘಚಛ). 23 (ಚ) ದಲ್ಲಿ ತ್ರುಟಿತ.

ಗೊಡೆಯ ನಾಲ್ವರ್ ಮಹಾದೇವಿಯರುಂ ಮೋಹಿಸದ ಬುದ್ಧಿಯನೊಡೆಯರಧಿಗಮ ಸಮ್ಯಗ್‌ದೃಷ್ಟಿಗಳ್ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ಪಂಚನಮಸ್ಕಾರಮನುಚ್ಚಾರಿಸುತ್ತಂ ದೇವರಂ [1]ಜಾ[1]ನಿಸುತ್ತಂ[2] ದರ್ಶನಜ್ಞಾನಚಾರಿತ್ರಂಗಳನಾರಾಧಿ[3]ಸಿ ಮುಡಿಪಿ[3] [4]ಸೌಧರ್ಮಕಲ್ಪದೊಳ್ ಸ್ವಸ್ತಿ ಕಾವರ್ತಮೆಂಬ ವಿಮಾನದೊಳೊಂದು ಸಾಗರೋಪಮಾಯುಷ್ಯಮನೊಡೆಯರ್ ಸಾಮಾನಿಕ ದೇವರಾಗಿ ನಾಲ್ವರುಂ ಪುಟ್ಟಿದರ್ ಮತ್ತುಪರಿಚರ[5]ನಪ್ಪರಸಂ[5] ಮಿಥ್ಯಾ ದೃಷ್ಟಿಯುಪ್ಪುದಱಿಂ ತನ್ನುದ್ಯಾನವನದೊಳ್ ರಾಜ್ಯವಿಭೂತಿಯೊಳಾದಮಾನುಂ ಮೋಹಿ[6]ಸಿ[6]ದ ಬುದ್ಧಿಯನೊಡೆಯನಾರ್ತಧ್ಯಾನದಿಂ ಸತ್ತು ತನ್ನ ಮನೋಹರೋ ದ್ಯಾನವನದೊಳ್[7] ಪೆರ್ವಾಗಿ ಪುಟ್ಟಿದಂ

ಮತ್ತೆರಡನೆಯ ದಿವಸದಂದು ಸಾಮಂತ ಮಹಾಸಾಮಂತರ್ಕಳುಂ ಪರಿ ವಾರಮುಂ ನೆರೆದು ಅನಂತವೀರ್ಯನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ[8]ದರ್ ಮೂಱ[8]ನೆಯ ದಿವಸದಂದು ಸಾರಸ್ವತರೆಂಬಾಚಾರ್ಯರವಧಿಜ್ಞಾನಿಗಳಯ್ನೂರ್ವರ್ ಋಷಿಯರ್ವೆರಸು ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾ ಮುಖಂಗಳಂ ವಿಹಾರಿಸುತ್ತಂ ಆ ಪೊೞಲ್ಗೆ ವಂದು ಮನೋಹರಮೆಂಬ ನಂದನ ವನದೊಳಗಣ ಸ್ಫಟಿಕಶಿಳಾತಳದ ಮೇಗಿರ್ದೊರಂ ಋಷಿನಿವೇದಕಂ ಕಂ[9]ಡುಬಂದ[9] ನಂತವೀರ್ಯ ನೃಪತಿಗೆ ಪೇೞ್ದೊಡಾತನುಂ [10]ಸಪರಿವಾರಂ[10] ಭಟಾರರಲ್ಲಿಗೆ ವಂದನಾ ಭಕ್ತಿಗೆ ವೋಗಿ ಬಲಗೊಂಡು ಗುರುಭಕ್ತಿಗೆಯ್ದು [11]ವಂದಿಸಿಯುೞಿ[11]ದ ರಿಸಿಯರೆಲ್ಲ ರು[11]ಮಂ ಗುರುಪರಿವಿಡಿಯಿಂದಂ ವಂದಿಸಿ ಪಿರಿದುಬೇಗಂ ಧರ್ಮಮಂ ಕೇಳ್ದು [12]ಬೞಿಕಿಂ[12]ತೆಂದು ಬೆಸಗೊಂಡಂ ಭಟಾರಾ ಎಮ್ಮ ತಂದೆಗಂ ತಾ[13]ಯ್ವಿರ್ಕ[13]ಳ್ಗ ಮಾಕಸ್ಮಿಕಮೊರ್ಮೊದಲನಿಬರ್ಗಮೇ ಕಾರಣಂ ಸಾವಾದುದಾರ್ ಕೊಂದರೆಂ[14]ದು ಬೆಸಗೊಂಡೊ[14]ಡೆ ಭಟಾರರಿಂತೆಂದು ಪೇೞ್ದರ್ ಸುದರ್ಶನಮೆಂ[15]ಬ ಬೊಡ್ಡಣ ಬಾ[15]ವಿಯೊಳ್ ನಿಮ್ಮ ತಂದೆಯುಂ ನಾಲ್ವರ್ ತಾಯ್ವಿರ್ಕಳುಂ ಜಳಕ್ರೀಡೆಯ ನಾಡುತ್ತಿ[16]ರ್ಪನ್ನೆಗಂ ಭೌಮವಿಹಾರಾರ್ಥಂ[16] ವಿಮಾನಮನೇಱಿ ಪೋಗುತ್ತಿರ್ದ ವಜ್ರದಾಡನೆಂಬ ವಿದ್ಯಾಧರನುಮಾತನ ಮಹಾದೇವಿ ಮದನವೇಗೆಯೆಂಬೊಳಾ ಯಿರ್ವರುಂ ಕಂಡು ನಿಮ್ಮ ತಂದೆಯ ವಿಭವಮುಂ ಮದನವೇಗೆ ಪೊಗೞ್ದೊಡೆ ವಜ್ರ ದಾಡಂ[17] ಪುರು[18]ಡು ಪುಟ್ಟಿ ಬಾವಿಯ ಬಾಗಿಲಂ[18] ನಿಶ್ಛಿದ್ರಮಾಗಿ [19]ಮುಚ್ಚಿಮೇಗೆ[19]

---

[1] ಧ್ಯಾ (ಖಘಚಛ). [2] + ಸಮ್ಯಗ್ (ಘಚಛ). [3] ಸುತ್ತಂ (ಕಖಗ). [4] + ಸಮಾಧಿವಿಧಿಯಿಂ ಮುಡಿಪಿ (ಚ). [5] ಮಹಾರಾಜಂ (ಘಚಛ). [6] ಸ (ಕಖಗ). [7] + ಸಂಮೂರ್ಚ್ಛಿಮಂ (ಘ), ಸಂಮೂರ್ಚಿಮಂ (ಚಛ). [8] ಮತ್ತೆರಡ (ಕಖಗ). [9] ಡ (ಘಚಛ). [10] ಪರಿವಾರಂ ಬೆರಸು (ಘಚಛ). [11] ಳಿದ ರುಷಿಸಮುದಾಯಮು (ಘಚಛ). [12] ತದನಂತರಮಿಂ (ಘಚಛ). [13] ಯ್ಗಂ ಮಕ್ಕ (ಘಛ). [14] ದೊ (ಘ), ದ (ಚಛ). [15] ಬೊಡ್ಡ ಬಾ (ಕ), ಬೊಡ್ಡಣ ಬಾ (ಖ), ಬ ಬೊಡ್ಡ ಬಾ (ಗ), ಬೊಡ್ಡಣ ವಾ (ಘಚ). ಬೊಡ್ಡಣ ಬಾ (ಛ). [16] ರ್ದಲ್ಲಿ ನಿಮ್ಮ ತಂದೆಯ ವಿಭವಮುಂ (ಕಖಗ). [17] + ಗೆ (ಕಖಗ). [18] ಡಿಸಿ (ಘಚಛ). [19] ಮುಚ್ಚಿ ಮೇಗೆ (ಕ), (ಘಚಛ) ಗಳಲ್ಲಿಲ್ಲ.

ಪಿರಿ[1]ದೊಂದು ಶಿ[1]ಲೆಯನಿಕ್ಕಿಪೋದೊಡೀ ಪಾಂಗಿನೊ[2]ಳ[2]ವರ್ಗಳನಿಬರ್ಗಂ ಮೃತ್ಯುವಾದುದೆಂದು ಪೇ[3]ೞ್ದೊಡೆ[3] ಮತ್ತಮವರೆಲ್ಲಿ ಪುಟ್ಟಿದರೆಂದು ಬೆಸ[4]ಗೊಂಡೊಡೆ[4] [5]ಭಟಾರರಿಂತೆಂದರ್[5] ನಿಮ್ಮ ತಾಯ್ವಿರ್ಕಳ್[6] ಬ್ರ[7]ತನುಂ ಪರಿ[7]ಪಾಲಿಸಿ ಸಾವ ಕಾಲದೊಳಾಹಾರಕ್ಕಂ ಶರೀರಕ್ಕಂ [8]ಜಾವಜ್ಜೀವಂ[8] ನಿವೃತ್ತಿಗೆಯ್ದು ಸಮಾಧಿಮರಣದಿಂದಂ ಮುಡಿಪಿ ಸೌಧರ್ಮಕಲ್ಪದೊಳ್ ಸ್ವಸ್ತಿಕಾವರ್ತಮೆಂಬ ವಿಮಾನದೊಳೊಂದು ಸಾಗರೋಪಮಾಯುಷ್ಯಮನೊಡೆ[9]ಯರ್ ಕಾಂತನುಂ ಸುಕಾಂತನುಂ ನಂದನುಂ ಸುನಂದನು[9]ಮೆಂಬ ದೇವರ್ಕಳಾಗಿ ಪುಟ್ಟಿದವರ್ಗಳ್ ನಿಮ್ಮು[10]ಮಂ ನಿ[10]ಮ್ಮ ತಂದೆಯುಮಂ ಪ್ರತಿಬೋಧಿಸಲ್ಕೀಗಳೆ ಬಂದಪ್ಪರೆಂದು ಪೇೞ್ದು ಮತ್ತೆ ನಿಮ್ಮ ತಂದೆ[11]ಯುಂ ತ[11]ನ್ನ ಪೆಂಡಿರ್ ಮಕ್ಕಳ್ ಪರಿವಾ[12]ರಂ[12] ಕಸವರಮೆಂದಿವಱೊಳ್ ಮೋಹಿಸಿದ ಬುದ್ಧಿಯನೊಡೆಯನಾಗಿ [13]ಅಲ್ಲಿಯ[13] ನಂದನವನದೊಳಗಣ ಸ[14]ರ್ಪಾ[14]ಶ್ರಯಮೆಂಬ ಗುಹೆಯೊಳ್ [15]ಮಹಾಕಾಯಂ[15] ಪೆರ್ಮಾವಾಗಿ ಪುಟ್ಟಿದನೆಂದೊಡೆ ಧರ್ಮಮಂ [16]ಕೈ[16]ಕೊಳ್ಗುಮೊ [16]ಕೈ[16]ಕೊಳ್ಳನೊ ಎಂದು [17]ಬೆಸಗೊಂಡೊಡೆ[17] [18]ಭಟಾರರಿಂತೆಂದರ್[18] ನೀ[19][ನ್][19] ಪೇೞೆ[3] ಧರ್ಮಮಂ ಕೈಕೊಳ್ಗುಮೆಂದೊಡೆ ತ[20]ಮ್ಮಂದಿರುಂ[20] ಪರಿವಾರ[21]ಮುಂ[21] ಬೆರಸು ಪೋಗಿ ಗುಹೆಯ ಬಾಗಿಲೊಳಿರ್ದಿಂತೆಂದನೆಲೆಯುಪರಿಚರ ಮಹಾರಾಜಾ ಪೆರ್ಮಾವಾಗಿ ಪುಟ್ಟಿಯುಮಿಂತಪ್ಪವಸ್ಥೆ[22]ಯೊಳಂ[22] ಬಾೞ್ಕೆ[23]ಯೊಳಂ ಇನ್ನುಂ ನಿನಗ[23]ೞ್ತಿಯೆ ನಿನಗೆ ದೋಷಮಿ[24]ಲ್ಲೇಕೆಂದೊಡೆ[24] ಜೀವಂಗಳ ಸ್ವಭಾವಮಿಂತುಟು

ಶ್ಲೋಕ ॥ ಯತ್ರ ಯತ್ರೋಪಪದ್ಯಂತೇ ಜೀವಾಃ ಕರ್ಮವಶಾನುಗಾಃ ।
ತತ್ರ ತತ್ರ ರತಿಂ ಯಾಂತಿ *ಸ್ವೇನ ಸ್ವೇನೈವ* ಕರ್ಮಣಾ ॥

ಎಂಬುದು ತಮ್ಮ ಕರ್ಮವಶದಿಂ [25]ಸಂಸಾರಿ[25]ಜೀವಂಗಳೆಲ್ಲಿ ಪುಟ್ಟುಗುಮಲ್ಲಿಯಲ್ಲಿಯಱ್ತಿಯುಂ [26]ಮೆಚ್ಚು[26]ಗೆಯುಮಕ್ಕುಂ ಮುನ್ನೆ ನೀನ್ ಕರುಮಾಡದೊಳ್ ಸಿಂಹಾಸನಮಸ್ತಕಸ್ಥಿತನಾಗಿ ಸಾಮಂತ ಮಹಾಸಾಮಂತರ್ಕಳಿಂದಮಯ್ನೂರ್ವರರಸಿಯರ್ಕಳಿಂದಂ ಪೆಂಡವಾಸದಗ್ಗಳದ ಸೂಳೆಯರ್ಕಳಿಂದಂ ಪರಿವಾರದಿಂದಮಿಂತಪ್ಪ [27]ದಿಬ್ಯ[27]ಸಭೆಯಿಂದಂ ಪರಿವೇಷ್ಟಿತನಾಗಿ ಆಟಪಾಟವಿನೋದಂಗಳಿಂದಿರ್ಪಾತ

---

1 ದುಸೆ (ಘಚ), ಯಸಿ (ಛ). 2 ಳಂತ (ಗ). 3 ಳೆ (ಘಛ). 4 ಗೊಳೆ (ಘಚಛ). 5 (ಚಛ) ಗಳಲ್ಲಿಲ್ಲ. 6 + ಸಮ್ಯಕ್ತ್ವಪೂರ್ವಕಂ ಶ್ರಾವಕ (ಘಚಛ). 7 ತಂಗಳಂ ಪ್ರತಿ (ಖಘಚಛ). 8 (ಘಚಛ) ಗಳಲ್ಲಿಲ್ಲ. 9 ಯರ್ ನಂದನುಂ ಸುನಂದನು (ಖಕಗ), ಯೊರಾಗಿ ನಂದನುಂ ಸುನಂದನುಂ ದ್ಯುತಿಕಾಂತನುಂ ಸುಕಾಂತನು (ಘಚಛ). 10 ಮುನ್ನಿ (ಗ). 11 ಯು ಮೆ (ಘಚಛ). 12 ರಕ್ಕಂ (ಕಖಗ). 13 ಯಾರ್ತಧ್ಯಾನದಿಂ ಸತ್ತೀ (ಘಚಛ). 14 ರ್ವಾ (ಕಖಗ). 15 (ಘಚಛ) ಗಳಲ್ಲಿಲ್ಲ. 16 (ಘಚಛ) ಗಳಲ್ಲಿಲ್ಲ. 17 ಎಂದು ಬೆಸೆಗೊಳೆ (ಘಚ), ಎಂದಡೆ (ಚ). 18 (ಘಚಛ) ಗಳಲ್ಲಿಲ್ಲ. 19 ನು (ಕಗ), ನುಂ (ಖ), ನಿಂ (ಘಚಛ). 20 ನ್ನ (ಘಚಛ). 21 ಮನಿತುಂ (ಘಚಛ). 22 ಯ (ಘಚಛ). 23 ನಿನಗಿನ್ನುಮ (ಘಚಛ). 24 ಲ್ಲ ಕೇಳಾ (ಘಚಛ). *ರಂಜಿತಾಸ್ತೇನ (ಘಚಛ). 25 ಸಂಸಾರ (ಕಗ), (ಘಚಛ) ಗಳಲ್ಲಿಲ್ಲ. 26 ಪೆರ್ಚು (ಕಗ). 27 (ಘಚಛ) ಗಳಲ್ಲಿಲ್ಲ.

[1]ನರ್ ಈಗಳ್[1] ಪೆ[2]ರ್ವಾವುಗಳೊಡನೆ ನೆರೆದಿರವಾ[2]ಯ್ತು ಮತ್ತೆ ದಿವ್ಯಮಪ್ಪ ಶಯ್ಯಾತಳ[3]ದೊಳ್ ನಿದ್ರೆಗೆಯ್ವಾತನರ್[3] [4]ಈಗಳ್ ಪೆ[4]ಟ್ಟೆಗಳುಂ ಕಿಱುಗ[5]ಲ್ಗಳು ಮೊ[5]ತ್ತೆ [6]ನಿದ್ರೆಗೆಯ್ವಿಯಾದರ್[6] ಮತ್ತಮೃತೋಪಮಮಪ್ಪ ದಿಬ್ಯಾಹಾರಮ ನುಣ್ಬಾತನರ್ ಈಗಳ್ ಕಪ್ಪೆ[7]ಗಳುಮೆ[7]ಸಡ಼ುಗ[8]ಳುಮಿಲಿಗಳುಮೊಂ[8]ತಿಗಳುಂ ಮೊದ ಲಾಗೊಡೆಯ ಜೀವರಾಶಿಗಳಂ ಕೊಂದು ತಿನ್ಬೆಯಾದರ್ ಇನ್ನವಂ ತಿಂದು ನರಕಂಬುಗಲಾಟಿಸಿದಪ್ಪರ್ ಎಂದು ಪೇಟಿ[3] ಜಾತಿಸ್ಮರನಾಗಿ ಗುಹೆಯ ಬಾಗಿಲೊಳ್ [9]ಬಂ[9]ದಿರ್ದು ಧರ್ಮಮಂ ಕೇಳುತ್ತಿರ್ಪನ್ನೆಗಮಾ ಸೌಧರ್ಮಕಲ್ಪದೊಳ್ ಪುಟ್ಟಿರ್ದ ನಾಲ್ವರುಂ ದೇ[10]ವರ್ಕ[10]ಳ್ ತಮ್ಮ ಮುನ್ನಿನ ಪೆ[11][ಣ್ಣ][11]ರೂಪಂಗಳಂ ಕೈಕೊಂಡು ಬಂದು ಮುಂದೆ ನಿಂದಾಗಳ್ [12]ಮಕ್ಕಳ್[12] ತಮ್ಮ ತಾಯ್ವಿರ್ಕಳ್ಗೆ ಕ್ಷೇಮಂಗುಡಲೆಂದು ಪೋದೊ[13]ಡ[13]ನ್ನೆಗಂ ಅವ[14]ರ್[14] ಮುಟ್ಟದೆ ಮೇಗಣ್ಗೆ ನೆಗೆದಿರ್ದೊಡಿದೇನೆಂದು ಬೆಸಗೊಂ[15]ಡೊಡವರ್[15] ವಜ್ರದಾ[16]ಡಂ [16]ಕೊಲೆ ಸತ್ತು ತಮ್ಮ ದೇವಗತಿಯೊಳ್ ಪುಟ್ಟಿದ ತೆಱನೆಲ್ಲಮುಂ ಪೇಟ್ದು ಉಪರಿಚರ ಮಹಾನೃಪತಿಯಂ

ವೃ ॥ ಏತತ್ಕ್ಷೇತ್ರಂ ಮದೀಯಂ ಗೃಹಮಿದಮುಪರು ಮಾತೃ[17]ಭಾರ್ಯಾ[17] ಮಮೈತಾಃ
ಪುತ್ರೋಽಮೇಯಂ ಮೇ ಸುಕಾಂತ ಸ್ವಸೃ ದುಹಿತೃಜನೋ ಮಾನುಷೋ ಬಂಧುವರ್ಗಃ ।
ಅಶ್ವಾದಾಸಾ ಮನುಷ್ಯಾ ಮಮಪರಮಹಿತಾ [18]ದ್ರವ್ಯ[18]ಗಾವೋ ಮಹಿಷ್ಯಃ
ಇತ್ಯೇವಂ ಮೇ ಬ್ರುವಾಣೋ ನರಪಶುರನಿಶಂ ನಾಶಯತ್ಯಾತ್ಮಕಾರ್ಯಂ ॥

ಆರ್ಯೆ ॥ ಅರ್ಥೋಽ ಮೇ ಭಾರ್ಯಾ ಮೇ ಪುತ್ರೋ ಮೇ ಸ್ವಜನಬಂಧುವರ್ಗೋಽ ಮೇ ।
ಇತಿ ಮೇ ಮೇ ಕುರ್ವಾಣಂ ಪುರುಷ ಪಶುಂ ಹಂತಿ ಕಾಲವೃಕಃ ॥

ಎಂದಿವಱರ್ಥಮನಿಂತೆಂದು ಪೇಟ್ದೊಡೆ ಎನ್ನ ಮಾಡಮೆನ್ನ ಪೊಲಿನ್ನ [19]ನಾಡೆನ್ನ ತಾಯೆನ್ನ[19] ಪೆಂಡಿರೆನ್ನ[20]ಮಕ್ಕಳೆನ್ನ[20] ತಂಗೆವಿರೆನ್ನ ಮಾವ[21]ಂದಿರೆ[21]ನ್ನ ಬಂಧುವರ್ಗ ಮೆನ್ನಾನೆಗಳೆನ್ನ ಕುದುರೆಗಳೆನ್ನೆಮ್ಮೆಗಳೆನ್ನ ಪಶುಗಳೆನ್ನ ಪರಿವಾರಮೆನ್ನ ತೊಟ್ತಿರೆನ್ನ ಮಾಣಿಕ ಭಂಡಾರಂ ಸುವರ್ಣ ಭಂಡಾರಂ [22]ಪಟ್ಟೆಸ ಭಂಡಾರ[22]ಮೆಂದಿವಱೊಳ್ ಮೋಹಿಸಿದ ಬುದ್ಧಿಯನೊಡೆಯನಾಗಿಯಾರ್ತಧ್ಯಾನದಿಂ ಸತ್ತು ಪೆರ್ವಾವಾಗಿ ಪುಟ್ಟ[23]ದೊರ್ಡೀಗಳಾ[23]ಮುಂ ಪೆಂಡಿರಾಗಿಯುಮಿನಿವಿರಿದು ಶ್ರೀಯುಂ ವಿಭವಮು [24]ಮನೆಯ್ದಿದೆಮೆಂದು ಪೇಟ್ದುಂ ತಮ್ಮ ದೇವತ್ವಮಂ ತೋಱಲ್ವೇಡಿ ಆಕಾಶಮೆಲ್ಲಂ

---

1 ನೀಗಳೇಕೆ (ಘಚಛ). 2 ಬ್ಬಾ....ಮಾ (ಕ), ರ್ವಾ....ಮಾ (ಖ), ರ್ಬಾ.... ಮಾ (ಗ), ರ್ವಾ....ವಾ (ಘಚ), ರ್ವಾವಾಗಿ ಪುಟ್ಟಿದೊಡನಿರವಾ (ಛ). 3 ದ ಮೇಲಿರ್ಪಾ ತನೆ (ಚ), ದೊಳಿರ್ಪಾತನೆ (ಘಛ). 4 ಈಗಳ್ವೆ (ಖ), ಈಗಳ್ಬೆ (ಕಗ), ಪೆ (ಘಚಛ). 5 ಲ್ತಗುಳ್ಗಳುಂ ಮೊ (ಕಗ). 6 ಬಱುನೆಲದೊಳ್ ಪಡುವೆಯಾವೈ (ಘಚಛ). 7 ಳ್ಮೆ (ಘಛ). 8 ಳುಮೊಂ (ಕಖಗ), ಳ್ಮಿಲಿಗಳ್ಮೊಂ (ಘಚಛ). 9 ಪಟ್ಟಿ (ಘಚಛ). 10 ವಿಯರ್ಕ (ಕಖಗ). 11 ಣ್ಣು (ಕಖಗ), ಣ್ (ಘಚಛ). 12 ಕಂಡು (ಚಛ), (ಘ) ದಲ್ಲಿಲ್ಲ. 13 ನ (ಘಚಛ). 14 ರಂ (ಕಖಗ). 15 ಡಡೆ (ಘಚ). 16 ಡನಿಂ (ಘಚಛ). 17 ವರಾ. 18 ದಿವ್ಯ. 19 (ಘಚಛ) ಗಳಲ್ಲಿಲ್ಲ. 20 (ಖ) ದಲ್ಲಿಲ್ಲ. 21 ನೆ (ಘಚ), ರೆ (ಛ). 22 (ಘಚಛ)ಗಳಲ್ಲಿಲ್ಲ. 23 ರ್ದನಾ (ಘಛ), ದರ್ ನಾ (ಚ). 24 + ಂ ದೇವತ್ವಮು (ಘಚಛ).

ಚಿತ್ರಪಟಂ[1]ಗೆ[1]ದಱಿದಂತೆ ವಿಮಾನಂಗಳಿಂ ಸಂಛನ್ನಮಾಗಿ [2]ವ್ಯಾಪಿಸೆ[2] ಪರಿವಾರ ದೇ[3]ವಿಯ[3]ರ್ಕಳಿಂದಂ [4]ದೇವರ್ಕಳಿಂದಂ[4] ಗಣಿಕೆಯರ್ಕಳಿಂದ[5]ಮಪ್ಸರಸೆಯರ್ಕಳಿಂದಂ[5] ಪರಿವೇಷ್ಟಿತರಾಗಿ ನಾಲ್ವರುಂ ದೇವರ್ಕಳ್ ಘಂಟಾಜಾಳ ಮುಕ್ತಾಜಾಳ[6]ಸಮನ್ವಿತ ಮಪ್ಪ ರತ್ನಮಯಮಾಗುತ್ತಿರ್ದ ವಿಚಿತ್ರಮಪ್ಪ ವಿಮಾನಂಗಳನೇಱಿ ದೇ[7]ವಿಯ[7]ರ್ಕಳ್ ಚಾಮರವಿಕ್ಕೆಯಾಟಪಾಟವಿನೋದಂಗಳಿಂದಿಂತು ತಮ್ಮೈಶ್ವರ್ಯಮೆಲ್ಲಮಂ ತೋಱಿ ಇಂತೆಂದರ್ ಇದೆಲ್ಲಮೆಮಗೆ [8]ಜಿನ[8] ಧರ್ಮದ [9]ಪರಮಸತ್ವದ[9] ಪ್ರಸಾದದಿ ನಾದುದು [10]ಮತ್ತುಪರಿಚರ ಮಹಾರಾಜಂ ಪುರುಷನಾಗಿಯುಂ ಮಹಾಸತ್ವಮ ನೊಡೆಯನಾಗಿಯುಂ ಮಿಥ್ಯಾತ್ವಂ ಕಾರಣಮಾಗಿಯಾರ್ತಧ್ಯಾನದಿಂ ಸತ್ತು ಪೆರ್ಮಾವಾಗಿ ಪುಟ್ಟಿದನೆಂದು[10] ಪೇೞ್ದು ಮಕ್ಕಳಂ ಪೆರ್ಮಾವುಮಂ ಪ್ರತಿಬೋಧಿಸಿ ತಮ್ಮ ಸ್ವರ್ಗಲೋಕಕ್ಕೆ ಪೋದರ್

ಮತ್ತೆ ಪೆರ್ಮಾವೆನ್ನರಸಿಯರ್ಕಳ್ ದೇ[11]ವರಾ[11]ಗಿ ಪುಟ್ಟಿದರೆಂದಾದಮಾನುಂ ಸಂತೋಷಂಬಟ್ಟು ಧರ್ಮಪರಿಣಾಮದೊಳ್ ಕೂಡಿರ್ದುದಂ ಸಾರಸ್ವತ ಭಟಾರರಱಿದು ಋಷಿಸಮುದಾಯಂಬೆರಸು ಪೆರ್ಮಾವಿ[12]ರ್ದೆಡೆ[12]ಗೆ ಪೋಗಿ ಇಂತೆಂದು ಧರ್ಮಮಂ ಪೇೞ್ದಿಪರ್

ಗಾಹೆ ॥ ಸೋ ಧಮ್ಮೋ ಜತ್ಥದಯಾ ಸೋ ವಿ ತಓ ವಿಷಯಣಿಗ್ಗಹೋ ಜತ್ಥ ।
ದಸ ಅಟ್ಠದೋಸರಹಿಓ ಸೋ ದೇವೋ ಣತ್ಥಿ ಸಂದೇಹೋ ॥

ಮತ್ತಂ

ವೃ ॥ ಯತ್ನೇನ ಪಾಪಾನಿ ಸಮಾಚರಂತಿ
ಧರ್ಮಂ ಪ್ರಸಂಗಾದಪಿ ನಾಚರಂತಿ ।
ಆಶ್ಚರ್ಯಮೇತದ್ಧಿ ಮನುಷ್ಯ ಲೋಕೇ
ಕ್ಷೀರಂ ಪರಿತ್ಯಜ್ಯ ವಿಷಂ ಪಿಬಂತಿ ॥

ಸಮಾಗಮಾಃ ಸ್ವಾಪಸಮಾಹಿ ಸರ್ವೇ ವಿಭೂತಯೋಽಪಿ ಪ್ರತಿಭಂಗುರಾಃ ಸ್ಯುಃ ।
ಧರ್ಮೋಽರ್ಹತಾಮೇವ ಸುಶಾಶ್ವತೋಽಯಮಿತಿ ಪ್ರಚಿಂತ್ಯಾತ್ಯರತಿರ್ಬಭೂವ ॥

ನಿಶ್ಚಯಮುದಿತಸ್ಯ ರವೇಃ ಪತನಂ ಜಾತಸ್ಯ ಮರಣಮಪಿ ಸರ್ವಸ್ಯ ।
ತಸ್ಮಾದ್ವಿದುಷಾ ಭಾವ್ಯಂ ಸದೈವ ಜಾತೇನ ಧರ್ಮಕರ್ಮರತೇನ ॥

ಪುಷ್ಪ ಫಲಭಾರ ತರುವದ್ಯೌವನ ಬಲ ವಿಭವ ರೂಪ ಸೌಭಾಗ್ಯಾನಿ ।
ಗಿರಿಸರಿದಂಭಃ ಪ್ರತಿಮಂ ಸರ್ವೇಷಾಂ ಜೀವಿತಂ ಚ ಧಾವತಿ ಶೀಘ್ರಮ್ ॥

ಗಾಹೆ ॥ ಏಗೋ ಯ ಮರದಿ ಜೀವೋ ಏಗೋ ಯ ದಿವಂ ಉವವಜ್ಜಇ ।
ಏಗೋ ಸ ಜಾಇ ಮರಣಂ ಏಗೋ ಸಜ್ಝಾಇ ಣಿರಯಂ [ವಾ] ॥

1 ಕೆ (ಕಖಗ). 2 ಬ್ಯಾಪಿಸೆ (ಕಗ), ಧ್ಯಾನಿಸೆ (ಚ). 3 ವ. (ಘಚಛ). 4 (ಘಚಛ) ಗಳಲ್ಲಿಲ್ಲ. 5 (ಘಚಛ) ಗಳಲ್ಲಿಲ್ಲ. 6 + ಮೆಮಾಜಾಳಂಗಳಿಂ (ಕಖಗ). 7 ವ (ಘಚಛ). 8 ಜೀವ (ಕಗಘಚ). 9 (ಘಚಛ) ಗಳಲ್ಲಿಲ್ಲ. 10 (ಕಗ) ಗಳಲ್ಲಿಲ್ಲ. 11 ವರ್ಕಳಾ (ಘಚಛ). 12 ದರ್ಲ್ಲಿ (ಘಚಛ).

ಶ್ಲೋಕ ॥ ಕಸ್ಯ ಮಾತಾ ಪಿತಾ ಕಸ್ಯ [ಕಸ್ಯ] ಭಾರ್ಯಾ ಸುತೋಪಿವಾ ।
ಜಾತೌ ಜಾತೌ ಹಿ ಜೀವಾನಾಂ ಭವಿಷ್ಯಂತಿ ಪರೇ ಪರೇ ॥

ಅರ್ಥಾ ಗೃಹೇಷು ತಿಷ್ಠನ್ತಿ ಶ್ಮಶಾನೇಷು ಚ ಬಾಂಧವಾಃ ।
ಶರೀರ ಜ್ವಾಲಮಾಲಾಯಾಂ ಸುಕೃತಂ ದುಷ್ಕೃತಂ ವ್ರಜೇತ್ ॥

ಎಂದಿಂತು ಪಿರಿದು ಬೇಗಂ ಧರ್ಮಮಂ [1]ಪೇೞ್ದು[1] ಶ್ರಾವಕಬ್ರತಂಗಳನೇಱಿಸಿ ಮತ್ತಮಿಂತೆಂದರ್ ನಿನಗಾಯುಷ್ಯಂ ಪದಿನಯ್ದು ದಿವಸಮೆಂದು ಪೇೞ್ದೊಡಾಮಾತಂ[2] ಕೇಳ್ದು ಆಹಾರ ಶರೀರ[3]ಕ್ಕಂ[3] ಜಾವಜ್ಜೀವಂ ನಿವೃತ್ತಿಗೆಯ್ದು ಸಂನ್ಯಸನಂ ಗೆಯ್ದಿರ್ದೊಡದಂ ಭಟಾರರೞಿದನಂತವೀರ್ಯಂಗೆ ಪೇೞ್ದರಿದು ಸಂನ್ಯಸನಂ ಗೆಯ್ದಿರ್ದುದಿದರ್ಕೆ ಪೂಜೆಯಂ ಮಾಡಿಮೆನೆ [4]ಆತನುಂ[4] ಪಿರಿಯ ಪಂ[5]ದರಂ[5] ಮಾಡಿಸಿಯಲ್ಲಿ ನಾನಾ ಪ್ರಕಾರದ ನೇತ್ರ ಪಟ್ಟೆ[6]ಯುಲ್ಲವಂಗ [ಳುಮ]ಂ[6] [7]ಧ್ವಜಂಗಳುಮಂ[7] ಕಟ್ಟಿಸಿ [8]ದೇವತಾ[8] ಪ್ರತಿಮೆಯಂ ನಿಱಿಸಿಯಭಿಷೇಕಂ ಗೆಯ್ಯುತ್ತಂ [9]ಮೂಱು ಪೊೞ್ತುಂ[9] ಮಹಾಮಹಿಮೆಯಂ ಪೂಜೆಗಳುಮಂ ಪೊ[10]ಡೆ[10]ಮಡಿಸುತ್ತಿರೆ ಭಟಾರರುಮಾರಾಧನೆಯುನರ್ಚಿಸಿ ಸ್ವಾಧ್ಯಾಯಂಗೊಂಡಿಂತೆಂದಾರಾಧನೆಯಂ ವಕ್ಖಾಣಿಸಲ್ ತಗುಳ್ದರ್

ಶ್ಲೋಕ ॥ ಸಂನ್ಯಸನೇ[11]ಸ್ತಿ [ಮತಿಯೋ ?][11] ಪ್ರಾಣೈಃ ಕಂಠಗತೈರಪಿ
ಸ ಗಚ್ಛೇನ್ಮೋಕ್ಷಸದನಂ ಪುನರಾಗಮವರ್ಜಿತಮ್ ॥

ಇಹ ಜೀವಕೃತಂ ಪಾಪಂ ಯಚ್ಚ ಪಾಪಂ ಪುರಾಕೃತಂ ।
ಸಂನ್ಯಸನೇನ ತತ್ಸರ್ವಂ ದಹತ್ಯಗ್ನಿರಿವೇಂಧನಂ ॥

ಅಜ್ಞಾನಭಾವಾತ್ ಕೃತ ಕರ್ಮಭಾರಃ ಸಂನ್ಯಾಸನಾತ್ಸತ್ತ್ರಲಯಂ ಪ್ರಯಾತಿ।
ಮುಹೂರ್ತಕಾಲೇ ಹೃದಯೇ ಲಲಾಟೇ ಜೀವಂ ಕರಂ ನ್ಯಸ್ಯ ಸಮುಸ್ಥಿತಸ್ಯ ॥

ಗಾಹೆ ॥ ಉಸ್ಥಮಹೇ ತಿರಿಯಮ್ಮಿಯ ಮದಾಣಿ ಯಕಾಮುಗಾಣಿ ಮರಣಾಣಿ।
[12][ದಂಸಣ ಣಾಣ ಸಮುಗ್ಗೋ][12] ಪಂಡಿಯ ಮರಣಂ ಅಣುಮುಲಿಸ್ಸಂ ॥

[13][ಪು][13]ವ್ವೇ ಮರಣಂ ಜಾಈ ಮರಣಂ ಣಿರಯೇ ಸುವೇದಣಾಓ ಯ ।
ಏದಾಣಿ ಸಂಚರಂತೋ ಪಂಡಿಯ ಮರಣಂ ಅಣುಮುಲಿಸ್ಸಂ ॥

ಎಕ್ಕಂ ಪಂಡಿಯ ಮರಣಂ ಛಿಂದಣ ಜಾಈಸದಾಣಿ ಬಹುಗಾಣಿ ।
ತಂ ಮರಣಂ ಮರಿದವ್ವಂ ಜೇಣ ಮದಂ ಸುಮ್ಮದಂ ಹೋಇ ॥

ಜಇ ಉಪ್ಪಜ್ಜಇ ದುಕ್ಖಂ ತೋ ದಟ್ಠವ್ವೋ ಸಭಾವದೋ ಣಿರಯೇ ।
ಕದಮಂ ಮಏ ಣ ಪತ್ತಂ ಸಂಸಾರೇ ಸಂಸರಂತೇಣ ॥

---

1 ಕೇಳ್ದು (ಕಖಗ). 2 + ನಂಬಿ (ಚ). 3 ಕ್ಕೆ (ಘಛ). 4 ಯಾದಮಾನುಂ (ಘಚಛ). 5 ಡಮುಂ (ಖ), ಟಪಮುಂ (ಕಗ). 6 ಯುಲ್ಲರಂಗಳುಂ (ಕಖಗ), ಯುಲ್ಲವಂಗಳ್ಮಂ (ಘಛ), ಯಂಲ್ಸಂಗಳಂ (ಚ). 7 (ಘಚಛ) ಗಳಲ್ಲಿಲ್ಲ. 8 ಸರ್ವಜ್ಞ (ಘಚಛ). 9 (ಕಖಗಘ) ಗಳಲ್ಲಿಲ್ಲ. 10 ಱ (ಖಚಛ). 11 ಸ್ತಿಮಿತಯೋ ಮ್ರಾಯಾತ್ (ಕಖಗಘ), ಸ್ತಮಿತೇ ಭ್ರೂಯಾತ್ (ಚಛ). 12 ದಂಸಣಾಣ ಸಹಗದೋ (ಕಖಗ), ದಂಸಣಾಣ ಸಹದೋ (ಘಚ), ದಂಸಣ ಣಾಣ ಸಹದೋ (ಛ). 13 ಉ (ಸ).

ಸಂಸಾರಚಕ್ಕವಾಳಮ್ಹಿ ಮಏ ಸವ್ವೇ ಪೊಗ್ಗಳಾ ಬಹುಸೋ।
ಆಹಾರಿದಾ ಯ ಪರಿಣಾಮಿದಾಯ ಣ ಚ ಮೇ ಗದಾ ತಿತ್ತೀ॥

ಆಹಾರಣಿಮಿತ್ತಂ ಕಿರ ಮಚ್ಛಾ ಗಚ್ಛಂತಿ ಸತ್ತಮಂ ಪುಢವಿಂ।
ಸಚ್ಚಿತ್ತೋ ಆಹಾರೋ ಣಖಮುದಿ ಮಣಸಾ ವಿ ಪತ್ಥೇದುಂ॥

ತಣಕಟ್ಠೇಣ ವ ಅಗ್ಗೀ ಲವಣಸಮುದ್ದೋ ಣದೀಸಹಸ್ಸೇಹಿಂ।
ಣ ಇಮೋ ಜೀವೋ ಸಕ್ಕೋ ತಪ್ಪೇದುಂ ಕಾಮಭೋಗೇಹಿಂ॥

ಜಹ ಜಹ ಭುಂಜಇ ಭೋಗೇ ತಹ ತಹ ಭೋಗೇಸು ವಡ್ಢದೇ ತಣ್ಹಾ।
ಅಗ್ಗೀವ ಇಂಧಣಾಇಂ ತಣ್ಹಂ ದೀ[1][ವ][1]ಂತಿ ಸೇ ಭೋಗಾ॥

ವೃ॥ ಸಲವಣರಸಮಂಭೋ ಭುಜ್ಯಮಾನಂ ತೃಷಾರ್ತೈ
ರಧಿಕತರ ತೃಷಾರ್ತಾನ್ ದುಃಖಿತಾನೇನ ಕುರ್ಯಾತ್।
ವಿಷಯ ಸುಖಮಪೀದಂ ಭುಜ್ಯಮಾನಂ ತೃಷಾರ್ತೈ॥
ರಧಿಕತರ ತೃಷಾರ್ತಾನ್ ದುಃಖಿತಾನೇನ ಕುರ್ಯಾತ್॥

ಆರ್ಯೆ॥ ಯದ್ಯಪಿ ನಿಷೇವ್ಯಮಾಣಾ ಮನಸಸ್ಸಂತುಷ್ಟಿ ಕಾರಕಾ ವಿಷಯಾಃ।
ಕಿಂಪಾಕಫಲಾಶನವದ್ಭವಂತಿ ಪಶ್ಚಾದತಿ ದುರಂತಾಃ॥

ವೃ॥ ಮರ್ದುಂ ಮಂತ್ರ[2]ಮುಮಿ[2]ಷ್ಟದೇವತೆಗಳುಂ ದಿವ್ಯಾಸ್ತ್ರಮುಂ ಕೋಂಟೆಯುಂ
[3]ಗುರ್ದುಂ[3] ಪೊರ್ದಿದ ಚಾತುರಂಗ ಬಲಮುಂ ಮೆಯ್ಗಾಪುಮಾ ವೇಳೆಗೊಂ।
೮: ಪೊೞಲ್—ಪಟ್ಟಣ; ಆಳ್ವಂ—ಆಳುವವನು; ನೋಡಿದರೆಲ್ಲರ್ಗಳ—ನೋಡಿದವರೆಲ್ಲರ; ೩. ಕಣ್ಣಾಲಿಗೆ—ಕಣ್ಣಿನ ಗುಡ್ಡೆಗಳಿಗೆ; ೧೧. ಒಡೆಯಳ್—ಉಳ್ಳವಳು; ೧೪. ಕೇಳ್ಪಿಯಂ—ಕೇಳುವುದನ್ನು, ಕೇಳ್+-ಪಿ, ಭಾವನಾಮ; ೧೫. ಕಡವರಮಂ—ಚಿನ್ನವನ್ನು ಎಂದರೆ ಐಶ್ವರ್ಯವನ್ನು, ಕಾರ್ತಸ್ವರ > ಕಡವರ; ೧೬. ಬಿಯಂಗೆಯ್ಯುತ್ತುಂ—ವ್ಯಯಮಾಡುತ್ತ, ಖರ್ಚುಮಾಡುತ್ತ; ಸಪ್ತ ವ್ಯಸನಾಭಿಭೂತರಾಗಿ—ಬೇಟೆ, ಜೂಜು, ಮಾಂಸಭಕ್ಷಣ, ಸುರಾಪಾನ, ವೇಶ್ಯಾಗಮನ, ಕಳ್ಳತನ, ದುರ್ವಾಕ್ಯ—ಮುಂತಾದ ಏಳು ಕೆಟ್ಟ ಚಟಗಳಿಂದ ಹೊಡೆಯಲ್ಪಟ್ಟವರಾಗಿ; ನೆಗೞುತ್ತಿರೆಯಿರೆ—ನಡೆಯುತ್ತ, ಆಚರಿಸುತ್ತ ಇರಲು; ೧೭. ಕೞಿದೊಡೆ—ಸತ್ತುಹೋದರೆ, "ಕೞಿ—ಸಿಥನಾತಿ ದೂರಯೋಃ"; ಒಳರಿಲ್ಲೆಂದು = ಒಳರೆ + ಇಲ್ಲೆ + ಎಂದು—ಉಂಟೇ, ಇರುವರೇ, ಇಲ್ಲವೇ ಎಂದು; ೧೮. ಬೆಸಗೊಂಡೊಡೆ—ಕೇಳಿದರೆ; ಬೞಿಯಟ್ಟೆ—ದೂತನೊಡನೆ ಹೇಳಿ ಕಳುಹಿಸಿ; ಮಜ್ಜನದೊಳ್—ಸ್ನಾನದಲ್ಲಿ; ೧೯. ಮಿಸಿಸಿ—ಸ್ನಾನ ಮಾಡಿಸಿ, ಮಿಯಿಸಿ; ತುಡಿಸಿ—ಆಭರಣಗಳಿಂದ ಅಲಂಕಾರ ಮಾಡಿಸಿ; ಊಡಿ—ಊಟ ಮಾಡಿಸಿ; ಉಬ್ಬೆಗಂ ಬಡದಿರಿಂ—ದುಃಖಪಡಬೇಡಿರಿ; ೨೦. ಆಱಿಸಿ—ಶಮನ

ಮಾಡಿ; ಬೀಡಿಂಗೆ—ಮನೆಗೆ; ೨೧. ಓದುಗಳಂ—ವಿದ್ಯೆಗಳನ್ನು; ೨೨. ತೀವಿ—ತುಂಬಿ; ನೆಲನಂ ಬರೆಯುತ್ತಿರೆ—ನಾಚಿಕೆಯಿಂದ ನೆಲದ ಮೇಲೆ ಕಾಲಹೆಬ್ಬೆರಳಿನಿಂದ ಗೆರೆ ಹಾಕುತ್ತಿರಲು; ೨೫. ದಾಯಿಗಂ—ದಾಯಾದಿ; ಬಲ್ಲೊಂಗಂ—ತಿಳಿದವನಿಗೂ; ಬಾೞುಮಂ—ಜೀವಿಕೆಯನ್ನೂ; ಪ್ರತಿಪತ್ತಿಯುಮಂ—ಸತ್ಕಾರವನ್ನೂ; ೨೬. ವೈರಾಗ್ಯ ಪರಾಯಣರಾಗಿ—ವಿರಕ್ತಿಯನ್ನು ಹೊಂದಿ ಆಚರಿಸುವವರಾಗಿ;

೩. ೧: ಕಪ್ಪಡಮುಟ್ಟು—ಹರಕುಬಟ್ಟೆಯನ್ನು ಉಟ್ಟು; ಕರ್ಪಟ > ಕಪ್ಪಡ; ಬೈಕಂದಿರಿದು—ಭಿಕ್ಷಕ್ಕಾಗಿ ಬೇಡಿ ತಿರುಗಾಡಿ; ಓದುಮಂ—ಓದೋಣ; ಅಂತಪ್ಪೊಡೆ—ಹಾಗಾದರೆ; ೫. ಕಲ್ಪಿಸಿ—ತಿಳಿಸಿ; ಓಲೆಯಂ—ಪತ್ರವನ್ನು; ೮. ಕತಿಪಯ—ಕೆಲವು; ೯. ಇಕ್ಕಿದೊಡೆ—ಮುಂದೆ ಇರಿಸಿದರೆ; ೧೧. ಬಾಜಿಸಿ—ಓದಿ, ವಾಚಿಸು > ಬಾಜಿಸು; ೧೨. ಕಱಿದುದುಮಂ—ಸತ್ತುದನ್ನೂ; ೧೩., ಬಾೞಿಂ—ಜೀವಿಕೆಯಿಂದ; ಬುದ್ಧಿಯೊಡೆಯರುಂ—ಬುದ್ಧಿವಂತರೂ; ೧೫. ಪಸರಂಗೊಟ್ಟಿನಪ್ಪೊಡೆ—ಸಲಿಗೆಯನ್ನು ಕೊಟ್ಟಿನಾದರೆ; ೧೬. ಉರ್ಕಿ ಕಿಡುವರ್—ಉಕ್ಕಿ, ಗರ್ವಿಷ್ಠರಾಗಿ ಹಾಳಾಗುವರು; ಮನದೆ ಬಗೆದು—ಮನಸ್ಸಿನಲ್ಲಿ ಭಾವಿಸಿ; ೧೯. ನೀಮಾರ್ಗೆ—ನೀವು ಯಾರಿಗೆ ಸಂಬಂಧಪಟ್ಟವರು; ಆರಾದೊಡಮೇಂ—ಯಾರಾದರೇನು; ೨೦. ಕಲ್ವೆವೆಂಬ—ಕಲಿಯುತ್ತೇವೆಂಬ; ಅೞ್ತಿಯೊಳ್—ಅಕ್ಕರೆಯಲ್ಲಿ; ೨೧. ಅಲಸದೆ—ಆಯಾಸಪಡದೆ, ಸೋಮಾರಿಗಳಾಗದೆ; ನಿರ್ಬಂಧದಿಂದೆ—ಬಲಾತ್ಕಾರದಿಂದ, ನಿಯಮಕ್ಕೆ ಅನುಸಾರವಾಗಿ; ಆರ್ಪೊಡೆ—ಸಮರ್ಥರಾದರೆ; ೨೪. ಓಜರ್ಗೆಱಗಿ—ಉಪಾಧ್ಯಾಯರಿಗೆ ನಮಸ್ಕರಿಸಿ; ೨೬. ಆಱಂಗಮುಂ—ಷಡಂಗಗಳೂ, ಎಂದರೆ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ ಎಂಬ ವೇದಾಂಗಗಳು; ಪದಿನೆಂಟು ಧರ್ಮಶಾಸ್ತ್ರಂಗಳುಂ—ಮನು, ಯಮ, ಗೌತಮ, ವಸಿಷ್ಠ, ಅತ್ರಿ, ದಕ್ಷ, ವಿಷ್ಣು, ಆಂಗಿರಸ್, ಉಶನಾ, ವಾಕ್ಪತಿ, ವ್ಯಾಸ, ಆಪಸ್ತಂಬ, ಗೌತಮ, ಕಾತ್ಯಾಯನ, ನಾರದ, ಯಾಜ್ಞವಲ್ಕ್ಯ, ಪರಾಶರ, ಸಂವರ್ತ, ಶಂಖ, ಹಾರೀತ, ಲಿಖಿತ—ಇವರಿಂದ ಪ್ರಣೀತವಾದ ಧರ್ಮಶಾಸ್ತ್ರಗಳು; ಇವುಗಳಲ್ಲಿ ಯಾವುವೋ ಹದಿನೆಂಟು. ೨೭. ಮೀಮಾಂಸಾ—ವೇದವಾಕ್ಯಗಳ ಅರ್ಥವನ್ನು ಚರ್ಚಿಸುವ ಶಾಸ್ತ್ರ; ನ್ಯಾಯವಿಸ್ತರಂ—ತರ್ಕಶಾಸ್ತ್ರ ಅಥವಾ ಗೌತಮನ ನ್ಯಾಯಸೂತ್ರವೆಂಬ ದರ್ಶನಗ್ರಂಥ, ಅಥವಾ ಪ್ರತಿಜ್ಞಾ, ಹೇತು, ಉದಾಹರಣೆ, ಉಪನಯ, ನಿಗಮನ ಎಂಬ ಐದಂಶಗಳನ್ನೊಳಕೊಂಡ ವಾದವಿಧಾನ; ಪ್ರಮಾಣಂ—ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅನುಪಲಬ್ಧಿ, ಅರ್ಥಾಪತ್ತಿ, ಎಂಬ ಅಂಶಗಳ ಆಧಾರದ ಮೇಲೆ ಜ್ಞಾನಸ್ವರೂಪವನ್ನು ನಿರ್ಣಯಿಸುವುದು; ೨೮. ಚಾಣಕ್ಯಂ—ಕೌಟಲೀಯ ಅರ್ಥಶಾಸ್ತ್ರ;

೪. ೧: ಶಾಲಿಹೋತ್ರಂ—ಶಾಲಿಹೋತ್ರ ಎಂಬ ಋಷಿ ಬರೆದಿರುವ ಅಶ್ವಶಾಸ್ತ್ರ; ಪಾಳಕಾಪ್ಯಂ—ಪಾಲಕಾಪ್ಯ ಋಷಿ ಬರೆದಿರುವ ಗಜಶಾಸ್ತ್ರ. ಈ ಎರಡು ಹೆಸರುಗಳಲ್ಲಿಯೂ ಸಮಾನಾರ್ಥಕ ಶಬ್ದಗಳು, ಭಿನ್ನಭಾಷೆಗಳಿಗೆ ಸೇರಿದುವು, ಇವೆಯೆಂದು

ವಿದ್ವಾಂಸರ ಅಭಿಪ್ರಾಯ; ಶಾಲಿ ಎಂದರೆ ಕುದುರೆ, ಹೋತ್ರ (ದ್ರಾವಿಡ ಭಾಷಾಶಬ್ದ, ಗುರ್ರಮು ಹೋಲಿಸಿ) ಎಂದರೂ ಕುದುರೆ; ಪಾಲ ಎಂದರೆ ಪಲ್—ದಂತ (ದ್ರಾವಿಡಭಾಷೆ) ಕಾಪ್ಯ—ಆನೆ (ಸಂ) ಎಂದರೆ ದಂತಿ, ಆನೆ; ಇಂಥ ಶಬ್ದಗಳಿಗೆ Polyglots ಎಂದು ಹೆಸರು (ಶಬ್ದವಿಹಾರ ೮೬). ಹಾನಿತಂ—ಒಂದು ವೈದ್ಯಶಾಸ್ತ್ರ (?), ಹಾರೀತಂ ಎಂದು ಪಾಠವಿದ್ದರೆ ಒಂದು ಸ್ಮೃತಿಶಾಸ್ತ್ರವಾಗುತ್ತದೆ; ಅಶ್ವಿನೀಮತಂ—ಅಶ್ವಿನೀದೇವತೆಗಳೆಂಬ ದೇವ ವೈದ್ಯರಿಂದ ಪ್ರಣೀತವಾದ ಗ್ರಂಥ; ಬಾಹಲಂ = ಬಾಹಟಂ < ಸಂ. ವಾಗ್ಭಟ, ಅಷ್ಟಾಂಗ ಹೃದಯವೆಂಬ ವೈದ್ಯಗ್ರಂಥ; ೨. ಸುಸ್ರುತಂ—ಶುಶ್ರುತಪ್ರಣೀತ ವೈದ್ಯ ಗ್ರಂಥ; ಕ್ಷಾರ ಪಾನೀಯಂ—ಬಿಡುಲವಣ ಅಥವಾ ಕೃಷ್ಣಲವಣದ ಪಾನಕ್ಕೆ ಸಂಬಂಧಿಸಿದ ವೈದ್ಯ; ಮೊದಲಾಗೊಡೆಯ—ಮೊದಲಾಗಿ ಉಳ್ಳ; ೩. ನೆಱೆಯೆ ಕಲ್ಪಿಸಿ—ಪೂರ್ಣವಾಗಿ ಕಲ್ಪಿಸಿ, ಹೇಳಿಕೊಟ್ಟು; ೪. ಪಂಡಿತರೆಂ ಆದೆಂ—ನಾವು ಪಂಡಿತರಾಗಿದ್ದೇವೆ; ೫. ಆದಮಾನುಂ = ಆದಂ + ಆನುಂ—ವಿಶೇಷವಾಗಿ, ಅತಿಶಯವಾಗಿ; ಒಸೆದು—ಸಂತೋಷಿಸಿ; ನಾಡ್ಗೆ = ನಾಱ್ಗೆ—ನಾಡಿಗೆ; ಪೋದಪೆಂ—ಹೋಗುತ್ತೇವೆ; ಓಜರ್ಗೆ—ಉಪಾಧ್ಯಾಯರಿಗೆ; ೭. ಪಸರಂಗೊಟ್ಟೆನಿಲ್ಲ—ಸಲುಗೆಯನ್ನು ನಾನು ಕೊಡಲಿಲ್ಲ; ೮. ಎತ್ತಾನುಂ—ಎಲ್ಲಿಯಾದರೂ; ೧೦. ಸಂಬಳಮುಮಂ—ಬುತ್ತಿಯನ್ನೂ; ೧೨. ಮನದೆ—ಮನಸ್ಸಿನಲ್ಲಿ; ೧೪. ಬೈಕಂದಿರಿದು—ಭಿಕ್ಷವನ್ನು ಬೇಡಿ ತಿರುಗಿ, ಅಲೆದಾಡಿ, ಬೈಕ < ಸಂ. ಭೈಕ್ಷ; ನೆರಂ—ಸಹಾಯಕವಾಗಿ; ೧೫. ಕಱಿಯನಕ್ಕೆ—ಗಂಜಿಯನ್ನಾಗಲಿ, 'ಕಱಿ—ಸೌವೀರೇಚ'; ಎಱೆಯಿಸಿಯುಂ—ಹೊಯಿಸಿಯೂ, ಹಾಕಿಸಿಯೂ; ೧೮. ಪರ್ವದಿವಸದೊಳ್—ಹಬ್ಬದ ದಿನಗಳಲ್ಲಿ; ಎಂದಾನುಂ—ಎಂದಾದರೂ; ೧೯. ಪಗೆವರಂ—ಹಗೆಗಳನ್ನು; ೨೩. ತುಱಿಲ್ಗೆಯ್ದು—ನಮಸ್ಕಾರಮಾಡಿ; "ತ್ರುಱಿಲೆಂದು ಪ್ರೊಡೆನಡಿಕೆಯುಂ ವೀರಮುಮಕ್ಕುಂ"; ೨೪. ಉಪಶ್ಲೋಕಿಸಿ—ಸ್ತುತಿಸಿ, ಹೊಗಳಿ; ೨೫. ವಖ್ಖಾಣಿಸಿ—ವ್ಯಾಖ್ಯಾನ ಮಾಡಿ ಎಂದರೆ ವಿಸ್ತಾರವಾಗಿ ಹೇಳಿ; ಪಂಡಿತಿಕ್ಕೆಯುಂ—ಪಾಂಡಿತ್ಯವನ್ನು, ಪಂಡಿತ + ಇಕ್ಕೆ; ೨೬. ಬಿಚ್ಚಳಿಸಿ < ಸಂ. ವಿಸ್ತರ + (ಇಸು), ವಿಸ್ತಾರಮಾಡಿ, ದೊಡ್ಡದು ಮಾಡಿ; ೨೭. ಬಾಱುಮಂ—ಜೀವನಕ್ಕಾಗಿ ಕೊಡುವ ಗದ್ದೆ ಮುಂತಾದ ಜಮೀನುಗಳನ್ನು; ೨೯. ಓದುಗಳಂ—ವಿದ್ಯೆಗಳನ್ನು;

೫. ೨: ಅನರ್ಘ್ಯಮಪ್ಪ—ಅತ್ಯಂತ ಬೆಲೆಬಾಳುವ; ೩. ಸಂಜೆವಾರಿಸಲೆಂದು—ಸಂಧ್ಯಾಕಾಲದಲ್ಲಿ ಸೂರ್ಯನಿಗೆ ನೀರನ್ನು ಸುರಿಯಬೇಕೆಂದು ಎಂದರೆ ಸಂಜೆ ಸೂರ್ಯನಿಗೆ ಅರ್ಘ್ಯ ಕೊಡಬೇಕೆಂದು, ಸಂಜೆ + ಬಾರ್ + ಇಸು, ಬಾರ್—ದ್ರವದ್ರವ್ಯ ನಿರ್ಮುಕ್ತಿ, (ತ) ವಾರ್—ನೀರು ಮುಂತಾದುವನ್ನು ಸುರಿ; ೪. ಉರ್ಚಿ—ಸಡಿಲವಾಗಿ, ಜಾರಿ, ಚಿಮ್ಮಿ; ತಾಮರೆಗೆಱೆಯೊಳ್—ತಾವರೆಯ ಕೆರೆಯಲ್ಲಿ, ಕೊಳದಲ್ಲಿ; ೫. ಕೆಮ್ಮನೆ—ಸುಮ್ಮನೆ; ಕಿಱಿದಂತರಮಂ—ಸ್ವಲ್ಪ ದೂರವನ್ನು; ೬. ಪ್ರಮಾಣಮಱಿಯದೆ—ಕಾರಣವನ್ನು ತಿಳಿಯದೆ; ೭. ಮಲ್ಮಲಂ ಮಱುಗುತ್ತೆ—ಮಲಮಲ ಎಂದು ವ್ಯಥೆ

ಪಡುತ್ತ ; ನೋಟ್ಟಿನ್ನೆಗಂ—ನೋಡುತ್ತಿರುವಷ್ಟರಲ್ಲಿ ; ೧೦. ಭವ್ಯನೆಂದಱಿದು—ಭವ್ಯ ಜೀವಿ ಎಂದು ತಿಳಿದುಕೊಂಡು ; ವಾರಕದ—ತಾತ್ಕಾಲಿಕವಾಗಿ ಕೊಟ್ಟ, ನ್ಯಾಸವಾಗಿರುವ ಅಥವಾ ಭೂಷಣದ, ಅಲಂಕಾರದ (?) ; ಸಂಸ್ಕೃತದ ವಾರ, ವಾರಕ ಎಂಬ ಶಬ್ದಗಳಿಗೆ, ಬಾರಿ, ಕ್ರಮ, ಸಮೂಹ ಎಂಬ ಅನೇಕವಾದ ಅರ್ಥಗಳುಂಟು, ಅವು ಯಾವುವೂ ಪ್ರಕೃತಕ್ಕೆ ಅನ್ವಯಿಸುವಂತಿಲ್ಲ; ಕುಮಾರವ್ಯಾಸನು ವಾರಕ ಶಬ್ದವನ್ನು ಪ್ರಯೋಗಿಸಿರು ವನು : "ಊರೊಳಗೆ ಸಾಱಿದರು ಕೊಟ್ಟರು ವಾರಕವನಬಲಾಜನಕೆ ಭಂಡಾರ ಸನೆದುದು ಗಣಿಕೆಯರಿಗಾಭರಣದಾನದಲಿ (೩-೧೭-೨೮)"—; ಗೋವುಗಳಿಗೆ ಮಾಡಿದ ಅಲಂಕಾರವನ್ನು ವರ್ಣಿಸುವಾಗ "ಪಂಚವಣ್ಣಿಗೆಯ ಪಟ್ಟೆಯ ತೋರದೊಂಗಲುಂ ಜೇವಿನ ದಂಡೆಯುಂ ನವಿಲಕಂಠದ ಬಾಸಿಗಮುಮಲುಗೆ ವಾರಮುಂ ಉರಚಲ್ಲಿಯುಂ ನೇವಣಮುಂ ಲೀಲೆವಡೆಯೆ" ಎಂದು ರುದ್ರಭಟ್ಟನ ಪ್ರಯೋಗ (ಜಗವಿ ೪-೮೦ ಗ) ; ೧೨. ಒಳರೆ—ಉಂಟೆ, ಇರುವರೆ ? ; ೧೪. ನೀರ್ವೆರಸು—ನೀರಿನ ಸಮೇತವಾಗಿ, ಬೆರಸು ಎಂಬುದಕ್ಕೆ ಹಿಂದೆ ಪ್ರಥಮಾವಿಭಕ್ತಿ ಬರುತ್ತದೆ ; ೧೫. ಮುಗುಳಮೇಗೆ—ಮೊಗ್ಗಿನ ಮೇಲೆ ; ತಗುಳ್ದು—ಅನುಸರಿಸಿ, ಅಂಟಿಕೊಂಡು, ಸೇರಿಕೊಂಡು ; ೧೬. ಮಾನಸರಂ ಕಾಪಿಟ್ಟು—ಮನುಷ್ಯರನ್ನು ಕಾವಲಿರಿಸಿ ; ೧೯. ತುರಿಪದಿಂದೆ—ತ್ವರೆಯಿಂದ, ಶೀಘ್ರತೆಯಿಂದ ; ೨೧. ಅಂತರಿತ—ಒಳಗಡೆ ಇರುವ, ಮುಚ್ಚಿದ ; ೨೨. ಕ್ಷಪಣಕನಂ—ಜೈನ ಸಂನ್ಯಾಸಿಯನ್ನು ; ಮಿಥ್ಯಾವಿನಯದಿಂದೆ—ಕೃತಕ ನಮ್ರತೆ ಯಿಂದ, ಕಪಟ ವಿಧೇಯತೆಯಿಂದ ; ಇಳಿಸಿ—ಅವಜ್ಞೆ ಮಾಡಿ, ತಿರಸ್ಕರಿಸಿ ; ೨೩. ಪಾರ್ವಂತಿಗೆ—ಬ್ರಾಹ್ಮಣಿತಿಗೆ, ಹಾರುವನ ಹೆಂಡತಿಗೆ ; ೨೫. ಭಟ್ಟಾರಾ-ಪೂಜ್ಯರಾದ ಸ್ವಾಮಿಗಳೇ ; ೨೬. ಅಬ್ಬೆಯಿಂ—ಪ್ರೀತಿಯಿಂದ, ಆಸಕ್ತಿಯಿಂದ ; ಕಲ್ಪಿಪ್ಪುದು—ಕಲಿಸುವುದು, ಹೇಳಿಕೊಡುವುದು ;

೬. ೩ : ಏಱಿಸಿ—ಹತ್ತಿಸಿ, ಆರೋಪಿಸಿ ; ನಮಸ್ಕಾರಂಗಳಂ—ಪಂಚ ಪರಮೇಷ್ಠಿ ಗಳ ವಂದನೆಯನ್ನು ; ಆಲೋಚನೆಗಳಂ—ಪ್ರಾಯಶ್ಚಿತ್ತಕ್ಕೆ ಮುಂಚೆ ತನ್ನ ದೋಷ ಗಳನ್ನು ಗುರುಗಳಿಗೆ ತಿಳಿಸುವುದು ; ನಿಯಮ—ಮಾಡಬೇಕಾದ ಪ್ರತಿಜ್ಞೆ, ವ್ರತ ; ಓದಿದೊಡಲ್ಲದೆ—ಹೇಳಿಯಲ್ಲದೆ, ಪಠಿಸಿಯಲ್ಲದೆ ; ೬. ತ್ರಿಷಷ್ಟಿಶಲಾಕಾ ಪುರುಷರ್—ತೀರ್ಥಂಕರರು ೨೪, ಚಕ್ರವರ್ತಿಗಳು ೧೨, ವಾಸುದೇವರುಗಳು ೯, ಪ್ರತಿವಾಸು ದೇವರು ಗಳು ೯, ಬಲಭದ್ರರು ೯, ಒಟ್ಟು ೬೩ ಜನರು ; ೭. ಚರಣ ಗ್ರಂಥಗಳುಮಂ—ಜೈನ ಶ್ರಾವಕರ ಮತ್ತು ಯತಿಗಳ ಆಚಾರಗಳನ್ನು ನಿರೂಪಿಸುವ ಗ್ರಂಥಗಳನ್ನೂ ; ಲೋಗಾಣಿ—ಲೋಕಾಕಾರವನ್ನು ನಿರೂಪಿಸುವ ಗ್ರಂಥಗಳು ; ಸಂಗಾಣಿ—ಸಪ್ತ ಪದಾರ್ಥಗಳ ಸ್ವರೂಪ ನಿರೂಪಕ ಗ್ರಂಥಗಳು ; ಕರಣ ಗ್ರಂಥಗಳು—ಶ್ರುತಸ್ಕಂದವೆಂಬ ದಿಗಂಬರ ಗ್ರಂಥ ಸಮುದಾಯದಲ್ಲಿ ಎರಡನೆಯ ವರ್ಗವಾದ ಕರಣಾನುಯೋಗಕ್ಕೆ ಸೇರಿದ ಗ್ರಂಥಗಳು, ಲೋಕಾಕಾರ, ಜ್ಯೋತಿಷ ಮುಂತಾದ ವಿಷಯಗಳನ್ನು ಪ್ರತಿಪಾದಿಸುತ್ತವೆ, ಸೂರ್ಯ ಪ್ರಜ್ಞಪ್ತಿ, ಚಂದ್ರಪ್ರಜ್ಞಪ್ತಿ—ಮುಂತಾದ ಶಾಸ್ತ್ರಗಳಿವೆ ; ೧೨. ದ್ರವ್ಯಾನುಯೋಗ—

ಶ್ರುತಸ್ಕಂದದಲ್ಲಿ ಮೂರನೆಯ ವಿಭಾಗ, ಸಪ್ತತತ್ವಗಳು, ನವಪದಾರ್ಥಗಳು, ಷಡ್ದ್ರವ್ಯಗಳು ಮುಂತಾದ ತಾತ್ವಿಕ ವಿಚಾರಗಳನ್ನು ತಿಳಿಸುವ ಗ್ರಂಥಗಳು; ೧೪. ಎನಗೇಮುಟ್ಟು=ಎನಗೆ + ಏಂ + ಮುಟ್ಟು—ನನಗೆ ಏನು ಉಪಕರಣ, ಸಾಮಗ್ರಿ, ಸಹಾಯ; ೧೫. ತೊಡಗಿಸೆ—ಆರಂಭಿಸಲು; ೧೬. ಮಿಥ್ಯಾತ್ವಂ—ಜೈನದರ್ಶನದ ವಿಚಾರದಲ್ಲಿರುವ ಅಪನಂಬಿಕೆ, ಸಮ್ಯಕ್ತ್ವಕ್ಕೆ ವಿರುದ್ಧವಾದದ್ದು; ಇನಿಸಿನಿಸು—ಸ್ವಲ್ಪಸ್ವಲ್ಪ; ಪಿಂಗೆ—ಹಿಂಜರಿಯಲು, ತೊಲಗಲು; ೨೦. ಅಱಿತಮುಂ—ಜ್ಞಾನವೂ; ಕುಶಲಿಕೆಯುಂ—ನೈಪುಣ್ಯವೂ; ೨೪. ಎಮ್ಮುಕ್ಕೈವತಪದಿಂದಂ=ಎಮ್ಮ, ಉಕ್ಕೈವ+ತಪದಿಂದಂ—ನಮ್ಮ ಕಪಟ ತಪಸ್ಸಿನಿಂದ, "ಉಕ್ಕೈವಗೆಯ್ತ್ತದ ಗಾಳುಗೆಯ್ದೆ ಕೂರ್ಪನೆ," "ಉಕ್ಕೈವಗುದುರೆ ಪೊಟಿನಟಿಲಿಸಿತಾಗಳ್"—ಎಂಬಿವು ಇತರ ಪ್ರಯೋಗಗಳು; ನಾಗಚಂದ್ರನು ಈ ಪದವನ್ನು ಉತ್ಸವ ಎಂಬರ್ಥದಲ್ಲೂ ಬಳಸಿದ್ದಾನೆ: "ಉರಿಯಂ ಕಾಱುವ ಕೆಂಡಮಂ ಕಱಿವ ಬಿಲ್ಲಂ ಕಂಡೆವಿಲ್ಲುಕ್ಕೈವಂ", "ಉಕ್ಕೈವ ಚಾಮರ ಮಿಕ್ಕಲುಯ್ದಪೆಂ"; ಇದೇ ಅರ್ಥದಲ್ಲಿ ಸಿಂಗರಾರ್ಯನು ತನ್ನ 'ಮಿತ್ರವಿಂದಾ ಗೋವಿಂದ' ನಾಟಕದಲ್ಲಿ ಈ ಪದವನ್ನು ಹಲವು ಸಲ ಪ್ರಯೋಗಿಸಿದ್ದಾನೆ. ೨೮. ಏಕ ವಿಹಾರಿಯಾಗಿ—ಒಂಟಿಯಾಗಿ ಸಂಚರಿಸುವವನಾಗಿ, ಪರಿವ್ರಾಜಕನಾಗಿ.

೭. ೨: ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳ್: ಗ್ರಾಮ—ನೂರಕ್ಕೆ ಕಡಮೆಯಿಲ್ಲದೆ ಐನೂರಕ್ಕಿಂತ ಹೆಚ್ಚಾಗದೆ ಕೃಷಿಕ ಕುಟುಂಬಗಳು ವಾಸಮಾಡುವ ಹಳ್ಳಿ; ಇದರ ಎಲ್ಲೆಕಟ್ಟು ಒಂದೆರಡು ಕ್ರೋಶಗಳಷ್ಟಿರುತ್ತದೆ; ಎಲ್ಲೆಯ ನಿರ್ಧಾರಕ್ಕೆ ನದಿ, ಬೆಟ್ಟ, ಕಾಡು ಮುಂತಾದುವನ್ನು ಆರಿಸಬೇಕು. ನಗರ—ರಾಜಧಾನಿ; ಖೇಡ—ಎತ್ತರವಾದ ಕೋಟೆಯನ್ನುಳ್ಳ ಊರು; ಖರ್ವಡ—ಕ್ಷುಲ್ಲಕ ಪ್ರಾಕಾರವಿರುವ ಊರು; ಮಡಂಬ—ದೂರಸ್ಥಲ, ಸೀಮಾಂತದಲ್ಲಿರುವ ಪುರ; ಪತ್ತನ—ಬಂಡಿಗಳಲ್ಲಾಗಲಿ ನಾವೆಗಳಲ್ಲಾಗಲಿ ಪ್ರಯಾಣಮಾಡಿ ಸೇರಬಹುದಾದ ಪುರ; ದ್ರೋಣಾಮುಖಂ—ಜಲಸ್ಥಲ ಮಾರ್ಗಗಳನ್ನುಳ್ಳ ಪುರ. ಈ ವಿವರಣೆಯಲ್ಲಿ ಭಿನ್ನಾಭಿಪ್ರಾಯಗಳಿವೆ, ವಿದ್ವಾನ್ ಎನ್. ಎಸ್. ವೆಂಕಟನಾಥಾಚಾರ್ಯರಿಂದ ಸಂಪಾದಿತವಾಗಿರುವ ಕೌಟಲೀಯಾರ್ಥಶಾಸ್ತ್ರದ ೫೦ನೆ ಪುಟದ ಅಡಿಟಿಪ್ಪಣಿಯನ್ನು ನೋಡಬಹುದು. ಈ ವಿಷಯವಾಗಿ ಪಂಪನು ಹೀಗೆ ಬರೆದಿದ್ದಾನೆ (ಆದಿ. ಪುಟ ೮-೬೩ ವ): "ಕ್ರೋಶದ್ವಿಕ್ರೋಶ ಸೀಮಾ ಭಾಗಯೋಜನ ಪಂಚಶತ ಕುಟುಂಬ ಕುಲಾವಿರ್ಭಾವಿತಾಧಮೋತ್ತಮ ಭೇದಂಗಳುಮಂ ಸರಿದ್ಗಿರಿದರೀ ಭೂರುಹ ಸೇತುವನ ಸೀಮೋಪಲಕ್ಷಿತಂಗಳುಮಪ್ಪ ಮಹಾ ಗ್ರಾಮಂಗಳುಮಂ, ಪೂರ್ವೋತ್ತರಾಂಭಃಪ್ಲವಂಗಳುಮಂ ಪರಿಖಾವಪ್ರಪ್ರಾಕಾರ ಗೋಪುರಾಟ್ಟಾಲ ಪರಿವೃತಂಗಳುಮಂ ನಾನಾಭವನವಿನ್ಯಾಸೋದ್ಯಾನ ಲೀಲಾ ಜಲಾಶಯಂಗಳುಮಂ ಪ್ರಧಾನ ಪುರುಷಾಧ್ಯಾಸಿತಂಗಳಪ್ಪ ಪುರಂಗಳುಮಂ, ಗಿರಿಸರಿತ್ಸಂರುದ್ಧಂಗಳಪ್ಪ ಖೇಟಂಗಳುಮಂ, ಉರ್ವೀಧರ ನಿರುದ್ಧಂಗಳಪ್ಪ ಖರ್ವಡಂಗಳುಮಂ, ಪಂಚಶತಗ್ರಾಮ ಪರೀತಂಗಳಪ್ಪ ಮಡಂಬಂಗಳುಮಂ, ಸಮುದ್ರೋತ್ಕೀರ್ಣ ನಿವಾಸಂಗ

ಳಪ್ಪ ಪಟ್ಟಣಂಗಳುಮಂ, ನಿನ್ನ ಗಾತಟ ನಿಕಟವರ್ತಿಗಳಪ್ಪ ಮಹಾ ದ್ರೋಣಾಮುಖಂಗಳುಂ." ೬. ಚರಿಗೆದೊಱಲುತ್ತುಂ — ಭಿಕ್ಷಕ್ಕಾಗಿ ಸುತ್ತಾಡುತ್ತ ; ೭. ಪರಿತಂದು — ಓಡಿಬಂದು ; ೮. ಕರ್ಚಿ < ಕಟ್ಚಿ = ತೊಳೆದು ; ಪಡಿಗಹ ಮುಚ್ಚಂಠಾಣಂ—ಎತ್ತರವಾದ ಸ್ಥಳವನ್ನು ಪ್ರತಿಗ್ರಹಿಸಿರಿ ಎಂದರೆ ಎತ್ತರವಾದ ಆಸನದ ಮೇಲೆ ಕುಳ್ಳಿರಿ ; ಒಂಬತ್ತುಂ ತೆಱದಿಂದಂ—ಒಂಬತ್ತು ತೆರನಾದ ಸತ್ಕಾರಗಳಿಂದ, ಇವನ್ನು ಕೆಳಗಿನ ಪದದಲ್ಲಿ ಹೇಳಿದೆ :

ಇದಿರ್ಗೊಂಡುದ್ದದೊಳೇಱಲಿಕ್ಕಿ ಚರಣ ಪ್ರಕ್ಷಾಳನಂಗೆಯ್ದು ಸಂ
ನ್ಮುದದಿಂದರ್ಚಿಸಿ ಭಕ್ತಿಯಿಂದೆ ಪೊಡೆವಟ್ಟಾಗಳ್ ಮನಶ್ಶುದ್ಧಿಯಿಂ
ನ್ಮೃದು ವಾಕ್‌ಶುದ್ಧಿಯಿನನ್ನ ಶುದ್ಧಿಯಿನೊಱಲ್ದಾಹಾರಮಂ ಶುದ್ಧಮ
ಪ್ಪುದನಾತಂ ನವಪುಣ್ಯವೊಂದಿರೆ ಮಹಾಪುಣ್ಯಾಸ್ಪದಂಗಿಕ್ಕಿದಂ

(ಸುಕುಮಾ. ೪–೨೨)

ಏೞುಂ ಗುಣಂಗಳ್—ಶ್ರದ್ಧೆ, ಭಕ್ತಿ, ದಯೆ, ಉದಾತ್ತಶೀಲ, ಕ್ಷಮೆ, ಶೌಚ ಎಂಬ ಏಳು ಗುಣಗಳು :

ಪುದಿದಟ್ಟು ಭಕ್ತಿ ದಯೆಯಿಂ
ದುದಾತ್ತಶೀಲಂ ಕ್ಷಮಾಗುಣಂ ಶೌಚಮೆನಿ
ಪ್ಪುದಿತೋದಿತಮೇೞಱೊ
ಳುದಾತ್ತಮತಿ ಕೂಡಿ ಮುನಿಗೆ ದಾನಮನಿತ್ತಂ [ಸುಕುಮಾ. ೪–೨೪]

೧೦. ಪ್ರಾಸುಕಮಪ್ಪ—ಜೀವಜಂತುರಹಿತವಾದ, ಪರಿಶುದ್ಧವಾದ; ಬಡ್ಡಿಸೆ—ಬಡಿಸಲು, ಸಂ. ವರ್ಧಿಸು ; ೧೫. ಕಿಱಿಯ ಗುಡ್ಡನಂ—ಚಿಕ್ಕ ಶಿಷ್ಯನನ್ನು ; ಲೋಹಾಸನಂ—ಒಂದು ಬಗೆಯಾದ ಪೀಠ ; ಇದರ ಲಕ್ಷಣ, "ಪಂಚಭಿಃ ಸಪ್ತಭಿರ್ವಾಪಿ ನವಭಿರ್ಲೋಹಜೈಃ ಪದೈಃ । ಲೋಹಪಟ್ಟ ಕೃತಾಧಾರೈರ್ಲೋಹ ಜಾಲಕಮೂರ್ಧನಿ ॥ ಘಟಿಕಾಪಟ್ಟ ಗರ್ಭಸ್ಥಂ ಕಾರ್ಪಾಸೇನ ವಿಮಿಶ್ರಿತಂ । ಲೋಹಾಸನಮಿದಂ ಪ್ರೋಕ್ತಮುಪರಿಷ್ಟಾತ್ಸುಕೀಲಿತಂ ॥" ೧೩. 'ಮನದ' ಎಂಬುದಕ್ಕೆ ಸರಿಯಾದ ಪಾಠ 'ಮಾನ' ಎಂದಿರಬೇಕು, ಔದ್ಧತ್ಯ ಎಂದು ಅರ್ಥ; ೧೬ ಇನಿವಿರಿದು = ಇನಿತು + ಪಿರಿದು—ಇಷ್ಟು ಹಿರಿದಾದ, ದೊಡ್ಡದಾದ; ೧೮. ಮಲಗ್ರಸ್ತರ್—ಕೊಳಕಿನಿಂದ ಕೂಡಿದವರು; ಮಿಂದು—ಸ್ನಾನಮಾಡಿ ; ೨೦. ನಿರಾಕರಿಸಿ—ತಿರಸ್ಕರಿಸಿ ; ಪೊಲ್ಲದಂ ಪೇೞ್ದು—ಕೆಟ್ಟ ಮಾತುಗಳನ್ನಾಡಿ ; ೨೧. ಕೊಯ್ತಲೆಯಧಮಾ—ಕೊಯ್ದತಲೆಯ ನೀಚನೇ ಎಂದರೆ ಎರಡು ತಲೆಯ ನೀಚನೇ.,

ಗಾಹೆ : ಣಿಂದಂತಂ—ನಿಂದಿಸುವವನನ್ನು, ಸಿಳಹಂತಂ—ಶ್ಲಾಘಿಸುವವನನ್ನು, ಸತ್ತುಂ—ಶತ್ರುವನ್ನು, ಮಿತ್ತುಂ—ಮಿತ್ರನನ್ನು, ತಹೇವ—ಹಾಗೆಯೇ, ಜೋ—ಯಾವನು, ಸಮಭಾವಇ—ಸಮತೆಯಿಂದ ಭಾವಿಸುವನೋ, ಪೇಚ್ಛಇ—ನೋಡುವನೋ, ಸೋ—ಅವನು, ಸಮಣೋ—ಶ್ರಮಣನು ಎಂದರೆ ಜೈನ ಸಂನ್ಯಾಸಿಯು,

ಸೋಯ—ಅವನೇ, ಪವ್ವಇಓ—ಪರಿವ್ರಜಿತನು ಎಂದರೆ ಪರಿವ್ರಾಜಕನಾದ ಯತಿ.

ವೃತ್ತ: ವಚಸಾ—ಮಾತುಗಳಿಂದ, ಆಕೃಷ್ಟಯೇವ—ಆಕರ್ಷಿಸಲ್ಪಟ್ಟವನಾಗಿದೇನೆಯೇ ಹೊರತು, ನತು ತಾಡಿತೋಸ್ಮಿ—ನಾನು ಹೊಡೆಯಲ್ಪಟ್ಟವನಾಗಿಲ್ಲ; ಸಂತಾಪಿತೋಸ್ಮಿ—ನಾನು ದುಃಖಿತನಾಗಿದ್ದೇನೆ, ತು—ಆದರೆ, ಮೇ—ನನ್ನ, ಉತ್ತಮಾಂಗಂ—ತಲೆಯು, ನ ಹೃತಂ—ಅಪಹರಿಸಲ್ಪಡಲಿಲ್ಲ; ಮಮ—ನನ್ನ, ಪ್ರಾಣಾಃ—ಪ್ರಾಣಗಳು, ಪರೈಃ—ಇತರರಿಂದ, ಹೃತಾ—ಅಪಹರಿಸಲ್ಪಟ್ಟವೆ, ನ ತು ಮೇ ಸಮಾಧಿಃ—ನನ್ನ ಧ್ಯಾನ ಸ್ಥಿತಿಯಲ್ಲ; ಇತಿ—ಹೀಗೆಂದು, ಆತ್ಮಚಿಂತನ ಪರಂಪರಯಾ—ಸಂತತವಾದ ಆತ್ಮಧ್ಯಾನದಿಂದ, ಕ್ಷಮೇತ—ಕ್ಷಮಿಸಬೇಕು.

೮. ೫: ಕೀಱಿ—ಗಟ್ಟಿಯಾಗಿ ಕೂಗಿ, ಬಲಾತ್ಕರಿಸಿ; ೬. ತಪಂಬಟ್ಟು—ತಪಸ್ಸನ್ನು ಹೊಂದಿ; ಕ್ರಿಯೆಗಳೆಲ್ಲಮಂ—ಎಲ್ಲಾ ಯತ್ಯಾಚರಣೆಗಳನ್ನು; ೮. ಸಲ್ಗೆಯಿಂದಂ—ಸಲಿಗೆಯಿಂದ; ಅೞಲಿಂದಂ—ದುಃಖದಿಂದ; ೧೨. ಬಾೞಿಂ—ಜೀವಿತವೂ; ೧೩. ಪೞಿಯಲುಂ—ನಿಂದಿಸಲೂ; ೧೪. ಅಕ್ಕುಮೆ—ಆಗುತ್ತದೆಯೆ ?; ೧೫. ಪೊಲ್ಲಮಾನಸರ—ಕೆಟ್ಟ ಮನುಷ್ಯರ; ಜಾರಜಾತರ—ಹಾದರಕ್ಕೆ ಹುಟ್ಟಿದವರ; ವಿಜಾತಿಗಳ್ಗೆ—ಕುಲವಿಲ್ಲದವರಿಗೆ; ೧೬. ಜಡಿದು—ಗದರಿಸಿ; ೧೭. ಕವರ್ದುಕೊಂಡು—ಸುಲಿಗೆಮಾಡಿ, ಕಿತ್ತುಕೊಂಡು; ಸವಣನಾಗಿರ್ದ್ದಾಣ್ಮನ—ಜೈನಯತಿಯಾಗಿರುವ ಗಂಡನು; ೨೦. ನಿದಾನಂಗೆಯ್ದು—ಸಂಕಲ್ಪವನ್ನು ಮಾಡಿ, ನಿಶ್ಚಯಿಸಿ; ೨೨. ತಿರಿಯುತ್ತಿರ್ದರ್—ತೊಳಲುತ್ತಿದ್ದರು; ೨೩. ಅತಿಮಾನ ಗರ್ವದಿಂದಂ—ಅತಿಯಾದ ಉದ್ಧತತನದ ಅಹಂಕಾರದಿಂದ; ಪರಿಭವಿಸಿ—ತಿರಸ್ಕರಿಸಿ; ೨೪. ಪೞಿದ—ನಿಂದಿಸಿದ; ೨೫. ಉದುಂಬರ ಕುಷ್ಠಮಾಗಿ (ಪಾಠ ಔದುಂಬರ ಎಂದಿರಬೇಕು)—ಅತ್ತಿಯ ಹಣ್ಣಿನಂತೆ ಕ್ರಿಮಿಪೂರಿತವಾದ ಕುಷ್ಠರೋಗವುಂಟಾಗಿ; ೨೬. ಮಿಳಿಯ ಬಿದಿರಮೇಗೆ—ಹಗ್ಗಕಟ್ಟಿದ ಬಿದಿರ ಗಣೆಯಮೇಲೆ; ಲಂಗಿಗರ—ಡೊಂಬರ, (ಸಂ) ಲಂಖಿಕ, (ಪ್ರಾ) ಲಂಖಿಗ—ಗಣೆಯ ಮೇಲೆ ಆಡುವವನು;

೯. ೧: ಪಿರಿಯವಪ್ಪ—ದೊಡ್ಡವಾದ; ೨. ನಾಳಿಬಿರ್ದು—ಉದ್ದನೆಯ ಹಳ್ಳವಾಗಿ, ಉದ್ದವಾದ ಕೊಳವೆಯಾಗಿ, (ಸಂ) ನಾಲಿ; ಎತ್ತುಗಳ ಬೆನ್ನೊಡೆದು ಆಗುವ ಹುಣ್ಣಿಗೆ ನಾಳಿವುಣ್ ಎಂಬ ಹೆಸರುಂಟು .(ಲೋಕೋಪ. ೯-೧೯೪); ಕಱಿಮೆಯಾಗಿ—ಬಲಿತು, ಪಕ್ವವಾಗಿ (?); ೩. ಪೇಪಂದಿ < ಪೇಲ್ + ಪಂದಿ—ಹೇಲು ತಿನ್ನುವ ಹಂದಿಯಾಗಿ; ಮಾದೆಗರ ಮನೆಯೊಳ್—ಹೊಲೆಯರ ಮನೆಯಲ್ಲಿ; ೫. ಪ್ರಧಾನನಪ್ಪ—ಮುಖ್ಯಪುರುಷನಾದ, ಗೌಡನಾದ; ೬. ಮಾದೆಗಿಗಂ—ಹೊಲತಿಗೂ; ೭. ಬೞ್ದುದೊಳ್—ಬಾಳಿದವಳು, ಬದುಕಿರುವವಳು; ೧೨. ನಿಸಿದ್ಧಿಗೆ—ಸಮಾಧಿಗೆ, ಸತ್ತವರನ್ನು ಹೂತು ಮೇಲೆ ಕಟ್ಟಿದ ಬೃಂದಾವನ; ೧೪. ಸಂಬರ ನಾಗಠಾಣದೊಳ್—ಶಂಬರ ಎಂಬ ಹೆಸರಿನ ನಾಗಾಲಯದಲ್ಲಿ, ಸಂವಲ (ಕಕೋ); ೧೮. ಪರವಸದಿಂದಂ—ವೈಮರೆಯುವಿಕೆಯಿಂದ; ೧೯. ಮನ್ಯುಮಿಕ್ಕು—ದುಃಖವು ಹೆಚ್ಚಾಗಿ;

ಕುಂಚದ—ನವಿಲಗರಿಯ ಕಟ್ಟಿನ; ಪರೆದಿರ್ದ—ಹರಡಿದ್ದ; ೨೦. ಸಾರ್ಚುತ್ತಂ—ಹತ್ತಿರಕ್ಕೆ ಸೇರಿಸುತ್ತ; ನೀಡುಂ ಬೇಗಂ—ದೀರ್ಘಕಾಲ, ಬಹಳ ಹೊತ್ತು; ೨೧. ನಿರ್ವೇಗವಾಗೆ—ವಿರಕ್ತಿಯುಂಟಾಗಲು; ಅಲಾಭಂ ಮಾಡಿ—ಭಿಕ್ಷೆಯಿಲ್ಲದಂತೆ ಆಚರಿಸಿ, ಮುಟ್ಟುಪಡಂ ಎಂಬುದು ಅಲಾಭಕ್ಕೆ ಸಮಾನಾರ್ಥಕವಾದ ಶಬ್ದ; ೨೨. ಆವಾಸಕ್ಕೆ—ಮನೆಗೆ ಎಂದರೆ ಇರುವ ಸ್ಥಳಕ್ಕೆ; ೨೫. ಜಾತ್ಯಂಧೆಯಪ್ಪ—ಹುಟ್ಟು ಕುರುಡಿಯಾದ; ೨೭. ವಿಧಾತ್ರಾ—ದೈವವೇ;

೧೦. ೮: ಕೂರ್ಮೆಯಾದುದು—ಪ್ರೀತಿಯುಂಟಾಯಿತು; ೯. ನಿಮ್ಮ ಪೇೞೆ—ನೀವು ಹೇಳಲು, ಪ್ರಥಮಾರ್ಥದಲ್ಲಿ ಷಷ್ಠಿ—(ವಿಭಕ್ತಿ ಪಲ್ಲಟ); ಬ್ರತಂಗಳಂ—ವ್ರತಗಳನ್ನು; ಕೈಕೊಳ್ಗುಂ—ಸ್ವೀಕರಿಸುತ್ತದೆ; ೧೧. ಏಳಿದು ನುಡಿದ—ತಿರಸ್ಕರಿಸಿ ಕೆಟ್ಟ ಮಾತಾಡಿದ; ೧೩. ಈ ಭವದಿಂತೊಟ್ಟು—ಈ ಜನ್ಮದಿಂದ ಆರಂಭವಾಗಿ, ತೊಡಗಿ; ೧೫. ಮಧುಮದ್ಯ ಮಾಂಸಗಳಂ—ಜೇನುತುಪ್ಪ ಹೆಂಡ ಮಾಂಸಗಳನ್ನು; ೧೭. ನೀಡ ಱಿಂದೆ—ದೀರ್ಘಕಾಲದ ಅನಂತರ; ಎತ್ತಾನುಮಲ್ಲದೆ—ಎಲ್ಲಿಯಾದರೂ ಅಲ್ಲದೆ, ಪೆಱದು—ಪಡೆಯದು; ಪೆತ್ತೊಡಂ—ಪಡೆದರೂ; ೧೮. ಇಂತಾಗಿ—ಹೀಗಾಗಿ ಎಂದರೆ ಹುಟ್ಟುಗುರುಡಿ ದುರ್ಗಂಧೆ ದುಸ್ವರೆ ಇತ್ಯಾದಿಯಾಗಿ;

**ವೃತ್ತ:** ವೈರೂಪ್ಯಂ—ವಿಕಾರವಾದ ರೂಪವೂ, ದುರ್ಭಗತ್ವಂ—ಹೀನ ಭಾಗ್ಯವೂ, ಕುಮತಿತಾ—ಕೆಟ್ಟಬುದ್ಧಿಯು, ಕುಜನತಾಂ—ಕೇಡಿಗರ ಸ್ವಭಾವವು, ಕುತ್ಸಿತತ್ವಂ—ನೀಚತನವು, ಕುಜಾತಿಂ—ಕೆಟ್ಟಜಾತಿ, ಕ್ಷುತ್ತೃಷ್ಣಾ ಪೀಡಿತತ್ವಂ—ಹಸಿವು ಬಾಯಾರಿಕೆಗಳಿಂದ ಪೀಡಿಸಲ್ಪಡುವುದು, ವಿರಸವಿಕಳತಾಂ—ರಸಹೀನವಾದ ಮನೋದುಃಖಗಳು, ವ್ಯಾಧಿತಾಂ—ರೋಗಸ್ವಭಾವವು, ಚ—ಮತ್ತು, ಅಬಲತ್ವಂ—ಶಕ್ತಿಹೀನತೆಯು, ಹೀನತ್ವಂ—ಹೀನತನ, ಪ್ರೇಷಣತ್ವಂ—ಇತರರ ಆಳುತನಮಾಡುವುದು, ಲಘುತರ ಮರಣಂ—ಅತಿ ಹಗುರವಾದ ಸಾವು, ಶೋಕಕಾಂಕ್ಷಾಲಯತ್ವಂ—ದುಃಖ ದುರಾಸೆಗಳಿಗಾಶ್ರಯವಾಗಿರುವುದು, ಇವನ್ನೆಲ್ಲ, ಮಾಂಸಾಶೀ—ಮಾಂಸವನ್ನು ತಿನ್ನುವವನು, ಪ್ರಾಣಘಾತೀ—ಜೀವಹಿಂಸೆ ಮಾಡುವವನು, ಮಾನುಷ್ಯಜನ್ಮಂ—ಮನುಷ್ಯಜನ್ಮವನ್ನು, ಪ್ರಾಪ್ಯ—ಪಡೆದು, ಚಿರಂ—ಬಹುಕಾಲ, ಅನುಭವತಿ—ಅನುಭವಿಸುತ್ತಾನೆ, ಹಿ—ಅಲ್ಲವೆ.

ವಾಮನ ಪಂಗ್ವಂಧ ಕುಬ್ಜ ಖಂಜ ಕರಾಳಾಃ—ಕುಳ್ಳಾಗಿರುವವನು, ಕೈಕಾಲಿಲ್ಲದವನು, ಕುರುಡನಾದವನು, ಗುಜ್ಜಾಗಿರುವವನು, ಕುಂಟನು, ಭಯಂಕರನು, ಜಡ—ದಡ್ಡನು, ಬಧಿರ—ಕಿವುಡನು, ಮೂಕ—ಮೂಗನು, ಕೃಶರೋಮಶ—ಕೃಶನಾಗಿ ಮೈಮೇಲೆಲ್ಲ ಕೂದಲು ಬೆಳೆದಿರುವವನು, ವಕ್ರ—ವಿಕಾರನಾದವನು, ನಿಬಿಡಾಳಿಸ್ತ್ರೇ-?, ಆಗಿ, ಪಾಪಾತ್—ಪಾಪಕರ್ಮದ ದೆಸೆಯಿಂದ, ಜಾಯಂತೇ—ಹುಟ್ಟುತ್ತಾರೆ, ಕಿಲ—ಅಲ್ಲವೇ.

**ವಸಂತ ತಿಲಕಂ:** ನರಾಃ—ಮನುಷ್ಯರು, ಪೂರ್ವಚರಿತೇನ—ಹಿಂದೆ ಮಾಡಿದ,

ಪಾಪಾತ್—ಪಾಪಕರ್ಮದಿಂದ, ಉದ್ದಂತ—ಉಬ್ಬು ಹಲ್ಲುಳ್ಳವನು, ಕುಬ್ಜ—ಗುಜ್ಜನು, ಕುಣಿ—ಮೋಟುಗೈಯವನು, ಕುಂಡ—ಹಾದರಕ್ಕೆ ಹುಟ್ಟಿದವನು,ಕಾಣಾಃ—ಒಕ್ಕಣ್ಣನು, ಸಂಸ್ಥೂಲ—ಅತಿ ದಪ್ಪವಾದ, ದೀರ್ಘ—ಉದ್ದವಾದ, ಕೃಶರೋಮಶ—ಕೃಶತೆಯಿಂದಲೂ ಕಾಡುಕೂದಲುಗಳಿಂದಲೂ ಕೂಡಿದ, ರೂಕ್ಷ—ಒರಟಾದ, ರೂಪಾಃ—ಆಕಾರವುಳ್ಳವರೂ, ಕುಷ್ಠಾರ್ದಿತಾಃ—ಕುಷ್ಠರೋಗದಿಂದ ಪೀಡಿಸಲ್ಪಟ್ಟವರೂ, ಕೃಪಣ—ಜೀನರಾದವರೂ, ವಾಮನ—ಕುಳ್ಳಾದವರೂ, ಪಾಮನಾಃ ಚ—ಚರ್ಮರೋಗಪೀಡಿತರೂ ಆಗಿ, ಭವಂತಿ—ಹುಟ್ಟುತ್ತಾರೆ.

ವೃತ್ತ || ಕುಲಹೀನಂ—ನೀಚಕುಲದಲ್ಲಿ ಜನಿಸಿದವನು, ದೀನಮಾನಂ—ತಗ್ಗಿದ ಗೌರವವುಳ್ಳವನು, ಪರಿಭವ ವಿಭವಂ—ತಿರಸ್ಕಾರಕ್ಕೆ ಗುರಿಯಾದ ವೈಭವವುಳ್ಳವನು, ದುಷ್ಕೃತಂ—ಕೇಡಿಗನು, ಪಾಪಕರ್ಮಂ—ಪಾಪಗೆಲಸವನ್ನು ಮಾಡಿದವನು, ಮಲಿನಂ—ಕೊಳಕನು, ದುರ್ಗಂಧ ಗಂಧಂ—ದುರ್ನಾತವುಳ್ಳವನು, ಜಡಮತಿ—ಮಂದಬುದ್ಧಿಯವನು, ಕಿವುಡಂ—ಕಿವುಡನು, ಪಂಗು—ಹೆಳವನು, ಮೂಕಂ—ಮೂಗನು ನಾಣಿಲಿ—ಲಜ್ಜೆಯಿಲ್ಲದವನು, ಪಾಣ್ಬಂ—ಜಾರನು, ಪಂದೆ—ಹೇಡಿ, ಲೋಭಂ—ಅತ್ಯಾಸೆಯುಳ್ಳವನು, ಖಳಂ—ದುಷ್ಟನು, ಅಳಿಕಮನಂ — ಕಪಟಮನದವನು, ವಂಚಕಂ—ಮೋಸಗಾರನು, ನಿತ್ಯ ರೋಗಾಕುಳಂ — ಯಾವಾಗಲೂ ರೋಗಪೀಡಿತನಾದವನು, ಎಂಬ—ಎನ್ನುವ, ಈ ನಾಮ—ಈ ಹೆಸರುಗಳ, ನಾಮಾವಳಿಗೆ—ಹೆಸರುಗಳ ಗುಂಪಿಗೆ, ವ್ರತವ್ರಾತಹೀನಂ—ಅಹಿಂಸೆಯೇ ಮೊದಲಾದ ವ್ರತಗಳನ್ನು ಆಚರಿಸದವನು, ನಿಳಯನಕ್ಕುಂ — ಮನೆಯಾಗುತ್ತಾನೆ, ಆಶ್ರಯಸ್ಥಾನವಾಗುತ್ತಾನೆ.

೧೧. ೧ : ಉಱಿದುದಱಿಂದಂ—ಬಿಟ್ಟುದರಿಂದ; ೨. ಎಯ್ದುಗುಂ—ಹೊಂದುತ್ತದೆ.

ವೃತ್ತ : ಮಧುಸುರಾಮಾಂಸ ಸೇವಾನಿವೃತ್ತಾಃ—ಜೇನು ಮದ್ಯ ಮಾಂಸಗಳನ್ನು ತಿನ್ನದೆ ಬಿಟ್ಟವರು, ಶ್ರೀವಕ್ಷಃ—ಸಂಪದ್ಯುಕ್ತವಾದ ಎದೆ, ಚಾರುರೂಪಂ—ರಮ್ಯವಾದ ರೂಪ, ಕುಲಬಲವಿನಯಂ—ಕುಲಬಲಗಳ ವಿನಯವು, ಖ್ಯಾತಿ ದೀರ್ಘಾಯುಷ್ಯತ್ವಂ—ಕೀರ್ತಿಯೂ ದೀರ್ಘಾಯುಸ್ಸೂ, ದೇವಾಸುರೇಂದ್ರೈಃ—ಇಂದ್ರನಿಂದಲೂ ರಾಕ್ಷಸ ರಾಜರಿಂದಲೂ, ಪೂಜಾಂ—ಪೂಜೆಯೂ, ಸುರವರವನಿತಾ ಪ್ರೀತಿಂ—ದೇವಸ್ತ್ರೀಯರ ಪ್ರೇಮವೂ, ಅಷ್ಟಾಂಗ ಭೋಗಂ—ಅನ್ನ, ನೀರು, ತಾಂಬೂಲ, ಪುಷ್ಪ, ಚಂದನ, ವಸ್ತ್ರ, ಶಯ್ಯೆ, ಅಲಂಕಾರ ಎಂಬ ಈ ಸುಖಗಳೂ, ದ್ಯುತಿಮತಿಪಟುತಾಂ—ಕಾಂತಿಯುಕ್ತವಾದ ಬುದ್ಧಿಯ ಸಾಮರ್ಥ್ಯವೂ, ರಾಜರಾಜಶ್ರಿಯಂ—ಕುಬೇರನ ಐಶ್ವರ್ಯವೂ, ಸೌಭಾಗ್ಯಂ—ಸಂಪತ್ತು, ಪೂಜ್ಯವಾಕ್ಯಂಚ—ಗೌರವಯುಕ್ತವಾದ ನುಡಿ, ಇವುಗಳನ್ನು ಸ್ವರ್ಗೇಮರ್ತ್ಯೇಜಗತಿ ಚ—ಸ್ವರ್ಗದಲ್ಲೂ ಮನುಷ್ಯ ಲೋಕದಲ್ಲೂ ಜಗತ್ತಿನಲ್ಲೂ, ಲಭಂತೇ—ಪಡೆಯುವರು.

ಆರ್ಯೆ || ಜೀವಾಃ—ಜೀವಗಳು, ವಿಖ್ಯಾತವಿಪುಲವಂಶೇಷು—ಪ್ರಸಿದ್ಧವೂ ವಿಸ್ತಾರವೂ

ಆಗಿರುವ ವಂಶಗಳಲ್ಲಿ, ಏಕೇ—ಒಂದರಲ್ಲಿ, ದ್ಯುತಿ....ಸಂಪನ್ನಾಃ: ದ್ಯುತಿಮತಿ—ಪ್ರಕಾಶದಿಂದ ಕೂಡಿದ ಬುದ್ಧಿಯಿಂದಲೂ, ಧೃತಿ—ಸ್ಥಿರತೆಯಿಂದಲೂ, ಕಾಂತಿ—ತೇಜಸ್ಸಿನಿಂದಲೂ, ಶ್ರೀ—ಐಶ್ವರ್ಯದಿಂದಲೂ, ಹ್ರೀ—ಲಜ್ಜೆಯಿಂದಲೂ, ರೂಪಾರೋಗ್ಯ ಸತ್ವಬಲ—ಆಕಾರ ಆರೋಗ್ಯ ಸತ್ವಗುಣಶಕ್ತಿಗಳಿಂದಲೂ, ಸಂಪನ್ನಾಃ—ಸಂಪತ್ತನ್ನುಳ್ಳವರಾಗಿ, ಹೊಂದಿದವರಾಗಿ, ಪುಣ್ಯಾತ್—ಪುಣ್ಯವಶದಿಂದ,ಉತ್ಪಾದ್ಯಂತೇ—ಹುಟ್ಟುತ್ತಾರೆ.

ಆಜ್ಞಾ—ಆಜ್ಞೆಮಾಡುವ ಅಧಿಕಾರವೂ, ಯಶಃ — ಕೀರ್ತಿಯೂ, ಧೃತಿ — ಸ್ಥಿರತೆಯೂ, ಮತಿದ್ಯುತಿ — ಬುದ್ಧಿಪ್ರಕಾಶವೂ, ಕಾಂತಿ—ತೇಜವೂ, ಲಕ್ಷ್ಮೀ—ಐಶ್ವರ್ಯವೂ, ಶೌರ್ಯ ಪ್ರತಾಪ—ಪರಾಕ್ರಮ ಪ್ರತಾಪಗಳೂ, ಪರಿವಾರಧನೋಪಭೋಗಾಃ—ಸೇವಕರು ಐಶ್ವರ್ಯ ಮುಂತಾದ ಸುಖಗಳೂ, ತೇ—ಇವುಗಳೆಲ್ಲ, ಲೋಕವೇದ ಸಮಯೇಷು—ಲೌಕಿಕ ವೈದಿಕವೆಂಬ ಸಂಪ್ರದಾಯಗಳಲ್ಲಿ, ಸುನಿಶ್ಚಯೇನ—ಅತ್ಯಂತ ನಿಶ್ಚಯವಾದ, ಪುಣ್ಯೋದಯೇನ—ಪುಣ್ಯದ ಏಳ್ಗೆಯಿಂದ, ಸುಲಭಾಃ—ಸುಲಭವಾಗಿ ಲಭಿಸುವುವು, ಇತಿ—ಹೀಗೆಂದು, ವರ್ಣಯಂತಿ—ವರ್ಣಿಸುತ್ತಾರೆ.

ಧರ್ಮೇಣ—ಧರ್ಮದಿಂದ, ವರ....ಸುರಥಾಃ—ವರಯುವತಿ—ಶ್ರೇಷ್ಠಳಾದ ಸ್ತ್ರೀ, ಭವನ—ಮನೆ,ವಾಹನ—ಪಲ್ಲಕ್ಕಿ ಮುಂತಾದುವು, ನಾಟಕ—ನೃತ್ಯಗಳು, ಧನ—ಐಶ್ವರ್ಯ, ಕನಕ—ಚಿನ್ನ, ರಜತ—ಬೆಳ್ಳಿ, ಮಣಿ—ರತ್ನ, ಸುರಥಾಃ—ಒಳ್ಳೆಯ ರಥಗಳು, ಅತಿ ಲಲಿತ—ಬಲು ರಮ್ಯವಾದ, ತುಂಗ—ಎತ್ತರವಾದ, ಮದದಳಿತ—ಮದೋದಕದಿಂದ ಬಿರಿದಿರುವ, ನಾಗ—ಆನೆಗಳೂ, ಭೃತ್ಯಾಃ—ಸೇವಕರೂ, ಭವಂತಿ—ಉಂಟಾಗುತ್ತಾರೆ.

೧೭ : ನಿರ್ವಾಣ ಸುಖ—ಮೋಕ್ಷದ ಸುಖವನ್ನು

ಗಾಹೆ ॥ ಜತ್ಥ—ಎಲ್ಲಿ, ದಯಾ—ದಯೆಯು ಇದೆಯೋ, ಸೋ—ಅದು, ಧಮ್ಮಃ—ಧರ್ಮವು ; ತಓ—ಬಳಿಕ, ಜತ್ಥ—ಎಲ್ಲಿ, ವಿಸಯಣಿಗ್ಗಹೋ—ಇಂದ್ರಿಯನಿಗ್ರಹವು ಇದೆಯೋ, ಸೋವಿ—ಅದುಕೂಡ, ಧಮ್ಮೋ—ಧರ್ಮವು ; ದಸ ಅಟ್ಠದೋಸರಹಿಓ—ಹದಿನೆಂಟು ದೋಷಗಳಿಲ್ಲದವನು, ಸೋ—ಅವನು, ದೇವಃ—ದೇವತೆಯು ; ಆರಾಧ್ಯ ವಸ್ತುವು. ಸಂದೇಹೋ—ಸಂಶಯವು, ಣತ್ಥಿ—ನಾಸ್ತಿ, ಇಲ್ಲವು.

೨೧ : ದೇವನ ಪೇಳ್ದುದು—ದೇವನು ಎಂದರೆ ಅರ್ಹಂತನು ಹೇಳಿದ್ದು ; ೨೮. ಮೆಲ್ಲಿದಳಾಗಿ—ಮೃದುವಾದವಳಾಗಿ ; ಭವಾಂತರಂಗಳಂ—ಜನ್ಮಾಂತರಗಳನ್ನು ; ೨೯. ಆದಮಾನುಂ—ಅತಿಶಯವಾಗಿ, ೩೦. ಶ್ರಾವಕ ಬ್ರತಂಗಳಂ—ಜೈನಗೃಹಸ್ಥನು ಮಾಡಬೇಕಾದ ವ್ರತಗಳನ್ನು ; ೩೧. ಕರ್ಮಕ್ಷಯಮಕ್ಕೆ—ಕರ್ಮದ ನಾಶವಾಗಲಿ.

೧೨. ೧ : ಆವಾಸಕ್ಕೆ—ಮನೆಗೆ; ೨. ಮೇಲ್ಕೊಂಡು—ಧರಿಸಿ ; ೪. ಮಹಾ ವಿಭೂತಿ ವಿಸ್ತಾರದಿಂದಂ—ಮಹಾ ವೈಭವದ ಆಧಿಕ್ಯದಿಂದ ; ಪೂಜೆಯಂ—ಪೂಜಾ ವಸ್ತುಗಳನ್ನು ; ೫. ಪರಕೆಗುಡಲ್—ಹರಕೆಯನ್ನು ಒಪ್ಪಿಸಲು ; ಒಡವೋಪ—ಜೊತೆಯಲ್ಲಿ ಹೋಗುವ ; ೫. ವ್ಯಾವರ್ಣಿಸಿ—ವಿಸ್ತಾರವಾಗಿ ವರ್ಣನೆಮಾಡಿ ; ಪುಟ್ಟುವೆನಕ್ಕೆ—ಹುಟ್ಟುವೆನಾಗಲಿ ; ೮. ನಿದಾನಂಗೆಯ್ದು—ಸಂಕಲ್ಪಿಸಿ, ನಿಶ್ಚಯಿಸಿ ; ಪಾವು

ಕೊಳೆ—ಹಾವು ಕಡಿಯಲು; ೧೨. ಒಡೆಯಳ್—ಉಳ್ಳವಳು; ೧೭. ಮಗುಟ್ಟಿ—ತಿರುಗಿ, ಮತ್ತೆ, ಪೊಱವೊಱಲೊಳ್—ಪಟ್ಟಣದ ಹೊರಭಾಗದಲ್ಲಿ; ೧೮. ಪೆಸರ ನೊಡೆಯ—ಹೆಸರನ್ನುಳ್ಳ; ೧೯. ಮುನ್ನಿರ್ದ—ಮುಂಚೆ ಇದ್ದ, ತಂಗಿ ಇದ್ದ; ನಾಗ ಠಾಣದೊಳ್—ನಾಗರೆಡೆಯಲ್ಲಿ. ೨೧. ನಿಯೋಗಿಗಳ—ಅಧಿಕಾರಿಗಳ; ಪಲಂಬರುಂ—ಹಲವರೂ; ೨೪. ಜಾತಿಸ್ಮರೆಯಾಗಿ—ಹಿಂದಿನ ಜನ್ಮಗಳ ನೆನಪುಂಟಾದವಳಾಗಿ; ೨೬. ಪೊಡೆವಟ್ಟು—ನಮಸ್ಕರಿಸಿ, ಪೊಡೆಯಂ + ಮಡು—ಹೊಟ್ಟೆಯನ್ನು (ನೆಲಕ್ಕೆ) ಸೇರಿಸು, ನಮಸ್ಕರಿಸು;

೧೩. ೧: ಅಭಿಮಾನಂ—ಗರ್ವವು; ಉಱದೆ—ಹೊಂದದೆ, ಲಕ್ಷಿಸದೆ; ಪರಿಭವಿಸಿ—ತಿರಸ್ಕರಿಸಿ, ; ಪೊಲ್ಲಮೆಯ—ದುಷ್ಟತನದ, ಕೇಡಿಗತನದ, ಹೊಲಸಿನ; ೨. ಬಯ್ಗುಳ್ = ಬಯ್ + ಗುಳ್ (ಕೃತ್ಪ್ರತ್ಯಯ); ೪. ಕಱುಮೆಯಾಗಿ = ಕಱಿಮೆಯಾಗಿ—ಬಲಿತು, ಪಕ್ವವಾಗಿ (?); ೮. ಪ್ರತಿಬೋಧಿಸೆ—ಎಚ್ಚರಿಸಲು, ತಿಳಿಯ ಹೇಳಲು; ೧೧. ಕಱಿದ—ದಾಟಿದ, ಹಿಂದೆ ಆಗಿಹೋದ; ೧೩. ನಿಮ್ಮಮ್ಮಂ—ನಿಮ್ಮ ಅಪ್ಪನು, ತಂದೆಯು; ಪೆಱವುಳಿ—ಇದರ ಪಾಠ ಪೆಱವುೞಿ ಎಂದಿರಬೇಕು—ಬೇರೆ ಎಡೆ, ಇತರ ಸ್ಥಲ; ವಿಸುಡದಿರ್—ಬಿಸುಡದಿರು. ೧೯. ಪಾರ್ವರೆಮುಂ—ಬ್ರಾಹ್ಮಣರಾಗಿದ್ದೇವೆ, ಮತ್ತು; ಅಗ್ಗಳಂ—ಶ್ರೇಷ್ಠರು; ೨೦. ಪೂಜಿತರೆಮುಂ—ಪೂಜಿತರಾಗಿದ್ದೇವೆ, ಮತ್ತು; ಎಮ್ಮಿಂದಗ್ಗಳಂ—ನಮಗಿಂತ ಶ್ರೇಷ್ಠರಾದವರು; ಪೆಱರಿಲ್ಲ—ಇತರರಿಲ್ಲ; ಸವಣರ ಧರ್ಮಮಂ—ಜೈನಯತಿಯ ಧರ್ಮವನ್ನು; ೨೧. ಕೊಳಲಾಗ—ಸ್ವೀಕರಿಸಲಾಗದು, ಆಗ < ಆಗದು; ಅಮ್ಮಾ—ತಂದೆಯೇ; ೨೨. ಬಿಸುಟಪ್ಪೆಂ—ಬಿಸುಡುತ್ತೇನೆ; ೨೩. ಎಡೆಯೊಳ್—ನಡುವೆ; ೨೪. ಬಟ್ಟೆಯೊಳ್—ದಾರಿಯಲ್ಲಿ, ಬಟ್ಟೆ < (ಸಂ) ವರ್ತ್ಮನ್—ಮಾರ್ಗ; ಪೆಡಂಗಯ್ ಉಡಿಯೆ—ಬೆನ್ನು ಹಿಂದೆ ಬಾಗಿಸಿ ಕಟ್ಟಿದ ಕೈಗಳು ಮುರಿಯುವಂತೆ; ಒಂದೆವಱಿಗುಟ್ಟ—ಒಂದೇ ಹರೆಯನ್ನು ಎಂದರೆ ತಮಟೆಯನ್ನು ಹೊಡೆಯುತ್ತ; ೨೫. ಕೊಲಲುಯ್ವ—ಕೊಲ್ಲಲು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುವ; ೨೬. ಬೆಸಗೊಳ್ಗುಂ—ಕೇಳುತ್ತಾಳೆ; ೨೭. ಬೆಸಗೊಳ್ಳಿಂ—ಕೇಳಿರಿ, ವಿಚಾರಿಸಿರಿ.

೧೪. ೧: ತಳಾಱನಂ—ನಗರ ರಕ್ಷಕನನ್ನು, ಕೊತ್ವಾಲನನ್ನು, ಪ್ರಾ. ದೇ. ತಲವರ, (ತು.) ತಳವಾರಿ, (ತೆ.) ತಲಾರಿ, (ಮರಾ.) ತಳ್ವಾರ್, ತಱವಳ ಎಂಬ ರೂಪವೂ ಕನ್ನಡದಲ್ಲುಂಟು, ಇರುಳ ತಱವಳಿಕೆ ಹೈಡಿಂಬಂಗೆ (ಕುವ್ಯಾಉ. ೧೧-೪೯); ೪. ಕಸವರಮನೊಡೆಯೊಂ—ಕಸವರವನ್ನು ಎಂದರೆ ಚಿನ್ನದ ನಾಣ್ಯಗಳನ್ನು (ಚಿನ್ನವನ್ನು) ಉಳ್ಳವನು; ಜೂದಾಡಿ—ಜೂಜನ್ನು ಆಡಿ; ೫. ದೀನಾರವೆಂಬ ನಾಣ್ಯವನ್ನು, ಇದು Denarius ಎಂಬ ಹೆಸರಿನ, ರೋಮನ್ ಚಕ್ರಾಧಿಪತ್ಯದ ನಾಣ್ಯ, ಚಿನ್ನದ್ದು ಅಥವಾ ಬೆಳ್ಳಿಯದು; ಸೋಲಮಂ—ಸೋತುದನ್ನು, ಸೋಲ್ > ಸೋಲ; ೧೦. ಅಮೋಘಂ—ತಪ್ಪದೆ, ಖಂಡಿತವಾಗಿ; ೧೨. ಸೂಲದೊಳ್—ಶೂಲದಲ್ಲಿ; ೧೪. ಕ್ಷಪಣಕಂಗೆ—

ಜೈನಸಂನ್ಯಾಸಿಗೆ; ಒಪ್ಪಿಸುವಂ—ಒಪ್ಪಿಸಿ ಕೊಡೋಣ; ಕಿಱಿದಂತರವಂ—ಸ್ವಲ್ಪ ದೂರವನ್ನು; ೧೮. ವೈನಯಿಕನೆಂಬೊಂ—ವೈನಯಿಕ ಎಂಬಾತನು, ಇದನ್ನು ಒಬ್ಬ ಪುರುಷನ ಹೆಸರಾಗಿ ಇಲ್ಲಿ ಕೊಟ್ಟಿದೆ, ಆದರೆ ವೈನಯಿಕ ಎಂಬುದೊಂದು ವಿದ್ಯೆ, ಚತುಷ್ಷಷ್ಟಿ ಕಲೆಗಳಲ್ಲಿ ೬೨ನೆಯದು (ಕಾಮಸೂ. ೧-೩-೧೬), "ವೈನಯಿಕೀನಾಂ ವೈಜಯಿಕೀನಾಂ ವ್ಯಾಯಾಮಿಕೀನಾಂ ಚ ವಿದ್ಯಾನಾಂ ಜ್ಞಾನಂ", "ಸ್ವಪರವಿನಯ ಪ್ರಯೋಜನಾತ್ ವೈನಯಿಕ್ಯೋ ವಿನಯಾಚಾರ ಶಾಸ್ತ್ರಾಣಿ, ಹಸ್ತ್ಯಾದಿ ಶಿಕ್ಷಾಚ" ಎಂದು ವ್ಯಾಖ್ಯಾನಕಾರ ಯಶೋಧರನ ಅಭಿಪ್ರಾಯ, ಆದ್ದರಿಂದ ಇಲ್ಲಿ ವೈನಯಿಕ ಎಂದರೆ ಆ ಹೆಸರಿನ ವಿದ್ಯೆಯನ್ನು ಬಲ್ಲವನು ಎಂದರ್ಥ; ೧೯. ಲೋಗರಂ—ಜನರನ್ನು; ಡಂಬಿಸಿ—ಮೋಸಮಾಡಿ; ಮಾಱುಗೊಳ್ವ—ಬೆಲೆಗೆ ಕೊಳ್ಳುವ; ೨೨. ಸರ್ಪದಷ್ಟ ಮಾಡೊಡೆ—ಹಾವು ಕಡಿದರೆ; ಹಾವಿನ ಕಡಿತವುಂಟಾದರೆ ೨೩. ಇೞಿಪಿದೊಡೆ—ಕೆಳಕ್ಕೆ ಇಳಿಸಿದರೆ; ೨೪. ಬಾೞಿಸುವೆಂ—ಬದುಕಿಸುತ್ತೇನೆ; ದಾಷ್ಟಿಕಂಗೆ—ಕಚ್ಚಲ್ಪಟ್ಟವನಿಗೆ; ಕಾವಮಿರಿಂ—ಕಾವಲಾಗಿ ಇರಿ;

೧೫. ೧: ಪುಳ್ಳಿಯಂ—ಪುರುಲೆ ಸೌದೆಯನ್ನು; ೨. ದಾಷ್ಟಿಕನಾ ಪಕ್ಕದೆ—ಕಚ್ಚಿಸಿಕೊಂಡವನ ಮಗ್ಗುಲಲ್ಲಿ, ಪೂ. ಹ. ಗ. ದ ಷಷ್ಠೀ ದೀರ್ಘವಿಲ್ಲಿದೆ; ಕಾದಿರ್ದಂ—ಕಾವಲಿದ್ದನು; ೩. ಪೊತ್ತುಱನೆ—ಹೊತ್ತಾರೆಯದೇ, ಪೊತ್ತುಱನ + ಎ; ನೇಸಱ್ ಮೂಡೆ—ಸೂರ್ಯ ಹುಟ್ಟಲು; ೪. ಪಱಿಗುಟ್ಟಿ—ಹರೆಯನ್ನು ಹೊಡೆದು; ದಾಷ್ಟಿಕನಂ—ಕಚ್ಚಲ್ಪಟ್ಟವನನ್ನು; ೫. ಓರೊರ್ವರ್ಗೆ—ಒಬ್ಬೊಬ್ಬರಿಗೆ; ಸಾಸಿರ—ಸಾವಿರ; ೬. ಪೊಟ್ಟಳಿಗೆಗಳಂ—ಪೊಟ್ಟಣಗಳನ್ನು; ಜನಸಂಕೀರ್ಣದ—ಜನರಗುಂಪಿನ; ೭. ಈಡಾಡಿದೊಡೆ — ಬಿಸಾಡಿದರೆ; ೯. ಆರೈವುದು — ವಿಚಾರಮಾಡುವುದು; ೧೦. ಕಳ್ಳನ ನಾರಯ್—ಕಳ್ಳನನ್ನು ಹುಡುಕು; ನಿಗ್ರಹಮಂ—ಶಿಕ್ಷೆಯನ್ನು; ೧೧. ಬಗ್ಗಿಸಿ ನುಡಿದೊಡೆ—ಗದರಿಸಿ, ಬಯ್ದು ಹೇಳಿದರೆ; ೧೨. ಬಿನ್ನನೆ ಮೊಗಂ ಬಾಡಿ (ಮಾಡಿ)—ಶೂನ್ಯವಾದ, ಬರಿದಾದ ಮುಖವುಳ್ಳವನಾಗಿ; ೧೩. ಬಿನ್ನನಾಗಿ—ಶೂನ್ಯನಾಗಿ, ದಿಕ್ಕು ತೋಚದೆ; ೧೭. ಸಂತವಿಸಿದಾಗಳ್—ಸಮಾಧಾನಪಡಿಸಿದಾಗ; ಪರೀಕ್ಷಿಸಲ್ ವೇಡಿ—ಪರೀಕ್ಷೆಮಾಡಲು ಬಯಸಿ; ೨೦. ಮಿಾಯಲ್ ಪೋಗಿ—ಸ್ನಾನಮಾಡಲು ಹೋಗಿ; ಮಿಾವಲ್ಲಿ—ಸ್ನಾನಮಾಡುವ ಎಡೆ; ೨೧. ನೆಗಬಿಲ್—ಮೊಸಳೆ; ಆದಮಾನುಮಂಜಿ—ಬಹಳವಾಗಿ ಹೆದರಿ; ತಡಿಯೊಳಿರ್ದ—ದಡದಮೇಲಿದ್ದ; ೨೨. ಬೇಡಿದುದಂ—ಬಯಸಿದ್ದನ್ನು; ಈವೊಡೆ—ಕೊಡುವ ಪಕ್ಷದಲ್ಲಿ; ೨೩. ಪೂಣ್ದೊಡೆ—ಭಾಷೆ ಕೊಟ್ಟರೆ; ೨೪. ಬೇಡುವಯ್—ಬಯಸುತ್ತೀಯ; ೨೬. ಪಸದನಮಂ—ಅಲಂಕಾರವನ್ನು, ಪ್ರಸಾಧನಾ > ಪಸದನ; ೨೭. ಪೂಣ್ದಳ್—ಪ್ರತಿಜ್ಞೆಮಾಡಿದಳು, ಭಾಷೆ ಕೊಟ್ಟಳು; ನೆಱೆದಂದು—ತುಂಬಿದಾಗ; ೨೮. ಪೂಣ್ಕೆ—ಭಾಷೆಯನ್ನು; ೨೯. ಕೈಗೆಯ್ದು—ಸಿಂಗರಿಸಿಕೊಂಡು, ಪೊಱಮಟ್ಟು—ಹೊರಕ್ಕೆ ಸೇರಿ, ಹೊರಕ್ಕೆ ಹೊರಟು.

೧೬. ೧: ಆಪಣಕ್ಕೆ—ಅಂಗಡಿಗೆ, ಮಳಿಗೆಗೆ; ಎಡೆಯೊಳ್—ನಡುವೆ; ನಿನ್ನತೊಟ್ಟ;

ನೀನು ತೊಟ್ಟ ೩. ತುಡುಗೆಯೆಲ್ಲವಂ—ಒಡವೆಗಳನ್ನೆಲ್ಲ, ಆಭರಣಗಳನ್ನೆಲ್ಲ ;ಎನ್ನ ಬರ್ಪನ್ನೆಗಂ—ನಾನು ಬರುವವರೆಗೂ; ೫. ಈ ಪೊೞ್ತು—ಈ ಹೊತ್ತು ; ಪೊಲ್ಲಮಾನಸಿಯೆ—ಕೆಟ್ಟಮನುಷ್ಯಳೇ ; ಮನೆವಾೞ್ತೆ—ಮನೆಯ ಕೆಲಸ, ಮನೆವಾರ್ತೆ ; ೭. ಮೆಚ್ಚುಗೆಯ್ವೆಂ—ಮೆಚ್ಚಿದ್ದನ್ನು ಮಾಡುತ್ತೇನೆ ; ನನ್ನಿಗೊಟ್ಟು—ಸತ್ಯವಾದುದನ್ನು ಹೇಳಿ, ನಂಬಿಕೆಯನ್ನುಂಟುಮಾಡಿ, ಭಾಷೆಕೊಟ್ಟು ; ೧೨. ಹರಿಪದಿಂದೆ—ತ್ವರೆಯಿಂದ ; ಅಟ್ಕಱಿಂದೆ—ಪ್ರೀತಿಯಿಂದ ; ಪೋದಪ್ಪಳ್—ಹೋಗುತ್ತಾಳೆ ; ಬಟ್ಟೆವಟ್ಟೆಯನೆ—ದಾರಿ ದಾರಿಯನ್ನೇ, ಹಿಂದು ಹಿಂದೆಯೇ ; ೧೫. ತೆಱೆಯಿಂ—ತೆರೆಯಿರಿ ; ೫. ಎನ್ನ ನನ್ನಿಗೊಂಡಯ್—ನನ್ನ ಭಾಷೆಯನ್ನು ಸ್ವೀಕರಿಸಿದೆ ; ೨೦. ಪೊಲ್ಲದು ವಂದೆ—ಕೆಟ್ಟುದು, ಬಂದೆ ; ೨೩. ಮದೆವಳ್—ಮದುವೆ ಹುಡುಗಿ, ಕನ್ಯೆ ; ೨೫ ಒಡೆಯಯ್—ಉಳ್ಳವಳಾಗಿದ್ದೀಯೆ ; ೨೬. ಅೞೆಯಲಾಱೆಂ—ಹಾಳುಮಾಡಲಾರೆನು ;

೧೭. ೩ : ಕೈಯದಂ—ಕೈಯಲ್ಲಿರುವುದನ್ನು ; ಬರ್ದುಕ್ಪ್ಪೆನೆ—ಬದುಕುತ್ತೇನೆಯೆ ? ; ೪. ಎಣಿಕೊಂಡ—ಎಣಿಸಿ ತೆಗೆದುಕೊಂಡ ; ಕಸವರಂ—ಚಿನ್ನ ; ತವನಿಧಿಯಂತೆ—ಅಕ್ಷಯವಾದ ನಿಧಿಯಹಾಗೆ ; ತವದೆ—ಕ್ಷಯವಾಗದೆ, ನಾಶವಾಗದೆ ; ೫. ಮದೆವಳಂ—ಮದವಣಿಗಿತ್ತಿಯನ್ನು ; ೧೦. ಕೞಿಪಿದಂ—ಕಳುಹಿಸಿಕೊಟ್ಟನು ; ೧೨. ಒಡೆಯೊಳಂ—ಉಳ್ಳವಳನ್ನು ; ವಂದೊಳಂ—ಬಂದವಳನ್ನು ; ೧೩. ಸಮನಿಸಿದೊಡೆ—ಒದಗಿದರೆ, ಉಂಟಾದರೆ ; ಅಳಿಪದೆ—ಆಸೆಪಡದೆ ; ೧೬. ಕಿಱಿದು ಬೇಗಂ—ಸ್ವಲ್ಪಹೊತ್ತು ; ೧೭. ಮಱಲುಂದಿಸಿದ—ಮೈಮರೆತು ನಿದ್ದೆಮಾಡುವ ಹಾಗೆ ಮಾಡಿದ, ಬೞಿಕ್ಕಂ—ಅನಂತರ ; ಎೞ್ಪಿ—ಎಬ್ಬಿಸಿ ; ಏಕಾಂತದೊಳ್—ರಹಸ್ಯದಲ್ಲಿ ; ೧೮. ಆಟಿಸಿದೆಂ—ಬಯಸಿದೆನು, ಪ್ರೀತಿಸಿದೆನು ; ನೆಱೆಯೆ—ಪೂರ್ಣವಾಗಿ ; ತುಡುಗೆಯಂ—ಒಡವೆಗಳನ್ನು ; ೧೯. ಭಾಗಸಮುಳ್ಳೊಡೆ—ಐಶ್ವರ್ಯವಿದ್ದರೆ, ದ್ರವ್ಯವಿದ್ದರೆ (?) ಭಾಗವಶ > ಬಾಗವಸ ; ಪೆಂಡತಿಯೆನಾಗಿ—ನಾನು ಹೆಂಡತಿಯಾಗಿ ; ಒಡವರ್ಪೆಂ—ಜೊತೆಯಲ್ಲಿ ಬರುತ್ತೇನೆ ; ಉರ್ಕೆವ = ಉಕ್ಕೆವ—ಮೋಸ, ಕಪಟ ; ೨೦. ಮನಂಗೊಳೆ—ಮನಸ್ಸನ್ನು ಸೂರೆಮಾಡುವಂತೆ ; ಮೆಯ್ಯಱಿಯದೆ—ಮೈಮೇಲೆ ಪ್ರಜ್ಞೆಯಿಲ್ಲದೆ ; ೨೨. ಪೋಪಂ—ಹೋಗೋಣ ; ೨೩. ತಂದೆಯ ಮಱಲುಂದಿದಲ್ಲಿಗೆ—ತಂದೆ ಮೈಮರೆತು ನಿದ್ರಿಸುತ್ತಿದ್ದ ಸ್ಥಳಕ್ಕೆ ; ಬರುಂಟಿ—ಬೆರಳಿನಿಂದ ಚುಚ್ಚಿ, ಇದು ಬೆರಂಟು ಎಂಬುದರ ಬೇರೆ ರೂಪವಾಗಿರಬಹುದು, "ಬೆರಂಟು—ಅಂಗುಲಿಕ್ರಿಯಾಯಾಂ" ; ಬರುಂಟು ಗೆ ಪ್ರಯೋಗ "ಪೇೞಲ್ ಬಾರದು ಮನದೊಳ್ ಪೂೞಲ್ ಬಾರದು ಬರುಂಟೆ ಕೇಳ್ದವರಾರುಂ ಬಾೞಲ್ ಬಾರದ ಕನಸಂ....ಕಂಡಂ" (ಅರ್ಧನೇಮಿ, ೭-೬೬) ; (ತಮಿಳು) ವರುಟ್ಟು—ನಂಬಿಸು, ವಶೀಕರಿಸು ಎಂಬರ್ಥಗಳುಂಟು ; ೨೫. ಚಿತ್ರಕಥೆಗಳುಮಂ—ಆಶ್ಚರ್ಯಕರವಾದ ಕಥೆಗಳನ್ನು ; ಕಥಾ ಸಾಹಿತ್ಯದಲ್ಲಿ 'ಚಿತ್ರಕಥೆ' ಒಂದು ವಿಭಾಗವಾಗಿರಬಹುದು ;

೧೮. ೪ : ಕಬ್ಬಿನಕೆಯ್ಯಂ—ಕಬ್ಬಿನ ಗದ್ದೆಯನ್ನು ; ಉೞ್ವೆಂ—ಉಳುವವನು ;

ನಿದಾನಮಂ—ನಿಧಿಯನ್ನು ; ೫. ಮಱಸಲ್ವೇಡಿ—ಮರೆಮಾಡಲು ಬಯಸಿ ; ೭. ಕೆಮ್ಮಗಿರು—ಸುಮ್ಮನೆ ಇರು ; ನಿರ್ಬಂಧದಿಂ—ಬಲಾತ್ಕಾರದಿಂದ, ಒತ್ತಾಯದಿಂದ ; ಕೇಱಿ ಗಟ್ಟಿಯಾಗಿ ಕೂಗಿ ; ೧೨. ಬಿದ್ದಿರ್—ಮುದುಕಿ < ವೃದ್ಧಾ (ಸಂ) ; ೧೪. ಮೋದಗೆಯ ಮೇಗೆ—ಕಡುಬಿನ ಮೇಲೆ, (ಸಂ) ಮೋದಕ > ಮೋದಗೆ ; ೧೫. ಲಡ್ಡುಗೆಗಳ್—ಲಾಡುಗಳು ; ೧೮. ಅಟ್ಟಿತ್ತು—ಅತ್ತು ; ೨೨. ಸಾರೆಯೂರಂ—ಹತ್ತಿರದ ಊರನ್ನು ; ೨೩. ನೀರನಿಡಿಸಿ—ನೀರನ್ನು ಇರಿಸಿ ಎಂದರೆ ಬಿಸಿನೀರನ್ನು ಸಿದ್ಧಮಾಡಿ ; ಪೂಸಿಸಿ—ಎಣ್ಣೆಯಿಂದ ಬಳಿಯಿಸಿ ; ಒಲ್ಲಣಿಗೆಯಂ—ಒದ್ದೆಬಟ್ಟೆಯನ್ನು ಎಂದರೆ ಸ್ನಾನಮಾಡುವಾಗ ಉಟ್ಟುಕೊಳ್ಳುವ ಬಟ್ಟೆಯನ್ನು, (ಸಂ) ಉದ್ರಪಟಿಕಾ > ಒಲ್ಲಣಿಗೆ ; ೨೪. ಕೞಿಯಂ—(ಬಿಸಿ) ಗಂಜಿಯನ್ನು ; ೨೫. ಪುಯ್ಯಲಿಟ್ಟಾಗಳ್—ಹುಯ್ಯಲಿಟ್ಟಾಗ ಎಂದರೆ ಗಟ್ಟಿಯಾಗಿ ಕೂಗಿಕೊಂಡಾಗ ; ಅನಿಬರುಂ—ಅಷ್ಟು ಜನರೂ ; ತ್ರಸ್ತಾಭಿಭೂತರಾಗಿ—ಭಯಕ್ಕೆ ವಶರಾಗಿ ; ಪಟ್ಟನೆ ಪಾಱಿ—ತಟಕ್ಕನೆ ಹಾರಿ, ನೆಗೆದು ; ೨೬. ಒಳ್ಳಿತ್ತು—ಚೆನ್ನಾಗಿ, ಛಿದ್ರಿಸಿದಳ್—ವಂಚಿಸಿದಳು ; ಪಗೆಸಾಱಿರ್ದ್ದರ್—ಹಗೆತನವನ್ನು ಘೋಷಿಸಿ ಇದ್ದರು ;

೧೯. ೧ : ಕೂರಿತಪ್ಪ—ಹರಿತವಾದ, ತೀಕ್ಷ್ಣವಾದ ; ಬಾಳಂ—ಕತ್ತಿಯನ್ನು ; ೨. ಲುಂದಿದ—ಮಲಗಿದ, ನಿದ್ರಿಸುತ್ತಿದ್ದ ; ೩. ಅರಿದೊಡೆ—ಕತ್ತರಿಸಿದರೆ ; ೪. ಪುಗಲ್ ಪಾಂಗಿಲ್ಲ—ಪ್ರವೇಶಿಸಲು ಅವಕಾಶವಿಲ್ಲ, ಪಾಂಗು—ರೀತಿ ; ೫. ಕೊಱೆದೊಡೆ—ಕತ್ತರಿಸಿದರೆ ; ಸೂೞುಸೂೞೊಳೆ—ಸರದಿಪ್ರಕಾರದಲ್ಲೇ ; ೬. ಮೂಗರಿಯೆಪಟ್ಟು—ಮೂಗು ಕತ್ತರಿಸಲ್ಪಟ್ಟು, ಕರ್ಮಣಿಪ್ರಯೋಗ ; ೭. ಇಂದ್ರಜಾಲಿಗನ—ಮಾಯೆ ಮಂತ್ರಗಳನ್ನು ಮಾಡುವವನ ; ೮. ಪುಡುಕೆಯುಂ—ಪೆಟ್ಟಿಗೆ, ಸಂಪುಟ, ಭರಣಿ, ಬುಟ್ಟಿಯನ್ನು, "ಪುಡುಕೆಯ ಮೊಲದಂತೆ ತುಬ್ಬುತಿರ್ಪರ್ ಪಗೆವರ್ (ಚಾವುಂಪು. ೨೨), "ಪುಡುಕೆಯ ಪೊಂಗಳಾರೊಡನೆ" (ಅಜಿಪು. ೨-೧೦೩), "ತರವೇೞಿವ್ ಮಾಣಿಕ್ಯ ಭಂಡಾರದ ಪುಡಿಕೆಗಳಂ (ಕಾವ್ಯಾಲೋ, ೨೮೪) ಎಂದು ಇತರ ಪ್ರಯೋಗಗಳು, (ಸಂ) ಪುಟಿಕಾ > ಪುಡಿಕೆ, ಪುಡುಕೆ ; ೯. ಮಱಲುಂದಿದರ್—ಮೈಮರೆತು ಮಲಗಿದರು ; ೧೦. ಪಿಶಿತಮಂ—ಮಾಂಸವನ್ನು ; ಮಾಡುತ್ತಿರ್ದು—ಬೇಯಿಸಿ ಸಿದ್ಧಪಡಿಸುತ್ತಿದ್ದು ; ೧೧. ಪಾಪೆಗಳುಂ—ಬೊಂಬೆಗಳೂ ; ೧೨. ಝುಣಂಬವಂ—ಮೇಲುಹೊದಿಕೆಯನ್ನು ; ೧೬. ಬೞಿಯಂ ತಗುಳೆ—ಬೆನ್ನಟ್ಟಿ ಓಡಲು, ಹಿಂದು ಹಿಂದೆ ಓಡಿಬರಲು ; ೧೭. ಪ್ರತಿಮುಖಮುಂ—ಮುಖವಾಡವನ್ನೂ ; ೧೮. ಕಳೆದೀಡಾಡಿ—ತೆಗೆದೆಸೆದು ; ಮಾಣಿಸಿ—ನಿಲ್ಲಿಸಿ ; ೧೯. ಪಚ್ಚಿರ್ಗೊಟ್ಟು—ಹಂಚಿಕೊಟ್ಟು, ಇದು ಪಚ್ಚುಗೊಟ್ಟು ಎಂದಿರಬೇಕು, "ಪಸು ವಿಭಜನೇ" ; ೨೦. ಬೈಗಿರುಳಿನ—ಮುಂಜಾನೆಯ ; ಜಾವಂ—ಏಳೂವರೆ ಗಳಿಗೆಯ ಕಾಲ, (ಸಂ) ಯಾಮ ; ೨೧. ನೆರಂಬೆಱದೆ—ಸಹಾಯವನ್ನು ಪಡೆಯದೆ ; ೨೩. ಬಟ್ಟೆಯೊಳ್ ಬರ್ಪ—ದಾರಿಯಲ್ಲಿ ಬರುವ ; ೨೪. ನೀನಾರ್ಗೆ—ನೀನು ಯಾರಿಗೆ ಸಂಬಂಧಿಸಿದವಳು, ಯಾರು ; ೨೬. ಒಂದು ಪಾಂಗಿನೊಳ್—ಒಂದು ರೀತಿಯಲ್ಲಿ ;

ಪಿಶಿತದ ಖಂಡಮಂ—ಮಾಂಸದ ಚೂರನ್ನು ;

೨೦. ೨ : ಪಱಿಯೆ ಕಚ್ಚಿದೊಡೆ—ಕತ್ತರಿಸಿಹೋಗುವಂತೆ ಕಚ್ಚಿದರೆ ; ಪುಯ್ಯಲಿಟ್ಟು—ಕೂಗಿಕೊಂಡು ; ೪. ಈ ಪೊಟಿಲೊಳ್—ಈ ಪೊಟ್ಟರೆಯಲ್ಲಿ, ಇದು ಪೋಟಿಲೊಳ್ ಎಂದೂ ಇರಬಹುದು ; ೬. ದಿವಸಕ್ಕಂ—ಪ್ರತಿದಿನವೂ ; ೧೪. ಕಿಱಿದಾನುಂ—ಸ್ವಲ್ಪ ಚಿಕ್ಕದಾಗಿರುವ ; ಛಿದ್ರದ್ವಾರ—ರಂಧ್ರದ ಬಾಯಿ ; ೧೭. ಗಾವುಂಡಂ—ಗೌಡನು, (ಸಂ) ಗ್ರಾಮಕೂಟ > ಗಾಮ ಊಡ > ಗಾವುಡ > ಗವುಡ > ಗವುಣ್ಡ ಇತ್ಯಾದಿ ರೂಪಾಂತರಗಳು ; ೧೯. ಅರಸುವರೆಗಮಾದೊಡೆ—ರಾಜನವರೆಗೂ ದೂರು ಹೋದರೆ ; ೨೨. ನಿವೃತ್ತಿಗೆಯ್ದೆನಮ್ಮಾ—ಬಿಟ್ಟೆನು ತಂದೆಯೇ ; ೨೫. ಏದೋಷಂ ಗೆಯ್ದರ್—ಏನು ತಪ್ಪನ್ನು ಮಾಡಿದರು.

೨೧. ೩ : ಸಾರೆ—ಸಮೀಪದಲ್ಲಿ ; ಪೊಟಿಲ್—ಪಟ್ಟಣ ; ಪರದಂ—ವ್ಯಾಪಾರಿ, ವರ್ತಕ ; ೬. ಪರದಿಗಂ—ವರ್ತಕನ ಹೆಂಡತಿಗೂ, ವರ್ತಕಸ್ತ್ರೀಗೂ ; ಬಸಿಱೊಳಿರ್ದಂತೆ—ಇನ್ನೂ ಗರ್ಭದಲ್ಲಿರುವಾಗಲೇ ; ೭. ನುಡಿದರ್—ಮಾತು ಕೊಟ್ಟರು ; ೧೨. ಕೈನೀರೆಱೆದು—ಕೈಗೆ ಧಾರೆಯನ್ನು ಹೊಯ್ದು ; ತಗುಳ್ದೊಡೆ—ತೊಡಗಿದರೆ ; ೧೮. ಮಱೆವಾೞುತ್ತಿರ್ಪಂ—ಮರೆಯಾಗಿ ಬಾಳುತ್ತಿರುವನು, ಗುಟ್ಟಾಗಿ ಬದುಕುತ್ತಿರುವನು ; ೨೧. ಕಾಯ್ದ—ಕಾಸಿದ ; ಕಬ್ಬೊರ್ಣ್ನ—ಕಬ್ಬಿಣದ ; ೨೨. ಅಪ್ಪವೇೞಿಂ—ಆಲಿಂಗಿಸುವಂತೆ ಹೇಳಿರಿ ;

೨೨. ಕೊಲೆಪಡುವಾತಂ—ಕೊಲೆಯನ್ನು ಅನುಭವಿಸುವವನು, ಅಥವಾ ಕೊಲ್ಲಲ್ಪಡುವವನು ; ಗೋಮಂಡಳಮಂ—ಹಸುಗಳ ಮಂದೆಯನ್ನು ; ೨. ಒಳ್ಳಿದುವಪ್ಪ—ಚೆನ್ನಾಗಿರುವ, ಉತ್ತಮವಾಗಿರುವ ; ೩. ಪಯನುಮಂ—ಹಸುಗಳನ್ನೂ, ಕರೆವ ಆಕಳುಗಳನ್ನೂ ; ಪ್ರಮಾಣಂ ಮಾಡಿ—ಆಳತೆಮಾಡಿ ; ೪. ಪಸರದೊಳ್—ಸಲಿಗೆಯಲ್ಲಿ ; ದಾಯಂಗೊಟ್ಟಂ—ಆಸ್ತಿಯನ್ನು ಕೊಟ್ಟನು ಅಥವಾ ಅವಕಾಶ ಕೊಟ್ಟನು ; ಸಾಮಂತರ—ಅಧೀನ ರಾಜರ ; ನಿಯೋಗಿಗಳ—ಅಧಿಕಾರಿಗಳ ; ೬. ಅರಸರ ಮಂಡಲದೊಳಗೆ—ರಾಜನ ಗೋವುಗಳ ಮಂದೆಯಲ್ಲಿ ; ಲೋಭಾಭಿಭೂತಂ—ದುರಾಸೆಗೆ ವಶನಾಗಿ ; ೮. ಜಡಿದು ಬಗ್ಗಿಸಿಕೊಂಡು—ಗದರಿಸಿ ಬೈದು ; ಉಣೆ—ಉಣ್ಣಲು, ಅನುಭವಿಸಲು ; ೯. ಅಗ್ಗಳಮಪ್ಪ—ಶ್ರೇಷ್ಠವಾದ ; ೧೦. ಮೂದಲಿಸೆ—ಎದುರುಬಿದ್ದು ಹೀಯಾಳಿಸಿದರೆ ; ೧೩. ಎನ್ನ ಕೊಟ್ಟುದಱೊಳ್—ನಾನು ಕೊಟ್ಟಿದ್ದರಲ್ಲಿ ; ೧೬. ಒಯ್ದಪ್ಪರ್—ತೆಗೆದುಕೊಂಡು ಹೋಗುತ್ತಾರೆ ; ೧೭. ಕಳ್ಳದ—ಕದಿಯದ, ಕಳದ ಎಂಬ ರೂಪವೂ ಉಂಟು ; ಸ್ವದಾರ ಸಂತೋಷಂ—ತನ್ನ ಹೆಂಡತಿಯಲ್ಲೇ ಸಂತೋಷವನ್ನು ಹೊಂದುವುದು, "ಪೊಸ ಜವ್ವನಮಂ ಸ್ವದಾರ ಸಂತೋಷದೆ" (ಗದಾ. ೫-೨೨) ; ಪರಿಮಿತ ಪರಿಗ್ರಹಂ—ಎಷ್ಟುಬೇಕೋ ಅಷ್ಟರ ಮಿತಿಯುಳ್ಳ ಸ್ವೀಕರಣ ; ೧೯. ಸೇದೆಯಂ—ಆಯಾಸವನ್ನು ; ಕಟ್ಟುಪಡುವುದುಂ—ಬಂಧನಕ್ಕೆ ಒಳಗಾಗುವುದೂ ; ೨೧. ನಿರ್ಲಜ್ಜಂ—ನಾಚಿಕೆಯಿಲ್ಲದ ; ಬತ್ತಲಿಗನಪ್ಪ—ಬೆತ್ತಲೆಯಾಗಿರುವ ; ೨೩. ಗೆಂಟಱೊಳ್—ದೂರ

ದಲ್ಲಿ; ೨೬. ಬೇನೆ—ನೋವು; ೨೯. ಎಡೆಯಿಂದಂ—ಸ್ಥಳದಿಂದ;

೨೩. ೧: ಅಟ್ಟಾಡದನ್ನೆಗಂ—ಹಾಳುಮಾಡದವರೆಗೆ; ೨. ತೊವಲಂ—ಚಿಗುರನ್ನು; ಅಬ್ರಹ್ಮಣ್ಯಂ ಭೋ—ಬ್ರಾಹ್ಮಣನು ಕಷ್ಟಕ್ಕೆ ಸಿಕ್ಕಿದಾಗ ಸಹಾಯಕ್ಕಾಗಿ ಕೂಗಿಕೊಳ್ಳುವುದು; ೫. ಕೋಳ್ಪಟ್ಟಿನ್—ಕೊಳ್ಳೆಹೊಡೆಯಲ್ಪಟ್ಟನು, ಸುಲಿಗೆಗೊಳಗಾದೆನು; ೮. ಸಬಾಳವೃದ್ಧಜನಮೆಲ್ಲರುಂ—ಎಲ್ಲ ಹುಡುಗರೂ ಮುದುಕರೂ; ೧೦. ಇದೇನ್ ಸಂಬಂಧಂ—ಇದೇನು ವಿಚಾರ, ವಿಷಯ; ೧೯. ಓದಿಸಿದಾ—ಕಲಿಸಿದೆಯಾ ಹೇಳಿಕೊಟ್ಟಿಯಾ; ಇಲ್ಲೋದಿಸಿದೆಂ—ಓದಿಸಿದೆನಿಲ್ಲ, ಹೇಳಿಕೊಡಲಿಲ್ಲ, ಕಲಿಸಲಿಲ್ಲ; ೨೦. ಎಮ್ಮೋದಿಸಿದ—ನಾವು ಹೇಳಿಕೊಟ್ಟ, ಪಾಠಮಾಡಿದ; ೨೧. ನೆರವಿ—ಸಮೂಹ, ಸಭೆ; ೨೨. ಪ್ರಣಮುವಂ—ಓಂಕಾರವನ್ನು; ೨೫. ಪಾಳಿಪದಕ್ರಮ ಜಟೆ—ವೇದ ಪಠನದ ನಾನಾ ವಿಧಾನಗಳು; ೨೮. ವಕ್ಖಾಣಿಸಿ—ವ್ಯಾಖ್ಯಾನಮಾಡಿ, ಸವಿಸ್ತರವಾಗಿ ಹೇಳಿ; ನೆರೆದ—ಸೇರಿದ;

೨೪. ಈಯಿರ್ದ—ಇಗೋ ಇಲ್ಲಿರುವ; ವಾಯುಭೂತಿಯೆಂಬೊನಾನ್—ವಾಯುಭೂತಿ ಎಂಬವನನ್ನು, ಇಲ್ಲಿ ಪೂ. ಹ. ಗ. ದ-ಆನ್ ಎಂಬ ದ್ವಿತೀಯ ವಿಭಕ್ತಿಯಿದೆ; ೪. ಮಾನಕಷಾಯಂ—ಗರ್ವಕ್ರೋಧ; ೧೦. ಅರಸುಗೊಟ್ಟು—ದೊರೆತನವನ್ನು ಕೊಟ್ಟು; ೧೫. ಕಂತಿಯರ ಪಕ್ಕದೆ—ಜೈನ ಸಂನ್ಯಾಸಿನಿಯ ಹತ್ತಿರ; ೧೮. ಅಚ್ಯುತ ಕಲ್ಪದೊಳ್—ಅಚ್ಯುತವೆಂಬ ಸ್ವರ್ಗದಲ್ಲಿ; ೨೨. ನಿದಾನಂಗೆಯ್ದು—ಸಂಕಲ್ಪಮಾಡಿ; ಮುಡಿಪಿ—ಸತ್ತು;

೨೫. ೮: ಆತನ ಪುಟ್ಟಿದಂದೆ—ಅವನು ಹುಟ್ಟಿದ ಆ ದಿನವೇ; ೯. ಸೆಟ್ಟಿವಟ್ಟಂಗಟ್ಟಿ—ರಾಜಶ್ರೇಷ್ಠಿ ಪದವಿಯ ಪಟ್ಟವನ್ನು ಕಟ್ಟಿ; ತಪಂಬಟ್ಟಂ—ತಪಸ್ಸನ್ನು ಪಡೆದನು; ೧೧. ಬಳ್ಳಿಮಾಡಂಗಳ್—ಲತಾಗೃಹಗಳು; ೧೩. ನಾಟಕಂಗಳ್—ನೃತ್ಯಗಳು; ೧೬. ನೈಮಿತ್ತಿಕಂ—ಜೋಯಿಸನು; ಆದೇಶಂಗೆಯ್ದಂ—ಭವಿಷ್ಯ ಹೇಳಿದನು; ೨೫. ಅವಱ—ಅವುಗಳ; ಕೊಳಲಾಱದೆ—ಕೊಳ್ಳಲು ಅಸಮರ್ಥರಾಗಿ; ೨೭. ಓರೊಂದಱಿಶೊಳಂ—ಒಂದೊಂದರಲ್ಲೂ; ಖಂಡಮಾಗೆ—ತುಂಡಾಗುವಂತೆ; ೨೮. ಪಚ್ಚುಗೊಟ್ಟೊಡೆ—ವಿಭಾಗಿಸಿ ಕೊಟ್ಟರೆ; ಕೆರ್ಪುಗಳೊಳ್—ಎಕ್ಕಡಗಳಲ್ಲಿ; ೨೯. ತಗುಳ್ಚಿದರ್—ಸೇರಿಸಿದರು, ಅಂಟಿಸಿದರು; ಚೋದ್ಯಂಬಟ್ಟು—ಅಚ್ಚರಿಯನ್ನು ಹೊಂದಿ; ವಿಭೂತಿಯಂ—ಐಶ್ವರ್ಯವನ್ನು.

೨೬. ೧: ಬಟ್ಟೆಯೊಳೆಲ್ಲಂ—ದಾರಿಯಲ್ಲೆಲ್ಲ; ೨. ಪಂಚರತ್ನಂಗಳಿಂ—ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ ಎಂಬ ಐದು ಬಗೆಯ ರತ್ನಗಳಿಂದ; ನೇತ್ರವಟ್ಟುದುಕೂಲ ಚೀನಾದಿ—ನೇತ್ರ, ಪಟ್ಟು, ದುಕೂಲ, ಚೀನ ಎಂಬ ಬಗೆ ಬಗೆಯ ರೇಷ್ಮೆಗಳ; ೩. ಮಣಿಭದ್ರಮಪ್ಪ—ರತ್ನಗಳಿಂದ ಸುಂದರವಾದ; ಹೇಮ—ಚಿನ್ನ; ೪. ಬರವಂ—ಬರುವುದನ್ನು, ಆಗಮನವನ್ನು; ೪. ಪಾರುತ್ತಿರೆ—ಎದುರು ನೋಡುತ್ತಿರಲು; ೭. ಕರಂ ಸಾದು—ಬಹು ಸಾಧುವಾದವನು; ಬರಮಂ—ಬರವನ್ನು; ೮. ಬಱಿಯನಟ್ಟಂ—

ದೂತನೊಡನೆ ಹೇಳಿಕಳಿಸಿರಿ; ೧೧. ಮಾರ್ಕೊಳ್ಳಲಾಱದೆ—ವಿಾರಲಾರದೆ, ಪ್ರತಿಭಟಿಸ ಲಾಗದೆ; ಬರ್ಪೊನಂ—ಬರುವವನನ್ನು; ೧೨. ಕಣ್ಬೆತ್ತ—ಕಣ್ಣನ್ನು ಪಡೆದ; ೧೪. ಸಿದ್ಧಾರ್ಥಂಗಳಂ—ಬಿಳಿ ಸಾಸಿವೆಗಳನ್ನು; ೧೫. ಸೇಸೆಯನಿಕ್ಕಲ್—ಮಂತ್ರಾಕ್ಷತೆ ಹಾಕಲು; ೧೬. ಕಟವಮಂ—ಸೊಂಟವನ್ನು; ೧೬. ಸೊಡರಂ—ದೀಪವನ್ನು; ೧೭. ಬ್ಯಾದಿ—ವ್ಯಾಧಿ; ಎೞ್ತನ್ನಿಂ—ಬನ್ನಿರಿ; ೧೮. ಮಣಿಕುಟ್ಟಿಮಮಪ್ಪ—ರತ್ನ ಖಚಿತ ವಾದ ನೆಲಗಟ್ಟುಳ್ಳ; ೨೦. ಅಱಸಲ್ವೇಡಿ—ಹುಡುಕಲು ಬಯಸಿ; ತೂಂತಂ— ತೂಬನ್ನು, ರಂಧ್ರವನ್ನು; ಉರ್ಚಿ—ಬಿರಡೆಯನ್ನು ತೆಗೆದು; ೨೨. ಆರೊಗಿಸಲ್— ಊಟಮಾಡಲು; ೨೩. ಪರಿಯಣದ—ಊಟದ ತಟ್ಟೆಯ; ೨೪. ಇನಿಯಮಪ್ಪ—ರುಚಿ ಯಾದ, ಸಿಹಿಯಾದ; ೨೫. ಕುತ್ತಂ—ರೋಗ; ೨೬. ಅರುಚಿ—ರುಚಿಯಿಲ್ಲದಿರುವುದು; ಬಗೆದು—ಭಾವಿಸಿ; ಸಮೆದ ಬೞಿಕ್ಕೆ—ಮುಗಿದ ತರುವಾಯ;

೨೭. ೧: ಅವಂ—ಅವುಗಳನ್ನು; ಪಸದನಂಗೊಂಡು—ಅಲಂಕರಿಸಿಕೊಂಡು; ೪. ಮರ್ದಂ—ಔಷಧವನ್ನು; ೫. ಸರುಸಪಂಗಳ್—ಸಾಸಿವೆಗಳು; ಆವ ಕಾಲಮುಂ— ಎಲ್ಲಾ ಕಾಲವೂ; ೭. ವಾಸಿಸಿದ—ವಾಸನೆಕಟ್ಟಿದ; ಕೂೞಂ—ಅನ್ನದಗುಳನ್ನು; ೧೧. ದೊರೆಯಲ್ಲವು—ಸಮಾನವಲ್ಲ; ೧೬. ಭ್ರಾತರರಪ್ಪ—ಸಹೋದರರಾದ; ೨೩. ಮಾಡದ—ಮನೆಯ; ಪೆಱಗಣ—ಹಿಂದಣ; ೨೪. ಪಱಿವೊೞ್ತು—ಹರೆ ಬಾರಿ ಸುವ ಹೊತ್ತು, ಸಂಜೆ; ಜೋಗುಗೊಂಡಿರ್ದರ್—ಯೋಗಸ್ಥರಾಗಿದ್ದರು; ೨೭. ಪೆಱ ವುೞಿ—ಬೇರೆ ಎಡೆ, ಬೇರೆ ಸ್ಥಳ; ಬಸದಿ—ಜೈನದೇವಾಲಯ; ೨೮. ನಿಡುವಯಣಂ— ದೀರ್ಘಪ್ರಯಾಣ; ಸೇದೆಗೆಟ್ಟು—ಆಯಾಸದಿಂದ ಬಳಲಿ; ಎಂತಾನುಂ—ಹೇಗಾದರೂ; ಆಸತ್ತು—ಆಯಾಸಗೊಂಡು; ಜೋಗಿನ—ಯೋಗದ;

೨೮. ೧: ಪೊೞ್ತುಱಿೂಳ್—ಹೊತ್ತಿನಲ್ಲಿ; ಜೋಗುಗೊಂಡಿರ್ದೆಂ—ಯೋಗವನ್ನು, ತಪಸ್ಸನ್ನು ಸ್ವೀಕರಿಸಿದ್ದೇನೆ; ೨. ನಾಲ್ಕುತಿಂಗಳುಂ—ಚತುರ್ಮಾಸವೂ; ೩. ಓದದೆ— ಪಠಿಸದೆ; ಮೋನಂಗೊಂಡು—ಮೌನವಾಗಿದ್ದು, ಮೌನವ್ರತವನ್ನು ಹೊಂದಿ; ನಡ ಪಾಡದೆ—ಅಡ್ಡಾಡದೆ, ಓಡಾಡದೆ; ಒಳಗಣೆ—ಒಳಗಡೆಯೇ; ೪. ಜೋಗು ನೆಱೆ ದಂದು—ಯೋಗ ಪೂರ್ಣವಾದಾಗ; ಬಿಜಯಂಗೆಯ್ಯಿಂ—ಪ್ರಯಾಣ ಬೆಳೆಸಿರಿ; ೬. ಏೞ ನೆಯ ನೆಲೆಯೊಳ್—ಏಳನೆಯ ಅಂತಸ್ತಿನಲ್ಲಿ; ೭. ಉಂದಿರ್ದಂ—ಮಲಗಿದ್ದನು; ೮. ಪ್ರಮಾಣಾವಸಾನದೊಳ್—ಅವಧಿಯ ಕೊನೆಯಲ್ಲಿ; ೯. ಬೈಗಿರುಳಿನ—ಮುಂಜಾ ವದ, ರಾತ್ರಿಯ ಕೊನೆಯ ಭಾಗದ; ಪಂಚಮಹಾಶಬ್ದದ—ಶೃಂಗ, ತಮ್ಮಟೆ, ಶಂಖ, ಭೇರಿ, ಜಯಘಂಟೆ (ಜಾಗಟೆ) ಎಂಬ ಐದು ವಾದ್ಯಗಳ; ಪೊೞ್ತುಱಿೂಳ್—ಬಾರಿಸುವ ಸಮಯದಲ್ಲಿ; ತ್ರಿಲೋಕ ಪ್ರಜ್ಞಪ್ತಿ—ಲೋಕಾಕಾರಾದಿಗಳನ್ನು ನಿರೂಪಿಸುವ ಶಾಸ್ತ್ರ ಗ್ರಂಥ; ೧೦. ಪರಿವಡಿಗೆಯ್ದಾಗಳ್—ಅನುಕ್ರಮವಾಗಿ ಪಠಿಸಿದಾಗ, "ಪರಿವಡಿಗೆಯ್ಯೆ ಸೊಂದಿಗಿಳಿ ತಂದೆಯ ತಾಯ ಸಮಿಾಪದೊಳ್ ತನೂದರಿಯ ರತೋಪಯುಕ್ತರುತಿಯಂ ವಿನತಾನನೆ ನಾಣ್ಚೆ" ಎಂದು ಪೊನ್ನನ ಪ್ರಯೋಗ; ೧೨. ಪದ್ಮಗುಲ್ಮಮೆಂಬ ವಿಮಾನ

ಮಂ—ಪದ್ಮಗುಲ್ಮ ಎಂಬ ಪ್ರಾಸಾದವನ್ನು ; ೧೩. ವ್ಯಾವರ್ಣಿಸುವುದಂ—ವಿಸ್ತಾರವಾಗಿ ವರ್ಣಿಸುವುದನ್ನು ; ಜಾತಿಸ್ಮರನಾಗಿ—ಜನ್ಮಾಂತರದ ಸ್ಮರಣೆ ಬಂದವನಾಗಿ ; ೧೫ ತಣಿಯದಂ—ತೃಪ್ತಿಪಡದವನು ; ಪುಲ್ಪನಿಯೊಳ್—ಹುಲ್ಲಿನ ಮೇಲಣ ನೀರ ಹನಿಯನ್ನು ; ೧೬. ಶಿವಸುಖಮನೆಯ್ದಿಸುವ—ಮಂಗಳಕರವಾದ ಸುಖವನ್ನು ತಂದುಕೊಡುವ ; ಬೞ್ಚಿದೆಂ—ಕೆಳಕ್ಕೆ ಜಾರಿದೆನು, "ಬೞಿಲ್ಚು—ಅಧಃಸ್ರಂಸನೇ" ; ೧೮. ಪೆಱಗಣ—ಹಿಂದಣ ; ೧೯. ತಗುಳ್ಚಿ—ಸೇರಿಸಿ ; ೨೪. ನೆಗೞಲ್ ಪೆತ್ತನಿಲ್ಲ—ಆಚರಿಸಲು ಪಡೆದೆನಿಲ್ಲ ; ೨೫. ಬಾಳಕಂಬೊಲ್—ಬಾಲದ ಹುಳುವಿನಂತೆ ; ೨೮. ಯಾವಜ್ಜೀವಂ—ಜೀವಪರ್ಯಂತ ;

೨೯. ೧ : ಪ್ರಚ್ಛನ್ನಮಪ್ಪ—ಮುಚ್ಚಿದ, ಮರೆಯಾದ ; ಮೃತಕ ಸಜ್ಜೆಯೊಳ್—ಹೆಣದ ಹಾಸಿಗೆಯಲ್ಲಿ, ಶವಾಸನದಲ್ಲಿ (?) ; ೩. ನೀಡುಂ—ದೀರ್ಘಕಾಲ ; ೬. ತೊೞಲುತ್ತಂ—ಸುತ್ತಾಡುತ್ತ ; ಮಹಾಕಾಳಕ್ಕೆ—ಮಹಾಕಾಳವೆಂಬ ಶ್ಮಶಾನಕ್ಕೆ ; ೭. ಮಣಿಕುಟ್ಟಿಮ ಭೂಮಿಯೊಳ್—ರತ್ನದ ನೆಲಗಟ್ಟುಳ್ಳ ನೆಲದಲ್ಲಿ ; ೮. ನೇತ್ರಪಟ್ಟಿಯ—ನೇತ್ರವೆಂಬ ರೇಷ್ಮೆಯ ಬಟ್ಟೆಯ ; ೯. ಕಿಟ್ಟಿಯಱಿಯದೊಂ—ಸೋಂಕಿ ತಿಳಿಯದವನು, ಮುಟ್ಟಿ ಅರಿಯದವನು, "ಕಿಟ್ಟು—ಸ್ಪರ್ಶನೇ" ; ೧೦. ಕೆಱುಗಲ್ಗಳುಂ—ನೊರಜು ಕಲ್ಲುಗಳು ; ಪೆಟ್ಟಿಗಳುಂ—ಹೆಂಟೆಗಳೂ ; ಅಗುೞ್ದು—ತೋಡಿ, ನಾಟಿಕೊಂಡು ; ಪುಗುಳ್ ಒಡೆದು—ಬೊಬ್ಬೆಯಾಗಿ, ಬೊಕ್ಕೆಯಾಗಿ ; ಕರಗದ ದಾರೆವೊಲ್—ಗಿಂಡಿಯಿಂದ ಸುರಿಯುವ ನೀರ ಧಾರೆಯಂತೆ ; ೧೧. ಎಡೆವಱಿಯದೆ—ನಡುವೆ ಕತ್ತರಿಸಿಹೋಗದೆ, ನಿರಂತರವಾಗಿ ; ಒಕ್ಕ—ಸುರಿದ ; ನೆತ್ತರ—ರಕ್ತದ ; ೧೨. ರಾಗಿಸಿ—ಸಂತೋಷಿಸಿ ; ಅಡಿಯಿಂದಂ ತೊಟ್ಟು—ಪಾದಗಳಿಂದ ಪ್ರಾರಂಭಿಸಿ ; ೧೩. ಕಟಿವರೆಗಂ—ಸೊಂಟದವರೆಗೂ ; ಪೋೞ್ದು—ಸೀಳಿ ; ೧೬. ಸಯುಸತ್ತಮ ದೇವನಾಗಿ—ಅತ್ಯಂತ ಶ್ರೇಷ್ಠನಾದ ದೇವತೆಯಾಗಿ ; ೧೮. ಪರಿವರಿದು—ಓಡಿ ಓಡಿ ; ೨೦. ಬೈಗಿನ ಪೊೞ್ತಱೊಳ್—ಸಂಜೆಹೊತ್ತಿನಲ್ಲಿ ; ೨೩. ದೇವಸಂಘಾತಮಂ—ದೇವತೆಗಳ ಸಮೂಹವನ್ನು ; ೨೫. ಬಯ್ಗಿರುಳಾದಾಗಳ್—ಮುಂಜಾವವಾದಾಗ, ರಾತ್ರಿಯ ಅಂತಿಮ ಭಾಗದಲ್ಲಿ ; ೨೬. ಅಡಂಗಿರ್ದೊನನ್—ಅಡಗಿರುವವನನ್ನು ;

೩೦. ೧ : ತಿಳಿಪಿಕೊಂಡು—ಮುಳಿಸನ್ನು ಹೋಗಲಾಡಿಸಿ ; ಪ್ರಸನ್ನಗೊಳಿಸಿ ೨. ಕೈಗೆಯ್ದು—ಸಿಂಗರಿಸಿಕೊಂಡು ; ೫. ಮುಚ್ಚೆಪಟ್ಟನಾಗಿ—ಮುಚ್ಚಲ್ಪಟ್ಟವನಾಗಿ, ಕರ್ಮಣಿಪ್ರಯೋಗ ; ಕಂಪಿಂಗೆಱಗಿದ—ಸುಗಂಧಕ್ಕಾಗಿ ಬಿದ್ದ, ಮುಸುರಿಕೊಂಡ ; ೭. ಮೃತಕಮಂ—ಹೆಣವನ್ನು ; ನೀಡಱಿಂದೆೞ್ಚತ್ತು—ದೀರ್ಘಕಾಲದ ನಂತರ ಎಚ್ಚತ್ತು ; ೯. ಮೆಲ್ಪಂ—ಮೃದುಸ್ವಭಾವವನ್ನು ; ನುಡಿಯ ಬಲ್ಮೆಯುಂ—ಮಾತಿನ ಪ್ರೌಢಿಮೆಯನ್ನು ; ಒಲ್ಮೆಯಂ—ಪ್ರೀತಿಯನ್ನು ; ೧೧. ಒಡೆಯವು—ಉಳ್ಳುವು, ಇವೆ ; ೧೫. ನೀರಿೞಿದು—ಸ್ನಾನಮಾಡಿ ; ಬಸಿಱಪೆಂಡಿರ್—ಗರ್ಭವತಿಯರಾದ ಪತ್ನಿಯರು ; ೧೬. ಸೌಧರ್ಮಕಲ್ಪಂ—ಸೌಧರ್ಮ ವೆಂಬ ಸ್ವರ್ಗವು ; ೧೮. ತಿರಿಕೋಪಸರ್ಗಮಂ—

ಪ್ರಾಣಿಗಳಿಂದಾಗುವ ಉಪದ್ರವವನ್ನು; ೨೦. ಆರಾಧಕರಪ್ಪ—ಸಾಧಕರಾದ; ೨೨. ಆಪ್ತಾಗಮ ಪದಾರ್ಥರ್ಧಿಗಳೊಳ್—ಆತ್ಮೀಯವಾದ ಆಗಮಗಳಲ್ಲಿ, ನವ ಪದಾರ್ಥಗಳಲ್ಲಿ ಮತ್ತು ಋದ್ಧಿ (ಸಿದ್ಧಿ)ಗಳಲ್ಲಿ; ಅತೀವ—ಅತಿಶಯವಾಗಿ; ೨೫. ಅಪವರ್ಗ ಸುಖಂಗಳಂ—ಮುಕ್ತಿ ಸುಖಗಳನ್ನು, ಎಯ್ದುಗೆ—ಸೇರಲಿ, ಪಡೆಯಲಿ; ೨೬. ಕಾಲಂಗೆಯ್ದೆಡೆ—ಮರಣವನ್ನು ಪಡೆದ ಸ್ಥಳವು; ೨೮. ಅಗರು—ಆ ಹೆಸರಿನ ಸುಗಂಧ ದ್ರವ್ಯ; ಕಾಳಾಗರು—ಕರಿಯಗರು; ೨೯. ಗೋಶೀರ್ಷ—ಒಂದು ವಿಧವಾದ ಶ್ರೀಗಂಧ;

೩೧. ೧: ಬಿಟ್ಟುದು—ಬಿದ್ದಿತು; ೨. ಪೆಂಡಿರ್ಕಳ—ಸ್ತ್ರೀಯರು; ಪ್ರಳಾಪಂಗೆಯ್ದು—ರೋದಿಸಿ, ಅೞ್ತು—ಅತ್ತು; ಸಿದ್ಧಾಯತನ—ಸಿದ್ಧಾಲಯ, ಸಿದ್ಧರ ಕ್ಷೇತ್ರ.

## ೨. ಸುಕೌಶಳಸ್ವಾಮಿಯ ಕಥೆ

೩೨. ೬: ಪರದನ ಕಾದಲಿಸೆ ಪಡುವ ಮಗಂ—ಹರದನಿಂದ (ವರ್ತಕನಿಂದ) ಪ್ರೀತಿಸಲ್ಪಡುವ ಮಗನು, ಇಲ್ಲಿ ಕರ್ಮಣಿಪ್ರಯೋಗ; ಕಾದಲಿಸು = ಕಾದಲ + ಇಸು, ಕಾದಲ < (ಸಂ) ಕಾತರ, ಪ್ರಾ. ಕಾಯರ = ಪ್ರಿಯ, ಸ್ನೇಹಪಾತ್ರ; ೭. ಪೆರ್ಮೆಯನೊಡೆಯೊಂ—ಹಿರಿಮೆಯನ್ನುಳ್ಳವನು; ೮. ಬರ್ದಿದೊನಾಗಿಯುಂ—ಸತ್ತವನಾಗಿಯೂ, "ಬರ್ದು—ಮರಣೇ"; ೯. ಪೊರ್ದಿದೊಂ—ಹೊಂದಿದನು, ಪಡೆದನು; ೧೩. ಓರಂತಪ್ಪ—ಸಮಾನವಾಗಿರುವ; ೧೫. ಅಧಿಗಮ—ಸಂಪಾದಿಸಲ್ಪಟ್ಟ;

ಗಾಹೆ ‖ ಸಮ್ಮದ್ದಸ್ಸಣ ಸುದ್ಧೋ—ಸಮ್ಯಗ್ದರ್ಶನದಲ್ಲಿ ಶುದ್ಧನಾಗಿರುವವನು, ಅಕದವದಕಮ್ಮೋ—ಹೀನವಲ್ಲದ ಎಂದರೆ ಉತ್ತಮವಾದ ಕರ್ಮವನ್ನುಳ್ಳವನು, ಸುಶೀಲ ಗುಣಣಿಳಯೋ—ಒಳ್ಳೆಯ ಶೀಲಕ್ಕೂ ಗುಣಕ್ಕೂ ಮನೆಯಾಗಿರುವವನು, ಉಜುಗತ್ತೋ—ಪ್ರಯತ್ನದಲ್ಲಿ ಆಸಕ್ತಿಯುಳ್ಳವನು, ಗುರುಭಕ್ತೋ—ಗುರುವಿನಲ್ಲಿ ಭಕ್ತಿಯುಳ್ಳವನು, ಪವಯಣ ಕುಸಳೋ—ಪ್ರವಚನದಲ್ಲಿ ಎಂದರೆ ಉಪನ್ಯಾಸಾದಿಗಳಲ್ಲಿ ನಿಪುಣನಾದವನು, ಮದಿಪ್ಪಗಬ್ಭೋಯಂ—ಬುದ್ಧಿಯ ಪ್ರಗಲ್ಭತೆಯನ್ನು ಎಂದರೆ ಪಾಂಡಿತ್ಯವನ್ನು ಉಳ್ಳವನು.

೨೦. ಆದಮಾನುಂ ವಿಚಿತ್ರಪುಪ್ಪುದಂ—ವಿಶೇಷವಾಗಿ ರಮ್ಯವಾಗಿರುವುದನ್ನು; ಅನವರತಂ—ಯಾವಾಗಲೂ;

೩೩. ೧: ಮೆಯ್ಯನೊಡೆಯೊಳ್—ವ್ಮೈಯನ್ನುಳ್ಳವಳು; ೩. ನೋಂತು—ವ್ರತ ಮಾಡಿ; ೫. ನಾಣ್ಚಿ—ನಾಚಿ, ಲಜ್ಜಿಸಿ; ೬. ಕೇರಂ ಸಾರ್ದು—ಗೋಡೆಯ ಹತ್ತಿರ ಹೋಗಿ; ಪೊನ್ನ—ಚಿನ್ನದ; ಗಳಂತಿಗೆಯಂ—ನೀರು ತುಂಬುವ ಕಲಶವನ್ನು; ಹೂಜಿಯನ್ನು; ೭. ಲೆಪ್ಪದ—ಮಯಣ ಮುಂತಾದ ಲೇಪ್ಯವಸ್ತುವಿನ; ಕಾಷ್ಠಕರ್ಮದ—ಮರಗೆಲಸದ; ೮. ಜೀವವಿದ್ಧ—ಜೀವಂತವಾಗಿರುವ ಶಿಲ್ಪ ಪ್ರತಿಮೆ; ೯. ಕಶ್ಚಿದ್ದೇವದತ್ತಂ—ದೇವದತ್ತನೆಂಬ ಯಾವನೋ ಒಬ್ಬ; ೧೪. ಗುರುಪರಿವಿಡಿಯಿಂದಂ—ಗುರುಪರಂಪರೆಯ ಕ್ರಮದಿಂದ; ೧೫. ಸಿದ್ಧಸೇಸೆಯಂ—ಸಿದ್ಧರಿಗೆ ಅರ್ಚಿಸಿದ ಹೂವು

ಮುಂತಾದವನ್ನು ; ೧೪. ಆಟಿಸಿ—ಬಯಸಿ, ಅಪೇಕ್ಷಿಸಿ ; ೨೧. ಪ್ರಧಾನವರ್ಗಡೆಗಳಂ—ಪ್ರಮುಖರಾದ ಹೆಗ್ಗಡೆಗಳನ್ನು ; ೨೨. ಉತ್ತವಳನಾಗಿ—ಉತ್ಕಂಠಿತನಾಗಿ, "ಉತ್ಕಂ ವಿಮನಸ್ಕನುತ್ತವಳನವನಕ್ಕುಂ" (ವಸ್ತುಕೋ. ೧೧೪-೨೩) ;

೩೪. ೧ : ವಿಗ್ರಹಮಾದೊಡೆ—ಯುದ್ಧವಾದರೆ ; ೩. ಗಂಧಹಸ್ತಿಯಂ—ಸೊಕ್ಕಿದ ಆನೆಯನ್ನು ; ೪. ಪಾಗುಡಮಂ—ಕಾಣಿಕೆಯನ್ನು, (ಸಂ) ಪ್ರಾಭೃತ > ಪಾಗುಡ ; ಸೊರ್ಕಿನಿಂದಂ ಮಸಗಿದುದಂ—ಮದದಿಂದ ಕೆರಳಿರುವುದನ್ನು ; ಜಾತಿಸ್ಮರೆಯಾಗಿ—ಹಿಂದಿನ ಜನ್ಮದ ಸ್ಮರಣೆ ಬಂದವಳಾಗಿ ; ೭. ತಳಿದು—ಚುಮುಕಿಸಿ ; ಪರಿತಂದು—ಓಡಿಬಂದು ; ೯. ಮಱುಸೂಟಿನೆ—ಮತ್ತೊಂದು ಸಲ, ಮತ್ತೊಂದು ಬಾರಿ ; ೧೦. ಕೇರ್ಗಳ—ಗೋಡೆಗಳ ; ವ್ಯಾಳಂಗಳಪ್ಪ—ತುಂಟಾಟಮಾಡುವ, ತೊಂಡಾದ ; ೧೪. ಬಾರಿಯೊಳ್—ಆನೆಗಳನ್ನು ಹಿಡಿಯಲು ಕಟ್ಟಿರುವ ಕೋಟೆಯಲ್ಲಿ, ಬೋನಿನಲ್ಲಿ, (ಸಂ) ದಲ್ಲಿ, ಇದಕ್ಕೆ ವಾರೀ ಎಂದೂ ಇದರಿಂದಾಗುವ ಕಾರ್ಯಕ್ಕೆ ವಾರೀ ಕರ್ಮವೆಂದೂ ಇದೆ, ಈ ಖೆಡ್ಡಾವನ್ನು ಅಥವಾ ಬೋನನ್ನು ನಿರ್ಮಿಸುವ ವಿಧಾನವನ್ನು 'ಮಾತಂಗ ಲೀಲಾ' ಎಂಬ ಗ್ರಂಥದಲ್ಲಿ ಹೇಳಿದೆ (೧೦-೨,೩), "ವಾರೀತು ಗಜಬಂಧನೇ" ಇತ್ಯ ಮರಃ ; ೧೫. ನೀಡುಂ ಬೇಗಂ—ಬಹಳಹೊತ್ತು ; ಸೇದೆಗೆಡಿಸಿ = ಸೇದೆಯಿಂ + ಕಿಡಿಸಿ, ಆಯಾಸಗೊಳಿಸಿ, ಶಕ್ತಿಯನ್ನು ಹೋಗಲಾಡಿಸಿ ; ೧೬. ಬಸಕ್ಕೆ—ವಶಕ್ಕೆ ; ಅಂಕು ಸಮಂ—ಅಂಕುಶವನ್ನು ; ಪೊಳೆಯಿಸುತ್ತ—ಹೊರಳಿಸುತ್ತ, ತಿರುಗಿಸುತ್ತ, "ಪೊಳೆ—ಲುಠನೇ" ; ೧೭. ಮಚ್ಚಿದಾ—ಮೆಚ್ಚಿದೆಯಾ ; ೧೮. ಇದೇನೆಂಬಾನೆ—ಇದು ಏನು ಆನೆ, ಎಂದರೆ ಸಾಮಾನ್ಯವಾದ ಆನೆ ಎಂದು ತಾತ್ಪರ್ಯ ; ತಗರೊಳೋರಂತಪ್ಪುದು—ಟಗರಿಗೆ ಸಮಾನವಾಗಿರುವುದು ; ೧೯. ಬಣ್ಣಮನೊಡೆಯದು—ಬಣ್ಣವನ್ನುಳ್ಳುದು ; ೨೦. ಎಱೆಯನಪ್ಪುದು—ಒಡೆಯನಾಗಿರುವುದು, ರಾಜನಾಗಿರುವುದು, ಸಲಗ ; ೨೨. ಪಿಡಿಯೊಡನೆ—ಹೆಣ್ಣಾನೆಯೊಡನೆ ; ೨೩. ಏಱೆಯಾಡಲ್‌ಬಲ್ಮೆಯಂ—ಆನೆ ಸವಾರಿ ಪ್ರೌಢಿಮೆಯನ್ನು ; ಗಂಡಗುಣಮುಮಂ—ಪೌರುಷವನ್ನೂ ; ೨೫. ನಿನ್ನನ್ನರ್-ನಿನ್ನಂಥವರು ; ನೀನಪ್ಪೊಡೆ—ನೀನಾದರೆ ;

೩೫. ೨ : ಭರ್ತಾರಂ—ಗಂಡ ; ಭೌಮವಿಹಾರಾರ್ಥಂ—ಭೂಮಿಯ ಮೇಲೆ ಸಂಚರಿಸುವ ಕ್ರೀಡೆಗಾಗಿ ; ೩. ತೊಟಿಲ್ವಲ್ಲಿ—ಸುತ್ತಾಡುತ್ತಿರುವಾಗ ; ಕರಿಣೀವೃಂದಂ ಬೆರಸು—ಹೆಣ್ಣಾನೆಗಳ ಗುಂಪಿನೊಡನೆ ಕೂಡಿ ; ೪. ಐರಾವಣ ಸನ್ನಿಭಮಂ—ಐರಾವತ ವನ್ನು ಹೋಲುವುದನ್ನು ; ಉರ್ಕೆವದಿಂದಂ ಪೇೞ್ದೊಡೆ—ಒಸಗೆಯಿಂದ, ಸಂತೋಷದಿಂದ ಹೇಳಿದರೆ (?) ; ೫. ಕಟ್ಟೆಸಪಟ್ಟ—ಕಟ್ಟಲ್ಪಟ್ಟ, ನಿಬದ್ಧವಾದ ; ಮುಳಿಸ ನೊಡೆಯೊಂ—ಕೋಪವುಳ್ಳವನು ; ೭. ತೇಜದೊಳೋರಂತಪ್ಪ—ತೇಜಸ್ಸಿನಲ್ಲಿ ಸಮಾನ ವಾದ, ಮೆಯ್ಯನೊಡೆಯ—ಮೈಯನ್ನುಳ್ಳ ; ೮. ಮೆಲ್ಗಂಭೀರಮಪ್ಪ—ಮೃದುವಾಗಿ ಗಂಭೀರವಾಗಿರುವ ; ಗರ್ಜನೆಯನೊಡೆಯುದುಂ—ಗರ್ಜನೆಯನುಳ್ಳದ್ದೂ ; ೯. ಹತ ವಿತತ ಕೋಳಾಹಳಂ ಎಟಿದು—ಚೆಲ್ಲಾಪಿಲ್ಲಿಯಾಗಿ ಹೊಡೆಸೆಳೆದು ಚೆದರಿಸಿ ;

೧೦. ನಿಡಿಯ—ಉದ್ದವಾದ, ತೋರಮಪ್ಪ—ದಪ್ಪವಾಗಿರುವ, (ಸಂ) ಸ್ಥೂಲ > ಥೋರ > ತೋರ ; ೧೫. ಪ್ರಳಾಪಂಗೆಯ್ದು—ರೋದಿಸಿ, ಅತ್ತು ; ೧೬, ತಟಿಕ್ಕೈಸಿ—ಅಪ್ಪಿಕೊಂಡು ; ೨೦. ರಿಸಿ ನಿವೇದಕನಿಂದಂ—ಋಷಿಗಳು ಬಂದರೆಂದು ಅರಿಕೆಮಾಡುವವನಿಂದ; ೨೪. ತಮ್ಮಡಿಗಳೊಳ್—ಋಷಿಯರ ಬಳಿ, ಸ್ವಾಮಿಗಳ ಹತ್ತಿರ, ಇಲ್ಲಿ ತಂತಮ್ಮೆಡೆಯೊಳ್—ತಮ್ಮ ತಮ್ಮ ಸ್ಥಾನಗಳಲ್ಲಿ ಎಂದಿರುವ ಪಾಠಾಂತರ ಗ್ರಾಹ್ಯವಾಗಬಹುದು ; ೨೭. ಅಭಿಮುಖರಾಗಿ—ಎದುರಾಗಿ ನಿಂತು ; ೨೯. ಜನ್ಮಾನುಬಂಧಿಯಪ್ಪ—ಜನ್ಮಾಂತರದಿಂದ ಬಂದಿರುವ ; ೩೧. ನಿದಾನಸಹಿತಂ—ನಿದಾನಸಮೇತನಾಗಿ, ಸಂಕಲ್ಪದೊಡನೆ ;

**೩೬.** ೪ : ದ್ರವಿಳ ವಿಷಯದೊಳ್—ದ್ರಾವಿಡ ದೇಶದಲ್ಲಿ ; ೧೧. ಮಾಲೆಗಾರ್ತಿ—ಹೂವಿನಮಾಲೆಯನ್ನು ಕಟ್ಟುವವಳು ; ೧೩. ಅಟ್ಟಿತ್ತಿಯಾದುದು—ಇಷ್ಟವಾಯಿತು, ಪ್ರೀತಿಯಾಯಿತು ; ೧೪. ನೆಱಪಲಕ್ಕುಂ—ಪೂರೈಸಲಾಗುತ್ತದೆ ; ೧೬. ತದೀಪ್ಸಿತ—ಅವರಿಗೆ ಬೇಕಾದ, ಇಷ್ಟವಾದ ; ೧೭. ಪುಳಿನಸ್ಥಳಂಗಳೊಳ್—ಮರಳಿರುವ ಎಡೆಗಳಲ್ಲಿ ; ೧೮. ಹಸ್ತಿಯೂಥಂ—ಆನೆಯ ಹಿಂಡು ; ೧೯. ಕರಿಣೀಗಣಂಗಳ್—ಹೆಣ್ಣಾನೆಯ ಗುಂಪುಗಳು ; ಆ ಕಾಶಪುಷ್ಪಂಗಳಿಂ—ಆ ಕಾಶವೆಂಬ ಹೂಗಳಿಂದ ; ೨೦. ಕಬಳಂಗೊಳುತ್ತಂ—ಆಹಾರಕ್ಕಾಗಿ ತಿನ್ನುತ್ತ ; ೨೧. ವಿಚ್ಛಳಾಕಾರಮಪ್ಪ—ಹೊಳೆಯುತ್ತಿರುವ ಆಕಾರವನ್ನುಳ್ಳ ; ೨೨. ಹಸ್ತಿಭೋಗಂಗಳೊಳ್—ಆನೆಯ ಸುಖಗಳಲ್ಲಿ ; ಕಾಂಕ್ಷೆಯಿಂದಂ—ಅಪೇಕ್ಷೆಯಿಂದ ; ೨೪. ಬಱಸಿಡಿಲ್—ಮಳೆಯಿಲ್ಲದೆ ಬರುವ ಸಿಡಿಲು ; ೨೭. ಪರವಶನಾಗಿ—ಮೂರ್ಛಿತನಾಗಿ ; ಕಾದಲನ—ಪ್ರಿಯನ ; ೨೮. ಸುರಿಗೆಯಂ—ಕತ್ತಿಯನ್ನು ;

**೩೭.** ೩ : ಸುಭದ್ರಜಾತಿ—ಆನೆಗಳಲ್ಲಿ ಉತ್ಕೃಷ್ಟವಾದ ಒಂದು ತಳಿ, ಜಾತಿ, ಭದ್ರಜಾತಿ ; ೮. ಕಂಡೋರ್ಗಳೆಲ್ಲಂ—ಕಂಡವರೆಲ್ಲ ; ೧೦. ಯೂಥಾಧಿಪತಿ—ಹಿಂಡಿನೊಡೆಯ, ಸಲಗ ; ೧೨. ನಿಚ್ಚಂ—ನಿತ್ಯವೂ ; ೧೪. ನೆರಪುತ್ತಂ—ಕೂಡಿಹಾಕುತ್ತ ; ೧೬. ಪೊರ್ದಲಾಟಿಸುವುದಂ—ಹೊಂದಲು, ಸೇರಲು ಇಷ್ಟಪಡುವುದನ್ನು ; ಸಾರಲೀಯದುದಱಿಂ—ಹತ್ತಿರ ಹೋಗಲು ಬಿಡಲಿಲ್ಲವಾದ್ದರಿಂದ ; ೨೩. ದಾಯುಮಂ—ಸಲುಗೆಯನ್ನು, ಅವಕಾಶವನ್ನು ; ಬಹುಮಾನವನ್ನು ; ೩೦. ತಡಂ ಬಂದು—ತಡವಾಗಿ ಬಂದು ; ೩೨. ಮೆಯ್ಯಱಿಯದೆ—ಮೈಮೇಲೆ ಪ್ರಜ್ಞೆಯಿಲ್ಲದೆ ;

**೩೮.** ೧ : ಮಲಯಾವತಿಗೆತ್ತು—ಮಲಯಾವತಿಯೆಂದು ಭ್ರಮಿಸಿ ; ೨. ಪರಿಭವಿಸಿದಂ—ತಿರಸ್ಕರಿಸಿದನು ; ೩. ಪುರುಡುಂ—ಹುರುಡೂ, ಸ್ಪರ್ಧೆಯೂ ; ೪. ತನ್ನನಿಕ್ಕಿ—ತನ್ನನ್ನು ಬೀಳಿಸಿಕೊಂಡು ; ೫. ಶತಖಂಡಮಾಗಿ—ನೂರು ಚೂರಾಗಿ ; ಸತ್ತಿತ್ತು—ಸತ್ತಿತು ; ಅದಱ ಸತ್ತುದಂ—ಅದು ಸತ್ತುದನ್ನು ; ೧೦. ಕೊಲೆಸತ್ತ—ಕೊಲೆಯಿಂ + ಸತ್ತ ; ಪೂಜಿಸೆವಟ್ಟ—ಪೂಜಿಸಲ್ಪಟ್ಟ ; ೧೧. ಉಪಶಮಕ್ಕೆ—ಶಾಂತಿಗೆ, ಸಮತಾಭಾವನೆಗೆ ; ೧೩. ಅಡಿವೊಣರಂ—ಪಾದದ್ವಯವನ್ನು, ಅಡಿಯ + ಪೊಣರ್—

ಜೋಡಿ, ಯುಗ್ಮ ; ೧೬. ಕೋಡ್ಗಳಂ—ಕೊಂಬುಗಳನ್ನು ; ೨೮. ಓರನ್ನನಪ್ಪೊಂ—ಸಮಾನನಂತೆ ಆಗಿದ್ದಾನೆ; ೩೧. ದ್ರವ್ಯತಪದೊಳ್—ಕಪಟ ತಪಸ್ಸಿನಲ್ಲಿ, ಮಿಥ್ಯಾ ತಪಸ್ಸಿನಲ್ಲಿ ;

೩೯. ೩ : ಆ ಸತ್ತೊಳಂ—ಆ ಸತ್ತವಳನ್ನು, ಹಾಗೆ ಸತ್ತವಳನ್ನು ; ೫. ಬರ್ದಿನವೆದು, ಕೃಶವಾಗಿ, (ತಮಿಳು) ವರುನ್ದು ; ಬಂಬಳಂ ಬಾಡಿ—ಬಂಬಲಿನಂತೆ ಬಾಡಿ ; ೬. ಪಾಡೞಿದು—ಸ್ಥಿತಿಕೆಟ್ಟು ; ಉಬ್ಬೆಗಂಬಟ್ಟು—ದುಃಖಿತನಾಗಿ ; ೯. ಆಯಿರ್ದಳ್—ಅಗೋ, ಇದ್ದಾಳೆ ; ೧೪. ನೆಗೞ್ತಿಗಳನೆಲ್ಲಮಂ—ಮಾಡಿದುದನ್ನೆಲ್ಲ ; ೧೭. ಮರುಳ್ಗೊಂಡು—ಭ್ರಾಂತನಾಗಿ, ಹುಚ್ಚನಾಗಿ ; ೧೮. ಬಲಗೊಂಡು—ಪ್ರದಕ್ಷಿಣೆ ಮಾಡಿ ; ೧೯. ಸ್ವೇಪ್ಸಿತ—ತಾನು ಬಯಸಿದ ; ೨೪. ಪಟಮಂ ನಿಮಿರ್ಚಿ—ಚಿತ್ರಪಟವನ್ನು ಸುರುಳಿಬಿಚ್ಚಿ ಸೈತಾಗಿರಿಸಿ ; ೨೫. ಕಾದಲಳ್—ಪ್ರಿಯಳು ; ೨೭. ಒಸಗೆಯಿಂದಂ—ಸಂತೋಷದಿಂದ ; ೩೧. ಮುನ್ನವಿಟ್ಟು—ಮೊದಲೇ ಇಟ್ಟು, ಹಾಕಿ, ಮುನ್ನವೆ+ ಇಟ್ಟು ;

೪೦. ೧ : ಆರಯ್ದಪ್ಪೆ—ಹುಡುಕುತ್ತಿರುವೆ, ವಿಚಾರಿಸುತ್ತಿರುವೆ; ೪. ಕಲ್ಪಿಸಿ—ಕಲಿಸಿ, ತಿಳಿಯ ಹೇಳಿ ; ೫. ಪಾಂಗಿನೊಳ್—ರೀತಿಯಲ್ಲಿ ; ೭. ದೆವಸಕ್ಕಂ—ಪ್ರತಿದಿನವೂ ; ಅಟ್ಕಱೊಳ್—ಪ್ರೀತಿಯಲ್ಲಿ ; ೧೦. ಮರುಳಾಗಿರ್ದೆಂ—ಭ್ರಾಂತನಾಗಿದ್ದೆ, ಹುಚ್ಚನಾಗಿದ್ದೆ ; ೧೧. ಪಿಂಗಿತೆಂದು—ಹಿಂಜರಿಯಿತೆಂದು ;, ಹೋಯಿತೆಂದು ೧೬. ಭಾಗ್ಯಮಿಲ್ಲದುದಂ—ಅದೃಷ್ಟವಿಲ್ಲದುದನ್ನು ; ಪೆಱಲಾಗ—ಪಡೆಯಲಾಗದು ; ಬೇಂಟಮಂ—ಪ್ರೀತಿಯನ್ನು ; ಉೞಿವುದು—ಬಿಡುವುದು ; ೨೦. ಮಂತಣಮಿರ್ದಲ್ಲಿ—ಮಂತ್ರಾಲೋಚನೆಯಲ್ಲಿದ್ದಾಗ ; ೨೧. ಕೂಸುಕುಡಲ್ಕೆ—ಕನ್ಯಾದಾನಮಾಡುವುದಕ್ಕೆ ; ೨೪. ಉರ್ಕವದಿಂದಂ—ಒಸಗೆಯಿಂದ, ಉತ್ಸಾಹದಿಂದ ; ೨೫. ಮದವಕ್ಕಳಂ—ಮದುವೆಗಿರುವವರನ್ನು ; ೨೬. ಅಱಿವುದರ್ಕಂ—ತಿಳಿಯುವುದಕ್ಕೆ ; ೨೭. ಪಣ್ಣುವಂ—ಮಾಡೋಣ ; ಭಾಗ್ಯದೊಳ್—ಅದೃಷ್ಟದಲ್ಲಿ ;

೪೧. ೪ : ಮಾಲೆಯಂ ಸೂಡಿದಳ್—ಮಾಲೆಯನ್ನು ಮುಡಿಸಿದಳು, ಹಾಕಿದಳು ; ಆಂ ಏಕೈಕ ಪ್ರಧಾನರೆಂ—ನಾವು ಒಬ್ಬೊಬ್ಬರೇ ಪ್ರವರಪುರುಷರಾಗಿದ್ದೇವೆ ; ೯. ಸೊಪಾರಕ್ಕೆ—ಸೊಪಾರವೆಂಬ ವಿಷಯಕ್ಕೆ, ಈಗಲೂ ಈ ಹೆಸರಿನ ಒಂದು ಊರು ಪಶ್ಚಿಮ ಸಮುದ್ರತೀರದಲ್ಲಿ ನರ್ಮದಾನದಿಯ ಅಳುವೆಗೆ ದಕ್ಷಿಣದಲ್ಲಿದೆ ; ೨೫. ತಮ್ಮಿರ್ವ್ವರುಂ—ತಾವಿಬ್ಬರೂ ; ೨೬. ಪರಿನಿರ್ವಾಣ ಭೂಮಿಯೊಳ್—ಮುಕ್ತಿಗೆ ಸಂದ ಪ್ರದೇಶದಲ್ಲಿ ; ೨೯. ಮಾಸೋಪವಾಸಂಗೆಯ್ದು—ಒಂದು ತಿಂಗಳುಪವಾಸವನ್ನು ಮಾಡಿ ;

೪೨. ೨ : ಪೇೞ್ದಿತ್ತು—ಹೇಳಿತು ; ೫. ನೆನೆದಾ—ನೆನಸಿಕೊಂಡೆಯಾ ? ; ೧೩. ಕೂಸಂ ಬೇಡಿ—ಕನ್ಯೆಯನ್ನು ದಾನಮಾಡಿ ಎಂದು ಪ್ರಾರ್ಥಿಸಿ ; ಪೆತ್ತು—ಪಡೆದು ; ೧೯. ಕೋಣೆಯೊಳ್—ಮೂಲೆಯಲ್ಲಿ ; ೨೦. ವಿಷಯದೊಳ್—ದೇಶದಲ್ಲಿ ; ನೆಱೆದೊಂ—ತುಂಬಿದವನಾದನು ; ೨೮. ಕಾಲಂಗೆಯ್ದು—ಸತ್ತು ; ೨೯. ದೇವಗಣಿಕೆಯನೆ—ದೇವಸ್ತ್ರೀಯರನ್ನೇ ;

೪೩. ೧ : ಪಿರಿದುಂ ವಿಸ್ತಾರದಿಂ—ಹಿರಿದಾದ ವೈಭವದ ವಿಸ್ತಾರದಿಂದ ; ೪. ಸಪ್ತ ತಳ ಪ್ರಾಸಾದದ—ಏಳು ಉಪ್ಪರಿಗೆಗಳನ್ನುಳ್ಳ ಅರಮನೆಯ ; ೮. ಪೊಲ್ಲಮೆಯುಮಂ—ಪೇಸಿಗೆಯನ್ನೂ ; ಅನಿತ್ಯತೆಯುಮಂ—ಅಶಾಶ್ವತತೆಯನ್ನೂ ; ೯. ಬಗೆದು—ಚಿಂತಿಸಿ, ಭಾವಿಸಿ ; ಬುದ್ಧಿಯನೊಡೆಯರಾಗಿ—ಬುದ್ಧಿಯನ್ನುಳ್ಳವರಾಗಿ ; ೧೨. ಕಾವೊರ್—ಕಾಪಾಡುವವರು ; ೧೩. ತಪಂಬಟ್ಟಪ್ಪಿರ್ — ತಪಸ್ಸನ್ನು ಸ್ವೀಕರಿಸುತ್ತೀರಿ ; ೧೫. ನಿಮ್ಮೆಲ್ಲರ ಪೇೞ್ದುದಂ—ನೀವೆಲ್ಲರು ಹೇಳಿದ್ದನ್ನು ; ಇಂಬುಗೆಯ್ದಪ್ಪೆಂ—ಒಪ್ಪುತ್ತೇನೆ ; ೧೬. ವಕ್ರಂಬರ ಸಲ್ಲ—ಅಡ್ಡಿಯಾಗಿ ಬರಲು ಸಲ್ಲದು ; ೧೭. ಬಾರಿಸೆ—ತಡೆಯಲು ; ಮಾಣ್ದಿರ್ದು—ಬಿಟ್ಟಿದ್ದು ; ೨೦. ಚರಿಗೆವೊಕ್ಕೊಡೆ—ಭಿಕ್ಷಕ್ಕಾಗಿ ಮನೆಗೆ ಪ್ರವೇಶಿಸಿದರೆ ; ೨೧. ನಿಱಿಸಿ—ನಿಲ್ಲಿಸಿ ; ಕೈಯಲಿಕ್ಕಿ—ಕೈಯಲ್ಲಿ ಆಹಾರವನ್ನಿಟ್ಟು, ಸಂನ್ಯಾಸಿಗಳು ಬೊಗಸೆಯಲ್ಲಿ ಉಣಬೇಕೆಂದು ನಿಯಮ, ಇವರಿಗೆ ಪಾಣಿದಲ ಭೋಜಿಗಳೆಂದು ಹೆಸರು ; ನಿರಂತರಂ ಮಾಡಿ—ಎಡೆಬಿಡದೆ, ಸಂತತವಾಗಿ ; ೨೪. ಪೆಱುವಯ್—ಪೆರುತ್ತೀಯೆ ; ೨೮. ಒವ್ಮೊರ್ದಲಾಗೆ—ಏಕಕಾಲದಲ್ಲಾಗಲು ; ೨೯. ಕಟಿದು—ಸತ್ತು ;

೪೪. ೧ : ನೆಲಮನೆಯಂ ಮಾಡಿಸಿ—ನೆಲದೊಳಗಡೆ ಮನೆಯನ್ನು ಕಟ್ಟಿಸಿ; ಕುತ್ತಂ ಜಲೋದರಂ—ಜಲೋದರವೆಂಬ ರೋಗವು ; ೨. ಕ್ರಿಯೆಗೆಯ್ಸಿದಪ್ಪೆಂ—ಚಿಕಿತ್ಸೆ ಮಾಡಿಸುತ್ತೇನೆ ; ೩. ನೆಱೆದಂದು—ತುಂಬಿದಾಗ ; ಪ್ರಸೂತೆಯಾಗಿ—ಹೆತ್ತವಳಾಗಿ ; ೪. ಬೆಸಕೆಯ್ವ ತೊೞ್ತು—ಚಾಕರಿ ಕೆಲಸಮಾಡುವ ದಾಸಿ, ಸೇವಕಿ ; ೭. ಕೆಳದಿ—ಗೆಳತಿ ; ೮. ಪಲದೆವಸದಿಂದಂ—ಹಲವು ದಿವಸಗಳಿಂದ ; ೧೦. ಸೂರುಳಿಸಿ—ಪ್ರತಿಜ್ಞೆ ಮಾಡಿಸಿ, ಭಾಷೆ ತೆಗೆದುಕೊಂಡು ; ೧೧. ಸೆಟ್ಟಿತಿ—ಸೆಟ್ಟಿಯ ಹೆಂಡತಿ ; ಬೆಸಲೆಯಾದಳ್—ಹೆತ್ತಳು, ಪ್ರಸವಿಸಿದಳು, ಕಿರುಂಡೆಗನಂ—?, ಕಿಱುಂಡೆಗ ಎಂದು ಇದ್ದ ಪಕ್ಷದಲ್ಲಿ ಚಿಕ್ಕವನು ಎಂದರೆ ಚಿಕ್ಕಸೆಟ್ಟಿ ಎಂದು ಅರ್ಥವಾಗಬಹುದೇನೋ ; ತಿರುಂಡಿ ಮಗನಂ ಪೆತ್ತಳ್ ಎಂದಿದ್ದರೆ ಆಗ ಕದ್ದು ಮಗನನ್ನು ಹೆತ್ತಳು ಎಂದರ್ಥವಾಗುತ್ತದೆ, (ತಮಿಳು) ತಿರುಡು = ಕದಿ ; ೧೩. ಸಂಜೆವಾರಿಸುತ್ತಿರ್ದ—ಸಂಜೆಕಾಲದಲ್ಲಿ ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತಿದ್ದ ; ೧೪. ಮಾದುಫಲಮಂ—ಮಾದಳದ ಹಣ್ಣನ್ನು ; ೧೬. ಒಂದೊಸಗೆಯಂ—ಒಂದು ಸಂತೋಷದ ಸುದ್ದಿಯನ್ನು ; ೧೭. ಕಟಕ—ಕಡಗ, ಬಳೆ ; ಕಟಿಸೂತ್ರ—ಉಡಿದಾರ ; ೧೮. ಅಂಗಚಿತ್ತಮುಮಂ—ಮೈಮೇಲೆ ಧರಿಸಿರುವ ಆಭರಣಗಳನ್ನು ತೆಗೆದುಕೊಡುವ ಬಹುಮಾನವನ್ನು ; ೧೮. ದಾರಿದ್ರ್ಯ ಮೋಕ್ಷಮಂ—ಬಡತನದ ಬಿಡುಗಡೆಯನ್ನು ; ೨೧. ಸೋಂಕಿಲ ಮೇಗೆ—ಉಡಿಯ ಮೇಲೆ, ಮಡಿಲಿನ ಮೇಲೆ ; ಎಳನೇಸಱ ತೇಜದೊಳ್—ಬಾಲಸೂರ್ಯನ ಕಾಂತಿಯಲ್ಲಿ ; ಓರಂತಪ್ಪನಂ—ಸಮಾನನಾಗಿರುವವನನ್ನು ; ೨೨. ಬಾೞ್ವೆಯಾಗು—ಬದುಕಿರುವವನಾಗು ; ೨೪. ಇನ್ನಿಂದಿತ್ತ—ಇನ್ನು ಇಂದಿನಿಂದ ಈಚೆಗೆ, ಇನ್ನುಮೇಲೆ ; ೨೫. ಸೆಟ್ಟವಟ್ಟಂಗಟ್ಟಿ—ಸೆಟ್ಟಿ ಪದವಿಯ ಪಟ್ಟವನ್ನು ಕಟ್ಟಿ ; ೨೮. ಪಿಡಿದು—ಆಶ್ರಯಿಸಿ ;

೪೫. ೧: ಮುಡಿಪಿ—ಸತ್ತು ; ೩. ಏಕವಿಹಾರಿಯಪ್ಪೆಂ—ಒಂಟಿ ಪರಿವ್ರಾಜಕ ನಾಗುತ್ತೇನೆ ; ೫. ಛಟ್ಟಟ್ಟಮ ದಸಮದುವಾಳಸ—ಆರು, ಎಂಟು, ಹತ್ತು, ಹನ್ನೆರಡು (ದಿನಗಳು ಮಾಡುವ ಉಪವಾಸವ್ರತ) ; ೯. ಬಾಗಿಲ್ಗಾಪಿನವರಂ—ದ್ವಾರ ರಕ್ಷಕರನ್ನು ; ೧೦. ಬಾಲವದ್ದೆಯಂ—ಬಾಣಂತಿಯನ್ನು(?), ಇದೇ ಗ್ರಂಥದಲ್ಲಿ ಇನ್ನೊಂದೆಡೆ ಪ್ರಯೋಗ ವಾಗಿದೆ (ಪು. ೧೧೩-೬) ; ಅವ್ಯಕ್ತನಂ—ಸೂಕ್ಷ್ಮವಾಗಿರುವವನನ್ನು ; ೧೧. ವಿಸುಟ್ಟು—ಬಿಸುಟು, ಬಿಟ್ಟು ; ೧೨. ನೊಲೆಯೂಡುವ—ಮೊಲೆಯುಣಿಸುವ ; ಊಡುವ—ಲೇಪ ನಾದಿಗಳನ್ನು ಮಾಡುವ, ಬಳಿಯುವ ; ೧೪. ಮಜ್ಜನಂ ಬುಗಿಸುವ—ಸ್ನಾನ ಮಾಡಿ ಸುವ ; ಪಸದನಂಗೊಳಿಸುವ—ಅಲಂಕಾರ ಮಾಡುವ, ಐವರು ದಾದಿಗಳು—ಕ್ಷೀರ ಧಾತ್ರಿ, ಮಂಡನಧಾತ್ರಿ, ಮಜ್ಜನಧಾತ್ರಿ, ಕಿಳವನ (ಕ್ರೀಡೆಯ) ಧಾತ್ರಿ, ಅಂಕಧಾತ್ರಿ ; ೧೫. ನಡಪೆ—ಸಾಕಲು ; ೧೮. ಮದುವೆನೆಱಿಸಿದೊಳ್—ಮದುವೆಯನ್ನು ಸ್ಥಿರಗೊಳಿ ಸಿದಳು ; ೨೦. ಮಾಡಂಗಳಂ—ಮನೆಗಳನ್ನು, ಸೌಧಗಳನ್ನು, ಇದರಲ್ಲಿ ಏಕಶಾಲ ಮುಂತಾದುವು ಬೇರೆಬೇರೆ ರೀತಿಯವು. ೨೧. ಸೆಂಡಾಡುವ—ಚೆಂಡಾಟವಾಡುವ, ತೞಿಯುಂ—ಮರದ ದಿಮ್ಮಿಗಳಿಂದ ಮಾಡಿದ ಜಗಲಿ ಅಥವಾ ನೋಟುಗೋಡೆ, ಆನೆಯ ಹೋರಾಟಕ್ಕೂ ಇದನ್ನು ಉಪಯೋಗಿಸುತ್ತಾರೆ ; ೨೨. ಕಾಪಂ ಮಾಡಿ—ರಕ್ಷಣೆ ಯನ್ನು, ಕಾವಲನ್ನು ಕಲ್ಪಿಸಿ ; ೨೯. ಪರಿವೇಷ್ಟಿತನಾಗಿ—ಬಳಸಿದವನಾಗಿ ;

೪೬. ೧: ಅಯೋಧ್ಯಾನಗರಮಂ ಬಂದು—ಅಯೋಧ್ಯೆಯೆಂಬ ನಗರಕ್ಕೆ ಬಂದು, ಪಾರಣೆಯಂದು—ಪಾರಣೆ ಮಾಡುವ ದಿನ ; ೨. ಕಿಱುವನೆ ಪೆರ್ಮನೆಯೆನ್ನದೆ—ಚಿಕ್ಕ ಮನೆ ದೊಡ್ಡಮನೆಯೆನ್ನದೆ ; ೩. ಗಿಡಿಗಿಡಿ ಜಂತ್ರಂ ಮಿಳಿ ಮಿಳಿ ನೇತ್ರರಪ್ಪ—ಉಪ ವಾಸಗಳಿಂದ ಕೃಶರಾಗಿ ಮೈಯೊಣಗಿರುವ ಜೈನಯತಿಗಳನ್ನು ವರ್ಣಿಸುವಾಗ ಈ ಶಬ್ದ ಗಳು ಜೈನಕಾವ್ಯಗಳಲ್ಲಿ ಪ್ರಯೋಗವಾಗಿವೆ ; 'ಗಿಟಿಗಿಟಿ ಜಂತ್ರಂ' ಎಂಬ ರೂಪವೂ ಉಂಟು, ನೇಮಿಚಂದ್ರನ ಪ್ರಯೋಗ (ಅರ್ಧನೇ ೭-೨) :

> ಬರಿಯೆಲ್ ಬೇಱಿರ್ದ ತಂಕಾಳಿಕೆ ಪೆಡತಲೆಯೊಳ್ ಪೊಕ್ಕ ಕಣ್ ತೋರ್ಪ ಕೆಯ್ಕಾ
> ಲ್ಸೆರೆ ಪಾತಾಳಕ್ಕೆ ಪೊಕ್ಕಿದ್ದೊರ್ಣವಸಿಱುಡುಗಿದೊರ್ಂದುರಂ ಪೊಟ್ಟಬಾಯ್ ಬೇ
> ಕರಿಯೋದಂತಿರ್ದ ಬಾನಂಗುಳಿ ಗಿಟಿಗಿಟಿ ಜಂತ್ರಂಬೊಲಾಗಿರ್ದ ಮೆಯ್
> ಸಿರಿ ಚಿದ್ರೂಪಕ್ಕೆ ಪಕ್ಕಾಗಿರೆ ಚರಿಗೆಗುಣಲ್ ಬಂದನೊರ್ವಂ ಮುನೀಂದ್ರಂ ||

> "ವಿಶ್ವನಂದಿ ಮುನೀಂದ್ರಂ ಗಿಡಿಗಿಡಿ ಜಂತ್ರದ ತೆಱದಿಂ ನಡುಬೀದಿಯೊಳಿಂತು
> ಮೆಲ್ಲಮೆಲ್ಲನೆ ಬರೆಯುಂ" (ಶಾಂತೀಶ್ವ. ೭-೩೨) ಎಂದು ಕಮಲಭವನ ಪ್ರಯೋಗ,

> "ಗಿಡಿ ಗಿಡಿ ಜಂತ್ರಮಾಯ್ತೊಡಲ್" (ಚಂದ್ರ ಪು. ೧೧-೧೭) ಎಂದು ಅಗ್ಗಳ ;

ಕದಿರ ಕಡ್ಡಿಯಂತೆ ಕೃಶವಾದ ಮೈಯುಳ್ಳ ಮತ್ತು ಗುಳಿಬಿದ್ದ ಕಣ್ಣುಗಳಿಂದ ಮಿಳಮಿಳ ನೋಡುತ್ತಿರುವ ಎಂಬರ್ಥವನ್ನು ಸೂಚಿಸಬಹುದು. ೫. ಇನ್ನರಂ—ಇಂಥವರನ್ನು ; ೬. ಅಂಗಡಿಯಲವಡಂ—ಅಂಗಡಿ ಬೀದಿಯಲ್ಲಿ ಅಲೆದಾಡುವವನು ; ೭. ಪೆಱುಕಿ ತಿಂದು ಬಾೞ್ವಾಂ—ಅಲ್ಲಿ ಇಲ್ಲಿ ಆರಿಸಿಕೊಂಡು ತಿಂದು ಬದುಕುವವನು, (ತಮಿಳು) ಪೆಱುಕ್ಕು,

(ಮಲ) ಪೆಱುಕ್ಕಿ—ಆರಿಸಿಕೊ, ಬಿಕ್ಷೆ ಬೇಡು ; ಬೈಕಂಗುಳಿ—ಭಿಕ್ಷೆ ಬೇಡುವುದೇ ಶೀಲವಾಗುಳ್ಳವನು ; ೮. ದೇಸಿಗಂ—ದಿಕ್ಕಿಲ್ಲದವನು, ನಿರ್ಗತಿಕ ; ಕೋವಣಕ್ಕಪ್ಪೊಡಂ—ಲಂಗೋಟಿಗಾದರೂ ; ಭಾಗಸವಿಲ್ಲದೊಂ—ಭಾಗ್ಯವಿಲ್ಲದವನು, ಹಣವಿಲ್ಲದವನು ; ೯. ಮಾರ್ಕೊಳ್ಕೊಂಡು—ಪ್ರತಿಭಟಿಸಿ ; ೧೦. ಪೊಲ್ಲದಂ ನುಡಿದಯ್—ಕೆಟ್ಟಮಾತನ್ನಾಡಿದೆ ; ೧೨. ಕೊಟಿ‍ದ—ಕೊಳೆತ (?) ; ಪುಲ್ಲದರ್ಕ್ಕಂ—ಹುಲ್ಲಿನ ಕೂಳೆಯನ್ನು ; ತೊಱೆವಂತೆ—ಬಿಡುವಹಾಗೆ ; ೧೩. ಇಳಿಸಿ—ತಿರಸ್ಕರಿಸಿ ; ಪರಿಭವಿಸಿ—ಅವಮಾನಗೊಳಿಸಿ ; ಮುಟ್ಟುಗಿಡಿಸಿ—ಉಪಕರಣರಹಿತನನ್ನಾಗಿ ಮಾಡಿ, ನಿಸ್ಸಹಾಯಕನೆಂದು ಭಾವಿಸಿ (?) ; ಬಾರಿಸಿದೊಳಂ—ಅಡ್ಡಿಮಾಡಿದವಳನ್ನು, ತಡೆದವಳನ್ನು ; ೧೪. ಕಣ್ಕೆತ್ತಿ—ಕಣ್ಣನ್ನು ಅಲುಗಿಸಿ ; ಪೆಱಪೆಱವನೆ—ಬೇರೆ ಬೇರೆಯಾದ ಮಾತುಗಳನ್ನೇ ; ೧೫. ತಗುಳ್ದೊಡೆ—ಮೊದಲಿಟ್ಟರೆ, ಆರಂಭಿಸಿದರೆ ; ಸಗರ್ಭ ವಚನಂಗಳ್—ಒಳ ಅರ್ಥವನ್ನುಳ್ಳ ಮಾತುಗಳು ; ೧೬. ಬಗೆಯುತ್ತಿರ್ಪಿನಂ—ಭಾವಿಸುತ್ತಿರಲು ; ಬಾಣಸಿಗಂ—ಅಡಿಗೆ ಮಾಡುವವನು ; ಬೋನಮೆತ್ತಿ—ಭೋಜನವನ್ನು ಬಡಿಸಿ ; ಓಗರಂ—ಅನ್ನವು ; ೧೭. ಆಱಿದಪ್ಪುದು—ತಣ್ಣಗಾಗುತ್ತದೆ ; ೨೨. ವೇಳಾತಿಕ್ರಮಮಾದಪ್ಪುದು—ಹೊತ್ತು ಮೀರುತ್ತಿದೆ ; ಆರೊಗಿಸಲ್ಕೆ—ಊಟಮಾಡುವುದಕ್ಕೆ ; ೨೩. ಉಣ್ಬೆನಲ್ಲೆಂ—ಊಟಮಾಡುವವನಲ್ಲ ; ೨೪. ಪೇೞಿಯಪ್ಪೊಡೆ—ಹೇಳಿಯಾದರೆ ; ೨೫. ಸೂರುಳಿಸಿ—ಆಣೆಯಿರಿಸಿ ; ೨೮. ನಿಱಿಸಲ್ವೇಡಿ—(ದೇಹ) ಧಾರಣೆಗಾಗಿ ಬಯಸಿ ; ೨೯. ಚರಿಗೆ ಪೊಕ್ಕು—ಭಿಕ್ಷೆಗಾಗಿ ಪ್ರವೇಶಿಸಿ ; ಬಾವರಿವುಗುತ್ತಂ—ದುಂಬಿ ಹೇಗೆ ಹೂವಿನಿಂದ ಹೂವಿಗೆ ಹೋಗುವುದೋ ಹಾಗೆ ಮನೆಮನೆಗೆ ಭಿಕ್ಷಾರ್ಥಿಯಾಗಿ ತಿರುಗುತ್ತ, ಇದಕ್ಕೆ ಭ್ರಾಮರೀವೃತ್ತಿಯೆಂದು ಹೆಸರು ; ಪೊಱಮಟ್ಟು—ಹೊರಕ್ಕೆ ಹೊರಟು ; ೩೦. ಆರೊಗಿಸಲ್ವೇೞ್ಕುಂ—ಊಟಮಾಡಬೇಕು ;

**೪೭. ೨ :** ಕೂಸಯ್—ಮಗುವಾಗಿರುವೆ, ಎಳೆಯ ಪ್ರಾಯದವನಾಗಿರುವೆ ; ೩. ಪ್ರಾಯಂ ಬೋದಿಂ ಬೞಿಕ್ಕೆ—ಪ್ರಾಯಕಳೆದುಹೋದ ಅನಂತರ ; ೬. ಮಾನಸವಾೞ್ವೆಂಬುದು—ಮನುಷ್ಯನ ಬದುಕೆನ್ನುವುದು ; ಪನಿಪುಲ್ಲ ಮುಗಿಲ ಸಂಜೆಯೊಳ್—ಹುಲ್ಲಮೇಲಿನ ಹನಿ, ಮೋಡ, ಸಂಜೆಗೆಂಪು ಇವುಗಳಲ್ಲಿ ; ಓರಂತಪ್ಪುದು—ಸಮಾನವಾಗುವುದು ; ೮. ಬಸಿಱ ಪೆಂಡತಿ—ಗರ್ಭಿಣಿಯಾದ ಹೆಂಡತಿ ; ೧೪. ಅಲ್ಲಿಂ ಬೞಿಯಂ—ಅಲ್ಲಿಂದನಂತರ, ಆಮೇಲೆ ; ಬಾರಿಸೆ ಬಾರಿಸೆ—ನಿವಾರಿಸಲು ನಿವಾರಿಸಲು, ತಡೆತಡೆಯಲು ;

**೪೮. ೧ :** ಪೞಿದು—ನಿಂದಿಸಿ ; ಉನ್ಮಾರ್ಗೋಪದೇಶದಿಂದೆ—ವಕ್ರೋಪದೇಶದಿಂದ, ಕುಟಿಲೋಪದೇಶದಿಂದ ; ೧೭. ಜೋಗುಗೊಂಡು—ತಪವನ್ನು ಸ್ವೀಕರಿಸಿ ; ೯. ಮುನ್ನ—ಮೊದಲು ; ೧೦. ಮಲ್ಮಲ ಮಱುಗುತ್ತಿರ್ದು—ಮುಲಮುಲನೆ ಸಂತಾಪಪಡುತ್ತಿದ್ದು ; ೧೧. ಮೇಲ್ವಾಯಲ್—ಮೇಲೆ ನುಗ್ಗಲು ; ಪರಿತಪ್ಪುದಂ—ಓಡಿಬರುವುದನ್ನು ; ೧೨. ಯಾವಜ್ಜೀವಂ—ಜೀವವಿರುವ ಪರ್ಯಂತ ; ನಿವೃತ್ತಿ—ಬಿಡುವಿಕೆ ;

ಗಾಹೆ॥ ಸವ್ವಜೀವಾಣಂ—ಎಲ್ಲ ಜೀವಗಳನ್ನೂ, ಖಮ್ಮಾಮಿ—ಕ್ಷಮಿಸುತ್ತೇನೆ; ಸವ್ವೇಜೀವಾ—ಸಮಸ್ತ ಜೀವಗಳೂ, ಮೇ—ನನ್ನನ್ನು, ಖಮಂತು—ಕ್ಷಮಿಸಲಿ; ಸವ್ವ ಭೂದೇಷು—ಸರ್ವ ಪ್ರಾಣಿಗಳಲ್ಲೂ, ಮೇ—ನನಗೆ, ಮೆತ್ತೀ—ಮೈತ್ರಿಯು, ಸ್ನೇಹವು; ಮಜ್ಝ—ನನಗೆ, ವೇರಂ—ವೈರವು, ದ್ವೇಷವು, ಕೇಣಚಿ—ಎಲ್ಲಿಯಾದರೂ, ಣ—ನಾಸ್ತಿ, ಇಲ್ಲ.

*"ಮಜ್ಝುಸಹಾವಂ" ಎಂದು ಆರಂಭವಾಗುವ ಗಾಹೆಯ ಪಾಠ ಕೆಳಗೆ ಕಾಣಿಸಿ ದಂತಿರಬೇಕು.

ಮಜ್ಝು ಸಹಾವಂ ಣಾಣಂ ದಂಸಣ ಚರಣಂ ಣ ಕಿಂ ಪಿ ಆವರಣಂ।
ಜೋ ಸಂವೇಯಣಗಾಹಿ ಸೋಹಂ ಣಾದಾ ಹವೇ ಆದಾ॥

ಇದರ ಸಂಸ್ಕೃತ ಛಾಯೆ:

ಮಮ ಸ್ವಭಾವಃ ಜ್ಞಾನಂ ದರ್ಶನಂ ಚರಣಂ ನ ಕಿಮಪಿ ಆವರಣಂ।
ಯಃ ಸಂವೇದಣಗ್ರಾಹಿ ಸೋಹಂ ಜ್ಞಾತಾ ಭವತ್ಯಾತ್ಮಾ॥

ಮಜ್ಝು—ನನ್ನ, ಸಹಾವಂ—ಸ್ವಭಾವವು, ಣಾಣಂ—ಸಮ್ಯಕ್ ಜ್ಞಾನವು, ದಂಸಣಂ—ಸಮ್ಯಗ್ದರ್ಶನವು, ಚರಣಂ—ಸಮ್ಯಕ್ ಚಾರಿತ್ರವು; ಣ ಕಿಂಪಿ ಆವರಣಂ—ಯಾವ ಕರ್ಮಲೇಪವೂ ಇಲ್ಲ; ಜೋ—ಯಾವನು, ಸಂವೇಯಣಗಾಹಿ—ಸಂವೇದನೆಯನ್ನುಳ್ಳವನ್ನೋ ಸೋ—ಅವನೇ, ಅಹಂ—ನಾನು; ಆದಾ—ಆತ್ಮನು, ಣಾದಾ—ತಿಳಿಯುವವನು, ಜ್ಞಾತೃವು, ಹವೇ—ಆಗುತ್ತಾನೆ.

* "ಛಜ್ಜ ಉ ಭಿಜ್ಜಉ" ಎಂಬ ಗಾಹೆಯ ಸಂಸ್ಕೃತ ಛಾಯೆ:

ಛಿದ್ಯತಾಂ ಭಿದ್ಯತಾಂ ಯಾತು ಕ್ಷಯಂ ಯೋಗಿನ್ ಇದಂ ಶರೀರಂ।
ಆತ್ಮಾನಂ ಭಾವಯ ನಿರ್ಮಲಂ ಯೇನ ಪ್ರಾಪ್ನೋಸಿ ಭವತೀರಂ॥

ಏಹು ಸರೀರು—ಈ ದೇಹವು, ಛಿಜ್ಜಉ—ಕತ್ತರಿಸಲ್ಪಡಲಿ, ಭಿಜ್ಜಉ—ಭೇದಿಸಲ್ಪಡಲಿ, ಸೀಳಲ್ಪಡಲಿ, ಜಾಉ ಖಉ—ಕ್ಷಯವಾಗಲಿ ಅಥವಾ ನಾಶವಾಗಲಿ, ಜೋಇಯ—ಹೇ ಯೋಗಿಯೇ, ಜೇಂ—ಯಾವುದರಿಂದ, ಭವತೀರು—ಸಂಸಾರದ ಆಚೆಯ ತೀರವನ್ನು, ಪಾವಹಿ—ಪಡೆಯುವೆಯೋ, ಅ, ಣಿಮ್ಮಲಉ—ನಿರ್ಮಲನಾದ, ಪರಿಶುದ್ಧನಾದ, ಅಪ್ಪಾ—ಆತ್ಮನನ್ನು, ಭಾವಹಿ—ಧ್ಯಾನಮಾಡು,

೨೦. ಬಸಿಱಂ ಪೋೞ್ದು—ಹೊಟ್ಟೆಯನ್ನು ಸೀಳಿ; ತೆಗಲೆಯಂ—ಕೊರಳಿನ ಮೇಲ್ಭಾಗವನ್ನು, (ತಮಿಳು) ಶುವಲ್; ೨೨. ಕುಂಕುಮಪಂಕಿತ—ಕುಂಕುಮದ ಕೆಸರು ಬಳಿದ; ೨೮. ಸಲ್ವಾಕೆಯೆ—ಸಲ್ಲುವವಳೆ; ೨೫. ವಕ್ಷಃಸ್ಥಳದ—ಎದೆಯ ಪ್ರದೇಶದ; ಶ್ರೀಲಾಂಛನ—ಶ್ರೇಷ್ಠವಾದ ಕುರುಹನ್ನು; ೨೮. ಪಾಷಾಣ ವೃಕ್ಷಂಗಳೊಳ್—ಕಲ್ಲು

---

* ಈ ಗಾಹೆಗಳ ಅರ್ಥವನ್ನು ನನಗೆ ದಯೆಯಿಟ್ಟು ತಿಳಿಸಿದವರು ಡಾ॥ ಆ.ನೇ. ಉಪಾಧ್ಯೆಯವರು, ಎಂ.ಎ.; ಡಿಲಿಟ್.

ಮರಗಳಲ್ಲಿ ; ೩೦. ಧರ್ಮಶ್ರವಣಂಗೆಯ್ದು—ಧರ್ಮವನ್ನು ಕೇಳಿಸಿ ; ೩೧. ಏಱಿಸಿ ದೊಡೆ—ಧರಿಸುವಂತೆ ಮಾಡಿದರೆ ;

೪೯. ೧೦ : ಓರನ್ನರಪ್ಪ—ಎಣೆಯಾದಂಥವರಾದ, ಸಮಾನರಾದ ; ೨೪. ನಿಶ್ರೇಯಸಸುಖ—ಮೋಕ್ಷದ ಸುಖ, ಅತ್ಯಂತಿಕ ಸುಖ ; ಎಯ್ದುಗೆ—ಸೇರಲಿ, ಪಡೆಯಲಿ.

## ೩. ಗಜಕುಮಾರನ ಕಥೆ

೫೦. ೫ : ಓರಂತಾಗಿ—ಕ್ರಮವಾಗಿ ; ಮಲರ್ಚೆ—ಹೊಟ್ಟೆಯಡಿಯಾಗಿ ಮಲಗಿಸಿ ; ಉರದಿಂ ತಗುಳ್ದು—ಎದೆಯಿಂದ ಹಿಡಿದು ; ೬. ಪಂದೊವಲಂ—ಹಸಿ ತೊಗಲನ್ನು, ಪಸಿದು + ತೊವಲ್ ; ೭. ನಿಡಿಯವುಂ—ಉದ್ದವಾದ ; ತೋರಮುಂ—ದಪ್ಪವಾದ ; ಕೀಲ್ಗಳಿಂದಂ—ಮೊಳೆಗಳಿಂದ ; ೯. ಉರ್ಚಿಪೋಗಿ—ಭೇದಿಸಿಕೊಂಡು ಹೋಗಿ, ಸೀಳಿಹೋಗಿ ; ನೆಲಮುಂ ತಾಪಿನಂ—ನೆಲವನ್ನು ತಗುಲುತ್ತಿರಲು ; ಕೀಲಿಱಿಯೆಪಟ್ಟ—ಮೊಳೆಗಳಿಂದ ಹೊಡೆಯಲ್ಪಟ್ಟ, ಚುಚ್ಚಲ್ಪಟ್ಟ ; ೯. ಮೆಯ್ಯನೊಡೆಯಂ—ಮೈಯುಳ್ಳವನು ; ೧೦. ಪೊರ್ದಿದೊಂ—ಹೊಂದಿದನು ;

೧೩. ಸುರಟ—ಸೌರಾಷ್ಟ್ರ; ಅರ್ಧಚಕ್ರಿ—ಭರತಕ್ಷೇತ್ರದ ಆರು ಖಂಡಗಳಲ್ಲಿ ಅರ್ಧಕ್ಕೆ ಎಂದರೆ ಮೂರು ಖಂಡಗಳಿಗೆ ಅಧಿಪತಿಯಾದವನು ; ೯. ಆರುಮನುಱದೊಂ—ಯಾರನ್ನೂ ಲಕ್ಷ್ಯಮಾಡದವನು ; ಬೆಸಕೆಯ್ಯನ್—ಕಾರ್ಯಮಾಡನು, ಸೇವೆಮಾಡನು ; ೨೦. ಗೋಸಣೆಯುಂ—ಘೋಷಣೆಯನ್ನು, ಡಂಗುರ ಹಾಕಿ ಸಾರುವುದನ್ನು ; ೨೧. ಪಿಡಿಕೊಂಡು—ಹಿಡಿದುಕೊಂಡು ; ೨೪. ಚಾತುರ್ದಂತ ಬಳಮುಂ—ಚತುರಂಗ ಸೈನ್ಯವನ್ನು ; ೨೫. ಪೆಡಂಗೆಯ್ಯುಡಿಯೆ—ಬೆನ್ನ ಹಿಂದಕ್ಕೆ ಕೈಗಳನ್ನು ಮುರಿಯುವಂತೆ ;

೫೧. ೨ : ಕೊಂಡು—ಸ್ವೀಕರಿಸಿ ; ಈ ದಾಯಮುಂ—ಈ ಬಹುಮಾನವನ್ನು ; ಬೇಡಿರ್ದೆಂ—ಬಯಸಿರುವೆನು ; ೬. ಒಳ್ಪೆಂಡಿರೆಲ್ಲರಂ—ಒಳ್ಳೆಯ ಹೆಂಗಸರನ್ನೆಲ್ಲ ; ೭. ಮೊಱೆದುಂ — ಸಂಬಂಧವನ್ನು ಮಾಡಿಯೂ, ಒಟ್ಟಯಿಸಿ—ಒಂದುಗೂಡಿ ; ಉಯ್ದು—ಎತ್ತಿಕೊಂಡು ಹೋಗಿ ; ೮. ಸುವರ್ಣಕಾಱನ—ಚಿನ್ನಗೆಯ್ಕದವನ, ಅಕ್ಕಸಾಲಿಗನ ; ೧೦. ಆಕೆಗಾಟಿಸಿ—ಆಕೆಗೆ ಬಯಸಿ ; ೧೧. ಆ ಏರಣಿಗನುಂ—ಆ ಅಕ್ಕಸಾಲಿಗನೂ, (ಪಾಲಿ) ಹೇರಣಿಕ > ಏರಣಿಗ ; "ಗಂದಿಗನೇರಣಿಗಂ ಸರವಂದಿಗನಾಪಟ್ಟಸಾಲಿಗಂ", "ಅಬ್ಜಸಂವಾಸಿ ಸವಿಾರನೇರಣಿಗನಾಗೆ" ಇತ್ಯಾದಿ ಪ್ರಯೋಗಗಳುಂಟು ; ೧೪. ಸಮವಸರಣಂ—ಅರ್ಹಂತನು ಉಪದೇಶಮಾಡುವ ಸಭೆ; ೧೭. ಅಗಮ್ಯಾಗಮನಂ ಗೆಯ್ವೊಡಂ—ಕೂಡಬಾರದವರಲ್ಲಿ ಕೂಡಿದರೂ ; ಪೆಱರ ಸಜ್ಜನಂಗಳೊಳ್—ಹೆರವರ ಕುಲಸ್ತ್ರೀಯರಲ್ಲಿ ; ಬರ್ದೊಡಂ—ಬಾಳಿದರೂ ; ೧೮. ನಾನ್ಯಥಾಜಿನಭಾಷಿತಂ—ಜಿನನು ಹೇಳಿದ್ದು ಅನ್ಯಥಾ ಆಗಲಾರದು, ಎಂದರೆ ಸತ್ಯ ; ೧೯. ತೊಱೆದು—ತ್ಯಜಿಸಿ, ಬಿಟ್ಟು ; ೨೨. ರೇವತೋದ್ಯಾನ—ರೇವತವೆಂಬ ಉಪವನದಲ್ಲಿ ; ೨೩. ರಾತ್ರಿ ಪ್ರತಿಮೆ ನಿಂದೊನಂ—ರಾತ್ರಿ ಪ್ರತಿಮೆ ಆಕಾರದಲ್ಲಿ ತಪಸ್ಸಿಗೆ ನಿಂತವನನ್ನು ; ೨೪. ಪಗೆ

ವನಂ—ದ್ವೇಷಿಸುತ್ತಿರುವವನನ್ನು, ಶತ್ರುವನ್ನು; ಇಱಿಯಲ್ಪೆತ್ತೆಂ—ಹೊಡೆಯಲು, ಕೊಲ್ಲಲು ಪಡೆದೆನು; ೨೭. ಕ್ಷಮಾಂಗನಾಲಿಂಗಿತನಪ್ಪ—ಕ್ಷಮೆಯೆಂಬ ಸ್ತ್ರೀಯಿಂದ ಆಲಿಂಗಿಸಲ್ಪಟ್ಟವನಾದ, ಎಂದರೆ ಕ್ಷಮಾಗುಣ ಸಮನ್ವಿತನಾಗಿರುವ; ಮಲಚ್ಚಿ—ಹೊಟ್ಟೆ ಕೆಳಗಾಗಿ ಹೊರಳಿಸಿ ಮಲಗಿಸಿ; ೨೮. ವಿದಾರಿಸಿ—ಸೀಳಿ; ಪಂದೊವಲ್—ಹಸಿಚರ್ಮ; ಪೊರೆತಾಪಿನೆಗಂ—ಚರ್ಮದ ಪದರಗಳನ್ನು ತಾಗುತ್ತಿರಲು; ಸಮನ್ತು—ಚೆನ್ನಾಗಿ; ಅವಯವ ಪ್ರದೇಶಂಗಳೊಳ್—ಅಂಗಾಂಗಗಳ ಎಡೆಯಲ್ಲಿ;

೫೨. ೧: ನೆಲನಂ ತಾಪಿನಂ—ನೆಲವನ್ನು ಭೇದಿಸುತ್ತಿರಲು; ೩. ಪ್ರಾಸಾದಕ್ಕೆ—ಸೌಧಕ್ಕೆ; ಕಳಸಮಾಗುತ್ತಿರ್ದ — ಕಲಶದಂತಿರುವ; ಸರ್ವಾರ್ಥಸಿದ್ಧಿ — ಒಂದು ಸ್ವರ್ಗದ ಹೆಸರು, ಸಿದ್ಧ ಶಿಲೆಯ ಕೆಳಗಿರುವ ಸ್ವರ್ಗ; ಸಾಗರ—ಒಂದು ದೊಡ್ಡ ಸಂಖ್ಯೆ, ೧೦ ಕೋಟಿ × ೧ ಕೋಟಿ ಪಲ್ಯಗಳು; ಹಸ್ತ—ಮೊಳ; ಪುಂಡರೀಕ—ಬಿಳಿ ತಾವರೆ;

## ೮. ಸನತ್ಕುಮಾರ ಚಕ್ರವರ್ತಿಯ ಕಥೆ

೫೩. ೫: ಕೆರಕುಂ—ತುರಿಯೂ, ಚರ್ಮರೋಗ, (ತಮಿಳು) ಶಿರಂಗು; ೬. ಛರ್ದಿಯುಂ—ಭೇದಿಯೂ;

೧೫. ರೂಪನೊಡೆಯಂ—ರೂಪವುಳ್ಳವನು; ೧೯. ಪಾಗುಡ—ಕಾಣಿಕೆ; ನಜರು; ಪಟ್ಟವಾರಮರಗ—ಒಂದು ಕುದುರೆಯ ಹೆಸರು; ೨೦. ದುಷ್ಟಾಶ್ವಮಂ—ತುಂಟ ಕುದುರೆಯನ್ನು; ೨೧. ಕೊಸೆಗೊಳೆ—?, 'ಕೊಸೆ—ವಾಹಾರೋಹ ಭೇದೇಚ' ಎನ್ನುತ್ತಾನೆ ಕೇಶಿರಾಜ, ಇದರಂತೆ ವಾಹನವನ್ನು ಹತ್ತುವ ಒಂದು ವಿಧಾನ ಎಂದರ್ಥವಾಗುತ್ತದೆ; ಒಂದು ರೀತಿಯಿಂದ ಕುದುರೆಯನ್ನೇರಲು ಎಂದು ಇಲ್ಲಿ ಅರ್ಥವಾಗಬಹುದು, ಆದರೆ ಪಂಪನು 'ಕೊಸೆಗೊಳ್' ಎಂಬುದನ್ನು ಬೇರೆ ಅರ್ಥದಲ್ಲಿ ಪ್ರಯೋಗಿಸಿರುವಂತಿದೆ:

ಅರಮ್ಯನದಿಯ ಚೆಲ್ವನಿ
ಆ ರಾಮಾರಮಣನಲ್ತಿಯಿಂ ನೋಡುವಿನಂ
ಸಾರಥಿ ಕಣ್ಣಱಿದೊಯ್ಯನೆ
ತೇರಂ ಕೊಸೆಗೊಂಡು ಚಕ್ರಿಯಂ ಬಿನ್ನವಿಕುಂ ॥ (ಆದಿ ಪು. ೧೧–೫೭)

ಇಲ್ಲಿ ವಾಹನವಾದ ರಥವನ್ನು ಸಾರಥಿ ಆರೋಹಿಸಿದನೆಂದು ಹೇಳುವುದು ಸಂಗತವಾಗಿಲ್ಲ, ಏಕೆಂದರೆ ಅವನು ಆಗಲೇ ರಥವನ್ನು ಹತ್ತಿ ಕುಳಿತಿದ್ದಾನೆ. (ತಮಿಳು) ಕುಶೈ ಎಂಬ ಶಬ್ದಕ್ಕೆ ಲಗಾಮು, ಕಡಿವಾಣ ಎಂಬ ಅರ್ಥಗಳಿವೆ, ಕುಶೈ—ಕೊಸೆಗಳು ಜ್ಞಾತಿ ಶಬ್ದಗಳು, ಆದ್ದರಿಂದ ಇಲ್ಲಿ ಕೊಸೆಗೆ ಅದೇ ಅರ್ಥವೆಂದು ತೋರುತ್ತದೆ; ಲಗಾಮನ್ನು ಎಳೆದು ಕುದುರೆಯನ್ನು ನಿಲ್ಲಿಸಿ ರಥವನ್ನು ನಿಲ್ಲಿಸಿದನೆಂದು ಪಂಪನ ಅರ್ಥವಿರುವಂತೆ ಕಾಣುತ್ತದೆ, ಪ್ರಕೃತ ಸಂದರ್ಭದಲ್ಲಿ ಕುಮಾರನು ಲಗಾಮನ್ನು ಹಿಡಿದೆಳೆಯಲು ಕುದುರೆ ಓಡಲಾರಂಭಿಸುತ್ತದೆ, ನಿಲ್ಲುವುದಿಲ್ಲ, ಆದ್ದರಿಂದ ಕೊಸೆಗೊಳೆ ಗೆ ಲಗಾಮನ್ನು ಎಳೆ ಎಂದು ಅರ್ಥಮಾಡುವುದು ಸರಿಯಾಗಲಾರದು, ಬಹುಶಃ ಕಸೆಗೊಳೆ ಎಂಬ ಪಾಠ

ವಿದ್ದಿರಬಹುದು, ಆಗ ಕಸೆ ಎಂದರೆ ಚಾವಟಿ ಎಂಬರ್ಥವಾಗಿ, ಕಸೆಗೊಳಿಗೆ ಚಾವಟಿಯಿಂದ ಹೊಡೆಯಲು ಎಂದು ತಕ್ಕ ಅರ್ಥ ಬರುತ್ತದೆ, (ಸಂ)ಕಶಾ > ಕಸೆ, "ಕಸೆಯನಿನಿಸಱಿಪಿ ಕುಡೆ ಲಂಘಿಸಿದುದು ಪನ್ನೆರಡು ಯೋಜನಂಬರಮಿನ್ನೇ ವೆಸರ್ಗೊಳ್ವುದೊ ಕಡುವೇಗದಿನಸಕಟಿಂದುದು ಮನಮುಮಂ ತುರಂಗಮ ರತ್ನಂ" (ಆದಿ ಪು. ೧೩-೩೯) ಎಂಬ ಪ್ರಯೋಗ ಈ ಊಹೆಗೆ ಪೋಷಕವಾಗಿದೆ, [ಕ]ಸೆಗೊಳಿ ಎಂಬ ಪಾಠವನ್ನು ಒಪ್ಪಬಹುದು, ಪ್ರತಿಗಳಲ್ಲಿ ಆಧಾರವಿಲ್ಲ ಅಷ್ಟೇ. ೨೨. ವಾರಿತಪೂರಿತಂ ಪರಿದು— ವಾರಿತ, ಪೂರಿತಂ ಎಂಬ ಅಶ್ವಗತಿಗಳಲ್ಲಿ (?) ಓಡಿ; ೨೪. ಕುದುರೆ ವಡಿವಜ್ಜೆಯಂ— ಕುದುರೆಯ ಅಡಿಯ ಎಂದರೆ ಕಾಲ ಗೊರಸಿನ ಗುರುತನ್ನು; ನಾಡೆಗೆಟ್ಟು ಪೋಗಿ— ಬಹಳ ದೂರ ಹೋಗಿ; ಇಲ್ಲಿ ಗೆಟ್ಟು ಎಂಬುದು ಗೆಂಟು ಎಂದಿರಬಹುದು;

೫೪. ४: ಉಬ್ಬೆಗಂ ಬಡದೆ — ವ್ಯಥೆಪಡದೆ; ಮಗುೞಿಂ — ಹಿಂದಿರುಗಿರಿ; ಮಗುೞ್ಚಿ—ಹಿಂದಿರುಗಿಸಿ; ೫. ನೋಟ್ಟಿಪಿನಂ—ನೋಡುತ್ತಿರಲು; ೯. ವ್ಯಾಧನಿವಾಸಂಗಳುಮಂ — ಬೇಡರ ಹಟ್ಟಿಗಳನ್ನೂ; ಕಟಿದು ಪೋಗಿ — ದೂರ ಹೋಗಿ ೧೫. ಮಗುೞ್ದು—ಪುನಃ, ಮತ್ತೆ; ೧೯. ತೂಂಕಡುಗೆಟ್ಟು—ನಿದ್ದೆ ಬಿಟ್ಟುಹೋಗಿ, ಎಚ್ಚರವಾಗಿ; ೨೦. ಸಮುದ್ರದೊಳೋರಂತಪ್ಪ — ಸಮುದ್ರಕ್ಕೆ ಸಮಾನವಾದ; ೨೨. ಮಾಱುಲಿವ—ಪ್ರತಿಧ್ವನಿಯನ್ನು ಕೊಡುವ; ೨೫. ನಾಗವಲ್ಲೀಪಿನದ್ಧ—ವೀಳ್ಯದೆಲೆಯ ಬಳ್ಳಿಯಿಂದ ತೆತ್ತಿಸಿರುವ, ಕಿಕ್ಕಿರಿದಿರುವ; ದ್ರುಮಷಂಡ—ಮರಗಳ ಸಮೂಹ; ೨೭. ಅಮೋಘಂ—ವ್ಯರ್ಥವಿಲ್ಲದೆ, ನಿಶ್ಚಯವಾಗಿ; ತೊಟಿಲ್ವೊಂ—ಸುತ್ತಾಡುವವನು, ಅಲೆದಾಡುವವನು; ಗಂಭೀರಧ್ವನಿಯೊಳ್—ಉದಾತ್ತ ನಾದದಲ್ಲಿ;

೫೫. ೧: ವಂಶ—ಕೊಳಲು; ೨. ಪಾಟಮುಮಂ—ಹಾಡನ್ನೂ, ಗೀತವನ್ನೂ; ಹರಿಚಂದನ—ಶ್ರೀಗಂಧ; ३. ತುರುಷ್ಕಾದಿಗಳ—ತುರ್ಕಿದೇಶದ ಲೋಬಾನವೆಂಬ ಸುಗಂಧದ್ರವ್ಯಾದಿಗಳ; ತೀಡಿದೊಡೆ—ಸೋಕಿದರೆ; ೫. ಸಲ್ವನಾಂ: ಬಹುಶಃ ಸಲ್ವನ್, ಸಲ್ವೊನ್—ಹೋಗುವವನು; ಕನತ್ಕನಕ—ಪ್ರಕಾಶಮಾನವಾದ ಚಿನ್ನದ ಚಳತ್ಕೇತುಪತಾಕಾದ್ಯಮಂ—ಚಲಿಸುತ್ತಿರುವ ಧ್ವಜ ಬಾವುಟಾದಿಗಳನ್ನು; ೯. ಪುರಃಸ್ಥಿತಮಪ್ಪ—ಎದುರುಗಡೆ ಇರುವ; ೧೦. ನಾಟಕಮಂ—ನೃತ್ಯವನ್ನು; ೧೪. ಅಱುದಿಂಗಳಿಂ—ಆರುತಿಂಗಳಿನಿಂದ, ಆರುತಿಂಗಳ ನಂತರ; ೧೫. ಅೞ್ವನಂ—ಅಳುವವನನ್ನು; ೧೭. ಅಂತಾಗೆ — ಹಾಗೆ ಆಗುವಂತೆ; ೨೦. ತಣಿಪಿದಾಗಳ್ — ತೃಪ್ತಿಪಡಿಸಿದಾಗ; ೨೧. ಮಾಱಪ್ಪವೊಲೆ—ವಿನಿಮಯವಾಗುವಂತೆ, ಆಯ್ತು; ಒಂದಕ್ಕೆ ಇನ್ನೊಂದನ್ನು ತೆಗೆದುಕೊಳ್ಳುವಂತಾಯಿತು; ೨೨. ಓರಾಸನ—ಒಂದೇ ಪೀಠ, ಆಸನ, ಒಂದು+ಆಸನ; ೨೫. ಮಱುಭವದೊಳ್—ಮಾರನೆಯ ಜನ್ಮದಲ್ಲಿ, ಪುನರ್ಜನ್ಮದಲ್ಲಿ; ಎೞಿಯನಕ್ಕುಂ—ಒಡೆಯನಾಗುತ್ತಾನೆ;

೫೬. ೧: ಪೆತ್ತಿರ್—ಪಡೆದಿರಿ; ೨. ಪೆಱದೊನ್—ಹೊಂದದವನು, ಪಡೆಯದವನು; ४. ವಾಸಗೃಹಮಂ—ಶಯ್ಯಾಗೃಹ, ಮಲಗುವ ಮನೆ; ८. ಪರಿಯೞ

ತ್ತಿರ್ದುದು — ಓಡುತ್ತಿದ್ದುದು ; ತೆಗಲೆಯೊಡೆದು — ಕೊರಳು ಮುರಿದು ; ಕಾಲಂಗೆಯ್ದುತ್ತು—ಸತ್ತಿತು ; ಬಸಮುಱಿದು—ವಶತಪ್ಪಿ, ಶಕ್ತಿಗುಂದಿ ; ೧೦. ಪಟ್ಟಿರ್ದನ್—ಮಲಗಿದ್ದನು ; ೧೧. ಸಕಲ ಚಕ್ರವರ್ತಿಯಪ್ಪಂ—ಭರತಕ್ಷೇತ್ರದ ಆರುಖಂಡಗಳಿಗೂ ಅಧಿರಾಜನಾಗುವನು ; ೧೨. ವಿಗುರ್ವಿಸಿ—ಮಾಯೆಯಿಂದ ಸೃಷ್ಟಿಸಿ ; ೧೩. ಆಪ್ಯಾಯನಂ ಮಾಡೆ—ಹಿತವನ್ನು ಮಾಡಲು ; ಸ್ವರ್ಣ ಭಾಜನದಿಂದೆ—ಚಿನ್ನದ ಪಾತ್ರೆಯಿಂದ ; ೧೪. ಕೋಡುವ ನೀರಂ — ಶೀತಲವಾಗಿರುವ ನೀರನ್ನು ; ಕುಡಿಯಲೆಱೆದಂ—ಕುಡಿಯಲು ಹೊಯ್ದನು ; ನೀನಾರ್ಗ್ಗೆ — ನೀನು ಯಾರು, ಯಾರಿಗೆ ಸೇರಿದವನು ; ೧೮. ನೀರಟಿಕ್ಕೆ—ನೀರಡಿಕೆ, ಬಾಯಾರಿಕೆ ; ೨೦. ಆ ಅವಸರದೊಳ್—ಆ ಸಮಯದಲ್ಲಿ ; ಪೂರ್ವವೈರ—ಹಿಂದಿನ ಹಗೆ ; ೨೪. ಖಡ್ಗಸನ್ನಿಭಮಪ್ಪ—ಕತ್ತಿಯನ್ನು ಹೋಲುವ ; ಕಿಱುತ್ತೆತ್ತಿಕೊಂಡು—ಕಿತ್ತು ಎತ್ತಿಕೊಂಡು ; ೨೫. ವೇಷ್ಟಿಸಿದೊಡೆ—ಬಳಸಿ ಸುತ್ತಿದರೆ ; ಹಸ್ತತಳದಿಂ—ಅಂಗೈಯಿನಿಂದ ; ಪಱಿಯೆ—ಕತ್ತರಿಸಿಹೋಗುವಂತೆ ; ೨೬. ಯಷ್ಟಿ — ದೊಣ್ಣೆ, ಬಡಿಗೆ ; ೨೭. ಬಡವಾಮುಖದೊಳ್—ಬಾಡಬಾಗ್ನಿಯ ಬಾಯಲ್ಲಿ, ಎದುರಿಗೆ ; ೨೮. ನೆಗಪಿದೋನ—ಎತ್ತಿದವನ ; ಸ್ಕಂದಮಂ—ಹೆಗಲನ್ನು ; ೨೯. ಅವೃಷ್ಟಿವಜ್ರ ಘಾತಂಬೊಲಪ್ಪ—ಒರಸಿಡಿಲಿನ ಹೊಡೆತದಂತಿರುವ ;

೫೭. ೧ : ಮುದ್ರಾಪೀಡೆಯಿಂ—ಮುದ್ರೆಯ ಹೊಡೆತದ ಹಿಂಸೆಯಿಂದ ; ತ್ರಸ್ತಾಭಿಭೂತನಾಗಿ—ಹೆದರಿದವನೂ ಹೊಡೆಯಲ್ಪಟ್ಟವನೂ ಆಗಿ ; ೨. ಮಸ್ತಕದೊಳ್ ನ್ಯಸ್ತಹಸ್ತರ್ಕಳ್—ತಲೆಯಲ್ಲಿ ಕೈಯಿಟ್ಟವರಾಗಿ, ಎಂದರೆ ಕೈಮುಗಿದವರಾಗಿ ; ೫. ನಿನ್ನ ಬರವಂ—ನೀನು ಬರುವುದನ್ನು, ಬೆಸದಿಂ—ಅಪ್ಪಣೆಯಿಂದ ; ಪಾರುತ್ತಿರ್ದೆಂ—ನಿರೀಕ್ಷಿಸುತ್ತಿದ್ದೆನು ; ೧೧. ತೆಗೆಯೆಪಟ್ಟು — ತೆಗೆಯಲ್ಪಟ್ಟು, ಆಕರ್ಷಿತವಾಗಿ ; ೧೨. ಕಾಮಶರಂಗಳ್—ಮನ್ಮಥನ ಬಾಣಗಳು, ಇವು ತಪನತಾಪನ ದಹನ ವಿಮೋಹನ ಮರಣ ಸ್ವರೂಪವುಳ್ಳುವೆಂದು ಇಲ್ಲಿ ಹೇಳಿದೆ, ಹರಿಹರನು "ಓಹೋ ಉನ್ಮದ ಮದನ ಮೋಹನ ಸಂತಾಪನಂ ವಶೀಕರಣಾಸ್ತ್ರ ವ್ಯೂಹಂ" ಎಂದು ಹೇಳಿದ್ದಾನೆ, (ಗಿರಿಕಾ. ೮-೨೫) ; ೧೩. ಪರವಸೆಯರಾಗಿ-ಮೂರ್ಛಿತರಾಗಿ ; ಮಱುಗಿದ—ಕುದಿಯುತ್ತಿರುವ ; ಅಱುನೀರ-ಬತ್ತಿದ ನೀರಿನ ; ಮೀಂಗಳ್ವೊಲ್-ಮೀನುಗಳಂತೆ ; ೧೮. ಬಿಲ್ಬಲ್ಮೆ-ಬಿಲ್ಲಿನಕೌಶಲ ;

**ಶ್ಲೋಕ** ॥ ಮನ್ಮಥಸ್ಯ ಮಹಾತ್ಮನಃ—ಮಹಾತ್ಮನಾದ ಮನ್ಮಥನ, ಧನುಷಿ—ಬಿಲ್ಲಿನ ವಿದ್ಯೆಯಲ್ಲಿ, ಕೌಶಲಂ—ನೈಪುಣ್ಯವು, ಅಹೋ—ಆಶ್ಚರ್ಯ ; ಗಾತ್ರಾಣಿ—ದೇಹಗಳನ್ನು, ಅಸ್ಪೃಶನ್ನಪಿ—ಮುಟ್ಟದಿದ್ದರೂ, ಸೋಕದಿದ್ದರೂ, ಅಂತರ್ಗತಂ ಮನಃ—ಒಳಗಿರುವ ಮನಸ್ಸನ್ನು, ಭಿನತ್ತಿ—ಕತ್ತರಿಸುತ್ತಾನೆ.

೨೧. ತಣಿವಿನೆಗಂ—ತೃಪ್ತಿಯಾಗುವವರೆಗೂ ; ತುಷ್ಟಿದಾನಂಗೊಟ್ಟು—ತೃಪ್ತಿಕರವಾದ ದಾನವನ್ನುಕೊಟ್ಟು ; ೨೫. ಆಡವೇೞ್ದು—ನರ್ತನಮಾಡುವಂತೆ ಹೇಳಿ ; ೨೭. ಈದೃಗ್ವಿಧಮಪ್ಪ—ಇಂತಹ, ಈ ತೆರನಾಗಿರುವ; ೨೮. ಆರ್ಗೆ—ಯಾರು, ಯಾರಿಗೆ ಸಂಬಂಧ;

೫೮. ಕೂಸುಗಳಂ—ಕನ್ಯೆಯರನ್ನು; ಗಂಡುಮಗು, ಹೆಣ್ಣುಮಗು, ಮದುವೆಗೆ ನೆರೆದ ಹೆಣ್ಣು ಮತ್ತು ಗಂಡು, ಮಕ್ಕಳು ಎಂಬಿತ್ಯಾದಿ ಅರ್ಥಗಳು ಸಂದರ್ಭವಶದಿಂದ 'ಕೂಸು' ಶಬ್ದಕ್ಕೆ ಉಂಟಾಗುತ್ತವೆ; ೧೪. ಕೈ ನೀರೆಱೆದು—ದಾನ ಧಾರೆಯನ್ನು ಸುರಿದು; ೧೫. ಒಂದಿದಂ—ಸೇರಿದನು; ೧೮. ವಿಗುರ್ವಿಸಿ—ಮಾಯೆಯಿಂದ ನಿರ್ಮಿಸಿ, ಈ ಶಕ್ತಿಗೆ ವೈಕುರ್ವಣ ಶಕ್ತಿ ಎಂಬ ಹೆಸರುಂಟು; ೨೧. ನಿರುತಮೊ—ದಿಟವೋ ?;

ಶ್ಲೋಕ ॥ ಭವಿತವ್ಯಂ—ಆಗಬೇಕಾದದ್ದು, ಭವತ್ಯೇವ—ಆಗಿಯೇ ಆಗುತ್ತದೆ; ಕರ್ಮಣಾಂ—ಕರ್ಮಗಳ ವಿಷಯದಲ್ಲಿ, ಏಷ—ಇದು, ನಿಶ್ಚಯಃ—ನಿರ್ಣಯವು; ವಿಪತ್ತೌ—ವಿಪತ್ತಿನಲ್ಲಿ, ವಿಷಾದೇನ ಕಿಂ—ವಿಷಾದದಿಂದ ಪ್ರಯೋಜನವೇನು? ಸಂಪತ್ತೌ—ಸಂಪತ್ತಿನಲ್ಲಿ, ವಿಸ್ಮಯೇನ ಕಿಂ—ಅಚ್ಚರಿಪಡುವುದರಿಂದೇನು? ೭. ಸಂಘನ್ನಮಾಗುತ್ತಿರ್ದ್ದ—ದಟ್ಟವಾಗುತ್ತಿದ್ದ; ಪುಯ್ಯಲಿಟ್ಟಳ್—ಕೂಗಿಕೊಂಡಳು, ಮೊರೆಯಿಟ್ಟಳು;

೫೯. ೧ : ಆರಪ್ಪೊಡಂ — ಯಾರಾದರೂ; ಮನದೊನಾಗಿ—ಮನದವನಾಗಿ; ೭. ನಿವೇದಿಸಲ್ಪಟ್ಟೆಂ — ಅರ್ಪಿಸಲ್ಪಟ್ಟೆನು; ೧೨. ಏನ್ ಅಱಿವೊ—ಏನು ತಿಳಿಯುವೆಯೋ ?; ನೋೞ್ಪೆನುಂ — ನೋಡುವೆನು ಮತ್ತು, ಬರೆವೆನುಂ—ಬರೆಯುವೆನು ಮತ್ತು, ಭಾವಿಸುತ್ತಿರ್ಪೆಂ—ಭಾವಿಸುತ್ತ ಇರುವೆನು; ಇಲ್ಲಿನ ಉಂ ಸಮುಚ್ಚಯ ಪ್ರಯೋಗ ವಿಶಿಷ್ಟವಾದುದು; ೧೭. ಹರ್ಷ ರೋಮಾಂಚ ಕಂಚುಕಿತೆ ವಿಕಸಿತ ವದನೆಯಾಗಿ—ಸಂತೋಷದ ಪುಳಕವೆಂಬ ರವಿಕೆಯನ್ನುಳ್ಳವಳು,ಅರಳಿದ ಮುಖವುಳ್ಳವಳಾಗಿ; ೧೮. ಅಱಿಪ ಬಳ್ಳಿ ಕಾಲ್ತೊಡರ್ದತ್ತು—ಹುಡುಕಬೇಕಾದ ಬಳ್ಳಿ ಕಾಲಿಗೆ ತೊಡರಿಕೊಂಡಿತು, ಇದು ನಾಣ್ಣುಡಿ; ೨೪. ಕೊಲ್ವುದರಿದೆ—ಕೊಲ್ಲುವುದು ಅಸಾಧ್ಯವೆ ?; ೨೭. ಕಿತ್ತಿ ಬಾಳ್ವೆರಸಂ—ಒರೆಯಿಂದ ಸೆಳೆದ ಕತ್ತಿಯೊಡನೆ; ೨೮. ಇಱಿದಾತನ—ಹೊಡೆದವನ; ಏಱಿಂ—ಹೊಡೆತವನ್ನು; ಬಂಚಿಸಿ—ತಪ್ಪಿಸಿಕೊಂಡು; ೨೯. ತೆಗಲೆಯಂ—ಕೊರಳನ್ನು; ೩೦. ಮೇಗುಚ್ಚಳಿಸಿ—ಮೇಲಕ್ಕೆ ಚಿಮ್ಮಿ ನೆಗೆದು.

೬೦. ೯ : ಚೋರಜಾರ ಪಾದರಿಗರ್ಕಳಂ—ಕಳ್ಳರು ಜಾರರು ಹಾದರಿಗರನ್ನು; ೧೧. ಅಸಿಖೇಟಕ ಹಸ್ತೆಯಾಗಿ—ಕತ್ತಿ ಗುರಾಣಿಗಳನ್ನು ಕೈಯಲ್ಲಿ ಹಿಡಿದವಳಾಗಿ; ವಿಭೀಷಣಮಪ್ಪ—ಅತಿಭಯಂಕರವಾದ; ೧೨. ಸಾರ್ದಾಗಳ್—ಹತ್ತಿರ ಬಂದಾಗ; ಸೌಷ್ಠವದೊಳಿರ್ದೊನಂ — ಚೆಲುವಾದ ರೂಪದಲ್ಲಿದ್ದವನನ್ನು; ೧೪. ಸ್ಮರವಶ ಹೃದಯೆಯಾಗಿ—ಮನ್ಮಥನಿಗೆ ಅಧೀನವಾದ ಮನವುಳ್ಳವಳಾಗಿ; ೧೭. ನೀರಿೞಿದು—ಸ್ನಾನಮಾಡಿ, ನೀರ್ಮುಳುಗಿ; ೧೯. ಸೋದರಮುಂ—ಸಹೋದರವನ್ನುಳ್ಳವಳೂ ಎಂದರೆ ಸಹೋದರಿಯೂ; ಕಲ್ಯಾಣ ಮಿತ್ರೆಯುಂ — ಮಂಗಳಕರಳಾದ ಸ್ನೇಹಿತೆಯೂ; ೨೫. ಮಱುಮಾತುಗೊಟ್ಟೊಡೆ—ಪ್ರತಿವಚನವನ್ನು ಹೇಳಿದರೆ; ೩೦. ಕಲ್ಯಾಣದೊಳ್ ಕೂಡಿ—ಶುಭದಲ್ಲಿ ಸೇರಿ.

೬೧. ೨ : ಪಾರಾವತ ರೂಪದಿಂದ—ಪಾರಿವಾಳದ ಆಕಾರದಿಂದ; ೫. ನಿಮ್ಮ ಮೇಲೆ

ಬಕ್ಕರ್ಗಂ—ನಿಮ್ಮ ಮೇಲೆ ದಂಡೆತ್ತಿ ಬರುತ್ತಾನೆ; ೬.ಎರಲೆಗಳಂ—ಜಿಂಕೆಗಳನ್ನು; ನಿಪಾತಿಸಲ್ಕೆ— ಬೀಳಿಸುವುದಕ್ಕೆ, ಕೊಲ್ಲುವುದಕ್ಕೆ ; ೧೯. ಪಾಗುಡವಮಂ—ನಜರನ್ನು, ಖಿಲ್ಲತ್ತುಗಳನ್ನು ; ೨೫. ಆವನೊರ್ವನ್ — ಯಾವನೊಬ್ಬನು ; ೨೬. ತಱಿಸಂದ — ನಿಶ್ಚಯಿಸಿದ ; ೩೦. ಎಮ್ಮಮ್ಮನ ಬೆಸದಿಂ—ನಮ್ಮಪ್ಪನ ಅಪ್ಪಣೆಯಿಂದ ; ಓಲಗಿಸಲ್—ನೋಡಲು, ಸೇವೆಮಾಡಲು, ಅವಲೋಕನ + ಇಸು > ಓಲಗಿಸು ; ೩೧. ಬಱಿಯನೆ—ಹಿಂದೆಯೇ ;

೬೨. ೩ : ಮೇಲೆತ್ತಿಂದನಂ—ಮೇಲೆ ದಾಳಿಯಿಟ್ಟು ಬಂದವನನ್ನು ; ೫. ಆನೆ ಸಾಲ್ವೆಂ—ನಾನೇ ಸಾಕಾಗುತ್ತೇನೆ ಎಂದರೆ ನಾನೇ ಸಮರ್ಥನಾಗಿರುವೆನು ; ೭. ಪಿಂಛಾತಪತ್ರ—ನವಿಲುಗರಿಯಿಂದ ಮಾಡಿದ ಕೊಡೆ, “ಸಸೌವರ್ಣ ಕಲಾಪಸ್ಥ ಚಂದ್ರಕೈಃ ಪರಿಕಲ್ಪಿತಂ || ಸುವರ್ಣದಂತಿ ದಂಡೇನ ರತ್ನೇನ ಪರಿಮಂಡಿತಂ | ಕಲಶೇನ ತದುತ್ಥೇನ ಶುಭ್ರೇಣ ಪರಿಶೋಭಿತಂ || ಪಿಂಛ ಛತ್ರಮಿದಂ ಪ್ರಾಹುಃ” ; ಪಾಳಿಧ್ವಜ—ಒಂದು ಬಗೆಯ ಬಾವುಟ ವ್ಯೂಹ ; ಹಾರ, ವಸ್ತ್ರ, ನವಿಲು, ಕಮಲ, ಹಂಸೆ, ವಿಮಾನ, ಸಿಂಹ, ವೃಷಭ, ಆನೆ, ಚಕ್ರ—ಈ ಲಾಂಛನಗಳನ್ನುಳ್ಳ ಬಾವುಟಗಳು ; ೧೦ ಸಾಲುಗಳು ನಾಲ್ಕು ಕಡೆಗೆ ಚೌಕಾಕಾರದಲ್ಲಿರುತ್ತವೆ, ಪ್ರತಿ ಸಾಲಿನಲ್ಲಿ ಒಂದೊಂದು ಬಗೆಯ ಲಾಂಛನದ ೧೦೮ ಧ್ವಜಗಳಿರುತ್ತವೆ, ಒಂದು ಕಡೆಗೆ ಒಟ್ಟು ೧೦೮೦ ಬಾವುಟಗಳು, ೪ ಕಡೆಗಳಲ್ಲಿ ಒಟ್ಟು ೪೩೨೦ ಧ್ವಜಗಳು ಇರುತ್ತವೆ,—ಈ ರಚನೆಗೆ ಪಾಲಿಧ್ವಜ, ಪಾಳಿಕೇತನ ಎಂದು ಹೆಸರು ; (I. A. XIV) ೧೧. ಬಾಣಾಸನ ಹಸ್ತನಾಗಿ—ಬಿಲ್ಲನ್ನು ಕೈಯಲ್ಲುಳ್ಳವನಾಗಿ ; ಸರದಿಂದೆ—ಬಾಣದಿಂದ, (ಸಂ) ಶರ ; ೧೨. ಮೊಕ್ಕನೆವೋಗೆ—ಮೊಕ್ಕೆಂದು ಕತ್ತರಿಸಿಹೋಗುವಂತೆ ; ೧೩. ವಿದ್ಯುತ್ಕಪಾಲಂಬೊಲ್—ಮಿಂಚಿನ ತಲೆ ಬುರುಡೆಯಂತೆ ; ಮಱುವಕ್ಕದವರ್ — ಪ್ರತಿಪಕ್ಷದವರು, ಶತ್ರುಪಕ್ಷದವರು ; ೧೪. ಪುಲ್ಲಂ ಕರ್ಚಿ—ಹುಲ್ಲನ್ನು ಬಾಯಲ್ಲಿ ಕಚ್ಚಿಕೊಂಡು, ಇದು ಶರಣಾಗುವುದರ ಸಂಕೇತ ; ೨೪. ಸಿಷ್ಧಕೂಟಕ್ಕೆ—ಸಿದ್ಧರಿರುವ ಪರ್ವತ ಶಿಖರಕ್ಕೆ ;

೬೩. ೩ : ಸಾರ್ಥಾಧಿಪತಿ — ಸಾರ್ಥಕ್ಕೆ ಒಡೆಯ, ಸಾರ್ಥ — ಊರಿಂದೂರಿಗೆ ಹೋಗಿ ಸರಕುಗಳನ್ನು ಮಾರುವವರ ಶ್ರೇಣಿ ; ೧೬. ಭೀಭತ್ಸಮಂ—ಅಸಹ್ಯಕರವನ್ನು ; ಜುಗುಪ್ಸೆಯನ್ನು ; ೨೦. ಪ್ರಾಣತ ಕಲ್ಪದೊಳ್ — ಪ್ರಾಣತವೆಂಬ ಸ್ವರ್ಗದಲ್ಲಿ ; ೨೭. ನೆಱೆದೊನಾಗಿ—ತುಂಬಿದವನಾಗಿ, ಏನಾನುಮೊಂದು—ಏನಾದರೂ ಒಂದು ;

೬೪. ೩ : ಶ್ರಾವಕಧರ್ಮದೊಳ್—ಜೈನ ಗೃಹಸ್ಥನ ಧರ್ಮದಲ್ಲಿ ; ಅಗ್ಗಳನಾಗಿ—ಶ್ರೇಷ್ಠನಾಗಿ ; ೪. ನೆಗಟುತ್ತಂ—ಮಾಡುತ್ತ, ಆಚರಿಸುತ್ತ ; ೮. ಪಾರ್ವಂತಿಗಂ—ಬ್ರಾಹ್ಮಣಸ್ತ್ರೀಗೂ ; ೯. ಪರಿವ್ರಾಜಕಂಗೆ—ಸಂನ್ಯಾಸಿಗೆ ; ೧೪. ಮಱುಗುತ್ತಿರ್ದ ಮನಮನೊಡೆಯ—ಕುದಿಯುತ್ತಿರುವ ಮನಸ್ಸುಳ್ಳ (ಕೋಪದಿಂದ) ; ೧೫. ಪಾರಿಸಲ್ವೇಳ್ಪುದು—ಪಾರಣೆಮಾಡಬೇಕು, ಊಟಮಾಡಬೇಕು ; ೧೬. ಒಂದು ಪಾಂಗಿನೊಳ್—ಒಂದು ರೀತಿಯಲ್ಲಿ ; ೧೭. ತಳಿಗೆಯೊಳ್—(ಊಟದ) ತಟ್ಟೆಯಲ್ಲಿ, ತುಯ್ಯಲಂ—

ಪಾಯಸವನ್ನು ; ೧೮. ಎನಗೆ ಅಲ್ತಿ—ನನಗೆ ಇಷ್ಟ, ಪ್ರೀತಿ ; ಊಡಲಾರ್ಪೊಡೆ—ಊಟಮಾಡಿಸಲು ಸಮರ್ಥನಾದರೆ ; ೧೯. ಅಚ್ಚಿಗನಾದ—ದುಃಖಿತನಾದ, ವ್ಯಥಿತನಾದ ; ೨೧. ಪರಿಯಾಣಮಂ—ತಟ್ಟೆಯನ್ನು ; ತೆಕ್ಕನೆ ತೀವಿ—ಭರ್ತಿಯಾಗಿ ತುಂಬಿ ; ೨೨. ಪಾರುತ್ತಿರ್ದು—ನಿರೀಕ್ಷಿಸುತ್ತಿದ್ದು ; ೨೩. ಸಮೆದ ಬೞಿಕ್ಕೆ—ಮುಗಿದ ಅನಂತರ ; ೨೮. ತೊವಲ್—ಚರ್ಮ ; ೩೦. ಪುಣ್ ತೀರ್ವನ್ನೆಗಂ—ಹುಣ್ಣು ಮಾಯುವವರೆಗೂ ; ಕೈಯನೆತ್ತಿಕೊಳ್ಳೆಂ—ಇಳಿಬಿಟ್ಟ ಕೈಯನ್ನು ಮೇಲಕ್ಕೆ ಎತ್ತೆನು ;

೬೫. ೧ : ಗೃಧ್ರವಾಯಸಾದಿಗಳ್—ಹದ್ದು ಕಾಗೆಗಳೂ ; ೬. ಅಲ್ಲಿಂ ಬೞ್ಚಿ ಬಂದು—ಅಲ್ಲಿಂದ ಕೆಳಕ್ಕೆ ಜಾರಿ ಬಂದು ; ೧೯. ಮಾವಂಗಳಂ ಬಿಡಿಸಿ—ಮಾವನನ್ನು ಆಗಲಲು ಅಪ್ಪಣೆ ಅಥವಾ ಅನುಮತಿಯನ್ನು ಪಡೆದುಕೊಂಡು ; ೨೦. ಅಧಿರೂಢರ್ಕಳಪ್ಪ—ಹತ್ತಿದವರಾದ ; ೨೨. ಮಹಾ ವಿಭೂತಿಯಿಂದಂ—ಮಹಾ ವೈಭವದಿಂದ ; ಚಕ್ರಂಪುಟ್ಟೆ—ಚಕ್ರವು ಆಯುಧಾಗಾರದಲ್ಲಿ ಹುಟ್ಟೆ ; ೨೮. ಪರಿವೇಷ್ಟಿತನಾಗಿ—ಬಳಸಿದವನಾಗಿ ;

೬೬. ೧. ಸಹೋತ್ಪನ್ನ—ಸಂಗಡ ಹುಟ್ಟಿದ; ಅವಯವದಿಂ—ಶ್ರಮವಿಲ್ಲದೆ, ಸುಲಭವಾಗಿ ; ೮. ಒರ್ಮೊದಲೆ—ಒಂದೇ ಸಲದಲ್ಲಿ, ಏಕಕಾಲದಲ್ಲಿ ; ೧೫. ತಗುಳ್ದೊಡೆ—ಅನುಸರಿಸಿದರೆ, ಒತ್ತಾಯಪಡಿಸಿದರೆ ; ೨೨. ಒಳನ್—ಉಂಟು, ಇರುವನು ; ೨೮. ಆದಮಾನುಮಗ್ಗಳಂ—ಅತ್ಯತಿಶಯವಾಗಿ ಶ್ರೇಷ್ಠನಾದವನು ; ೨೬. ಪಡಿಯಱರಂ—ದ್ವಾರಪಾಲಕರನ್ನು ; ೨೮. ಗೆಂಟೞಿಂ — ದೂರದಿಂದ ; ಅಲ್ತಿವಟ್ಟು — ಪ್ರೀತಿಪಟ್ಟು, ಸಂತೋಷಿಸಿ ; ೩೦. ಸಾರೆವೋಗಿ—ಹತ್ತಿರ ಹೋಗಿ ;

೬೭. ೧ : ಅಭ್ಯಂಗನಂಗೆಯ್ದು—ಬಳಿದು, ಲೇಪಿಸಿ ; ಮಜ್ಜನಂ ಬುಗಲೆಂದಿರ್ದ—ಮಿಾಯಲೆಂದು ಸಿದ್ಧವಾಗಿದ್ದ ; ಅವಸರದೊಳ್—ಸಮಯದಲ್ಲಿ ; ೨. ವಾಳಾಗ್ರದಿಂ ತೊಟ್ಟುನಖಾಗ್ರಂ ಬರೆಗಂ—ತಲೆಯ ಕೂದಲ ತುದಿಯಿಂದ ಕಾಲ ಹೆಬ್ಬೆರಳಿನ ಉಗುರಿನ ತುದಿಯವರೆಗೂ ; ನಖಾಗ್ರದಿಂ ತೊಟ್ಟು ವಾಳಾಗ್ರಂ ಬರೆಗಂ—ಉಗುರು ತುದಿಯಿಂದು ಹಿಡಿದು ತಲೆಗೂದಲ ತುದಿಯವರೆಗೂ ಎಂದರೆ ಆಪಾದಮಸ್ತಕ ಪರ್ಯಂತ ; ೩. ಏಱೆಯುಮಿೞಿಯೆಯುಂ—ಏರುವಂತೆ ಇಳಿಯುವಂತೆ, ನೋಡುವ ಕಣ್ಣು ತಲೆಯನ್ನು ನೋಡುವಾಗ ಏರುತ್ತದೆ, ಕಾಲನ್ನು ನೋಡುವಾಗ ಇಳಿಯುತ್ತದೆ ; "ಅರಸನವನನೇಱೆಯುಮಿೞಿಯೆಯುಂ ನೋಡಿ ನೀಡುಂ ನಿರವಿಸಿ ನಿಜಾಂತರ್ಗತದೊಳ್" (ಅರ್ಜುನೇ. ೬-೬೭ವ) ಎಂದು ಪ್ರಯೋಗವುಂಟು ; ೧೨. ಕಿಱಿದು ಬೇಗಂ ಮಾಣಿಂ—ಸ್ವಲ್ಪಹೊತ್ತು ನಿಲ್ಲಿರಿ, ತಡೆಯಿರಿ ; ೧೩. ಪಸದನಂಗೊಂಡಿರ್ದ—ಒಡವೆಗಳಿಂದಲಂಕರಿಸಿಕೊಂಡ ; ೧೮. ಬೞಿಯಟ್ಟೆ—ದೂತರೊಡನೆ ಹೇಳಿ ಕಳುಹಿಸಿ ;

ಶ್ಲೋಕ ॥ ಅನೇಕ ರಾಗ ಸಂಕೀರ್ಣಂಅಪಿ—ಹಲವು ಬಣ್ಣಗಳಿಂದ ತುಂಬಿದ್ದರೂ, ಘನಲಗ್ನಮಪಿ—ಮೋಡಕ್ಕೆ ಅಂಟಿಕೊಂಡಿದ್ದರೂ, ಇಂದ್ರಧನುಃ—ಮಳೆ ಬಿಲ್ಲು, ಕಾಮನ ಬಿಲ್ಲು, ಯಥಾ—ಹೇಗೆ, ನಶ್ಯತಿ—ನಾಶವಾಗುವುದೋ [ತಥಾ—ಹಾಗೆ], ಕಷ್ಟಂ—

ಕ್ಲೇಶಕರವಾದ, ಮಾನುಷಂ ಯೌವನಂ—ಮನುಷ್ಯರ ಪ್ರಾಯವು, [ನಶ್ಯತಿ—ನಾಶವಾಗುತ್ತದೆ];

೨೩. ಗಾಡಿಯುಂ—ಸೌಂದರ್ಯವೂ ; ೨೬. ತೊಟ್ಟು—ಪ್ರಾರಂಭವಾಗಿ, ಮೊದಲಾಗಿ ;
೨೮. ಯೌವನಭರದೊಳ್—ಪ್ರಾಯದ ಆಧಿಕ್ಯದಲ್ಲಿ, ಅತಿಶಯದಲ್ಲಿ ;

೬೮. ೨ : ಕಿಱಿದು ಕುಂದಿದುದುಮಂ—ಕೊಂಚ ಕಡಿಮೆಯಾಗಿರುವುದನ್ನು ; ೪. ದೋಣಿ ಕೊಂಡಮಂ—ದ್ರೋಣಿ ಕುಂಡವನ್ನು, ದೊನ್ನೆಯಾಕಾರದ ಹರವಿಯನ್ನು, ಮಡಕೆಯನ್ನು ; ೫. ಚಮರಿಯಂ ಅರ್ದಿ—ಚಾಮರವನ್ನು ಅದ್ದಿ ; ೬. ಪನಿತುದುಮಂ ಹನಿ ಬಿದ್ದುದನ್ನು ; ೭. ತಗುಳ್ದು—ಅಂಟಿಕೊಂಡು ; ಬಿಯಮಾದ—ವ್ಯಯವಾದ, ನಷ್ಟವಾದ ; ೧೦. ಆ ವೀಚಿಮರಣಮಂ—ಅಲೆಯ ಸಾವನ್ನು ಎಂದರೆ ಕ್ಷಿಪ್ರ ಮರಣವನ್ನು ; ೧೩. ನಿರ್ವೇಗಕ್ಕೆ—ವಿರಕ್ತಿಗೆ ;

ವೃ || ರೂಪಂ — ರೂಪವೂ, ಯೌವನಂ—ಪ್ರಾಯವೂ, ಆಯುಃ—ಆಯುಸ್ಸೂ, ಅಕ್ಷವಿಷಯಾ—ಇಂದ್ರಿಯಗಳಿಗೆ ಕಾಣುವ ಪದಾರ್ಥಗಳೂ, ಭೋಗೋಪ ಭೋಗಾಃ—ಸುಖಾನುಭವಗಳೂ, ವಪುಃ—ದೇಹವೂ, ವೀರ್ಯಂ—ಶಕ್ತಿಯೂ, ಸ್ವೇಷ್ಟ ಸಮಾಗಮಃ—ಇಷ್ಟ ಜನರ ಸಹವಾಸವೂ, ವಸುಮತೀ—ನೆಲವೂ ಎಂದರೆ ರಾಜ್ಯವೂ, ಸೌಭಾಗ್ಯ ಭಾಗ್ಯಾದಯಃ—ಸೊಬಗು ಐಶ್ವರ್ಯಗಳೂ, ನಃ—ನಮಗೆ, ಅನಿತ್ಯಾಃ—ಅಶಾಶ್ವತವಾದವುಗಳು, ಇತಿ—ಹೀಗೆಂದು, ಶೇಷಾ—ಉಳಿದ, ಸರ್ವೇ ಸುಧಿಯಃ—ಸಮಸ್ತ ಬುದ್ಧಿವಂತರೂ, ಜ್ಞಾನಿಗಳೂ, ಆತ್ಮನಃ ಸಮುದಿತ ಜ್ಞಾನೇಕ್ಷಣಾಭ್ಯಾಂ—ತಮ್ಮಲ್ಲಿ ಚೆನ್ನಾಗಿ ಉದಿಸಿದ ಜ್ಞಾನವೆಂಬ ನೇತ್ರಗಳಿಂದ, ಋತೇ—ಹೊರತಾಗಿ, ಅನಿತ್ಯತಾಂ—ಅಶಾಶ್ವತತೆಯನ್ನು, ಸ್ಫುಟಂ—ಸ್ಪಷ್ಟವಾಗಿ, ಅನುಚಿಂತಯಂತು—ಚೆನ್ನಾಗಿ ಧ್ಯಾನಿಸಲಿ.

ಶ್ಲೋಕ॥ ಆದೌ—ಮೊದಲಿನಲ್ಲಿ, ಜನ್ಮ—ಹುಟ್ಟುವುದೂ, ಮಧ್ಯೇ—ನಡುವೆ, ಜರಾರೋಗೌ—ಮುಪ್ಪು ಮತ್ತು ರೋಗಗಳು, ಅಂತೇಪಿ—ಕೊನೆಯಲ್ಲೂ, ಖಳಾಂತಕಃ—ದುಷ್ಟನಾದ ಯಮನು, ಮೃತ್ಯುವು, ಇತಿ—ಹೀಗೆ, ಭವಾರ್ಣವಂ—ಹುಟ್ಟು ಸಾವುಗಳೆಂಬ ಪರಂಪರೆಯ ಸಮುದ್ರ, ಜಂತೋಃ ಮಧ್ಯೇ—ಪ್ರಾಣಿಗಳ ಮಧ್ಯದಲ್ಲಿ, ಚಕ್ರೈಕ ಸಂಭ್ರಾಂತಿಃ—ಚಕ್ರಾಕಾರದಲ್ಲಿ ತಿರುಗುತ್ತಿರುವುದಾಗಿದೆ.

೨೩. ಮಕುಟ ಬದ್ಧರ್ಕಳ್—ಕಿರೀಟಧಾರಿಗಳು, ರಾಜರು ; ೨೫. ಬಡಬಿರ್ದಿ—ದರಿದ್ರಳಾದ ಮುದುಕಿ ; ನಿಱಿಸಿ—ಪಾರಣೆಗಾಗಿ ನಿಲ್ಲಿಸಿ ; ೨೬. ಪಾರಕಿನ ಕೂಬುಮಂ—ಹಾರಕದಕ್ಕಿಯ ಅನ್ನವನ್ನೂ ; ಆಡಿನಳೆಯುಮಂ—ಆಡಿನ ಮಜ್ಜಿಗೆಯನ್ನೂ ; ಬಡ್ಡಿಸಿದೊಡೆ—ಬಡಿಸಿದರೆ; ಪಚ್ಚಕ್ಖಾಣಂ = (ಸಂ) ಪ್ರತ್ಯಾಖ್ಯಾನಂ—ಆಹಾರ ನಿವೃತ್ತಿಯ ಪ್ರತಿಜ್ಞೆಯನ್ನು, ಕೊಂಡರ್—ಸ್ವೀಕರಿಸಿದರು ; ಆ ಕಾಲದಿಂ ತೊಟ್ಟು—ಆ ಕಾಲದಿಂದಾರಂಭಿಸಿ ; ೨೮. ಕಚ್ಚು—ಕಜ್ಜಿ, ಜರ—ಜ್ವರ, ಖಾಸ—ಕೆಮ್ಮು, ಸಾಸೋ—ಉಸಿರೆಳೆಯುವುದು, ಭತ್ತಚ್ಛದಿ—ಅತಿಸಾರ, ಅಚ್ಛಿಕುಚ್ಛಿ ದುಃಖಾಣಿ—ಕಣ್ಣುಗಳ, ಹೊಟ್ಟೆಯ ಬೇನೆಗಳು ;

೭೯. ೫: ಪ್ರತೀಕಾರಮಂ—ಚಿಕಿತ್ಸೆಯನ್ನು, ಪರಿಹಾರೋಪಾಯಗಳನ್ನು ; ೧೧. ಆಸ್ಫೋಟಕ—ಬೊಬ್ಬೆ, ಹುಗುಳು, ಬಾವು ; ಪಿಟಕಂ—ಹೊಪ್ಪಳೆ ; ಶೂಲ—ಶೂಲೆ, ನೋವು ; ಭಗಂದರ—ಮೂಲವ್ಯಾಧಿ ; ೧೨. ಗಂಡ—ಗಂಡಾಮಾಲೆ ; ಒರ್ಮೊದಲೆ—ಏಕಕಾಲದಲ್ಲೆ ; ೧೩. ಋದ್ಧಿಸಂಪನ್ನರಾಗಿಯುಂ—ಸಿದ್ಧಿಗಳ ಸಂಪತ್ತುಳ್ಳವರಾಗಿಯೂ, ೧೬. ಮರ್ದುಗಳಂ—ಔಷಧಿಗಳನ್ನು, ಮದ್ದುಗಳನ್ನು, (ತಮಿಳು) ಮರುಂದು ; ಪಸುಂಬೆಯೊಳ್—ಹಸುಬೆ ಚೀಲದಲ್ಲಿ ; ತೆಕ್ಕನೆ ತೀವಿ—ಭರ್ತಿಯಾಗಿ ತುಂಬಿ ; ೧೭. ಸಾರೆವಂದು—ಹತ್ತಿರ ಬಂದು ; ಕುತ್ತಂಗಳಿಲ್ಲಮಂ—ರೋಗಗಳಿಲ್ಲವನ್ನೂ ; ೧೮. ನೆಱೆವುವು—ಸಮರ್ಥರಾಗಿರುವೆವು ; ೨೧. ಕುಶಲರೆನುಂ—ನಿಪುಣರಾಗಿದ್ದೇವೆ ಮತ್ತು, ಕುಶಲರ್ + ಎಂ + ಉಂ ; ೨೨. ಕರ್ಮಜ್ಞರೆಮುಂ—ಕಾರ್ಯವನ್ನು ಬಲ್ಲವರಾಗಿದ್ದೇವೆ, ಮತ್ತು ; ೨೪. ನೀರೋಗಮಪ್ಪಂತಿರೆ—ರೋಗರಹಿತರಾಗುವಂತೆ ; ೨೫. ಉಗುಬಿ ಸೀಕರಂಗಳ್—ಉಗುಳಿನ ತುಂತುರು ಹನಿಗಳು ; ೨೬. ಸೀಂಟಿ—ಒರಸಿ, ತೊಡೆದು ; ಆ ಎಡೆ—ಆ ಜಾಗವು, ಸ್ಥಳವು ; ಸುವರ್ಣಾಯಮಾನಮಾಗಿ—ಚಿನ್ನದ ಬಣ್ಣದಂತಾಗಿ ; ೨೮. ಬಾೞಿತ್ತೆಯಪ್ಪೊಡೆ—ಪ್ರಯೋಜನವಾಗುವುದಾದರೆ ; ೨೯. ಬಾೞಿತ್ತೆಯಲ್ತು — ಪ್ರಯೋಜನವಿಲ್ಲ ; ಜಾತಿ ಜರಾಮರಣಂಗಳೆಂಬ—ಹುಟ್ಟು ಮುಪ್ಪು ಸಾವುಗಳೆನ್ನುವ ; ಕುತ್ತಮಂ—ರೋಗವನ್ನು ;

೭೦. ೧: ಒಡಂಬಡುವೆಮಲ್ಲೆಂ—ನಾವು ಒಪ್ಪುವವರಲ್ಲ ; ೨. ಆಂ ಆಱೆಂ—ನಾವು ಸಮರ್ಥರಲ್ಲ ; ಸಮರ್ಥರಿರ್—ಶಕ್ತಿವಂತರಾಗಿರುವಿರಿ ; ೫. ನೆಗೞ್ವ ನೆಗೞ್ತಿಯುಮಂ—ಮಾಡುವ ಕೆಲಸವನ್ನೂ ; ೭. ಸೌಧರ್ಮೇಂದ್ರನ ಪೊಗೞ್ದುದು—ಸೌಧರ್ಮ ಸ್ವರ್ಗದ ಇಂದ್ರನು ಹೊಗಳಿದ್ದು ; ಗುಣಂಗೊಂಡು—ಗುಣಗ್ರಹಣಮಾಡಿ ; ೭. ಮಗುೞ್ದು—ಸಂತೋಷಿಸಿ, (ತಮಿಳು) ಮಗಿೞ್ ; ಪೞವಾವಿಯೊಳ್—ಹಳೆಯ ಬಾವಿಯಲ್ಲಿ ; ೧೦. ಮಿಂದೊರ್ಗೆಲ್ಲಂ — ಸ್ನಾನಮಾಡಿದವರಿಗೆಲ್ಲಾ ; ೧೮. ಪಂಚನಮಸ್ಕಾರಮಂ—ಅರ್ಹಂತ, ಸಿದ್ಧ, ಆಚಾರ್ಯ, ಸಾಧು, ಉಪಾಧ್ಯಾಯ ಈ ಐವರಿಗೆ ನಮಸ್ಕಾರವನ್ನು ; ೧೯. ಅಪವರ್ಗ—ಮೋಕ್ಷ.

## ೫. ಅಣ್ಣಿಕಾಪುತ್ರನ ಕಥೆ

೭೧. ೮: ಕಾಲಂಗೆಯ್ದೊನಾಗಿ—ಸತ್ತವನಾಗಿ ;

೧೪. ಸಾರ್ಥಾಧಿಪತಿ—ಸರಕಿನಬಂಡಿಗಳ ಶ್ರೇಣಿಗೆ ಒಡೆಯ ; ಪರದಂ—ವರ್ತಕ ; ೧೭. ಪರದಿಂಗೆಂದು—ವ್ಯಾಪಾರಕ್ಕೆಂದು ; ಪಿರಿದುಂ ಸಾರಮಪ್ಪ—ಅಧಿಕ ಬೆಲೆಯುಳ್ಳ ; ಭಂಡಮಂ—ಸರಕುಗಳನ್ನು ; ತೀವಿಕೊಂಡು — ತುಂಬಿಕೊಂಡು ; ೨೫. ಪೆಱದಂ—ಬೇರೆ ಇತರ ಸರಕುಗಳನ್ನು ; ತಮ್ಮನಾಡಿಕೆ—ತಮ್ಮ ನಾಡಿಗೆ ;

೭೨. ತಾಯುಂ ತಂದೆಯುಮಂ = ತಾಯುಮಂ ತಂದೆಯುಮಂ, ಹಲವು ಪದಗಳು ಕೂಡಿ ಬಂದಾಗ ಒಂದಕ್ಕೆ ಸಮುಚ್ಚಯವಿದ್ದರೂ ಅದನ್ನು ಎಲ್ಲಾ ಪದಗಳಿಗೂ

ಅನ್ವಯಿಸಕೊಳ್ಳಬೇಕು; (ಶಮದ ೧೫೬); ೧೪. ಉತ್ಪಾತವಾತದಿಂದಂ—ವಿಪತ್ಕಾರಕವಾದ ಬಿರುಗಾಳಿಯಿಂದ; ೧೫. ತೆರೆಯನೊಡೆಯುದಱೊಳ್—ಅಲೆಗಳನ್ನುಳ್ಳುದ್ದರಲ್ಲಿ; ೧೬. ಮೋಹಿಸದ ಬುದ್ಧಿಯನೊಡೆಯೊಂ—ಲೋಭಕ್ಕೆ ವಶವಾಗದ ಬುದ್ಧಿಯುಳ್ಳವನಾಗಿ;

## ೬. ಭದ್ರಬಾಹು ಭಟ್ಟಾರರ ಕಥೆ

೭೩. ೭: ಕಡಿದಪ್ಪ—ತೀವ್ರವಾದ;

೧೫. ಶ್ರೀಯಾದೇವತೆಯನೆ—ಲಕ್ಷ್ಮಿಯನ್ನೇ; ೧೯. ಮುಂಜಿಗಟ್ಟುವ—ಮುಂಜ ಎಂಬ ಹುಲ್ಲನ್ನು ಸೊಂಟಕ್ಕೆ ಕಟ್ಟುವ ಎಂದರೆ ಉಪನಯನವನ್ನು ಮಾಡುವ; ೨೧. ಓರಗೆಗಳಪ್ಪ—ಸಂಗಡಿಗರಾದ; ಮಾಣಿಗಳ್ವೆರಸು—ಹುಡುಗರೊಡನೆ ಕೂಡಿ, ಬ್ರಹ್ಮಚಾರಿಗಳೊಡನೆ; ೨೨. ಪೊಱವೊಟಲ್—ಪಟ್ಟಣದ ಹೊರಭಾಗದಲ್ಲಿ; ಬಟ್ಟಾಡುತ್ತಿರೆ—ಬಿಲ್ಲೆಯಾಟವನ್ನು ಆಡುತ್ತಿರಲು, (ಸಂ) ವೃತ್ತ>ಬಟ್ಟು—ಗುಂಡಗಿರುವ ಬಿಲ್ಲೆ; ೨೩. ಓಳಿಯೊಳಿಟ್ಟು—ಸಾಲಾಗಿ, ಎಂದರೆ ಒಂದರಮೇಲೊಂದನ್ನು ಇಟ್ಟು; ೨೪. ಚತುರ್ದಶ ಪೂರ್ವಧಾರಿಗಳ್—ಜೈನಾಗಮದ ೧೪ ಪೂರ್ವ ಗ್ರಂಥಗಳನ್ನು ಧರಿಸಿದವರು ಎಂದರೆ ಬಲ್ಲವರು; ಶ್ರುತ ಕೇವಲಿಗಳ್—ಜೈನಾಗಮದ ಪರಿಪೂರ್ಣ ಜ್ಞಾನವುಳ್ಳವರು; ೨೫. ಉಜ್ಜಯಂತಮಂ—ಉಜ್ಜಯಂತವೆಂಬ ಪರ್ವತವನ್ನು;

೭೪. ೩: ಪಿರಿದು ಬೇಗಂ—ಬಹಳಹೊತ್ತು; ಉದ್ದೇಶಂಗೆಯ್ದೊರ್—ತಮ್ಮ ಮನಸ್ಸಿನಲ್ಲಿ ಹೇಳಿಕೊಂಡರು; ೪. ಎಮ್ಮಿಂಬೞಿಕ್ಕೆ—ನಾವಾದ ಅನಂತರ; ೭. ಕಲ್ಪಿಸಿ—ಕಲಿಸಿ, ಓದಿಸಿ; ೧೩. ಕುಡಲಾಗ—ಕೊಡಲಾಗದು, ಆಗದು ಎಂಬುದರ ಆದಿಷ್ಟ ರೂಪ ಆಗ; ಪಂಡಿತಿಕ್ಕೆಯುಮಂ—ಪಾಂಡಿತ್ಯವನ್ನೂ, ಪಂಡಿತ+ಇಕ್ಕೆ; ೧೪. ನೆಗೞ್ಚಿ—ಪ್ರಕಟಿಸಿ, ತೋರಿಸಿ; ನೆಗೞ್ದ—ಪ್ರಸಿದ್ಧರಾದ; ೨೧. ಕುಮಾರ ಬ್ರಹ್ಮಚಾರಿಯಾಗಿ—ಬಾಲಬ್ರಹ್ಮಚಾರಿಯಾಗಿ; ೨೪. ಪಾರಾವಾರಗನಾಗಿ—ಪ್ರವೀಣನಾಗಿ; ಶ್ರುತದೊಳಪ್ಪ — ಶಾಸ್ತ್ರಗಳ ಮೇಲಿರುವ; ೨೫. ಪ್ರತಿಮಾಯೋಗಂ — ಪ್ರತಿಮೆಯಂತೆ ತಪಸ್ಸಿನಲ್ಲಿ ನಿಲ್ಲುವ ಭಂಗಿ;

೭೫. ಕಡೆಯಾರಿಸಿ—ಜಂಬೂಸ್ವಾಮಿಯ ಅನಂತರ ಬಂದ ಐವರು ಶ್ರುತಕೇವಲಿಗಳಲ್ಲಿ ನಾಲ್ಕನೆಯವರು ಗೋವರ್ಧನ, ಅವರ ಶಿಷ್ಯ ಭದ್ರಬಾಹು ಐದನೆಯವನು ಮತ್ತು ಕೊನೆಯವನು, ಆದ್ದರಿಂದ ಭದ್ರಬಾಹು ಕೊನೆಯ ಮುನಿ. ೨. ಪಲವುಂ ಋದ್ಧಿಗಳಿಂ—ಹಲವು ಅದ್ಭುತವಾದ ಸಿದ್ಧಿಗಳಿಂದ; ೯. ಕೞಿದೊಡೆ—ಸತ್ತುಹೋದರೆ; ೧೦. ಕೞಿದ ಬೞಿಕ್ಕೆ—ಸತ್ತ ತರುವಾಯ; ೧೪. ತಳವಱಾದಿಗಳ್ಗೆ—ನಗರ ರಕ್ಷಕರಿಗೆ; ೧೫. ಕಟಿಮೆಯ ಕೂೞುಂ—ಶಾಲ್ಯನ್ನವೂ; ತೊವೆಯುಮಂ—ತೊವ್ವೆಯನ್ನೂ, "ಪಟಿಗಟಿವೆಯ ಕೂೞ್ ತಿಗುಡುಗಳೆದ ತೊವರಿಯ ತೊವೆ" ಎಂದು ಪ್ರಯೋಗಾಂತರವುಂಟು; ೧೬. ವಾಚಕಂ—ಓದುವವನು; ೧೭. ವಿಪರೀತವಾಗಿ-ವ್ಯತಿರಿಕ್ತವಾಗಿ;

ವ್ಯತ್ಯಸ್ತವಾಗಿ; ಬಾಚಿಸಿದಂ—ಓದಿದನು; ೧೮. ಉಪಾಧ್ಯಾಯಂ (ಉಪಾಧ್ಯಾಯಾಯ)—ಉಪಾಧ್ಯಾಯನಿಗೆ, ಶಾಲಿಕೂರಂ ಮಶಿಂ ಚ—ಶಾಲ್ಯನ್ನವನ್ನೂ ಮಸಿಯನ್ನೂ, ಘೃತಂ ಚ—ತುಪ್ಪವನ್ನೂ, ದತ್ವಾ—ಕೊಟ್ಟು, ಕುಮಾರಂ—ರಾಜಕುಮಾರನನ್ನು, ಅಂಧಾಪಯೇತ್—ಕುರುಡನನ್ನಾಗಿ ಮಾಡಬೇಕು, ಇಲ್ಲಿ ಕೂರಂ > ಕೂಳ್; ಅಧ್ಯಾಪಯೇತ್—ಓದಿಸಬೇಕು ಎಂಬುದಕ್ಕೆ ಬದಲಾಗಿ ಅಂಧಾಪಯೇತ್ ಎಂದು ವಾಚಕನು ಓದಿದನು; ೨೩. ಉಬ್ಬೆಗಂ ಬಟ್ಟು—ವ್ಯಥೆಯನ್ನು ಹೊಂದಿ; ೨೭. ಕಾಕಿಣೀ ರತ್ನಮಂ—ಕಾಕಿಣಿ ಎಂಬ ರತ್ನವನ್ನು, ಇದು ಚಕ್ರವರ್ತಿಯ ಆಯುಧಾಗಾರದಲ್ಲಿ ಹುಟ್ಟುತ್ತದೆ, ಭರತಚಕ್ರವರ್ತಿಯ ಈ ರತ್ನವನ್ನು "ನಿರಸನ ಪ್ರಭಾಪ್ರಭೂತ ಗುಣೋಪೇತಮಪ್ಪ ಚಿಂತಾಜನನಿಯೆಂಬ ಕಾಕಿಣೀ ರತ್ನಮುಂ" ಎಂದು ಪಂಪ ಹೇಳಿದ್ದಾನೆ.

**೭೬. ೩:** ಭವಾಂತರಂಗಳಂ—ಜನ್ಮಾಂತರಗಳನ್ನು; ೮. ಶಾಕಟಿಕಂ ಪರದಂ—ಶಕಟಿಗಳನ್ನು ಎಂದರೆ ಸರಕು ಸಾಗಿಸುವ ಬಂಡಿಗಳನ್ನುಳ್ಳ ವರ್ತಕ; ೧೦. ಕಸವರಮೆಲ್ಲಂ—ಚಿನ್ನವೆಲ್ಲ ಎಂದರೆ ಐಶ್ವರ್ಯವೆಲ್ಲ; ಕೆಟ್ಟತ್ತು—ಹಾಳಾಯಿತು; ೧೧. ಪಜ್ಜಿಯುಂ ಧಾನ್ಯಮಂ—ಹತ್ತಿಯನ್ನೂ ಧಾನ್ಯವನ್ನೂ, (ತ) ಪರುತ್ತಿ; ೧೨. ಎಡೆಯೊಳ್—ನಡುವೆ, ಮಧ್ಯಮಾರ್ಗದಲ್ಲಿ; ೧೩. ಬಟ್ಟೆಗಟ್ಟೆ—ದಾರಿಯನ್ನು ಕಟ್ಟಿ; ಮೇಲ್ವಾಯ್ದು—ಮೇಲೆ ನುಗ್ಗಿ; ೧೪. ಬಂಡಮುಂ—ಸರಕುಗಳೂ, ಎಱ್ತುಗಳುಂ—ಎತ್ತುಗಳೂ, (ತ) ಎರುದು; ೧೫. ಆ ಪ್ರಸ್ತಾವದೊಳ್—ಆ ಸಮಯದಲ್ಲಿ; ೧೬. ಬೆಸಲೆಯಾಗಿ—ಪ್ರಸವಿಸಿ, ಹೆತ್ತು; ೧೭. ನಡಪೆ—ಸಾಕಿ ಸಲಹಲು; ೧೮. ಈ ತರುವಲಿ—ಈ ಬಾಲಕ, ಹುಡುಗ; ೨೦. ಕೆಲದೂರ್ಗಳುಮಂ—ಅಕ್ಕಪಕ್ಕದ ಊರುಗಳನ್ನು; ನಾಡ್ಗಳುಮಂ—ನಾಡುಗಳನ್ನೂ; ೨೧. ತೊಬಲ್ದು—ಸುತ್ತಾಡಿ, ಬೈಕಂದಿರಿದು—ಭಿಕ್ಷೆಗಾಗಿ ಅಲೆದು; ಎಲ್ಲಿಯಾನುಂ—ಎಲ್ಲಿಯಾದರೂ; ಪೆತ್ತುಂ ಪೆಱದೆಯುಂ—ಹೊಂದಿಯೂ ಹೊಂದದೆಯೂ, ಪಡೆದೂ ಪಡೆಯದೆಯೂ; ೨೩. ಬೆಸದವಂ—ಕೆಲಸದವನು, ಕಾರ್ಮಿಕ; ೨೪. ಗೊಟ್ಟಿಯೊಳ್—ಗೋಷ್ಠಿಯಲ್ಲಿ, ಜೊತೆಯಲ್ಲಿ; ೨೫. ಆರವೆಯೊಳ್—ಆರಾಮದಲ್ಲಿ, ತೋಟದಲ್ಲಿ; ಸೇದೆಗೆಟ್ಟು—ಆಯಾಸದಿಂದ ಅಶಕ್ತನಾಗಿ, ಸೇದೆಯಿಂ + ಕೆಟ್ಟು; ೨೬. ಪಟ್ಟಿರಲೆಂದು—ಮಲಗಿರಬೇಕೆಂದು; ತಲೆಯತ್ತ ಇಡಲ್ಕೆ—ತಲೆಯ ಕಡೆಗೆ ಇಡುವುದಕ್ಕೆ; ೨೭. ಎಣ್ಬರಿಂದಂ—ಎಂಟು ಜನರಿಂದ; ತಳರ್ಚಲಾಱದಂತಪ್ಪ—ತರಲಾಗದ, "ತಳರ್ಚು—ಸ್ಥಾನಾಪಗಮನೇ"; ಪಟ್ಟಿರ್ದುದಂ—ಮಲಗಿದ್ದುದನ್ನು;

**೭೭. ೧:** ಆರಾನುಂ—ಯಾರಾದರೂ; ಒಳರೆ—ಇರುವರೆ; ತಾಂಗಿ—ಆಶ್ರಯವನ್ನು ಕೊಟ್ಟು ನಿಲ್ಲಿಸಿ, 'ತಾಂಗು—ಧಾರಣೇ'; ೩. ಪದಿಂಬರ್—ಹತ್ತು ಜನರು; ೫. ಬಸಿಱ್ ತೀವೆ—ಹೊಟ್ಟೆ ತುಂಬುವಂತೆ; ಬಡ್ಡಿಸದಿರ್—ಬಡಿಸಬೇಡ; ೬. ಎಣ್ಣೆಯಂ ತಿಣ್ಣಮೆಱೆಯದಿರ್—ಎಣ್ಣೆಯನ್ನು ಹೆಚ್ಚಾಗಿ ಹೊಯ್ಯಬೇಡ, ಹಾಕಬೇಡ, ಮಿಾಯಲ್ ಬೇಡಿದೊಡಂ—ಸ್ನಾನಮಾಡಲು ಕೇಳಿದರೂ; ಎಱೆಯದಿರ್—ನೀರು

ಹೊಯ್ಯಬೇಡ; ೭. ಕಲ್ಪಿಸಿದೊಡೆ—ಕಲಿಸಿದರೆ, ಹೇಳಿಕೊಟ್ಟರೆ; ೯. ಒಡೆಯೊನಾನಂ—ಉಳ್ಳವನಾದನು ಎಂದರೆ ಧನಿಕನಾದನು; ೧೧. ದಮ್ಮಕ್ಕಾದೊಡಂ—ಧರ್ಮಕ್ಕಾದರೂ ಅಥವಾ ಒಂದು ದಮ್ಮ (= ದ್ರಮ್ಮ = Drachma) ವೆಂಬ ನಾಣ್ಯಕ್ಕಾದರೂ; ಸೀರೆಯಂ—ವಸ್ತ್ರವನ್ನು, ಕೊಂಡೀಯಿಂ—ಬೆಲೆಗೆ ತೆಗೆದು ಕೊಂಡು ಕೊಡಿರಿ; ೧೪. ಉಣಲಿಕ್ಕಿದಾ—ಊಟಮಾಡಲು ಬಡಿಸಿದೆಯಾ ?; ಪರ್ವಮೆಂದು—ಹಬ್ಬವೆಂದು; ೧೯. ಮಾರಿಯಿರ್ಕೆ—ಮಾರಿದೇವತೆ ಇರಲಿ; ೨೦. ಮಾಱಲ್ ತಗುಳ್ದೊಡೆ—ಮಾರಲು ಆರಂಭಿಸಿದರೆ; ಎಂಟು ದಮ್ಮದ—ಎಂಟು ದಮ್ಮಗಳು ಬೆಲೆಬಾಳುವ; ೨೧. ಒಂದು ಪಣಮನಪ್ಪೊಡಂ—ಒಂದು ಹಣವನ್ನಾದರೂ, ಪಣ—ಒಂದು ಸಣ್ಣ ನಾಣ್ಯ; ಪೆಱದೆ—ಪಡೆಯದೆ; ಬಸಿಕರ್ಮ್ಕಟ್ಟಿಂ—ಹೊಟ್ಟೆತುಂಬ ಅನ್ನಕ್ಕೂ, ಅಂಬಲಿಗಂ—ಅನ್ನದ ಗಂಜಿಗೂ; ಕೞಿಗಂ—ಹುಳಿ ಗಂಜಿಗೂ; ೨೬. ಪರಿವಿಡಿಗೆಯ್ದು—ಅನುಕ್ರಮವಾಗಿ ಪಠಿಸಿ, ಹೇಳಿ; ಪಾರಣೆಗೆಂದು—ಉಪವಾಸವನ್ನು ಮುಗಿಸುವ ಊಟಕ್ಕೆಂದು; ಚಱಿಗೆವುಗುತಂದೊಡೆ—ಚರ್ಯೆಗಾಗಿ ಎಂದರೆ ಭಿಕ್ಷಕ್ಕಾಗಿ ಪ್ರವೇಶಿಸಿದರೆ; ೨೭. ನೀಡುಂ ನೋಡಿ—ಬಹಳ ಹೊತ್ತು ನೋಡಿ;

೭೮. ೧: ಬೞಿವೞಿಯನೆ—ಹಿಂದು ಹಿಂದೆಯೇ; ಇವರನೆಂದವರಂ—? ೩. ಪೆಱರಾರುಂ ನಿಱಿಸಲ್ ಸಲ್ಲ—ಬೇರೆ ಯಾರೂ ಊಟಕ್ಕೆ ನಿಲ್ಲಿಸಲು ಸಲ್ಲದು, ಸಲ್ಲ < ಸಲ್ಲದು; ೪. ಗೋಸನೆಯಂ—ಡಂಗುರವನ್ನು; ೮. ಅರ್ಚನೆ;ಯಿಂದೆ—ಅರ್ಚನೆ ಮಾಡುವ ವಸ್ತುಗಳಿಂದ; ಬಲಗೊಂಡು ಬಂದು—ಪ್ರದಕ್ಷಿಣೆ ಮಾಡಿ; ೯. ಪ್ರಕ್ಷಾಳಿಸಿ—ತೊಳೆದು; ೧೦. ದೇಸಿಗನ—ದೇಶಿಕನ ಎಂದರೆ ಗುರುವಿನ ಅಥವಾ ದೇಶ ಅಲೆದಾಡುವವನ; ೧೨. ಪೊನ್ನತಳಿಗೆಯುಂ—ಚಿನ್ನದ ತಟ್ಟೆಯೂ; ಉಚ್ಚಮಪ್ಪ—ಎತ್ತರವಾದ; ಅಡ್ಡಣಿಗೆಯುಮಂ—ತಟ್ಟೆಯಿಡುವ ಮುಕ್ಕಾಲು ಮಣೆಯನ್ನೂ; ೧೪. ರಾಜಾನ್ನದ ಕೂೞಿಂ—ರಾಜಾನ್ನ ಎಂಬ ಅಕ್ಕಿಯ ಅನ್ನವೂ, ಭತ್ತದಲ್ಲಿ ಒಂದು ಉತ್ತಮವಾದ ಜಾತಿ; ಪೆಸಱ ತೊವೆಯುಂ—ಹೆಸರುಬೇಳೆಯ ತೊವ್ವೆಯೂ; ೧೫. ನಾರ್ಪ—ಮಗಮಗಿಸುವ; ೧೬. ಬಾಡುಗಳುಂ—ಕಾಯಿ ಪಲ್ಲೆಗಳೂ; ತುಯ್ಯಲುಂ—ಪಾಯಸವೂ; ಪೂರಿಗೆ—ಪೂರಿ; ಇಡ್ಡಲಿಗೆ—ಇಡ್ಡಲಿ; ಸೋದಿಗೆ—ಗೋಧಿ ರವೆಯಿಂದ ಮಾಡಿದ ಭಕ್ಷ್ಯ; ಲಾವಣಿಗೆ—ಉಪ್ಪಿನಕಾಯಿ ಮುಂತಾದುವು; ೧೭. ಘೃತಪೂರಂ—ತುಪ್ಪದ ಪೂರಿ; ಲಡ್ಡುಗೆ—ಲಾಡು; ಮಂಡಗೆ—ಮಂಡಗೆಯೆಂಬ ಭಕ್ಷ್ಯವು; ೨೦. ಪುಟ್ಟಿದಂದಿಂತೊಟ್ಟು—ಹುಟ್ಟಿದ ದಿನದಿಂದ ಹಿಡಿದು; ಇಂತಪ್ಪ ಉಣಿಸಂ—ಇಂತಹ ಆಹಾರವನ್ನು; ಕಂಡಱಿಯದ ಮಗಂ—ನೋಡಿ ತಿಳಿಯದ ಹೈದ; ೨೧. ತಣಿಯೆಯುಣಲ್ಪೆಱದ—ಹೊಟ್ಟೆತುಂಬ ಊಟಮಾಡಲು ಪಡೆಯದ; ೨೨. ಆಕಂಠಪ್ರಮಾಣಂಬರಂ—ಗಂಟಲಿನ ಮಟ್ಟದವರೆಗೂ; ೨೩. ನೆಲವತ್ತಿಯಡಕೆಯ—ನೆಲವತ್ತಿ ಎಂಬ ಪ್ರದೇಶದಲ್ಲಿ ಬೆಳೆದ ಅಡಿಕೆಯ; "ಅಡಸಿದ ಪಾರಿಜಾತಕದ ಕಪ್ಪುರ

ವಳ್ಳಿಯ ನೇಲವತ್ತಿಯಾಯ್ದಡಕೆಯ ಭೀಮಸೇನಿಕದ ತಂಬುಲದಿಂ" ಎಂದು ಪೊನ್ನನೂ (ಶಾಂತಿ ಪು. ೧೦-೯೫), "ಕಾಮವಿಕಾರೋತ್ಕರ್ಷ ಸಮಾಕರ್ಷಣ ನಿಮಿತ್ತಂ ಮಾಡಿ ದೌಷಧದ ಘುಟಿಕಾಪೇಟಕಂಗಳೆಂಬಂತಿರ್ದ ಕರ್ಪೂರ ತೈಲದಿಂ ಘೋಳಿಸಿದ ನೇಲುವತ್ತಿ ಯಾಯ್ದಡಕೆಯ ಭಾಗಂಗಳಿಂದಂ" ಎಂದು ಬಾಹುಬಲಿಯೂ (ಬಾಧಪು. ೮ ೬), ಈ ಅಡಕೆಯನ್ನು ಹೆಸರಿಸಿದ್ದಾರೆ, ಇದು ಅಡಕೆಗಳಲ್ಲಿ ಉತ್ತಮಜಾತಿಯದೆಂದು ತೋರು ತ್ತದೆ, "ನೆಲ್ಲವತ್ತಿಯ ಜಿನ ಭವನಂ", "ನೆಲ್ಲವತ್ತಿಯ ತಟ್ಟಿಯ ಕೆಱೆಯೆರಡುಂ ಬಸದಿ ಯುಮಂ" ಎಂಬಲ್ಲಿ ಶಾಸನಕವಿ ದಾಮರಾಜನು (ಕಾಲ-ಶಕ ೧೦೮೧, ಶಿವಮೊಗ್ಗ ೧೦) ನೆಲ್ಲವತ್ತಿ ಎಂಬ ಊರನ್ನು ನಿರ್ದೇಶಿಸಿದ್ದಾನೆ ; ೨೮. ಕೈ ತೀವಿದೆಲೆಯುಮಂ—ಕೈತುಂಬ ವೀಳೆಯವನ್ನೂ ;

೭೯. ೧ : ಕಾಲಂಕರ್ಚಿ—ಕಾಲನ್ನು ತೊಳೆದುಕೊಂಡು ; ೬. ಸಮೆದಿರ್ದ ಬೞಿಕ್ಕೆ —ಮುಗಿದ ನಂತರ ; ೧೨. ಪಾನಿಗಟ್ಟುವಂ—ಕಾಲ್ತೊಳೆದು ಊಟಕ್ಕೆ ಹಾಕೋಣ (?) ; ೧೮. ಪೊೞ್ತಡಿನ ಬೇಗಂ—ಹೊತ್ತಾರೆಯ ಸಮಯದಲ್ಲಿ ; ೧೬. ಕಿತ್ತಯ್ಯಂ ಗಳುಮಂ—ಚಿಕ್ಕ ಸ್ವಾಮಿಗಳನ್ನೂ, ಮರಿಸ್ವಾಮಿಗಳನ್ನೂ ; ಕಿಱಿದು + ಅಯ್ಯ = ಕಿತ್ತಯ್ಯ ; ೧೯. ನಿಱಿಸಿ—ಊಟಕ್ಕೆ ನಿಲ್ಲಿಸಿಕೊಂಡು ; ನೆರಪಿಕೊಳ್ವಂ—ಸೇರಿಸಿ ಕೊಳ್ಳೋಣ ; ೨೨. ಕಿಂಕುರ್ವಾಣಂಗೆಯ್ದಪ್ಪಂ — ಸೇವೆಯನ್ನು ಮಾಡುತ್ತಾನೆ ; ೨೩. ತಱಿಸಂದು—ನಿಶ್ಚಯಿಸಿ ; ೨೬. ಅಱಿದೆ—ಇದರ ಪಾಠ ಅಱಿದೀ ಎಂದಿರ ಬಹುದು ;

೮೦. ೯ : ಪೆಂಡವಾಸದ — ಅಂತಃಪುರದ ; ಸೂಳೆಯರ್ಕಳುಂ — ದಾಸಿಯರೂ (ಸಂ) ಶೂಲಾ > ಸೂಳೆ ; ೧೦. ವೇಸಱಿಗೞ್ತೆಗಳುಂ—ಹೇಸರ ಕತ್ತೆಗಳೂ ; ಪಿಡಿ ಗಳುಂ—ಹೆಣ್ಣಾನೆಗಳೂ ; ಸಿಬಿಗೆಗಳುಮಂ—ಪಲ್ಲಕ್ಕಿಗಳನ್ನು (ಸಂ) ಶಿಬಿಕಾ > ಸಿವಿಗೆ ; ಸೀಗುರಿಗಳುಮಂ—ಒಂದು ತೆರನಾದ ಕೊಡೆಗಳನ್ನೂ ; ೧೧. ಎಕ್ಕ ಮದ್ದಳೆಯ— ಒಂದೇ ಪಾರ್ಶ್ವವುಳ್ಳ ಮೃದಂಗದ ; ಪಱಿಗಳ್—ಚರ್ಮವಾದ್ಯಗಳು ; ೧೨. ಬಾಜಿ ಸುತ್ತಂ—ಶಬ್ದಮಾಡುತ್ತ ; ಬೞಿಯುಂ—ಹಿಂದೆ ; ಕಾಪಿನವರ್—ಅಂಗರಕ್ಷಕರು ; ಮಾನಸರಂ—ಮನುಷ್ಯರನ್ನು ; ಪಡಿಯಱರ್—ದ್ವಾರಪಾಲಕರು, ಕಟ್ಟಿಗೆಕಾರರು ; ೧೩. ಬಾಗಿಲ್ಮಾಡದ—ಪುರದ ಗೋಪುರದ, ಪೊಱಗಣ—ಹೊರಗಡೆಯ ; ೧೭. ಕ್ರಿಯಾ ಪೂರ್ವಕಂ—ನಮಸ್ಕಾರಾದಿ ಕ್ರಿಯೆಗಳಿಂದ ;

೮೧. ೪ : ಎೞ್ತರವೇೞ್ಕುಂ—ಬರಬೇಕು ; ೭. ಪರಿವೇಷ್ಟಿತೆಯಾಗಿರ್ದ — ಬಳಸ ಲ್ಪಟ್ಟ ; ೯. ಬಗೆಯಿಲ್ಲ — ಮನಸ್ಸಿಲ್ಲ ; ೧೦. ಪರಿಚ್ಛೇದಿಸಿ — ಖಂಡಿತವಾಗಿಸಿ ೧೨. ಕರಣವೇಳೆಯೊಳ್—ಕರಣದ ಹೊತ್ತಿನಲ್ಲಿ ; ಕರಣ ಎಂದರೆ ಒಂದು ದಿವಸದ (ಚಾಂದ್ರ) ಹನ್ನೊಂದು ವಿಭಾಗಗಳು, ವದ, ವಲವ ಇತ್ಯಾದಿ ವಿಭಾಗಗಳ ಹೆಸರು ಗಳು ; ೧೬. ಚರಿಗೆದೋಱಿ—ಭಿಕ್ಷವನ್ನು ಮಾಡಿಸಿ ; ೧೯. ಪಾರಿಸಲ್ವೇೞ್ಕುಂ— ಪಾರಣೆಮಾಡಬೇಕು ; ೧೮. ರಾಜೋವಾ ರಾಜಮತ್ರ್ಯೋವಾ — ರಾಜನಾಗಲಿ,

ರಾಜನ ಮಂತ್ರಿಯಾಗಲಿ (?), ಇಲ್ಲಿ 'ರಾಜ ಅಮಾತ್ಯೋವಾ' ಎಂದು ಪಾಠವಿರ ಬಹುದೆ;

೮೨. ೨: ಮಾಣದೆ—ಬಿಡದೆ; ಓದುತ್ತಮಿರಿಂ—ಹೇಳುತ್ತ ಇರಿ; ೫. ದಿವಸದಿಂ ತಗುಳ್ದು—ದಿವಸದಿಂದ ಆರಂಭವಾಗಿ; ೬. ಕೇಱಿ—ಕೂಗಿ, ಬಲಾತ್ಕರಿಸಿ; ೭. ಇನ್ನವು—ಇಂಥವು; ೧೭. ವಿರಾಗನಾಗಿ—ಸಂತೋಷರಹಿತನಾಗಿ; ೨೮. ಕೋಣೆ ಯೊಳ್—ಮೂಲೆಯಲ್ಲಿ; ಕೆಲದೊಳ್—ಮಗ್ಗುಲಲ್ಲಿ; ಮಗುಟಿದೆ—ಮಗುಚಿಕೊಳ್ಳದೆ ಹೊರಳಾಡದೆ; ತಳರದೆ—ಅಲುಗಾಡದೆ;

೮೩. ೧: ಉಡುಗದೆ=ಸಂಕೋಚಪಡಿಸಿಕೊಳ್ಳದೆ, ಮಡಿಸಿಕೊಳ್ಳದೆ; ೬. ಇರ್ಪೊ ತ್ತುಂ—ಎರಡು ಹೊತ್ತೂ; ೧೦ ನೇಸಱ್ಪಟ್ಟೊಡೆ—ಸೂರ್ಯ ಮುಳುಗಿದರೆ ಎಂದರೆ ಮುಳುಗಿದರೆ; ಆಸನ್ನ ಕಾಲಂ—ಸಾವಿನ ಹೊತ್ತು; ೧೨. ಜಾನಿಸುವುದು—ಧ್ಯಾನ ಮಾಡುವುದು; ೧೫. ಮುಡಿಪಿ—ಸತ್ತು; ೨೧. ತಗುಳ್ದ—ಅನುಸರಿಸಿದ; ಉರಗಾ ಮರಂ—ಉರಗಲೋಕದವರೂ ದೇವಲೋಕದವರೂ (?), ಧರಣೇಂದ್ರನೊಡನೆ (?) ಇಲ್ಲಿನ ಪಾಠ ಸಂದೇಹಾಸ್ಪದ; ೨೫. ಕ್ಷಪಣಕನಂ—ಜೈನ ಸಂನ್ಯಾಸಿಯನ್ನು; ೨೬. ನೇತ್ರದ ಪಟಿವುಲ್ಲವಂಗಳ್—ನೇತ್ರವೆಂಬ ರೇಷ್ಮೆ ವಸ್ತ್ರವಿಶೇಷದ ವಿತಾನಗಳು; ಮೇಲ್ಕಟ್ಟುಗಳು; ೨೮. ಪಟುಪಟಹ—ಸಮರ್ಥವಾದ ತಮಟೆ; ತುಣವ—ಒಂದು ವಾದ್ಯ ವಿಶೇಷ, ಇದಕ್ಕೆ ಜಂಖಾ ಎಂಬ ಇನ್ನೊಂದು ಹೆಸರುಂಟು, ಪ್ರಾ. "ತುಣಓ ಜಂಖಾಖ್ಯಸ್ತೂರ್ಯ ವಿಶೇಷಃ"; ಭಂಭಾ—ಒಂದು ಬಗೆಯಾದ ಭೇರಿ, ಪ್ರಾ. ಭಂಭಾ; ಝುಲ್ಲರಿ—ವಲಯಾಕಾರದ ಒಂದು ವಾದ್ಯ; ಮುಕುಂದ—ಒಂದು ತೆರನಾದ ಮದ್ದಲೆ; ಪ್ರಾ. ಮಉಂದ, ಮುಗುನ್ದ;

೮೪. ೧: ವಂಶ—ಕೊಳಲು ೨. ವಿಮಾನ—ಶವವನ್ನು ಒಯ್ಯುವ ಮಂಟಪ: ದಮ್ಮಮುಮಂ—ದ್ರಮ್ಮ ಎಂಬ ನಾಣ್ಯಗಳನ್ನು; ೪. ಪ್ರಭಾವನೆಯುಮಂ—ಗೌರವ ವನ್ನೂ; ೫. ವಿಗುರ್ವಿಸಿ—ಮಾಯೆಯಿಂದ ಸೃಷ್ಟಿಸಿ; ೯. ಆಡಿದಂ—ನೃತ್ಯ ಮಾಡಿದನು

ಗಾಹೆ || ಅಚ್ಚರಮಜ್ಝಗಯಂ—ಅಪ್ಸರ ಸ್ತ್ರೀಯರ ನಡುವೆ ಇರುವ, ರಮಣಿಜ್ಜಂ —ಸುಂದರನಾದ, ಓದಣಮುಂಡಂ—ಅನ್ನಕ್ಕಾಗಿ ತಲೆಯನ್ನು ಬೋಳಿಸಿಕೊಂಡಿರು ವವನನ್ನು ಎಂದರೆ ಬೋಳನನ್ನು, ಪೆಚ್ಛಹ ಪೆಚ್ಛಹ—ನೋಡು ನೋಡು; ಜಂಜಣ ಮಂತಣ ಕಾರಣ ಯೇಣ—ಅದೋ ಇದೋ ಯಾವುದಾದರೂ ಕಾರಣದಿಂದ ?, ಣರೇಣ —ಇತರ ಮನುಷ್ಯನಿಂದ, ಪಚ್ಚ ಇಯವ್ವಂ—ನಂಬಲ್ಪಡುವುದು, ಹೋಇ— ಆಗುತ್ತದೆ.

೧೪. ಛಂದಛಂದದಿಂ—ಬೇರೆ ಬೇರೆ ಛಂದಸ್ಸುಗಳಿಂದ, ಬಗೆಬಗೆಯಾಗಿ; ೧೭. ಉಣಿ ಸಿಂಗೆಂದು—ಊಟಕ್ಕೆ ಎಂದು, ಊಟ ಕಾರಣವಾಗಿ; ೨೨. ಇನಿವಿರಿದು—ಇಷ್ಟು ದೊಡ್ಡದು; ೨೯. ನೆಗೞ್ದು—ಆಚರಿಸಿ; ೩೦. ಪಶ್ಚಾತ್ಕಾಲದೊಳ್—ಅನಂತರ ಕಾಲ ದಲ್ಲಿ;

೮೫. ೧೧ : ಚರಿಗೆವೊಗಿಸುತ್ತುಂ—ಭಿಕ್ಷಕ್ಕಾಗಿ ಮನೆಮನೆಗೆ ಪ್ರವೇಶ ಮಾಡಿ ಸುತ್ತ ; ೧೨. ಓಸರಿಗೆಯೊಳ್—ಮನೆಯ ಹೊರಬಾಗಿಲಿನ ಒಳಗಿರುವ ಕೋಣೆ, ಪ್ರಾ. ಓಸರಿಅ, (ಸಂ) ಅಪಸಾರಕ ; ೧೩. ಅವ್ಯಕ್ತ ಕಿಱುಗೂಸು—ಅಸ್ಪಷ್ಟವಾಗಿ ಕಾಣು ತ್ತಿರುವ ಚಿಕ್ಕ ಕೂಸು ; ಬೋಳಹ ಬೋಳಹ—ಗಚ್ಛ, ಗಚ್ಛ, ಹೋಗು ಹೋಗು, < ಪ್ರಾ ವೋಲ ; ೧೭. ಅಲಾಭಂ ಮಾಡಿ—ಆಹಾರವನ್ನು ಸ್ವೀಕರಿಸದೆ ; ೨೦. ಬರಿ ಸಿಂ—ಬರಮಾಡಿಕೊಳ್ಳಿರಿ ; ೨೧. ಪೊಲ್ಲ ಕನಸುಗಳಂ—ಕೆಟ್ಟ ಕನಸುಗಳನ್ನು ; ೨೩. ಕೋಡು—ಕೊಂಬೆ ; ೨೪. ಮಗುಟ್ದುದುಮಂ—ಹಿಂದಿರುಗಿದ್ದನ್ನೂ ; ೨೫. ಕಡು ಗಡಿಯವಪ್ಪ—ಅತ್ಯಂತ ವೇಗಶಾಲಿಗಳಾದ ; ಪೋರಲ್ ಸಾರ್ದು—ಹೋರಾಡಲು ಸಮೀಪಿಸಿ ; ಪೆಱಪಿಂಗಿ — ಹಿಂಜರಿದು ; ೨೬. ಮಿಾನಂಬುಱುವುಮಂ — ಮಿಂಚು ಹುಳುಗಳನ್ನೂ ; ೨೮. ಪೊನ್ನ ತಳಿಗೆಯೊಳ್—ಚಿನ್ನದ ತಟ್ಟೆಯಲ್ಲಿ ; ತುಯ್ಯಲ್— ಪಾಯಸ; ೨೯. ಕಸ ಕುಪ್ಪೆಯೊಳ್—ಕಸದ ರಾಶಿಯಲ್ಲಿ ; ೩೦. ಬೆಳ್ಗಱಿತ್ತ—ಬಿಳಿ ಕತ್ತೆ ;

೮೬. ೪ : ಅವಱ—ಅವುಗಳ ಎಂದರೆ ಆ ಕನಸುಗಳ ; ೮. ಕಱಿದೊಡೆ—ಗತ ವಾದರೆ ; ೧೨. ಇಲ್ಲಿಂ ತೊಟ್ಟು—ಇಲ್ಲಿಂದ ಹಿಡಿದು ; ರೌದ್ರಪಸವಂ—ಭಯಂಕರ ಕ್ಷಾಮ ; ೧೩. ಮೊದಲ—ಮೂಲದ ; ಪೊರ್ದಿದ—ಸೇರಿದ ; ೧೪. ಇಂಬೆಳೆಯೊಳ್— ಇನಿದಾದ ಎಂದರೆ ಒಳ್ಳೆಯ ರುಚಿಯುಳ್ಳ ಬೆಳಸಿನಲ್ಲಿ ; ೧೫. ಪ್ರಜೆಗಳ ಮೆಚ್ಚಿದಂತೆ— ಪ್ರಜೆಗಳು ಮೆಚ್ಚಿದಹಾಗೆ ; ಮಱೆ ಕೊಳ್ಳವು—ಮಳೆ ಸುರಿಯವು ; ಮಂಡಲ ವರ್ಷಂಗಳ್—ಕೆಲ ಕೆಲವು ಪ್ರದೇಶಗಳಲ್ಲಿ ಬೀಳುವ ಮಳೆಗಳು ; ೧೬. ಓರನ್ನವು— ಸಮಾನವಾದಂಥ ; ಅಂಗ ಬಾಹ್ಯಮಪ್ಪ—ದ್ವಾದಶಾಂಗವೆಂಬ ಜೈನಾಗಮಗಳಿಗೆ ಹೊರ ಗಾದ ; ಚತುರ್ದಶ ವಿದ್ಯಾಸ್ಥಾನಂಗಳುಂ — ಹದಿನಾಲ್ಕು ವಿದ್ಯೆಗಳ ಎಂದರೆ ೧೪ ಪೂರ್ವಾಗಮಗಳ ಉಪದೇಶಸ್ಥಾನಗಳು ; ೧೮. ತನುಮಾತ್ರಮೆ — ಸ್ವಲ್ಪ ಮಾತ್ರವೇ ; ನಿಲ್ಕುಂ—ನಿಲ್ಲುತ್ತದೆ ; ೧೯. ಪಿನ್ನ—ಹಿಂದಿನಕಾಲದ ; ೨೦. ನೆಗಱ್ತೆ ಯಾಗದು—ಪ್ರಸಿದ್ಧಿ ಉಂಟಾಗುವುದಿಲ್ಲ ;

**ಗಾಹೆ ॥** ಪುವ್ವೇಣ—ಪೂರ್ವ ದಿಕ್ಕಿನಲ್ಲಿ ; ಅಂಗವಿಸಓ—ಅಂಗವೆಂಬ ದೇಶ ; ದಕ್ಷಿಣದೋ—ದಕ್ಷಿಣ ದಿಕ್ಕಿನಲ್ಲಿ ; ಕೋಸಂಬೀ—ಕೌಶಾಂಬೀನಗರವು, ಜಾವಹೋಇ— ಯಾವಾಗ ಆಗುತ್ತದೋ, ಅವರೇಣ—ಪಶ್ಚಿಮದಲ್ಲಿ, ಜಾವದೂಣಾ—ದಾಣ ಎಂಬುದರ ವರೆಗೆ, ಉತ್ತರದೋ—ಉತ್ತರ ದಿಕ್ಕಿನಲ್ಲಿ, ಕುಣಾಳ ವಿಸಯೋಯ—ಕುಣಾಳವೆಂಬ ದೇಶವು ;

೨೪. ಧೂರ್ತರಪ್ಪ—ದುಷ್ಟರಾದ ; ಪೊಲ್ಲ ಲಿಂಗಿಗಳ—ಕೆಟ್ಟ ಲಾಂಛನಗಳನ್ನು ಳ್ಳವರ ; ಪೆರ್ಚಕ್ಕುಂ—ಹೆಚ್ಚಳವುಂಟಾಗುತ್ತದೆ ; ೨೯. ಆದಮಾನುಂ — ಅತಿಶಯ ವಾದ ; ೩೦. ಅಭಿಮಾನಮುಂ—ಮಮತೆಯನ್ನು ;

೮೭. ೪ : ದ್ರವ್ಯಪತಿಗಳುಂ—ಶ್ರೀಮಂತರೂ ; ೭. ಲೋಭಿಷ್ಠರಾಗಿ—ದುರಾಶೆ ಯಿಂದ ಕೂಡಿದವರಾಗಿ ; ೧೦. ನಿರ್ಗ್ರಂಥಲಿಂಗಮುಂ—ನಿರ್ಗ್ರಂಥ ಎಂದರೆ ದಿಗಂಬ

ರತ್ನದ ಲಾಂಛನವನ್ನು ; ೧೧. ಕೈಕೊಳಿಸಲ್ಪಟ್ಟಂ—ಸ್ವೀಕರಿಸಲ್ಪಟ್ಟೊ ; ಪುರುಷಾಕಾರನುಂ — ಪುರುಷಪ್ರಯತ್ನವೂ ; ೧೩. ನೆಗಟಿಸಿಪಟ್ಟುದಂ—ಮಾಡಲ್ಪಟ್ಟದ್ದನ್ನು ; ೧೬. ತೊಟ್ಟ—ಆರಂಭವಾದ ; ನಣ್ಪುಗಳ್—ನಂಟತನಗಳು, ಸಂಬಂಧಗಳು ;

ಹರಿಣಿ ॥ ಅನೃತವಚನೇ—ಸುಳ್ಳು ಹೇಳುವುದರಲ್ಲಿ, ನಿತ್ಯಾಭ್ಯಾಸಃ—ಸಂತತವಾದ ಅಭ್ಯಾಸ ; ಖಲೇಷು—ದುಷ್ಟರಲ್ಲಿ, ವಿದಗ್ಧತಾ— ಪಾಂಡಿತ್ಯವು ; ಗುಣವತಿ ಜನೇ—ಗುಣವಂತರಾದ ಜನರಲ್ಲಿ, ವೈರಾಬುದ್ಧಿಃ—ದ್ವೇಷಬುದ್ಧಿ ; ಖಲೇಷು—ದುಷ್ಟರಲ್ಲಿ, ಅತಿ ಗೌರವಂ—ಬಹು ಮರ್ಯಾದೆ ; ಯತಿಷು—ಯತಿಗಳಲ್ಲಿ, ವಾಕ್ಪಾರುಷ್ಯಂ—ಮಾತಿನ ಬಿರುಸು ; ವಿಪತ್ತಿಷು ಚ—ಆಪತ್ತಿನಲ್ಲಿಯೂ ಎಂದರೆ ಆಪತ್ತು ಅಡಸಿದಾಗ, ಕ್ರಿಯಾ—ಕಾರ್ಯವು; ಏತಾನಿ—ಇವೆಲ್ಲ, ಕಲಿಯುಗ ಮಹಾರಾಜಸ್ಯ—ಕಲಿಯುಗವೆಂಬ ಮಹಾರಾಜನ, ರಾಜವಿಭೂತಯಃ—ರಾಜವೈಭವಗಳು.

ವೃ ॥ ಸಂಪ್ರತಿವರ್ತತೇ ಕಾಲೇ—ನಡೆಯುತ್ತಿರುವ ಕಾಲವಾದ ಎಂದರೆ ವರ್ತಮಾನ ಕಾಲವಾದ, ಕಲಿಯುಗೇ—ಕಲಿಯುಗದಲ್ಲಿ, ಸತ್ಯಾನ್ವಿತಾ—ಸತ್ಯವಂತರಾದ ಮನುಷ್ಯರು, ದುರ್ಲಭಾಃ—ದೊರಕರು, ಸಿಕ್ಕುವುದಿಲ್ಲ ; ನಾನಾ ಚೋರಗಣಾಃ—ನಾನಾ ಬಗೆಯಾದ ಕಳ್ಳರ ಗುಂಪುಗಳು, ಪೃಥಿವೀಂ—ಲೋಕವನ್ನು, ಮುಷಂತಿ—ಅಪಹರಿಸುವರು ; ಆರ್ಯೋಜನಃ—ಆರ್ಯಜನರು ; ಕ್ಷೀಯತೇ—ಕ್ಷಯವಾಗುವರು ; ದೇವಾಶ್ಚ—ದೇವತೆಗಳು ಕೂಡ, ಪ್ರಲಯಂಗತಾಃ—ಪ್ರಳಯವಾಗಿಹೋದರು, ನಾಶವಾದರು ; ಪಾರ್ಥಿವಾಃ—ರಾಜರು, ಕರಭವತ್—ಒಂಟೆಯಂತೆ, ಲೌಲ್ಯಂಗತಾಃ—ದುರಾಶಾಗ್ರಸ್ತರಾದರು; ಪಿತರಃ—ತಂದೆತಾಯಿಗಳು, ಪುತ್ರಸ್ಯಾಪಿ—ಮಗನದಾದರೂ, ನವಿಶ್ವಸಂತಿ—ನಂಬುವುದಿಲ್ಲ; ಕಷ್ಟಂ ಯುಗಂ—ಕಷ್ಟಕರವಾದ ಕಾಲವು, ವರ್ತತೇ—ನಡೆಯುತ್ತಿದೆ.

ವೃ ॥ ಪೃಥಿವೀ—ಭೂಮಿಯು, ನಿರ್ವೀರ್ಯಾ — ಸತ್ವಹೀನವಾಗಿದೆ ; ಔಷಧಿರಸಾಃ—ಸಸ್ಯಗಳ ರಸಗಳು, ಗತಾಃ—ನಷ್ಟವಾಗಿವೆ ; ನೀಚಾ—ನೀಚರು, ಮಹತ್ವಂ ಗತಾ—ಮಹತ್ವವನ್ನು ಪಡೆದರು ; ರಾಜಾನಃ—ರಾಜರು, ಅರ್ಥಪರಾಃ—ದ್ರವ್ಯಾಸಕ್ತರಾಗಿದಾರೆ, ಕುಧರ್ಮ ನಿರತಾಃ—ಕೆಟ್ಟ ಧರ್ಮದಲ್ಲಿ ಆಸಕ್ತರಾದ, ವಿಪ್ರಾಃ—ಬ್ರಾಹ್ಮಣರು, ವಿಕರ್ಮಸ್ಥಿತಾಃ—ಅನ್ಯಾಯವಾದ ಕಾರ್ಯದಲ್ಲಿ ತೊಡಗಿರುವರು ; ಭಾರ್ಯಾ—ಹೆಂಡತಿಯರು, ಭರ್ತರಿ—ಗಂಡನಲ್ಲಿ, ನೈವ ಬದ್ಧಹೃದಯಾ—ಅನುರಕ್ತವಾದ ಹೃದಯುದವರಾಗಿಲ್ಲ ; ಪುತ್ರಾಃ—ಗಂಡುಮಕ್ಕಳು, ಪಿತೃದ್ವೇಷಿಣಃ—ತಂದೆಯಲ್ಲಿ ದ್ವೇಷವುಳ್ಳವರು ; ಇತ್ಯೇವಂ—ಹೀಗೆಯೇ, ಸಮುಪಸ್ಥಿತೇ ಕಲಿಯುಗೇ—ಎದುರಿನಲ್ಲಿ ನಿಂತಿರುವ ಕಲಿಯುಗದಲ್ಲಿ, ವನಂ ಪ್ರಸ್ಥಿತಾಃ—ಕಾಡಿಗೆ ಹೋಗಿ ನಿಂತವರು, ಧನ್ಯಾಃ— ಧನ್ಯಜೀವಿಗಳು.

೮೮. ೧೭ : ಕಳ್ಬಪ್ಪುನಾಡನೆಯ್ದಿ—ಕಳ್ಬಪ್ಪು ಎಂಬ ನಾಡನ್ನು ಸೇರಿ, ಕಳ್ಬಪ್ಪು ಎಂದರೆ ಈಗಿನ ಶ್ರವಣಬೆಳಗೊಳ, ಇದು ಕಟವಪ್ರ ಎಂಬ ಸಂಸ್ಕೃತ ಶಬ್ದದಿಂದ ಬಂದಿರಬಹುದು, ಅಥವಾ ಕಳ್ಬಪ್ಪೇ ಕಟವಪ್ರವಾಗಿ ಸಂಸ್ಕೃತದಲ್ಲಿ ರೂಪಾಂತರ ಪಡೆದಿರ

ಬಹುದು, ‘ಕಟವಪ್ರನಾಮಕೋಪಲಕ್ಷಿತ....ಸಮುತ್ತುಂಗ ಶೃಂಗೇ ಶಿಖರಿಣಿ’ ಎಂದು ಶ್ರವಣಬೆಳಗೊಳ ೧ನೆಯ ಶಾಸನದಲ್ಲಿದೆ (ಕಾಲ. ಸು. ೬೦೦), “ಕಟ್ಬಪ್ಪಿನಾ ವೆಟ್ಟದುಳ್” ಎಂದು ಇನ್ನೊಂದು ಶಾಸನ (ಅದೇ, ೨೭, ಕಾಲ ೭೦೦). ೨೨. ದ್ರವಿಡವಿಷಯಕ್ಕೆ—ದ್ರಾವಿಡದೇಶಕ್ಕೆ, ತಮಿಳುನಾಡಿಗೆ ; ೨೪. ಕೀಱಿ — ಕೂಗಿ, ಬಲಾತ್ಕರಿಸಿ ; ೨೫. ವಿನಯಂಗೆಯ್ಯುತ್ತಂ—ಸೇವೆಮಾಡುತ್ತ ; ಇರ್ದಪ್ಪೆಂ—ಇರುತ್ತೇವೆ; ೨೭. ಏಕಸಱಿಯ—ಒಂದು ಬಂಡೆಯ, ಇಲ್ಲಿ ‘ಎಕ್ಕಸಱಿ’ ಎಂದು ಪಾಠವಿದ್ದಿರಬಹುದು ;

೮೯. ೨: ಆವುಂ—ನಾವೂ ; ನೋಂತಿರ್ಪೆವು — ವ್ರತಧಾರಿಗಳಾಗಿದ್ದೇವೆ ; ೪. ಕಾಂತಾರ ಭೈಕ್ಷಂ—ಅಡವಿಯಲ್ಲಿ ಭಿಕ್ಷೆ ಬೇಡುವುದು ; ೫. ಬಟ್ಟೆವೋಪರ್—ದಾರಿ ಹೋಕರು ; ನಿಱಿಸುವರ್—ಊಟಕ್ಕಾಗಿ ನಿಲ್ಲಿಸುವರು ; ೭. ಪೊೞಲೊಳ್—ಪೊಟ್ಟರೆಯಲ್ಲಿ ; ಪಿಂಡುಗಂಕಣಮುಂ—ಹಿಂಡು ಬಳೆಯನ್ನು ಎಂದರೆ ಒಟ್ಟಿಗೆ ಗುತ್ತನಾಗಿ ತೊಡಿಸಿರುವ ಬಳೆಗಳನ್ನು ; ೮. ಸಟ್ಟುಗಮುಂ—ಸೌಟನ್ನು ; ಕೈಯನಿತನೆ—ಕೈಯಷ್ಟನ್ನೇ ; ೯. ತೊೞಲ್ದು—ಸುತ್ತಾಡಿ ; ಅಲಾಭಮಾಗಿ—ಭಿಕ್ಷೆ ದೊರಕದೆ ; ನಿಲೆವಟ್ಟುದೆ—ನಿಲ್ಲಿಸಲ್ಪಿಟ್ಟಿತೆ, ಎಂದರೆ ಭಿಕ್ಷಕ್ಕೆ ಯಾರಾದರೂ ನಿಲ್ಲಿಸಿದರೆ ; ೧೩. ಬೋನಮಂ—ಅನ್ನವನ್ನು, ಭೋಜನವನ್ನು ; ನೆಱೆಯೆ ತೊಟ್ಟುಟ್ಟು—ಪೂರ್ಣವಾಗಿ ಒಡವೆಗಳಿಂದ ವಸ್ತ್ರಗಳಿಂದ ಅಲಂಕರಿಸಿಕೊಂಡು ; ಮಂಗಳವಸದನಂಗೊಂಡು—ಮಂಗಳಾಲಂಕಾರ ಮಾಡಿಕೊಂಡು ; ೧೪. ಒರ್ವಳೆಯೆ—ಒಬ್ಬಳೇ ? ಪೆಱರಾರುಮಿಲ್ಲ—ಬೇರೆ ಯಾರೂ ಇಲ್ಲವೆ ? ; ೧೮. ಒಳ್ಳಿಕೆಯ್ದಿರ್—ಒಳ್ಳೆಯದನ್ನು ಮಾಡಿದಿರಿ ; ೨೦. ಧವಳಾಗಾರಂಗಳುಂ—ಸುಣ್ಣಬಳಿದು ಬಿಳುಪೇರಿರುವ ಮನೆಗಳೂ ; ನೆಲೆಯ ಮಾಡಂಗಳುಂ—ಉಪ್ಪರಿಗೆಯ ಮನೆಗಳೂ ; ೨೧. ಬರವುಮಂ ಪೋಗುಮಂ — ಬರುವುದನ್ನೂ ಹೋಗುವುದನ್ನೂ ; ೨೪. ಮಾಡಕ್ಕೆ—ಮನೆಗೆ ; ೨೬. ಮಗುೞೆ ಮಗುೞೆ—ಮತ್ತೆ ಮತ್ತೆ ; ಬಡ್ಡಿಸೆ—ಬಡಿಸಲು ; ಚರಿಗೆಮಾಡಿ—ಊಟಮಾಡಿ ; ೨೭. ಆವಾಸಕ್ಕೆ—ಮನೆಗೆ ;

೯೦. ೧: ಇನಿಸಾನುಂ ತಿಣ್ಣಂ—ಸ್ವಲ್ಪ ತೀವ್ರವಾಗಿ, ಬೇಗನೆ ; ತೊೞಲ್ವಲ್ಲಿ—ಸುತ್ತಾಡುವಲ್ಲಿ ; ೭. ಅವಮೋದರ್ಯ ಚರಿಗೆ—ಹೊಟ್ಟೆ ತುಂಬುವುದಕ್ಕೆ ಬೇಕಾವ ಮೂವತ್ತೆರಡು ತುತ್ತುಗಳಲ್ಲಿ ದಿನಕ್ಕೆ ಒಂದರಂತೆ ಕಡಮೆಮಾಡಿ ಊಟಮಾಡುವುದು ; ೧೦. ಮುಡಿಪಿ—ಸತ್ತು ; ೧೨. ನಿಸಿದಿಗೆಯುಂ—ಬೃಂದಾವನವನ್ನು, ಗೋರಿಯನ್ನು ; ೧೪. ತಿಮುೞನಾೞ್ಗೆ—ತಿಗುಳರ ನಾಡಿಗೆ ಎಂದರೆ ತಮಿಳುನಾಡಿಗೆ ; ೧೫. ನಿರುಪಸರ್ಗದಿಂ—ಉಪಸರ್ಗವಿಲ್ಲದೆ ; ೧೬. ಬಡಗನಾಡ—ಉತ್ತರದೇಶದ, ಉತ್ತರಾಪಥದ ; ಪಸವು—ಕ್ಷಾಮ ; ತಿಳಿದುದು — ಹೋಯಿತು ; ೨೨. ಬರ್ದೋರ್ — ಬಾಳಿದರು ; ೨೩. ತಲೆನವಿರ್—ತಲೆಗೂದಲು ; ಪ್ರತಿವಂದನೆ—ನಮಸ್ಕಾರಕ್ಕೆ ಪ್ರತಿ ನಮಸ್ಕಾರ ; ೨೬. ಕೆಂದು—ಮಲಗಿ, “ಕೆಂದಿದ ಮೀನಂ ತಳ್ತಾಡದಿರ್ದ ಮಡುವಂ ಪೋಲ್ತಂ—ಸುಪ್ತಮೀನಮಿವಹ್ರದಾ” ; “ಕೇ—ಶಯನೇ” ; ೨೭. ಸೇದೆವಟ್ಟಿರ್—ಆಯಾಸಗೊಂಡಿರಿ ; ೨೮. ಪೋಕೆಂದೊಡೆ—ಹೋಗಲಿ ಎಂದರೆ, ಪೋಗಿಮೆಂದೊಡೆ ಎಂಬ ಪಾಠ

ಸ್ವೀಕರಣ ಯೋಗ್ಯ ; ೨೯. ಕೆಮ್ಮನೆ—ಸುಮ್ಮನೆ ; ತಾಂಗಿದಪಿರ್—ತಡೆಯುತ್ತೀರಿ ;

೯೧. ೨ : ಇಂಬುಕೆಯ್ವಂ — ಆಶ್ರಯ ಕೊಡೋಣ, ಅಂಗೀಕರಿಸೋಣ ; ೮. ಬ್ರಹ್ಮಯ್ಯಾ — ಬ್ರಹ್ಮಚಾರಿಯೇ, ಮಾಣಿಯೇ ; ಗುಂಡಿಗೆಯಂ—ಕಮಂಡುಲುವನ್ನು ; ೧೩. ಎೞಿಲ್ವ — ನೇತು ಬಿದ್ದಿರುವ ; ೧೬. ನಿಡಿಯ ಮರದ—ಎತ್ತರವಾದ ಮರದ ; ೧೯. ಬರ್ದಿರ್—ಬಾಳಿದಿರಿ ; ೨೦. ಏವಂಗೊಳ್ಳದೆ—ಅಸಮಾಧಾನಪಡದೆ, ಕೋಪಿಸದೆ ; ೨೪. ಬಾರಿಸಿ—ತಡೆದು ; ಲೋಚುಗೆಯ್ದು—ಕೂದಲನ್ನು ಜೋಳಿಸಿ, ಎಂದರೆ ಕಿತ್ತುಹಾಕಿ, ಸಂ. ಲುಂಛನ ;

೯೨. ೩ : ಲವಟುಗಳ—? ಇದರ ಪಾಠವಲ್ಲಿ ಕ್ಲೇಶವಿದೆ, 'ಬೃಹತ್ಕಥಾ ಕೋಶ'ದ ಈ ಸಂದರ್ಭದಲ್ಲಿ ವೈದೇಶಿಕಜನೈಃ ಎಂದರೆ ಅನ್ಯದೇಶೀಯರಿಂದ ಎಂದು ಬರುತ್ತದೆ, ಲವಟು ಎಂಬುದಕ್ಕೆ ಆ ಅರ್ಥವಿರಬಹುದೇನೋ ? ಪೆಱಲಾಗ—ಪಡೆಯಲಾಗದು ; ಮೇಲ್ವಾಯ್ದು—ಮೇಲೆ ನುಗ್ಗಿ ; ೫. ಅಟ್ಟು—ಅಡಿಗೆಮಾಡಿ ; ೮. ಮಡಗಿಟ್ಟು—ಜೋಪಾನವಾಗಿಟ್ಟು ; ೯. ನಿರ್ಗ್ರಂಥಯತಿ—ದಿಗಂಬರ ಯತಿ ; ೧೦. ಬಸಿಪ್ಪೆಂಡಿತಿ—ಗರ್ಭಿಣಿ ; ೧೨. ಕರ್ದಿಂಗಳಿರುಳೊಳ್—ಅಮಾವಾಸ್ಯೆಯ ರಾತ್ರಿಯಲ್ಲಿ, ಕರಿದು + ತಿಂಗಳ್, ಬೆಳ್ದಿಂಗಳ್‌ಗೆ ವ್ಯತಿರಿಕ್ತವಾದುದು ; ಕೞ್ತಲೆಯೊಳ್—ಕತ್ತಲೆಯಲ್ಲಿ ; ೧೩. ಬಸಿಱುೞಿದತ್ತು—ಗರ್ಭಸ್ರಾವವಾಯಿತು ; ೧೬. ಪಸವು ಕೞಿವನ್ನೆಗಂ—ಕ್ಷಾಮವು ಹೋಗುವವರೆಗೆ ; ಎೞಿಲಿಕ್ಕಿ—ಜೋಲುವಂತೆ ಬಿಟ್ಟು ; ಅರ್ಧಗಪ್ಪಡಮಂ—ಅರೆವಸ್ತ್ರವನ್ನು ; ೧೭. ಮುಯ್ಪಿನ ಮೇಗೆ—ಹೆಗಲ ಮೇಲೆ ; ೧೯. ಪಾಂಗಿನೊಳ್—ರೀತಿಯಲ್ಲಿ ; ನೆಗೞ್ದು—ಮಾಡಿ ;

೯೩. ೧ : ಕೊಳಲ್ ಒಲ್ಲದವರ್—ದಿಗಂಬರತ್ವವನ್ನು ಸ್ವೀಕರಿಸಲು ಒಪ್ಪದವರು ; ೨. ಅರ್ಧಗಪ್ಪಡದ ತೀರ್ಥಮಂ—ಅರೆವಸ್ತ್ರಧಾರಣೆಯ ಶಾಖೆಯನ್ನು, ಸಂಪ್ರದಾಯವನ್ನು ; ನೆಗೞ್ಚಿದರ್—ಮಾಡಿದರು ; ೪. ರಾಜ್ಯಂಬರೆಗಂ—ರಾಜ್ಯದವರೆಗೂ ; ೧೬. ಪಟಿಯಂ ಸಯ್ತುಟ್ಟುಕೊಂಡು—ವಸ್ತ್ರವನ್ನು ಸರಿಯಾಗಿ ಉಟ್ಟುಕೊಂಡು ; ೧೭. ಆ ದಿವಸಂ ತಗುಳ್ದು—ಆ ದಿನದಿಂದ ಹಿಡಿದು ; ೧೮. ಕಚ್ಚೆಗಟ್ಟದೆ—ಕಚ್ಚೆ ಹಾಕದೆ ; ಸಯ್ತುಡುವರುಂ—ಸರಿಯಾಗಿ ಧರಿಸುವವರೂ ; ಕುಱುವಡವಂ = ಕುಱು ವಡಿಯಂ — ಚಿಕ್ಕ ಮಡಿವಸ್ತ್ರವನ್ನು ; ಪೊದೆವರುಂ—ಹೊದೆಯುವವರೂ ; ೧೯. ಕಂಬಳ ತೀರ್ಥಂ—ಕಂಬಳಿ ಹೊದೆಯುವ ಸಂಪ್ರದಾಯ ಅಥವಾ ಶಾಖೆ ; ಶ್ವೇತಪಟರ್—ಶ್ವೇತಾಂಬರರು ; ೨೦. ಅವರಯೆ — ಅವರದೇ ; ಸಂತತಿಯ — ಪರಂಪರೆಯ ; ೨೧. ಶ್ವೇತಭಿಕ್ಷು ಜಾಪುಲಿ ಸಂಘ—ಶ್ವೇತಾಂಬರ ಯತಿಗಳ ಜಾಪುಲಿ ಎಂಬ ನಗರದ ಸಂಘ, ಜಾಪುಲಿ—"ಸಾವಲಿ ಪತ್ತನೇ" (ಬೃ. ಕ. ಕೋ. ೧೩೧—೮೧) ; ಮೊದಲಿಗನಾದಂ—ಮೂಲ ಪುರುಷನಾದನು ; ೨೫. ಪೇೞ್ದುದು—ಹೇಳಲ್ಪಟ್ಟಿತು ;

೯೪. ೨ : ದಂಸಮಸಕಾದಿ=ದಂಶಮಶಕಾದಿ—ಸೊಳ್ಳೆ ಗುಂಗಾರು ಮುಂತಾದುವು ; ಮುಡಿಪಿ—ಸತ್ತು ; ಅಪವರ್ಗ ಸುಖ—ಮೋಕ್ಷಸುಖ.

## ೭. ಲಲಿಘಟೆಯ ಕಥೆ

೯೫. ೬: ಎೞ್ಚೆಯ ಪಟ್ಟತ್ತು—ಎಳೆಯಲ್ಪಟ್ಟಿತು, ಕೊಚ್ಚಿಹೋಯಿತು; ಪೂರದಿಂದ—ಪ್ರವಾಹದಿಂದ; ೭. ಕಡಿದಪ್ಪುದಱಿಂದಂ—ಅತ್ಯಂತ ವೇಗವುಳ್ಳದ್ದರಿಂದ; ಪೊರ್ದಿತ್ತು—ಹೊಂದಿತು, ಪಡೆಯಿತು; ೧೭. ಓರನ್ನರಪ್ಪರ್—ಒಂದೇ ತೆರನಾದವರು, ಸಮಾನರಾದಂಥವರು; ೧೭. ಮಿಥ್ಯಾದೃಷ್ಟಿಗಳ್ — ಜೈನಧರ್ಮದಲ್ಲಿ ನಂಬಿಕೆಯಿಲ್ಲದವರು, ಕುದೃಷ್ಟಿಗಳು; ೨೪. ಸಮನಿಸದೆ—ದೊರಕದೆ, ಸಿಕ್ಕದೆ;

೯೬. ೨: ಆಯತಿಯಿಂ—ಮನದ ನಿರೋಧದಿಂದ, ಏಕಾಗ್ರತೆಯಿಂದ; ತೊಟ್ಟನೆ—ಬೇಗನೆ; ಸರ್ವಾಂಗಮಲಧಾರಿಗಳ್—ದೇಹದ ಎಲ್ಲ ಅಂಗಗಳಲ್ಲೂ ಮಲವನ್ನು ಧರಿಸಿರುವವರು, ಸ್ನಾನ ಶೌಚಗಳನ್ನು ಮಾಡದವನಿಗೆ ಮಲಧಾರಿ ಎಂಬ ಹೆಸರು; ೩. ಪರಿವಿಡಿಗೆಯ್ಯುತ್ತುಂ—ಅನುಕ್ರಮವಾಗಿ ಹೇಳುತ್ತ; ಸ್ವಾಧ್ಯಾಯದೊಳ್—ಓದಿನಲ್ಲಿ, ಅಭ್ಯಾಸದಲ್ಲಿ; ೪. ತಗುಳ್ದಿರ್ದೋರಂ—ಕೂಡಿದ್ದವರನ್ನು; ಸಂಘನ್ನವಪ್ಪ—ದಟ್ಟವಾದ; ಗೆಂಟೞಿಂದಂ — ದೂರದಿಂದ; ೬. ತಿರುವಾಯೊಳ್ — ಹೆದೆಯ ಬಾಯಲ್ಲಿ, ಹೆದೆಯಲ್ಲಿ; ೭. ಪೆಱಗಣ್ಗೆ—ಹಿಂದಕ್ಕೆ; ೮. ಸಾರೆ—ಹತ್ತಿರ; ೯. ಉಪಶಮಮುಮಂ—ಸಮಾಧಾನಚಿತ್ತತೆಯನ್ನೂ; ೧೧. ಪೇೞಿಂ—ಹೇಳಿರಿ;

**ಗಾಹೆ ||** ಪುಟ ೧೧ ನೋಡಿ.

೧೬. ಯಮ—ಇಂದ್ರಿಯಾದಿಗಳ ನಿಗ್ರಹ; ನಿಯಮ—ಸಾಮಾನ್ಯ ನೇಮಗಳು; ಸ್ವಾಧ್ಯಾಯ—ಸ್ವಂತವಾಗಿ ವಿದ್ಯೆ ಕಲಿಯುವುದು; ಧ್ಯಾನ—ಚಿಂತಿಸುವುದು; ಅನುಷ್ಠಾನ—ಆಚರಣೆ;

**ಗಾಹೆ ||** ಪಾವೇಣ—ಪಾಪದಿಂದ, ಣಿರಯತಿರಿಯಂ—ನರಕ ಮತ್ತು ಪ್ರಾಣಿಜನ್ಮಗಳನ್ನು, ಗಮ್ಮಇ—ಪಡೆಯುತ್ತಾನೆ; ಧಮ್ಮೇಣ—ಧರ್ಮದಿಂದ, ದೇವಲೋಗಂತು—ದೇವಲೋಕವನ್ನು (ಪಡೆಯುತ್ತಾನೆ); ಮಿಸ್ಸೇಣ—ಪಾಪ ಪುಣ್ಯಗಳ ಮಿಶ್ರಣದಿಂದ, ಮಾಣುಸತ್ತಂ—ಮನುಷ್ಯತ್ವವನ್ನು, ಗಮ್ಮಇ; ದೋಣ್ಣಂಪಿ—ಮತ್ತು ಅವೆರಡರ, ಖಯೇಣ—ಕ್ಷಯದಿಂದ, ನಾಶದಿಂದ, ಣಿವ್ವಾಣಂ—ನಿರ್ವಾಣವನ್ನು ಎಂದರೆ ಮೋಕ್ಷವನ್ನು, ಗಮ್ಯತಿ;

೨೬. ಪೊಲ್ಲಮೆಗಳೊಳ್—ಕೆಟ್ಟ ಕಾರ್ಯಗಳಲ್ಲಿ; ನೆಗೞ್ದು—ಆಚರಿಸಿ; ೨೮. ನಾರಕರಾಗಿ — ನರಕಜೀವಿಗಳಾಗಿ; ಛೇದನ — ಕತ್ತರಿಸುವಿಕೆ; ಭೇದನ — ಸೀಳುವಿಕೆ; ೨೭. ಪೂರಣ—ತುಂಬುವಿಕೆ; ಚೂರಣ — ಪುಡಿಮಾಡುವುದು; ಪೀಡನ—ಹಿಂಸಿಸುವುದು; ಬಂಧನಂಗಳುಮಂ—ಕಟ್ಟುವುದನ್ನೂ; ಮುಟ್ಟಿಗೆಯೊಳಿಟ್ಟು—ಕೊಡತಿಗಳಿಂದ ಹೊಡೆದು; ತೆಗಪುವುದುಂ—(ಚಿಮ್ಮಟಗಳಿಂದ) ಎಳೆಯುವುದೂ (?;) ೨೮. ಕೊಂತಂಗಳಿಂದಂ—ಒನಕೆಗಳಿಂದ; ಇಟ್ಟಿಗಳಿಂದಂ—ಈಟಿಗಳಿಂದ; ಸೋರೆ—ಹೊರಕ್ಕೆ ಜಾರಿಬರುವಂತೆ; ಕುತ್ತುವುದುಂ—ಚುಚ್ಚುವುದೂ; ೨೯. ತೆಗಲೆಯಂ—ಕೊರಳ ಮೇಲ್ಭಾಗವನ್ನು; ಮೊಕ್ಕನೆ ಪೋಗೆ—ಮೊಕ್ಕೆಂದು ಕತ್ತರಿಸುವಂತೆ; ಇಡುವುದುಂ—ಬೀಸಿ

ಹೊಡೆಯುವುದೂ ; ಪೋೞ್ಪಂತೆ—ಹೋಳುಮಾಡುವ ಹಾಗೆ ; ಕರಗಸಂಗಳಿಂ—ಗರಗಸ ಗಳಿಂದ ;

೯೭. ೧: ಉದ್ದಂ—ಉದ್ದಕ್ಕೂ, ಮೇಲಿನಿಂದ ಕೆಳಗಣವರೆಗೆ; ೨. ಪೊತ್ತು ಪ್ಪೊಡಂ—ಹೊತ್ತಾದರೂ ; ಉಸಿರ್ಪೊತ್ತಿಲ್ಲದೆ—ಉಸಿರಿನ ಎಂದರೆ ಪ್ರಾಣದ ಪತ್ತು ಎಂದರೆ ಸಂಬಂಧವಿಲ್ಲದೆ, ನಿಶ್ಚೇತನವಾಗಿ ಎಂದು ಈಗಿರುವಂತೆ ಅರ್ಥ, ಆದರೆ ಇಲ್ಲಿ ಏನೋ ಪಾಠಕ್ಲೇಶವಿರಬಹುದು, ಉಸಿರಲ್ ಅಥವಾ ಉಸಿರೆ ಪೊತ್ತಿಲ್ಲದೆ ಎಂದಿದ್ದರೆ ಉಸಿರಾಡುವುದಕ್ಕೆ ಕೂಡ ಹೊತ್ತಿಲ್ಲದೆ, ಎಂದರೆ ಸಂತತವಾಗಿ, ಎಡೆಬಿಡದೆ ಎಂಬರ್ಥವಾಗ ಬಹುದು, ಇದೇ ಮಾತು ವಿದ್ಯುಚ್ಚೋರನ ಕಥೆಯಲ್ಲಿಯೂ ಬರುತ್ತದೆ, (ಪು. ೧೨೭–೧೭) ; ೩. ಒಯ್ಯನೆ—ಮೆಲ್ಲಗೆ; ೪. ಸೀನಾರ್ಯುಂ—ಕಾಡುನಾಯಿಯೂ, ನೀರು ನಾಯಿಯೂ, "ಸಪ್ತವ್ಯಸನೋಪೇತಂ ಸೀನಾರ್ಯಾಗಿಯುಂ" ಎಂದು ನಯಸೇನನ ಪ್ರಯೋಗ, (ಧರ್ಮಾಮೃ. ೬-೧೮೮) ; ೫. ಎೞ್ತುಕೞ್ತೆಯುಂ—ಎತ್ತೂ ಕತ್ತೆಯೂ, ಎರ್ಮೆಯುಂ—ಎಮ್ಮೆಯೂ ; ಒಟ್ಟೆಯುಂ—ಒಂಟೆಯೂ ; ಉಡುವುಂ—ಉಡವೂ ; ೬. ಒಂತಿಯುಂ—ಓತೀಕೇತವೂ, ಮುಂಗುರಿಯುಂ—ಮುಂಗುಸಿಯೂ; ೭. ನೆಗೞುಂ—ಒಂದ ತೆರನಾದ ಮೊಸಳೆಯೂ ; ೮. ತಿಮಿ—ತಿಮಿಯೆಂಬ ಮಹಾ ಮೀನು ; ತಿಮಿಂ ಗಿಳ—ತಿಮಿಯನ್ನು ನುಂಗುವ ಪ್ರಾಣಿ ; ೯. ಕುರ್ಕು—ಒಂದು ಬಗೆಯ ನೀರಹಕ್ಕಿ, "ಕುಕ್ಕಿನೋಳಿ ಚೆಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ" (ಆದಿಪು. ೬-೭೧); ಪುರುಳಿ—ಸಾರಿಕೆ ಅಥವಾ ಹೆಣ್ಣುಗಿಳಿ ; ಪೆಂಗುರು—ಒಂದು ಬಗೆಯಾದ ದೊಡ್ಡ ಬಕ ಪಕ್ಷಿ, (ತೆಲುಗು) ಪೆಗ್ಗುರು, ಬೆಗ್ಗುರು ; ಕಾರಂಡ—ಒಂದು ಬಗೆಯ ನೀರುಕೋಳಿ ; ಆಂದೆ—ಗೂಬೆ ; ೧೩. ನೆಗೞ್ವರ್—ಮಾಡುವವರು ; ೧೫. ಆಗಂತುಕ—ಬರಲಿರುವ ; ೧೬. ಮೊದಲಾಗೊಡೆಯವಱಿಂದಂ—ಮೊದಲಾಗುಳ್ಳವುಗಳಿಂದ ;

**ಶ್ಲೋಕ** ॥ ಸುಖಸ್ಯಾನಂತರಂ—ಸುಖವಾದ ಬಳಿಕ, ದುಃಖಂ—ದುಃಖವು ; ದುಃಖಸ್ಯಾನಂತರಂ—ದುಃಖವಾದ ಬಳಿಕ, ಸುಖಂ—ಸುಖವು, (ಹೀಗೆ) ದುಃಖಾನಿಚ ಸುಖಾನಿಚ—ದುಃಖಗಳೂ ಸುಖಗಳೂ, ಚಕ್ರವತ್—ಚಕ್ರದಂತೆ, ಪರಿವರ್ತಂತೇ—ತಿರುಗುತ್ತವೆ.

೨೩. ಸೂೞ್ಸೂೞೊಳೆ—ಬಾರಿಬಾರಿಗೆ; ೨೭. ಕಲ್ಪಂಗಳೊಳ್—ಸ್ವರ್ಗಗಳಲ್ಲಿ (ಇವು. ೧೬) ; ಗ್ರೈವೇಯಕ—ಕಲ್ಪಗಳ ಮೇಲಿರುವ ೯ ಪ್ರದೇಶಗಳು, ಕಲ್ಪಾತೀತ ವಾದುವು ;

೯೮. ೧: ನವಾನುದ್ದಿಸೆಗಳ್—೯ ಅನುದ್ದಿಸೆಗಳು, ಇವು ಗ್ರೈವೇಯಕಗಳ ಮೇಲಿರುವ ಸ್ವರ್ಗಗಳು ; ೨. ಪಂಚಾಣುತ್ತರೆಗಳ್—೫ ಅನುತ್ತರೆಗಳು, ಇವು ಗ್ರೈವೇಯಕಗಳ ಮೇಲಿರುವುವು, ಇವುಗಳಲ್ಲಿ ಸರ್ವಾರ್ಥಸಿದ್ಧಿಯೆಂಬ ಸ್ವರ್ಗ ಕೊನೆ ಯದು, ಆದರಾಚೆ ಸಿದ್ಧಶಿಲೆ, ಅಲೋಕಾಕಾಶ ; ೩. ಪಾಸಿನ ಪೊರೆಯೊಳ್—ಹಾಸಿ ಗೆಯ ಹತ್ತಿರ; ೧೧. ಮೊದಲಾಗೊಡೆಯವಿಲ್ಲದೊರ್—ಮೊದಲಾಗುಳ್ಳುವಿಲ್ಲದವರು ;

೧೩. ತೇಜದೊರಾಗಿ — ತೇಜಸ್ಸುಳ್ಳವರಾಗಿ ; ೨೨. ಪಶ್ಚಾತ್ಕಾಲದೊಳ್—ಅನಂತರ ಕಾಲದಲ್ಲಿ, ಆಮೇಲೆ ;

**೯೯.** ೬ : ಮಗುಟ್ಟಿ ಮಗುಟ್ಟಿ ಬರವುಂ—ಮತ್ತೆ ಮತ್ತೆ ಬರುವುದೂ ಎಂದರೆ ಹುಟ್ಟುವುದೂ ; ೮. ಪೊರೆಯದುದಂ—ವ್ಯಾಪ್ತವಾಗದಿರುವುದನ್ನು ; ಒಡೆತಪ್ಪುದಂ—ಉಳ್ಳುದನ್ನು ; ೧೧. ಒರ್ಮ್ಮೊದಲೆ—ಒಟ್ಟಿಗೆ, ಏಕಕಾಲದಲ್ಲಿ ; ೧೪. ಪಾತಕರೆಮುಂ—ಪಾಪಿಗಳಾಗಿದ್ದೇವೆ, ಮತ್ತು ; ಪೊಲ್ಲಕೆಯ್ದೆಮುಂ—ಕೆಟ್ಟುದನ್ನು ಮಾಡಿದ್ದೇವೆ ಮತ್ತು ; ಕೊಂದೆಮುಂ—ಕೊಂದಿದ್ದೇವೆ, ಮತ್ತು ; ೧೫. ಬರ್ದುಂಕಿದರ್—ಬದುಕಿದರು, ತಪ್ಪಿಸಿಕೊಂಡರು (ಕೊಲೆಯಿಂದ) ; ೧೭. ಪಿಂಗದು—ಹೋಗದು ; ೧೮. ವಾರಿಸಿದರ್—ತಡೆದರು, ನಿವಾರಿಸಿದರು ; ೧೯. ನಾಮೇನಂ ಬಗೆದೊಂ—ನಾವು ಏನನ್ನು ಆಲೋಚಿಸಿದೆವು ; ೨೫. ಕಿಱಿದೆಯಾಯುಷ್ಯಂ—ಸ್ವಲ್ಪವೇ ಆಯುಸ್ಸು ; ೨೭. ಆಮೆಲ್ಲಂ—ನಾವೆಲ್ಲ ; ಕೂಸುಗಳೆಮುಂ—ಚಿಕ್ಕವರಾಗಿದ್ದೇವೆ, ತರುಣರಾಗಿದ್ದೇವೆ, ಮತ್ತು ;

**೧೦೦.** ೧ : ನವಯೌವನರೆಮುಂ — ಹೊಸ ಹರೆಯದವರಾಗಿದ್ದೇವೆ, ಮತ್ತು ; ೨. ಎಮಗೆಲ್ಲೊರ್ಗಂ—ನಮ್ಮೆಲ್ಲರಿಗೂ ; ೪. ನೀರದೆಸೆಯಿಂದಂ—ನೀರಿನಿಂದ, ನೀರು ಕಾರಣವಾಗಿ ; ೭. ಸಾಭಿಜ್ಞಾನಮೇನ್—ಸರಿಯಾದ ಕುರುಹು ಏನು ; ೮. ಪೊಳೆಯಿಸುತ್ತಂ—ಹೊರಳಿಸುತ್ತ ; ಒದಱಿ—ಕೂಗಿ ; ಬಗ್ಗಿಸಿದೊಡೆ—ಬಯ್ದರೆ ; ೧೦. ಅದಱ ಕೆಯ್ತಮಂ—ಆ ಕೂಸಿನ ಕೆಲಸವನ್ನು ; ೧೩. ತೊಱೆತೀವುಗುಂ—ನದಿಯು ತುಂಬುತ್ತದೆ, ಉಬ್ಬಿ ಹರಿಯುತ್ತದೆ ; ೧೯. ಉಬ್ಬೆಗಂ ಬಟ್ಟು—ಉದ್ವೇಗ ಹೊಂದಿ, ವ್ಯಥೆಪಟ್ಟು ; ೨೪ ಭವ್ಯರೆಮೊ—ನಾವು ಭವ್ಯರಾಗಿದ್ದೇವೆಯೊ ? ; ಅಭವ್ಯರೆಮೊ—ನಾವು ಅಭವ್ಯರಾಗಿದ್ದೇವೆಯೊ ? ; ೨೫. ಭವ್ಯರಿರ್—ನೀವು ಭವ್ಯರಾಗಿದ್ದೀರಿ ; ೨೭. ಸ್ವರ್ಣಪಾಷಾಣದೊಳ್—ಚಿನ್ನದ ಕಲ್ಲಿನಲ್ಲಿ ಎಂದರೆ ಚಿನ್ನದ ಅದಿರಿನಲ್ಲಿ ; ದಹನ—ಸುಡುವಿಕೆ.

**೧೦೧.** ೧ : ತಾಪನ — ಕಾಯಿಸುವಿಕೆ ; ಪಿಂಡಿ ಬಧ್ನನ — ಮುದ್ದೆಕಟ್ಟುವಿಕೆ ; ಕ್ರಿಯೆವೆಱದನ್ನೆಗಂ—ಕ್ರಿಯೆಗಳನ್ನು ಪಡೆಯುವವರೆಗೂ ;

ಶ್ಲೋಕ|| ಸ್ಥಿತಸ್ಯವಾ—ನಿಂತುಕೊಂಡಿರುವವನದಾಗಲಿ, ನಿಷಣ್ಣಸ್ಯವಾ—ಕುಳಿತುಕೊಂಡಿರುವವನದಾಗಲಿ, ಪುನಃ ಸುಪ್ತಸ್ಯ—ಮತ್ತೆ ಮಲಗಿಕೊಂಡಿರುವವನದಾಗಲಿ, ಯಾವತ್—ಯಾವಾಗ, ಸರ್ವಾಭೀಷ್ಟ ಪರಿತ್ಯಾಗಃ—ಎಲ್ಲ ಆಕಾಂಕ್ಷೆಗಳನ್ನು ಬಿಡುವುದು, ಪ್ರಾಯೋಪಗಮನಂ ಸ್ಮೃತಃ—ಪ್ರಾಯೋಪಗಮನವೆಂದು ತಿಳಿಯುವುದು.

೭. ವಖ್ಖಾಣಿಸಿ ಪೇೞೆ—ವ್ಯಾಖ್ಯಾನಮಾಡಿ ಹೇಳಲು ಎಂದರೆ ಸವಿಸ್ತಾರವಾಗಿ ತಿಳಿಸಲು ; ೧೧. ಏಕ ಪಾರ್ಶ್ವದೊಳ್—ಒಂದು ಮಗ್ಗುಲಲ್ಲಿ ; ೧೨. ಮಗುಬಿದೆ—ಹೊರಳಾಡದೆ ; ೧೪. ಮೆಯ್ಯಂ ತೊಱೆದಿರ್ದರ್—ದೇಹಾಭಿಮಾನವನ್ನು ಬಿಟ್ಟಿದ್ದರು ; ಮೞೆಕೊಂಡು ಪೂರಂ ಬಂದು—ಮಳೆ ಸುರಿದು ಪ್ರವಾಹ ಬಂದು ; ೧೮. ಮುಡಿಪಿ—ಸತ್ತು ; ೨೦. ಏಕಹಸ್ತಪ್ರಮಾಣ—ಒಂದು ಮೊಳ ಅಳತೆಯುಳ್ಳ ;

## ೮. ಧರ್ಮಘೋಷ ಭಟಾರರ ಕಥೆ

೧೦೨. ೭: ಆದಮಾನುಂ ಕಡಿದಪ್ಪುದಱಿಂದಂ—ವಿಶೇಷ ತೀವ್ರತೆಯನ್ನುಳ್ಳದ್ದ ರಿಂದ; ೧೬. ಬರ್ಪೊರ್—ಬರುವವರು;

ವೃ ॥ ಧರ್ಮಪ್ರವರಃ ಕಃ—ಧರ್ಮದಲ್ಲಿ ಶ್ರೇಷ್ಠನಾದವನು ಯಾರು; ದಯಾತ್ಮ ಸುಭಗಃ—ದಯೆಯಿಂದ ಕೂಡಿದ ಆತ್ಮ ಸೌಭಾಗ್ಯವನ್ನುಳ್ಳವನು; ಕಃ ನರಃ—ಯಾವ ಮನುಷ್ಯನು, ಪಂಡಿತಂಸ್ಯಾತ್—ಪಂಡಿತನಾಗಿದ್ದಾನೆ, ವಶಗಾ—ವಶವಾಗಿರುವವಳು; ಕಾ ಯೋಷಿತ್—ಹೆಂಗಸು ಯಾರು, ಕಲಿಷ್ಕಯತಿ—?; ಕ್ರೋಧಃ—ಕೋಪವು, ಅಶುಭಸ್ಯ—ಅಮಂಗಳದ, ಉದಯಃ—ಹುಟ್ಟುವಿಕೆ; ಅಲಕ್ಷ್ಮೀಃ—ಲಕ್ಷ್ಮಿಯಲ್ಲದವಳು, ಕಾ—ಯಾರು, ಅವಿಚಾರಕಾರ್ಯ ಘಟನಾ—ವಿಚಾರವಿಲ್ಲದೆ ಕಾರ್ಯಮಾಡುವುದು; ಆತ್ಮನಃ—ಆತ್ಮನ, ಮಿತ್ರಂ ಕಿಂ—ಸ್ನೇಹಿತನು ಯಾರು, ಆತ್ಮಾ—ಮನಸ್ಸು; ಭುವಿ—ಲೋಕದಲ್ಲಿ, ಕಿಂ—ಯಾವುದು, ಸೌಖ್ಯಂ—ಸುಖವು, ಶಾಸ್ತ್ರವಾಚನಮತಿಃ—ಶಾಸ್ತ್ರವನ್ನು ಓದುವ ಬುದ್ಧಿಯು; ಕಾವಾ ಗತಿಃ—ಗುರಿ ಯಾವುದು, ನಿರ್ವೃತಿಃ—ಮೋಕ್ಷವು.

ಸಮ್ಯಕ್ತ್ವೋತ್ತಮ ಹಸ್ತಿಮಸ್ತಕ ಗತಃ—ಸಮ್ಯಕ್ತ್ವವೆಂಬ ಆನೆಯ ತಲೆಯ ಮೇಲೆ ಕುಳಿತಿರುವ; ಸುಜ್ಞಾನಕೇತು ಪ್ರಜೋ—ಒಳ್ಳೆ ಜ್ಞಾನವೆಂಬ ಧ್ವಜಗಳ ಸಮೂಹವುಳ್ಳವನಾದ; ನಾನಾ ಶೀಲಗುಣ ವ್ರತೋರು ಪೃತನಃ—ನಾನಾ ಬಗೆಯಾದ ಶೀಲಗಳೆಂಬ ಗುಣಗಳೆಂಬ ವ್ರತಗಳೆಂಬ ಶ್ರೇಷ್ಠವಾದ ಸೈನ್ಯವನ್ನುಳ್ಳ, ಸ್ವಾಧ್ಯಾಯ ಶಂಖಧ್ವನಿಃ—ಶಾಸ್ತ್ರಾಭ್ಯಾಸವೆಂಬ ಶಂಖದ ಧ್ವನಿಯುಳ್ಳ, ಭಾಸ್ವತ್‌ಸಂವರ ಭೂರಿಚಾರುಕವಚೋ—ಪ್ರಕಾಶಮಾನವಾದ ಸಂವರವೆಂಬ ಅತಿಶಯ ಸುಂದರವಾದ ಕವಚವನ್ನುಳ್ಳವನು; ನಾತೀವ ತೀಕ್ಷ್ಣಾಯುಧಃ—ಅತಿ ತೀಕ್ಷ್ಣವಾದ ಆಯುಧಗಳಿಲ್ಲದವನು, ಸ್ವರ್ಮೋಕ್ಷ ವೃತ್ತಿಪದಃ—ಸ್ವರ್ಗ ಮತ್ತು ಮೋಕ್ಷದ ಸ್ಥಿತಿಯನ್ನು ಕೊಡುವವನಾದ, ಧರ್ಮ ಮಹಾನೃಪಃ—ಧರ್ಮವೆಂಬ ಮಹಾರಾಜನು, ಬುಧಭಟೈಃ—ವಿದ್ವಾಂಸರೆಂಬ ಸೈನಿಕರಿಂದ, ಸೇವ್ಯೋ—ಸೇವಿಸಲ್ಪಟ್ಟವನು.

೧೦೩. ಶ್ಲೋಕ ॥ ಧರ್ಮಾರ್ಥಕಾಮ ಮೋಕ್ಷಾಣಾಂ—ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ, ಏಕಃ ಅಪಿ—ಒಂದಾದರೂ, ಯಸ್ಯ—ಯಾರಿಗೆ, ನವಿದ್ಯತೇ—ಇಲ್ಲವೋ, ತಸ್ಯ ಜನ್ಮ—ಅವನ ಜನ್ಮವು, ಅಜಾಗೃಸ್ತನಸ್ಯ ಇವ—ಮೇಕೆಯ ಕೊರಳ ಕೆಳಗೆ ಇರುವ ಮೊಲೆಗಳಂತೆ, ನಿರರ್ಥಕಂ—ಪ್ರಯೋಜನವಿಲ್ಲದ್ದು.

ವೃ ॥ ಯೇಷಾಂ—ಯಾರಿಗೆ, ನ ವಿದ್ಯಾ—ವಿದ್ಯೆ ಇಲ್ಲವೋ, ನ ತಪೋ—ತಪಸ್ಸಿಲ್ಲವೋ, ನ ದಾನಂ—ದಾನವಿಲ್ಲವೋ, ನಾಪಿ ಏವಶೀಲಂ—ಶೀಲವು ಕೂಡ ಇಲ್ಲವೋ, ನಗುಣೋ—ಗುಣವಿಲ್ಲವೋ, ನಧರ್ಮಃ—ಧರ್ಮವಿಲ್ಲವೋ, ತೇ—ಅವರು, ಮರ್ತ್ಯ ಲೋಕೇ ಭುವಿ—ಮೃತಿಯನ್ನು ಹೊಂದುವ ಸ್ವಭಾವವುಳ್ಳ ಲೋಕದಲ್ಲಿ, ಭಾರಭೂತಾಃ—ಭಾರವಾಗಿ ಪರಿಣಮಿಸಿದವರು, ಮನುಷ್ಯ ರೂಪೇಣ—ಮನುಷ್ಯನ ಆಕಾರದಿಂದ, ಮೃಗಾಃ—ಪ್ರಾಣಿಗಳಾಗಿರುವವರು, ಚರಂತಿ—ನಡೆಯುತ್ತಾರೆ.

ಶ್ಲೋಕ ॥ ಪರಸ್ಪರಂ ಭಕ್ಷಯಿತ್ವಾ—ಒಂದನ್ನೊಂದು ತಿನ್ನುತ್ತ, ಕ್ರಿಮಯಃ—ಕ್ರಿಮಿಗಳು, ಕಿಂ ನ ಜೀವಂತಿ—ಬದುಕುತ್ತಿಲ್ಲವೇನು ; ಪರಲೋಕಾ ವಿರುದ್ಧೇನ—ಪರಲೋಕಕ್ಕೆ ವಿರೋಧವಿಲ್ಲದ ರೀತಿಯಿಂದ ಯಃ—ಯಾರು, ಜೀವತಿ=ಜೀವಿಸುತ್ತಾನೋ, ಸಃ—ಅವನು, ಜೀವತಿ—ಶ್ಲಾಘ್ಯವಾಗಿ ಜೀವಿಸುತ್ತಾನೆ. ಯೇನ—ಯಾವುದರಿಂದ, ಅಪವಾದಃ—ನಿಂದೆಯು, ಭವೇತ್—ಉಂಟಾಗುವುದೋ, ಯೇನ ಚ—ಮತು; ಯಾವುದರಿಂದ, ಅಪ್ರತ್ಯಯೋ—ಅವಿಶ್ವಾಸವು, ಭವೇತ್—ಉಂಟಾಗುವುದ್ಕೋ ಯೇನ—ಯಾವುದರಿಂದ, ನರಕಃ—ನರಕವು, ಗಮ್ಯತೇ—ಪ್ರವೇಶಿಸಲ್ಪಡುವುದೋ, ತತ್ಕರ್ಮ—ಆ ಕಾರ್ಯವನ್ನು ನ ಸಮಾಚರೇತ್—ಆಚರಿಸಬಾರದು.

೧೬. ಶಾಸ್ತ್ರಪಾರಗರಾಗಿ—ಶಾಸ್ತ್ರದ ಆಚೆಯ ದಡವನ್ನು ಕಂಡವರಾಗಿ, ಎಂದರೆ ಪರಮಪಂಡಿತರಾಗಿ ; ೧೮. ತಾಮರೆಗೊಳದ—ತಾವರೆಯ ಕೊಳದ ; ೨೦. ಶ್ರಾವಕರ್ಕಳಿಲ್ಲಂ—ಜೈನಗೃಹಸ್ಥರೆಲ್ಲ ; ನಮ್ಮ ನೋಂತುದಂ—ನಾವು ಉಪವಾಸವ್ರತಮಾಡಿದ್ದನ್ನು ; ಪಾರಣೆಯಂ—ಉಪವಾಸಾಂತ್ಯದಲ್ಲಿ ಮಾಡುವ ಊಟವನ್ನು ; ೨೧. ಸಾರ್ತರ್ಪುಂ—ಹತ್ತಿರ ಬರುತ್ತದೆ, ಸೇರುತ್ತದೆ ; ೨೨. ಚರಿಗೆವುಗದೆ—ಭಿಕ್ಷಕ್ಕಾಗಿ ಗೃಹಪ್ರವೇಶಮಾಡದೆ ; ತುಱುಪಟ್ಟಿಗೆ—ದನಗಳ ಹಟ್ಟಿಗೆ ;೨೩. ಅಲ್ಲಿಂದೆರ್ದು ನಾಡೆ ಗೆಂಟುಪೋದತ್ತು—(ಆ ತುರುಹಟ್ಟಿ) ಆ ಎಡೆಯಿಂದ ಎದ್ದು ಬೇರೆ ಎಡೆಗೆ ಬಹುದೂರ ಹೋಯಿತು ; ೨೪. ಪೆಱತೊಂದು — ಬೇರೊಂದು ; ೨೭. ಸೇದೆಗೆಟ್ಟು — ಆಯಾಸದಿಂದ ಕೆಟ್ಟು ; ಬಸಮೞಿದು — ಶಕ್ತಿಗುಂದಿ ; ಅನುಕಂಪೆಯುಂ — ದಯೆಯೂ ; ೨೮. ಪಿರಿಯ ಕರಗಮುಂ—ದೊಡ್ಡ ಕಲಶವನ್ನು ; ತಣ್ಣಿದವುಂ—ತಂಪಾಗಿರುವುವೂ ; ೩೦. ಪ್ರಾಸುಕಮಪ್ಪ—ಜೀವರಹಿತವಾದ ; ಪೊನ್ನಿದೊಳ್—ಚಿನ್ನದಲ್ಲಿ ಎಂದರೆ ಚಿನ್ನದ ಪಾತ್ರೆಯಲ್ಲಿ ? (ತಮಿಳು) ಪೊನ್ನು = ಚಿನ್ನದ, ಶ್ರೇಷ್ಠವಾದ, ೩೦. ಸೇದೆಯುಂ—ಆಯಾಸವನ್ನು, ಆಱಿಸಿಂ—ಶಮನಮಾಡಿಕೊಳ್ಳಿರಿ ; ೩೧. ಅನ್ನೆವರಂ—ಅಲ್ಲಿಯವರೆಗೆ ;

೧೦೪. ೩ : ಬೆಸಗೊಂಡಳ್—ಕೇಳಿದಳು ; ೬. ಕಮ್ಮಿದುವುಂ — ಸುಗಂಧಯುಕ್ತವಾದುವೂ ; ಪೊನ್ನಿದೊಳ್—ಚಿನ್ನದ ಪಾತ್ರೆಯಲ್ಲಿ ; ೧೦. ಪ್ರಾತಿಹಾರ್ಯಮಂ ಗೆಯ್ವುದಂ—ದೇವತೆಗಳು ಮಾಡುವ ಪೂಜೆಯನ್ನು ಮಾಡುವುದು ; ೧೩. ಆಪ್ಯಾಯನಮಾಗಿ—ಹಿತವಾಗಿ ; ೧೫. ದೇವನಿಕಾಯಂ—ದೇವತೆಗಳ ಸಮೂಹ ; ೧೮. ಬಾಧಿಸೆಪಟ್ಟೊರಾಗಿ—ಪೀಡಿಸಲ್ಪಟ್ಟವರಾಗಿ ; ೧೯. ಸೇದೆಗೆಟ್ಟು = ಸೇದೆಯಿಂ ಕೆಟ್ಟು ; ಪ್ರತಿಭೋದಿಸಲ್—ಎಚ್ಚರಿಸಲು ಎಂದರೆ ಅರಿವನ್ನುಂಟುಮಾಡಲು ; ತಗುಳ್ದು—ತೊಡಗಿ ; ತಿಳಿಪಲಾಱದೆ—ಅರಿಯಿಸಲಸಮರ್ಥಳಾಗಿ ; ೨೨. ಸಮಾವಸ್ಥೆಯೆಲ್ಲಮಂ — ಸಮತೆಯಲ್ಲಿರುವ ಸ್ಥಿತಿಯನ್ನೆಲ್ಲ ; ಸಮಾಧಿ ಸಂಧಾನೋಪಾಯ—ಏಕಾಗ್ರತೆಯನ್ನು ಸೇರಿಸುವ ಉಪಾಯವನ್ನು ; ೨೬. ಸಮಾಧಿಯನೊಡೆಯರಪ್ಪರ್ — ಸಮಾಧಿಯನ್ನುಳ್ಳವರಾಗುತ್ತಾರೆ ; ೨೯. ಈ ಭವದಿಂ ತೊಟ್ಟು—ಈ ಜನ್ಮದಿಂದ ಮೊದಲಾಗಿ ;

೧೦೫. ೧ : ಕರ್ಮಕ್ಷಯಂ ಗೆಯ್ದು—ಕರ್ಮವನ್ನು ನಾಶಮಾಡಿ ; ೩. ಉನ್ಮಾರ್ಗ

ದಿಂದಂ ಮನಮನುಡುಗಿ—ದುಷ್ಟಮಾರ್ಗದಿಂದ ಮನಸ್ಸನ್ನು ತೆಗೆದು ; ನಿಱಿಸಿ—ನಿಲ್ಲಿಸಿ, ಸ್ಥಾಪಿಸಿ ;

ಗಾಹೆ || ಹಾ—ಅಯ್ಯೋ, ದುಟ್ಠುಕಯಂ — ದುಷ್ಟಕಾರ್ಯವು ಮಾಡಲ್ಪಟ್ಟಿತು ; ಹಾ—ಅಯ್ಯೋ, ದುಟ್ಠುಕಾರಿಯಂ—ದುಷ್ಟಕಾರ್ಯವು ಮಾಡಿಸಲ್ಪಟ್ಟಿತು ; ಹಾ—ಅಯ್ಯೋ, ದುಟ್ಠು—ದುಷ್ಟಕಾರ್ಯವು, ಅಣುಮೋದಿಯಂ—ನನ್ನಿಂದ ಒಪ್ಪಲ್ಪಟ್ಟಿತು ; ಜೀವೋ—ಜೀವನು, ಅಂತೋ ಅಂತೋ—ಒಳಗೊಳಗೆ, ಮೇವಂತೋ—ನಡುಗುತ್ತ, ಪಚ್ಛತ್ತಾವೇಣ—ಪಶ್ಚಾತ್ತಾಪದಿಂದ, ದಜ್ಜಇ—ಸುಡುತ್ತಾನೆ.

೬. ಪೊಲ್ಲದಂ ಬಗೆದೆಂ—ಕೆಟ್ಟುದನ್ನು ಆಲೋಚಿಸಿದೆನು ; ಪಱಿಯುತ್ತಂ—ನಿಂದಿಸುತ್ತ ; ೭. ನಾಮಗ್ರಹಣಂ ಗೊಂಡಾಗಳ್—ಹೆಸರನ್ನು ಕೇಳಿದ ಮೇಲೆ ; ಅಶುಭಪರಿಣಾಮದಿಂ—ಅಮಂಗಳವಾದ ಅಂತ್ಯದಿಂದ ; ಪಿಂಗಿ—ತೊಲಗಿ ;

## ೯. ಸಿರಿದಿಣ್ಣನೆಂಬ ಭಟ್ಟಾರರ ಕಥೆ

೧೦೬. ೫ : ಅಯ್ಕಿಲಿಂದಂ — ಹಿಮದಿಂದ ; ೬. ಪಗೆವನಪ್ಪ — ಹಗೆಯಾದ ; ವಿಗುರ್ವಿಸೆಪಟ್ಟುದಱಿಂದಂ—ಮಾಯೆಯಿಂದ ನಿರ್ಮಿಸಲ್ಪಟ್ಟದ್ದರಿಂದ ; ೭. ತಳಿಯೆಪಟ್ಟೊನಾಗಿ—ಚುಮುಕಿಸಲ್ಪಟ್ಟವನಾಗಿ ; ೧೨. ಅಧಿಗಮ ಸಮ್ಯಗ್ದೃಷ್ಟಿ ಶ್ರಾವಕಂ—ಸಂಪಾದಿಸಲ್ಪಟ್ಟ ಸಮ್ಯಕ್‌ದೃಷ್ಟಿಯನ್ನುಳ್ಳ ಗೃಹಸ್ಥನು ; ೧೯. ಮಹಾಮಹಿಮೆಗಳಂ—ಮಹತ್ತಾದ ಉತ್ಸವಗಳನ್ನು ; ೨೨. ಗುಜ್ಜಿ—ಕುಳ್ಳಿ, (ಸಂ) ಕುಬ್ಜಾ ; ವಿರಳದಂತೆ—ವಿರಳವಾದ ಹಲ್ಲುಳ್ಳವಳು ; ಆದಮಾನುಂ ವಿರೂಪೆ—ವಿಶೇಷವಾಗಿ ಕೆಟ್ಟ ರೂಪುಳ್ಳವಳು ; ಪೇಸೆಪಡುವಳ್—(ಇತರರಿಂದ) ಹೇಸಲ್ಪಡುವವಳು, ಇದರ ಪಾಠ 'ಪೆಸರ್ಪಡುವಳ್' ಎಂದು ಇರಬಹುದು, ಆಗ ದೂಷಿಸಲ್ಪಡುವವಳು ಎಂಬರ್ಥವಾಗುತ್ತದೆ, "ಈ ಮಹಾತ್ಮನಂ ತೊಟ್ಟಿನಲಿಂತು ದೇವ ಯುವರಾಜನನೀ ತೆಱದಿಂ ಪೆಸರ್ಪುದೇ" ಎಂದು 'ಕಾದಂಬರಿ ಯ'ಲ್ಲಿ ಪ್ರಯೋಗವಿದೆ (ಉ. ೪೭೯) ; ೨೩. ನಾಣಿಸೆಪಡುವೊಳ್—ನಾಚಿಕೆ ಪಡಿಸಲ್ಪಟ್ಟವಳು ;

೧೦೭. ೪ : ಪೆತ್ತೆನಿಲ್ಲ—ಪಡೆದೆನಿಲ್ಲ ; ೫. ಉಬ್ಬೆಗಂ ಬಟ್ಟು—ದುಃಖಪಟ್ಟು ; ೬. ಅಷ್ಟೋಪವಾಸಮುಮಂ—ಎಂಟು ದಿನಗಳ ಉಪವಾಸವನ್ನೂ ; ೮. ಸಮೆಯಿಸಿದ ಬಱಿಕ್ಕೆ—ಮುಗಿಸಿದ ಅನಂತರ ; ಕರಂ ಬಡಪಟ್ಟಿರ್ದಿರ್—ವಿಶೇಷವಾಗಿ ಬಡಕಲಾಗಿರುವಿರಿ ; ೧೨. ನಿಮಗೊಸೆದಂ—ನಿಮಗೆ ನಾನು ಪ್ರೀತಿಪಟ್ಟೆನು ಎಂದರೆ ನಿಮ್ಮನ್ನು ಮೆಚ್ಚಿದೆನು ;

೧೫. ತೊಡಂಗಿದೊಡೆ—ತೊಡಗಿದರೆ ; ೧೬. ಪಾರಿಸದೆ—ಉಪವಾಸಾಂತ್ಯದಲ್ಲಿ ಪಾರಣೆ ಮಾಡದೆ ; ೧೨. ಸೇದೆಯುಮಂ—ಆಯಾಸವನ್ನೂ ; ೨೧. ಕಮ್ಮಿತಪ್ಪ—ಗಮಗಮಿಸುತ್ತಿರುವ ; ತಂಬೆಲರ್ ವೀಸಿ—ತಂಪಾದ ಗಾಳಿಯನ್ನು ಬೀಸಿ ; ೨೫. ನಿದಾನಂಗೆಯ್ದು—ನಿಶ್ಚಯಿಸಿ, ಸಂಕಲ್ಪಿಸಿ ; ೨೬. ಕಾಲಂಗೆಯ್ದು—ಸತ್ತು ; ೨೭. ಶ್ರೀವಿಹಾರಮಂ—

ಶ್ರೀವಿಹಾರವೆಂಬ ದೇವಾಲಯವನ್ನು ; ೨೮. ಓಲಗಿಸುತ್ತುಂ—ಸೇವೆಮಾಡುತ್ತ ;

೧೦೮. ೧: ಅಪುತ್ರಿಕೆ—ಮಕ್ಕಳಿಲ್ಲದವಳು ; ಬೇಡಿ—ಬಯಸಿ ; ೨. ನಿಚ್ಚಲುಂ—ಪ್ರತಿದಿನವೂ ; ೩. ಆಡುತ್ತುಂ—ನರ್ತನಮಾಡುತ್ತ ; ೭. ಬಟ್ಟಿಬಂದು—ಕೆಳಕ್ಕೆ ಜಾರಿಬಂದು ;—೧೪. ನೆಱೆದು—ತುಂಬಿ ; ೧೫. ಸಿರಿದಿಣ್ಣ—ಶ್ರೀದತ್ತ ; ೨೦. ಮಾಲೆ ಸೂಡಿದೊಡೆ—ಮಾಲೆಯನ್ನು ಹಾಕಿದರೆ, ಮುಡಿಸಿದರೆ; ೨೩. ಕತಿಪಯ—ಕೆಲವು ; ೨೬. ಎರಡು ಬರೆಯಂ—ಎರಡು ಗೀಟುಗಳನ್ನು ; ೨೭. ಪಿರಿದುಂ ಬೇಗಂ—ಬಹಳ ಹೊತ್ತು ; ೨೯. ತೆಗೆದುದಂ—ಅಳಿಸಿದ್ದನ್ನು ; ಕಡುಮುಳಿದು—ಬಹಳವಾಗಿ ಕೋಪಿಸಿ ;

೧೦೯. ೧: ಅದಱಗೋಣಂ—ಆ ಗಿಣಿಯ ಕೊರಳನ್ನು ; ೬. ಪಲಗೆಯೊಳ್ ರೇಖೆಗೊಂಡು—ಚಿತ್ರದ ಹಲಗೆಯ ಮೇಲೆ ರೇಖಾಚಿತ್ರವನ್ನು ಬರೆದು ; ೭. ನಿರ್ವೇಗಕ್ಕೆ—ವಿರಕ್ತಿಗೆ ; ೧೩. ಪ್ರತಿಮಾಯೋಗದೊಳೆ—ನಿಂತಿರುವ ಪ್ರತಿಮೆಯಂತೆ ನಿಂತು ತಪಸ್ಸುಮಾಡುವುದರಲ್ಲಿ ; ೧೫. ವ್ಯಂತರದೇವನಾಗಿ—ವ್ಯಂತರವೆಂಬ ಪಂಗಡಕ್ಕೆ ಸೇರಿದ ದೇವತೆಯಾಗಿ ; ವಿಗುರ್ವಿಸಿ—ಮಾಯೆಯಿಂದ ಸೃಷ್ಟಿಸಿ ;

ಗಾಹೆ ॥ ಪುಟ ೪೮ ನೋಡಿ.

ಶ್ಲೋಕ ॥ ಅಹಂ—ನಾನು, ಅಚ್ಛೇದ್ಯಃ—ಕತ್ತರಿಸಲಾಗದವನು ; ಅನಂತ ಸೌಖ್ಯಃ—ಅನಂತ ಸುಖವನ್ನುಳ್ಳವನು ; ವೇತ್ತಾ—ತಿಳಿಯುವವನು, ಜ್ಞಾನಿ ; ಅಪೂರ್ವಃ—ಅನಾದಿಯಾದವನು ; ನಿರಂಜನಃ—ಕರ್ಮಲೇಪವಿಲ್ಲದವನು ; ಸರ್ವ ದುಃಖಾಕರಂ—ಸಮಸ್ತ ದುಃಖಗಳಿಗೂ ಆಶ್ರಯವಾದ, ದೇಹಂ—ಶರೀರವನ್ನು ತ್ಯಜಾಮಿ—ತೊರೆಯುತ್ತೇನೆ ; ಏತತ್—ಇದು, ಪರಿಸ್ಫುಟಂ—ಅತಿಸ್ಪಷ್ಟ, ನಿಶ್ಚಯ. ೨೮. ಸಮತ್ವೀಭಾವನೆಯಂ—ಸುಖದುಃಖಗಳು ಸಮಾನವೆಂಬ ಭಾವನೆಯನ್ನು ; ೨೭. ದೇವೋಪಸರ್ಗ—ದೇವತೆಯಿಂದ ಆಗುವ ತೊಂದರೆ, ಹಿಂಸೆ ;

## ೧೦. ವೃಷಭಸೇನ ಭಟ್ಟಾರರ ಕಥೆ

೧೧೦. ೮: ಪೊರ್ದಿದೊಂ—ಪಡೆದನು ; ೧೫. ಮದವಿಹ್ವಳಿತನಾಗಿ—ಸೊಕ್ಕಿನಿಂದ ಪೀಡಿಸಲ್ಪಟ್ಟುದಾಗಿ ; ಮೆಯ್ಯಱಿಯದೆ—ಮೈಮೇಲೆ ಎಚ್ಚರವಿಲ್ಲದೆ ; ದಿಶಾಪಟ್ಟಂಗೊಂಡು—ದಿಕ್ಕುದಿಕ್ಕಿಗೆ ಓಡಿ ಧ್ವಂಸಮಾಡಿ ; ೧೭. ನಾಡೆಯಂತರಂಬೋದೊಡೆ—ಬಹಳದೂರ ಹೋದರೆ; ೧೮. ನೇಲ್ದಿರ್ದೊಡೆ—ನೇತುಬಿದ್ದಿದ್ದರೆ ; ೧೯. ಬಟ್ಟೆಯೊಳ್ ತಗುಳ್ದು—ದಾರಿಯನ್ನು ಹಿಡಿದು, ಅನುಸರಿಸಿ ; ೨೦. ಅದಱ ಸಾರೆ—ಆ ಊರಿನ ಹತ್ತಿರ ; ಕೆಯ್ಯುಂಟು—ಗದ್ದೆಯಿದೆ ; ಸಾರೆಯೊಳ್—ಹತ್ತಿರದಲ್ಲಿ ೨೨. ಪಥಶ್ರಮದಿಂದಂ—ಮಾರ್ಗಾಯಾಸದಿಂದ ; ಸೇದೆಗೆಟ್ಟು = ಸೇದೆಯಿಂ + ಕೆಟ್ಟು ; ಬಿಂಬಳಂ ಬಾಡಿ—ಬಂಬಲಿನಂತೆ ಬಾಡಿ ; ೨೩. ಗಾವುಂಡಂ—ಗೌಡನು, ಗಾವುಂಡಿ—ಗೌಡಿತಿ ; ೨೫. ಒಡೆಯೊಳ್—ಉಳ್ಳವಳು ;

೧೧೧. ೧: ಕೂಸೇ—ಮಗುವೇ, ಕನ್ನೆಯೇ ; ಎಱೆಯಾ—ಹಾಕು, ಹೊಯ್ಯಿ ;

೨. ಆಟಿಸಿ—ಬಯಸಿ, ಪ್ರೀತಿಸಿ; ೩. ಕರಗದ ದಾರೆಯಂ—ಕೊಡದ ನೀರ ಧಾರೆಯನ್ನು ೪. ಉಗಿದುಕೊಂಡೊಡೆ — ಎಳೆದುಕೊಂಡರೆ, ಎಂದರೆ ಉಡುಗಿಸಿಕೊಂಡರೆ; ೧೦. ತಂತ್ರಮೆಲ್ಲಂ—ಸೈನ್ಯವೆಲ್ಲ; ೧೧. ವಂದೊನೆ—ಬಂದನೆ ?; ೧೩. ಪ್ರತಿಪತ್ತಿಯುಮಂ—ಸತ್ಕಾರವನ್ನು ; ೧೪. ಪೆರ್ಗಡೆಗಳಿಂದಂ—ಹೆಗ್ಗಡೆಗಳಿಂದ, ಕೂಸಂ ಬೇಡಿ ಪೆತ್ತು—ಮಗಳನ್ನು ಬಯಸಿ ಪಡೆದು; ೧೪. ಗಣಿಯಾನೆಗಳ್ವೆರಸು—ಹಿಂಡಿನ ಆನೆಗಳೊಡನೆ; ೧೯. ಬಾವಿಯಂ = ಬಾರಿಯಂ—ಆನೆಗಳನ್ನು ಹಿಡಿಯುವ ಲಕ್ಕಡಿ ಕೋಟೆಯನ್ನು; ಖೆಡ್ಡಾವನ್ನು; ಕಳಕಳವಾಗಿ—ಕೋಲಾಹಲವಾಗಿ, ಗದ್ದಲವಾಗಿ; ೨೦. ತುರಿಪದಿಂ — ತ್ವರೆಯಿಂದ; ೨೧. ಬಾವಿಗೆ — ಬಾರಿಗೆ; ಪಸದನಂಗೊಂಡಿರ್ದಾಕೆ — ಅಲಂಕರಿಸಿಕೊಂಡಿದ್ದವಳು; ೨೪. ಸೂಱುಂಪಾಱಿಯುಮಂ — ಸರದಿಯನ್ನೂ ಧರ್ಮವನ್ನೂ ಎಂದರೆ ಸರದಿ ಪ್ರಕಾರ ಬಹುಪತ್ನೀಕನಾದ ರಾಜ ತನ್ನ ರಾಣಿಯರಿಗೆ ಕೊಡುವ ಭೋಗಾವಕಾಶವನ್ನು; "ತರುಣಿ ನೀ ದಿಟ ಕೇಳಂದು ಮೊದಲಾಗರಸಿ ನೀ ನಾಲ್ವರಿಗೆ ನಾವೆಡೆವುರಿದವರು ಬಿಟ್ಟವರು ನಿನ್ನಯ ಸೂಳುಪಾಳಿಯವ" ಎಂದು ಕುಮಾರವ್ಯಾಸನ ಪ್ರಯೋಗ (೪-೭-೫೩); ೨೫. ಕಿನಿಸಿ—ಕೋಪಿಸಿ; ಬಾೞ್ತೆಯಲ್ಲಂ — ಪ್ರಯೋಜನವಲ್ಲ; ೨೬. ಪೆಱತೊಂದು ಪ್ರಾಸಾದದೊಳ್— ಬೇರೊಂದು ಅರಮನೆಯಲ್ಲಿ;

೧೧೨. ೧: ಪುರುಷವ್ರತಮಂ—ಬ್ರಹ್ಮಚರ್ಯಾವ್ರತವನ್ನು; ೩. ಬೆಳ್ಕಾಡೊಳ್— ನಿರ್ಜನವಾದ ಕಾಡಿನಲ್ಲಿ (?), (ತಮಿಳು) ವೆಳ್—ಶೂನ್ಯ, ಬರಿದು, (ತಮಿಳು) ವಲ್ಲಕ್ಕಾಡು—ಸುಡುಗಾಡು, ಬೆಳ್—ಭೂತಪ್ರೇತ ಪಿಶಾಚಿಗಳು ಇರುವ, ಕಾಡೊಳ್— ಕಾಡಿನಲ್ಲಿ, "ಜಾತಿ ಬೆಳ್ ನಿನಗದೇವಿರಿದೀಯೆಡಱೆಂದು" ಎಂದು (ಪಂಪ ಭಾ. ೧೩-೫೪) ಪ್ರಯೋಗ; ೪. ಮಸಣದೊಳ್—ಶ್ಮಶಾನದಲ್ಲಿ; ಇಕ್ಕಿಂ—ಇಡಿರಿ, ಎಸೆಯಿರಿ; ೧೦. ಪೊೞ್ತುಱಿನ—ಹೊತ್ತಾರೆಯ, ಪ್ರಾತಃಕಾಲದ; ಓಲಗದೊಳ್— ಆಸ್ಥಾನದಲ್ಲಿ; ೧೩. ಆರ್ ಪೆಸಲೆಯಾಗಿ—ಯಾರು ಮಗುವನ್ನು ಹೆತ್ತವರಾಗಿ; ಪಡಿಯಱಿಗೆ—ಬಾಗಿಲು ಕಾಯುವ ಸೇವಕರಿಗೆ; ಸೂಱುಂ ಪಾಱಿಯು ಮಿಲ್ಲದೊರ್ಗೆ —ಸರದಿಯೂ ಕ್ರಮವೂ ಇಲ್ಲದವರಿಗೆ;

೧೧೩. ೬: ಕೂಸನಯ್—ಮಗುವಾಗಿರುವೆ, ಎಂದರೆ ಚಿಕ್ಕವನಾಗಿರುವೆ; ಬಾಲವದ್ದೆ—ಮಂಗಳಕರನಾದ ಬಾಲಕ(?), (ಪು. ೪೩-೧೦) ಎಂಬಲ್ಲಿಯೂ ಇದು ಪ್ರಯೋಗವಾಗಿದೆ; ೮. ಪಶ್ಚಾತ್ಕಾಲದೊಳ್—ಅನಂತರ ಕಾಲದಲ್ಲಿ; ೯. ಬಾೞುಂ— ಜೀವನವೂ;

ಕಂದ॥ ಪನಿಪುಲ್ಲ — ಹುಲ್ಲಮೇಲಣ ಹನಿಯ, ಮುಗಿಲ — ಮೋಡದ ಸಂಜೆಯ—ಸಂಜೆಹೊತ್ತಿನ, ಕನಸಿನ, ಸುರಧನುವ—ಮಳೆಬಿಲ್ಲಿನ, ನೆಗೆದ—ಎದ್ದ, ನೊರೆಗಳ, ತೆಱಂ—ರೀತಿ, ಅಂತು—ಹಾಗೆ, ಬಗೆವೊಡೆ—ಚಿಂತಿಸಿದರೆ, ಮನುಜರ— ಮನುಷ್ಯರ, ಯೌವನಮುಂ—ಪ್ರಾಯವೂ, ಅರ್ಥಮುಂ—ಐಶ್ವರ್ಯವೂ, ಬಾೞ್ಕೆ

ಗಳುಂ—ಬದುಕುಗಳೂ, ಎನಸುಂ—ಎಷ್ಟೂ, ನಿಲ್ಲವು—ನಿಲ್ಲುವುದಿಲ್ಲ, ಅಶಾಶ್ವತ.

* **ಶ್ಲೋಕ** ॥ ದೀಪನೀಯೋ—ಸುಡುತ್ತಿರುವ, ವನೋಪಮಃ—ಕಾಡಿಗೆ ಸಮಾನವಾಗಿರುವ, ಭೋಗಃ—ಸುಖಪಡುವುದು, ತೃಷ್ಣಾಗ್ನಿ ಸಂವೃದ್ಧ್ಯೈ—ಆಶೆಯೆಂಬ ಅಗ್ನಿಯನ್ನು ಬೆಳಸುವುದಕ್ಕಾಗಿ; ಸ್ತ್ರೀವೃದ್ಧ ತೃಷ್ಣಾಗ್ನಿ ಶಾಂತ್ಯೈ—ಹೆಣ್ಣು ಕಾರಣವಾಗಿ ಬೆಳೆಯುವ ಭೋಗ ಲಲಾಸೆಯೆಂಬ ಅಗ್ನಿಯ ಶಮನಾರ್ಥವಾಗಿ; ಏಭಿಃ—ಇವುಗಳಿಂದ, ಇಹಾಪರಂ—ಇಹಪರಗತಿಗಳು, ಚಿಂತ್ಯಂ—ಆಲೋಚಿಸಬೇಕಾದುವು, ಧ್ಯಾನಯೋಗ್ಯವಾದುವು.

* **ಗಾಹೆ** ॥ ಮುತ್ತಿಪಹಂ—ಮುಕ್ತಿಯ ಮಾರ್ಗದಲ್ಲಿ, ಸಣ್ಣಂವಾ ಬದರಂತಂ—ಚಿಕ್ಕದಾಗಲಿ, ದೊಡ್ಡದಾಗಲಿ ಎಲ್ಲ ಸಂಬಂಧಗಳನ್ನು ತೊರೆದು, ಅವಿಸಾಮಂ—ವಿಶ್ರಾಂತಿಯಿಲ್ಲದೆ, ಸಂತತವಾಗಿ, ಭೋಗಸುಹಲೋಹವಿರದೋ—ಭೋಗ ಸುಖಲೋಭಗಳಲ್ಲಿ ಅನಾಸಕ್ತನಾಗಿ, ಮೋಕ್ಖೇ—ಮೋಕ್ಷದಲ್ಲಿ, ಮತಿಂ ಕುಜ್ಜಾ—ಮನಸ್ಸನ್ನು ಮಾಡುವುದು.

**ಆರ್ಯೆ** ॥ ಮನಸಃ—ಮನಸ್ಸಿಗೆ, ಸಂತುಷ್ಟಿಕಾರಕಾ—ಸಂತೃಪ್ತಿಯನ್ನುಂಟುಮಾಡುವ, ವಿಷಯಾಃ—ವಸ್ತುಗಳು, ನಿಷೇವ್ಯಮಾಣಾ ಯದ್ಯಪಿ—ಸೇವಿಸಲ್ಪಡುವುವಾದರೂ, ಪಶ್ಚಾತ್—ಅನಂತರ, ಕಿಂಪಾಕಫಲಾಶನವತ್—ಕಿಂಪಾಕಫಲವನ್ನು ತಿಂದಂತೆ, ಅತಿದುರಂತಾಃ—ಬಹು ದುಃಷ್ಪರಿಣಾಮಕವಾಗಿ, ಭವಂತಿ—ಆಗುತ್ತವೆ. ೨೦. ಕಿಂಪಾಕ್ಕಫಲದೊಳ್—ಕಿಂಪಾಕವೆಂಬ ಮರದ ಹಣ್ಣುಗಳಿಗೆ, ಈ ಹಣ್ಣು ನೋಡುವದಕ್ಕೆ ಸುಂದರ, ತಿನ್ನಲು ಸ್ವಾದು, ತಿಂದಮೇಲೆ ಪ್ರಾಣಹಾನಿಮಾಡುತ್ತದೆ; ಓರನ್ನವು—ಸಮಾನವಾದುವು; ೨೨. ಅಗಲ್ದ—ಅಗಲಿದ;

**೧೧೪.** ೫: ಆತಪಸ್ಥಿತಯೋಗಮಂ—ಬಿಸಿಲಲ್ಲಿ ನಿಂತುಮಾಡುವ ತಪಸ್ಸನ್ನು; ೬. ಕಲ್ನಿಲೆ ನಿಲೆ—ಕಲ್ಲು ನಿಂತಂತೆ ನಿಲ್ಲಲು; ಶ್ರಾವಕ ಭಕ್ತರುಂ—ಗೃಹಸ್ಥರಾದ ಭಕ್ತರೂ; ಬೆಸಕೆಯ್ವರುಂ—ಸೇವೆಮಾಡುವವರೂ; ೭. ಉಪಾಸಕಂ—ಜೈನಗೃಹಸ್ಥನು; ೯. ಮಾತ್ಸರ್ಯಂ—ದ್ವೇಷ; ೧೧. ತಱಯ ಪುಳ್ಳಿಗಳಂ—ತರಿಯಮರದ ಸೌದೆಗಳನ್ನು; ೧೨. ಕೆಲಂ ಸಾರ್ಚಿ—ಮಗ್ಗುಲಿಗೆ ಸೇರಿಸಿ; ೧೩. ಕೆಚ್ಚನಾಗಿರ್ದ—ಕೆಂಪಾಗಿದ್ದ; ೧೬. ಬಿಸಿಲುಂ ಝಳಮುಂ ಬೆಂಕೆಯುಂ ಕಿಚ್ಚುಮಂ—ಬಿಸಿಲುಮಂ, ಝಳಮುಮಂ ಬೆಂಕೆಯುಮಂ ಕಿಚ್ಚುಮಂ,—ಎಂದು ದ್ವಿತೀಯಾ ವಿಭಕ್ತಿ ಅಧ್ಯಾಹಾರ್ಯ;

## ೧೧. ಕಾರ್ತ್ತಿಕ ಋಷಿಯ ಕಥೆ

**೧೧೫.** ೬: ಇಱಯೆಪಟ್ಟೊನಾಗಿ—ಇರಿಯಲ್ಪಟ್ಟವನಾಗಿ; ೭. ಕಾದಲಿಸೆಪಡುವ ಮಗಂ—ಪ್ರೀತಿಸಲ್ಪಡುವ ಮಗನು; ೧೫. ಪೆಣ್ಗೂಸುಗಳ್—ಹೆಣ್ಣುಮಕ್ಕಳು; ೧೬. ಕೊಡಗೂಸುಗಳ್—ಕನ್ಯೆಯರು, ಮದುವೆಯಾಗಲಿರುವವರು; ೧೮. ನಂದೀಶ್ವರಂಗೆಯ್ದು—ನಂದೀಶ್ವರವೆಂಬ ಹಬ್ಬವನ್ನಾಚರಿಸಿ; ೨೦. ಸಿದ್ಧಶೇಸೆಯಂ—ಪೂಜೆ

ಮಾಡಿದ ಹೂವು ಮುಂತಾದುವನ್ನು, ಪ್ರಸಾದವನ್ನು ; ೨೧. ಆಟಿಸಿ—ಬಯಸಿ, ಪ್ರೀತಿಸಿ ; ೨೩. ಎಲ್ಲ ಸಮಯಿಗಳ್ಗಂ—ಎಲ್ಲಾ ಮತಧರ್ಮದವರಿಗೂ ; ಬಱಿಯಟ್ಟಿ—ದೂತನನ್ನು ಕಳುಹಿಸಿ ; ೨೮. ಮಂಡಳಂಗಳೊಳ್—ಪ್ರದೇಶಗಳಲ್ಲಿ ;

೧೧೬. ೨ : ತಕ್ಕುದು ತಗದುದು — ಯೋಗ್ಯವಾದುದು, ಯೋಗ್ಯವಲ್ಲದ್ದು ; ೪. ಬಹು ಪ್ರಳಾಪಿಗಳ್—ಬಹು ಮಾತಾಡುವವರು ; ೬. ಮೂಱು ಸೊಬ್ಬರಂ—ಮೂರು ಬಾರಿಯವರೆಗೆ ; ಸಾಱಿ ನುಡಿದು—ಘೋಷಿಸಿ ಮಾತಾಡಿ ; ೧೦. ಸರವಣ—ಒಂದು ಬಗೆಯಾದ ಜೊಂಡುಹುಲ್ಲು ; ೧೩. ಆತನಿಂಬಱಿಯಂ—ಆತನ ಅನಂತರ ; ೧೫. ಕೊಗಳಿಯನಾಳ್ವ—ಕೋಗಳಿಯೆಂಬ ಐನೂರು ಗ್ರಾಮಗಳುಳ್ಳ (?) ನಾಡು, ಆ ನಾಡಿಗೆ ರಾಜಧಾನಿ ಕೋಗಳಿ ಎಂಬ ಪಟ್ಟಣ ; ಇದು ೮, ೯, ೧೦ನೆಯ ಶತಮಾನಗಳಲ್ಲಿ ಬಹು ಪ್ರಸಿದ್ಧವಾದ ಜೈನ ತೀರ್ಥಕ್ಷೇತ್ರವಾಗಿತ್ತು, ಈಗಲೂ ಕೋಗಳಿ ಎಂಬ ಊರು ಬಳ್ಳಾರಿ ಜಿಲ್ಲೆಯ ಪಶ್ಚಿಮಭಾಗದಲ್ಲಿದೆ, ಈ ನಾಡನ್ನೂ ಈ ನಗರವನ್ನೂ ಹೆಸರಿಸಿರುವ ಶಾಸನಗಳು ಅನೇಕವಾಗಿವೆ, ಕಥೆಯ ಆದಿಯ ಗಾಹೆಯಲ್ಲಿ ಕೌಂಚನೆಂಬ ರಾಜನು ಆಳುತ್ತಿದ್ದ ಊರು 'ರೋಹೇದಯ' ಎಂದಿದ್ದರೂ ಇಲ್ಲಿ ಆ ಹೆಸರನ್ನು ಬಿಟ್ಟು ಕೋಗಳಿ ಎಂಬ ಹೆಸರನ್ನು ಹೇಳಿರುವುದು ಗಮನಿಸಬೇಕಾದ ಅಂಶ ; ೨೦. ಪೂಸಲುಂ—ಬಳಿದುಕೊಳ್ಳಲೂ ; ತಂಬುಲಮುಂ—ಅಡಕೆ ವೀಳ್ಯವೂ ; ತಿಂಬಡಂಗಳುಂ—ತಿನ್ನುವ ಪದಾರ್ಥಗಳೂ ; ೨೧. ಮನದೊಳ್ ಬಲ್ದಿದೊನಾಗಿ—ಮನಸ್ಸಿನಲ್ಲಿ ಸತ್ತವನಾಗಿ ಎಂದರೆ ಸಾಯುವಷ್ಟು ದುಃಖವನ್ನು ಹೊಂದಿ, "ಬರ್ದು—ಮರಣೇ" ; ೨೪. ಮನದೊಳ್ ಬಲ್ದಿದೊಳಾಗಿ—ಮನಸ್ಸಿನಲ್ಲಿ ವ್ಯಥೆಪಟ್ಟವಳಾಗಿ ; ೨೮. ತೆಂಕನಾಡ—ದಕ್ಷಿಣ ದೇಶದ; ಕಿಷ್ಕಿಂಧಮೆಂಬ ಪರ್ವತಮುಂ—ಕಿಷ್ಕಿಂಧೆಯೆಂಬ ಬೆಟ್ಟವನ್ನು, ತುಂಗಭದ್ರೆಯ ತೀರದಲ್ಲಿ ಹಂಪೆಯ ಬಳಿ ಇರುವ ಈ ಬೆಟ್ಟವನ್ನು ಹೇಳಿರುವುದು ಗಮನಾರ್ಹ ;

೧೧೭. ೨ : ಪಿರಿದೊಂದು ಮೞೆಗೊಂಡು — ದೊಡ್ಡದಾದ ಮಳೆ ಸುರಿದು ; ೩. ಸರ್ವೌಷಧಿ—ಎಲ್ಲಾ ರೋಗಗಳಿಗೂ ಮದ್ದು ; ೬. ಕೊಗಳಿಯನೆಯ್ದಿ—ಕೋಗಳಿಗೆ ಬಂದು ; ಬಸದಿಯೊಳ್—ಜಿನಾಲಯದಲ್ಲಿ, ಆ ಊರಿನಲ್ಲಿ ಅನೇಕ ಬಸದಿಗಳಿದ್ದುವಂತೆ, ಅವುಗಳಲ್ಲಿ ಒಂದು ಗಂಗರಾಜ ದುರ್ವಿನೀತನು ಕಟ್ಟಿಸಿದ್ದು ಎಂದು ಒಂದು ಶಾಸನದಿಂದ ತಿಳಿದುಬರುತ್ತದೆ ; ೧೦. ಉಗುರಿಸುತ್ತಿರ್ದ್ದಾಕೆ—ಉಗುರಿನಿಂದ ಕೆರೆಯುತ್ತಿರುವವಳು ; ೧೨. ಮಱಲುಂದಿದರಸನ—ವ್ಯೆಮರೆತು ನಿದ್ದೆಮಾಡಿದ ರಾಜನ ; ನಿಱಿಸಲೆಂದು—ಪಾರಣೆಗೆ ಅಥವಾ ಭಿಕ್ಷಕ್ಕೆ ನಿಲ್ಲಿಸಬೇಕೆಂದು ; ೧೩. ಕರುಮಾಡದಿಂದೆ—ಸುಣ್ಣ ಬಣ್ಣ ಮಾಡಿದ ಮಾಳಿಗೆಯಿಂದ, ಉಪ್ಪರಿಗೆಯಿಂದ ; ಪರಿತರ್ಪನ್ನೆಗಂ ಓಡಿಬರುತ್ತಿರಲು ; ಅಂಗಣಮಂ ಪೊಕ್ಕು—ಅಂಗಳವನ್ನು ಪ್ರವೇಶಿಸಿ ; ೧೪. ಮಗುಟ್ದು ಪೋಗಿ—ಹಿಂದಿರುಗಿ ಹೋಗಿ ; ಬಾಗಿಲ್ಮಾಡಮಂ—ಹೊರಬಾಗಿಲಿನ ಎಡೆಯನ್ನು ; ೧೫. ನಿಲ್ಕೆ—ನಿಲ್ಲಲಿ ಎಂದರೆ ಚರಿಗೆಗೆ ನಿಲ್ಲಿರಿ ; ೧೬. ಬಂದೊಮ್—ಬಂದೆವು ; ೧೮. ತಾಂಗುತ್ತಿರ್ಪನ್ನೆಗಂ—ತಡೆಯುತ್ತಿರಲು ; ೨೧. ಬಱಿಯಂ ತಗುಳ್ದು—ಹಿಂದೆ

ಅನುಸರಿಸಿ, ಹಿಂದೆ ಹಿಂದೆಯೇ ಹೋಗಿ ; ೨೨. ಸವಣನೊಡನೆ—ಜೈನಯತಿಯೊಡನೆ; ಆ ಪೋರುತ್ತಿಪ್ಪೊಳ್—ಅಗೋ, ಹೋರಾಡುತ್ತಿರುವಳು ; ೨೩. ನಿಚ್ಚಲ್—ನಿತ್ಯವೂ, ದಿನ ದಿನವೂ ; ಕಿನಿಸಿ—ಕೆರಳಿ ; ೨೪. ಉರಮಂ—ಎದೆಯನ್ನು ; ೨೫. ಉರ್ಚೆ ಪೋಗಿಟ್ಟು—ಭೇದಿಸಿಕೊಂಡು ಹೋಗುವಂತೆ ಹೊಡೆದು ; ತಲೆನವಿರಂ—ತಲೆಯ ಕೂದಲನ್ನು ; ೨೭. ನೆತ್ತರೊಕ್ಕು—ರಕ್ತಸುರಿದು ; ಬಸಮುೞಿದು—ಶಕ್ತಿಗುಂದಿ ; ೨೮. ಕಡುವಿಸಿಲಿಂದಂ — ತೀವ್ರವಾದ ಬಿಸಿಲಿನಿಂದ ; ನೀರೞ್ಕೆ — ನೀರಡಿಕೆ, ದಾಹ ;

೧೧೮. ೧ : ಕಾಲಂಗೆಯ್ದು—ಸತ್ತು ; ಆಸನ ಕಂಪಮಾಗಿ—ಕುಳಿತ ಪೀಠವು ನಡುಗಿ ; ೨. ಬೆಸನೇನ್—ಕೆಲಸವೇನು, ಅಪ್ಪಣೆಯೇನು ; ೩. ತಣ್ಪಿನೆಡೆಗೆ—ತಂಪಾದ ಸ್ಥಳಕ್ಕೆ ; ೬. ಪಾಯ್ತರ್ಪ—ಹರಿದುಬರುವ ; ನಿರ್ಝರ—ಬೆಟ್ಟದ ಝರಿಯ ; ಶೀಕರಂಗಳಿಂ — ತುಂತುರುಗಳಿಂದ ; ಆಪ್ಯಾಯನಮಾಗಿ—ಹಿತವಾಗಿ ; ಮುಡಿಪಿ—ಸತ್ತು ; ೧೦. ಒಂದೆ ಪಾಂಗಿನೊಳ್—ಒಂದೇ ರೀತಿಯಾಗಿ, ಎಡೆಬಿಡದೆ ; ೧೧. ಕಡು ನಲ್ಲನಪ್ಪುದಱಿಂ—ಅತ್ಯಂತ ಪ್ರೇಮವಂತನಾದ್ದರಿಂದ ; ಆದಮಾನುಂ—ವಿಶೇಷವಾಗಿ ; ಉಬ್ಬೆಗಂ ಬಟ್ಟು—ದುಃಖಪಟ್ಟು ; ೧೨. ಅೞ್ಕೆಯಂ ಮುೞ್ಗಿಸಿ—ಅಳುವನ್ನು ಕುಗ್ಗಿಸಿ, ಹೋಗಾಡಿಸಿ ; ಮಱೆಯಿಸುವೊರ್—ಮರೆಯುವಂತೆ ಮಾಡುವವರು ; ೧೩. ಗೋಸಣೆಯಂ ತೊೞಲ್ಚಿದೊಡೆ—ಸಾರಿಸಿ ಡಂಗೂರ ಹೊಡೆಯಿಸಿದರೆ, "ತೊೞಲ್-ಭ್ರಮಣೇ"; ೧೪. ಲೋಗರ್—ಜನರು ; ಪಗರಣಿಗರಾಗಿ—ಪಗರಣವೆಂಬ ಆಟವಾಡುವವರಾಗಿ ; ಮರಮೊಗಂಗಳಂ—ಮರದ ಮುಖಗಳನ್ನು ಎಂದರೆ ಮರದ ಮುಖವಾಡಗಳನ್ನು ; ೧೬. ಅೞ್ಕೆ—ಅಳುವು ; ಕಚ್ಚುಟಮುನುಟ್ಟು—ಕೌಪೀನವನ್ನು ಧರಿಸಿ ; ೧೭. ಕವಡಿಕೆಗಳಂ — ಕವಡೆಗಳನ್ನು, (ಸಂ) ಕಪರ್ದಿಕಾ ; ಕುಂಚಮುಂ — ನವಿಲುಗರಿಯ ದೊಂದೆಯೂ ; ೧೮. ಗುಂಡಿಗೆಯುಂ—ಕಮಂಡಲುವೂ, (ಸಂ) ಕುಂಡಿಕಾ ; ೧೯. ಆ ಬರ್ಪೊರೆ—ಅಗೋ ಬರುವವರೇ ; ೨೧. ಪಿರಿದು ಕಸವರಮಂ—ಹೇರಳವಾಗಿ ಚಿನ್ನವನ್ನು ; ಬಾದುಬ್ಬೆಯ ಪರ್ವ—ಬಾದುಬ್ಬೆ ಎಂಬ ಹಬ್ಬ, ಬಾದುಬ್ಬೆ ಎಂದು ಒಂದು ದೇವತೆಯ ಹೆಸರು ಇರಬಹುದು, "ಗಣಪನಂ ಗೌರೀಶನಂ ಭಾನುವಂ ಪೆಱೆಯಂ ಗೋಕುಳಮಂ ಗಿರಿಪ್ರಕರಮಂ ಬಾದುಂಬೆಯಂ....ದೈವಂಗಳೆಂದಿಂತು ಕೂರ್ತೆಱಗುತ್ತಿರ್ಪವರ್" ಎಂದು ಬ್ರಹ್ಮಶಿವನ ಮಾತು, (ಶಬ್ದವಿಹಾರ, ಪುಟ ೪೮-೫೩, ನೋಡಿ) ; ೨೩. ಬಸದಿಯಂ—ಜಿನಾಲಯವನ್ನು ; ೨೫. ಮೋಱೆಯೞಿದನಪ್ಪುದಱಿಂ—ಬಾಂಧವ್ಯವನ್ನು ಹಾಳುಮಾಡಿದವನಾದ್ದರಿಂದ, "ಮೋಱೆಯೆಂಬುದು ಬಾಂಧವರೊಳ್ ತೊಱೆಯೆಂಬುದು ಸದನದೀ ನಿಕಾಯದೊಳ್" ಎಂದು ಪ್ರಯೋಗವುಂಟು ;

ಶ್ಲೋಕ ॥ ಪ್ರಜಾಃ—ಪ್ರಜೆಗಳು, ಧರ್ಮಿಣಿ ರಾಜ್ಞಿ—ಧರ್ಮವಂತನಾದ ರಾಜನಲ್ಲಿ, ಧರ್ಮಿಷ್ಠಾಃ—ಧರ್ಮದಲ್ಲಿರುವವರು, ಪಾಪೇ—ಪಾಪಿಷ್ಠನಾದ ರಾಜನಲ್ಲಿ, ಪಾಪಸಮಾಶ್ರಿತಾಃ—ಪಾಪವನ್ನು ಆಶ್ರಯಿಸುವವರು, ರಾಜಾನಂ—ರಾಜನನ್ನು, ಅನು

ಪವರ್ತಂತೇ—ಅನುಸರಿಸುತ್ತಾರೆ, ಪ್ರಜೆಗಳು ; ಯಥಾರಾಜಾ—ರಾಜನು ಹೇಗೋ, ತಥಾ—ಹಾಗೆ ಪ್ರಜೆಗಳು.

೧೧೯. ೧ : ಮೊಱೆಯುಱಿದು—ಬಾಂಧವ್ಯವನ್ನು ನಾಶಮಾಡಿ; ನೆಗೞಲ್—ಆಚರಿಸಲು ; ತಗುಳ್ದೊಡೆ — ಆರಂಭಿಸಿದರೆ ; ಆ ಪೊೞಲ್ಗೆ — ಆ ಪಟ್ಟಣಕ್ಕೆ : ೨. ಭೋಗಂಕಾರೋಹಣಂ—ಭೋಗದ ಕಾರೋಹಣ ಎಂದು, ಕಾರೋಹಣ—ಕಾಯಾವರೋಹಣ ಎಂಬ ಊರು ಕಾಥೆಯವಾಡ ಪ್ರದೇಶದಲ್ಲಿದ್ದಿತೆಂದೂ ಅದಕ್ಕೆ ಈಗ ಕರ್ವಾನ್ ಎಂಬ ಹೆಸರಿದೆಯೆಂದೂ ತಿಳಿದುಬರುತ್ತದೆ; 'ಕಾರೋಹಣದ ಪಱಿ' ಎಂದರೆ ಕಾರೋಹಣದಲ್ಲಿ ತಯಾರಾದ ಸೀರೆ ವಸ್ತ್ರಗಳು ಹತ್ತನೆಯ ಶತಮಾನದ ಕನ್ನಡನಾಡಿನಲ್ಲಿ ತುಂಬ ಪ್ರಸಿದ್ಧವಾಗಿದ್ದುವು ; ೪. ಏಱುಂ—ಪೆಟ್ಟೂ ; ೫. ಅಪವರ್ಗ—ಮೋಕ್ಷ.

## ೧೨. ಅಭಯಘೋಷರೆಂಬ ಮುನಿಯ ಕಥೆ

೧೨೦. ೭ : ಕೊಱೆಯ ಪಟ್ಟ—ಕತ್ತರಿಸಲ್ಪಟ್ಟ ; ಮೆಯ್ಯನೊಡೆಯನಾಗಿ—ಮೈಯುಳ್ಳವನಾಗಿ ; ೧೪. ಪೊಱಮಟ್ಟು—ಹೊರಕ್ಕೆ ಹೊರಟು ; ೧೫. ಮೀಂಗುಲಿಗಂ—ಮೀನನ್ನು ಕೊಲ್ಲುವವನು, ಬೆಸ್ತರವನು ; ೧೬. ಬಾೞ್ವಾೞೆ—ಬದುಕಿರಲು ಬದುಕಿರಲು ಎಂದರೆ ಜೀವವಿದ್ದಂತೆಯೇ ; ತಗುಳ್ಚಿ—ಸೇರಿಸಿ ; ೧೭. ಎೞಲೆ—ನೇತು ಬೀಳುವಂತೆ ; ೧೮. ನೆರೆದ ನೆರವಿಗೆ—ಸೇರಿದ ಜನಸಮೂಹಕ್ಕೆ ; ಗೆಂಟಱಿಂ—ದೂರದಿಂದ ; ಒರ್ಮೊದಲೆ—ಏಕಕಾಲದಲ್ಲಿ ; ೧೯. ಪಱಿಯಿಟ್ಟೊಡೆ—ಕತ್ತರಿಸಿಹೋಗುವ ಹಾಗೆ ಹೊಡೆದರೆ ; ೨೪. ಮೇಗಣ ನೆಲೆಯೊಳ್—ಮೇಲಿನ ಅಂತಸ್ತಿನಲ್ಲಿ ; ೨೬. ಅನಿತ್ಯಮಂ—ಅಶಾಶ್ವತತೆಯನ್ನು ;

೧೨೧. ೫ : ವೀರಾಸನದಿರ್ದೋರ್—ವೀರಾಸನವೆಂಬ ಆಸನದಲ್ಲಿ ಕುಳಿತಿದ್ದರು ; ೭. ನೋಂಟಕ್ಕೆ ಗೆಂಟುಪೋಗೆ—ನೋಟಕ್ಕೆ ಬಹುದೂರ ಹೋಗಲು ; ೮. ಮೊಕ್ಕನೆ—ಮೊಕ್ಕೆಂದು ; ಕೊಂಡೊಡೆ—ಕತ್ತರಿಸಿದರೆ ;

## ೧೩. ವಿದ್ಯುಚ್ಚೋರನೆಂಬ ರಿಸಿಯ ಕಥೆ

೧೨೨. ೫ : ಚಿಕ್ಕುಟಗಳಿಂದಂ—ಚಿಗಟಗಳಿಂದ ; ಗುಂಗುಱುಗಳಿಂದಂ—ಗುಂಗಾಡಿಹುಳುಗಳಿಂದ ; ೬. ತಿನೆಪಡುತ್ತಿರ್ದೋನಾಗಿ—ಕಚ್ಚಲ್ಪಡುತ್ತಿರುವವನಾಗಿ ; ೭. ಕಡಿದಪ್ಪುದಂ—ತೀಕ್ಷ್ಣವಾದುದನ್ನು ; ೧೫. ತಳಾಱಂ—ತಳವಾರನು, ಗ್ರಾಮರಕ್ಷಕನು ; ಇರ್ಪೊಂ—ಇರುತ್ತಾನೆ ; ೧೭. ಜೃಂಭಿನಿ—ಪ್ರತ್ಯಕ್ಷ ಮತ್ತು ಮಾಯವಾಗುವುದು ; ಸ್ತಂಭಿನಿ—ಗತಿನಿರೋಧವನ್ನು ಮಾಡುವುದು ; ಮೋಹಿನಿ—ಮೂರ್ಛೆಯುಂಟುಮಾಡುವುದು ; ಸರ್ಷಪಿ—ಚರ್ಮರೋಗವನ್ನುಂಟುಮಾಡಿಕೊಳ್ಳುವುದು (?) ; ತಾಳೋದ್ಘಾಟನಿ ವಿದ್ಯಾ—ಬೀಗ ತೆಗೆಯಲು ಉಪಯೋಗಿಸುವ ಮಂತ್ರವಿದ್ಯೆ ; ೧೮. ಮಂತ್ರ—ಮಂತ್ರಹಾಕುವುದು, ಚೂರ್ಣ—ಪುಡಿ ಎರಚುವುದು ; ಯೋಗ—ವಂಚನೆ ಮೋಸ

ಮುಂತಾದುವು ; ಘಟಿಕಾ—ಗುಳಿಗೆ ; ಅಂಜನ—ಕಣ್ಣಿಗೆ ಹಚ್ಚುವ ಕಾಡಿಗೆ ಮುಂತಾದ ಲೇಪನಗಳು, “ಪಾತಾಳವಜ್ರ ಘುಟಿಕಾಂಜನ ಲೇಪ ದೈತ್ಯಶಾತೋದರೀವಿಧಿ ರಸಾಯನ ಧಾತುವಾದಂ” ಎಂದು “ಚಂಡಕೌಶಿಕ” ನಾಟಕದಲ್ಲಿ ಬರುತ್ತದೆ; ೧೮. ತಸ್ಕರ ಶಾಸ್ತ್ರಂಗಳೊಳ್—ಚೋರ ಶಾಸ್ತ್ರಗಳಲ್ಲಿ ಎಂದರೆ ಕಳ್ಳತನವನ್ನು ಉಪದೇಶಿಸುವ ಶಾಸ್ತ್ರ ಗಳಲ್ಲಿ ; ಕುಶಲಂ—ನಿಪುಣನು ; ಕಸವರಂಗಳಂ—ದ್ರವ್ಯಗಳನ್ನು ; ೧೯. ನಾಡೆ ಯಂತರದೊಳ್—ಬಹುದೂರದಲ್ಲಿ ; ೨೧. ಪಾೞ್ದೇಗುಲದೊಳ್—ಹಾಳು ದೇವಾಲಯ ದಲ್ಲಿ ; ೨೨. ಎಚ್ಚಿ — ಬಳಿದುಕೊಂಡು, “ಎಚ್ಚು — ಅಂಜನಕ್ರಿಯಯಾಂ” ; ೨೩. ಮೂಗೊಳಗರ್ದು—ಮೂಗು ಒಳಕ್ಕೆ ಕುಸಿದು ; ನೊಳವುಗಳ್—ನೊಣಗಳು ; ೨೪. ತಿನೆ—ಕಡಿಯಲು ; ಪೇಸಿದನಾಗಿ—ಜುಗುಪ್ಸಿತನಾಗಿ ; ೨೫. ತೊನ್ನುಗೊಂಡಿರ್ಪು ದಂ—ತೊನ್ನು ಬಂದಿರುವುದನ್ನು ; ಅಱಿಪುತ್ತುಂ—ತಿಳಿಸುತ್ತ ;

**೧೨೩.** ೧ : ಪುಟ್ಟಗೆಯನುಟ್ಟು—ವಸ್ತ್ರವನ್ನುಟ್ಟು, “ಧರಣಿಜಯಮೆಂಬ ಪುರ ದೊಳ್ ಪರದಂ ಕಡುಲೋಭಿಯೊಂದೆ ಪುಟ್ಟಗೆ ಯುಟ್ಟಿರ್ದಿರುಳುಂ ಪಗಲುಂ ತನ್ನಯ ಕರಮನೆ ಪೊದೆದಿರ್ದನೈಕಿಲೊಳ್ ಬಿಸಿಲೆಡೆಯೊಳ್” ಎಂದು ಬಂಧುವರ್ಮನ ಪ್ರಯೋಗವೂ (ಜೀವಸಂ ೮-೩೦), “ಪಟ್ಟಸೂತ್ರದ ಚಿತ್ರಸೂತ್ರದ, ನೇತ್ರವಟ್ಟಣಿ ಗೆಯ ಪುಟ್ಟಗೆಗಳನೊಟ್ಟಿ ಬೆಟ್ಟಾಗಿ ಪುಂಜಿಸಿ” ಎಂದು ಶಾಂತಿನಾಥನ ಪ್ರಯೋಗವೂ (ಸುಕುಮಾ. ೧೦-೯೧ ವ) ಇವೆ; ಪೂಸಿ—ಬಳಿದು, ಲೇಪಿಸಿ ; ೨. ತಂಬುಲಂದಿನು ತ್ತುಂ—ತಾಂಬೂಲವನ್ನು ಅಗಿಯುತ್ತ ; ೩. ಅಗ್ಗಳದ—ಶ್ರೇಷ್ಠರಾದ ; ಒತ್ತೆಯ ನಿಟ್ಟು—ಮುಂಗಡವಾಗಿ ದ್ರವ್ಯಾದಿಗಳನ್ನು ಕೊಟ್ಟು ; ೪. ಬಚ್ಚರ—ವೈಶ್ಯರ ; ದೂಸಿ ಗರ—ಬಟ್ಟೆ ವ್ಯಾಪಾರಿಗಳ, ದೂಸ < (ಸಂ) ದೂಷ್ಯ + ಇಗ, ದೂಷ್ಯ ಎಂದರೆ ವಸ್ತ್ರ, ಬಟ್ಟೆ ; ನಿಯೋಗಿಗಳ—ಅಧಿಕಾರಿಗಳ ; ೫. ಅಗ್ಗಳಮಪ್ಪ—ಶ್ರೇಷರಾದ, ಇದರ ಪಾಠಾಂತರ ಅಗ್ಗಯಿಲೆಯರಪ್ಪ ಎಂಬುದು ಸ್ವೀಕರಣಯೋಗ್ಯ, ಅರ್ಥ ಹೆಚ್ಚು ಹಣ ವನ್ನು ತೆಗೆದುಕೊಳ್ಳುವವರಾದ; ೮. ಏೞನೆಯ ನೆಲೆಯೊಳ್—ಏಳನೆಯ ಅಂತಸ್ತಿ ನಲ್ಲಿ ; ಲುಂದುವೋವರಿಗೆಯ—ಮಲಗುವ ಮನೆಯ, ಕೊಠಡಿಯ, ಓವರಿಗೆ < ಸಂ. ಅಪವರಕಾ ; ಪುಡಿಕೆಯೊಳ್—ಪೆಟ್ಟಿಗೆಯಲ್ಲಿ ; ೧೧. ಮಱಲುಂದುವೋವರಿಯಂ— ಮೈಮರೆತು ನಿದ್ರಿಸುವ ಕೊಠಡಿಯಲ್ಲಿ ; ೧೧. ತಲೆದೆಸೆಯೊಳ್—ತಲೆಯ ಕಡೆಯಲ್ಲಿ ; ಪುಡಿಕೆಯಂ—ಪೆಟ್ಟಿಗೆಯನ್ನು, ಭರಣಿಯನ್ನು ; (ಸಂ) ಪುಟಿಕಾ ; ೧೫. ನೇಸ ರ್ಮೂಡೆ—ಸೂರ್ಯನು ಉದಯವಾಗಲು ; ೧೬. ಪರದರ—ವರ್ತಕರ ; ೧೮. ಆರ ಯ್ಯದೆ—ವಿಚಾರಿಸದೆ, ಹುಡುಕದೆ ; ಕೆಮ್ಮಗಿರ್ಪೆ—ಸುಮ್ಮನಿರುವೆ ; ೧೯. ಸೆಜ್ಜೆ ಯೋವರಿಯಂ — ಮಲಗುವ ಕೋಣೆಯನ್ನು ; ೨೧. ನಿಗ್ರಹಮಂ—ಶಿಕ್ಷೆಯನ್ನು, ದಂಡನೆಯನ್ನು ; ೨೨. ಎಡೆಯನೀವುದು — ಅವಕಾಶವನ್ನು ಕೊಡುವುದು ; ೨೩. ಮೆಚ್ಚುಕೆಯ್ವುದು—ಮೆಚ್ಚಿದಹಾಗೆ ಮಾಡುವುದು ; ೨೫. ಆರಮೆಗಳೊಳಂ— ಉದ್ಯಾನವನಗಳಲ್ಲಿಯೂ ; ೨೮. “ಪಿರಿದೊಂದು ಕಿಱುವಳ್ಳಮಂ”—ಈ ಪಾಠ ಸರಿ

ಯಲ್ಲ, 'ಳ[ಳಿ] ಱುವಳ್ಳುಮಂ' ಎಂದಿರಬೇಕು, ಅಳಿಱು ಎಂದರೆ ಕೆಸರು, ಕೆಸರಿನ ದೊಡ್ಡ ಹಳ್ಳವನ್ನು ಎಂದರ್ಥವಾಗುತ್ತದೆ;

೧೨೪. ೧: ವಿದ್ಯಾಧರ ಕರಣದಿಂ—ವಿದ್ಯಾಧರರೆಂಬ ಆಕಾಶಗಾಮಿಗಳ ವಿದ್ಯೆಯಿಂದ; ಲಂಘಿಸಿ—ಹಾರಿ, ದಾಟಿ; ಗೆಂಟೆಱಿಸೊಳಿರ್ದು—ದೂರದಲ್ಲಿದ್ದು; ೨. ಪುಯ್ಯಲಿಡಯಿಡೆ—ಕೂಗಿಕೊಳ್ಳುತ್ತಿರಲು; ೫. ಕಳ್ಳನಲ್ಲದುದರ್ಕ್ಕೆ ಪೊಟಿಲೆಲ್ಲಮಱಿಗುಂ—ಇಲ್ಲಿ ದ್ವಿತೀಯಾರ್ಥದಲ್ಲಿ ಚತುರ್ಥಿ; ೯. ರೂಪುಗರೆದು—ರೂಪವನ್ನು ಮರಸಿ, ಮುಚ್ಚಿಕೊಂಡು; ದಿವಸಕ್ಕೆ—ಹಗಲಿಗೆ; ೧೦. ಪ್ರತ್ಯಯಮಂ ಮಾಡಿ—ನಂಬಿಕೆಯನ್ನುಂಟುಮಾಡಿ; ೧೧. ಪ್ರತಿಘುಟಿಕಾಂಜನಂಗಳಂ—ವಿರುದ್ಧವಾದ ಗುಳಿಗೆ ಕಾಡಿಗೆಗಳನ್ನು; ೧೨. ಕುಹಕಂ—ಮೋಸಗಾರ; ೨೧. ನೀಡುಂ—ಬಹಳ ಹೊತ್ತು; ೨೨. ಬಾೞಿವಾೞಿ—ಬದುಕಿರಲು ಎಂದರೆ ಪ್ರಾಣವಿರುತ್ತಿರಲು; ಅನಯಮದೆ—ಸುಲಭವಾಗಿ, ಶ್ರಮವಿಲ್ಲದೆ; ೨೪. ಒಳಱಿ—ಕೂಗಲು; ೨೭. ಅಮೋಘಂ—ವ್ಯರ್ಥವಲ್ಲದೆ, ನಿಶ್ಚಯವಾಗಿಯೂ; ೨೯. ದರ್ಕ್ಕಂ ಬಸಿದು—ಶೂಲದ ಮೊಳೆಯನ್ನು ಹರಿತಮಾಡಿ; ೩೦. ರೂಪ ಪರಾವರ್ತನಂಗೆಯ್ದು—ಆಕಾರವನ್ನು ಮಾರ್ಪಡಿಸಿಕೊಂಡು, ರೂಪ ಪರಾವರ್ತನ ಎಂಬುದೊಂದು ವಿದ್ಯೆ, "ರೂಪ ಪರಾವರ್ತನ ವಿದ್ಯೆಯಿಂ ತುರಗ ರೂಪಾದಂ ಚರಂ ಬೇಚರಂ" ಎಂದು ನಾಗಚಂದ್ರನ ಪ್ರಯೋಗ (ಪಂಪರಾ. ೪-೧೦೫).

೧೨೫. ೧: ಇಕ್ಕಲೀಯದೆ—ಏರಿಸಲು ಬಿಡದೆ; ೨. ಕಾಪಿನವರಂ—ಕಾವಲುಗಾರರನ್ನು; ೫. ನೆನೆದಾ—ನೆನೆದುಕೊಂಡೆಯೋ? ೯. ಸೋಲ್ತೆನುಂ—ಸೋತವನಾಗಿರುವೆ ಮತ್ತು; ಸತ್ತೆನುಂ—ಸತ್ತವನೂ ಆಗಿರುವೆ; ೧೦. ಪದಿರಿನಿಂ—ಒಗಟೆಯಿಂದ, ಅರ್ಥಗರ್ಭಿತವಾಗಿ, ಎರಡರ್ಥಗಳನ್ನು ಕೊಡುವ, (ತಮಿಳು) ಪಿದಿರ್; ಸೊಱ್ಮಾತುಗಳಂ—ಉತ್ತರ ಪ್ರತ್ಯುತ್ತರದ ಮಾತುಗಳನ್ನು; ೧೭. ಬಾರಿಸಿದಂ—ತಡೆದನು; ೨೦. ಪೊಲ್ಲಮೆಯುಂ—ತಪ್ಪೂ; ೨೫. ದೀನಾರಂ—ದೀನಾರ ನಾಣ್ಯಗಳು; ಬಿಯಮಾದುದು—ವ್ಯಯವಾಯಿತು, ಖರ್ಚಾಯಿತು; ವಣ್ಣಂ ಚಳಿಯದೆ—ಬಣ್ಣಗೆಡದೆ; ೨೭. ಮಡಗಿದೆಡೆಯಂ—ಮುಚ್ಚಿಟ್ಟ ಸ್ಥಳವನ್ನು; ೨೮. ಕಾಪುವೆರಸು—ಕಾವಲುಸಹಿತನಾಗಿ;

೧೨೬. : ಕಳೆದು—ತೆಗೆದುಹಾಕಿ; ೩. ಕಸವರಮಪ್ಪುದಂ—ಒಡವೆಯಾಗಿರುವುದನ್ನು; ಪಲ್ಲಟಿಸಲೀಯದೆ—ಬದಲಾವಣೆಗೆ ಅವಕಾಶ ಕೊಡದೆ; ೯. ಕಿಱಿಯಂದು — ಚಿಕ್ಕಂದಿನಂದು; ೧೦. ಬಂದಿಸುವನ್ನೆಗಂ — ನಮಸ್ಕರಿಸುತ್ತಿರಲು; ವಖ್ಖಾಣೆಯುಂ—ವ್ಯಾಖ್ಯಾನವನ್ನು; ೧೫. ಆಱಿಡಿಗೊಳ್ವರುಂ—ಹಿಂಸೆಮಾಡುವವರೂ; ೧೬. ಕಳ್ವರುಂ—ಕದಿಯುವವರೂ; ಮಱೆವಾಳ್ವರುಂ—ಮರೆಯಾಗಿ ಎಂದರೆ ಜಾರತನದಿಂದ ರಹಸ್ಯವಾಗಿ ಬಾಳುವವರೂ; ಅಪರಿಮಿತ ಪರಿಗ್ರಹಮಂ ನೆರಪುವರಂ—ಮಿತಿಯಿಲ್ಲದೆ ವಸ್ತುಸಂಗ್ರಹವನ್ನು ಕೂಡಿಡುವವರೂ; ೧೭. ಅಯ್ದು ಪಾಲ್ಮರದ ಪಣ್ಗಳುಂ—ಹಾಲು ಬರುವ ಅಯ್ದುಮರದ ಹಣ್ಣುಗಳನ್ನೂ ಎಂದರೆ ಆಲ, ಅತ್ತಿ, ಅಶ್ವತ್ಥ, ಇಪ್ಪೆ,

ಗೋಣಿ ಎಂಬ ಮರಗಳ ಹಣ್ಣುಗಳೂ; ೧೮. ಆಳಂಬೆಯುಂ—ಅಣಬೆಯೂ ಎಂದರೆ ನಾಯಿಕೊಡೆಯೂ; ಸಣಂಬಿನ ಪೂವುಂ—ಸಣಬಿನ ಹೂವೂ; ೧೯. ಅಪೇಯ ಪೇಯಂ—ಕುಡಿಯಬಾರದ್ದನ್ನು ಕುಡಿಯುವುದು; ಅಭಕ್ಷ್ಯ ಭಕ್ಷಂ—ತಿನ್ನಬಾರದ್ದನ್ನು ತಿನ್ನುವುದು; ಪಂಚಮಹಾಪಾತಕಂಗಳಂ—ಬ್ರಹ್ಮಹತ್ಯೆ, ಸುರಾಪಾನ, ಸ್ತೇಯ, ಗುರು ಪತ್ನೀಗಮನ, ಮತ್ತು ಇವುಗಳೊಡನೆ ಸಂಸರ್ಗ; ೨೦. ನಿವೃತ್ತಿ ಪರಿಣಾಮಮಿಲ್ಲದೆ—ಹಿಂದಿರುಗುವ ಅವಕಾಶವೇ ಇಲ್ಲದೆ; ಕಾಲಂಗೆಯ್ದು—ಸತ್ತು; ಏೞುಂ ನರಕಂಗ ಳೊಳ್—ರತ್ನಪ್ರಭ, ಶರ್ಕರಾಪ್ರಭ, ವಾಲುಕಾಪ್ರಭ, ಪಂಕಪ್ರಭ, ಧೂಮಪ್ರಭ, ತಮಃಪ್ರಭ, ಮಹಾ ತಮಃಪ್ರಭ ಎಂಬ ಏಳು ನರಕಗಳಲ್ಲಿ;

**ಗಾಹೆ**॥ ಣಿರಯೇ—ನರಕದಲ್ಲಿ, ಅಹಣ್ಣಿಸಂ—ಹಗಲೂ ರಾತ್ರಿಯೂ, ಪಚ್ಚ ಮಾಣಾಣಂ—ಬೇಯಿಸಲ್ಪಡುತ್ತಿರುವ, ಣಿರಯಿಯಾಣ—ನರಕಜೀವಿಗಳಿಗೆ, ಅಚ್ಛಿಣಿ ಮಿಾಳಣ ಮೇತ್ತಂ—ಕಣ್ಣುರೆಪ್ಪೆ ಹೊಡೆಯುವಷ್ಟು ಕಾಲ ಕೂಡ, ಸುಹಂ—ಸುಖವು, ಣತ್ಥಿ—ಇಲ್ಲ, ನಾಸ್ತಿ; ಅಣುಬದ್ಧಂ—ಕಟ್ಟಿಟ್ಟಿರುವ, ದುಃಖಮೇವ—ದುಃಖವೊಂದೇ.

ವೃ॥ ಕರಜ—ಉಗುರುಗಳಲ್ಲಿ, ನಿವೇಶಿತ—ಹೊಗಿಸಲ್ಪಟ್ಟ, ತೀಕ್ಷ್ಣ—ಹರಿ ತವಾದ, ಶಲಾಕಾಃ—ಸಲಾಕೆಗಳನ್ನುಳ್ಳ; ಕ್ರಕಚ—ಗರಗಸದಿಂದ, ವಿಪಾಟಿತ—ಸೀಳಲ್ಪಟ್ಟ, ಭಿನ್ನ—ಕತ್ತರಿಸಿದ, ಶರೀರಾಃ—ದೇಹವುಳ್ಳವರಾದ, ನರಕ ಭವೇ—ನಾರಕಿಗಳು, ವಿರಸಾಃ—ರಸಹೀನರಾದವರು, ಸಂತೋಷವಿಲ್ಲದವರು, ತತ್‌ಕ್ಷಣ ದುಃಖ ವಿಷಾದಂ—ತಾತ್ಕಾಲಿಕವಾದ ದುಃಖೋದ್ವೇಗಗಳನ್ನು, ಚಿರಮಪಿ—ಬಹುಕಾಲ ದಾದರು ಕೂಡ, ವಿಷಹಂತೇ—ಅನುಭವಿಸುತ್ತಾರೆ.

**೧೨೭. ಕಂ**॥ ಇಱಿ—ಹೊಡೆ, ಚುಚ್ಚು, ಕಿಱಿದನೊದಱ-?, ಕೈರಂದಱ—ಕಾಚಿ ನಂತೆ ಚೂರು ಚೂರು ಮಾಡು, ಕೈರ <(ಸಂ)ಖದಿರ; ನಿಟ್ಟೆಲ್ವಂ—ನೀಳವಾದ ಮೂಳೆ ಗಳನ್ನು, ಮುಱಿ—ಒಡೆ; ಅರಿದು—ಕತ್ತರಿಸಿ, ನೆಱನೆಡೆಗಳ್—ಮರ್ಮಸ್ಥಾನಗಳು, ಬಾಯ್ದೆಱೆಯೆ—(ಹುಣ್ಣಿನ) ಬಾಯಿಗಳು ತೆರೆಯಲು, ಪೊಸಪುಣ್ಗಳೊಳ್—ಆಗ ತಾನೇ ಆದ ಗಾಯಗಳಲ್ಲಿ, ಲೋಹವಾರಿಯಂ—ಕರಗಿಸಿದ ಲೋಹದ ನೀರನ್ನು, ಮಱುಗುವಿನಂ — ಕುದಿಯುತ್ತಿರಲು, ಮಱುಗುವಿನಂ — ದುಃಖಪಡುತ್ತಿರಲು, ಪೊಯ್ಯ್—ಹೊಯ್ಯು, ಸುರಿ.

ಕಟಿವಮಂ—ಸೊಂಟವನ್ನು, ಕಡಿ—ಕತ್ತರಿಸು; ತೊಡೆಯಂ—ತೊಡೆಯನ್ನು, ಉಡಿ—ಮುರಿ; ನಡನಡ ನಡುಗುವಿನಂ—ನಡನಡ ನಡುಗುತ್ತಿರಲು, ಅಡಸಿ—ಹಿಡಿದು, ತಡೆಯದೆ—ತಡಮಾಡದೆ, ಖಳನಂ—ಪಾಪಿಯನ್ನು, ದುಷ್ಟನನ್ನು, ಪಿಡಿದು—ಹಿಡಿದು, ಉಡಿಯೆ—ಮುರಿಯುವಂತೆ, ಕಟ್ಟು, ಮಿಡಮಿಡ ಮಿಡುಕುವಿನಂ—ಅಲು ಗಲುಗಿ ಅಲುಗುತ್ತಿರಲು, ವಿಲಿವಿಲಿ ಒದ್ದಾಡುತ್ತಿರಲು, ಪೆಡತಲೆಯಂ—ತಲೆಯ ಹಿಂಭಾಗವನ್ನು, ಬಡಿಯೊಳ್—ದೊಣ್ಣೆಯಲ್ಲಿ, ಒಡೆಯೆ—ಒಡೆಯುವಂತೆ, ಪೊಡೆ—ಹೊಡೆ.

ಬಡಿ, ಕೊಲ್—ಕೊಲ್ಲು, ಕಟ್ಟು, ಇಱಿ, ಮುಱಿ—ಮುರಿ, ಕಡಿ—ಕತ್ತರಿಸು, ನಡುವಂ—ಸೊಂಟವನ್ನು ಕೊಱೆ—ಕತ್ತರಿಸು, ಕುತ್ತು—ಚುಚ್ಚು, ಕರುಳ್ಗಳಂ—ಕರುಳುಗಳನ್ನು, ತೆಗೆ—ಹೊರಕ್ಕೆ ಹಾಕು, ಮೊಗಮಂ—ಮುಖವನ್ನು, ಸುಡು, ಪಿಡಿ—ಹಿಡಿ, ಬಡಿ, ನಿಮಿರ್ದು—ನೇರವಾಗಿ, ಇಱಿ—ಇರಿ, ಬಯ್—ಬೈಯು ; ಕಡಂಗಿ—ಉತ್ಸಾಹಿಸಿ, ನುಂಗು, ಎಂದು—ಎಂಬುದಾಗಿ, ನಾರಕರಾಗಳ್—ನರಕದವರು ಆಗ, ಮುಸುಱೆ—ಮುತ್ತಿಕೊಂಡು,

೧೩. ಕೊಂತಂಗಳಿಂದಂ—ಒನಕೆಗಳಿಂದ, ಇಟ್ಟಿಗಳಿಂದಂ—ಈಟಿಗಳಿಂದ, ಕುತ್ತಿಸಿಱಿಂದಂ : ಕುತ್ತುವ—ಚುಚ್ಚುವ, ಇಸಿಱಿಂದಂ—ಆನೆ ಹಂದಿಗಳ ಕೋಡುಗಳಿಂದ, (ತಮಿಳು) ಎಯಿಱು ; ಕರುಳ್ಮಾಲೆಗಳ್—ಕರುಳಿನ ತೆಕ್ಕೆಗಳು ; ೧೪. ಮುಟ್ಟಿಗೆಗಳೊಳ್—ಮುಟ್ಟಿಗೆಯೆಂಬ ಆಯುಧದಲ್ಲಿ, ಇಟ್ಟು—ಹೊಡೆದು, ತೆಗವುವುದಂ—ಎಳೆಯುವುದೂ ; ೧೫. ಪೋೞ್ವಂತೆ—ಹೋಳುಮಾಡುವಂತೆ ; ೧೬. ಬಾೞ್ವುದುಂ—ಪೋೞ್ವುದುಂ (?) ; ೧೭. ಉಸಿರ್ಪತ್ತಿಲ್ಲದೆ—ಉಸಿರಾಡಲು ಅವಕಾಶವಿಲ್ಲದೆ (?) ೨೫. ಪೇೞೆಪಟ್ಟ—ಹೇಳಲ್ಪಟ್ಟ ;

**೧೨೮.** ೪ : ನಿನಗೊಸೆದೆಂ—ನಿನಗೆ ಪ್ರಸನ್ನನಾದೆನು ; ೧೩. ತೊಱೆಯಾ ತಡಿಯೊಳ್, ಇಲ್ಲಿ ಷಷ್ಠಿದೀರ್ಘವಿದೆ ; ೧೬. ಮಗನೆನಾಂ—ಮಗನಾಗಿದ್ದೇನೆ ನಾನು ; ೧೯. ಇರ್ವಮುಂ—ಇಬ್ಬರಾದ ನಾವೂ ; ಸಮಾನವಯಸರೆಂ—ಸಮಾನ ವಯಸ್ಸಿನವರಾಗಿದ್ದೇವೆ ; ೨೫. ಸುರಖಮೆಂಬೋದಂ—ಸುರಖ ಎಂಬ ಶಾಸ್ತ್ರವನ್ನು, ಇದು ಕಳ್ಳತನವನ್ನು ಪತ್ತೆ ಹಚ್ಚುವುದನ್ನು ಪ್ರತಿಪಾದಿಸುವ ಶಾಸ್ತ್ರ ; ಕರಪಟಶಾಸ್ತ್ರ—ಚೋರಶಾಸ್ತ್ರ, ಕಳ್ಳತನವನ್ನು ಕಲಿಸಿಕೊಡುವ ಶಾಸ್ತ್ರ, ಇದನ್ನು ಬರೆದವನು ಖರಪಟ್ಟ ಎಂಬವನು ; ಅವನ ಹೆಸರಿನಿಂದ ಈ ಶಾಸ್ತ್ರಕ್ಕೆ ಹೆಸರು ಬಂದಿದೆ, ಕೌಟಲೀಯ ಅರ್ಥಶಾಸ್ತ್ರದಲ್ಲಿ "ತಸ್ಯೋಪಕರಣಂ ಪ್ರಮಾಣಂ ಪ್ರಹರಣಂ ಪ್ರಧಾರಣ ಮವಧಾರಣಂಚ ಖರಪಟ್ಟಾದಾಗಮಯೇತ್" ಎಂದಿದೆ (೪-೮), ಇದಕ್ಕೆ ಟಿಪ್ಪಣಿ "ಖರಪಟ್ಟ ಇತಿ ನಾಮ್ನಾ ಪ್ರಸಿದ್ಧಾತ್ ಚೋರಶಾಸ್ತ್ರಾತ್", ಅರ್ಥಶಾಸ್ತ್ರದ ಮೇಲಣ 'ಪ್ರತಿಪದ ಸಂಚಿಕಾ' ಎಂಬ ಮಲಯಾಳಿ ಟೀಕೆಯಲ್ಲಿ "ಇಚ್ಚೊನ್ನ ಉಪಕರಣಾದಿಗಳೆಲ್ಲಂ ಕರವಟತ್ತಿನಿನ್ರರಿಕ" ಎಂಬ ವಿವರಣೆ ಇದೆ, ಇದನ್ನು ಗಣಪತಿಶಾಸ್ತ್ರಿಗಳು ಅವಲಂಬಿಸಿ "ಖರಪಟ್ಟಾತ್ ಕರ್ತೃನಾಮ ಪ್ರಸಿದ್ಧ ಚೌರ್ಯಶಾಸ್ತ್ರಾತ್ ಆಗಮಯೇತ್ ಅಧೀಯಾತ" ಎಂದು ಹೇಳಿದ್ದಾರೆ, ಮಹೇಂದ್ರ ವಿಕ್ರಮವರ್ಮನ 'ಮತ್ತವಿಲಾಸ ಪ್ರಹಸನ'ದಲ್ಲಿ ಬರುವ ಶಾಕ್ಯ ಭಿಕ್ಷು "ಣಮೋ ಬುದ್ಧಾ ಅ" ಎಂದಾಗ ಕಪಾಲಿಯು "ನಮಃ ಖರಪಟಾಯೇತಿ ವಕ್ತವ್ಯಂ, ಯೇನ ಚೋರಶಾಸ್ತ್ರಂ ಪ್ರಣೀತಂ ಅಥವಾ ಖರಪಟಾದಪ್ಯಸ್ಮಿನ್ನಧಿಕಾರೇ ಬುದ್ಧ ಏವ ಅಧಿಕಃ" ಎಂದು ಉತ್ತರ ಹೇಳುತ್ತಾನೆ, ಭಾಸನ 'ಚಾರುದತ್ತ' ನಾಟಕದಲ್ಲಿ ಬರುವ ಸಜ್ಜಲಕನೆಂಬ ಕಳ್ಳನು "ನಮಃ ಖರಪಟಾಯ" ಎನ್ನುತ್ತಾನೆ (ಅಂಕ ೩ ೧೦ನೆಯ ಪದ್ಯವಾದ ಮೇಲೆ) ಸುಮಾರು ಕ್ರಿ. ಶ. ೭ನೆಯ ಶತಮಾನದ ತಮಿಳು

ಕಾವ್ಯವಾದ "ಶಿಲಪ್ಪದಿಕಾರ"ದಲ್ಲಿ "ಇರವೇ ಪಗಲೇ ಯೆನ್ದಿರಣ್ಡಿಲೇ, ಕರವಡಂ ಕೇಟ್ಟ ನೋರ್ ಪುಗಲಿಡವಿಲ್ಲೊ" ಎಂಬ ಪಂಕ್ತಿಗಳಲ್ಲಿ 'ಕರವಡ' ಎಂಬ ಹೆಸರು ಬಂದಿದೆ; ಇವಲ್ಲದೆ ಶೂದ್ರಕನು 'ಪದ್ಮ ಪ್ರಾಭೃತಕ' ಎಂಬ ತನ್ನ ನಾಟಕದಲ್ಲಿ ಧೂರ್ತ, ವಿಟ ಎಂಬ ಸಂಕೇತಗಳಿಂದ ಖರಪಟಪನ್ನು ಸೂಚಿಸಿರುವಂತೆ ಕಾಣುತ್ತದೆ, ಬಾಣನು ತನ್ನ 'ಕಾದಂಬರಿ'ಯಲ್ಲೂ ದಂಡಿಯು 'ಅವಂತಿ ಸುಂದರೀ ಕಥಾ' ಎಂಬ ತನ್ನ ಗ್ರಂಥದಲ್ಲೂ ಸುಬಂಧು ತನ್ನ 'ವಾಸವದತ್ತಾ' ಎಂಬ ಕೃತಿಯಲ್ಲೂ, ಬುದ್ಧಸ್ವಾಮಿನ್ ಎಂಬಾತನು ತನ್ನ 'ಬೃಹತ್ಕಥಾ ಶ್ಲೋಕ ಸಂಗ್ರಹ'ದಲ್ಲೂ ಖರಪಟವೆಂಬ ಹೆಸರನ್ನು ಹೇಳಿದ್ದಾರೆ, ಕರ್ಣೀಸುತ, ಖರಪಟ, ಮೂಲದೇವ, ಕಲಾಂಕುರ—ಎಂಬ ಈ ನಾಲ್ಕು ಹೆಸರುಗಳು ಒಬ್ಬನೇ ವ್ಯಕ್ತಿಯನ್ನು ನಿರ್ದೇಶಿಸುತ್ತವೆಯೆಂದು ಪುರುಷೋತ್ತಮನು ತನ್ನ 'ತ್ರಿಕಾಂಡ ಶೇಷ'ವೆಂಬ ಕೋಶದಲ್ಲಿ ಹೇಳಿದ್ದಾನೆ, ಖರಪಟನೂ ಅವನ ಸ್ತ್ರೇಯ ಶಾಸ್ತ್ರವೂ ಕ್ರಿ.ಪೂ. ೩ನೆಯ ಶತಮಾನದಲ್ಲೇ ಪ್ರಸಿದ್ಧವಾಗಿತ್ತು (ಎಂ. ರಾಮಕೃಷ್ಣ ಕವಿಗಳ Some Cryptic words in the Arthasastra ಎಂಬ ಲೇಖನವನ್ನು ನೋಡಬಹುದು, Journal, Tirumalai Sri Venkateswara, Vol. I, p. 41-50);

೧೨೯. ೨: ಪುನ್ನಾಗ—ಸುರಗಿಯ ಮರ; ವಕುಳ—ಪವಳದ ಮರ; ತಿಳಕ—ತಿಲಕ ಪುಷ್ಪದ ಮರ; ತಮಾಳ—ಹೊಂಗೆಮರ; ೩. ಕ್ರಮುಕ—ಅಡಕೆ, ನಾಳಿಕೇರ—ತೆಂಗು, ಜಂಬು—ನೇರಿಲೆ, ಜಂಬೀರ—ನಿಂಬೆ, ಪನಸ—ಹಲಸು; ಕದಳೀ—ಬಾಳೆ; ೪. ಸಹಕಾರ—ಸಿಹಿಮಾವು; ೫. ಕಿಕ್ಕಿಱಿಗಿಱಿದಿರ್ದ—ದಟ್ಟವಾಗಿ ತುಂಬಿದ್ದ; ೫. ಉಳಿಸೆಂಡಂ—ಒಂದು ಆಟವನ್ನು, ಚೆಂಡನ್ನು ಬಚ್ಚಿಟ್ಟು ಆಡುವ ಆಟ, ಉಳಿ—ಅಡಗು, ಈ ಆಟವನ್ನು ಪಂಪನೂ ಹೇಳಿದ್ದಾನೆ (ಪಂಪಭಾ. ೨-೩೦). ಆಲೋಕನ ವಿದ್ಯೆಯಂ—ಅದೃಶ್ಯವಾಗುವ ವಿದ್ಯೆಯನ್ನು; ೬. ಉಳಿದೊಡಂ—ಅಡಗಿಕೊಂಡರೂ; ೮. ಕಾಪಿನೊಳ್—ನಗರ ರಕ್ಷಣೆಯಲ್ಲಿ; ೯. ತಳಾಱುಗೆಯ್ವಂದು—ತಳವಾರನ ಕಾರ್ಯವನ್ನು ಮಾಡುವಾಗ; ೧೧. ನುಡಿದೊಡೆ—ಪ್ರತಿಜ್ಞೆಮಾಡಿದರೆ; ೧೨. ಮೂದಲಿಸಿ—ಹುರುಡಿನಿಂದ ಮಾತಾಡಿ, (ತಮಿಳು) ಮೂದಲಿ—ನಿರೂಪಿಸುವುದು; ೧೩. ಸಂತಾನಮಂ—ವಂಶಪರಂಪರೆಯಿಂದ ಬಂದುದನ್ನು, ಇಲ್ಲಿ ತಳವಾರಿಕೆಯನ್ನು; ೨೦. ಆರಯ್ಸಿಯುಂ—ಹುಡುಕಿಸಿಯೂ; ೨೬. ಮನೆವಾೞ್ತಿಗೆ—ಮನೆಯ ಕೆಲಸಕ್ಕೆ; ೨೭. ಎನ್ನ ಬರ್ಪನ್ನೆಗಂ—ನಾನು ಬರುವವರೆಗೂ; ೨೮. ಕಲ್ಪಿಸಿ—ಕಲಿಸಿ, ಹೇಳಿ; ಕಪ್ಪಡಮಂ—ಬಟ್ಟೆಯನ್ನು; ೨೯. ಪಱಿದು—ಹರಿದು;

೧೩೦. ೩: ಅಧಿಗಮ ಸಮ್ಯಗ್‌ದೃಷ್ಟಿಯೆನ್—ಸಂಪಾದಿಸಿದ ಸಮ್ಯಗ್ದೃಷ್ಟಿಯುಳ್ಳವನಾಗಿದ್ದೇನೆ; ೪. ವಾರದು—ಬಾರದು; ೬. ಮೊದಲಿಂತಗುಳ್ದು—ಮೊದಲಿನಿಂದ ಆರಂಭಿಸಿ; ೧೧. ಆಗ್ರಹಂಗೊಂಡು—ಪಟ್ಟುಹಿಡಿದು; ೧೨. ಮಗುಚ್ಚಲಾರ್ಪೊಡೆ—ಹಿಂದಿರುಗಿಸಲು ಸಮರ್ಥನಾದರೆ; ೧೩. ತನ್ನಾರ್ಪ ತೆಱದಿಂ—ತನಗೆ ಸಾಧ್ಯವಾಗುವಷ್ಟು ರೀತಿಯಿಂದ; ೨೪. ಉಪಸರ್ಗಂಗೆಯ್ದು — ತೊಂದರೆಯನ್ನು

ಮಾಡಿ; ೧೫. ತನ್ನತೊಟ್ಟ—ತಾನು ಧರಿಸಿದ ; ೧೮. ಪರಿವೊಟ್ಟಿಯುವರ್—ಒಂಟಿಯನ್ನೇರಿ ಬರುವ ಹರಿಕಾರರು. ದೂತರು ; ೨೨. ಸಂಧಿವಿಗ್ರಹಿ—ರಾಜನ ಒಬ್ಬ ಅಧಿಕಾರಿ ; ೨೨. ಬಾಚಿಸಿದಂ—ವಾಚಿಸಿದನು, ಓದಿದನು ; ೨೫. ಪೆಱತಣ—ಹಿಂದಿನ, ಮೊದಲಿನ ; ಮನೆವಾಱತ್ತಿಯಂ—ಮನೆಗೆಲಸವನ್ನು ; ೨೬. ಈ ಯೋಲೆಯಂ—ಈ ಪತ್ರವನ್ನು ; ತಡೆಯದೆ—ತಡಮಾಡದೆ ; ೨೭. ಈತನ ಪೇೞ್ದುದುಂ — ಇವನು ಹೇಳಿದ್ದೂ ; ಇಲ್ಲಿ ಪ್ರಥಮಾರ್ಥದಲ್ಲಿ ಷಷ್ಠಿ ಬಂದಿದೆ.

೧೩೧. ೧ : ಮಂಡಳಿಕಂ—ಸಾಮಂತ, ಮಂಡಲಾಧೀಶ್ವರ ; ಓರಂತಪ್ಪ—ಸಮಾನವಾದ; ೫. ಆಲೇಖ್ಯ—ಚಿತ್ರವಿದ್ಯೆ ; ೬. ಪತ್ರಚ್ಛೇದ್ಯ—ಭೂರ್ಜಾದಿ ಪತ್ರಗಳನ್ನು ಏಕಪ್ರಕಾರವಾಗಿ ಕತ್ತರಿಸುವುದು ; ೮. ಪಾಗುಡಂಗಳುಮಂ—ಉಡುಗೊರೆ ಕಾಣಿಕೆ ಮುಂತಾದುವುಗಳನ್ನು ; ೯. ತಾಂಗಿರ್ದೆನ್—ತಡೆದಿದ್ದೆನು ; ೨೦. ಯೋಗ್ಯನಯ್—ಯೋಗ್ಯನಾಗಿರುವೆ ; ೨೨. ಬೆಂಟಂಗೊಂಡಿರ್ದೆನ್—ಪ್ರೀತಿಸಟ್ಟಿರುವೆನು ; ಏವೆಂ—ಏನು ಮಾಡಲಿ ; ೧೩. ಪೆಂಡತಿಗೆ—ಹೆಂಗಸಿಗೆ ; ೪. ಪರಿಚ್ಛೇದಿಸಿ—ಖಂಡಿತವಾಗಿ ; ನಿಶ್ಚಯಿಸಿ ; ೩೭. ಅಷ್ಟಶೋಭೆಯಂ—ಕಳಸ, ಕನ್ನಡಿ, ಬಾವುಟ, ತೋರಣ, ಧೂಪ, ದೀಪ, ಭೇರಿ, ಬೀಸಣಿಗೆ ಎಂಬ ೮ ಅಲಂಕಾರಗಳನ್ನು ; ೨೭. ಕೂಸನಯ್—ಸಣ್ಣ ಪ್ರಾಯದವನಾಗಿರುವೆ ; ೨೯. ಪ್ರಸ್ತುತಂಗಳಂ—ತಾತ್ಕಾಲಿಕ, ಅಗಿನ ವಿಷಯಗಳನ್ನು.

೧೩೨. ಶ್ಲೋಕ ॥ ಸಂಸಾರವರ್ತಿನಾಂ—ಸಂಸಾರದಲ್ಲಿರುವವರ, ಆಯುಃ—ಆಯುಸ್ಸು, ಐಂಡೀರ ಪಿಂಡ ಸಂಕಾಶಂ—ನೊರೆಯ ಉಂಡೆಗೆ ಸಮಾನ ; ರೂಪ ಯೌವನಂ—ರೂಪವೂ ಯವ್ವನವೂ, ಆಖಂಡಲ—ಇಂದ್ರನ, ಧನುಷ್ಕಾಂಡ—ಬಿಲ್ಲಿನ ಕೋಲಿಗೆ, ಸನ್ನಿಭಂ—ಸಮಾನವಾದದ್ದು.

ವೃ ॥ ಪುಟ ೬೮ ನೋಡಿ.

ವೃ ॥ ಜಾತಿಜರಾಮರಣಂ—ಹುಟ್ಟು ಮುಪ್ಪು ಸಾವುಗಳು, ಯದಿ—ಯಾವಾಗ, ನ ಭವೇತ್—ಉಂಟಾಗುವುದಿಲ್ಲವೋ, ಇಷ್ಟವಿಯೋಗ ಭಯಂ—ಇಷ್ಟರಾದವರ ಅಗಲಿಕೆಯ ಭಯ, ಯದಿ—ಯಾವಾಗ, ನ ಭವೇತ್—ಉಂಟಾಗುವುದಿಲ್ಲವೋ ; ಚ—ಮತ್ತು, ಸರ್ವಂ ಇದಂ—ಈ ಸರ್ವ ವಸ್ತುಗಳೂ, ಯದಿ—ಯಾವಾಗ, ಅನಿತ್ಯಂ—ಅಶಾಶ್ವತವು, ನ ಭವೇತ್—ಆಗುವುದಿಲ್ಲವೋ, ಆಗ, ಇಹಜನ್ಮನಿ—ಈಗಿನ ಜನ್ಮದಲ್ಲಿ, ಕಸ್ಯ—ಯಾರಿಗೆ, ರತಿಃ—ಒಲವು, ನ ಭವೇತ್—ಉಂಟಾಗುವುದಿಲ್ಲ.

೧೦. ನಲ್ಮೆಯುಂ—ಪ್ರೀತಿಯೂ ; ೧೧. ಮೊದಲಾಗೊಡೆಯವು—ಮೊದಲಾಗುಳ್ಳವು ; ಮೆಯ್ಯೊಳ್ಳಿತ್ತೆ—ದೇಹ ಒಳ್ಳೆಯದೆ ?

ಗಾಹೆ ॥ ಏದಂ ಸರೀರಂ—ಈ ದೇಹವು, ಅಸುಚೀ—ಶುಚಿಯಲ್ಲದ್ದು ; ಣಿಚ್ಚಂ—ಯಾವಾಗಲೂ, ಕಲಿಕಲುಸಭಾಜಣಂ—ರಾಗದ್ವೇಷಗಳಿಗೆ ಪಾತ್ರೆಯಾಗಿದೆ ; ಅಚೋಕ್ಖಂ—ಅಶುಭವಾದದ್ದು ; ಅಂತೋಬಾಹಿರದಿಟ್ಟಂ—ಒಳಗೂ ಹೊರಗೂ ಚರ್ಮದಿಂದ

ಮುಚ್ಚಲ್ಪಟ್ಟದ್ದು ಅಥವಾ ಕರುಳು ಮಾಂಸ ನರಗಳಿಂದ ಪರಿವೇಷ್ಟಿತವಾದದ್ದು ; ಕಿಬ್ಬಿಸ ಭರಿದಂ—ಅಶುಚಿಯಾದ ಶುಕ್ಲ ಶೋಣಿತಗಳಿಂದ ತುಂಬಿದ್ದು ; ಅಮೇಜ್ಝಘರಂ—ಮೂತ್ರ ಪುರೀಷಾದಿಗಳ ಮನೆ.

ವಸ—ಮಾಂಸದಲ್ಲಿರುವ ಜಿಡ್ಡು, ಮಜ್ಜ—ಮೂಳೆಯಲ್ಲಿರುವ ಸಾರ, ಮಾಂಸ—ರಕ್ತದ ಕಾರ್ಯ, ಶೋಣಿತಂ—ರಕ್ತರಸದ ಕಾರ್ಯ, ಪುಪ್ಫಸಂ—ನೊರೆಯ ರೂಪದ ಶ್ವಾಸಕೋಶ, ಕಾಲೇಜ್ಜ—ಕರಿಯ ಮಾಂಸಖಂಡ ರೂಪವಾದದ್ದು, ಯಕೃತ್ತು, ಸಿಂಹ ಸೀಹಾಣಂ—ಶ್ಲೇಷ್ಮ ಸಿಂಬಳಗಳು, ಸಿರಜಾಲ ಅಟ್ಠಿ ಸಂಗಡ—ರಕ್ತನಾಳಗಳು ಮೂಳೆಗಳು ಇವುಗಳಿಂದ ತುಂಬಿದ್ದು, ಚಮ್ಮಾಣದ್ಧಂ—ಚರ್ಮದಿಂದ ಹೊದಿಸಲ್ಪಟ್ಟದ್ದು ; ಸರೀರಘರಂ—ಶರೀರವೆಂಬ ಮನೆಯು, ಸಂತತಂ ಅಚೋಕ್ಖಂ—ಯಾವಾಗಲೂ ಅಶುಚಿಯಾದದ್ದು.

ಅಟ್ಠಿಣಿ ಛಣ್ಣಂ—ಮೂಳೆಗಳಿಂದ ಆವೃತವಾದದ್ದು ; ಣಾಳಿಣಿಬದ್ಧಂ—ರಕ್ತನಾಳಗಳಿಂದ ಕಟ್ಟಲ್ಪಟ್ಟದ್ದು ; ಕಲಿಮಲ ಭರಿದಂ—ಸರ್ವ ಕೊಳಕು ದ್ರವ್ಯಗಳಿಂದ ತುಂಬಿದ್ದು ; ಕಿಮಿಕುಲ ಪುಣ್ಣಂ—ಕ್ರಿಮಿಗಳಿಂದ ಪೂರ್ಣವಾದದ್ದು, ಮಾಂಸ ವಿಲಿತ್ತಂ—ಮಾಂಸದಿಂದ ಮೆತ್ತಿದ್ದು ; ತಯಪಡಿಛಣ್ಣಂ—ಚರ್ಮದ ಹೊದಿಕೆಯುಳ್ಳದ್ದು, ತಂ ಸರೀರ ಘರಂ—ಆ ದೇಹವೆಂಬ ಮನೆಯು, ಸಂತತಂ ಅಚೋಕ್ಖಂ—ಯಾವಾಗಲೂ ಅಶುಚಿಯಾದದ್ದು.

ಏದಾರಿಸೇ ಸರೀರೇ—ಇಂಥ ಶರೀರದಲ್ಲಿ, ದುಗ್ಗಂಧೇ—ದುರ್ನಾತವುಳ್ಳದರಲ್ಲಿ, ಕುಣಿಮ ಪೂತಿಯೇ—ಕಶ್ಮಲ ತುಂಬಿದ್ದರಲ್ಲಿ, ಅಚೋಕ್ಖೇ—ಅಶುಚಿಯಾದ್ದರಲ್ಲಿ, ಸಡಣಪಡಣೇ—ಸಡಿಲವಾಗಿ ಬೀಳುವಂಥದ್ದರಲ್ಲಿ, ಅಸಾರೇ—ಸಾರರಹಿತವಾದದ್ದರಲ್ಲಿ, ಸಪ್ಪುರಿಸಾ—ಸತ್ಪುರುಷರು, ರಾಗಂ—ಪ್ರೀತಿಯನ್ನು, ಣ ಕರಿಂತಿ—ಮಾಡುವುದಿಲ್ಲ.

*ಗಾಹೆ || ಸಕದ ಕಮ್ಮಂ—ತಾನು ಮಾಡಿದ ಕರ್ಮವು, ಛಾಯೇವ—ತನ್ನ ನೆರಳಿನಂತೆ, ಕಾರಗಂ—ಕರ್ತೃವನ್ನು ಎಂದರೆ ಮಾಡಿದವನನ್ನು, ಅಣುಯಾದಿ—ಅನುಸರಿಸಿಕೊಂಡು ಹಿಂದೆ ಹೋಗುತ್ತದೆ, ಣ ಸೇಸಂ—ಬೇರೆಯವನನ್ನಲ್ಲ ; ಜಿನಸಾಸಣೇ—ಜಿನನ ಆಜ್ಞೆ, ಆಶ್ರಯ ಹೊರತಾಗಿ, ಅಣ್ಣತ್ಥ—ಬೇರೆ ಕಡೆಗೆ, ಫಲಾಯಿದುಂ—ಓಡಿಹೋಗುವುದು, ದುಸ್ಸಕ್ಕಂ—ಅತ್ಯಂತ ಅಸಾಧ್ಯವಾದುದು.

ಶ್ಲೋಕ || ದುರ್ಗಂಧೇ—ಕೆಟ್ಟ ನಾತವುಳ್ಳ ದುರ್ಧರೇ ದುಃಖೇ—ತಾಳಲಾಗದ ದುಃಖವುಳ್ಳ, ದುಃಸ್ವಭಾವೇ—ಕೆಟ್ಟ ಸ್ವಭಾವವುಳ್ಳ, ನಶ್ವರೇ—ನಾಶವಾಗುವಂಥ, ದುರ್ವಿಲೋಕೇಚ—ನೋಡಲು ಅಸಹ್ಯವಾಗುವಂಥ, ಕಾಯೇ—ದೇಹದಲ್ಲಿ, ಜ್ಞಾನಿ—ಜ್ಞಾನಿಯೇ, ವೃಥಾ—ವ್ಯರ್ಥವಾಗಿದೆ, ತವ ಆಗ್ರಹಃ—ನಿನ್ನ ಆಸಕ್ತಿಯು, ಕಿಂತು—ಬೇರೇನು.

ಶ್ಲೋಕ || ೧೮೯ನೆಯ ಪುಟವನ್ನು ನೋಡಿ.

ವೃ || ಜಾತಿಕ್ಷ್ಮಾಜತತೀ—ಜಾತಿವೃಕ್ಷಗಳ ಸಮೂಹವನ್ನುಳ್ಳ, ಕೃತಾಂತ—ಯಮ

ನಂತೆ, ಕುಪಿತ—ಕೆರಳಿದ, ಕ್ರೂರ—ಕ್ರೂರವಾದ, ಉರು ದುಃಶ್ವಾಪದೇ—ಅಧಿಕವಾದ ದುಷ್ಟ ಜಂತುಗಳನ್ನುಳ್ಳ, ವ್ಯಾಧಿ ವ್ಯಾಧಭಯೇ—ರೋಗಗಳೆಂಬ ಬೇಡನ ಭಯವನ್ನುಳ್ಳ, ದುರಂತ ದುರಿತ—ನಾಶಕರವಾದ ಪಾಪಗಳೆಂಬ, ಸ್ಫೂರ್ಜತ್—ಪ್ರಕಾಶಮಾನವಾದ, ದವಾಗ್ನಿ—ಕಾಳ್ಕಿಚ್ಚಿನ, ಛದೇ—ಹೊದಿಕೆಯನ್ನುಳ್ಳ, ಜನ್ಮಾಟವೀ ಸಂಕಟೇ—ಜನ್ಮವೆಂಬ ಅರಣ್ಯದ ಇಕ್ಕಟ್ಟಿನಲ್ಲಿ, ನಿಸ್ತ್ರಾಣಸ್ಯ—ತ್ರಾಣವಿಲ್ಲದ, ವಿಚೇತಸಃ—ಚೈತನ್ಯವಿಲ್ಲದ, ದೃಢತೃಷಾ ದುಃಖಾಕುಳಸ್ಯ—ಬಲವಾದ ಆಸೆಯೆಂಬ ದುಃಖದಿಂದ ಪೀಡಿತನಾದ, ಅಂಗಿನಃ—ದೇಹಿಗಳಿಗೆ, ಜೈನಂ ಶಾಸನಮೇಕಮೇವ—ಜಿನನ ಆಜ್ಞೆಯೊಂದೇ, ಶರಣಂ—ಆಶ್ರಯಸ್ಥಾನವು.

೧೩೩. ವೃ ॥ ಇದಂ ಶರೀರಂ—ಈ ದೇಹವು, ಯಾವತ್—ಎಲ್ಲಿಯತನಕ, ಸ್ವಸ್ಥಂ ಅರುಜಂ—ಕ್ಷೇಮವಾಗಿಯೂ ರೋಗರಹಿತವಾಗಿಯೂ ಇರುವುದೋ, ಜರಾ—ಮುಪ್ಪು, ಯಾವತ್—ಎಲ್ಲಿಯವರೆಗೆ, ದೂರತಃ—ದೂರದಲ್ಲಿರುವುದೋ, ಇಂದ್ರಿಯಶಕ್ತಿಃ—ಇಂದ್ರಿಯಗಳ ಬಲವು, ಯಾವತ್—ಎಲ್ಲಿಯವರೆಗೆ, ಅಪ್ರತಿಹತಾಃ—ಕುಗ್ಗದಿರುವುದೋ, ಯಾವತ್—ಎಲ್ಲಿಯವರೆಗೆ, ಆಯುಷಃ—ಆಯುಸ್ಸಿನ, ನ ಕ್ಷಯೋ—ಕ್ಷಯವಿಲ್ಲವೊ, ತಾವತ್—ಆಗಲೇ, ವಿದುಷಾ—ಬುದ್ಧಿವಂತನಿಂದ, ಆತ್ಮಶ್ರೇಯಸಿ—ಆತ್ಮದ ಶ್ರೇಯಸ್ಸಿಗಾಗಿ, ಮಹಾನ್ ಪ್ರಯತ್ನಃ—ವಿಶೇಷವಾದ ಪ್ರಯತ್ನವು, ಕಾರ್ಯಃ—ಮಾಡಲ್ಪಡತಕ್ಕದ್ದು, ಭವನೇ—ಮನೆಯು, ಪ್ರೋದ್ದೀಪ್ತೇ ಸತಿ—ಹತ್ತಿಕೊಂಡು ಉರಿಯುತ್ತಿರಲು, ಕೂಪಖನನಂ—ಬಾವಿಯನ್ನು ತೋಡುವುದಕ್ಕಾಗಿ, ಪ್ರತ್ಯುದ್ಯಮಃ—ಪ್ರಯತ್ನವು, ಕೀದೃಶಃ—ಎಂತಹುದು ?

೬. ಅವಱ—ಆ ಪದ್ಯಗಳ, ನೆರವಿಗೆಲ್ಲಂ—ಜನಸಮೂಹಕ್ಕೆಲ್ಲ; ವಖ್ಖಾಣಿಸಿ—ವ್ಯಾಖ್ಯಾನಮಾಡಿ;

ಕಂ ॥ ಆನ್—ನಾನು, ಆಳ್ದನ್—ಸ್ವಾಮಿ, ರಾಜ; ಎನಗೆ—ನನಗೆ, ಇವರ್—ಇವರು, ಆಳ್ಗಳ್—ಸೇವಕರು, ಏನಾಯ್ತು—ಏನಾದುದು, ಎಂದು; ಅಱಿದುಮಱಿಯದೆ—ತಿಳಿದೂ ತಿಳಿಯದೆ, ಉಱದೆ—ಲೆಕ್ಕಿಸದೆ, ಆಂ—ನಾನು, ನುಡಿದ—ಹೇಳಿದ, ಏನಾನುಂ—ಏನಾದರೂ, ಒಂದು ಏವಂ—ಒಂದು ಕೋಪ ಅಥವಾ ಅಸಮಾಧಾನ, ಮನದೊಳ್—ಮನಸ್ಸಿನಲ್ಲಿ, ಉಳ್ಳೊಡಂ—ಇದ್ದರೂ, ಆ ನುಡಿಯಂ—ಆ ಮಾತನ್ನು, ಮಱೆಯಿಂ—ಮರೆತುಬಿಡಿರಿ, ಇಂ—ಇನ್ನು ಮುಂದೆ, ಎಲ್ಲಂ—ಎಲ್ಲವೂ, ನಿಶ್ಶಲ್ಯಂ—ಪಾಪಾನುಷ್ಠಾನರಹಿತವಾದದ್ದು.

ಗಾಹೆ ॥ ಪುಟ ೪೮ ನೋಡಿ.

೨೫. ಈತನಂ ಪಿಡಿದು—ಇವನನ್ನು ಅವಲಂಬಿಸಿ; ೧೬. ತಳಾಱಿಕೆಯಂ—ತಳಾರತನವನ್ನು; ೨೭. ಪಟ್ಟವರ್ಧನಮನೇಱಿ—ಪೂಜಾಗಜವನ್ನು ಹತ್ತಿ; ಪೆಂಡವಾಸದ—ಅಂತಃಪುರದ; ೨೮. ಸೂಳೆಯರಿರ್ಬರ್—ಇಬ್ಬರು ದಾಸಿಯರು, ಪೆಱಗೇಱಿ—ಹಿಂದುಗಡೆ ಹತ್ತಿ; ಇರ್ಕೆಲದೊಳಂ—ಎರಡು ಮಗ್ಗುಲುಗಳಲ್ಲಿ; ೨೯. ತಜಿನೆವಱಯಿಗೆ

ಗಳುಂ—ಒಂದು ತೆರನಾದ (?) ಬಾವುಟಗಳೂ ; ೨೨. ಬದ್ದವಣದ ಪಡಿಗಳುಂ—ವರ್ಧಮಾನ ಪಟಹಗಳು, ಎಂದರೆ ಮಂಗಳವಾದ್ಯಗಳೂ ; ೨೬. ಮುಟುಗಲೀಯದೆ—ಮುಳುಗುವುದಕ್ಕೆ ಅವಕಾಶಕೊಡದೆ; ಎತ್ತಿಂ—ಎತ್ತಿರಿ ; ೧೮. ಕಟಕ—ಬಳೆ, ಕಟಿಸೂತ್ರ—ಉಡಿದಾರ ; ಕಳೆದು—ತೆಗೆದುಹಾಕಿ ; ೨೯. ತೊಱೆದು—ಬಿಟ್ಟು ; ತಪಂ ಬಟ್ಟಂ—ತಪಸ್ಸನ್ನು ಸ್ವೀಕರಿಸಿದನು.

೧೩೪. ೨ : ಅತ್ತೆವಿರಪ್ಪ—ಅತ್ತೆಗಳಾದ ; ಕಂತಿಯರ್—ಜೈನ ಸಂನ್ಯಾಸಿನಿಯರು ; ૩. ಗಿಡಿಗಿಡಿ ಜಂತ್ರಂ ವಿಳಿ ವಿಳಿ ನೇತ್ರರಾಗಿ—ಸವೆದುಹೋಗಿ ಸಣಕಲಾದ ದೇಹವನ್ನೂ ಗುಳಿಬಿದ್ದ ಕಣ್ಣುಗಳನ್ನೂ ಉಳ್ಳವರಾಗಿ (ಎಂದು ತಾತ್ಪರ್ಯಾರ್ಥ), ಹೆಣ್ಣಾನೆಯನ್ನು ಬಯಸಿ ಪಡೆಯದ ಒಂದು ಗಂಡಾನೆ ವಿರಹದಿಂದ ಮೇವನ್ನು ಬಿಟ್ಟು ಕೃಶವಾಯಿತೆಂಬುದನ್ನು "ಕಾಡೊಳ್ ಮದನ ವ್ಯಾಸಂಗದಿಂದಿರ್ದುದು ಗಿಡಿ ಗಿಡಿ ಜಂತ್ರಂ ಬೊಲಂದೊಂದಿಭೇಂದ್ರ" ಎಂದು ನೇಮಿಚಂದ್ರನ ಪ್ರಯೋಗ (ಲೀಲಾ ೮-೫) ; ೪೪. ಸಮೆವನ್ನೆಗಂ — ಮುಗಿಯುವವರೆಗೂ ; ಬಾರಿಸಿದೊಡೆ — ಅಡ್ಡಿಪಡಿಸಿದರೆ ; ೪೫. ಏಗೆಯ್ದಪ್ಪೊಳ್ — ಏನುಮಾಡುತ್ತಾಳೆ ; ೪೮. ಪೊಱಸುಗಳನಿವಿರಿಯವು — ಪಾರಿವಾಳಗಳಷ್ಟು ದೊಡ್ಡವಾದ ; ದಂಸಮಸಕಂಗಳಂ—ಚಿಗಟ ಗುಂಗುರುಗಳನ್ನು ; ೨೯. ವಿಗುರ್ವಿಸೆ—ಮಾಯೆಯಿಂದ ನಿರ್ಮಿಸಲು ; ೨೦. ವೇದನೆ—ಯಾತನೆ ;

೧೩೫. ೨ : ಮನದೊಳ್ ಬಗೆದು—ಮನಸ್ಸಿನಲ್ಲಿ ಧ್ಯಾನಿಸಿ ; ೪. ಮೊದಲಾಗೊಡೆಯವಱಿಂದಪ್ಪ—ಮೊದಲಾಗುಳ್ಳವುಗಳಿಂದಾಗುವ ; ೫. ರತ್ನತ್ರಯಂಗಳಂ—ಮೂರು ರತ್ನಗಳನ್ನು ಎಂದರೆ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ಚಾರಿತ್ರಗಳನ್ನು ; ಅಪವರ್ಗ—ಮೋಕ್ಷ.

## ೧೦. ಗುರುದತ್ತ ಭಟಾರರ ಕಥೆ

೧೩೬. ೬ : ಸೂಡಿವೊತ್ತಿಸೆ ಪಟ್ಟನಂತೆ—ಸುತ್ತಿ ಉರಿಯಿಂದ ಹೊತ್ತಿಸಲ್ಪಟ್ಟವನಂತೆ ; ೭. ಪರ್ವತದ ಸಾರೆ—ಬೆಟ್ಟದ ಹತ್ತಿರ ; ೪೪. ಸಾವಸ್ತಿ—ಶ್ರಾವಸ್ತಿ ಎಂಬ ನಗರ ; ೧೯. ಅಂಕುರಿತ—ಮೊಳೆತ ; ಪಲ್ಲವಿತ—ಚಿಗುರಿದ ; ಕೋರಕಿತ—ಟಿಸಲೊಡೆದ ; ಕುಸುಮಿತ—ಹೂಬಿಟ್ಟ ; ೧೦. ಅಣುಗರ್ಕಳುಂ—ಮಕ್ಕಳೂ ; ೧೧. ಪಿರಿದುಂ ಬೇಗಂ—ಬಹುಕಾಲ ; ೧೩. ಮಣಿಕುಟ್ಟಿಮಮಪ್ಪ—ರತ್ನಖಚಿತವಾದ ನೆಲಗಟ್ಟುಳ್ಳ ; ಬೊಡ್ಡಣ ಬಾವಿಯೊಳ್—ದೊಡ್ಡ ಬಾವಿಯಲ್ಲಿ, ಕೊಳದಲ್ಲಿ (?), (ಸಂ) ವರ್ಧನವಾಪಿ (?), ಈ ಶಬ್ದವನ್ನು ಬಂಧುವರ್ಮ ಎರಡು ಸಲ ಬಳಸಿದ್ದಾನೆ, "ಆತನಂ ಬೊಡ್ಡಣದ ಬಾವಿಯೊಳಗೆ ಪುಗುವಂತೆ ಗೆಯ್ದು" (ಜೀವಸಂ ೨೧-೩೩), "ತುಂಬಿದ ಬೊಡ್ಡಣವಾವಿಯ ತೂಂಬಂ ತಡವರಿಸಿ ಕಂಡದಂ ಕಳೆದಲ್ಲಿಂ॥ ದಂ ಬೇಗಂ ಪೊಱಮಡೆ, ಕಂಡೇಂ ಬಲ್ಲಿತ್ತೊ ಪುಣ್ಯಮೆಂದು ವನದೇವತೆಗಳ್" (ಅದೇ ೧-೩೪), ಇಂಥ ಬಾವಿಗೆ ನೀರನ್ನು ತುಂಬಬಹುದು, ಕೆಳಗಿರುವ ತೂಬಿನಿಂದ ನೀರನ್ನು ಹೊರಕ್ಕೆ ಬಿಡ

ಬಹುದು, ಇವನ್ನು ಜಲಕ್ರೀಡೆಗೂ ಮೀಯುವುದಕ್ಕೂ ಉಪಯೋಗಿಸುತ್ತಿದ್ದರು (ಸುಕುಮಾರಸ್ವಾಮಿಯ ಕಥೆ ಪು. ೪೪.-೩೮ ನೋಡಿ); ೩೩. ಬೆರಸೆಪಟ್ಟುದಱೊಳ್—ಬೆರಸಲ್ಪಟ್ಟದ್ದರಲ್ಲಿ; ೨೪. ಕುವಳಯಂ—ಕನ್ನೈದಿಲೆ; ೨೫. ಸಂಛನ್ನಮಪ್ಪುದಱೊಳ್—ಮುಚ್ಚಲ್ಪಟ್ಟಿರುವುದರಲ್ಲಿ;

೧೩೭. ೧: ಬಳಾಕ—ಒಂದು ನೀರ ಹಕ್ಕಿ; ಮಂಡೂಕ—ಕಪ್ಪೆ; ಜೀವಂಜೀವಕ—ಒಂದು ಬಗೆಯ ಪಕ್ಷಿ; ಜಲಚರವಿಹಂಗ—ನೀರ ಪಕ್ಷಿಗಳು; ೮. ಒಡೆಯುದಱೊಳ್ — ಉಳ್ಳುದರಲ್ಲಿ; ೩. ಜೀರ್ಕೊಳವಿಗಳಿಂದಂ — ಪಿಚಕಾರಿಗಳಿಂದ; ತಳಿಯುತ್ತುಂ—ಚುಮುಕಿಸುತ್ತ; ೯. ಭೌಮವಿಹಾರಕ್ಕೆಂದು—ಭೂಮಿಯ ವಿಹಾರಕ್ಕಾಗಿ; ೯೯. ಎಳವೆಂಡಿರಿಂದಂ—ಕೋಮಲರಾದ ಸ್ತ್ರೀಯರಿಂದ; ೯೫. ತೂರ್ಯಧ್ವನಿಗಳ್—ವಾದ್ಯಧ್ವನಿಗಳು; ೧೭. ನಿಱಿಸಿ—ನಿಲ್ಲಿಸಿ; ೯೮. ನಾಮಾಕಾಶದೊಳ್ ಕಾಗೆಗಳಂತಿರೆ ಪಾಱುವನಿತಲ್ಲದೆ—ನಾವು ಆಕಾಶದಲ್ಲಿ ಕಾಗೆಗಳ ಹಾಗೆ ಹಾರುವಷ್ಟಲ್ಲದೆ, ಈ ಮಾತುಗಳನ್ನು “ಅಂಗಾರಕವಾರದ ಪೆಸರ್ ಮಂಗಳವಾರಮೆಂಬಂತೆ ಬಱಿದೆ ಕಾಗೆಗಳಂತಂತರಿಕ್ಷದೊಳ್ ಪಾಱುವ ನಮಗೆ ವಿಧ್ಯಾಧರರೆಂಬೊಣಪೆಸರಲ್ಲದೆ” ಎಂಬಲ್ಲಿ ನಯಸೇನ ಅನುಕರಿಸಿದ್ದಾನೆ (ಧರ್ಮಾ. ೯೪-೨೧), ನಯಸೇನನ ಮಾತುಗಳನ್ನು “ಅಂಗಾರವಾರದ ಪೆಸರನು ಮತ್ತೊಮ್ಮೆ ಮಂಗಳವಾರಮೆಂಬಂತೆ, ಪಿಂಗದೆ ಹಿರಿಯಾಗಸದೊಳು ಕಾಗೆಗಳಂದದಿ ಪಾರುವ ತೀರು ನಮಗೆ” ಎಂಬುದಾಗಿ ದೇವರಸನು ತನ್ನ ‘ಗುರುದತ್ತ ಚರಿತೆ’ಯಲ್ಲಿ (೯-೨೦೦) ಅನುವದಿಸಿದ್ದಾನೆ.

೨೧. ಬರ್ದ—ಬದುಕಿದ, < ಬೞ್ದು < ಬಾೞ್; ಪುರುಡಿಸಿ—ಮತ್ಸರಿಸಿ; ೧೫. ವಿಗುರ್ವಿಸಿ—ಮಾಯೆಯಿಂದ ಸೃಷ್ಟಿಸಿ; ೧೭. ನಿಶ್ಛಿದ್ರಮಾಗಿ—ರಂಧ್ರವಿಲ್ಲದಂತೆ;

೧೩೮. ೧: ಮೋಹಿಸದ ಬುದ್ಧಿಯನೊಡೆಯರ್—ಆಸೆಪಡದ ಬುದ್ಧಿಯನ್ನುಳ್ಳವರು; ೯. ಪೆರ್ಮಾವಾಗಿ—ಹೆಬ್ಬಾವು ಆಗಿ; ೫. ಋಷಿನಿವೇದಕಂ—ಋಷಿಯ ಆಗಮನವನ್ನು ತಿಳಿಸುವವನು; ೮. ಗುರುಪರಿವಿಡಿಯಿಂದಂ—ಗುರು ಪರಂಪರೆಗೆ ಅನುಸಾರವಾಗಿ; ೧೦. ಆಕಸ್ಮಿಕಂ—ಅಪಘಾತ; ಒರ್ಮೊದಲ್—ಏಕಕಾಲದಲ್ಲಿ; ಅನಿಬರ್ಗಂ—ಅಷ್ಟು ಮಂದಿಗೂ; ೧೩. ಆಡುತ್ತಿರ್ಪನ್ನೆಗಂ—ಆಡುತ್ತಿರಲು; ೧೫. ವಿಭವಮಂ—ವೈಭವವನ್ನು;

೧೩೯. ೬: ನಿಮ್ಮುಮಂ—ನಿಮ್ಮನ್ನೂ; ೮. ಪ್ರತಿಬೋಧಿಸಲ್ಕೆ—ಎಚ್ಚರ ಹೇಳುವುದಕ್ಕೆ; ೧೧. ಮಹಾಕಾಯಂ—ದೊಡ್ಡ ದೇಹವುಳ್ಳ; ೧೬. ಬಾೞ್ಕೆಯೊಳಂ—ಬಾಳುವಿಕೆಯಲ್ಲೂ; ಅೞ್ತಿಯೆ—ಆದರವೆ?;

ಶ್ಲೋಕ || ಕರ್ಮವಶಾನುಗಾಃ—ಕರ್ಮಕ್ಕೆ ವಶರಾಗಿ ನಡೆಯುವ, ಜೀವಾಃ—ಜೀವಗಳು, ಯತ್ರಯತ್ರ — ಎಲ್ಲಿಯೆಲ್ಲಿ, ಉಪಪದ್ಯಂತೇ — ಹುಟ್ಟುವರೋ, ತತ್ರ ತತ್ರ—ಅಲ್ಲಲ್ಲೇ, ಸ್ವೇನ ಸ್ವೇನೈವ ಕರ್ಮಣಾ—ತಂತಮ್ಮ ಕರ್ಮಗಳಿಂದ, ರತಿಂ ಯಾಂತಿ—ಆಸಕ್ತರಾಗುತ್ತಾರೆ. ೧೩. ಸೂಳೆಯರ್ಕಳಿಂದಂ—ದಾಸಿಯರಿಂದ; ಇರ್ಪಾ

ತನಯ್—ಇರುವವನಾಗಿದ್ದೀಯೆ;

೧೪೦. ೧ : ಪೆರ್ಮಾವುಗಳೊಡನೆ—ಹೆಬ್ಬಾವುಗಳ ಸಂಗಡ; ನೆರೆದ—ಕೂಡಿದ; ಇರವೂಯ್ತು—ಇರವು ಎಂದರೆ ಇರುವಿಕೆಯು ಆಯಿತು; ೧. ಪೆಟ್ಟಿಗಳುಂ—ಹೆಂಟಿಗಳೂ; ಕಿಱುಗಲ್ಗಳುಂ—ಸಣ್ಣ ಕಲ್ಲುಗಳೂ; ೪. ಎಸಡುಗಳುಂ—ಏಡಿಗಳೂ, ನಳ್ಳಿಗಳೂ; ಒಂತಿಗಳುಂ—ಓತಿಕೇತಗಳೂ; ೫. ಇನ್ನವಂ—ಇಂಥವುಗಳನ್ನು; ೬. ಜಾತಿಸ್ಮರನಾಗಿ—ಹಿಂದಿನ ಜನ್ಮದ ನೆನಪುಂಟಾದವನಾಗಿ;

ವೃ ॥ ಏತತ್ ಕ್ಷೇತ್ರಂ ಮದೀಯಂ—ಈ ನೆಲ ನನ್ನದು; ಇದಂ ಗೃಹಂ ಅಪರಂ—ಈ ಮನೆ ಬೇರೆಯವರದಲ್ಲ, ಎಂದರೆ ನನ್ನದೇ; ಏತಾಃ—ಈ, ಮಾತೃಭಾರ್ಯಾ—ತಾಯಿಯೂ ಹೆಂಡತಿಯೂ, ಮಮ—ನನ್ನದು, ಅಯಂ ಪುತ್ರಃ—ಈ ಮಗನು, ಮೇ—ನನ್ನವನು, ಸುಕಾಂತ—ಸುಂದರಿಯರಾದ, ಸ್ವಸೃ ದುಹಿತೃಜನೋ—ಸೊಸೆಯರೂ ಹೆಣ್ಣುಮಕ್ಕಳೂ, ಮಾನುಷಃ—ಮನುಷ್ಯರೂ, ಬಂಧುವರ್ಗಃ—ನಂಟರ ಗುಂಪೂ, ಮೇ—ನನಗೆ, ಅಶ್ವಾಃ—ಕುದುರೆಗಳು; ದಾಸಾಃ—ಸೇವಕರು, ಮಮ—ನನ್ನ, ಪರಮ ಹಿತಾಃ—ಅತ್ಯಂತ ಹಿತವರಾದವರು; ದ್ರವ್ಯ ಗಾವೋ ಮಹಿಷ್ಯಃ—ಹಣವೂ ಹಸುವೂ ಎಮ್ಮೆಗಳೂ, ಮೇ—ನನಗೆ, ಇತ್ಯೇವಂ—ಎಂದು ಹೀಗೆ, ಬ್ರುವಾಣಃ—ಹೇಳಿಕೊಳ್ಳುವ, ನರಪಶುಃ—ಮನುಷ್ಯ ಪ್ರಾಣಿಯು, ಆತ್ಮಕಾರ್ಯಂ—ಆತ್ಮನಿಗೆ ಸೇರಿದ ಕಾರ್ಯವನ್ನು, ಅನಿಶಂ—ಯಾವಾಗಲೂ, ನಾಶಯತಿ—ನಾಶಮಾಡಿಕೊಳ್ಳುತ್ತಾನೆ.

ಆರ್ಯೆ ॥ ಅರ್ಥೋ—ಐಶ್ವರ್ಯವು, ಮೇ—ನನಗೆ, ಭಾರ್ಯಾ—ಹೆಂಡತಿಯು, ಮೇ—ನನಗೆ, ಪುತ್ರಃ—ಮಗನು, ಮೇ—ನನಗೆ, ಸ್ವಜನ ಬಂಧುವರ್ಗಃ—ಸ್ವಜನರಾದ ನಂಟರ ಸಮುದಾಯ, ಮೇ—ನನಗೆ, ಇತಿ—ಹೀಗೆ, ಮೇಮೇ ಕುರ್ವಾಣಂ—ನನಗೆ ನನಗೆ ಎಂದು ಮಾಡಿಕೊಳ್ಳುವವನಾದ, ಪುರುಷ ಪಶುಂ—ನರಜಂತುವನ್ನು, ಕಾಲವೃಕಃ—ಯಮನೆಂಬ ತೋಳನು, ಹಂತಿ—ಕೊಲ್ಲುತ್ತದೆ.

೨೧. ತೊಟ್ಟಿರ್—ಸೇವಕರು; ೨೨. ಪಟ್ಟಸ ಭಂಡಾರಂ—ರೇಷ್ಮೆಯ ವಸ್ತ್ರಗಳ ಭಂಡಾರ, ಪಟ್ಟಸ < ಪಟ್ಟವಾಸ (ಸಂ); ೨೩. ಇವಱೊಳ್—ಇವುಗಳಲ್ಲಿ; ೨೪. ಇನಿವಿರಿದು—ಇಷ್ಟು ಹಿರಿದಾದ; ೨೫. ಎಯ್ದಿದೆಂ—ಸೇರಿದೆವು, ಪಡೆದೆವು; ತೋಱಲ್ವೇಡಿ—ತೋರಿಸಲು ಬಯಸಿ;

೧೪೧. ೧ : ಸಂಛನ್ನಮಾಗಿ—ಮುಚ್ಚಿ, ವ್ಯಾಪಿಸೆ—ಆವರಿಸಲು; ೬. ಪರಮಸತ್ವದ—ಪರಮ ಶಕ್ತಿಯ; ೯. ಪ್ರತಿಬೋಧಿಸಿ—ಎಚ್ಚರಿಸಿ, ತಿಳಿಸಿ; ೧೧. ಆದಮಾನುಂ—ವಿಶೇಷವಾಗಿ;

ಗಾಹೆ ॥ ಪುಟ ೧೧. ನೋಡಿ.

ವೃ ॥ ಪಾಪಾನಿ—ಪಾಪಗಳನ್ನು, ಯತ್ನೇನ—ಪ್ರಯತ್ನದಿಂದ, ಸಮಾಚರಂತಿ—ಮಾಡುತ್ತಾರೆ, ಪ್ರಸಂಗಾದಪಿ—ಸಂದರ್ಭವಶದಿಂದಾದರೂ, ಧರ್ಮಂ—ಧರ್ಮವನ್ನು, ನಾಚರಂತಿ — ಮಾಡುವುದಿಲ್ಲ; ಏತತ್ — ಇದು, ಮನುಷ್ಯಲೋಕೇ — ಮಾನವ

ಪ್ರಪಂಚ ,, ಆಶ್ಚರ್ಯಂ—ಆಶ್ಚರ್ಯವು, ಹಿ—ಅಲ್ಲವೆ? ಕ್ಷೀರಂ—ಹಾಲನ್ನು, ಪರಿತ್ಯಜ್ಯ— , ವಿಷಂ—ವಿಷವನ್ನು, ಪಿಬಂತಿ—ಕುಡಿಯುತ್ತಾರೆ;

ವೃ॥ ೀ-ಎಲ್ಲ, ಸಮಾಗಮಾಃ-ಸೇರುವಿಕೆ, ಸ್ವಾವಮಾಹಿ—; ತನ್ನ ವಶದಲ್ಲಿ ಇಲ್ಲವಷ್ಟೆ. ವಿಭೂತಯೋಽಪಿ—ಐಶ್ವರ್ಯಗಳು ಕೂಡ, ಕ್ಷಣಭಂಗುರಾಃ ಸ್ಯುಃ—ಅಲ್ಪಕಾಲದಲ್ಲಿ ನಾಶವಾಗುವುವಲ್ಲವೆ; ಅರ್ಹತಾಂ—ಅರ್ಹಂತರ, ಅಯಂ ಧರ್ಮಮೇವ—ಈ ಧರ್ಮವೇ, ಸುಶಾಶ್ವತಃ—ಅತ್ಯಂತ ಶಾಶ್ವತವಾದುದು, ಇತಿ—ಹೀಗೆಂದು, ಪ್ರಚಿಂತ್ಯ—ವಿಶೇಷವಾಗಿ ಚಿಂತನೆ ಮಾಡಿ, ಆತ್ಮರತಿಃ—ಆತ್ಮನಲ್ಲಿ ಆಸಕ್ತಿಯು, ಬಭೂವ—ಹುಟ್ಟಿತು.

ವೃ॥ ಉದಿತಸ್ಯ—ಹುಟ್ಟಿದ, ರವೇಃ—ಸೂರ್ಯನ, ಪತನಂ—ಬೀಳುವುದು ಎಂದರೆ ಮುಳುಗುವುದು, ನಿಶ್ಚಯಂ—ದಿಟ, ಜಾತಸ್ಯ—ಜನ್ಮತಾಳಿದ, ಸರ್ವಸ್ಯ—ಎಲ್ಲಕ್ಕೂ, ಮರಣಂ—ಸಾವು, ಅಪಿ—ಕೂಡ, ನಿಶ್ಚಯಂ; ತಸ್ಮಾತ್—ಆದ್ದರಿಂದ, ಜಾತೇನ—ಹುಟ್ಟಿದ, ಧರ್ಮಕರ್ಮ ರತೇನ—ಧರ್ಮಕರ್ಮದಲ್ಲಿ ಆಸಕ್ತಿಯುಳ್ಳ, ವಿದುಷಾ—ವಿದ್ವಾಂಸನಿಂದ, ಸದಾ—ಯಾವಾಗಲೂ, ಭಾವ್ಯಂ ಏವ—ಭಾವಿಸಲ್ಪಡಬೇಕಾದದ್ದೇ.

ವೃ॥ ಯೌವನ ಬಲ ವಿಭವರೂಪ ಸೌಭಾಗ್ಯಾನಿ—ಪ್ರಾಯ ಶಕ್ತಿವೈಭವ ರೂಪ ಸೌಭಾಗ್ಯಗಳು, ಪುಷ್ಪಫಲ ಭಾರತರುವತ್—ಹೂವು ಹಣ್ಣುಗಳ ಭಾರವನ್ನುಳ್ಳ ಮರದಂತೆ; ಸರ್ವೇಷಾಂ—ಎಲ್ಲರ, ಜೀವಿತಂ ಚ—ಬದುಕು ಕೂಡ, ಗಿರಿಸರಿದಂಭಃ ಪ್ರತಿಮಂ—ಬೆಟ್ಟದ ಝುರಿಯ ನೀರಿಗೆ ಸಮಾನ, ಶೀಘ್ರಂ—ತ್ವರಿತವಾಗಿ, ಧಾವತಿ—ಓಡುತ್ತದೆ.

ಗಾಹೆ॥ ಏಗೋಯ—ಒಬ್ಬನೇ ಎಂದರೆ ಅಸಹಾಯನಾಗಿ, ಜೀವಃ—ಜೀವನು, ಮರದಿ—ಶರೀರತ್ಯಾಗವನ್ನು ಮಾಡುತ್ತಾನೆ; ಏಗೋಯ—ಒಬ್ಬನೇ, ಉವವಜ್ಜ ಇ—ಹುಟ್ಟುತ್ತಾನೆ; ಏಗೋ ಸಜಾಇ ಮರಣಂ—ಒಬ್ಬನ ಮರಣವು ಹತ್ತಿರ ಬರುತ್ತದೆ, ಏಗೋ ಸಜಾಇ ಣಿರಯಂ ವಾ—ಒಬ್ಬನೇ ನರಕಕ್ಕೆ ಹೋಗುತ್ತಾನೆ; ಇದಕ್ಕೆ ಏಓ ಸಿಜ್ಜ ಇ ಣೀರಓ—ಏಕಃ ಸಿದ್ಧ್ಯತಿ ಣೀರಓ ಎಂಬ ಪಾಠಾಂತರವಿದೆ—ಒಬ್ಬನು ನೀರಜನಾಗಿ ಎಂದರೆ ಕರ್ಮರಹಿತನಾಗಿ ಮುಕ್ತನಾಗುತ್ತಾನೆ ಎಂದರ್ಥ.

೧೪೨. ಶ್ಲೋಕ॥ ಕಸ್ಯಮಾತಾ—ಯಾರ ತಾಯಿ, ಕಸ್ಯಪಿತಾ—ಯಾರ ತಂದೆ, ಕಸ್ಯಭಾರ್ಯಾ—ಯಾರ ಹೆಂಡತಿ, ಅಪಿವಾ—ಮತ್ತೆ, ಕಸ್ಯ—ಯಾರ, ಸುತಃ—ಮಗನು; ಜೀವಾನಾಂ—ಜೀವಿಗಳ, ಜಾತೌ ಜಾತೌ—ಜನ್ಮಜನ್ಮದಲ್ಲಿ, ಪರೇ ಪರೇ—ಬೇರೆ ಬೇರೆಯಾದವರು, ಭವಿಷ್ಯಂತಿ ಹಿ—ಆಗುವರಲ್ಲವೆ?

ಶ್ಲೋಕ॥ ಅರ್ಥಾಃ—ದ್ರವ್ಯಗಳು, ಗೃಹೇಷು—ಮನೆಗಳಲ್ಲಿ, ತಿಷ್ಠನ್ತಿ—ನಿಲ್ಲುತ್ತವೆ; ಬಾಂಧವಾಃ—ಬಂಧುಗಳು, ಶ್ಮಶಾನೇಷು ಚ—ಶ್ಮಶಾನದಲ್ಲಿ ನಿಲ್ಲುತ್ತಾರೆ; ಶರೀರಃ—ದೇಹವು, ಜ್ವಾಲಮಾಲಾಯಾಂ—ಉರಿಯ ಮಾಲೆಯಲ್ಲಿ ನಿಲ್ಲುತ್ತದೆ, ಸುಕೃತಂ—ಪುಣ್ಯವೂ, ದುಷ್ಕೃತಂ—ಪಾಪವೂ, ವ್ರಜೇತ್—ಬರುತ್ತವೆ ಜೊತೆಯಲ್ಲಿ.

೯. ಪಂದರಂ—ಚಪ್ಪರವನ್ನು; ೧೦. ನೇತ್ರಪಟಿಯು—ನೇತ್ರವೆಂಬ ಬಟ್ಟೆಯು, ಉಲ್ಲವಂಗಳುಮಂ—ವಿತಾನಗಳನ್ನು, ಮೇಲ್ಕಟ್ಟುಗಳನ್ನೂ; ೧೧. ಮೂಜು

ಪೊಟ್ಟಿಂ—ಮೂರುಹೊತ್ತೂ; ೧೨. ಪೊಡೆವಡಿಸುತ್ತಿರೆ—ನಮಸ್ಕಾರ ಮಾಡಿಸು ತ್ತಿರಲು; ಆರಾಧನೆಯನರ್ಚಿಸಿ—ಆರಾಧನಾ ಎಂಬ ಗ್ರಂಥವನ್ನು ಪೂಜೆಮಾಡಿ, ವಕ್ಕಾಣಿಸಲ್—ವಿಸ್ತಾರವಾಗಿ ಹೇಳಲು, ವ್ಯಾಖ್ಯಾನಿಸಲು, ತಗುಳ್ದರ್—ತೊಡಗಿದರು.

ಶ್ಲೋಕ॥ ಕಂಠಗತೈಃ—ಗಂಟಲಿಗೆ ಬಂದ, ಪ್ರಾಣೈರಪಿ—ಪ್ರಾಣಗಳಿಂದಲೂ ಯಃ—ಯಾವನು, ಸಂನ್ಯಸನೇ—ಸಂನ್ಯಾಸದಲ್ಲಿ, ಅಸ್ತಿಮತಿಃ—ಮನಸ್ಸುಳ್ಳವನಾಗಿರು ವನೋ, ಸಃ—ಅವನು, ಪುನರಾಗಮ ವರ್ಜಿತಂ—ಹಿಂದಿರುಗಿ ಬರುವುದೆಂಬುದಿಲ್ಲದ, ಮೋಕ್ಷಸದನಂ—ಮೋಕ್ಷವೆಂಬ ಮನೆಗೆ, ಗಚ್ಛೇತ್—ಹೋಗುತ್ತಾನೆ.

ಇಹಜನ್ಮಕೃತಂ ಪಾಪಂ—ಈ ಜನ್ಮದಲ್ಲಿ ಮಾಡಿದ ಪಾಪ, ಪುರಾಕೃತಂ—ಹಿಂದೆ ಮಾಡಿದ, ಪಾಪಂ—ಪಾಪವು, ಯಚ್ಚ—ಯಾವುದೋ, ತತ್ಸರ್ವಂ—ಆ ಸಕಲ ಪಾಪ ಗಳೂ, ಅಗ್ನಿಃ—ಉರಿಯು, ಇಂಧನಮಿವ—ಸೌದೆಯನ್ನು ಹೇಗೋ ಹಾಗೆ, ಸಂನ್ಯಸ ನೇನ—ಸಂನ್ಯಾಸದಿಂದ, ದಹತಿ—ಸುಡುತ್ತದೆ.

ಹೃದಯೇ—ಹೃದಯದಲ್ಲೂ, ಲಲಾಟೇ—ಹಣೆಯಲ್ಲೂಎಂದರೆ ಹುಬ್ಬಿನ ನಡುವೆಯೂ, ಜೀವಂ—ಆತ್ಮವನ್ನೂ, ಕರಂ—ಕೈಯನ್ನೂ, ಮುಹೂರ್ತಕಾಲೇ—ಒಂದು ಮುಹೂರ್ತ ಕಾಲವಾದರೂ ನ್ಯಸ್ಯ—ಇಟ್ಟುಕೊಂಡು, ಸಮುಸ್ಥಿತಸ್ಯ—ಸಮತೆಯಿಂದ ನಿಂತಿರುವವನ, ಅಜ್ಞಾನ ಭಾವಾತ್—ಅಜ್ಞಾನತೆಯ ದೆಸೆಯಿಂದ,ಕೃತ—ಮಾಡಲ್ಪಟ್ಟ,ಕರ್ಮಭಾರಃ—ಪುಣ್ಯ ಪಾಪರೂಪವಾದ ಕರ್ಮಗಳ ಭಾರವು, ಸಂನ್ಯಾಸನಾತ್—ಸಂನ್ಯಾಸನದಿಂದ, ಸತ್ಪ್ರಲಯಂ—ಒಳ್ಳೆಯ ವಿನಾಶವನ್ನು, ಪ್ರಯಾತಿ—ಪಡೆಯುತ್ತದೆ;

ಗಾಹೆ॥ ಉಡ್ಡಂ—ಊರ್ಧ್ವಲೋಕದಲ್ಲಿ,ಅಧೋ—ನರಕಭವನ ವ್ಯಂತರ ಜ್ಯೋತಿಷ್ಕ ಲೋಕಗಳಲ್ಲಿ, ತಿರಿಯಮ್ಮಿ ಯ—ಏಕೇಂದ್ರಿಯಾದಿಜೀವಜಾತಿಗಳಲ್ಲಿ, ಕದಾಣಿ—ಮಾಡಲ್ಪಟ್ಟ, ಪ್ರಾಪ್ತವಾದ, ಬಾಲಮರಣಾನಿ—ಬಾಲಮರಣಗಳು, ಬಹುಗಾಣಿ—ಬಹುವಾಗಿವೆ; ದಂಸಣಣಾಣ ಸಮಗದೋ—ದರ್ಶನಜ್ಞಾನಗಳು ಸಮವಾಗಿ ಪ್ರಾಪ್ತ ವಾಗಿರುವ, ಪಂಡಿಯ ಮರಣಂ—ಪಂಡಿತ ಮರಣವನ್ನು, ಎಂದರೆ ಶುದ್ಧ ಪರಿಣಾಮ ಚಾರಿತ್ರಪೂರ್ವಕವಾದ ಪ್ರಾಣತ್ಯಾಗವನ್ನು,ಅಣುಮಲಿಸ್ಸೇ—ಸ್ವೀಕರಿಸುತ್ತೇನೆ,ಮಾಡು ತ್ತೇನೆ; ಸ್ವರ್ಗ ನರಕ ಪ್ರಾಣಿಲೋಕಗಳಲ್ಲಿ ಅನೇಕವಾಗಿ ಬಾಲ ಮರಣಗಳನ್ನು ಪಡೆದಿ ದ್ದೇನೆ, ಇನ್ನುಮೇಲೆ ಸಮ್ಯಗ್ದರ್ಶನ ಜ್ಞಾನಗಳಿಂದ ಕೂಡಿದ ಪಂಡಿತ ಮರಣವನ್ನು ಪಡೆಯುತ್ತೇನೆ ಎಂದು ತಾತ್ಪರ್ಯ.

ಉವ್ವೇಯ ಮರಣಂ—ಉದ್ವೇಗಯುಕ್ತವಾದ ಮರಣವು ಎಂದರೆ ಇಷ್ಟವಿಯೋಗ ಅನಿಷ್ಟ ಸಂಯೋಗಗಳಿಂದ ಆಗುವ ತ್ರಾಸದಿಂದ ಕೂಡಿದ ಮರಣವು; ಜಾಈ ಮರಣಂ—ಜಾತಿಮರಣವು ಎಂದರೆ ಹುಟ್ಟುವಾಗಲೇ ಗರ್ಭದಲ್ಲಿ ಸಾಯುವುದು; ಣಿರ ಯೇಸು—ನರಕಗಳಲ್ಲಿ; ವೇದಣಾ ಓಯ—ನೋವೂ ಹಿಂಸೆಯೂ; ಏದಾಣಿ—ಇವು ಗಳನ್ನು, ಸಂಭರಂತೋ—ಚೆನ್ನಾಗಿ ಸ್ಮರಿಸಿಕೊಳ್ಳುತ್ತ, ಪಂಡಿಯ ಮರಣಂ—ಪಂಡಿತ ಮರಣವನ್ನು, ಅಣುಮಲಿಸ್ಸೇ—ಸಾಯುತ್ತೇನೆ, ಪ್ರಾಣತ್ಯಾಗ ಮಾಡುವೆನು.

ಏಕ್ಕಂ—ಒಂದು, ಪಂಡಿಯ ಮರಣಂ—ಪಂಡಿತ ಮರಣವು, ಜಾಈಸದಾಣಿ—ನೂರು ಜನ್ಮಗಳನ್ನು, ಬಹೂಣಿ—ಅನೇಕವಾದವುಗಳನ್ನು, ಛಿಂದಇ—ಕತ್ತರಿಸುತ್ತದೆ, ನಾಶ ಗೊಳಿಸುತ್ತದೆ. ಜೇಣ—ಯಾವುದರಿಂದ, ಮದಂ—ಸಾವು, ಸಮ್ಮದಂ—ಒಳ್ಳೆಯ ಮರಣವು, ಹೋಇ—ಆಗುತ್ತದೆ; ತಂ ಮರಣಂ—ಆ ಮರಣವು, ಮರಿದವ್ವಂ—ಪ್ರಾಪ್ತವ್ಯವಾದ ಎಂದರೆ ಪಡೆಯಬೇಕಾದ ಮರಣವು.

ದುಃಖಂ—ದುಃಖವು, ಯದಿ—ಯಾವಾಗ, ಉಪ್ಪಜ್ಜಇ—ಹುಟ್ಟುತ್ತದೋ, ತೋ = ತತಃ—ಆಮೇಲೆ, ಣಿರಯೇ—ನರಕದಲ್ಲಿ, ಸಭಾವದೋ—ಸ್ವಾಭಾವಿಕತೆ ಯನ್ನು, ಸ್ವರೂಪವನ್ನು, ದಟ್ಠವ್ವೋ—ನೋಡುವುದಾಗುತ್ತದೆ, ಸಂಸಾರೇ—ಸಂಸಾರ ದಲ್ಲಿ ಎಂದರೆ ಜಾತಿ ಜರಾಮರಣವುಳ್ಳುದರಲ್ಲಿ, ಸಂಸರಂತೇಣ—ತಿರುಗುತ್ತಿರುವ, ಸುತ್ತು ತ್ತಿರುವ; ಮಏ—ನನ್ನಿಂದ, ಕದಮಂ ಣ ಪತ್ತಂ—ಏಕೆ ಪ್ರಾಪ್ತವಾಗುವುದಿಲ್ಲ ಎಂದರೆ ಪ್ರಾಪ್ತವಾಗಿಯೇ ಆಗುತ್ತದೆ; ಸಂನ್ಯಾಸಕಾಲದಲ್ಲಿ ಉತ್ಪನ್ನವಾಗುವ ಹಸಿವು ಮೊದ ಲಾದ ಹಿಂಸೆಗಳು ನರಕ ದುಃಖದ ಸ್ವಭಾವವನ್ನು ತೋರಿಸುತ್ತವೆ. ಹೀಗಿರುವಾಗ ಸಂಸಾರದಲ್ಲಿ ತೊಳಲುತ್ತಿರುವ ನನಗೆ ದುಃಖವು ಬಾರದಿರುವುದೆ? ಬಂದೇ ಬರುತ್ತದೆ ಎಂದು ಚಿಂತಿಸಬೇಕು—ಎಂದು ತಾತ್ಪರ್ಯ.

೧೪೩. ಸಂಸಾರ ಚಕ್ಕವಾಳಮ್ಮಿ—ಚತುರ್ಗತಿಗಳ ಜನ್ಮಜರಾಮರಣಗಳೆಂಬ ಸುಳಿ ಯಲ್ಲಿ, ಮಏ—ನನ್ನಿಂದ, ಸವ್ವೇಪಿ—ಸಕಲ, ಪುಗ್ಗಲಾ—ಪುದ್ಗಲಗಳು ಎಂದರೆ ಮೊಸರು ಸಕ್ಕರೆ ಬೆಲ್ಲ ಅನ್ನ ನೀರು ಮುಂತಾದ ದ್ರವ್ಯಗಳು, ಬಹುಸೊ—ಅನೇಕ ಬಾರಿ, ಆಹಾರಿದಾಯ—ಗೃಹೀತವಾಗಿವೆ, ಎಂದರೆ ತಿನ್ನಲ್ಪಟ್ಟಿವೆ; ಪರಿಣಾಮಿದಾಯ—ಜೀರ್ಣಿಸಲ್ಪಟ್ಟಿವೆ ಎಂದರೆ ಮಲಮೂತ್ರಾದಿ ದುಷ್ಟವಸ್ತುಗಳಾಗಿ ಪರಿಣಮಿಸಿ ಹೊರಕ್ಕೆ ಹೋಗಿವೆ; ಣಯಮೇ ಗದಾ ತಿತ್ತೀ-ನನಗಾದರೋ ತೃಪ್ತಿ ಆಗಲಿಲ್ಲ, ಎಂದರೆ ಸಂತೋಷ ವಾಗಲಿಲ್ಲ, ಆಸೆ ಹೆಚ್ಚಾಯಿತು; ಸಂಸಾರ ಚಕ್ರದಲ್ಲಿ ಸುತ್ತುತ್ತಿರುವ ನಾನು ಎಷ್ಟೋ ಸಲ ಅನೇಕ ಭೋಗ್ಯವಸ್ತುಗಳನ್ನು ತಿಂದಿದ್ದೇನೆ, ಜೀರ್ಣಿಸಿಕೊಂಡಿದ್ದೇನೆ, ಆಸೆ ಹೋಗ ಲಿಲ್ಲ, ತೃಪ್ತಿ ಆಗಲಿಲ್ಲ ಎಂದು ಚಿಂತಿಸತಕ್ಕದ್ದು—ಇದು ತಾತ್ಪರ್ಯ.

ಆಹಾರಣಿಮಿತ್ತಂ—ಆಹಾರವು ಕಾರಣವಾಗಿ, ಮಚ್ಛಾ—ಮೀನುಗಳು, ಸತ್ತ ಮಂ—ಏಳನೆಯ, ಪುಢವಿಂ—ಪೃಥ್ವಿಯನ್ನು ಎಂದರೆ ಅವಧಿಸ್ಥಾನವನ್ನು, ಗಚ್ಛಂತಿ ಕಿರ—ಹೋಗುತ್ತವೆ. ಪ್ರವೇಶಿಸುತ್ತವೆ, ಅಲ್ಲವೆ; ಸಚ್ಚಿತ್ತೋ—ಚೇತನದಿಂದ ಕೂಡಿದ, ಆಹಾರೋ—ಭೋಜನವು ಎಂದರೆ ಪ್ರಾಣಿ ಹಿಂಸೆಯಿಂದ ಬಂದ ಅಯೋಗ್ಯಾಹಾರವು, ಮಣಸಾವಿ — ಮನಸ್ಸಿನಲ್ಲಿಯಾದರೂ, ಪತ್ಥೇದುಂ — ಬೇಡಲು, ಣಕಲ್ಪದಿ—ಯೋಗ್ಯವಾಗುವುದಿಲ್ಲ.

ತಣಕಟ್ಠೇಣ ವ—ತೃಣಕಾಷ್ಠಗಳಿಂದ ಹೇಗೆ, ಅಗ್ಗಿಃ—ಉರಿಯು ತೃಪ್ತವಾಗುವು ದಿಲ್ಲವೋ, ಲವಣಸಮುದ್ದೋ—ಉಪ್ಪುಗಡಲು, ಣದೀಸಹಸ್ಸೇಹಿಂ—ಹೇಗೆ ಸಾವಿರಾರು ನದಿಗಳಿಂದ ತುಂಬುವುದಿಲ್ಲವೋ, ಹಾಗೆ, ಇಮೋ ಜೀವೋ—ಈ ಜೀವನು, ಕಾಮ

ಭೋಗೇಹಿಂ—ಬಯಸಲ್ಪಟ್ಟ ಸ್ತ್ರೀವಸ್ತ್ರಾದಿ ಭೋಗವಸ್ತುಗಳಿಂದ, ತಪ್ಪೇದುಂ—ತೃಪ್ತಿ ಪಡಿಸಲು, ಣ ಸಕ್ಕೋ—ಸಾಧ್ಯವಾಗದವನು.

ಜಹಜಹ—ಹೇಗೆಹೇಗೆ, ಭೋಗೇ—ಭೋಗಗಳು, ಭುಂಜಇ—ಭೋಗಿಸಲ್ಪಡುವುದೋ, ತಹತಹ—ಹಾಗೆಹಾಗೆ, ಭೋಗೇಸು—ಸುಖಗಳಲ್ಲಿ, ತಣ್ಹಾ—ಆಸೆಯು, ವಡ್ಢದೇ—ವರ್ಧಿಸುತ್ತದೆ, ಇಂಧಣಾಇಂ—ಸೌದೆಗಳಿಂದ, ಅಗ್ಗೀವ—ಅಗ್ನಿಯಂತೆ; ಸೇ ಭೋಗಾ—ಆ ಭೋಗಗಳು, ತಣ್ಹಂ—ತೃಷ್ಣೆಯನ್ನು, ಆಸೆಯನ್ನು, ದೀವಂತಿ—ಉದ್ದೀಪನಗೊಳಿಸುತ್ತವೆ.

ವೃ॥ ಸಲವಣರಸಮಂಭಃ—ಉಪ್ಪಿನ ರಸದಿಂದ ಕೂಡಿದ ನೀರು ಎಂದರೆ ಉಪ್ಪು ನೀರು, ತೃಷಾರ್ತ್ಯೈಃ—ಬಾಯಾರಿಕೆಯಿಂದ ಪೀಡಿಸಲ್ಪಟ್ಟವರಿಂದ, ಭುಜ್ಯಮಾನಂ—ಸೇವಿಸಲ್ಪಟ್ಟದಾದರೆ, ಅಧಿಕತರ ತೃಷಾರ್ತಾನ್—ಅತಿಶಯವಾದ ನೀರಡಿಕೆಯಿಂದ ಹಿಂಸಿಸಲ್ಪಟ್ಟವರನ್ನಾಗಿಯೋ, ದುಃಖಿತಾನ್ ಏವ—ದುಃಖಿಗಳನ್ನಾಗಿಯೋ, ಕುರ್ಯಾತ್—ಮಾಡುತ್ತದೆ; ಇದಂ—ಈ, ವಿಷಯ ಸುಖಮಪಿ—ಇಂದ್ರಿಯಸುಖವು ಕೂಡ, ತೃಷಾರ್ತ್ಯೈಃ—ಆಶೆಯುಳ್ಳವರಿಂದ, ಭುಜ್ಯಮಾನಂ—ಸೇವಿಸಲ್ಪಟ್ಟದ್ದು, ಅಧಿಕತರ ತೃಷಾರ್ತಾನ್, ದುಃಖಿ ತಾನ್ ಏವ—ಅತಿಶಯತರವಾದ ಆಶೆಯಿಂದ ಹಿಂಸಿಸಲ್ಪಟ್ಟವ ರನ್ನಾಗಿಯೋ, ದುಃಖಿತರನ್ನಾಗಿಯೋ, ಕುರ್ಯಾತ್—ಮಾಡುತ್ತದೆ.

ಆರ್ಯೆ॥ ಪುಟ ೧೧೩ ನೋಡಿ.

**ವೃತ್ತ**॥ ಮರ್ದುಂ—ಮದ್ದೂ, ಮಂತ್ರಮುಂ—ಮಂತ್ರಗಳೂ, ಇಷ್ಟದೇವತೆಗಳುಂ—ಉಪಾಸ್ಯ ದೇವತೆಗಳೂ, ದಿವ್ಯಾಸ್ತ್ರಮುಂ—ಶ್ರೇಷ್ಠವಾದ ಬಾಣಗಳೂ, ಕೋಂಟೆಯುಂ—ಕೋಟೆಯೂ, ಗುರ್ದುಂ—ಗುದ್ದೂ, ಪೊರ್ದಿದ—ಸೇರಿದ, ಚಾತುರಂಗ ಬಲಮುಂ—ಚತುರಂಗ ಸೈನ್ಯವೂ, ಮೆಯ್ಗಾಪುಂ—ಅಂಗರಕ್ಷಕರೂ, ವೇಳೆಗೊಂಡಿರ್ದ—ರಾಜನು ಸಾಯುತ್ತಲೇ ತಾವೂ ಸಾಯುತ್ತೇವೆಂಬ ಸಮಯ ಪಾಲನ ಪ್ರತಿಜ್ಞೆಯನ್ನು ತಾಳಿದ, ಆ ಅತ್ಯುಗ್ರ ಭಟರ್ಕಳುಂ—ಆ ಅತಿ ಭಯಂಕರರಾದ ಯೋಧರೂ, ಕವಚಮುಂ—ದೇಹವನ್ನು ರಕ್ಷಿಸುವ ಕವಚವೂ, ಮಿತ್ರರ್ಕಳುಂ—ಸ್ನೇಹಿತರೂ, ಮಿಟ್ತು—ಮೃತ್ಯುವು, ಮೇಲಿರ್ದಾಗಳ್—ಮೇಲೆ ಹಾಯ್ದು ಬಂದಾಗ, ಶರಣಪ್ಪೊಡೆ—ಶರಣಾಗುವುದಾದರೆ, ಆಶ್ರಯವಾದರೆ, ಪನ್ನಿರ್ವರುಂ ಚಕ್ರಿಗಳ್—ಹನ್ನೆರಡು ಜನ ಚಕ್ರವರ್ತಿಗಳು, ಏಕೆ ಮಡಿದರ್—ಏಕೆ ಸತ್ತರು?

ಸಾವನಿತು—ಸಾಯುವಷ್ಟು, ಒಂದು ಅವಸ್ಥೆ—ಒಂದು ಸ್ಥಿತಿ, ತನಗೆ ಆದ ಎಡೆಯೊಳ್—ತನಗೆ ಉಂಟಾದ ಸಮಯದಲ್ಲಿ, ತಱಿಸಂದು—ನಿಶ್ಚಯಿಸಿ, ತತ್ವಮಂ—ಜಿನತತ್ವಮಂ, ಭಾವಿಸಿ—ಧ್ಯಾನಿಸಿ, ಬಾಹ್ಯ ವಸ್ತುಗಳೊಳ್—ಹೊರಗಣ ಪದಾರ್ಥಗಳಲ್ಲಿ, ಒಂದದೆ—ಸೇರದೆ, ತನ್ನೊಳೆ—ತನ್ನೊಳಗೇ, ನಿಂದು—ನಿಂತು ಎಂದರೆ ಮನವನ್ನು ನಿಲ್ಲಿಸಿ, ಕರ್ಮ. ವಿಶ್ರಾಮಣೆಯಿಂ—ಕರ್ಮವು ಕಳಚಿಹೋಗುವುದರಿಂದ, ವಿಶೋಧಿ—ನಿರ್ಮಲತ್ವವು, ದೊರೆಕೊಂಡಿರೆ—ಲಭ್ಯವಾಗಿರಲು, ಪರೀಷಹಂಗಳಂ—

ಶೀತವಾತ ಮುಂತಾದ ಇಪ್ಪತ್ತೆರಡು ಹಿಂಸೆಗಳನ್ನು, ಗೆಲ್ದು—ಗೆದ್ದು, ಜೀವಮಂ—ಪ್ರಾಣವನ್ನು, ಸಂತಂ—ಸಮಾಧಾನವಾಗಿ, ಇಂತು—ಹೀಗೆ, ಒಡಲಿಂ—ದೇಹದಿಂದ, ಕಳಗೆ—ಕಳೆಯಲಿ, ಎಂಬುದು—ಎಂದು ಹೇಳುವುದು, ಜೈನಶಾಸನಂ—ಜೈನ ಧರ್ಮವು.

ಆರೊಳಂ—ಯಾರಲ್ಲೂ, ಎನಗೆ—ನನಗೆ, ಮೋಹಂ—ಪ್ರೀತಿಯು, ಇಲ್ಲ, ಎನ್ಗೆ—ಎನ್ನಲಿ; ಜಿನೇಂದ್ರ ಪದಂಗಳ್—ಅರ್ಹಂತನ ಪಾದಗಳು, ಉಗ್ರಸಂಸಾರ ಹರಂಗಳ್—ಭೀಕರವಾದ ಜನನ ಮರಣಗಳನ್ನು ಪರಿಹರಿಸುವುವು, ಎನ್ಗೆ—ಎನ್ನಲಿ, ಎನಗೆ—ನನಗೆ ಎನ್ನ—ನನ್ನ, ಅಱಿವಲ್ಲದೆ—ಜ್ಞಾನವಲ್ಲದೆ, ಪೆಱತು ಇಲ್ಲ—ಬೇರೆ ಇಲ್ಲ, ಎನ್ಗೆ—ಎನ್ನಲಿ; ನಿಂದು ಆರಯೆ—ನಿಂತು ವಿಚಾರಮಾಡಿದರೆ, ಧರ್ಮಮೊಂದೆ—ಧರ್ಮ ವೊಂದೇ, ಶರಣ್—ಶರಣು, ಎನ್ಗೆ ಹೇಳಲಿ, ಪಲಾಲಮಂ—ಜೊಳ್ಳನ್ನು ಎಂದರೆ ನಿಸ್ಸಾರವಾದುದನ್ನು, ಒಲ್ಲೆನ್—ಒಪ್ಪೆನು, ಇಂ—ಇನ್ನು, ಜೀವಿತಾಂತ್ಯದೊಳ್—ಜೀವನದ ಕೊನೆಗಾಲದಲ್ಲಿ, ಎನಲಾರ್ಪೊಡೆ—ಹೇಳಲು ಶಕ್ತಿಯಿದ್ದರೆ, ನಮಸ್ಕಾರಮೆ—ಪಂಚ ಪರಮೇಷ್ಠಿಗಳ ನಮಸ್ಕಾರವೇ, ಸಾಲ್ಗುಂ—ಸಾಕು, ಎಂಬ—ಎನ್ನುವ, ಇನಿತಂ—ಇಷ್ಟನ್ನು, ಎನ್ಗೆ—ಹೇಳಲಿ.

**ಗಾಹೆ** ‖ ಇಣಂ ಜಿಣವಯಣಂ ಓಸಹಂ—ಈ ಜಿನನ ಉಪದೇಶವು ಔಷಧ; ವಿಸಯಸುಹ ವಿರೇಯಣಂ—ವಸ್ತುಗಳಿಂದಾಗುವ ಸುಖಗಳಿಗೆ ವಿರೇಚನ ದ್ರವ್ಯ ವಾಗಿದೆ; ಅಮಿದ ಭೂತಂ—ಅಮೃತಸ್ವರೂಪವಾಗಿದೆ; ಸವ್ವಜೀವಾಣಂ—ಎಲ್ಲ ಜೀವ ಗಳ; ಜರಮರಣಜಮ್ಮವೇಯಣ—ಮುಪ್ಪು, ಸಾವು, ಹುಟ್ಟು ರೋಗ ಬೇನೆಗಳನ್ನು, ಖಯಕರೇಣಂ—ಕ್ಷಯಮಾಡುವುದಾಗಿದೆ, ನಾಶಕರವಾಗಿದೆ,

೧೪೪. **ಗಾಹೆ** ‖ ಏಕಮ್ಹಿ—ಒಂದೇ ಆದ, ಭವಗ್ಗಹಣೇ—ಜನ್ಮಧಾರಣೆಯಲ್ಲಿ, ಸಮಾಹಿಮರಣಂ—ಸಮಾಧಿ ಮರಣವೆಂಬ ಮರಣವನ್ನು; ಜೀವೋ—ಜೀವನು; ಆತ್ಮನು; ಯದಿಲಹಿಜ್ಜ—ಯಾವಾಗ ಪಡೆಯುವನೋ ಅದರ ಅನಂತರದ, ಸತ್ತಟ್ಠ ಭವಗ್ಗಹಣೇ—ಏಳೆಂಟು ಜನ್ಮಧಾರಣೆಗಳಲ್ಲಿ, ಅಣುತ್ತರಂ—ಅತ್ಯಂತ ಶ್ರೇಷ್ಠವಾದ, ಣಿವ್ವಾಣಂ—ನಿರ್ವಾಣವನ್ನು, ಮೋಕ್ಷವನ್ನು, ಲಹಇ—ಪಡೆಯುತ್ತಾನೆ.

* **ಗಾಹೆ** ‖ ಸತ್ತಕ್ಖರ—ಸಪ್ತಾಕ್ಷರಗಳ ಎಂದರೆ ಣಮೊ ಅರಹಂತಾಣಾಂ ಎಂಬುದರ, ಸಜ್ಝಾಯಂ—ಪಠನವನ್ನು, ತಿಭಾವೇಣ—ಕಾಯಾ ವಾಚಾ ಮನಸಾ ಎಂಬ ಮೂರು ಭಾವಗಳಿಂದ, ಅಣಣ್ಣಮಈ—ಅನನ್ಯಮತಿಯಾದ, ಜೋ—ಯಾವನು, ಕುಣಇ—ಮಾಡುವನೋ, ಸೋ—ಅವನು, ಸವ್ವಕಲ್ಲಾಣಂ—ಸಮಸ್ತ ಕಲ್ಯಾಣಗಳನ್ನು, ಪಾವಇ—ಪಡೆಯುತ್ತಾನೆ.

**ಗಾಹೆ** ‖ ಸವ್ವ ಪಾಪ ಪಣಾಸಣೋ—ಸಮಸ್ತ ಪಾಪಗಳನ್ನು ನಾಶಮಾಡುವ, ಏಸೋ—ಈ, ಪಂಚಣಮೋಕ್ಕಾರೋ—ಪಂಚನಮಸ್ಕಾರಗಳು, ಸವ್ವೇಸು—ಎಲ್ಲ, ಮಂಗಲೇಸು ಯ—ಮಂಗಳಗಳಲ್ಲಿ, ಪಢಮಂ—ಮೊದಲಿನದಾದ, ಮಂಗಳಂ—

ಮಂಗಳವು, ಹವಇ—ಆಗುತ್ತದೆ.

*ಗಾಹೆ || ಜೋ—ಯಾವನು, ಭಾವಣಮೋಕ್ಕಾರಗದೋ—ಮನಸ್ಸಿನಲ್ಲೇ ಧ್ಯಾನಿಸುವ ಪಂಚ ನಮಸ್ಕಾರಗಳನ್ನುಳ್ಳವನು, ಣಿಯಮಿಯಮ್ಮಿ—ನಿಯಮಿತವಾದ, ಚಿತ್ತಮ್ಮಿ—ಮನಸ್ಸಿನಲ್ಲಿ, ಝಾಯಂ—ಧ್ಯಾನಿಸುತ್ತ, ಏಅಗ್ಗೇಣ—ಏಕಾಗ್ರತೆಯಿಂದ, ವಿಸುದ್ಧೋ—ನಿರ್ಮಲನೋ, ಸೋ—ಅವನು, ಮೊಕ್ಖಸುಹಬಾಈ—ಮೋಕ್ಷಸುಖಭಾಗಿಯಾಗಿ, ಹೋಹಿಸಿ—ಆಗುವನು.

ಆರ್ಯೆ || ಗುರುಮೂಲೇ—ಗುರುಗಳ ಸಾನ್ನಿಧ್ಯದಲ್ಲಿ, ಯತಿನಿಕಟೇ—ಯತಿಗಳ ಸಮೀಪದಲ್ಲಿ, ಚೈತ್ಯೇ—ಜಿನಾಲಯದಲ್ಲಿ, ಸಿದ್ಧಾಂತವಾರ್ಧಿ ಸದ್ಘೋಷೇ—ಸಿದ್ಧಾಂತವೆಂಬ ಸಮುದ್ರದ ಉತ್ತಮ ನಾದದಲ್ಲಿ, ಜನ್ಮಜನ್ಮನಿ—ಜನ್ಮಜನ್ಮದಲ್ಲೂ, ಸಂನ್ಯಸನ ಸಮನ್ವಿತಂ ಮರಣಂ—ಸಂನ್ಯಾಸ ಸಮೇತವಾದ ಮರಣವು, ಮಮ—ನನಗೆ, ಭವತು—ಉಂಟಾಗಲಿ.

೧೧. ಆರಾಧನೆಯಂ—ಆರಾಧನಾ ಶಾಸ್ತ್ರವನ್ನು ; ೧೨. ಮುಡಿಪುವಾಗಳ್—ಸಾಯುವಾಗ ; ೧೩. ಭುವನವಾಸಿಗಲೋಕದೊಳ್—ಮನೆಗಳಲ್ಲಿ ವಾಸಮಾಡುವವರಾದ ಅಸುರಾದಿ ಕುಮಾರರ ಲೋಕದಲ್ಲಿ ; ೧೪. ನೂಱು ಪಳಿತೋಪಮಾಯುಷ್ಯಮನೊಡೆಯೊಂ—ನೂರು ಪಳಿತಗಳಿಗೆ ಸಮಾನವಾದ ಆಯುಸ್ಸನ್ನುಳ್ಳವನು ; ೧೯. ಪೊಲ್ಲಗತಿಯೊಳ್—ದುರ್ಗತಿಯಲ್ಲಿ ; ೨೦. ತೊಱೆಯಲ್—ವಿರಕ್ತನಾಗಲು ; ಬಾರಿಸಿ—ತಡೆದು ; ಬಲ್ಲಾಳ್ತನದಿಂ—ಬಲಾತ್ಕಾರದಿಂದ ; ೧೩. ಕಲ್ಪಿಸಿದಂ—ಕಲಿಸಿದನು.

ವೃ || ತೃಷ್ಣಾಂ—ಆಸೆಯನ್ನು, ಛಿಂದಿ—ಕತ್ತರಿಸು ; ಕ್ಷಮಾಂ—ಕ್ಷಮೆಯನ್ನು, ಭಜ—ಭಜಿಸು ; ಮದಂ—ಗರ್ವವನ್ನು, ತ್ಯಜ—ಬಿಡು, ಪಾಪೇ—ಪಾಪದಲ್ಲಿ, ರತಿಂ—ಪ್ರೀತಿಯನ್ನು, ಮಾಕೃಥಾಃ—ಮಾಡಬೇಡ, ಸತ್ಯಂ—ನಿಜವನ್ನು, ಬ್ರೂಹಿ—ಹೇಳು ; ಸಾಧು ಪದವೀಂ—ಸಾಧುಗಳ ಪದವಿಯನ್ನು, ಅನುಯಾಹಿ—ಅನುಸರಿಸಿ ಹೋಗು ; ವಿದ್ವಜ್ಜನಂ—ವಿದ್ವಾಂಸರನ್ನು, ಸೇವಸ್ವ—ಸೇವೆಮಾಡು, ಮಾನ್ಯಾನ್—ಮಾನ್ಯರಾದವರನ್ನು, ಮಾನಯ—ಗೌರವಿಸು ; ವಿದ್ವಿಷೋಪಿ—ಶತ್ರುಗಳನ್ನು ಕೂಡ, ಅನುನಯ—ಆದರಿಸು ; ಪ್ರಶ್ರಯಂ—ಆಶ್ರಯವನ್ನು, ಪ್ರಖ್ಯಾಪಯ—ಪ್ರಸಿದ್ಧಪಡಿಸು ; ಕೀರ್ತಿಂ—ಕೀರ್ತಿಯನ್ನು, ಪಾಲಯ—ಪಾಲಿಸು, ದುಃಖಿತೇ—ದುಃಖಿತನಾದವನಲ್ಲಿ, ದಯಾಂ—ದಯೆಯನ್ನು, ಕುರು—ಮಾಡು; ಏತತ್—ಇದು, ಸತಾಂ—ಸತ್ಪುರುಷರ, ಚೇಷ್ಟಿತಂ—ಆಚರಣೆಗಳು.

೪೧೩. ೬ : ಬಂದಿಸಲ್ವೇಡಿ—ವಂದಿಸಲು ಬಯಸಿ ; ೧೦. ಕೊಱೆದಿಕ್ಕಿ—ಕತ್ತರಿಸಿ ಹಾಕಿ ; ೧೨. ಮೊದಲೊಳ್—ಅಡಿಯಲ್ಲಿ ; ಪುಡುಕುನೀರೞ್ದುತ್ತಂ—ಕುದಿನೀರಿನಲ್ಲಿ ಅದ್ದುತ್ತ ; ೨೧. ಪುತ್ರಾರ್ಥಿಯಪ್ಪ—ಮಗನು ಬೇಕೆಂದು ಬೇಡುವ ; ೨೨. ಆದೇಶದಿಂ—ಭವಿಷ್ಯವಾಣಿಯಿಂದ ; ೨೪. ಚತುಷ್ಪಷ್ಟಿ—ಅರವತ್ತುನಾಲ್ಕು ; ದ್ವಾಸಪ್ತತಿ—ಎಪ್ಪತ್ತೆರಡು ; ೨೫. ನಿರವಶೇಷಂ—ಏನೂ ಉಳಿಯದಂತೆ ಎಂದರೆ ಪೂರ್ಣವಾಗಿ ;

೧೪೬. ೧: ಗಾಡಿಯುಂ—ಸೌಂದರ್ಯವೂ; ೩. ಎಂತಪ್ಪೊಡಂ—ಹೇಗಾದರೂ; ೪. ಪೊಟ್ಟಯಿಸಿ—ಎದುರಿಸಿ, ಪ್ರತಿಭಟಿಸಿ, (ತಮಿಳು) ಮುಟ್ಟು—ಎದುರಿಸು; ೫. ಮಂಡಲಂಗಳುಂ—ನಾಡುಗಳನ್ನೂ; ೮. ಪುಲಿಯುಪದ್ರವಮಂ—ಹುಲಿಯ ಕಾಟವನ್ನು; ನಾಡವರ್—ನಾಡಿನ ಪ್ರಜೆಗಳು; ವಂದು—ಬಂದು; ೯. ಬಳಸಿಯುಮಿರ್ದ—ಸುತ್ತಲೂ ಇದ್ದ; ೧೧. ಅಣ್ಮರ್—ಪ್ರಯತ್ನಪಡರು; ೧೫. ಎನಿತೆನಿತಂ—ಎಷ್ಟೆಷ್ಟನ್ನು; ೧೬. ಅನಿತನಿತು—ಅಷ್ಟಷ್ಟು; ೧೭. ಕಿಚ್ಚಂತಗುಳ್ಚಿ—ಉರಿಯನ್ನು ಹೊತ್ತಿಸಿ; ೧೯. ಕರ್ಮ ನಿರ್ಜರೆಯಿಂ—ಕರ್ಮಗಳು ನಾಶವಾಗುವುದರಿಂದ; ೨೦. ಸಾರೆ—ಹತ್ತಿರ;

೧೪೭. ೧: ಎನಿತಾನುಂ ಸೂೞ್—ಎಷ್ಟೋ ಸಲ, ಎಷ್ಟೋ ಬಾರಿ; ೦. ಬೇಡಿಯಟ್ಟಿದೊಡೆ—ಬಯಸಿ ದೂತನ ಮೂಲಕ ಹೇಳಿ ಕಳುಹಿಸಿದರೆ; ೬. ಓರೊರ್ವರ್—ಒಬ್ಬೊಬ್ಬರು; ೭. ಮಾಡಲ್ ತಗಳ್ದು—ಮಾಡಲಾರಂಭಿಸಿ; ೧೧. ಸಮೆಯಿಸಿ—ಪೂರ್ತಿಯಾಗಿ ಮಾಡಿ; ೧೬. ಆರಯ್ದು—ಹುಡುಕಿ, ವಿಚಾರಿಸಿ; ೧೯. ಅಟ್ಟುಗೆ—ಕಳುಹಿಸಿಕೊಡಲಿ; ೨೪. ಈ ಬಲಂಗಳಿಂ—ಈ ಸೈನ್ಯಗಳಿಂದ; ಕಜ್ಜಮೇನ್— ಕಾರ್ಯವೇನು; ೨೫. ಪಟ್ಟವರ್ಧನಮುಮಂ—ಪಟ್ಟದಾನೆಯನ್ನೂ; ೨೬. ತಲೆವೆರಸುಕೊಳ್ವೆಂ—ತಲೆಸಮೇತವಾಗಿ ತೆಗೆದುಕೊಳ್ಳುತ್ತೇನೆ.

೧೪೮. ೧: ಪೆರ್ಗ್ಗಡೆಗಳೊಳ್—ಹೆಗ್ಗಡೆಗಳಲ್ಲಿ, ನಿಮ್ಮ ಬೞಿಯನೆ—ನಿಮ್ಮ ಹಿಂದೆಯೇ; ೩. ಕತಿಪಯ—ಕೆಲವು; ೪. ಮೂವಳಸು ವಳಸಿ—ಮೂರುಸುತ್ತು ಸುತ್ತಿ; ೫. ಸಾಧನಂ ಬೆರಸು—ಸೈನ್ಯಸಮೇತನಾಗಿ; ಒಡ್ಡಣಮಂ—ಸೈನ್ಯವನ್ನು; ೬. ಒಡ್ಡಿ—ಎದುರಿಗೆ ನಿಲ್ಲಿಸಲು; ಅಣಿ—ಪದಾತಿ ಸೈನ್ಯ; ೧೦. ಖಂಡಿಸೆಪಟ್ಟುದಾಗಿ—ಕತ್ತರಿಸಲ್ಪಟ್ಟದ್ದಾಗಿ; ಪರ್ಮ—ಹದ್ದು; ೧೨. ಚವುಕಿಗೆ—ಅಂಗಳ; (ಸಂ) ಚತುಷ್ಕಿಕಾ; ೧೩. ನಡಪಾಡುತ್ತಿರ್ದಳ್—ಅತ್ತ, ಇತ್ತ ನಡೆಯುತ್ತಿದ್ದವಳ; ಸಸ್ಯ—ಶಸ್ಯ ಎಂಬ ಒಂದು ಬಗೆಯ ರತ್ನ; ಕರ್ಕೇತನ—ಒಂದು ಬಗೆಯಾದ ಸ್ಫಟಿಕಮಣಿ; ಇಂದ್ರನೀಲಂ—ನೀಲ ರತ್ನ; ೧೬. ಕಂಕಣಂಗಳುಮಂ—ಬಳೆಗಳನ್ನೂ; ೧೮. ತಳಮುಮಂ—ಅಂಗೈಯನ್ನೂ; ಈ ತಳಮನೊಡೆಯಾತಂ—ಈ (ಇಂಥ) ಅಂಗಯ್ಯನ್ನುಳ್ಳವನು; ೨೧. ಅವಯವಂಗಳನೊಡೆಯ — ಅಂಗಗಳನ್ನುಳ್ಳ; ಸತ್ತಪರ್ — ಸಾಯುತ್ತಾರೆ; ೨೬. ದೀಪ್ತಿ—ಪ್ರಕಾಶ; ಧೃತಿ—ಧೈರ್ಯ;

೧೪೯. ೧: ಆದಮಾನುಂ — ವಿಶೇಷವಾಗಿ, ಅತಿಶಯವಾಗಿ; ಪ್ರಚಂಡ—ತೀಕ್ಷ್ಣವಾದ, ದೋರ್ದಂಡನುಂ—ಭುಜಾದಂಡಗಳುಳ್ಳವನೂ; ಬಲಗರ್ವಿತನುಂ—ತನ್ನ ಶಕ್ತಿ ಅಥವಾ ಸೈನ್ಯ ಕಾರಣವಾಗಿ ಗರ್ವಿಷ್ಠನಾಗಿರುವವನು; ೨. ಒಟ್ಟಯಿಸಿ—ಒಂದುಮಾಡಿ, (ತನ್ನ ರಾಜ್ಯಕ್ಕೆ) ಸೇರಿಸಿಕೊಂಡು; ಆಳ್ದಪ್ಪೊನ್—ಆಳುತ್ತಾನೆ; ೩. ಪಾಗುಡಂಗಳಂ—ಉಡುಗೊರೆ ಕಾಣಿಕೆಗಳನ್ನು; ೪. ನಿಮ್ಮಮ್ಮಂ—ನಿಮ್ಮ ತಂದೆ; ೫. ಚಾತುರ್ದಂತ ಬಲಂ ಬೆರಸು—ಚತುರಂಗ ಸೈನ್ಯಸಮೇತನಾಗಿ; ೧೧. ನುಡಿಯಿಂ—ಹೇಳಿರಿ: ೧೩. ಮೊಜೞಿಯಲ್ಲದವರ್—ಬಂಧುಗಳಲ್ಲದವರು; ೧೬. ಕೂಸಂ ಕೊಟ್ಟಿಂ—

ಮಗಳನ್ನು ಕೊಟ್ಟನು ; ೧೭. ಬಾರಿಸಿದಂ—ತಡೆದನು ; ೧೮. ಉಪಸಂಹರಿಸಿ—ನಿಲ್ಲಿಸಿ, ಮುಗಿಸಿ ; ೨೩. ನಾಟಕ್ಕೆ—ನಾಡಿಗೆ ; ೨೮. ಸೂಳೆಯರ್ಕಳುಮಂ—ದಾಸಿಯರನ್ನೂ ;

೧೫೦. ೧ : ಮೂದೆಱದ—ಮೂರು ಪ್ರಕಾರವಾದ ; ೨. ತುಡುಗೆಗಳುಮಂ—ಆಭರಣಗಳನ್ನೂ ; ೫. ಅನುನಯದಿಂದೆ—ಸ್ನೇಹದಿಂದ, ಪ್ರೀತಿಯಿಂದ ; ೧೦, ಗೆಂಟಱೊಳ್—ದೂರದಲ್ಲಿ ; ಬಲಗೊಂಡು—ಪ್ರದಕ್ಷಿಣೆಮಾಡಿ ; ೧೨. ಪಿರಿದು ಬೇಗಂ—ಬಹಳ ಹೊತ್ತು ; ೧೩. ಮುನ್ನಿನ ಭವಂಗಳ್—ಮೊದಲಿನ ಜನ್ಮಾಂತರಗಳು ; ೧೬. ಕೊಲೆಪಟ್ಟೆಯಾಗಿ—ಕೊಲ್ಲಲ್ಪಟ್ಟೆಯಾಗಿ ; ೨೨. ಪುಳುಂಗಾಱಂ—ಹಕ್ಕಿಗಳನ್ನು ಹಿಡಿಯುವವನು, ಪುಳ್—ಹಕ್ಕಿ, (ತಮಿಳು) ಪುಳ್ ; ೨೩. ಪೆಂಡತಿಯುಯರ್—ಹೆಂಡತಿಯಾಗಿದ್ದೆ ; ೨೭. ಕಳ್ಳದ—ಕದಿಯದ ;

೧೫೧. ಗಿಣ್ಣಂ—ಗಿಣ್ಣಿನ ಹಾಲೂ ಎಂದರೆ ಹಸು ಈದ ಹೊಸದರಲ್ಲಿ ಕೊಡುವ ಹಾಲು ; ೩. ಭರ್ತಾರಂ—ಗಂಡ ; ಲಾವುಗೆ—ಲಾವಗೆಯೆಂಬ ಹಕ್ಕಿ ; ಉಂಕೆ—ಒಂದು ಜಾತಿಯ ಹಕ್ಕಿ (?) ; ಕೊರಸುಂ—ಕೊರಸು ಎಂಬ ಹಕ್ಕಿ (?) ; ೮. ಬಾೞ್ವ ಪಾೞ್ವ—ಬದುಕಿರುವಂತೆಯೇ ; ೧೬. ಗೋಸನೆಗಳೆಯಿಸಿದಂ—ಸಾರಿಸಿದನು, ಡಂಗೂರ ಹೊಡೆಯಿಸಿದನು ; ೨೮. ನೋಂಪಿಗಳಿಂದಂ—ಉಪವಾಸಾದಿ ವ್ರತಗಳಿಂದ ; ಗಿಡಿ ಗಿಡಿ ಜಂತ್ರಂ ಮಿಳಿ ಮಿಳಿ ನೇತ್ರರಾಗಿ—ಅತ್ಯಂತ ಕೃಶರಾಗಿ ಗುಳಿಬಿದ್ದ ಕಣ್ಣುಳ್ಳವರಾಗಿ ; ೨೫. ತವಿಸಿ—ಕ್ಷಯಕ್ಕೆ ತಂದು ; ಪಶ್ಚಾತ್ಕಾಲದೊಳ್—ಅನಂತರ ಕಾಲದಲ್ಲಿ.

೧೫೨. ೧೦ : ಎಡೆಯೊಳ್—ನಡುವೆ, ಎಡೆಯಲ್ಲಿ ; ೧೧. ನೇಸರ್ಪಟ್ಟೊಡೆ—ಸೂರ್ಯನು ಮುಳುಗಿದರೆ ; ಯತ್ರಾಸ್ತಮಿತವಾಸಿಗಳ್—ಎಲ್ಲಿ ಸಂಜೆಯಾಗುತ್ತದೊ ಅಲ್ಲಿಯೇ ನಿಲ್ಲುವವರು, ಸಂನ್ಯಾಸಿಗಳು ; ೧೨. ಬಟ್ಟೆಯ—ದಾರಿಯ, ಕಣ್ಣೊಳೆ—ಎದುರಿನಲ್ಲೆ ; ರಾತ್ರಿ ಪ್ರತಿಮೆ ನಿಂದೊರ್—ಇರುಳು ಪ್ರತಿಮೆಯ ಆಕಾರದಲ್ಲಿ ತಪಸ್ಸಿನಲ್ಲಿ ನಿಂತರು ; ೧೪. ಅಪ್ರಾಸುಕಂ ಬಟ್ಟೆ—ಜೀವಜಂತುಗಳಿಂದ ಕೂಡಿದ ಮಾರ್ಗ ; ಕೈಯನೆತ್ತಿಕೊಳ್ಳದೆ—ಇಳಿಬಿಟ್ಟದ್ದ ಕೈಗಳನ್ನು ಮೇಲಕ್ಕೆ ಎತ್ತಿಕೊಳ್ಳದೆ ; ೧೫. ಸೂರ್ಯ ಪ್ರತಿಮೆ—ಬಿಸಿಲಿನಲ್ಲಿ ಪ್ರತಿಮೆಯಂತೆ ನಿಲ್ಲುವುದು ; ೧೬. ಕೈಯಂ—ಹೊಲವನ್ನು ; ಉೞಲೆಂದು—ಉಳುವುದಕ್ಕಾಗಿ ; ೧೭. ಉೞಲ್ ಪದನಲ್ತು—ಉಳಲು ಹದವಲ್ಲ ; ಪಡುವಣ ಕೆಯ್ಯಂ—ಪಶ್ಚಿಮದ ಹೊಲವನ್ನು ; ೧೮. ಕೆಯ್ಯಸಾರೆ—ಹೊಲದ ಹತ್ತಿರ ; ೨೦. ಪೇೞ್ದಟ್ಟಂ ಗಡಿಂ—ಹೇಳಿಕಳುಹಿಸಿರಿ, ಅಲ್ಲವೆ ? ; ೨೨. ಪಾರ್ವಂತಿಯುಂ—ಹಾರುವನ ಹೆಂಡತಿಯೂ ; ಕೆಯ್ಯೊಳಗಲಮಱಸಿ—ಹೊಲದಗಲಕ್ಕೂ ಹುಡುಕಿ ; ೨೨. ಎನ್ನ ಭಟ್ಟಂ—ನನ್ನ ಗಂಡನು, (ಸಂ) ಭರ್ತೃ ; ೨೪. ಕೆಮ್ಮಗಿರ್ದೊಡೆ—ಸುಮ್ಮನಿದ್ದರೆ ; ೨೬. ಕೆಯ್ಯಂ ಪಿರಿದುಬೇಗಮುೞ್ತು—ಹೊಲವನ್ನು ಬಹಳ ಹೊತ್ತು ಉತ್ತು ; ಸೇದೆಗೆಟ್ಟು—ಸೇದೆಯಿಂ + ಕೆಟ್ಟು ; ೨೭. ಪಾರುತ್ತಿರ್ದು—ಎದುರು ನೋಡುತ್ತಿದ್ದು ; ನಿರೀಕ್ಷಿಸುತ್ತಿದ್ದು ;

೧೫೩. ೧ : ಎಲೆಗೆ ಕೂೞಂ ತಂದೆಯಿಲ್ಲ—ಲೇ, ಅನ್ನ ತೆಗೆದುಕೊಂಡು ಬರ

ಲಿಲ್ಲವೆ ? ೨. ಸೊಪ್ಪುನಾರಾಗಿ—ಸೊಪ್ಪು ನಾರೂ ಆಗುವಂತೆ; ೩. ಪಾರ್ದು—ಎದುರುನೋಡುತ್ತ ; ೪. ಕ್ಷಪಣಕನಂ—ಜೈನ ಸಂನ್ಯಾಸಿಯನ್ನು ; ಬೆಸಗೊಂಡೆಯಿಲ್ಲಾ—ಕೇಳಲಿಲ್ಲಾ ? ; ೬. ಎನಿತಾನುಂ ಸೂೞಿಲ್ ಅಂ—ಎಷ್ಟೋಸಲ ನಾನು ; ೭. ಉಣ್ಣಪಡಿಸಿ—ಉಪವಾಸವಿರುವಂತೆ ಮಾಡಿ, ಉಣ್ಣದೆ+ಪಡಿಸು, "ಪಸಿದುಣ್ಣಪಟ್ಟು ಬಿರ್ದಿರ್ದು ಸಮುದ್ರದ ತಡಿಯೊಳ್"—ಎಂದು ಪಂಪನ ಪ್ರಯೋಗ (ಆದಿಪು. ೪೪-೬೮) ; ೯. ಭವಸಂಬಂಧಿಯಪ್ಪ—ಜನ್ಮಾಂತರಗಳಿಗೆ ಸಂಬಂಧಪಟ್ಟ ; ೧೦. ಪುಲ್ಲಬೆಂಟೆಯಂ—ಹುಲ್ಲಿನ ಹಗ್ಗವನ್ನು ; "ಬೆಂಟೆಯೆಂದು ಸರವಿ, ಮುಟಿಲ ಬೆಂಟೆಯಂ ಮಾಡಿದ ವೊಲ್" ಎಂದು ಕೇಶಿರಾಜ. ೧೧. ಪೊಸೆದು—ಹೊಸೆದು, ಹುರಿಮಾಡಿ ; ೧೩. ಸುಟ್ಟಪ್ಪೆಂ—ಸುಡುತ್ತೇನೆ ; ಕಾವೊರಾರ್—ರಕ್ಷಿಸುವವರು ಯಾರು ? ; ೧೭. ನೆಱೆಯಂ—ಸಮರ್ಥನಾಗನು ; ೧೪. ತಗುಳ್ದರ್—ತೊಡಗಿದರು.

**ಗಾಹೆ ||** ಪುಟ ೭ ನೋಡಿ.

***ಗಾಹೆ ||** ದುಜ್ಜಣವಯಣ—ದುರ್ಜನರ ಮಾತುಗಳೆಂಬ, ಸಡಗರಂ (ಚಡಯಣಂ) —ಚಟಚಟಯೆಂದು ಸಿಡಿಯುವ ಕಿಡಿಗಳಂತೆ ಸಂತಾಪಕರವಾದುವುಗಳನ್ನು, ಸಹಂತಿ—ಸೈರಿಸುತ್ತಾರೆ ; ಅಚ್ಚೋಡ—ಚಾಡಿಯ ಮಾತುಗಳನ್ನು ಅಥವಾ ಕೋಲು ಬಡಿಗೆಗಳ ಏಟುಗಳನ್ನೂ, ಸತ್ಥಪಹರಂ ಚ—ಶಸ್ತ್ರಪ್ರಹಾರಗಳನ್ನೂ, ಸಹಂತಿ—ಸೈರಿಸುತ್ತಾರೆ, ಮಹಾರಿಸೀ—ಮಹಾಋಷಿಗಳು, ಣಯ ಕುಪ್ಪಂತಿ—ಕೋಪಮಾಡಿಕೊಳ್ಳುವುದಿಲ್ಲ ; ಸಮಣಾ (ಸಾಹೂ)—ಸಾಧುಗಳು ; ಖಮಾಗುಣ ವಿಜಾಣಕಾ—ಕ್ಷಮಾಗುಣವನ್ನು ಬಲ್ಲವರಾಗಿದ್ದಾರೆ ; ಸಾಧುಗಳು ಸರ್ವಪ್ರಕಾರಗಳಿಂದಲೂ ಸಹನಶೀಲರಾಗಿದ್ದು ಎಂದಿಗೂ ಕೋಪವಶರಾಗರು ಎಂದು ತಾತ್ಪರ್ಯ.

**ಗಾಹೆ ||** ಇದರ ಪಾಠದಲ್ಲಿ ಕ್ಲೇಶಗಳಿರುವುದರಿಂದ ಅರ್ಥ ಸರಿಯಾಗಿ ಆಗುವುದಿಲ್ಲ.

**೧೫೪. ಗಾಹೆ ||** ಜೀವಿದ ಮರಣೇ—ಬದುಕಿನಲ್ಲೂ ಸಾವಿನಲ್ಲೂ, ಲಾಭಾಲಾಭೇ—ಇಷ್ಟದ ಪ್ರಾಪ್ತಿಯಲ್ಲೂ ಇಷ್ಟದ ಅಪ್ರಾಪ್ತಿಯಲ್ಲೂ, ಸಂಜೋಗ ವಿಪ್ಪಜೋಗೇಚ—ಇಷ್ಟಸಂಯೋಗದಲ್ಲೂ ಇಷ್ಟವಿಯೋಗದಲ್ಲೂ, ಬಂಧ್ವರಿ ಸುಖದುಃಖಾದಿಸು—ಸ್ವಜನರು ಮಿತ್ರರು ಶತ್ರುಗಳು ಇವರಿಗೆ ಸಂಬಂಧಿಸಿದ ಸುಖದುಃಖಾದಿಗಳಲ್ಲೂ ಹಸಿವು ನೀರಡಿಕೆ ಶೀತೋಷ್ಣಾದಿಗಳಲ್ಲೂ, ಸಮದಾ—ಸಮತೆಯು ಎಂದರೆ ಚಿತ್ತಸಮಾಧಾನದಿಂದಿರುವುದು, ಸಾಮಾಯಿಗಂ ಣಾಮ—ಸಾಮಾಯಿಕ ಎಂಬ ಹೆಸರುಳ್ಳದ್ದು.

**ಗಾಹೆ ||** ಪುಟ ೪೮ ನೋಡಿ.

೫. ಬೆಂಟೆಯಂ—ಹುಲ್ಲಿನ ಹಗ್ಗವನ್ನು ; ೬. ನಖಾಗ್ರದಿಂ—ಕಾಲುಗುರ ತುದಿಯಿಂದ, ನೆತ್ತಿವರೆಗಂ—ನೆತ್ತಿಯವರೆಗೂ ; ೭. ಕಿಚ್ಚಂ ತಗುಳ್ಚಿ—ಉರಿಯನ್ನು ಅಂಟಿಸಿ, ಹೊತ್ತಿಸಿ ; ೮. ಏಕಜ್ವಾಲೆಯಾಗಿ—ಒಂದೇ ಉರಿಯಾಗಿ ; ೧೨. ಚರಮಪಾಳಿ—ಕೊನೆಯ ಕರ್ಮಬಂಧ ; ೧೪. ಕ್ಷೀಣಕಷಾಯನಾಗಿ—ನಾಶವಾದ ರಾಗದ್ವೇಷವುಳ್ಳವ

ನಾಗಿ; ೧೭. ಅವಱೊಡನೆ—ಅವುಗಳೊಡನೆ ಎಂದರೆ ನಾಲ್ಕು ಕರ್ಮಗಳೊಡನೆ; ಅಘಾತಿಕರ್ಮಗಳೊಡನೆ; ೨೨. ಒಡೆಯರಾದರ್—ಉಳ್ಳವರಾದರು; ೨೭. ಧನದಂ—ಕುಬೇರ;

೧೫೫. ೪ ಪಲ್ಯಂಕದೊಳ್—ಪದ್ಮಾಸನದಲ್ಲಿ;

***ಗಾಹೆ ||** ಇದರ ಪಾಠದಲ್ಲಿ ಕ್ಲೇಶಗಳಿರುವುದರಿಂದ ಸರಿಯಾಗಿ ಅರ್ಥವಾಗುವುದಿಲ್ಲ. ಸವ್ವೇಹಿ—ಸಕಲವೂ ಆದ, ಭವಣವಾಸೀ—ಭವನವಾಸಿಗಳೆಂಬ ದೇವತೆಗಳು, ವ್ಯಂತರ—ವ್ಯಂತರರು, ದೇವಾಯು—ದೇವತೆಗಳು, ಪಳದ ಪಳುಸಸಿಯಾ (?) ಪುಂಟಹ—ಕಪ್ಪವಾಸೀ—ಕಲ್ಪವಾಸಿಗಳೂ, ಸಿಹಿಣಿಣಾ ಎಞ——ಜೋಇಸಿಯಾ—ಜ್ಯೋತಿಷ್ಕರು.

ತಾತ್ಪರ್ಯ: ಎಲ್ಲ ಭವನವಾಸಿ ಮತ್ತು ವ್ಯಂತರದೇವತೆಗಳು ಪಟಹಗಳ ಶಬ್ದದಿಂದ ಹೆದರಿದ್ದಾರೆ; ಕಲ್ಪವಾಸಿಗಳು ಗಂಟೆಗಳ ಶಬ್ದದಿಂದಲೂ ಜ್ಯೋತಿಷ್ಕದೇವತೆಗಳು ನವಿಲುಗಳ ಕೇಕೆಗಳಿಂದಲೂ ಹೆದರಿದ್ದಾರೆ.

೧೦. ಸಮವಸರಣ ಕೋಷ್ಠಂಗಳೊಳ್—ಸಮವಸರಣ ಎಂದರೆ ಜಿನನು ಉಪದೇಶ ಮಾಡುವ ಸಭಾಭವನದ ಪ್ರದೇಶಗಳಲ್ಲಿ; ೧೩. ಪೊಲ್ಲಕೆಯ್ದೆಂ—ಕೇಡನ್ನು ಮಾಡಿದೆನು; ೧೯. ಭವ್ಯವರ ಪುಂಡರೀಕರ್ಕಳ್ಗೆ—ಭವ್ಯರೆಂಬ ಶ್ರೇಷ್ಠವಾದ ತಾವರೆಗಳಿಗೆ; ೨೫. ಒರ್ಮೊದಲೆ—ಏಕಕಾಲದಲ್ಲಿ;

**೧೫೬. ಗಾಹೆ ||** ತೇ—ಮುಕ್ತರಾದವರು, ಅಜರಂ—ಮುಪ್ಪಿಲ್ಲದವರು, ಅರುಜಂ—ರೋಗವಿಲ್ಲದವರು; ಅಮರಂ—ಸಾವಿಲ್ಲದವರು; ಅಸರೀರಂ—ಔದಾರಿಕಾದಿ ಪಂಚಶರೀರವಿಲ್ಲದವರು; ಅಕ್ಷಯಂ—ಕ್ಷಯವಿಲ್ಲದವರು, ಅಣುವಮಂ—ಅಸದೃಶವಾದ, ಸೋಕ್ಖಂ—ಸುಖವುಳ್ಳವರು; ಅವ್ವಾಬಾಧಂ—ಯಾವ ತಡೆಯೂ ಇಲ್ಲದ, ಅಣಂತ ಅಣಾಗತಂ ಕಾಲಂ—ಅನಂತನಾದ ಭವಿಷ್ಯತ್ತಿನವರೆಗೂ, ಅಚ್ಛಂತಿ—ಮುಳುಗಿರುವರು. ೫. ಊರನೆಯ್ದದೆ—ಊರಿಗೆ ಹೋಗದೆ; ಕುಮ್ಮರಿಯಂ—ತಾತ್ಕಾಲಿಕ ಬೇಸಾಯಕ್ಕಾಗಿ ಕಾಡನ್ನು ಕಡಿದು ನೆಲ ಬಿಡಿಸಿ ಆಮೇಲೆ ಸುಡುವುದು; ಒಟ್ಟಿದ ಮರಂಗಳ—ರಾಶಿ ಹಾಕಿದ ಮರಗಳ; ೯. ಪೋಡುಂಗಾಱಂ—ಕಾಡನ್ನು ಕತ್ತರಿಸುವವನು, “ಒಂದೆ ಕುಠಾರದಿಂದಡವಿಯುಂ ಕಡಿವಂತಿರೆ ಪೋಡುಗಾಱಂ” (ಪಂಪರಾ. ೪-೪೦), “ಮನುಜೇಂದ್ರನ ಸೇನೆಯ ವಿಘಟನಾಜಿಯೊಳ್ ಪೋಡುಗಾಱನಂತಿರೆ ತಱಿದಂ” (ಅದೇ. ೫೩-೫೦೪) ಎಂದು ನಾಗಚಂದ್ರನ ಪ್ರಯೋಗಗಳಿವೆ; ತೂಂಕಡಿಂದೆ—ನಿದ್ದೆಯಿಂದ; ೧೦. ಕಱ್ಪಿಂಗಳ್—ಕರ್ದಿಂಗಳ್—ಕಪ್ಪುಚಂದ್ರ, ಅಮಾವಾಸ್ಯೆಯ; ಕಡುಗತ್ತಲೆಯೊಳ್—ತೀವ್ರವಾದ ಕತ್ತಲೆಯಲ್ಲಿ; ೧೭. ನಿಂದಣೆಗರುಹಣೆ—ನಿಂದನೆಗರ್ಹಣೆಗಳನ್ನು; ೧೯. ಎಬ್ಬಿಟ್ಟೆ—ಎಬ್ಬಿಸಿ, ಓಡಿಸಿ; ೨೪. ನೋಂಪಿಗಳಂ—ವ್ರತಗಳನ್ನು; ಪಾರಿಸುವ — ಪಾರಣೆಮಾಡುವ; ಪ್ರಾಸುಕಮಾಗುತ್ತಿರ್ದ — ಜೀವರಹಿತವಾಗಿದ್ದ, ನಿರ್ಮಲವಾದ; ೫೭. ಕಾಱ್ಕಿಚ್ಚು ತಗುಳ್ದೊಡೆ—ಕಾಡಿನ ಕಿಚ್ಚು ಅಟ್ಟಿ ಬಂದರೆ,

೧೫೭. ೪: ಬಱ್ಬಿಬಂದು—ಕೆಳಕ್ಕೆ ಜಾರಿ ಬಂದು, “ಬಱಿಲ್ಚು—ಅಧಃ

ಪ್ರಂಸನೇ"; ೧೦. ಎಱಿಯನಪ್ಪೊಂ—ಒಡೆಯನಾಗಿದ್ದಾನೆ; ೧೮. ಅರಿದೆಂದು—ಅಸಾಧ್ಯವೆಂದು; ೧೯. ಪಾಂಗೆಲ್ಲಮಂ—ರೀತಿಯನ್ನೆಲ್ಲವನ್ನೂ; ೨೬. ಪೇರಡವಿಗೆ—ದೊಡ್ಡಕಾಡಿಗೆ;

೧೫೮. ೧: ಆಟಿಸಿ—ಬಯಸಿ, ಪ್ರೀತಿಸಿ; ೨. ಅವಳೋಕಿನೀ ವಿದ್ಯೆ—ದೂರದಲ್ಲಿ ನಡೆಯುವ ವಿದ್ಯಮಾನಗಳನ್ನು ತಿಳಿಸುವ ವಿದ್ಯೆ; ೫. ಕೊಱೆದಿಕ್ಕಿ—ಕತ್ತರಿಸಿ ಹಾಕಿ; ೭. ಅಗ್ಗಳದ ಸೂಳೆ—ಶ್ರೇಷ್ಠಳಾದ ದಾಸಿ; ೧೨. ಕಱ್ದಿಂಗಳೊಳ್—ಅಮಾವಾಸ್ಯೆಯಲ್ಲಿ; ೧೩. ಮಣಿಖೇಟಮುಂ—ರತ್ನಖಚಿತವಾದ ಗುರಾಣಿಯನ್ನು; ಸಾರ್ಚಿ—ಸೇರಿಸಿ; ಕಿಱ್ತುಬಾಳ್ವೆರಸು—ಒರೆಯಿಂದ ಕಿತ್ತ ಕತ್ತಿಯೊಡನೆ; ೧೫. ನೀನಾರ್ಗೆ—ನೀನು ಯಾರು?; ೨೩. ಪ್ರಸ್ತಾರಿಸಿ—ಪ್ರಸ್ತಾರ ಹಾಕಿ; ತಿರ್ದ್ದಿ—ಸರಿಮಾಡಿ, ತಿದ್ದಿ.

೧೫೯. ೨: ಬೆಸಕೆಯ್ವೆಂ—ಸೇವೆಮಾಡುತ್ತೇನೆ; ೯. ಸೋಂಕಿಲಂ—ಮಡಿಲನ್ನು, ಉಡಿಯನ್ನು; ೧೯. ನಿನಗೆ ಬಾಟಿಸ್ತಿಯಾದಂದು—ನಿನಗೆ ಬೇಕಾದಾಗ, ಕಾರ್ಯ ಒದಗಿದಾಗ; ೨೦. ಆದೆಸೆಯತ್ತ—ಆದಿಕ್ಕಿನ ಕಡೆಗೆ; ೨೬. ತಮ್ಮಿರ್ಪ್ಪೊರ್ವರಿಯೊಳಿರ್ದು—ತಾವು ಇರಬೇಕಾದ ಕೊಠಡಿಯಲ್ಲಿದ್ದು; ೨೯. ಈ ಭವದಿಂ ತೊಟ್ಟು—ಈ ಜನ್ಮದಿಂದ ಹಿಡಿದು;

೧೬೦. ೧: ಪೊಱ್ತಿಡೆ—ಹೊತ್ತಾರೆ; ೯೪. ಏಕಸ್ಥಿರಯೋಗಂಗೊಂಡು—ಏಕಾಕಿಯಾಗಿ ಚಲಿಸದೆ ನಿಂತು ತಪಸ್ಸುಮಾಡುವುದನ್ನು ಸ್ವೀಕರಿಸಿ; ಕಲ್ನೆಲೆ ನಿಂದರ್—ಕಲ್ಲು ನಿಲ್ಲುವಹಾಗೆ ನಿಂತರು; ೧೭. ಕರುಮಾಡದ—ಉಪ್ಪರಿಗೆಯ, ಸುಣ್ಣ ಬಣ್ಣ ಮಾಡಿದ ಮನೆಯ; ೨೦. ಕೌಟಿಲ್ಯಭಾವದಿಂ — ಕುಟಿಲವಾದ ಮನಸ್ಸಿನಿಂದ; ೨೧. ಮಹಾವಾತಂ — ದೊಡ್ಡ ವಾತರೋಗ; ತಗುಳ್ದುದು — ಅಂಟಿಕೊಂಡಿತು ೨೨. ಮದ್ದೇನ್—ಮದ್ದು ಏನು; ೨೪. ಚರಿಗೆವೋದರ್—ಭಿಕ್ಷಕ್ಕೆ ಹೋದರು; ೨೭. ಮಗುಱ್ದು ಬರ್ಪೊರ್—ಹಿಂದಿರುಗಿ ಬರುವವರು.

೧೬೧. ೧: ಪರಿಚ್ಛೇದಿಸಿ—ನಿಶ್ಚಯಿಸಿ; ೫. ಕಿಚ್ಚಿನುಪಸರ್ಗಮಂ—ಉರಿಯ ಉಪದ್ರವವನ್ನು; ೮. ಚತುರ್ವಿಧದೇವನಿಕಾಯಂ—ನಾಲ್ಕು ಬಗೆಯಾದ ದೇವತೆಗಳ ಸಮೂಹ; ಭವನವಾಸಿ, ವ್ಯಂತರ, ಜ್ಯೋತಿಷ್ಕ, ವೈಮಾನಿಕ ಎಂಬವರು. ೧೦. ಜಡಿದು ನುಡಿದೊಡೆ—ಗದರಿಸಿ, ಬಯ್ದು ಹೇಳಿದರೆ; ೧೧. ಒರ್ಮೆಗಂಗೆ—ಒಂದು ಸಲಕ್ಕೆ; ೧೫. ನೆಗೞ್ದಿಂ—ಮಾಡಿದನು, ಆಚರಿಸಿದನು; ೨೧. ಪ್ರತಿಬದ್ಧಂಗಳ್—ಅನುಬಂಧಗಳು.

## ೧೧. ಚಿಲಾತಪುತ್ರನ ಕಥೆ

೧೬೨. ೨: ಚಿಲಾತ <(ಸಂ) ಕಿರಾತ; ಚಿಲಾತಮಿತ್ರ ಎಂದು ಕಥಾಕೋಶದಲ್ಲಿದೆ; ೫. ಅರಿಯವಪ್ಪ ಏಱುಗಳಿಂದಂ—ಅಸಾಧ್ಯವಾದ ಗಾಯುಗಳಿಂದ; ೬. ಉರ್ಚೆಪಟ್ಟೊನಾಗಿ—ಭೇದಿಸಲ್ಪಟ್ಟವನಾಗಿ; ಕಟ್ಟಿಱುಂಪೆಗಳಿಂದಂ—ಕಟ್ಟಿರುವೆಗಳಿಂದ; ೭. ಒನಲಿಯವೊಲ್—ಜರಡೆಯಂತೆ; ೯. ಪೊರ್ದಿದೊಂ—ಹೊಂದಿದನು; ೧೬. ದುಷ್ಟಾಶ್ವ

ಮಂ—ತುಂಟಕುದುರೆಯನ್ನು ; ೧೭. ಪಂದಿಯ ಬಟ್ಟೆಯಂ—ಹಂದಿಯ ದಾರಿಯನ್ನು ; ತಗುಳ್ದೊಡೆ—ಬೆನ್ನಟ್ಟಿ ಹೋದರೆ; ಗಾಳಿಗೊಂಡು—ಗಾಳಿಯ ಮೂಲಕ ವಾಸನೆಯನ್ನು ತಿಳಿದು; ೧೮. ಸಾರೆ—ಹತ್ತಿರ; ೧೯. ಪಲ್ಲಣಮಂ—ಜೀನನ್ನೂ; (ಸಂ) ಪರ್ಯಾಣ; ಪಲ್ಯಾಣ, ಪಲ್ಯಯನ; ೨೦. ಚದುರಸಿಗೆಯುಮಂ—ನಾಲ್ಕು ಮೂಲೆಗಳುಳ್ಳ ವಸ್ತ್ರವನ್ನು, ಜೀನಿನ ಮೇಲೆ ಹಾಕುವ ಚತುಷ್ಕೋಣಗಳ ತಿವಾಸಿಯನ್ನು, (ಸಂ) ಚತುರಸ್ರಕ, "ಮುದದಿ ತಿಲಕವ ಹಣೆಯೊಳಿಟ್ಟು ಚದುರಸಿಗೆಯನು ಹಾಕಿ (ಸಿ)ದ" ಎಂದು ಪ್ರಯೋಗ; ಕೀಲುಮಂ—ಕಡಿವಾಣವನ್ನೂ; ಕಳೆದು—ತೆಗೆದುಹಾಕಿ; ನೀರೂಡಿ—ನೀರು ಕುಡಿಸಿ; ೨೨. ಚದುರಸಿಗೆಯಂ ಪಾಸಿ—ಚೌಕವನ್ನು ಹಾಸಿ; ಪಟ್ಟಿರ್ದಂ—ಮಲಗಿದ್ದನು;

೧೬೩. ಅರಸುಕುಲಂ—ಕ್ಷತ್ರಿಯವಂಶ; ಉಚ್ಚಾಟಿಸಿ ಕಳೆಯಪಟ್ಟೊನಾಗಿ—ಬುಡಸಹಿತ ಕಿತ್ತು ಅಟ್ಟಲ್ಪಟ್ಟವನಾಗಿ; ೪. ಕಾಪಿನವರುಂ—ರಕ್ಷಕರೂ; ೬. ಆಟಿಸಿ—ಪ್ರೀತಿಸಿ; ಬಸಮುಟ್ಟಿದು—ವಶತಪ್ಪಿ, ಪರವಶನಾಗಿ; ನೀಡುಮೊಲ್ದು—ಬಹಳ ಒಲಿದು; ೮. ನೊಂಟರಲ್ಲರ್ — ಬಂಧುಗಳಲ್ಲ; ೯. ಪೆಱಗಣಿಂದಂ—ಹಿಂದುಗಡೆಯಿಂದ; ೧೦. ತೇನತೇನದಿಂ—ಮೇಲೆ ಮೇಲಿಂದ; ೧೧. ತಂತ್ರಮೆಲ್ಲಂ—ಸೈನ್ಯವೆಲ್ಲ; ಪೞೆಯ—ಹರೆಯ, ತಂಬಟೆಯ; ೧೩. ಓಡಲೀಯದೆ—ಓಡುವುದಕ್ಕೆ ಬಿಡದೆ; ೧೪. ಸಂತವಿಸಿದೊಡೆ — ಸಮಾಧಾನಪಡಿಸಿದರೆ; ೧೫. ತೊವಲ್ಗಳುಮಂ — ಚರ್ಮಗಳನ್ನೂ; ೧೮. ಬಿರ್ದುಮಾಡಿ—ಔತಣಮಾಡಿ; (ತಮಿಳು) ವಿರುಂದು; ೨೨. ಸಾರ್ಥಾಧಿಪತಿ—ಸರಕುಗಳನ್ನು ತುಂಬಿದ ಬಂಡಿಗಳಿಗೆ ಯಜಮಾನನಾದ ವರ್ತಕ; ೨೩. ಪರದಿಂಗೆ—ವ್ಯಾಪಾರಕ್ಕೆ; ಬಿಟ್ಟಿರ್ದಂ—ತಂಗಿದ್ದನು; ೨೪. ಏಕವಿಹಾರಿಗಳ್—ಒಂಟಿಯಾಗಿ ಸಂಚರಿಸುವ ಜೈನಯತಿ; ೨೬. ಪಂಥಾತಿಚಾರಸಿಯುಮಂಗೆಯ್ದು—ದಾರಿಯಲ್ಲಿ ನಡೆಯುವಾಗ ಉಂಟಾಗುವ ಪ್ರಾಣಿಹಿಂಸೆ ಮುಂತಾದ ಅತಿಚಾರಗಳಿಗೆ ಪ್ರಾಯಶ್ಚಿತ್ತವನ್ನು ಮಾಡಿ;

೧೬೪. ೧: ಚರಿಗೆವೋಗಿ—ಭಿಕ್ಷಕ್ಕಾಗಿ ಹೋಗಿ; ಆರುಂ ನಿಱಿಸದಿರ್ದೊಡೆ—ಯಾರೂ ನಿಲ್ಲಿಸದಿದ್ದರೆ; ೩. ಪ್ರಾಸುಕಮಪ್ಪ—ಜೀವಜಂತುರಹಿತವಾದ; ೪. ಬರ್ದು—ಬಾಳಿ; ೬. ಪಳಿತೋಪಮ—ಒಂದು ಪಳಿತಕ್ಕೆ ಸಮಾನವಾದ, ಪಳಿತ ಎಂಬುದು ಒಂದು ದೊಡ್ಡ ಸಂಖ್ಯೆ;

ವೃ || ಮದ್ಯಾಂಗ—ಮದ್ಯವನ್ನು ಕೊಡುವ ಕಲ್ಪವೃಕ್ಷ, ತೂರ್ಯಾಂಗ—ವಾದ್ಯಗಳನ್ನು ಕೊಡುವ ಕಲ್ಪವೃಕ್ಷ, ವಿಭೂಷಣಾಂಗಾಃ—ಆಭರಣವನ್ನು ಕೊಡುವ, ಜ್ಯೋತಿರ್ಗೃಹಾಭೋಜನ ಭಾಜನಾಂಗಾಃ—ದೀಪವನ್ನು, ಮನೆಯನ್ನು, ಭೋಜನವನ್ನು, ಪಾತ್ರೆಗಳನ್ನು ಕೊಡುವ, ಪ್ರದೀಪ—ಪ್ರಕಾಶಮಾನವಾದ, ವಸ್ತ್ರಾಂಗವರಸ್ರಜಾಂಗಾಃ—ವಸ್ತ್ರವನ್ನೂ ಹೂವಿನ ಹಾರವನ್ನೂ ಕೊಡುವ, ದಶಪ್ರಕಾರಾಃ—ಹತ್ತು ತೆರನಾದ, ತರವಃ—ಮರಗಳೂ, ತತ್ರ—ಆ ಭೋಗಭೂಮಿಯಲ್ಲಿ, ಅಸ್ತು—ಇರುತ್ತವೆ.

೧೪. ಬಚ್ಚಿ—ಕೆಳಕ್ಕೆ ಜಾರಿ; ೨೨. ತುಯ್ಯಲಂ—ಪಾಯಸವನ್ನು, "ಕಾಬೃೆಕ್ಕಿ ಗೂಡುವ ವೊಲ್ ತುಯ್ಯಲಂ" ಎಂದು ಜನ್ನನ ಪ್ರಯೋಗವಿದೆ;

೧೬೫. ೨: ಜಯನಶಾಲೆಯುಮಂ—ಆಯುಧಾಗಾರವನ್ನು, "ಮನಸಿಜ ಭೂವಿ ಭೃಜ್ಜಯನಶಾಲೆಯ ಲೀಲೆಯಿನೊಪ್ಪಿ ತೋಱುಗುಂ" ಎಂದು ದುರ್ಗಸಿಂಹನ ಪ್ರಯೋಗ (ಪಂಚತಂ ಪು. ೧೪-೬೩), ಜೇನಶಾಲೆ ಎಂಬ ರೂಪವೂ ಉಂಟು; ೫. ಎಮ್ಮ ಬಾೞುತ್ತಿರೆ—ನಾವು ಬದುಕಿರಲು; ಎಮ್ಮರಸಿಂಗಾಟಿಸಿದಯ್—ನಮ್ಮ ದೊರೆತನಕ್ಕೆ ಬಯಸಿದೆ; ೧೨. ಉಱದೆ—ಹೊಂದಿಕೊಳ್ಳದೆ, ಲಕ್ಷ್ಯಮಾಡದೆ; ೧೬. ಸೆಱೆಯಂ ಬರ್ದುಂಕಿಸಿ—ಬಂದಿಯನ್ನು ಬಿಡುಗಡೆ ಮಾಡಿ; ೧೯. ಘೋಸಣೆಯಂ—ಡಂಗುರವನ್ನು; ೨೧. ಒಸಗೆಯಂ—ಬಯಸಿದ ಮೆಚ್ಚನ್ನು;

೧೬೬. ೧: ತಂತ್ರಂ ಬೆರಸು—ಸೈನ್ಯಸಮೇತನಾಗಿ; ಚರಪುರುಷರಂ—ದೂತರನ್ನು; ಪಾೞೆವೋಗಿ—ದಂಡೆತ್ತಿ ಹೋಗಿ; ೬. ಸಯ್ತು—ನೇರಾಗಿ, ಮುಚ್ಚುಮರೆಯಿಲ್ಲದೆ; ೮. ಎಱತನಿಗರ=ಎಱೆತನಿಗರ—ಪ್ರಭುತ್ವವನ್ನುಳ್ಳವರ, ೯. ಬಗ್ಗಿಸಿಯುಂ—ಬೈದೂ, ಒಟ್ಟೈಯಿಸಿಯುಂ—ಕೂಡಿಯೂ; ೧೧. ಬಟ್ಟು—ಬಾಳಿ; ಇಂತಪ್ಪಗೊಡ್ಡಮಂ—ಇಂಥ ಚೇಷ್ಟೆಗಳನ್ನು—(ಪ್ರಾ. ದೇ. ಕೋಡ್ಡ—ಆಶ್ಚರ್ಯ, ಕೌತುಕ); ಆಡಲ್ ಸಲ್ಲ—ಆಡಲು ಸಲ್ಲದು; ೧೨. ಬಾರಿಸಿದೊಡೆ—ತಡೆದರೆ; ಉೞಿಯದೆ—ಬಿಡದೆ; ೧೬. ಕೆಲ ದೂರ್ಗಳಂ—ಮಗ್ಗುಲ ಊರುಗಳನ್ನು; ಒಟ್ಟೈಯಿಸಿಯುಂ—ಗೆದ್ದು ಸೇರಿಸಿಕೊಳ್ಳುತ್ತ; ೨೧. ನೆಗೞ್ದು—ಆಚರಿಸಿ;

೧೬೭. ೧: ಕಿಱಿಯಂದೆ—ಚಿಕ್ಕಂದಿನಂದೇ; ೩. ಮೊಗವಡಂಗವಿದಿರ್ದ—ಮುಖವಾಡವನ್ನು ಹಾಕಿಕೊಂಡಿದ್ದ; ಕೂಸಂ—ಕನ್ಯೆಯನ್ನು; ೪. ಕೀಱು—ಕೂಗಿ ೫. ಪುಯ್ಯಲಿಟ್ಟೊಡೆ—ಹುಯ್ಯಲು ಹೇಳಿದರೆ, ದೂರು ಹೇಳಿದರೆ; ೮. ಬೞಿಯನೆ—ಹಿಂದೆ ಹಿಂದೆಯೇ; ತಗುಳ್ವರ್—ಅಟ್ಟಿಸಿಕೊಂಡು ಹೋಗುತ್ತಾರೆ; ಪಾಂಗಿಲ್ಲದೆ—ತೆರ ಪಿಲ್ಲದೆ, ಅವಕಾಶವಿಲ್ಲದೆ;

*ಗಾಹೆ॥ ಜಂ—ಯಾವುದನ್ನು, ಇಚ್ಛಸಿ—ಇಷ್ಟಪಡುವೆಯೋ, ತಂ—ಅದು, ಣಂತಂ—ಅನಂತವಾದದ್ದು; ಪುಣ—ಮತ್ತೆ, ಜಂ—ಯಾವುದನ್ನು, ಣೇಚ್ಛಸಿ—ಇಷ್ಟ ಪಡುವುದಿಲ್ಲವೋ, ತಂ—ಅದು, ತುಂ ಅಪ್ಪಂ—ನಿನಗೆ ಅಲ್ಪವಾದದ್ದು; ಪುರುಸಸೀಹ—ಪುರುಷ ಸಿಂಹನೇ, ಸಂಸಾರ ಮಹಣ್ಣವಂ—ಸಂಸಾರವೆಂಬ ಮಹಾಸಾಗರವನ್ನು, ತಂ—ಅದನ್ನು, ತರಿದುಂ—ದಾಟುವುದನ್ನು, ಇಚ್ಛಸು—ಅಪೇಕ್ಷಿಸು.

೧೬. ಅಭಾವಿದಂ ಭಾವೇಮಿ—ಆಗದಿರುವುದನ್ನು ಭಾವಿಸುತ್ತೇನೆ, ಭಾವಿದಂ ಭಾವೇಮಿ—ಆಗುತ್ತಿರುವುದನ್ನು ಭಾವಿಸುತ್ತೇನೆ; ೧೯. ಸವ್ವಂ ಸಾವಜ್ಜ ಜೋಗಂ ವಿರದೋಮ್ಹಿ—ಸಕಲ ಸಾವದ್ಯ (ದೋಷಯುಕ್ತವಾದ) ಯೋಗದಿಂದ ವಿರತನಾಗಿದ್ದೇನೆ; ೨೨. ಪೆಱಗಣಿಂ—ಹಿಂದಿನಿಂದ; ೨೪. ಬೆಸನೇನ್—ಕೆಲಸವೇನು? ೨೫. ಒಳ್ಳಿಕೆಯ್ದಂ—ಒಳ್ಳೆಯದನ್ನು ಮಾಡಿದನು; ೨೬. ಪೞಿಯುಂ ಪೊಲ್ಲಮೆಯು

ಮಂ—ನಿಂದೆಯನ್ನೂ ಕೇಡನ್ನೂ ; ನೀಗಿದಂ—ಕಳೆದುಕೊಂಡನು ;

೧೬೮. ೪ : ಪಗೆಯಂ—ದ್ವೇಷವನ್ನು ; ಪರ್ದಿನ ರೂಪಂ—ಹದ್ದಿನ ಆಕಾರವನ್ನು ; ೫. ಪೆರ್ದಲೆಯ ಕಟ್ಟಿಱುಂಪೆಗಳ್—ದೊಡ್ಡ ತಲೆಯ ಕಟ್ಟಿರುವೆಗಳು ; ೬. ಉರ್ಚ್ಚಿಯುಂ—ಬಗಿದೂ ; ಸಟ್ಟುಗದಂತೆ—ಸೌಟಿನಂತೆ ; ಬಳಸಿಯುಂ—ತೊಳಸಿಯೂ ; ೮. ಮುಡಿಪಿ—ಸತ್ತು ; ೧೩. ಅಪವರ್ಗ—ಮೋಕ್ಷ.

## ೧೬. ದಂಡಕನೆಂಬ ರಿಸಿಯ ಕಥೆ

೧೬೯. ೬ : ಕೂರಿದವಪ್ಪ ಹರಿತವಾದ, ಮೊನಚಾದ; ಅಂಬುಗಳಿಂದಂ—ಬಾಣಗಳಿಂದ ; ೭. ತೀವೆಪಟ್ಟ—ತುಂಬಿದ ; ೧೬. ಕೂಸು—ಮಗಳು ; ೧೭. ಆದಮಾನುಂ—ವಿಶೇಷವಾಗಿ ; ೨೦. ಬಂದಿಸಲ್ವೇಂದು—ವಂದಿಸಬೇಕೆಂದು ; ೨೧. ಸಮವಸರಣ—ಜಿನೋಪದೇಶ ಸಭೆ ; ೨೩. ಅಭಿಮುಖನಾಗಿರ್ದು—ಎದುರಾಗಿ ನಿಂತುಕೊಂಡಿದ್ದು ;

೧೭೦. ೨ : ತಮ್ಮಿರ್ಪ್ಪೋವರಿಯೊಳ್—ತಾವು ಇರಬೇಕಾದ ಕೋಣೆಯಲ್ಲಿ ಓವರಿ <(ಸಂ) ಅಪವರಕ; ೪. ನೆರಪಿದಂ—ಕೂಡಿಸಿಕೊಂಡನು ; ೧೦. ತೀವ್ರ ; ಲೋಭಮೊನ್—ಅತ್ಯಂತ ದುರಾಶೆಯುಳ್ಳವನು ; ೧೧. ಆರಂಭದ—ವ್ಯವಸಾಯದ ; ಕೆಯ್ಗಳಂ—ಹೊಲಗದ್ದೆಗಳನ್ನು ; ಒಕ್ಕುವ—ಒಕ್ಕಣೆಮಾಡುವ ; ಎಱ್ತುಗಳ—ಎತ್ತುಗಳ ; ೧೨. ಅಡುವ ಬಡ್ಡಿಸುವ ಬೆಸಕೆಯ್ವ—ಅಡಿಗೆಮಾಡುವ, ಬಡಿಸುವ, ಚಾಕರಿ ಮಾಡುವ ; ೧೪. ಪೆರ್ವರದುಂ—ದೊಡ್ಡ ವ್ಯಾಪಾರವೂ ; ೧೬. ವೇದನಾಭಿಭೂತನಾಗಿರ್ಪನ್ನೆಗಂ—ನೋವಿನಿಂದ ಪೀಡಿಸಲ್ಪಟ್ಟವನಾಗಿರುತ್ತಿರಲು ; ೧೭. ಮರ್ದುವೆರಸಿ—ಮದ್ದಿನಿಂದ ಕೂಡಿ; ಅಟ್ಟಕೂಱಂ—ಬೇಯಿಸಿದ ಅನ್ನವನ್ನು ; ೨೧. ಶಿರೋರೋಗಮುಂ ಮುಖರೋಗಮುಂ—ತಲೆಯ ರೋಗವೂ ಮುಖದ ರೋಗವೂ ; ಕೆಟ್ಟತ್ತು—ನಾಶವಾಯಿತು ; ೨೪. ನಾರಕನಾಗಿ—ನರಕಜೀವಿಯಾಗಿ ;

ಗಾಹೆ ॥ ಪುಟ ೧೨೬ ನೋಡಿ.

೧೭೧. ೬ : ಓದುಗಳೆಲ್ಲಮುಂ—ಎಲ್ಲಾ ಶಾಸ್ತ್ರಗಳನ್ನು ; ೮. ಊಱುತ್ತು ನಿಱಿಸಿದೊಡಂ—ಬಲಾತ್ಕಾರವಾಗಿ ನಿಲ್ಲಿಸಿದರೂ ; ೯. ಛರ್ದಿಯಕ್ಕುಂ—ವಾಂತಿಯಾಗುತ್ತದೆ ; ಅಲಾಭಮಕ್ಕುಂ—ಭಿಕ್ಷೆ ಸಿಕ್ಕುವುದಿಲ್ಲ ; ೧೨. ಒಟ್ಟಯಿಸೆ ಪಟ್ಟನಾಗಿ—ಒಂದುಗೂಡಿದವನಾಗಿ, ಪೀಡಿಸಲ್ಪಟ್ಟವನಾಗಿ ; ೧೭. ವೈಯಾಪೃತ್ಯಂ ಗೆಯ್ವುದರ್ಕೆ—ಉಪಚಾರ ಚಿಕಿತ್ಸಾದಿಗಳನ್ನು ಮಾಡಿದುದಕ್ಕೆ ; ೧೮. ಅಱ್ಱಿಯೊಡೆಯನಾಗಿ—ಪ್ರೀತಿಯುಳ್ಳವನಾಗಿ ; ೧೯. ದೇಹಾರದೊಳ್—ಮನೆಯಲ್ಲಿರುವ ದೇವರ ಕೋಣೆ ; ಕೊಠಡಿ, (ಸಂ) ದೇವಗೃಹ > ದೇವಘರ > ದೇಹಾರ ; ೨೧. ವಿಷ್ಣುವ—ವಿಷ್ಣುವಿನ ; ೨೩. ಕುತ್ತಮಂ—ರೋಗವನ್ನು ; ತೀರ್ಚು—ಪರಿಹರಿಸು ; ೨೪. ಪಿಟ್ಟನೊಳ್—ಹಿಟ್ಟಿನಲ್ಲಿ ; ೨೫. ಮರ್ದನೂಡಿದಂ—ಔಷಧವನ್ನು ತಿನ್ನಿಸಿದನು ; ೨೬. ಉಂಡೆಯ ಪರ್ವಂ—ಉಂಡೆಯ ಹಬ್ಬ ; ೨೭. ಇಂಬುಮಾಡಿ—ವಾಸಿಮಾಡಿ, ಲೇಸುಮಾಡಿ ; ೨೮. ಉದ್ಯೋಗ

ಪರನಪ್ಪುದಱಿಂ—ಕಾರ್ಯಾಸಕ್ತನಾಗಿರುವುದರಿಂದ;

೧೭೨. ೨: ಪಾವಿನ ಪೆರೆ—ಹಾವಿನ ಪೊರೆ; ಸುಲಿವಂತೆ—ಸುಲಿದುಹೋಗುವಂತೆ; ೬. ಕಾಲಂಗೆಯ್ದು—ಸತ್ತು; ೭. ಕೋಡಗವಾಗಿ—ಕೋತಿಯಾಗಿ; ೧೧. ನಿಂದಣ ಗರುಹಣೆಗೆಯ್ದು—ನಿಂದನೆಗರ್ಹಣೆಗಳನ್ನು ಮಾಡಿ; ೧೪. ಸ್ವಾಧ್ಯಾಯಂ ಗೆಯ್ಯುತ್ತಿರ್ದರ್—ಶಾಸ್ತ್ರಪಠನಮಾಡುತ್ತಿದ್ದರು; ೧೫. ಓರಂತಾಗುತ್ತಿರ್ದ—ಸಮಾನವಾಗುತ್ತಿದ್ದ; ೧೬. ಉರ್ಚಿಪೋಗೆ—ಸೀಳಿಕೊಂಡು ಹೋಗುವಂತೆ; ೧೮. ಬಾಬ್ತಿಯಲ್ತು—ಪ್ರಯೋಜನವಿಲ್ಲ; ಎನ್ನದು—ನನ್ನ ಮೈಯನ್ನು, ಏವೆನ್—ಏನು ಮಾಡುವೆನು?; ೨೫. ಬರ್ದುಂಕಿ—ತಪ್ಪಿ;

೧೭೩. ೩: ಸಿತಾತಪತ್ರ—ಬಿಳಿಯ ಕೊಡೆ; ೬. ತನ್ನೊಡಲಮಂ—ತನ್ನ ದೇಹವನ್ನು; ೧೧. ಪಲವು ಸೂಬ್—ಹಲವು ಬಾರಿ; ೧೪. ಮಗುಟ್ದುಬಂದು—ಹಿಂದಿರುಗಿ ಬಂದು; ೧೫. ಅವಱಿಂ—ಆ ಬಾಣಗಳಿಂದ; ಶರಸಂಘಾತಂಗಳಿಂದಂ—ಬಾಣಗಳ ಸಮೂಹಗಳಿಂದ; ೨೩. ನೆಗೞ್ತಿಯುಂ—ಆಚರಣೆಯನ್ನು, ಕಾರ್ಯವನ್ನು;

೧೭೪. ೬: ಮೂವಳಸಂ—ಮೂರು ಬಳಸನ್ನು, ಸುತ್ತನ್ನು; ತಗುಳ್ದು—ವ್ಯಾಪಿಸಿ, ಹಿಂದೆ ಬಂದು; ಜಾವಜ್ಜೀವಂ—ಜೀವವಿರುವವರೆಗೆ, ಘಾತಿಕರ್ಮಂಗಳಂ—ನಾಲ್ಕು ಬಗೆಯಾದ ಘಾತಿಕರ್ಮಗಳನ್ನು ಎಂದರೆ ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ ಮೋಹನೀಯ ಎಂಬ ನಾಲ್ಕು ಬಗೆಯ ಕರ್ಮಗಳನ್ನು; ೮. ಅಂತರ್ಗತ ಕೇವಲಿಯಾಗಿ—ಅಂತರ್ಗತವಾದ ಕೇವಲ ಜ್ಞಾನವುಳ್ಳವನಾಗಿ; ೯. ಎಂಟು ಕರ್ಮಂಗಳಂ—೪ ಘಾತಿಕರ್ಮ, ೪ ಅಘಾತಿಕರ್ಮ ಒಟ್ಟು ೮. ೧೦. ಕ್ಷಪಣಕರುಂ—ಜೈನ ಸಂನ್ಯಾಸಿಗಳೂ; ಉಪಸರ್ಗಮುಮಂ—ಹಿಂಸೆ, ತೊಂದರೆ ಉಪದ್ರವಾದಿಗಳನ್ನೂ;

## ೧೭. ಮಹೇಂದ್ರದತ್ತಾಚಾರ್ಯರ್ ಮೊದಲಾದ ಅಯ್ನೂರ್ವರ್ ರಿಸಿಯರ್ಕಳ ಕಥೆ

೧೭೫. ೧೧: ಪಿಱಿಯೆಪಟ್ಟರಾಗಿಯುಂ—ಹಿಂಡಲ್ಪಟ್ಟವರಾಗಿಯೂ; ೧೬. ಕಿಱಿಯೊಳ್—ಕಿರಿಯಳು; ೧೭. ಕೊಟ್ಟುದು—ಕನ್ಯಾದಾನವಾಗಿ ಕೊಟ್ಟಿತು; ೨೧. ತಪಂಬಟ್ಟು—ತಪಸ್ಸನ್ನು ಸ್ವೀಕರಿಸಿ; ೨೩. ಬರ್ಪೊರ್—ಬರುವವರು; ೨೪. ಆಳ್ವೊಂ—ಆಳುವವನು.

೧೭೬. ೨: ವಾದುಗೆಯ್ದು—ವಾದಮಾಡಿ; ೪. ಪೆತ್ತಿರ್ಪನ್ನೆಗಂ ಪಡೆದಿರುತ್ತಿರಲು; ೭. ಬಿಚ್ಚುವರ್ಗೆ—ಭಿಕ್ಷುಗಳಿಗೆ, ಎಂದರೆ ಜೈನಯತಿಗಳಿಗೆ; ೧೫. ಪರಿವಿಡಿಗೆಯ್ದುದಂ—ಅನುಕ್ರಮವಾಗಿ ಪಠಿಸಿದ್ದನ್ನು; ೧೬. ಸಾರೆ—ಸಮೀಪದಲ್ಲಿ; ೧೮. ಅರಸುಮಕ್ಕಳೆ—ಕ್ಷತ್ರಿಯ ಕುಮಾರರೇ; ೨೦. ಬಿಡದೆ—ತಪ್ಪದೆ; ೨೬. ಪೊಲ್ಲದೊರಾರಾನುಂ—ಕೇಡಿಗರು ಯಾರಾದರೂ;

೧೭೭. ೨: ಕೆಮ್ಮಗಿರ್ದಂ—ಸುಮ್ಮನಿದ್ದನು; ೪. ಪುಡುಕೆಗಳಂ—ಪೆಟ್ಟಿಗೆಗಳನ್ನು,

ಭರಣಿಗಳನ್ನು ; ಪೋಱ್ದು—ಹೋಳುಮಾಡಿ ; ದ್ರಮ್ಮಮುಂ—ದ್ರಮ್ಮಗಳೆಂಬ ನಾಣ್ಯಗಳೂ ; ತುಡುಗೆಗಳುಮಂ — ಒಡವೆಗಳನ್ನೂ ; ೫. ಉಗುತ್ತಂ — ಸುರಿಯುತ್ತ ; ಕೋಣೆಯೊಳ್—ಕೊಠಡಿಯಲ್ಲಿ ; ಒಟ್ಟಿ—ರಾಶಿಮಾಡಿ ; ಪೊೞ್ತಿಡೆ—ಹೊತ್ತಾರೆ ; ೧೧. ಸಾರಬೀದಿಯಾಗಿಯುಂ—ಬೀದಿಯುದ್ದಕ್ಕೂ, ಕಟ್ಟಿಕಟ್ಟಿದಹಾಗೆ (?) ; ಉಗುತ್ತಂ—ಸುರಿಯುತ್ತ ; ೧೨. ಕಳ್ಳದಿರಿಂ— ಕದಿಯದಿರಿ ; ೧೬. ಕಜ್ಜಮಂ ಸಮಕಟ್ಟಿ—ಕಾರ್ಯವನ್ನು ಏರ್ಪಡಿಸಿ ; ಬೂತಿಂಗೆ—ಭೂತಕ್ಕೆ ಎಂದರೆ ಯಾವನೋ ಒಬ್ಬನಿಗೆ ; ದ್ರಮ್ಮಮನಾನ್ತು—ದ್ರಮ್ಮಗಳನ್ನು ಹೊರಿಸಿ ಎಂದರೆ ಕೊಟ್ಟು ; ೧೭. ಕಿರಿಸಿ—ಬೋಳಿಸಿ, "ಕಿರಿ—ವಪನೇ" ; ಕರಿಯ ಕೋವಣಮಂ— ಕಪ್ಪು ಕೌಪೀನವನ್ನು ; ಕವಡಿಕೆಯುಂ—ಸಣ್ಣ ಕವಡೆಗಳನ್ನು ; ೧೮. ಕುಂಚಮಂ—ನವಿಲುಗರಿಯ ದೊಂದೆಯನ್ನು ; ೧೯. ತೆಗೞುತ್ತಂ—ನಿಂದಿಸುತ್ತ, ಬಯ್ಯುತ್ತ ; ಕಲ್ಪಿಸಿದಂ— ಕಲಿಸಿದನು ; ೨೦. ಆ ಬೂತುಂ—ಆ ದುಷ್ಟಮನುಷ್ಯನೂ ; ೨೨. ನಮೋಸ್ತು—ನಮಸ್ಕಾರ ; "ನಮೋಸ್ತುಗಳೆಂದು ಸವಣರ್ಗೆ ಪೆಸರಾಯ್ತು", ಸವಣರೇ, ಜೈನಯತಿಗಳೇ ; ೨೩. ಬೇಂಟಂಗೊಂಡು— ಪ್ರೇಮವನ್ನು ಹೊಂದಿ ; ೨೫. ಸವಣರ ಗೊಡ್ಡಮಂ—ಸವಣರ ಚೇಷ್ಟೆಯನ್ನು ; ೨೬. ನೆಱೆದು—ಸಮರ್ಥರಾಗಿ ;

೧೭೮. ೨ : ಗೊಡ್ಡಮಾಡುವುದಂ—ಚೇಷ್ಟೆಯಾಡುವುದನ್ನು ; ಬರ್ದುಂಕಲಿತ್ತಪ್ಪೊರಿಲ್ಲ—ಬದುಕಲು ಅವಕಾಶವನ್ನು ಕೊಡುವವರಲ್ಲ ; ೩. ಮುನ್ನ ಕೞಿದ—ಮುಂಚೆ ಆಗಿಹೋದ; ೬. ಪಿೞಿದು—ಹಿಂಡಿ ; ೧೧. ಕೆಯ್ಮಿಗೆ ಮಿಱಿಮಿಱಿರಲು, ಕೈಮಿಱಿರಲು ; ತೇಜೋಋದ್ಧಿ—ತೇಜಸ್ಸಿನ ಸಿದ್ಧಿ, ಏಳಿಗೆ ; ಘನರವದಿಂ—ಗುಡುಗಿನ ಶಬ್ದದಿಂದ ; ೨೬. ಕೊಂಕನಾಗಿ—ವಕ್ರನಾಗಿ ;

೧೭೯. ೨ : ತ್ರಸಸ್ಥಾವರಂಗಳೊಳ್—ಚಲನ ಮತ್ತು ಚಲನವಿಲ್ಲದ ಜೀವಿಗಳಲ್ಲಿ ; ೩. ನೀಡೆಱಿಂದೆ—ದೀರ್ಘಕಾಲದಿಂದ ; ಎತ್ತಾನುಂ—ಎಲ್ಲಿಯಾದರೂ ; ೫. ಪೆತ್ತು—ಪಡೆದು ; ಪಂಚನಮಸ್ಕಾರದೊಳ್—ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು—ಇವರಿಗೆ ಮಾಡುವ ಅಯ್ದು ನಮಸ್ಕಾರಗಳು ; ೬. ಭವ್ಯರ್ಕಳ್—ಭವ್ಯಜನರು ; ೭. ಮೊದಲಾಗೊಡೆಯು—ಮೊದಲಾಗುಳ್ಳ ; ಪಿೞಿಸಿ—ಹಿಂಡಿಸಿ ; ಅಪವರ್ಗ—ಮೋಕ್ಷ.

## ೧೮. ಚಾಣಾಕ್ಯರಿಸಿಯ ಕಥೆ

೧೮೦. ೫ : ತುಱುಪಟ್ಟಿಯೊಳ್—ಆಕಳ ಹಟ್ಟಿಯಲ್ಲಿ ; ೬. ಗೊಬ್ಬರದೊಳ್—ಆಕಳ ಸೆಗಣಿಯಲ್ಲಿ, ಪ್ರಾ. ಗೊಪ್ವರ—ಗೋವರಂ—ಕರೀಸಮ್ಮಿ ಎಂದು ಹೇಮಚಂದ್ರ, ಒಣಸೆಗಣಿ, ಬೆರಣಿ ಎಂದರ್ಥ ; ಉರಿಪೆಪಟ್ಟುದಾಮೊಡೆ—ಉರಿಸಲ್ಪಟ್ಟದ್ದಾದರೆ, ಪೊರ್ದಿದೊಂ—ಪಡೆದನು ; ಉತ್ತಮಮಂ ಅಟ್ಟಂ—ಪರಮಪುರುಷಾರ್ಥವನ್ನು ಎಂದರೆ ಉತ್ತಮಗತಿಯನ್ನು; ೧೩. ನಂದವಂಶದೊಂ—ನಂದವಂಶದವನು ; ೧೮. ಕಣ್ಬೇಟಂ

ಗೊಂಡು—ಚಕ್ಷುಪ್ರೀತಿಯನ್ನು ಹೊಂದಿ, ನೋಡಿದ ಕೂಡಲೇ ಪ್ರೇಮಿಸಿ; ಬಾೞ್ವೆಂ—ಸುಖವಾಗಿ ಬದುಕುತ್ತೇನೆ; ಎಂಬ ಬಗೆಯಿಂದಂ—ಎನ್ನುವ ಎಣಿಕೆಯಿಂದ; ೧೯. ಮೇಗೇೞ್ವಂತಿರೆ—ಮೇಲೆ ದಂಡೆತ್ತಿ ಬರುವಹಾಗೆ; ೨೦. ಸಾರಮಪ್ಪ—ಬೆಲೆ ಬಾಳುವ; ದ್ರವ್ಯಮಂ—ವಸ್ತುಗಳನ್ನು; ಮಡಗಿ—ಬಚ್ಚಿಟ್ಟು; ೨೧. ಉಚ್ಚವಿಗ್ರಹ ದೊಳ್—ದೊಡ್ಡ ಯುದ್ಧದಲ್ಲಿ, ಭಾರಿ ಹೋರಾಟದಲ್ಲಿ; ೨೨. ಬಯ್ಗಿರುಳಿನ ಜಾವ ವಾಗಳ್—ಮುಂಜಾನೆಯ ಹೊತ್ತಿನಲ್ಲಿ; ೨೩. ಗುಂಡಿತಪ್ಪುದು—ಆಳ ವಾಗಿರುವುದು, "ಆದಲೆ ನೀರ್ ಗುಂಡಿತ್ತೆಂದೀ ದಲೆಯೊಳೆ" ಎಂದು ಪಂಪನ ಪ್ರಯೋಗ (ಪಂಪ ಭಾ.; ೫-೬೨); ನಾಡೆ ಕೆಸಱನೊಡೆಯ—ಅಧಿಕವಾಗಿ ಕೆಸರ ನ್ನುಳ್ಳ; ಪೞವಾವಿಯ ತಡಿಯೊಳ್—ಹಳೆ ಬಾವಿಯ ದಡದಲ್ಲಿ; ೨೫. ಪೂಗೊಯ್ವ— ಹೂವನ್ನು ಬಿಡಿಸುತ್ತಿದ್ದ, ಕೊಯ್ಯುತ್ತಿದ್ದ;

೧೪೧. ೧: ಪಾಯ್ದೋಡುವ—ಮುಂದಕ್ಕೆ ನುಗ್ಗಿ ಓಡುವ; ಭರದಿಂ—ವೇಗ ದಿಂದ; ೨. ಆದಮಾನುಂ—ವಿಶೇಷವಾಗಿ;

ಶ್ಲೋಕ॥ ಇಯಂ—ಈ, ಶಾಖಾ—ಮರದ ಕೊಂಬೆ, ಯೇನ—ಯಾವ, ವಾನರೇಣ—ಕಪಿಯಿಂದ, ವಾ—ಅಥವಾ, ನರೇಣ—ಮನುಷ್ಯನಿಂದ, ಕಂಪಿತಾ—ಅಲುಗಿಸ ಲ್ಪಟ್ಟಿತೋ, ವರ್ಷಸಹಸ್ರಾಂತಾತ್ ಅಪಿ,—ಸಾವಿರವರ್ಷಗಳ ಅಂತ್ಯದವರೆಗಾದರೂ, ಮದ್ದೋಷಂ—ನನ್ನ ತಪ್ಪನ್ನು, ಕಥಯಿಷ್ಯತಿ—ಹೇಳುತ್ತದೆ.

೫. ನೇಸಮ್ಮೂಡಿದೊಡೆ—ಸೂರ್ಯೋದಯವಾದರೆ, "ಣೇಸರೋ ರವಿಃ" ಎಂದು ಹೇಮ ಚಂದ್ರ, ಈ ಶಬ್ದ ದ್ರಾವಿಡದಿಂದ ಪ್ರಾಕೃತಕ್ಕೆ ಎರವಲು; ೬. ಓಲಗಕ್ಕೆ—ಆ ಸ್ಥಾನಕ್ಕೆ; ೭. ಎಲ್ಲಾ ಮೋಳಿಯುಂ—ಎಲ್ಲಾ ಸಾಲುಗಳನ್ನೂ; ಅಱಸಿಯಱಸಿ— ಹುಡುಕಿ ಹುಡುಕಿ; ಕೃತಕ ದುಃಖಮಂ—ಸುಳ್ಳು ದುಃಖವನ್ನು; ೧೧. ಮಱೆವಾೞು ತ್ತಿರ್ಕುಂ—ರಹಸ್ಯವಾಗಿ ಸುಖವಾಗಿರುತ್ತಿದ್ದನು; ೧೩. ಅಱಿಯದಿರ್ಕುಮೆ—ತಿಳಿಯ ದಿರುವನೆ; ೧೪. ಆರಯ್ವೆಂ—ಹುಡುಕುತ್ತೇನೆ; ಮಣಿಖೇಟಮನುರದೊಳಮರ್ಚಿ— ರತ್ನಖಚಿತವಾದ ಗುರಾಣಿಯನ್ನು ಎದೆಯಲ್ಲಿ ಸೇರಿಸಿಟ್ಟುಕೊಂಡು; ೧೮. ವಿಯೋಗ ದಿಂ—ಸಾವಿನಿಂದಾದ ಅಗಲಿಕೆಯಿಂದ; ಸಾಭಿಪ್ರಾಯ ಸಂಬಂಧಮಪ್ಪ—ವಿಶೇಷಾರ್ಥದ ಸಂಬಂಧವುಳ್ಳ;

ಶ್ಲೋಕ॥ ನೀಲೋತ್ಪಲದಳ ಶ್ಯಾಮೇ—ಕನ್ನೆಯ್ದಿಲ ಎಸಳಿನಂತೆ ಶ್ಯಾಮಲ ವಾಗಿರುವವಳೇ, ನೀಲಸರೋರುಹೇ—ನೀಲಿಬಣ್ಣದ ತಾವರೆಯೇ, ಬಾಲೇ—ಬಾಲೆಯೇ, ಭದ್ರೇ—ಮಂಗಳಾಂಗಿಯೇ, ತ್ವದ್ಗುಣೈಃ—ನಿನ್ನ ಗುಣಗಳು ಕಾರಣವಾಗಿ, ಅಹಂ— ನಾನು, ದಹ್ಯೇ—ಸಂತಾಪಪಡುತ್ತಿದ್ದೇನೆ; ವಿಶ್ವಂ—ಪ್ರಪಂಚವು ಅಥವಾ ವಿಶ್ವಸೇನನು, ಶಾಖೇನ—ಮರದ ಕೊಂಬೆಯಿಂದ, ಕಂಪಿತಾ—ನಡುಗಿಸಲ್ಪಟ್ಟಿತು ಅಥವಾ ಪಟ್ಟನು. ೨೨. ಈ ವಾಕ್ಯಾರ್ಥಮಂ—ಈ ವಾಕ್ಯದ ಅರ್ಥವನ್ನು; ೨೪. ಬೞಿಯಟ್ಟಿ—ದೂತ ನನ್ನು ಕಳುಹಿಸಿ;

೧೮೨. ೧ : ಪಿಡಿಪೆತ್ತು—ಹಿಡಿತಕ್ಕೆ ಸಿಕ್ಕಿ, ಗ್ರಸ್ತನಾಗಿ ; ೪. ಎತ್ತಾನುಂ—ಎಲ್ಲಿ ಯಾದರೂ ; ೫. ಪಾಯ್ದೋಡಿಕೆಟ್ಟೆಂ—ನುಗ್ಗಿ ಓಡಿ ತಪ್ಪಿಸಿಕೊಂಡೆನು ; ೬. ಬಿಚ್ಚಳಿಸಿ—ವಿಸ್ತರಿಸಿ ಎಂದರೆ ವಿಸ್ತಾರವಾಗಿ ಹೊಗಳಿ ; ಅಂಗಚಿತ್ರಮುಮಂ—ಸ್ವತಃ ಧರಿಸಿದ ಆಭರಣ ವಸ್ತ್ರಾದಿಗಳನ್ನು ; ಕೆಲವು ಬಾೞುಮಂ—ಕೆಲವು ಕ್ಷೇತ್ರಗಳನ್ನೂ (ಜಮೀನುಗಳನ್ನೂ) ; ೭. ಪೊಲ್ಲಮೆಯುಂ—ದುಷ್ಟತನವನ್ನು ; ೯. ಬಾರಿಸಿದೊಡೆ—ತಡೆದರೆ ; ಅನಿಬರುಮಂ—ಅಷ್ಟು ಜನರನ್ನೂ ; ಮಲ್ಲಲ್ ಪುಗುವನಿತು—ಒಂದು ಮಣ್ಣಿನ ಶ್ರಾವೆ ಹಿಡಿಸುವಷ್ಟು, (ತಮಿಳು) ಮಲ್ಲಂ, (ತುಳು) ಮಲ್ಲಯಿಲ್—ಸವುಟು ; ೧೦. ಮಲ್ಲಲ ಕೂೞುಂ—ಒಂದು ಶ್ರಾವೆತುಂಬ ಅನ್ನ ; ಒಂದು ಮೊಗಪೆ—ಒಂದು ಸಣ್ಣ ಮಣ್ಣಿನ ಕುಡಿಕೆ, "ಖಳ ಸಂಸೃತಿಯೆಂಬದೊಂದು ಊಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ" ಎಂದು ಪಂಪನ ಪ್ರಯೋಗ (ಆದಿಪು. ೩-೭೧) "ಊಟಣದ ಗುಂಡಿಗೆಯಂತೆವೊಲಾದೆನೆಂದು" ಎಂಬ ನಾಗಚಂದ್ರನ ಮಾತನ್ನು ಹೋಲಿಸಿ (ಪಂಪರಾ. ೬-೯೫), ಮೊಗಪೆ—ಗುಂಡಿಗೆ < ಸಂ. ಕುಂಡಿಕಾ ೧೧. ಪಚ್ಚುಗೊಂಡು ಹಂಚಿಕೊಂಡು ; ೧೪. ಪಗೆಯನಿಱುಯಲುಂ—ಹಗೆಯನ್ನು ಘಾತಿಸಲೂ ; ೧೫. ಆರ್ಕುಂ—ಸಮರ್ಥನಾಗುತ್ತಾನೆ ; ಈ ಮಲ್ಲಲ ಕೂೞುಂ—ಈ ಸರಾವೆಯ ಅನ್ನವನ್ನು ; ೧೮. ಉಣ್ಣಪಟ್ಟು—ಉಣ್ಣದೆ ಮಲಗಿ, ಉಪವಾಸವಿದ್ದು ; ೧೯. ಬರ್ದೊನ್—ಬದುಕಿದನು ; ಪ್ರತ್ಯಂತವಾಸಿಗಳಪ್ಪ—ರಾಜ್ಯದ ಎಲ್ಲೆಗಳಲ್ಲಿ ವಾಸಮಾಡುವವರಾದ ; ೨೦. ಮಸಗಿದೊಡೆ—ಕೆರಳಿ ಮೇಲೆ ಬಿದ್ದರೆ ; ೨೧. ಆರಾನುಂ—ಯಾರಾದರೂ ; ಉಣ್ಬರೊಳರೇ—ತಿನ್ನುವವರು ಉಂಟೇ, ಇರುವರೇ, ೨೩. ಕ್ಷಮೆಗೊಳಿಸಿ—ಕ್ಷಮಿಸಿ ; ಪರಚಕ್ರಮಂ—ಶತ್ರುಮಂಡಲವನ್ನು ;

೧೮೩. ೧ : ಮಸಗಲೀಯದೆ—ವಿಜೃಂಭಿಸಲು ಬಿಡದೆ ; ಪೂರ್ವಕ್ರಮದೊಳ್—ಹಿಂದಿನಸ್ಥಿತಿಯಲ್ಲಿ ; ನಿಱಿಸಿದೊಡೆ—ಸ್ಥಾಪಿಸಿದರೆ ; ೨. ತಂದೆಯ ಬಾೞಿಂದಗ್ಗಳಂ ಬಾೞುಮೆಯುಂ—ತಂದೆಯ ವೃತ್ತಿಗಿಂತ ಅತಿಶಯವಾದ ವೃತ್ತಿಯನ್ನು ;

ಶ್ಲೋಕ ॥ ಚತುರ್ದ್ರಂಷ್ಟ್ರಃ—ನಾಲ್ಕು ದಾಡೆ ಹಲ್ಲುಗಳನ್ನುಳ್ಳವನು, ಸ ಚಾಣಾಕ್ಯಃ—ಆ ಚಾಣಾಕ್ಯನು ; ಏಷಃ—ಇವನು, ನಂದಾನ್ವಯಕ್ಷಯಃ—ನಂದಕುಲಕ್ಕೆ ನಾಶಕಾರಿಯಾದವನು ; ಹಿ—ಅಲ್ಲವೇ ? ; ರಾಜೋ ವಾ—ರಾಜನಾಗಲಿ, ರಾಜಮರ್ತ್ಯೋವಾ—ರಾಜನನ್ನು ಕೊಲ್ಲುವವನಾಗಲಿ ಅಥವಾ ಮಂತ್ರೀವಾ—ಮಂತ್ರಿಯಾಗಲಿ, ಭವಿಷ್ಯತಿ—ಆಗುತ್ತಾನೆ, ನ ಸಂಶಯಃ ಸಂಶಯವಿಲ್ಲ. ಇಲ್ಲಿರುವ "ರಾಜಮರ್ತ್ಯೋವಾ" ಎಂಬುದಕ್ಕೆ 'ರಾಜಮಂತ್ರೀವಾ' ಎಂಬ ಪಾಠಾಂತರವಿದೆ. ಇದರಂತೆ 'ರಾಜನೋ ಅಥವಾ ರಾಜಮಂತ್ರಿಯೋ' ಎಂದರ್ಥವಾಗುತ್ತದೆ. ಶ್ರೀಮದ್ರಾಮಾಯಣದಲ್ಲಿ "ರಾಜೋವಾ ರಾಜಮಾತ್ರೋವಾ" ಎಂದು ಮೂರು ಸಲ ಬರುತ್ತದೆ (೨-೯೬-೯ ; ೬-೬ ೩-೧೦ ; ಉರಾ. ೩೧-೩) ; ಇಲ್ಲಿ ರಾಜನಂತಿರುವ ಇನ್ನೊಬ್ಬ ಎಂಬರ್ಥವನ್ನು ಮಾಡಿದೆ. "ರಾಜಪುತ್ರೋವಾ" ಎಂಬ ಪಾಠಾಂತರವೂ ಇದೆಯೆಂದು ನನ್ನ ಮಿತ್ರರಾದ

ಶ್ರೀ ಕ. ವೆಂ. ರಾಘವಾಚಾರ್ಯರು ತಿಳಿಸಿದ್ದಾರೆ. "ರಾಜಮಂತ್ರ್ಯೇವಾ" ಎಂಬ ಪಾಠ ಸರಿಯಾಗಲಾರದು; ರಾಜಮಂತ್ರಿ, ರಾಜಮಾತ್ರ, ರಾಜಪುತ್ರ—ಈ ಮೂರರಲ್ಲಿ ಯಾವುದಾದರೂ ಒಂದು ಸರಿಯಿರಬಹುದು.

೧೩, ಆದೇಶಂಗೆಯ್ದುದಂ—ಭವಿಷ್ಯ ಹೇಳಿದ್ದನ್ನು; ಕೈಸಾಣೆಗಳಿಂ—ಕೈಯಲ್ಲಿ ಉಜ್ಜ ಬಹುದಾದ ಸಾಣೆಗಳಿಂದ; ೧೪. ಉರ್ದಿಸಿ—ಉಜ್ಜಿಸಿ; ಮಟ್ಟಂ ಮಾಡಿದೊಂ—ಮಟ್ಟಸವಾಗಿ ಮಾಡಿದನು; ೨೧. ಭವ್ಯಾಕಾರಮುಮಂ—ಉದಾತ್ತವಾದ ರೂಪವನ್ನು;

೧೮೪. ೧: ನೆತ್ತರ್ವರೆ—ರಕ್ತಬರುವಂತೆ; ಕೊಂಡೊಡೆ—ಚುಚ್ಚಿದರೆ; ಅಗುಲ್ದು—ಅಗೆದು;

ಶ್ಲೋಕ ॥ ಪುಟ ೧೮೩ ನೋಡಿ.

೭. ಸಖಾಯನಂ—ಸ್ನೇಹಿತನನ್ನು; ಪೆತ್ತೆಂ—ಪಡೆದೆನು; ಒಸೆದುಂ—ಸಂತೋಷ ಪಟ್ಟೊ; ೮. ಭಟ್ಟಮಂಡಪದೊಳ್—ರಾಜನ ಸಭಾಮಂದಿರದಲ್ಲಿ;

ಶ್ಲೋಕ ॥ ನೀತಿಶಾಸ್ತ್ರ ವಿಶಾರದೈಃ—ರಾಜನೀತಿ ಶಾಸ್ತ್ರದಲ್ಲಿ ಪಾರಂಗತರಾದವರಿಂದ, ಶಕ್ತಿ ಸಹಸ್ರೇಣ—ಸಾವಿರಾರು ಶಕ್ತಿಗಳಿಂದ, ವ್ಯವಸಾಯ ದ್ವಿತೀಯೇನ—ಉದ್ಯಮವನ್ನು ಎರಡನೆಯದಾಗಿ ಉಳ್ಳವರಿಂದ, ಕೃತ್ಸ್ನಾ—ಪೂರ್ಣವಾಗಿ ವಸುಂಧರಾ—ಭೂಮಿಯು, ಜೇತುಂ—ಜಯಿಸಲು, ಶಕ್ಯಾ—ಸಾಧ್ಯವು.

ಇದರಂತಹ ಶ್ಲೋಕ ಹರಿಷೇಣನ 'ಬೃಹತ್ಕಥಾಕೋಶ'ದಲ್ಲಿದೆ (೧೮೩-೩೭)

ನರೇಣೇಕ ಶರೀರೇಣ ನಯಶಾಸ್ತ್ರಯುತೇನ ಚ।
ವ್ಯವಸಾಯೇನ ಯುಕ್ತೇನ ಜೇತುಂ ಶಕ್ಯಾವಸುಂಧರಾ ॥

೧೩. ಬಲ್ಮೆಯಲ್ತು—ಪಾಂಡಿತ್ಯವಲ್ಲ, ಪ್ರೌಢಿಮೆಯಲ್ಲ; ಅದಂ ಸೀಂಟಿ—ಅದನ್ನು ಒರಸಿ, ಅಳಿಸಿ;

ಶ್ಲೋಕ ॥ ಏಕಶರೀರೇಣ—ಒಂದೇ ದೇಹದಿಂದ, ಶಕ್ಯಾ—ಸಾಧ್ಯವು; ಉಳಿದ ದ್ದೆಲ್ಲ ಮೇಲಿನ ಶ್ಲೋಕದಂತೆ; ೧೭. ಇದನಾರ್ವರೆದೊರ್—ಇದನ್ನು ಯಾರು ಬರೆದರು?; ಇದಕ್ಕೆ ಸಂವಾದಿಯಾದ ಶ್ಲೋಕ ಹರಿಷೇಣನಲ್ಲಿ ಇಂತಿದೆ:

ನರೇಣೈಕಶರೀರೇಣ ನಯ ಶಾಸ್ತ್ರಾಯುತೇನ ಚ।
ವ್ಯವಸಾಯೇನ ಯುಕ್ತೇನ ಜೇತುಂ ಶಕ್ಯಾ ವಸುಂಧರಾ ॥ ೧೮೩-೩೯

೧೮. ಮುಗಳಾ ಚೋಳಂಗಿಯೊಳ್—ಮಗಳ ರವಿಕೆ ಶಾಸ್ತ್ರದಲ್ಲಿ (?); ೨೦. ನಿಶ್ರಾವಮಂ—ಅನ್ನದ ಗಂಜಿಯ ಕೆನೆಯನ್ನು;

೧೮೫. ೧: ದಾರಿದ್ರ್ಯದಿಂ ಬಿಟ್ಟು—ಬಡತನ ಹೊರತಾಗಿ; ಕಷ್ಟತಿಕೆ—ದುಃಖಕರವಾದುದು;

ವೃ ॥ ಕಶ್ಚಿದೇವ—ಯಾವನೂ, ಸಂಗಂ—ಸ್ನೇಹವನ್ನು, ನ ಕುರುತೇಹಿ—ಮಾಡುವುದಿಲ್ಲವಲ್ಲ; ಬಾಂಧವಾಃ—ನಂಟರು, ನಾಭಾಷತೇ—ಮಾತನಾಡುವುದಿಲ್ಲ; ಉತ್ಸವೇಪಿ—ಉತ್ಸವದಲ್ಲಿಯಾದರೂ, ಗೃಹಂ—ಮನೆಗೆ, ಸಂಪ್ರಾಪ್ತೋ—ಬಂದಿರಲು ಕೂಡ,

ಗೃಹಿಭಿಃ—ಗೃಹಸ್ಥರಿಂದ, ಸಾಮಾನ್ಯಮಾಲೋಕ್ಯತೇ—ಸಾಧಾರಣವಾಗಿ ನೋಡು ತ್ತಾರೆ, ಮಹಾಜನಃ—ಮಹಾಜನರು, ದೂರಾದೇವ—ದೂರದಿಂದಲೇ, ಲಜ್ಜಯಾ— ಸಂಕೋಚದಿಂದ, ಅಲ್ಪಚ್ಛದಂ—ಅಲ್ಪ ಉಡುಪುಳ್ಳವನನ್ನು, ಪರಿಹರತಿ—ತೊಲಗಿಸಿ ಬಿಡುತ್ತಾರೆ, ನಿರ್ಧನತಾಪ್ರಕಾಶಂ—ಬಡತನವನ್ನು ಪ್ರಕಟಪಡಿಸುವುದು, ಅಪರಂ— ಎಣೆಯಿಲ್ಲದ, ಕಷ್ಟಂ—ದುಃಖವು, ಮಹಾಪಾತಕಂ—ಮಹಾಪಾಪವೆಂದು, ಮನ್ಯೇ— ಭಾವಿಸುತ್ತೇನೆ. ೯. ಷಷ್ಟಿಗ್ರಾಮ ಸಮುದ್ವಿತಮಪ್ಪ—ಅರುವತ್ತು ಗ್ರಾಮಗಳಿಂದ ಕೂಡಿದ, ಅಗ್ರಾಸನಮಂ—ಬ್ರಾಹ್ಮಣವೃತ್ತಿಯನ್ನು; ೧೦. ಉಪಶ್ಲೋಕಿಸಿ— ಹೊಗಳಿ; ೧೧. ಉಣುತ್ತುಂ—ಅನುಭವಿಸುತ್ತ; ೧೨. ಬಾಡಮಂ—ಗ್ರಾಮಗಳನ್ನು; ೧೪. ಪದಮೆಂಬುದು—ಪದವಿಯೆನ್ನುವುದು; ೧೭. ಕ್ರಮಾಗತಂ—ಕ್ರಮವಾಗಿ ಬಂದಿರು ವುದು; ಅಗ್ರಹಾರಮಂ—ಬ್ರಾಹ್ಮಣರಿಗಾಗಿ ಬಿಟ್ಟ ಗ್ರಾಮವನ್ನು; ೧೮. ಪಾಳಿ— ಕ್ರಮ, ಧರ್ಮ; ೨೧. ಕುಲಕ್ರಮಾಗತರೆಮುಂ—ಕುಲಪರಂಪರೆಯಿಂದ ಬಂದವರಾಗಿ ದ್ದೇವೆ, ಮತ್ತು; ಬಾೞ್ವೆಮುಂ—ಬದುಕುವವರಾಗಿದ್ದೇವೆ, ಮತ್ತು; ೨೨. ಪದ ಮಂ—ಪದವಿಯನ್ನು, ಸ್ಥಿತಿಯನ್ನು; ೨೪. ಅಗ್ರಾಸನದಿಂ—ದತ್ತಿಯ ಗ್ರಾಮ ಗಳಿಂದ; ಪಿಂಗಿಸು—ತೊಲಗಿಸು; ೨೫. ಅಗ್ರಾಸನದೊಳ್—ಮೊದಲ ಎಡೆಯಲ್ಲಿ, ಪೀಠದೊಳ್; ಆದಮಾನುಂ—ವಿಶೇಷವಾಗಿ, ಅತಿಶಯವಾಗಿ;

೧೮೬. ೨: ಪಡಿಯಱನಿಂದಮೆ—ಬಾಗಿಲುಕಾಯುವವನಿಂದಲೇ; ಪೆಡತಲೆಯಂ— ತಲೆಯ ಹಿಂಭಾಗವನ್ನು; ೪. ಅನಂದನಾಗೆ—ಅಂದವಿಲ್ಲದವನಾಗಲು (?); ಅಬಂಧು— ಬಂಧುವಲ್ಲದವನು; ೬. ಕಾಸೆಗಳಂ—ಚಡ್ಡಿಗಳನ್ನು; ಕಳೆಯೆನೆಂದು—ತೆಗೆಯುವುದಿಲ್ಲ ವೆಂದು; ಜಾದಿನ ಸೇಲೆಗಳನುಟ್ಟು—ಕಾವಿಯಬಣ್ಣದ ವಸ್ತ್ರಗಳನ್ನು ಧರಿಸಿ; ೭. ಭಗ ವಂತ ವೇಷಮುಂ—ಸಂನ್ಯಾಸಿಯ ಸೋಗನ್ನು; ೧೨. ನೆಱಪುವೆಂ—ಪೂರ್ಣಗೊಳಿಸು ತ್ತೇನೆ; ಪುಟ್ಟಿದ ಕೂಸಂ—ಹುಟ್ಟಿದ ಮಗುವನ್ನು; ಈಯಲಾರ್ಪೊಡೆ—ಕೊಡಲು ಸಮರ್ಥರಾದ ಪಕ್ಷಕ್ಕೆ; ೧೩. ನನ್ನಿಗೊಂಡು—ಭಾಷೆ ತೆಗೆದುಕೊಂಡು; ೧೪. ಬಾದಣ ದಂತಿರೆ—ಗವಾಕ್ಷಿಯಂತೆ, (ಸಂ) ವಾತಾಯನ > ಬಾದಣ; ಛಿದ್ರಂ ಮಾಡಿ—ರಂಧ್ರ ಮಾಡಿ; ೧೫. ಇರುಳ್ ಮಧ್ಯಾಹ್ನಮಪ್ಪ ಪೊೞ್ತುಱೊಳ್—ರಾತ್ರಿ ಚಂದ್ರ ನಡುನೆತ್ತಿಗೆ ಬರುವ ಹೊತ್ತಿನಲ್ಲಿ, ಚಂದ್ರನು ಆಕಾಶದ ಮಧ್ಯಕ್ಕೆ ಬರುವ ವೇಳೆಯಲ್ಲಿ; ಪಿರಿದೊಂದು ಕಾಜಿನ ಬಟ್ಟಲೊಳ್—ದೊಡ್ಡದಾದ ಒಂದು ಗಾಜಿನ ಬಟ್ಟಲಲ್ಲಿ; ೧೬. ಕಮ್ಮಿ ತಪ್ಪ—ಗಮಗಮಿಸುತ್ತಿರುವ; ೧೭. ತೃಷ್ಣಾಭಿವೃದ್ಧಿಯಪ್ಪ—ಬಾಯಾರಿಕೆಯನ್ನು ಹೆಚ್ಚಿಸುವ; ಊಡಿ—ತಿನ್ನಿಸಿ; ೨೧. ನೆಱೆದತ್ತು—ಪೂರ್ಣವಾಯಿತು. ೨೨. ಬೆಸಲೆ ಯಾದ—ಹೆತ್ತ; ಕೂಸಂ—ಮಗುವನ್ನು; ೨೩. ದಾದಿಯನಿಟ್ಟು—ದಾದಿಯನ್ನು ನೇಮಿಸಿ; ೨೪. ಬಾಯ್ವೆಣ್ಣೆಯೊಡನೆ—ತಿನ್ನಿಸುವ ಬೆಣ್ಣೆಯೊಡನೆ; ಕಿಱಿಕಿಱಿದೆ— ಕೊಂಚಕೊಂಚವಾಗಿಯೇ; ನಂಜನೂಡಿ—ವಿಷವನ್ನು ತಿನ್ನಿಸಿ; ೨೫. ತಗುಳ್ದೊನ್— ತೊಡಗಿದನು.

೧೮೭. ೧: ತಳವಱಿರ್ಕಳ್ಗಂ—ನಗರ ರಕ್ಷಕರಿಗೂ, ಕೊತ್ವಾಲರಿಗೂ; ೩. ಈ ತಂಗರಸುವಮಾಡಿದಪ್ಪೆಂ—ಇವನಿಗೆ ದೊರೆತನವನ್ನು ಕೊಡುತ್ತೇನೆ; ಇಲ್ಲಿಯ ಬಾೞ್ಗಿನ್ ಪದಿರ್ಮಡಿ ಬಾೞಂ—ಇಲ್ಲಿನ ಜೀವಿತಕ್ಕಿಂತ ಹತ್ತರಷ್ಟು ಮಿಗಿಲಾದ ಜೀವಿಕೆಯನ್ನು; ೫. ತಂತ್ರಮುಂ—ಸೈನ್ಯವನ್ನು; ೬. ಪೊನ್ನಂ ಮಾೞ್ಪ—ಚಿನ್ನವನ್ನು ಮಾಡುವ; ಬಗೆಯಿಂದಂ—ಮನಸ್ಸಿನಿಂದ; ಮರ್ದುಗಳನಱಿಸಿ—ಮೂಲಿಕೆಗಳನ್ನು ಹುಡುಕುತ್ತ; ೭. ತೊೞಲ್ವನ್—ಅಲೆದಾಡುವನು; ತಟ್ಟಿಲೊಳ್—ತಪ್ಪಲಿನಲ್ಲಿ; ಆದಮಾನುಂ ಗುಂಡಿತಪ್ಪ—ತುಂಬ ಆಳವಾದ; ರಸದ ಬಾವಿಯಂ—ಸಿದ್ಧರಸದ ಎಂದರೆ ಮುಟ್ಟಿದ್ದನ್ನೆಲ್ಲ ಚಿನ್ನವಾಗಿಸುವ ರಸವುಳ್ಳ ಬಾವಿಯನ್ನು; ೮. ಮೊಡೆನಾಪುರ್ದಂ—ಹುಳಿಮಜ್ಜಿಗೆಯಂತೆ ನಾತಬಡಿಯುತ್ತಿರುವುದನ್ನು, ಹಳಸಿದ ಮಾಂಸದ ನಾತವುಳ್ಳುದನ್ನು, (ತಮಿಳು) ಮುಡೈನಾಱ್ಪವು, "ಪೆಣಮೆಂಬ ಪೆಸರಾಗಿ, ಅಣಮಿರಿಸದಂತಾಗಿ, ಮೊಡೆನಾತಕೆಡೆಯಾಗಿ, ಪಡುಕೆಯೆಂಬುದು ಮಾಗಿ" ಎಂದು ಬಂಧುವರ್ಮನ ಪ್ರಯೋಗವುಂಟು (ಜೀವಸಂ. ೭-೩೨); ೮. ಕಳೆದು—ತೆಗೆದುಹಾಕಿ; ೯. ಬಾೞುತ್ತಿರ್ದ—ಬದುಕಿರುವ; ೧೧. ಬಿಚ್ಚುವಂ—ಸನ್ಯಾಸಿ; ಮೊಗೆದು—ತುಂಬಿ; ೧೩. ಲೋಭದಿಂದಂ—ದುರಾಸೆಯಿಂದ; ೧೩. ಸೋರೆಯಂ — ಸೋರೆಯ ಬುರುಡೆಯಲ್ಲಿ; ತೀವಿ — ತುಂಬಿ; ೧೬. ಬಾೞಿಪ್ಪೆಂ—ಬದುಕಿಸುತ್ತೇನೆ; ೧೭. ನಿಡುನೇಣಂ—ಉದ್ದವಾದ ಹಗ್ಗವನ್ನು; ೧೮. ರಸಂ ತಿಂದಮೆಯ್ಗೆ—ಸಿದ್ಧರಸವು ಕೊರೆದು ಗಾಯಗೊಳಿಸಿದ ಮೈಗೆ; ಪ್ರತೀಕಾರದ ಮರ್ದುಗಳಂ—ಪರಿಹಾರ ಕೊಡುವ ಔಷಧಿಗಳನ್ನು; ೨೧. ಒಂದು ಪೇೞು—ಒಂದು ಹೇರು; ಒಟ್ಟುವರ್—ರಾಶಿಮಾಡುವರು; ಪೇೞು—ಹೇರು, ಹೊರೆ;

೧೮೮. ೪: ಬಾೞ್ತೆಯಾಗೆ—ಕೆಲಸಕ್ಕೆ ಬೇಕಾಗಲು; ೫. ಬಾೞ್ತೆಯಲ್ತು—ಉಪಯೋಗವಿಲ್ಲ; ೧೦. ಮೇಗೆರ್ದು—ಮೇಲೆ ದಾಳಿಯಿಟ್ಟು; ಬರ್ದುಂಕಿ—ತಪ್ಪಿಸಿಕೊಂಡು; ೧೪. ಕೊಳ್ಗುಳದೊಳಗೆ—ಯುದ್ಧಭೂಮಿಯಲ್ಲಿ; ೧೬. ಸಾಲಿಗರ ಮನೆಯಂ—ನೇಕಾರರ ಮನೆಯನ್ನು; ೧೭. ಸಾಲಿಗರ ಬಿರ್ದಿ—ನೇಕಾರರ ಮುದುಕಿ; ಏಱಲಿಕ್ಕಿ—ಕುಳ್ಳಿರಲು ಮಣೆಯನ್ನು ಹಾಕಿ; ೧೮. ಕಂಚನಿಟ್ಟು—ತಟ್ಟೆಯನ್ನಿಟ್ಟು; ಅಲಂಪಿನಿಂದಂ—ಸಂತೋಷದಿಂದ; ೨೦. ಆದಿರ್ದು—ಅಲುಗಾಡಿಸಿ, ಕೈಯಂ ಬಿದಿರ್ದು—ಕೈಯನ್ನು ಕೊಡವಿ; ಬಿರ್ದಿ—ಮುದುಕಿ; "ಕೈಯಂ ಬಿದಿರ್ದವನಂ ಬಿರ್ದಿ ಕಂಡು ನಕ್ಕಿಂತೆಂದಳ್" ಇದು ಕಂದಪದ್ಯದ ಕೊನೆಯ ಪಾದದಂತಿದೆ, ವೃತ್ತಗಂಧಿ; ೨೪. ಬುದ್ಧಿಯೊಡೆಯಂ—ಬುದ್ಧಿಯುಳ್ಳವನು;

೧೮೯. ೨: ತನ್ನ ಕೊಟ್ಟ—ತಾನು ಕೊಟ್ಟ; ಪಗೆಗೊಂಡು—ದ್ವೇಷವನ್ನು ಹೊಂದಿ; ೩. ತನ್ನಾರ್ಪಂದೆ—ತಾನು ಸಮರ್ಥನಾಗಿರುವಾಗಲೇ; ೭. ಪ್ರತಿಪಕ್ಷಮುಂ—ಶತ್ರುಸೈನ್ಯವನ್ನು; ೧೬. ಒಡ್ಡಣಮನೊಡ್ಡಿ—ಸೈನ್ಯವನ್ನು ಎದುರಿಗೆ ನಿಲ್ಲಿಸಿ, ಚಾಚಿ; ೨೨. ಕಾಪನಿಟ್ಟು—ಕಾವಲಿರಿಸಿ.

೧೯೦. ೪: ಉಣಿಸಂ ಮಾಡಿ—ಔತಣಮಾಡಿ; ಸೊರ್ಕಪ್ಪ—ಸೊಕ್ಕನ್ನುಂಟು

ಮಾಡುವ ; ೬. ಮೆಯ್ಯುಱಿಯದೆ—ಮೈಮೇಲೆ ಪ್ರಜ್ಞೆಯಿಲ್ಲದೆ ; ೯. ಆಡಿದಂ—ಕುಣಿದನು ; ೧೦. ಪೂಣ್ದ — ಕೈಕೊಂಡ ; ನೆಱೆದತ್ತು — ಪೂರ್ಣವಾಯಿತು ; ೧೧. ಜಾದಿನೊಳೂಡಿದವು—ಕಾವಿಯನ್ನು ಬಳಿದುವು ; ಪೊನ್ನ ಗುಂಡಿಗೆಯುಂ—ಚಿನ್ನದ ಕಮಂಡಲವು ; ೧೨. ಮೂಱುದಂಡಮುಂ—ತ್ರಿದಂಡವು, ಸಂನ್ಯಾಸಿ ಹಿಡಿಯುವ, ಮೂರು ಕೋಲುಗಳನ್ನು ಕಟ್ಟಿದ ದಂಡ ; ೧೩. ಎನಗೆ ಬಸಮಾದಂ—ನನಗೆ ವಶವಾದನು ; ಪೊಡೆ ಪಱೆಯಂ—ಹೊಡೆ, ಹರೆಯನ್ನು ; ೧೫. ಲಟಹದಿಂದೆ—ರಮ್ಯವಾಗಿ, ಸುಂದರವಾಗಿ, (ಪ್ರಾ. ದೇ) "ಲಡಹೋ ರಮ್ಯಂ, ಲಡಹೋ ವಿದಗ್ಧಮಿತ್ಯನ್ಯೇ." "ಲಟಹಮಾ ಲಾವಣ್ಯಮಾ ಬಿಂಕಮಾ" ಎಂದು ರನ್ನನ ಪ್ರಯೋಗ (ಗದಾ ೧೦.) ; ಆಡಿದೊಂ—ನರ್ತಿಸಿದನು ; ೧೬. ಪಾರ್ವಂತಿ—ಪಾರ್ವಸ್ತ್ರೀ, ಬ್ರಾಹ್ಮಣಿತಿ ; ೧೮. ಜೀವಿತಂ ಗೆಯ್ದು—ಬಾಳನ್ನು ಕೊಟ್ಟು ; ೧೯. ತಳವರ್ಗಮುಮಂ—ತಳವಾರರನ್ನೂ ; ಸಂತವಿಸಿ—ಸಮಾಧಾನ ಪಡಿಸಿ ; ೨೧. ಪತ್ತುಂ ಕದಿರ್ಗಳ್—ಹತ್ತೂ ಅರಕಾಲ್ಗಳು ; ಅರ್ದುದಂ—ಮುಳುಗಿದ್ದನ್ನು ; ೨೩. ದಶಮುಯೂರರ್ಕಳ್—ಹತ್ತು ಜನ ಮೌರ್ಯರು ;

**೧೯೧.** ೧ : ಬಾಳಂಕಿಬ್ಬು—ಒರೆಯಿಂದ ಕತ್ತಿಯನ್ನು ಸೆಳೆದು ; ನಿಮಿರ್ದು—ನೆಟ್ಟಗಾಗಿ ; ೨. ಬಂಚಿಸಿ—ವಂಚಿಸಿ ; ಪ್ರಚ್ಛನ್ನದಿಂದಂ—ಮರೆಯಿಂದ ; ೩. ತಲೆಯಂ ಪೋಗಿಱಿದು—ತಲೆ ಕತ್ತರಿಸಿಹೋಗುವಂತೆ ಹೊಡೆದು ; ೪. ಪೋೞ್ದು—ಹೋಳು ಮಾಡಿ ; ೮. ಪನಿತುದಱಿಂದೆ—ಹನಿಯಾಗಿ ಬಿದ್ದದ್ದರಿಂದ ; ೧೨. ವರಿಸಿ—ಬರ ಮಾಡಿಕೊಂಡು ; ೧೯. ತುಱುಪಟ್ಟಿಯೊಳ್—ಆಕಳ ಹಟ್ಟಿಯಲ್ಲಿ ; ೨೧. ಪಗೆಯುಮಂ—ದ್ವೇಷವನ್ನೂ ; ೨೪. ಗೋಷ್ಠಿಯಿರ್ದು—ಕೂಡಿದ್ದು, ಒಂದಾಗಿದ್ದು ; ೨೬. ಸೆಡೆಗುಂ—ಮುರುಟಿಕೊಳ್ಳುತ್ತಾರೆ, ಸೇದೆಗೆಡು = ಸೇದೆಯಿಂ + ಕೆಡು ; ಬಳಸಿಯುಂ—ಸುತ್ತಲೂ, ಗೊಬ್ಬರಮಂ—ಒಣಗಿಸಿದ ಸೆಗಣಿ, ಕಾಡು ಬೆರಣಿ.

**೧೯೨.** ೧ ; ಒಟ್ಟಿಂ—ರಾಶಿಹಾಕಿರಿ ; ಕಿಚ್ಚಂ ತಗುಳ್ಚಲ್ ವೇೞ್ದು—ಉರಿಯನ್ನು ಹೊತ್ತಿಸುವಂತೆ ನೇಮಿಸಿ ;

**ಗಾಹೆ** ।। ಪುಟ ೪೮ ನೋಡಿ.

**ಗಾಹೆ** ।। ಪುಟ ೪೮ ನೋಡಿ.

೧೪. ಕ್ಷಪಣಕರುಂ—ಜೈನಯತಿಗಳೂ ; ೮. ಆರಾಧಿಸಿ ; ಅಪವರ್ಗ—ಮೋಕ್ಷ.

## ೧೯. ವೃಷಭಸೇನರೆಂಬ ರಿಸಿಯರ ಕಥೆ

**೧೯೩.** ೧೩ : ಪಿರಿಯ ಪಂಡಿತಂ—ದೊಡ್ಡ ವಿದ್ವಾಂಸ ; ೧೮. ಬರವಂ—ಆಗಮನ ವನ್ನು ; ೧೯. ಪೊಡೆವಡುವುದಂ—ನಮಸ್ಕಾರ ಮಾಡುವುದನ್ನು ; ೨೧. ನೆರವಿಯೊಳ್—ಸಭೆಯಲ್ಲಿ ; ಸಿಗ್ಗಾಗಿ—ಲಜ್ಜಿತನಾಗಿ ; ೧೫. ಮುಡಿಪಿ—ಸತ್ತು ;

**೧೯೪.** ೧೧ : ಈ ಪೇೞ್ದ—ಇಗೋ ಹೇಳಿದ ಎಂದರೆ ನಿರೂಪಿತವಾದ ; ಕಥೆಗಳಂ, ಎಂಬುದು ಕಥೆಗಳಾನ್ ಎಂದಿರಬಹುದು—ಕಥೆಗಳನ್ನು ; ೧೨. ಪೇೞ್ವಾರ್—ಹೇಳಿ

ದರು, ರಚಿಸಿದರು. ಪೇೞ್ ಧಾತುವನ್ನು ಕಾವ್ಯರಚನೆಮಾಡು ಎಂಬರ್ಥದಲ್ಲಿ ಪ್ರಯೋಗಿಸಿರುವುದು ಕಾಣುತ್ತದೆ. "ಕಥಾಭಿತ್ತಿಯನನುನಯದಿಂ ಪೇೞಲೆಂಬೆತ್ತಿಕೊಂಡೆಂ" (ಪಂಪಭಾ. ೧-೫೧), "ಇಂತು ಪೇೞಿಸಿದ ನರೇಂದ್ರರುಂ ನೆಱೆಯೆ ಪೇೞ್ದ ಕವೀಂದ್ರರು ನಾರ್ ಧರಿತ್ರಿಯೊಳ್" (ಅದೇ. ೧೪-೫೩), "ನೆರೆದಿನ್ನೂಱಿಪ್ಪರ್ದಿಂಬರುಂ ಪೇೞ್ವನೆ ತಾಂ ಪರಿಣತನೀ ಕಬ್ಬಂಗಳನೊರೆದಂ ರವಿ ನಾಗಭಟ್ಟನತ್ಯಾದರದಿಂ" (ಕವಿಚ I-28) ಇತ್ಯಾದಿ.

## ೨. ಹರಿಷೇಣನ 'ಬೃಹತ್ಕಥಾಕೋಶ'ದ ಕಥೆಗಳ (೧೨೬–೧೪೪) ಸಾರಾಂಶ

### ೧೨೬ ಅವಂತಿ ಸುಕುಮಾಲ ಕಥಾನಕಂ

ವತ್ಸಕಾವತಿಯ ಕೌಶಂಬೀನಗರದ ರಾಜ ಅತಿಬಲ. ಅವನ ಪುರೋಹಿತ ಸೋಮ ಶರ್ಮ; ಅವನ ಭಾರ್ಯೆ ಕಾಶ್ಯಪಿ. ಅವರಿಗೆ ಅಗ್ನಿಭೂತಿ ವಾಯುಭೂತಿ ಎಂಬ ಇಬ್ಬರು ಮಕ್ಕಳು. ಅವರು ತಂದೆಯ ಮಾತನ್ನು ಕೇಳದವರಾಗಿ ಸಪ್ತವ್ಯಸನಯುಕ್ತರಾಗಿ ನಿಷ್ಠುರಾಶಯರಾದರು. ತಂದೆ ಸತ್ತಮೇಲೆ ರಾಜ ಅವರ ಮೂರ್ಖತನವನ್ನು ನೋಡಿ ಅವರ ಐಶ್ವರ್ಯವನ್ನು ದಾಯಾದಿಗಳಿಗೆ ಕೊಟ್ಟನು. ದುಃಖಿತರಾದ ಆ ಇಬ್ಬರು ರಾಜಗೃಹಕ್ಕೆ ಹೋಗಿ ಅಲ್ಲಿದ್ದ ಸೂರ್ಯಮಿತ್ರನಿಗೆ ತಂದೆಯ ಮರಣವನ್ನೂ ಪರರಿಗೆ ತಮ್ಮ ಸಂಪತ್ತು ಸೇರಿದ್ದನ್ನೂ ತಿಳಿಯಪಡಿಸಿದರು. ಸೂರ್ಯಮಿತ್ರನು ದುಃಖಿತನಾಗಿ ಏಳೆಂಟು ವರ್ಷಗಳಲ್ಲಿ ಅವರಿಬ್ಬರನ್ನು ಸರ್ವಶಾಸ್ತ್ರ ಕೋವಿದರನ್ನಾಗಿ ಮಾಡಿದನು. ಆಮೇಲೆ ಅವರು ಕೌಶಂಬಿಗೆ ಬಂದು ರಾಜನನ್ನು ಕಂಡು ತಮ್ಮ ಮೊದಲಿನ ಐಶ್ವರ್ಯವನ್ನು ಅವನಿಂದ ಪಡೆದು ಸುಖವಾಗಿದ್ದರು.

ಇತ್ತ ರಾಜಗೃಹದಲ್ಲಿ, ಸೂರ್ಯಮಿತ್ರನು ಸೌಧರ್ಮ ಮುನಿಗಳಿಂದ ದಿಗಂಬರದೀಕ್ಷೆಯನ್ನು ಹೊಂದಿ ಸಿದ್ಧಕ್ಷೇತ್ರಗಳಲ್ಲಿ ಸಂಚಾರಮಾಡುತ್ತ ಭಿಕ್ಷಾರ್ಥವಾಗಿ ಕೌಶಂಬಿಗೆ ಬಂದನು. ಮನೆಯಿಂದ ಮನೆಗೆ ಸಂಚರಿಸುತ್ತ ಅವನು ಅಗ್ನಿಭೂತಿಯ ಮನೆಗೆ ಬಂದನು. ಮುಂಜಿಬಂಧನ ಕಾರಣವಾಗಿ ಅಗ್ನಿಭೂತಿಯ ಮನೆಯಲ್ಲಿ ಅನೇಕ ವಿಪ್ರರು ನೆರೆದಿದ್ದರು. ಆಗ ಅಗ್ನಿಭೂತಿ ಮುನಿಯನ್ನು ಎದುರುಗೊಂಡು ಅವನನ್ನು ಆಹಾರಾದಿಗಳಿಂದ ಸತ್ಕರಿಸಿದನು; ಆಗ ಆಶ್ಚರ್ಯ ಪಂಚಕಗಳಾದುವು. ವಿಪ್ರರೆಲ್ಲ ವಂದಿಸಿದರು. ವಾಯುಭೂತಿಯಾದರೆ, ಶಿಷ್ಯರಿಗೆ ಪಾಠ ಹೇಳುತ್ತಿದ್ದವನು, ಆ ಮುನಿಗೆ ಗೌರವವನ್ನು ತೋರಿಸಲಿಲ್ಲ. ಆಗ ಅಗ್ನಿಭೂತಿ ಅವನ ಕೈಹಿಡಿದು ಬಾ, ಮುನಿಗಳಿಗೆ ನಮಸ್ಕರಿಸು, ಅವರ ಪ್ರಸಾದಿಂದ ನಮಗೆ ಇಷ್ಟೆಲ್ಲ ಐಶ್ವರ್ಯ ಬಂತು ಎಂದು ಹೇಳಿ ಅವನನ್ನು ಕರೆದು, ಕೊಂಡು ಹೋದನು. ಎಂದೂ ಸ್ನಾನಮಾಡದ ಈ ಋಷಿಗಳಿಗೆ ನಾನು ನಮಸ್ಕರಿಸಬೇಕೋ ಎಂದು ವಾಯುಭೂತಿ ಗರ್ವದ ಮಾತುಗಳನ್ನಾಡಿದನು. ಅಗ್ನಿಭೂತಿಗೆ ವ್ಯಾಕುಲವುಂಟಾಗಿ ಅವನು ದಯಾವಾದಗಿರಿಗೆ ಹೋಗಿ ಸೂರ್ಯಮಿತ್ರನಿಂದ ಜೈನದೀಕ್ಷೆಯನ್ನು ಸ್ವೀಕರಿಸಿದನು. ಅಗ್ನಿಭೂತಿಯ ಹೆಂಡತಿ ಸೋಮದತ್ತೆ ವಾಯುಭೂತಿಗೆ ಬುದ್ಧಿ ಹೇಳಲು ಅವನು ಕೋಪಗೊಂಡು ಅವಳನ್ನು ಕಾಲಿನಿಂದ ಒದೆದು ನಿನ್ನ ಗಂಡನು ಎಲ್ಲಿರುವನೋ ಅಲ್ಲಿಗೆ ಹೋಗು ಎಂದು ಮನೆಯಿಂದ ಓಡಿಸಿದನು. ಅವಳಿಗೆ ಕೋಪಬಂದು ಮುಂದಿನ ಜನ್ಮದಲ್ಲಿ ನಿನ್ನ ಕಾಲುಗಳನ್ನು ತಿನ್ನದೆ ಇರೆನೆಂದು ಸಂಕಲ್ಪಿಸಿ ಸತ್ತು ಭವಸಾಗರದಲ್ಲಿ ಸುತ್ತುತ್ತಿದ್ದಳು.

ಇತ್ತ ವಾಯುಭೂತಿ ಋಷಿಯರನ್ನು ತಿರಸ್ಕರಿಸಿದ ಪಾಪದ ಫಲವಾಗಿ ಉದುಂಬರ ಕುಷ್ಠದಿಂದ ಪೀಡಿತನಾಗಿ ಏಳು ದಿವಸಗಳಲ್ಲಿ ಸತ್ತನು. ಅಂಗದೇಶದ ಚಂಪಾನಗರಕ್ಕೆ ಸೂರ್ಯಮಿತ್ರ ಬಂದನು; ಅವನ ಸಂಗಡ ಅಗ್ನಿಭೂತಿಯೇ ಮೊದಲಾದ ಶಿಷ್ಯರಿದ್ದರು. ಅಲ್ಲಿದ್ದ ವಾಸುಪೂಜ್ಯನಿಸಿದಿಗೆಯನ್ನು ಸೂರ್ಯಮಿತ್ರ ವಂದಿಸಿ ಚತುರ್ಜ್ಞಾನ ಸಮನ್ವಿತನಾದನು. ಇತ್ತ ಸತ್ತ ವಾಯುಭೂತಿ ಕೌಶಂಬಿಯ ವಿದ್ಯಾಧರ ಲಂಖನ ಮನೆಯಲ್ಲಿ ಗರ್ದಭಿಯಾಗಿ ಹುಟ್ಟಿ ಸತ್ತು ಭೀಷಣಾಕಾರದ ಸೂಕರಿಯಾಗಿ ಹುಟ್ಟಿ ಸತ್ತು ಚಂಪಾನಗರದಲ್ಲಿ ನಾಯಿಯಾಗಿ ಹುಟ್ಟಿ ಸತ್ತು ಹುಟ್ಟುಕುರುಡಿಯಾಗಿ ಹೊಲೆಯರ ಕೂಸಾಗಿ ಚಂಪಾನಗರದಲ್ಲಿ ಹುಟ್ಟಿದನು. ಆ ಹುಡುಗಿ ನೇರಿಳೆಮರದ ಕೆಳಗೆ ಕುಳಿತು ಬಿದ್ದ ಹಣ್ಣುಗಳನ್ನು ಆರಿಸಿ ತಿನ್ನುತ್ತಿರಲು ಅವಳನ್ನು ಕಂಡ ಅಗ್ನಿಭೂತಿಗೆ ಮರುಕವಾಗಿ ಗುರುಗಳ ಬಳಿಗೆ ಹೋಗಿ ಆ ಕೂಸಿನ ವಿಷಯವನ್ನು ಹೇಳಿದನು. ಆ ಕೂಸಿನದು ವಾಯುಭೂತಿಯ ಜೀವವೆಂದೂ ಅದಕ್ಕೆ ವೈರಾಗ್ಯೋಪದೇಶಮಾಡಿದರೆ ಅದು ಸ್ವೀಕರಿಸುವುದೆಂದೂ ಆ ಗುರುಗಳು ಹೇಳಿದರು. ಅದರಂತೆ ಅಗ್ನಿಭೂತಿ ಆ ಕೂಸಿಗೆ ಅಣುವ್ರತಾದಿಗಳನ್ನು ಉಪದೇಶಿಸಿದನು. ಆ ಕೂಸು ಅದನ್ನು ಗ್ರಹಿಸಿಯಾದ ಮೇಲೆ ಮರಣವನ್ನು ಹೊಂದಿ ಚಂಪಾಪುರದ ಚಂದ್ರವಾಹನ ಭೂಪತಿಯ ಮತ್ತು ಚಂದ್ರಮತಿ ಎಂಬ ಅವನ ರಾಣಿಯ ಪುರೋಹಿತನಾದ ನಾಗಶರ್ಮನಿಗೂ ಅವನ ಭಾರ್ಯ ತ್ರಿವೇದಿಗೂ ನಾಗಶ್ರೀ ಎಂಬ ಮಗಳಾಗಿ ಹುಟ್ಟಿದಳು. ಒಂದು ಸಲ ಸೂರ್ಯಮಿತ್ರನು ವಿಹಾರಮಾಡುತ್ತ ಚಂಪಾನಗರೋದ್ಯಾನಕ್ಕೆ ಬಂದು ಅಲ್ಲಿನ ನಾಗವರೋದ್ಯಾನದ ನಾಗವೇಶ್ಮಕ್ಕೆ ಬಂದು ತಂಗಿದ್ದನು. ಅಲ್ಲಿ ನಾಗಗೃಹದ ಒಳಗಡೆ ಪದ್ಮನಾಗ, ಸಂವಲನಾಗ, ಪತ್ರನಾಗ—ಎಂಬ ಮೂರು ನಾಗಗಳಿದ್ದುವು. ಆ ಎಡೆಗೆ ನಾಗರಪೂಜೆಗಾಗಿ ನಾಗಶ್ರೀ ಸಾಮಂತ ಮಂತ್ರಿಕನ್ಯೆಯರೊಡನೆ ಕೂಡಿ ಬಂದಳು. ಪೂಜೆ ಆದಮೇಲೆ ನಾಗಶ್ರೀ ಸೂರ್ಯಮಿತ್ರ ಗುರುವಿನ ಬಳಿಗೆ ಹೋದಳು. ಅವಳನ್ನು ಕಂಡ ಅಗ್ನಿಭೂತಿಗೆ ಏನೋ ಸ್ನೇಹವುಂಟಾಗಿ ಅವಳ ವಿಷಯವಾಗಿ ಗುರುಗಳನ್ನು ಕೇಳುತ್ತಾನೆ. ವಾಯುಭೂತಿಯ ಜನ್ಮಾರಭ್ಯ ಅವಳ ಕಥೆಯನ್ನು ತಿಳಿಸಿ ಅವರು ಅವಳಿಗೆ ಅಣುವ್ರತಗಳನ್ನು ಅನುಗ್ರಹಿಸಿದರು; ಆ ವ್ರತವನ್ನು ಬಿಡಬೇಕಾದರೆ ತಮ್ಮ ಬಳಿಗೇ ಬಂದು ಬಿಡಬೇಕೆಂದೂ ಅವರು ಹೇಳಿದರು. ಅವಳು ಮನೆಗೆ ಹೋದಳು. ಅವಳ ತಂದೆ ನಾಗಶರ್ಮ ಅವಳು ಜೈನವ್ರತಗಳನ್ನು ಧರಿಸಿದ್ದಕ್ಕಾಗಿ ಕೋಪವನ್ನು ಹೊಂದಿ "ಪುತ್ರಿ, ಬ್ರಾಹ್ಮಣಾನ್ವಯದಲ್ಲಿ ಹುಟ್ಟಿರುವ ನಿನಗೆ ಜಿನಧರ್ಮ ಸಂಬಂಧಬೇಡ" ಎಂದು ಗದರಿಸಿ ಹೇಳಿ ಅವಳನ್ನು ಸಂಗಡ ಕರೆದುಕೊಂಡು ಸೂರ್ಯಮಿತ್ರನಿದ್ದಲ್ಲಿಗೆ ಹೊರಟನು.

ದಾರಿಯಲ್ಲಿ ಹೆಡಮುರಿ ಕಟ್ಟಿದ್ದ ಕಳ್ಳನನ್ನು ನೆರೆದ ನೆರವಿ ಗದ್ದಲಮಾಡುತ್ತಿರಲು ನಗರದ ಹೊರಗೆ ವಧ್ಯ ಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಇದೇನು, ಎಂದು ನಾಗಶ್ರೀ ಕೇಳಲು ಅವಳ ತಂದೆ ವಿಚಾರಿಸಿ "ಈ ಶ್ರೇಷ್ಠಿಪುತ್ರನು ಧನಕೋಟಿಗಳನ್ನು ಬಾಚಿಕೊಂಡು ಅದನ್ನು ಕೊಡು ಎಂದು ಕೇಳಿದಾಗ ಕೊಡದೆ ಕತ್ತಿಯಿಂದ ಹೊಡೆದು ಕೇಳಿದವನನ್ನು ಕೊಂದನು. ಈ ಪುರುಷ ಘಾತಕನಿಗೆ ಮರಣದಂಡನೆ ಆಗುತ್ತದೆ" ಎಂದು

ಹೇಳಿದನು. ನಾಗಶ್ರೀ "ನಾನು ಮುನಿಗಳಿಂದ ಸ್ವೀಕರಿಸಿದ ಅಹಿಂಸಾ ವ್ರತವನ್ನು ಬಿಟ್ಟೆನಾದರೆ ನನ್ನನ್ನೂ ಹೀಗೆಯೇ ಶೂಲಕ್ಕೆ ಏರಿಸುವ ಸಂದರ್ಭವುಂಟಾಗಬಹುದು. ಆದ್ದರಿಂದ ಈ ವ್ರತ ಇರಲಿ" ಎಂದಳು. ನಾಗಶರ್ಮನು ಒಪ್ಪಿ ಉಳಿದ ವ್ರತಗಳನ್ನು ಆ ಸವಣನಿಗೆ ಒಪ್ಪಿಸೋಣ ಎಂದು ಹೇಳಿ ಸ್ವಲ್ಪದೂರ ಮುಂದಕ್ಕೆ ನಡೆದನು. ಸ್ವಲ್ಪದೂರ ನಡೆದಮೇಲೆ ಇನ್ನೊಬ್ಬನನ್ನು ಕೈಕಟ್ಟಿ ಕರೆದುಕೊಂಡು ಹೋಗುತ್ತಿದ್ದರು. ನಾಗಶರ್ಮ ವಿಚಾರಿಸಿ ಮಗಳಿಗೆ ಹೀಗೆಂದನು: "ಇವರು ಯಜ್ಞದತ್ತ ಮತ್ತು ದೇವದತ್ತ ಎಂಬ ವಣಿಜರು.; ಇವರು ಗೋಧೂಮ ಚಣಕಾದಿಗಳನ್ನು ಸಂಗ್ರಹಿಸಿ ಲಾಭ ಲಾಲಸೆಯಿಂದ ವಿಕ್ರಯಿಸುವವರು; ಇವರು ಚಂಪಾಪುರಕ್ಕೆ ಬಂದು ವಿವಿಧ ಧಾನ್ಯಗಳನ್ನು ಮಾರಲಾರಂಭಿಸಿದರು; ಅದೇ ನಗರದಲ್ಲಿ ತಾರಕನೆಂಬ ವರ್ತಕನಿದ್ದನು; ಅವನು ಕೈಸಂಜ್ಞೆಗಳಿಂದ ಮೋಸವನ್ನು ಮಾಡುತ್ತ ಧಾನ್ಯಗಳನ್ನು ಕದಿಯುತ್ತಿದ್ದನು. ಮತ್ತು ಅದನ್ನು ಜಯಾಕರನೆಂಬ ವರ್ತಕನಿಗೆ ಕೊಡುತ್ತಿದ್ದನು. ಜಯಾಕರನ ಮನೆಯ ಭಿತ್ತಿಗಳ ಮೇಲೆ ಚಿತ್ರಗಳನ್ನು ಬರೆದು ಜನರಿಗೆ ಅವನ್ನು ತೋರಿಸುತ್ತ ಕಥೆಗಳನ್ನು ಹೇಳುತ್ತ ತಾರಕನು ವಂಚನೆಮಾಡುತ್ತಿದ್ದನು. ಅವನು ಹೇಳಿದ ಕಥೆಗಳಲ್ಲಿ ಒಂದು: ಒಂದೂರಿನಲ್ಲಿ ಧನಪಾಲಶೆಟ್ಟಿ ಎಂಬ ಶ್ರೀಮಂತನಿದ್ದನು. ಅವನ ಮಗ ಧನದತ್ತನು ಹಾವು ಕಚ್ಚಿ ಸತ್ತನು. ನಿರ್ವಿಷೀಕರಣಮಾಡುವ ಮಂತ್ರಗಾರರನ್ನು ಧನಪಾಲಸೆಟ್ಟಿ ಕರೆಯಿಸಲು ಅವರು ಈ ರಾತ್ರಿ ಕಳೆದರೆ ವಿಷವಿಳಿಸಿ ಬದುಕಿಸುತ್ತೇವೆಂದು ಮಾತುಕೊಟ್ಟರು. ಸರ್ಪದಷ್ಟನ ಬಳಿ ನಾಲ್ಕು ಜನರನ್ನು ಕಾವಲಿರಿಸಿದನು. ಅವರಲ್ಲಿ ಒಬ್ಬ ಕುರಿಯನ್ನು ತರಲು ಹೋಗಿ ಬೇಗನೆ ಹಿಂದಿರುಗಿ ಬಂದನು; ಇನ್ನೊಬ್ಬನು ಸೌದೆಯನ್ನು ತಂದನು; ಇನ್ನೊಬ್ಬನು ಬೆಂಕಿಯನ್ನು ತರಲು ಹೊರಟನು; ಇನ್ನೊಬ್ಬನು ಸರ್ಪದಷ್ಟನ ಹತ್ತಿರಲೇ ಇದ್ದು ಅವನನ್ನು ಬದುಕಿಸುವ ಆಸೆಯಲ್ಲಿದ್ದನು. ಈ ನಾಲ್ವರೂ ಆ ಕುರಿಯ ಮಾಂಸವನ್ನು ಬೇಯಿಸಿ ತಿಂದರು. ರಾತ್ರಿ ಕಳೆದಮೇಲೆ ಮಂತ್ರವಾದಿಗಳು ಬಂದು ಸರ್ಪದಷ್ಟನನ್ನು ಬದುಕಿಸಿ ಎಬ್ಬಿಸಿದರು. ಅವರಿಗೆ ಮಣಿಸ್ವರ್ಣಾದಿಗಳನ್ನು ಕೊಟ್ಟು ಸಂತೋಷಪಡಿಸಲಾಯಿತು. ಇಂಥ ಕಥೆಗಳನ್ನು ಹೇಳುತ್ತ ಜನರ ಕಣ್ಮನಗಳನ್ನು ವಂಚಿಸುತ್ತ ತಾರಕನು ಬಹು ಧಾನ್ಯವನ್ನು ಕದ್ದನು. ಧರ್ಮಾಧಿಕರಣದವರು ಇದನ್ನು ಕಂಡು ಹಿಡಿದು ಅವನ ಮೇಲೆ ಅಸತ್ಯದ ಮತ್ತು ಚೌರ್ಯದ ದೂರನ್ನು ತಂದರು. ರಾಜನು ಅವನ ಜಿಹ್ವಾಹಸ್ತಪದಚ್ಛೇದವನ್ನು ಮಾಡಿ ಎಂದು ಅಪ್ಪಣೆಮಾಡಿದನು. ಹಾಗೆ ಮಾಡಲು ಇವನನ್ನು ಒಯ್ಯುತ್ತಿದ್ದಾರೆ, ಮಗಳೆ, ಎಂದು ನಾಗಶರ್ಮ "ಅಸತ್ಯವನ್ನು ಹೇಳದ ಚೋರತನ ಮಾಡದ ವ್ರತಗಳು ನಿನಗಿರಲಿ" ಎಂದು ಹೇಳಿದ ಮಾತನ್ನು ನಾಗಶ್ರೀ ಒಪ್ಪಿ ಮುಂದುವರಿದು ತಂದೆಯೊಡನೆ ಹೋಗುತ್ತಿದ್ದಳು.

ದಾರಿಯಲ್ಲಿ ಒಬ್ಬನನ್ನು ಶೂಲಕ್ಕೇರಿಸಲು ಕರೆದುಕೊಂಡು ಹೋಗುತ್ತಿದ್ದರು. ಏಕೆ ಎಂಬುದನ್ನು ವಿಚಾರಿಸಿ ನಾಗಶರ್ಮ ಮಗಳಿಗೆ ಹೇಳುತ್ತಾನೆ; ಚಂಪಾಪುರಿಯ ಸಮೀಪದಲ್ಲಿ ಶೈಲಪುರ ಎಂಬ ಊರು. ಅಲ್ಲಿ ಮತ್ಸ ಎಂಬ ಹೆಸರಿನ ರಾಷ್ಟ್ರಕೂಟ ಕುಟುಂಬಿಕ;

ಅವನ ಹೆಂಡತಿ ಜಯುಕಾ; ಅವರಿಗೆ ನಂದ, ಪೋದಕ ಎಂಬಿಬ್ಬರು ಮಕ್ಕಳು; ಅವರ ಮಾವ ತನ್ನ ಮಗಳನ್ನು ಜೇಷ್ಠನಾದ ನಂದನಿಗೆ ಕೊಟ್ಟನು ; ಅವರಿಬ್ಬರಿಗೂ ಮದುವೆ ಆಗಿರಲಿಲ್ಲ ; ನಂದನು ಧನಾಕಾಂಕ್ಷೆಯಿಂದ ಹನ್ನೆರಡು ವರ್ಷ ವ್ಯಾಪಾರಕ್ಕಾಗಿ ಹೊರಟನು, ದೇಶಾಂತರಗಳಿಗೆ. ನಂದನು ಬರಲಿಲ್ಲವೆಂದು ಅವನ ಮಾವ ತನ್ನ ಮಗಳನ್ನು ಪೋದನಿಗೆ ಕೊಟ್ಟು ಮದುವೆ ಮಾಡುವ ದಿನದಲ್ಲಿ ನಂದನು ಬಂದನು. ಅವನ ಮಾವ ಮಗಳನ್ನು ಮದುವೆಯಾಗೆಂದು ಕೇಳಿದಾಗ ಅವನು ಒಪ್ಪಲಿಲ್ಲ ; ಬೋದನೂ ಸಮ್ಮತಿಸಲಿಲ್ಲ. ಹೀಗೆ ನಂದಬೋದರಿಂದ ಪರಿತ್ಯಕ್ತಳಾದ ಆ ಕನ್ಯೆ, ಸೋದಾಲಿಕಾ ಎಂಬವಳು, ಪಿತೃಗೃಹದಲ್ಲಿಯೇ ಇದ್ದಳು. ಅದೇ ನಗರದಲ್ಲಿದ್ದ ನಾಗಶರ್ಮ ಕಟುಕೆಯರ ಮಗ ನಾಗಶೂರನೆಂಬವನು ತನ್ನ ನಾಲ್ವರು ಭಾರ್ಯೆಯರನ್ನು ಬಿಟ್ಟು ಸೋದಾಲಿಕೆಯೊಡನೆ ರಮಿಸುತ್ತಿದ್ದನು. ಒಂದುಸಲ ಅವನು ಸೋದಾಲಿಕೆಯೊಡನೆ ಚಂಪಾಪುರಿಗೆ ಬಂದು ಮದಾತುರನಾಗಿದ್ದಾಗ ನಗರ ರಕ್ಷಕರು ಅವರನ್ನು ಹಿಡಿದರು. ರಾಜನ ಬಳಿಗೆ ಅವರನ್ನು ಒಯ್ದರು. ಕಬ್ಬಿಣದ ಸ್ತ್ರೀ ವಿಗ್ರಹವನ್ನು ಮಾಡಿಸಿ ಅದನ್ನು ಕೆಂಪಗೆ ಕಾಸಿ ಅದನ್ನು ಅಪ್ಪಿಕೊಳ್ಳುವಂತೆ ರಾಜನು ನಿಯಮಿಸಿದನು. ಆದ್ದರಿಂದ ಅವನನ್ನು ಕರೆದುಕೊಂಡು ಹೋಗುತ್ತಿದ್ದಾರೆ ಎಂದು ನಾಗಶರ್ಮ ಹೇಳಿದನು. ಅವರಿಬ್ಬರು ಇನ್ನೂ ಮುಂದಕ್ಕೆ ಹೋಗುತ್ತಿರಲು ಹಿಂದಿನಂತೆ ಇನ್ನೊಬ್ಬ ಮನುಷ್ಯನನ್ನು ಹೆಡಗೈ ಕಟ್ಟಿ ಒಯ್ಯುತ್ತಿದ್ದರು. ವಿಚಾರಿಸಲಾಗಿ ಅವನ ಕಥೆ ನಾಗಶರ್ಮನಿಗೆ ತಿಳಿಯಿತು : ಅವನು ಧೀರಪುಣ್ಯನೆಂಬ ಗೋಪಾಲಕ. ಅವನ ಕೆಲಸವನ್ನು ನೋಡಿ ರಾಜನು ಸಂತುಷ್ಟನಾದನು. ಇತರರೂ ತಂತಮ್ಮ ಗೋಮಂಡಲಗಳನ್ನು ಅವನ ರಕ್ಷೆಗೆ ಒಪ್ಪಿಸಿದರು. ಧೀರಪುಣ್ಯನು ಒಳ್ಳೊಳ್ಳೆಯ ಹಸುಗಳನ್ನು ಆರಿಸಿಕೊಂಡು ಅವು ತನ್ನವೆಂದು ತನ್ನ ಮನೆಯಲ್ಲಿಟ್ಟುಕೊಂಡನು; ರಾಣಿಯ ಕಾಮಧೇನುವನ್ನು ಕೂಡ ತನ್ನದಾಗಿಸಿಕೊಂಡನು. ರಾಜನಿಗೆ ಎಲ್ಲರೂ ದೂರು ಹೇಳಲಾಗಿ ಅವನು ಕೋಪೋದ್ದೀಪಿತನಾಗಿ ಧೀರಪುಣ್ಯನನ್ನು ನಗರದಿಂದ ಅಟ್ಟಿ ಕಳೆಯಬೇಕೆಂದು ಅಪ್ಪಣೆಮಾಡಿದನು. ಇದನ್ನು ಕೇಳಿ ನಾಗಶ್ರೀ ಹೆದರಿದವಳಾಗಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಪಂಚಾಣು ವ್ರತಗಳನ್ನು ಆ ಮುನಿಗೆ ಒಪ್ಪಿಸಿಬಿಟ್ಟರೆ ತಾನೂ ಇವರೆಲ್ಲರಂತೆ ದುರ್ಗತಿಗೆ ಹೋಗಬೇಕಾಗುತ್ತದೆ ಎಂದು ಹೇಳಲು ನಾಗಶರ್ಮ "ಅಯ್ದು ವ್ರತಗಳನ್ನೂ ಇಟ್ಟುಕೋ, ನಾವು ಹೋಗಿ ಆ ಸವಣನನ್ನು ನೋಡಿ ಮನೆಗೆ ಹೋಗೋಣ" ಎಂದು ಸೂರ್ಯಮಿತ್ರಾಚಾರ್ಯನಿದ್ದಲ್ಲಿಗೆ ಬಂದನು. ಬಂದು 'ಲೋ, ಸವಣಾ, ಯಾವ ಕಾರಣದಿಂದ ನನ್ನ ಮಗಳನ್ನು ವಂಚನೆಯಿಂದ ನಿನ್ನವಳನ್ನಾಗಿ ಮಾಡಿಕೊಂಡೆ' ಎಂದು ಅರಚಿದನು. ಆಗ ಆ ಮುನಿ "ನಾಗಶ್ರೀ ಇತ್ತ ಬಾ" ಎಂದು ಕರೆಯಲು ಅವಳು ಅವನ ಬಳಿಗೆ ಹೋಗಿ ಕುಳಿತಳು. ಇದನ್ನು ನೋಡಿ ನಾಗಶರ್ಮ ಆ ನಗರದ ರಾಜ ಚಂದ್ರವಾಹನನಿಗೆ ದೂರಿತ್ತನು. ರಾಜನು ಸಪರಿವಾರನಾಗಿ ಸೂರ್ಯಮಿತ್ರನ ಸಮೀಪಕ್ಕೆ ಬಂದು ವಿಷಯವೇನೆಂದು ತಿಳಿಯಲು ಕುತೂಹಲಿತನಾದನು. ನಾಗಶರ್ಮ ರಾಜನ ಎದುರಿಗೆ ಆಗ "ನಾಗಶ್ರೀ ನನ್ನ ಮಗಳು, ನಾಗರಪ್ರಸಾದದಿಂದ

ಹುಟ್ಟಿದವಳು, ಇವರು ನನಗೆ ಮೋಸಮಾಡಿ ತಮ್ಮ ಮಗಳಿವಳು ಎಂದು ಹೇಳುತ್ತಾರೆ" ಎಂದನು. ಆಗ ಸೂರ್ಯಮಿತ್ರ "ರಾಜ, ನಾಗಶ್ರೀ ನನ್ನ ಮಗಳು, ನಾನು ನಾಲ್ಕು ವೇದಗಳನ್ನೂ ಇವಳಿಗೆ ಹೇಳಿಕೊಟ್ಟಿದ್ದೇನೆ" ಎಂದನು. ಹಾಗಾದರೆ ಇವಳಿಂದ ವೇದಪಠನ ಮಾಡಿಸಿರಿ ಎಂದು ಸೂರ್ಯಮಿತ್ರನಿಗೆ ಹೇಳಿದನು. ಆ ಮುನಿ ನಾಗಶ್ರೀಗೆ "ಮಗು, ನಾನು ನಿನಗೆ ವಾಯುಭೂತಿಯಾಗಿದ್ದಾಗ ಕಲಿಸಿದ್ದ ವೇದಗಳನ್ನು ಹೇಳು" ಎನ್ನಲಾಗಿ ಅವಳು ಜಾತಿಸ್ಮರೆಯಾಗಿ ಓಂಕಾರಪೂರ್ವಕವಾಗಿ ಕ್ರಮವಾಗಿ ವೇದಪಠನವನ್ನು ಮಾಡಿದಳು. ರಾಜನು ಆಶ್ಚರ್ಯಪಟ್ಟು ನಾಗಶ್ರೀ ನಿಮ್ಮ ಮಗಳೇ ಸರಿ ಎಂದು ಮುನಿಗೆ ಹೇಳಿ ನಾಗಶ್ರೀಗೆ ಇವೆಲ್ಲ ಹೇಗೆ ಬಂದುವು ಎಂದು ಕೇಳಲಾಗಿ ಸೂರ್ಯಮಿತ್ರ ಹಿಂದಿನ ಕಥೆಯನ್ನೆಲ್ಲಾ ವಿವರವಾಗಿ ಹೇಳಿದನು. ಇದನ್ನು ಕೇಳಿ ಚಂದ್ರವಾಹನ ರಾಜ ವೈರಾಗ್ಯ ಹೊಂದಿ ಸೂರ್ಯಮಿತ್ರನಿಂದ ಜೈನ ತಪಸ್ವಿ ದೀಕ್ಷೆಯನ್ನು ವಹಿಸಿದನು. ಸೋಮಶರ್ಮನೂ ದಿಗಂಬರ ದೀಕ್ಷೆಯನ್ನು ಸೂರ್ಯಮಿತ್ರನಿಂದ ಪಡೆದನು. ನಾಗಶ್ರೀಯೂ ಅವಳ ತಾಯಿ ತ್ರಿವೇದಿಯೂ ಬ್ರಾಹ್ಮಿಕಾರ್ಯೆಯ ಸಮೀಪದಲ್ಲಿ ತಪೋದೀಕ್ಷೆಯನ್ನು ತೊಟ್ಟರು. ಸೂರ್ಯಮಿತ್ರನೂ ಅಗ್ನಿಭೂತಿಯೂ ಕರ್ಮಾಷ್ಟಕಗಳನ್ನು ನಾಶಮಾಡಿ ಅಗ್ರಪರ್ವತಮಸ್ತಕದಲ್ಲಿ ಮೋಕ್ಷಸಿದ್ಧಿಯನ್ನು ಪಡೆದರು. ನಾಗಶ್ರೀಯೂ ಅವಳ ತಾಯಿ ತ್ರಿವೇದಿಯೂ ಅಚ್ಯುತ ಕಲ್ಪದ ಪದ್ಮಗುಲ್ಮ ವಿಮಾನದಲ್ಲಿ ದೇವತೆಗಳಾಗಿ ಹುಟ್ಟಿದರು.

ಉಜ್ಜಯಿನಿಯಲ್ಲಿ ಇಂದ್ರದತ್ತ ಶ್ರೇಷ್ಠಿ, ಅವನ ಭಾರ್ಯೆ ಗುಣಮತಿ, ಇವರಿಗೆ ನಾಗಶರ್ಮನಾಗಿದ್ದ ದೇವನು ಸುರೇಂದ್ರದತ್ತನೆಂಬ ಮಗನಾದನು. ಅದೇ ನಗರದಲ್ಲಿ ಇಭ್ಯಕುಲ ಸಂಭವನಾದ ಸುಭದ್ರನೂ ಅವನ ಭಾರ್ಯೆ ಸರ್ವಯಶೆ ಎಂಬವಳೂ ಇದ್ದರು. ಇವರಿಗೆ ತ್ರಿವೇದಿಯಾಗಿದ್ದವಳು ಯಶೋಭದ್ರೆಯೆಂಬ ಕನ್ಯೆಯಾಗಿ ಹುಟ್ಟಿದಳು. ಇವಳಿಗೂ ಸುರೇಂದ್ರದತ್ತನಿಗೂ ವಿವಾಹವಾಯಿತು. ಇವರಿಗೆ ನಾಗಶ್ರೀಯ ಜೀವ ಅವಂತಿಸುಕುಮಾಲನೆಂಬ ಹೆಸರಿನಿಂದ ಮಗನಾಗಿ ಹುಟ್ಟಿತು. ಮಗನಿಗೆ ಶ್ರೇಷ್ಠಿ ಪದವಿಯನ್ನು ಕೊಟ್ಟು ಸುರೇಂದ್ರದತ್ತನು ಜಿನಸೇನನ ಹತ್ತಿರ ಜೈನ ದೀಕ್ಷಿತನಾದನು. ಅವಂತಿ ಸುಕುಮಾಲನು ನವಯೌವನನಾಗಿ ಮೂವತ್ತೆರಡು ಅರಮನೆಗಳಲ್ಲಿ ಇರುವವನಾಗಿ ಮೂವತ್ತೆರಡು ಲಕ್ಷಣಗಳಿಂದ ಕೂಡಿದವನಾಗಿ ಮೂವತ್ತೆರಡು ಸತಿಯರಿಂದ ನೆರೆದವನಾಗಿ ಹಾರರಾಜಿತ ವಕ್ಷಸ್ಕನಾಗಿ ಸ್ವಪತ್ತನದಲ್ಲಿ ಸುಖವಾಗಿದ್ದನು. ಇವನನ್ನು ನೋಡಿ ನೈಮಿತ್ತಿಕರು ಇವನು ಜೈನ ಮುನಿರೂಪವನ್ನು ಕಂಡಕೂಡಲೇ ವಿರಕ್ತನಾಗಿ ಜೈನದೀಕ್ಷೆಯನ್ನು ತಾಳುವನೆಂದು ಭವಿಷ್ಯ ಹೇಳಿದರು. ಅವನ ತಾಯಿ ಅವನ ಮನೆಯ ಬಳಿ ದೂರದಲ್ಲಿಯಾದರೂ ಕೂಡ ಯಾವ ಜೈನಯತಿಯೂ ಸುಳಿದಾಡದಂತೆ ನೋಡಿಕೊಂಡಳು. ಉಜ್ಜಯಿನೀ ನಗರದ ರಾಜ ಪ್ರದ್ಯೋತ; ಅವನ ಮಹಾದೇವಿ ಜ್ಯೋತಿರ್ಮಾಲೆ. ಒಂದು ದಿನ ಆ ಊರಿಗೆ ದಕ್ಷಿಣ ದೇಶದಿಂದ ಒಬ್ಬ ರತ್ನಕಂಬಳ ವ್ಯಾಪಾರಿ ಬಂದನು. ಅವನು ತಂದ ಎಂಟು ರತ್ನಕಂಬಳಗಳನ್ನು ರಾಜನು ಕೊಳ್ಳಲಾಗಲಿಲ್ಲ; ಅವಂತಿಸುಕುಮಾಲನ ತಾಯಿ ಅವುಗಳನ್ನು ಬೆಲೆಗೆ ಕೊಂಡು ಅವುಗಳನ್ನು ಮೂವತ್ತೆರಡು

ವಿಭಾಗಗಳಾಗಿ ಮಾಡಿ ಮೂವತ್ತೆರಡು ಸೊಸೆಯರಿಗೆ ಹಂಚಿದಳು. ರಾಜ ಇದನ್ನು ಕೇಳಿದವನಾಗಿ ಸುಕುಮಾರನ ಹರ್ಮ್ಯಕ್ಕೆ ಬಂದು ಸತ್ಕೃತನಾಗಿ ಸ್ನಾನಕ್ಕಾಗಿ ಅಲ್ಲಿದ್ದ ಬಾವಿಯಲ್ಲಿ ಇಳಿದನು; ಅವನ ಮಣಿಹಾರ ಕಳಚಿ ಬಿದ್ದು ನೀರೊಳಗೆ ಮುಳುಗಿತು. ಅದನ್ನು ಹುಡುಕಿಸಲು ತೊಡಗಿದಾಗ ಅಂಥ ಹಾರಗಳು ಲೆಕ್ಕವಿಲ್ಲದಷ್ಟು ಆ ಬಾವಿಯ ತಳದಲ್ಲಿದ್ದುವು. ರಾಜನು ಆಶ್ಚರ್ಯಪಟ್ಟು ದಿವ್ಯ ಭೋಜನ ಮಾಡಿ ಸರಸಸಂಭಾಷಣೆಯಿಂದ ಸುಕುಮಾರನ ಸುಖಶ್ರೀಯನ್ನು ಹೊಗಳಿದನು.

ಒಂದು ದಿನ ಅಲ್ಲಿಗೆ ಮುನಿಸಂಘ ಮಳೆಗಾಲದಲ್ಲಿ ಬಂತು. ಆ ಋಷಿಗಳು ಸುಕುಮಾರನ ಅರಮನೆಯ ಹತ್ತಿರ ತಂಗಿ ಚಾತುರ್ಮಾಸ್ಯವಿದ್ದು ಅದರ ಅವಸಾನದಲ್ಲಿ ಪ್ರಜ್ಞಪ್ತಿ ಪಠನವನ್ನು ಮಾಡಿದರು. ಅದನ್ನು ಕೇಳಿ ಸುಕುಮಾರನು ಜಾತಿಸ್ಮರನಾಗಿ ವೈರಾಗ್ಯವನ್ನು ಹೊಂದಿ ಋಷಿಗಳ ಸಮೀಪಕ್ಕೆ ಬಂದು ತನ್ನ ಆಯುಸ್ಸಿನ ಮಿತಿಯನ್ನು ಕೇಳಿದನು. ಮೂರೇ ದಿವಸ ನಿನಗಾಯುಷ್ಯ ಎಂದು ಅವರು ಹೇಳಲು ಸುಕುಮಾರನು ಪ್ರತ್ಯಾಖ್ಯಾನ ಪೂರ್ವಕವಾಗಿ ಪೀಲುವೃಕ್ಷದ ಕೆಳಗೆ ತಪೋಗ್ರಹಣ ಮಾಡಿದನು. ಮಹಾಕಾಲ ಉದ್ಯಾನದಲ್ಲಿ ಅವನು ನಿಷ್ಪಂದನಾಗಿ ಧ್ಯಾನಾರೂಢನಾಗಿದ್ದನು; ಕಷಾಯ ಹೀನ ಚಿತ್ತನಾಗಿ ಮೃತಕ ಶಯ್ಯೆಯಲ್ಲಿದ್ದನು. ನರಿಗಳಾಗಿ ಹುಟ್ಟಿದ್ದ ಅಗ್ನಿಭೂತಿ ಭಾರ್ಯೆ ಸೋಮದತ್ತೆಯೂ ಅವಳು ನಾಲ್ವರು ಮಕ್ಕಳೂ ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ ಸುತ್ತಾಡುತ್ತ ಮಹಾಕಾಲಕ್ಕೆ ಬಂದು ಪೂರ್ವವೈರ ಕಾರಣವಾಗಿ ಸುಕುಮಾಲನನ್ನು ನೋಡಿದ ಕೂಡಲೇ ಅವನ ಕಾಲುಗಳನ್ನು ಸಿಗಿದು ರಕ್ತಪಾನ ಮಾಡಿದುವು. ಹೀಗೆ ಮೂರು ದಿನಗಳು ಆ ನರಿಗಳು ಅವನ ದೇಹವನ್ನು ತಿಂದರೂ ಸಮಾಧಿ ಮರಣದಿಂದ ಅವನು ಸತ್ತು ಅಚ್ಯುತ ಕಲ್ಪದ ನಳಿನೀ ಗುಲ್ಮ ವಿಮಾನದಲ್ಲಿ ಮೂವತ್ತೆರಡು ಸಾಗರೋಪಮಾಯುಷ್ಯನಾಗಿ ದೇವತೆಯಾಗಿ ಹುಟ್ಟಿದನು.

ಇರುಳಿನ ನಾಲ್ಕನೆಯ ಜಾವದಲ್ಲಿ ದೇವತಾದಿಗಳ ಸದ್ದುಗಳನ್ನು ಕೇಳಿ ಯಶೋಭದ್ರೆ ಸೊಸೆಯರೊಡನೆ ಹುಡುಕುತ್ತ ಬಂದು ಮೃತಕವನ್ನು ಕಂಡು ದುಃಖಿತಳಾದಳು. ಗರ್ಭವತಿಯರಾದ ಎಂಟು ಸೊಸೆಯರನ್ನು ಉಳಿದು ಮಿಕ್ಕವರೆಲ್ಲ ಜೈನದೀಕ್ಷೆಯನ್ನು ಧರಿಸಿದರು; ತಪಸ್ಸಿನಿಂದ ಸ್ವರ್ಗವನ್ನು ಸಂಪಾದಿಸಿಕೊಂಡರು. ಈ ಕಥೆಯನ್ನು ಕುಶಲರಾದ ನರರು ಇಂದಿಗೂ ಹೇಳುತ್ತಾರೆ. ಅವಂತಿ ಸುಕುಮಾಲನು ಸತ್ತ ಎಡೆ ಇಂದಿಗೂ ಕಾಪಾಲಿಕರಿಂದ ರಕ್ಷಿತವಾಗಿದೆ. ಆ ಕಾಪಾಲಿಕರಿಗೆ ಹಣವನ್ನು ಕೊಟ್ಟು ಮಹಾಜನರು ಪುಣ್ಯ ಬುದ್ಧಿಯಿಂದ ಅಲ್ಲಿ ಶವದಹನ ಮಾಡುತ್ತಾರೆ. ದೇವತೆಗಳು ಬಂದು ಅವಂತಿ ಸುಕುಮಾಲನ ಶವವನ್ನು ಗಂಧೋದಕಗಳಿಂದ ಪೂಜೆ ಮಾಡಿದ್ದರಿಂದ ಸರ್ವದಿಕ್ಕುಗಳೂ ಸುಗಂಧಮಯವಾಗಿ ಗಂಧವತೀ ಎಂಬ ನದಿ ಉತ್ಪನ್ನವಾಯಿತು. ಸುಕುಮಾಲನ ಭಾರ್ಯೆಯರು ಮಾಡಿದ ಕಲಕಲ ಸ್ವನದಿಂದ ಲೋಕವಿಖ್ಯಾತನಾದ ಕಲಕಲೇಶ್ವರನೆಂಬ ದೇವನು ಅಲ್ಲಿ ನೆಲಸಿರುವನು. (೨೬೯ ಶ್ಲೋಕಗಳು)

## ೧೨೭. ಸುಕೋಶಲ ಕಥಾನಕಂ

ವಿನೀತಾವಿಷಯ, ಕೋಶಲವೆಂಬ ನಗರ. ರಾಜಪ್ರಜಾಪಾಲ; ಅವನ ಮಹಾದೇವಿ ಸುಪ್ರಭೆ, ಅವರ ಶ್ರೇಷ್ಠಿ ಇಭ್ಯಕುಲದ ಸಿದ್ಧಾರ್ಥ; ಅವನ ಎರಡನೆಯ ಹೆಸರು ಧನಪತಿ. ಅವನಿಗೆ ಮೂವತ್ತೆರಡು ವನಿತೆಯರು, ಮೂವತ್ತೆರಡು ಕೋಟಿ ಕಸವರ; ಅವನ ಅಗ್ರವಲ್ಲಭೆ ಜಯಮತಿ. ಮಗನ ಉತ್ಪತ್ತಿಯನ್ನು ಬಯಸಿ ಅವನೂ ಅವನ ವಲ್ಲಭೆ ಜಯಮತಿಯೂ ಸೌಧತಲದ ಮೇಲೆ ಇರುವಾಗ ತನ್ನ ತಲೆಯಲ್ಲಿ ಅವನು ನರೆಗೂದಲನ್ನು ಕಂಡನು. ಜಯಮತಿ ಅವನಿಗೆ ಅದನ್ನು ತೋರಿಸುತ್ತ ಅದು ಧರ್ಮದೂತನೆಂದು ಹೇಳಿದಳು. ಅವನಿಗೆ ವೈರಾಗ್ಯ ಹುಟ್ಟಿ ತಪಸ್ಸಿಗೆ ಹೋಗಲು ಮನವಾಯಿತು. ವಂಶ ವರ್ಧನನಾದ ಮಗನು ಹುಟ್ಟುವ ವರೆಗೆ ತಪಸ್ಸಿಗೆ ಹೋಗಕೂಡದೆಂದು ಅವನ ಆಪ್ತರು ಹೇಳಿದರು. ಆ ಮಾತನ್ನು ಅವನು ಒಪ್ಪಿದನು. ಒಬ್ಬ ಜೈನಮುನಿ ಜಯಮತಿಗೆ ಸಮ್ಯಕ್ತ್ವೋಪದೇಶ ಮಾಡಿ ಅವಳಿಗೆ ಮಗನಾಗುವನೆಂದು ಆದೇಶಿಸಿದನು. ಅದರಂತೆ ಸರ್ವಲಕ್ಷಣ ಸಂಪನ್ನನಾದ ಒಬ್ಬ ಮಗ ಹುಟ್ಟಿದನು. ಈ ಸುದ್ದಿ ಸಿದ್ಧಾರ್ಥನಿಗೆ ತಿಳಿಯದಂತೆ ನೋಡಿಕೊಳ್ಳಲಾಗಿತ್ತು. ಆದರೆ ಒಬ್ಬ ಚೇಟಿ ಇನ್ನೊಬ್ಬಳಿಗೆ 'ನೋಡೇ, ಜಯಮತಿಗೆ ಮಗನು ಹುಟ್ಟಿದನು' ಎಂದು ಹೇಳಿದಳು. ಸೋಮಶರ್ಮನೆಂಬ ಬಡ ಬ್ರಾಹ್ಮಣನಿಗೆ ಈ ಮಾತು ಕೇಳಿಸಿತು. ಅವನು ಈ ಶುಭ ಸಮಾಚಾರವನ್ನು ಸೆಟ್ಟಿಗೆ ತಿಳಿಯಪಡಿಸಿ ಅವನಿಂದ ಅಂಗಸ್ಪೃಷ್ಟವನ್ನೂ ನೂರು ಗ್ರಾಮಗಳನ್ನೂ ಪಡೆದನು. ಅನಂತರ ಜಯಮತಿಯ ಬಳಿಗೆ ಹೋಗಿ ಪುತ್ರ ಮುಖವನ್ನು ನೋಡಿ ಸಂತುಷ್ಟನಾಗಿ ಸೆಟ್ಟಿ ಜಿನಪೂಜೆಮಾಡಿ ಧನದೇವನೆಂದು ಮಗುವಿಗೆ ಹೆಸರಿಟ್ಟನು. ನಗರದ ಜನರೆಲ್ಲ ನೆರೆದು ಅತಿ ಸಂತೋಷದಿಂದ ಅವನನ್ನು ಸುಕೋಶಲನೆಂದು ಕರೆದರು. ಸಿದ್ಧಾರ್ಥನು ಮಗನಿಗೆ ಸೆಟ್ಟಿ ಪಟ್ಟವನ್ನು ಕೊಟ್ಟು ವಿನಯಂಧರ ಗುರುಗಳ ಪಕ್ಕದಲ್ಲಿ ಅನೇಕ ಅನುಯಾಯಿಗಳೊಡನೆ ತಪೋದೀಕ್ಷೆಯನ್ನು ಧರಿಸಿದನು. ಅವನ ಹೆಂಡತಿ ಜಯಮತಿಗೆ ಗಂಡನ ಮೇಲೆ ಮುಳಿಸುಂಟಾಗಿ ಮನೆಯ ಹತ್ತಿರ ಸಂನ್ಯಾಸಿಗಳ ಸುಳಿದಾಟವಿಲ್ಲದಂತೆ ನಿಯಮಿಸಿದಳು. ಮಗನ ಪಾಲನೆಯನ್ನು ನೋಡಿಕೊಳ್ಳುತ್ತ ಅವಳು ಸುಖವಾಗಿದ್ದಳು. ಆ ಬಾಲಕನಿಗೆ ಐವರು ದಾದಿಗಳಿದ್ದರು; ಒಬ್ಬಳು ಸುನಂದೆ ಮೊಲೆಯೂಡುವವಳು, ನಂದೆಯು ಆಡಿಸುವ ದಾದಿ, ಸುಮತಿ ಊಟಮಾಡಿಸುವ ದಾದಿ, ಸುಪ್ರಭೆ ಸ್ನಾನ ಮಾಡಿಸುವವಳು, ಮೇಖಲೆಯು ಅಲಂಕಾರ ಮಾಡುವವಳು. ಇವರ ಆರೈಕೆಯಲ್ಲಿ ಸುಕೋಶಲನು ಬೆಳೆದು ದೊಡ್ಡವನಾದನು. ಅವನಿಗೆ ಮೂವತ್ತೆರಡು ಕನ್ಯೆಯರೊಡನೆ ವಿವಾಹವಾಯಿತು.

ಹೀಗಿರಲು ನೈಮಿತ್ತಿಕರು ಭವಿಷ್ಯವನ್ನು ನುಡಿದರು, ಸುಕೋಶಲನು ಎಂದು ಋಷಿ ರೂಪವನ್ನು ನೋಡುವನೋ ಅಂದು ಅವನು ವಿರಕ್ತನಾಗುವನೆಂದು. ಇದನ್ನು ಕೇಳಿ ಅವನ ತಾಯಿ ಯಾವ ಜೈನಯತಿಯೂ ಮಗನ ಮಾಡದ ಸಮೀಪದಲ್ಲಿ ಬರಕೂಡ ದೆಂದು ಕಟ್ಟಪ್ಪಣೆ ಮಾಡಿದಳು. ಒಂದು ದಿವಸ ಸುಕೋಶಲನೂ ಅವನ ತಾಯಿಯೂ,

ದಾದಿಯರೂ ಉಪ್ಪರಿಗೆಯ ಏಳನೆಯ ನೆಲೆಯಲ್ಲಿದ್ದು ದಿಗವಲೋಕನವನ್ನು ಮಾಡುತ್ತಿರುವಾಗ ಮಧ್ಯಾಹ್ನ ವೇಳೆಯಲ್ಲಿ ಅಸ್ಥಿಚರ್ಮಾವಶೇಷನಾಗಿದ್ದ ಮಾಸೋಪವಾಸಿ ಭಿಕ್ಷುಕನು ತನ್ನ ಮನೆಯನ್ನು ಹೊಕ್ಕು ಹೊರವಡುವುದನ್ನು ಸುಕೋಶಲನು ನೋಡಿ ಇವರಾರು, ಏಕೆ ಹೀಗೆ ಸುತ್ತಾಡುತ್ತಾರೆ ಎಂದು ತಾಯಿಯನ್ನು ಕೇಳಿದನು. "ಪುತ್ರ, ಅವನು ಯಾವನೋ, ಅಧನ್ಯ, ಅನಾಥ, ಸ್ವಜನ ವರ್ಜಿತ, ವಸ್ತ್ರಭುಕ್ತ ಪರಿತ್ಯಕ್ತನು, ಭಿಕ್ಷುಕ, ಬೀದಿ ಬೀದಿ ಅಲೆಯುವವನು, ಗೃಹಭಂಜಕ" ಎಂದು ಜಯಮತಿ ಹೇಳಿದಳು. ಈ ಮಾತುಗಳನ್ನು ಕೇಳಿ ಸುವ್ರತೆಯೆಂಬ ದಾದಿಯೂ ಸುಪ್ರಭೆಯೆಂಬವಳೂ ಖಿನ್ನರಾಗಿ ಜಯಮತಿ ಹೀಗೆ ಹೇಳಿದ್ದು ಸರಿಯಲ್ಲವೆಂದೂ ಕ್ರೂರವಾದ ಮಾತುಗಳೆಂದೂ ಆಕ್ಷೇಪಿಸಿದಾಗ ಜಯಮತಿ ಅವರನ್ನು ಮುಂದಕ್ಕೆ ಮಾತಾಡಲು ಬಿಡದೆ ಮೌನವಾಗಿರಿಸಿದಳು. ಇದನ್ನು ಕೇಳುತ್ತಿದ್ದ ಸುಕೋಶಲನಿಗೆ ಇವರೆಲ್ಲಾ ತನಗೆ ವಂಚನೆ ಮಾಡುತ್ತಿರುವಂತೆ ತೋರಿತು. ಇಷ್ಟರಲ್ಲಿ ಸೂಪಕಾರನು ಬಂದು ಅಡಿಗೆ ಸಿದ್ಧವಾಗಿದೆ, ಊಟಕ್ಕೆ ಬನ್ನಿರಿ ಎಂದು ಹೇಳಿದನು. ಜಯಮತಿಯೂ ದಾದಿಯರೂ ಸುಕೋಶಲನ ಮೂವತ್ತೆರಡು ಮಡದಿಯರೂ ಎಷ್ಟೇ ಬಲಾತ್ಕರಿಸಿದರೂ ಸುಕೋಶಲನು ಏನೋ ರಹಸ್ಯವಿದೆ, ನನಗೆ ತಿಳಿಸುತ್ತಿಲ್ಲ, ಅದನ್ನು ಪೂರ್ತಿ ತಿಳಿದ ಹೊರತು ನನಗೆ ಊಟ ಬೇಕಿಲ್ಲ ಎಂದು ಹಠ ಹಿಡಿದು ಸುವ್ರತೆಯೆಂಬ ದಾದಿಯನ್ನು ಕುರಿತು ಸತ್ಯ ಸಂಗತಿಯನ್ನು ತಿಳಿಸುವಂತೆ ಕೇಳಿದನು. "ಈ ಬಂದ ಭಿಕ್ಷುಕ ನಿನ್ನ ತಂದೆಯಾದ ಸಿದ್ಧಾರ್ಥ, ಬಾಲ್ಯದಲ್ಲಿಯೇ ನಿನಗೆ ಸೆಟ್ಟಿಪಟ್ಟ ಕಟ್ಟಿ ತಪಸ್ಸನ್ನು ಸ್ವೀಕರಿಸಿದನು. ಭಿಕ್ಷೆಗಾಗಿ ನಿನ್ನ ಮನೆಗೆ ಬಂದ, ನಿನ್ನ ತಾಯ ಅಪ್ಪಣೆಯಂತೆ ದ್ವಾರಪಾಲಕರು ಅವನನ್ನು ತಿರಸ್ಕರಿಸಿದ್ದರಿಂದ ಭಿಕ್ಷಾಂತರಾಯವಾಗಿ ಅವನು ಹೊರಟುಹೋದನು" ಎಂದು ಅವಳು ವಿಷಯವನ್ನೆಲ್ಲಾ ತಿಳಿಸಿದಳು. ಸುಕೋಶಲನು ತಾನು ಯತಿರೂಪವನ್ನು ಧರಿಸಿಯಲ್ಲದೆ ಉಣ್ಣೆನೆಂದು ನಿಶ್ಚಯಿಸಿ ಆ ಯತಿಯಿದ್ದ ಉದ್ಯಾನಕ್ಕೆ ಹೋಗಿ ಶಿಲಾತಲದಲ್ಲಿ ಕುಳಿತಿದ್ದ ಮುನಿಯನ್ನು ಕಂಡಕೂಡಲೇ ಜಾತಿಸ್ಮರನಾದನು. ಕಳೆದ ಐದು ಜನ್ಮಗಳ ನೆನಪು ಅವನಿಗುಂಟಾಯಿತು. ಮಲಯ ಪರ್ವತದಲ್ಲಿ ಮಲಯ ಸುಂದರನೆಂಬ ಆನೆಯಿತ್ತು ; ಅದರ ವಂಶದಲ್ಲಿ ಸಿದ್ಧಾರ್ಥನು ಆನೆಯಾಗಿ ಹುಟ್ಟಿದನು. ಆ ಆನೆ ಪದ್ಮಾವತಿ ಮಲಯವತಿ ಎಂಬೆರಡು ಹೆಣ್ಣಾನೆಗಳೊಡನೆ ಕ್ರೀಡಿಸುತ್ತಿತ್ತು. ಒಂದು ಸಲ ಮಲಯಾವತಿಗೆ ಪದ್ಮಾವತಿಯ ಮೇಲೆ ಅಸೂಯೆಯುಂಟಾಗಿ ಅದು ಮಲಯ ಪರ್ವತದ ಶಿಖರದಿಂದ ಬಿದ್ದು ಸತ್ತಿತು.

ಅಂಗದೇಶದ ಚಂಪಾಪುರಿಯಲ್ಲಿ ಗಂಧಮಾದನನೆಂಬ ರಾಜನಿದ್ದನು. ಅವನು ಅಣುವ್ರತಶೀಲನೂ ಗುರುಸೇವಾನಿರತನೂ ಜಿನಾಗಮ ಪ್ರವೀಣನೂ ಸಹಸ್ರ ಜಿನಾಯತನ ನಿರ್ಮಾಪಕನೂ ಆಗಿದ್ದನು. ಆ ಚಂಪಾಪುರಿಯ ನಾಗದತ್ತನೆಂಬವನಿಗೆ ಸಾಗರದತ್ತನ ಮಗಳಾದ ಸುರೂಪೆ ಹೆಂಡತಿಯಾದಳು. ಅವಳಿಗೆ ಕೇಶಿನಿ ಎಂಬ ಮಗಳು ಹುಟ್ಟಿದಳು. ಪದ್ಮಾವತೀ ಎಂಬ ಆನೆ ಸತ್ತುಹೋಗಿ ಸುರೂಪೆಗೆ ವರಾಂಗನೆಂಬ ತಮ್ಮನಾಗಿ ಜನಿಸಿತು. ಇವನು ಲೋಕವಿಖ್ಯಾತನಾದ ಸೆಟ್ಟಿಯಾಗಿದ್ದನು. ಒಂದು ದಿನಸ ಗಂಧಭಾಜನ

ನೃಪತಿ ಜಿನಾಲಯದಲ್ಲಿ ಸುಕೇಶಿನಿಯನ್ನು ಕಂಡು ಅವಳು ಯಾರೆಂಬುದನ್ನು ಇನ್ನೊಬ್ಬ ನನ್ನು ಕೇಳಿ ತಿಳಿದುಕೊಂಡನು ; ಅವಳು ನಿನ್ನ ಸೆಟ್ಟಿ ನಾಗದತ್ತನ ಮಗಳು ಎಂದು ಅವನು ಹೇಳಿದನು. ರಾಜನು ಜಿನಾಲಯದಿಂದ ಬೇಗನೆ ಹೊರಟುಹೋದನು. ನಾಗ ದತ್ತನು ತನ್ನ ಹೆಂಡತಿ ಸುರೂಪೆಯನ್ನು ಕುರಿತು ಇವಳನ್ನು ಯಾರಿಗೆ ಕೊಟ್ಟು ಮದುವೆ ಮಾಡೋಣ ಎಂದು ಕೇಳಿದನು. ನನ್ನ ತಮ್ಮನ ಮಗ ಜಿತರಂಗನಿಗೆ ಇವಳನ್ನು ಮದುವೆ ಮಾಡುವುದು ಎಂದು ಅವಳು ಹೇಳಿದಳು. ಈ ಸುದ್ದಿಯನ್ನು ಕೇಳಿ ರಾಜನು ನಾಗದತ್ತನ ಬಳಿಗೆ ತನ್ನ ಪುರೋಹಿತನನ್ನು ಕಳುಹಿಸಿ ಕನ್ಯೆಯನ್ನು ತನಗೆ ಕೊಡುವಂತೆ ಸೂಚಿಸಿ ದನು. ಹಾಗೆಯೇ ಗಂಧಮಾದನನಿಗೂ ಸುಕೇಶಿನಿಗೂ ಮದುವೆಯಾಯಿತು. ರಾಜ ನಾಲ್ಕುವರ್ಷಗಳ ಕಾಲ ಅವಳೊಡನೆ ಸುಖವಾಗಿದ್ದನು. ಕಲಿಂಗಾಧಿಪತಿಯು ಕಾಡಾನೆ ಗಳನ್ನು ಹಿಡಿಯುವುದಕ್ಕಾಗಿ ವಾರಿಬಂಧವನ್ನು ನಿರ್ಮಿಸಿದನು. ಅದರೊಳಗೆ ಹೊಗುವ ಆನೆಗಳನ್ನು ಸುಕೇಶಿನಿಗೆ ತೋರಿಸಬೇಕೆಂದು ರಾಜನು ಹೇಳಿಕಳುಹಿಸಿದನು. ಮಣಿ ಕುಟ್ಟಿಮ ಭೂಮಿಯಲ್ಲಿ ಚಿತ್ರಕಾರನಿಂದ ಆನೆಯ ಚಿತ್ರಗಳನ್ನು ಬರೆಯಿಸಿ ಅವನ್ನು ಸುಕೇಶಿನಿಗೆ ತೋರಿಸಬಹುದೆಂದು ಕಲಿಂಗಾಧಿಪತಿ ಹೇಳಿದನು. ಹಾಗೆ ಬರೆಯಿಸಿದ ಚಿತ್ರ ಗಳನ್ನು ಸುಕೇಶಿನಿ ನೋಡಿ ಸಂತೋಷಪಟ್ಟಳು. ರಾಜನು ಆನೆಗಳೊಡನೆ ಹಾಗೆಯೇ ಕ್ರೀಡಿಸುತ್ತ ಒಂದು ಸಲಗವನ್ನು ವಶಪಡಿಸಿಕೊಂಡು ತನ್ನ ಪ್ರಿಯೆಯ ಬಳಿಗೆ ಬಂದನು. ಅನಂತರ ಸುಕೇಶಿನಿಯ ಸಮೀಪದಿಂದ ಬಂದ ಒಬ್ಬ ಆಳನ್ನು ರಾಜನು ನೋಡಿ ತನ್ನ ರಾಣಿ ಸಂತೋಷಚಿತ್ತಳಾಗಿರುವಳೇ ಎಂದು ಕೇಳಿದನು. ಅವನು ಅವಳು ಸಂತೋಷ ಪಡಲಿಲ್ಲವೆಂದೂ ಮಲಯಸುಂದರನೆಂಬ ಆನೆಯನ್ನು ಹಿಡಿದು ತಂದರೆ ಅವಳು ಮೆಚ್ಚುವ ಳೆಂದೂ ತಿಳಿಸಿದನು. ಈ ಮಾತನ್ನು ಕೇಳಿ ರಾಜನು ಸೈನ್ಯದೊಡನೆ ಮಲಯಾಚಲಕ್ಕೆ ಹೋದನು. ಅಲ್ಲಿ ಆ ಆನೆಯನ್ನು ನೋಡಿ ತನ್ನ ಭಟ್ಟನೊಬ್ಬನಿಗೆ ಅದನ್ನು ಹಿಡಿದು ತರುವಂತೆ ಅಪ್ಪಣೆಮಾಡಿದನು. ಅವನು ಆನೆಯ ಹತ್ತಿರಕ್ಕೆ ಬಂದು ನೋಡಿ ಭಯದಿಂದ ನಡುಗುತ್ತ ಅದನ್ನು ಹಿಡಿಯಲಾಗದೆ ರಾಜನ ಬಳಿಗೆ ಮರಳಿ ಬಂದನು. ರಾಜನಿಗೆ ಕೋಪವುಂಟಾಗಿ ಆ ದುಷ್ಟ ಗಜವನ್ನು ಕೊಂದು ಅದರ ದಂತಗಳನ್ನಾದರೂ ತರಬೇಕೆಂದು ಆಜ್ಞೆಮಾಡಿದನು. ಸೈನಿಕರು ಹಾಗೆಯೇ ಮಾಡಲು ರಾಜ ಸಂತುಷ್ಟಚಿತ್ತನಾಗಿ ಚಂಪಾ ಪುರಿಗೆ ಬಂದು ತನ್ನ ಕೈಯಿಂದಲೇ ಆ ಆನೆಯ ದಂತಗಳನ್ನು ತೆಗೆದುಕೊಂಡು ಸುಕೇಶಿ ನಿಯ ಬಳಿಗೆ ಹೋಗಿ ತಗೋ ನಿನ್ನ ಆನೆಯ ದಂತಗಳನ್ನು ಎಂದು ಅವಳ ಮುಂದಿರಿಸಿ ದನು. ಸುಕೇಶಿನಿ ಅವುಗಳನ್ನು ಅಪ್ಪಿಕೊಂಡು ಅಳುತ್ತ ಪ್ರೀತಿ ಕಾರಣವಾಗಿ ಮಡಿದಳು. ರಾಜನಿಗೆ ಆಶ್ಚರ್ಯವೂ ದುಃಖವೂ ಆದುವು. ಈ ಸುದ್ದಿಯನ್ನು ಕೇಳಿ ನಾಗದತ್ತನೂ ಸುರೂಪೆಯೂ ವರಾಂಗನೂ ಪ್ರಿಯಂಗುಲತೆಯೂ ವಿರಕ್ತಿಯನ್ನು ಹೊಂದಿ ಯಶೋಧರ ಗುರುಗಳ ಬಳಿ ಜೈನದೀಕ್ಷೆಯನ್ನು ಸ್ವೀಕರಿಸಿದರು. ರಾಜನೂ ಕೂಡ ಆ ಗುರು ಗಳಿಗೆ ನಮಸ್ಕರಿಸಿ ಸುಕೇಶಿನಿಯ ವೃತ್ತಾಂತವನ್ನು ತನಗೆ ಹೇಳಬೇಕೆಂದು ಅವರನ್ನು ಕೇಳಿದನು.

ದಕ್ಷಿಣಾಪಥದಲ್ಲಿ ಮಧುರಾನಗರಿ. ಅದರ ರಾಜ ಗಂಧರ್ವ ಭೂಪಾಲ. ಅವನ ರಾಜ ಶ್ರೇಷ್ಠಿ ಸುದರ್ಶನ; ಅವನ ಹೆಂಡತಿ ವೀರಶ್ರೀ. ಅವರಿಬ್ಬರ ಮಗ ಪ್ರಿಯಂಗುದರ್ಶನ. ಅದೇ ನಗರದಲ್ಲಿ ನಂದಿಶ್ರೇಷ್ಠಿ ಎಂಬವನೂ ಅವನ ಹೆಂಡತಿ ವಿಜಯೆ ಎಂಬವಳೂ ಇದ್ದರು; ಅವರಿಬ್ಬರ ಮಗಳು ಕೀರ್ತಿ ಎಂಬವಳು. ಇವಳಿಗೂ ಪ್ರಿಯಂಗುದರ್ಶನನಿಗೂ ಮದುವೆಯಾಯಿತು. ಒಂದು ದಿವಸ ಗಂಧರ್ವರಾಜನು ವಾರಿಬಂಧ ಕ್ರಿಯೆಯಿಂದ ಹಿಡಿದ ಕಾಡಾನೆಯನ್ನು ತನ್ನ ನಗರಕ್ಕೆ ತಂದನು. ಇದನ್ನು ಕಂಡು ಪ್ರಿಯಂಗುದರ್ಶನನೂ ಅವನ ಭಾರ್ಯೆ ಕೀರ್ತಿಯೂ ಸಂತಸಪಟ್ಟು ಮನದಲ್ಲಿ ನಿದಾನಿಸಿಕೊಂಡರು. ಆ ದಿನವೇ ಹಾವು ಕಚ್ಚಿ ಅವರಿಬ್ಬರೂ ಸತ್ತರು. ಪ್ರಿಯಂಗುದರ್ಶನನು ಮಲಯಸುಂದರನೆಂಬ ಆನೆಯಾಗಿ ಮಲಯಪರ್ವತದಲ್ಲಿ ಹುಟ್ಟಿದನು; ಅವನ ಭಾರ್ಯೆ ಕೀರ್ತಿ ಮಲಯಾವತಿ ಎಂಬ ಹೆಸರಿನ ಹೆಣ್ಣಾನೆಯಾಗಿ ಹುಟ್ಟಿದಳು. ಆ ಆನೆಗಳು ಪ್ರೀತಿಯಿಂದ ಅನ್ಯೋನ್ಯವಾಗಿದ್ದ ಅವು ಸುಖವಾಗಿದ್ದುವು. ಪದ್ಮಾವತಿ ಎಂಬ ಇನ್ನೊಂದು ಹೆಣ್ಣಾನೆಯೂ ಮಲಯಸುಂದರನಿಗೆ ವಲ್ಲಭೆಯಾಯಿತು. ಒಂದು ದಿನ ಮಲಯಸುಂದರ ಕ್ರೀಡಿಸುತ್ತ ಮಲಯಾವತಿಗೆ ಕೊಡುವ ಸ್ಥಾನವನ್ನು ಪದ್ಮಾವತಿಗೆ ಕೊಟ್ಟು, ಕಮಲವನ್ನೂ ಅದಕ್ಕೆ ಕೊಟ್ಟುದರಿಂದ, ಮಲಯಾವತಿಗೆ ಅಸೂಯೆಯುಂಟಾಗಿ ತಾಳಲಾರದೆ ಮಲಯಪರ್ವತದಿಂದ ಬಿದ್ದು ಸತ್ತುಹೋಯಿತು. ಆ ಆನೆಯೇ ಈಗ ಸುಕೇಶಿನಿಯಾಗಿ ಹುಟ್ಟಿದಳು. ಗಂಧಭಾಜನನಿಂದ ಮಲಯಸುಂದರನೆಂಬಾನೆ ಹತವಾದುದನ್ನು ಕಂಡು ಪದ್ಮಾವತಿಯೆಂಬ ಆನೆಯೂ ಸತ್ತಿತು. ಹಿಂದೆ ಹೇಳಿದಂತೆ ಸುಕೇಶಿನಿಯೂ ಸತ್ತು ಸುರಾಷ್ಟ್ರ ವಿಷಯದ ಗಿರಿನಗರದ ಅತಿರಥನೆಂಬ ರಾಜನಿಗೂ ಅವನ ಹೆಂಡತಿ ಗೋಮಿನಿ ಎಂಬವಳಿಗೂ ಮನೋಹರಿ ಎಂಬ ಮಗಳಾಗಿ ಹುಟ್ಟಿದಳು. ಆ ರಾಜನ ಪುರೋಹಿತ ವಿಜಯನಿಗೂ ಅವನ ಮಡದಿ ಕುಬೇರ ಶ್ರೀಗೂ ಮಲಯಸುಂದರನೆಂಬಾನೆ ಸತ್ತು ಕುಬೇರಕಾಂತನೆಂಬ ಮಗನಾಗಿ ಹುಟ್ಟಿತು. ಅದೇ ನಗರದಲ್ಲಿ ರಾಜಶ್ರೇಷ್ಠಿ ಧನದೇವ; ಅವನ ಹೆಂಡತಿ ಧನಶ್ರೀ; ವರಾಂಗನು ಸತ್ತು ಇವರಿಬ್ಬರಿಗೂ ಶ್ರೀಧರನೆಂಬ ಮಗನಾದನು. ಇವನು ಕುಬೇರಕಾಂತನಿಗೆ ಪರಮ ಮಿತ್ರನು. ಕುಬೇರಕಾಂತನ ಪರಮ ಪ್ರಿಯೆ ಕುಬೇರಶ್ರೀ ರತ್ನಕಂಬಳಿಯ ಕಾರಣದಿಂದ ಪ್ರಸಾದ ಶಿಖರದಿಂದ ಬಿದ್ದು ಸತ್ತಳು. ಇದನ್ನು ನೋಡಿ ಕುಬೇರಕಾಂತನಿಗೆ ಜಾತಿಸ್ಮರಣೆಯುಂಟಾಯಿತು. ಅನಂತರ ಅವನು ತನ್ನ ಪೂರ್ವಜನ್ಮದ ಚರಿತ್ರೆಯನ್ನು ಚಿತ್ರಪಟದ ಮೇಲೆ ಬರೆದು ಗಹಿಲ್ಲಕ ವೇಷವನ್ನು ಧರಿಸಿಕೊಂಡು ಊರ್ಜಯನ್ತವೆಂಬ ಪರ್ವತಕ್ಕೆ ಹೋದನು. ಅಲ್ಲಿ ಅವನಿಗೆ ಒಬ್ಬ ವಿದ್ಯಾಧರನಿಂದ ವಿಕುರ್ವಣಾದಿ ವಿದ್ಯೋಪದೇಶವಾಯಿತು. ಅನಂತರ ಅವನು ಆ ಚಿತ್ರಪಟ ಸಮೇತನಾಗಿ ವಿದ್ಯಾಧರನಿಂದ ಮನೋಹರಿಯ ವೃತ್ತಾಂತವನ್ನು ತಿಳಿದು ಗಿರಿನಗರಕ್ಕೆ ಬಂದು ಅರಮನೆಯ ಬಳಿ ನೃತ್ಯಮಾಡುತ್ತಿದ್ದನು. ಮನೋಹರಿ ಇದನ್ನು ನೋಡಿ ಜಾತಿಸ್ಮರೆಯಾಗಿ ಆ ಪಟವನ್ನು ತನ್ನ ಸಖಿಯಿಂದ ತರಿಸಿಕೊಂಡಳು. ಅವಳ ಸ್ವಯಂವರ ನಡೆದು ಅವಳು ಕುಬೇರಕಾಂತನಿಗೆ ಮಾಲೆಹಾಕಿದಳು. ಇದನ್ನು ನೋಡಿ

ಅಲ್ಲಿ ನೆರೆದ ರಾಜರೆಲ್ಲ ಸಮರಕ್ಕೆ ಸಿದ್ಧರಾದರು. ಅವರನ್ನೆಲ್ಲ ಗೆದ್ದು ಕುಬೇರಕಾಂತ ಮನೋಹರಿಯನ್ನು ಮದುವೆಯಾದನು. ಅವರು ನಾನಾ ಬಗೆಯಲ್ಲಿ ವಿಹರಿಸುತ್ತ ಸೊಪಾರಪುರದ ಸಮೀಪಕ್ಕೆ ಬಂದರು; ಅಲ್ಲಿ ಸಿಡಿಲು ಹೊಡೆದು ಇಬ್ಬರೂ ಸತ್ತರು.

ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯಲ್ಲಿ ಅಲಂಕಾರಪುರ, ಅದಕ್ಕೆ ರಾಜ ಹಿಂದೆ ಶ್ರೀಧರಚರನಾಗಿದ್ದ ಚಂಡವೇಗ, ಸತ್ತ ಕುಬೇರಕಾಂತನು ಇವನಿಗೆ ವಿದ್ಯುನ್ಮಾಲಿ ಎಂಬ ಮಗನಾಗಿ ಹುಟ್ಟಿದನು. ಅದೇ ನಗರದಲ್ಲಿ ಮೇಘಮಾಲಿ ಎಂಬ ಖಗೇಶ್ವರ; ಇವನ ಮಹಾದೇವಿ ರತಿಬಿಂದು. ಇವರಿಗೆ ಸಿಡಿಲಿನಿಂದ ಸತ್ತ ಮನೋಹರಿ ಮಗಳಾದಳು. ಒಂದು ಸಲ ಚಂಡವೇಗನು ವಿದ್ಯುನ್ಮಾಲಿ ಸಮೇತನಾಗಿ ಊರ್ಜಯಂತಗಿರಿಗೆ ನೇಮಿನಿಷದ್ಯವನ್ನು ವಂದಿಸಲು ಹೊರಟನು. ಆ ಪರ್ವತದ ಶಿಖರವನ್ನು ನೋಡಿ ವಿದ್ಯುನ್ಮಾಲಿ ಜಾತಿಸ್ಮರನಾಗಿ ಮೂರ್ಛೆಹೋದನು. ಅನಂತರ ಎಚ್ಚರಗೊಂಡು ಅವನು ಮನೋಹರಿಯನ್ನು ಸ್ಮರಿಸಿಕೊಂಡನು; ಪ್ರಜ್ಞಪ್ತಿಯೇ ಮುಂತಾದ ವಿದ್ಯೆಗಳನ್ನು ಸಾಧಿಸಿದನು. ಆ ವಿದ್ಯೆ ಪ್ರತ್ಯಕ್ಷವಾಗಿ ಏನು ಕೆಲಸ ಮಾಡಲಿ ಎಂದು ಅವನನ್ನು ಕೇಳಿತು. "ಮನೋಹರಿ ಎಲ್ಲಿದ್ದಾಳೆ, ಅವಳ ಹೊಲಬನ್ನು ಕಂಡು ತಿಳಿಸು" ಎಂದು ಅವನು ಆಜ್ಞಾಪಿಸಿದನು. ವಿದ್ಯುನ್ಮಾಲಿಯ ಸೋದರಮಾವ ಮೇಘಮಾಲಿಗೆ ಮನೋಹರಿ ವಿರಳವೇಗೆಯೆಂಬ ಮಗಳಾಗಿರುವಳೆಂದು ಆ ವಿದ್ಯೆ ವಿದ್ಯುನ್ಮಾಲಿಗೆ ತಿಳಿಸಿದ ಕೊಡಲೇ ಅವನು ತನ್ನ ತಂದೆ ಚಂಡವೇಗನ ಬಳಿಗೆ ಬಂದು ವಿಷಯವನ್ನೆಲ್ಲ ತಿಳಿಸಿ ವಿರಳವೇಗೆಯನ್ನು ಮದುವೆಯಾದನು. ಇವರಿಬ್ಬರೂ ಸ್ವಲ್ಪಕಾಲ ಸುಖವಾಗಿದ್ದು ಒಂದು ಸಲ ಹಿಮವತ್ಪರ್ವತಕ್ಕೆ ವಿಹಾರಾರ್ಥವಾಗಿ ಹೋದರು. ಅಲ್ಲಿ ಅವರ ಪೂರ್ವಜನ್ಮದ ಹಗೆಯಾಗಿದ್ದ ಪ್ರತಿಸೂರ್ಯನು ಅವರಿಬ್ಬರನ್ನೂ ಕೊಂದನು.

ಗಂಗಾನದೀತೀರದಲ್ಲಿ ಕೋಶಲದೇಶ; ರಾಜಧಾನಿ ಸಾಕೇತ. ಅಲ್ಲಿ ಸಾಗರಸೇನ ನೆಂಬ ವಣಿಜ; ಅವನ ಮಡದಿ ಧನಶ್ರೀ. ಸತ್ತ ವಿದ್ಯುನ್ಮಾಲಿ ಇವರಿಬ್ಬರಿಗೆ ಸಿದ್ಧಾರ್ಥ ನೆಂಬ ಮಗನಾಗಿ ಹುಟ್ಟಿದನು. ಮಗಧ ವಿಷಯದ ರಾಜಗೃಹದಲ್ಲಿ ಸಮುದ್ರ ವಿಜಯ ನೆಂಬ ಶ್ರೇಷ್ಠಿಯೂ ಸುಮತಿಯೆಂಬ ಅವನ ಹೆಂಡತಿಯೂ ಇದ್ದರು. ಸತ್ತ ವಿರಲವೇಗೆ ಇವರಿಬ್ಬರಿಗೆ ಜಯಮತಿ ಎಂಬ ಮಗಳಾದಳು. ಇವಳನ್ನು ಸಿದ್ಧಾರ್ಥನಿಗೆ ಕೊಟ್ಟು ಮದುವೆಯಾಯಿತು. ಇವರಿಬ್ಬರೂ ಸೌಧತಳದ ಮೇಲಿರುವಾಗ ಗಗನದಲ್ಲಿ ಹೋಗು ತ್ತಿದ್ದ ಇಬ್ಬರು ವಿದ್ಯಾಧರರನ್ನು ಕಂಡು ಸಿದ್ಧಾರ್ಥನು ಮೂರ್ಛೆಹೋಗಿ ಎಚ್ಚತ್ತು ಜಾತಿಸ್ಮರತ್ವವನ್ನು ಪಡೆದನು. ವಿರಕ್ತಿಯನ್ನು ಹೊಂದಿ ವಿನಯಂಧರ ಗುರುಗಳಲ್ಲಿ ದೀಕ್ಷೆ ಯನ್ನು ಪಡೆದನು; ತನ್ನ ಮಗನಾದ ಸುಕೋಶಲನಿಗೆ ಸೆಟ್ಟಿಪಟ್ಟವನ್ನು ಕಟ್ಟಿದನು; ಈ ಸುಕೋಶಲನು ಚಂಡವೇಗನಾಗಿದ್ದವನು. ತನ್ನ ತಂದೆ ಜೈನದೀಕ್ಷೆ ವಹಿಸಿದ್ದನ್ನು ತಿಳಿದ ಸುಕೋಶಲ ತನ್ನ ಹೆಂಡತಿ ಸುಪ್ರಭೆಯ ಗರ್ಭದಲ್ಲಿದ್ದ ಪುತ್ರನಿಗೆ ರಾಜ್ಯವನ್ನು ಕೊಟ್ಟು ಸಿದ್ಧಾರ್ಥ ಗುರುವಿನಿಂದ ದೀಕ್ಷೆಯನ್ನು ಸ್ವೀಕರಿಸಿದನು. ಜಯಮತಿ ಆರ್ತ ಧ್ಯಾನ ಪರಾಯಣಳಾಗಿ ಸತ್ತು ಮಗಧ ವಿಷಯದ ಒಂದು ಬೆಟ್ಟದಲ್ಲಿ ಹೆಣ್ಣು ಹುಲಿ

ಯಾಗಿ ಜನಿಸಿದಳು. ಅದೇ ಪರ್ವತಕ್ಕೆ ಸಿದ್ಧಾರ್ಥನೂ ಸುಕೋಶಲನೂ ಚಾತುರ್ಮಾಸ್ಯಕ್ಕಾಗಿ ಬಂದು ಗುಹೆಯಲ್ಲಿದ್ದರು. ಮಳೆಗಾಲ ಮುಗಿದ ಕೂಡಲೇ ಅವರಿಬ್ಬರೂ ಪಾರಣೆಗೆಂದು ಭಿಕ್ಷಾರ್ಥಿಗಳಾಗಿ ನಗರದ ಕಡೆಗೆ ಹೋಗುತ್ತಿದ್ದರು. ಹುಲಿ ಇವರನ್ನು ಕಂಡು ಮೇಲೆ ಬಿದ್ದು ಉಗುರು ಹಲ್ಲುಗಳಿಂದ ಸೀಳಿ ಸಾಯಿಸಿತು. ಅವರಿಬ್ಬರೂ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರರಾಗಿ ಜನ್ಮಿಸಿದರು. ಹುಲಿ ತನ್ನ ಮರಿಗಳ ಸಮೇತ ಅವರಿಬ್ಬರ ಹೆಣಗಳನ್ನು ತಿನ್ನುತ್ತಿರುವಾಗ ಸುಕೋಶಲನ ಕೈಮೇಲಿದ್ದ ಕಾಲಾದಿ ತಿಲಕವನ್ನು ನೋಡಿ ಜಾತಿಸ್ಮರಣೆಯನ್ನು ಹೊಂದಿ ತನ್ನನ್ನು ತಾನೇ ನಿಂದಿಸಿಕೊಳ್ಳುತ್ತ ಸರ್ವತ್ಯಾಗ ಮಾಡಿ ಸತ್ತು ಸ್ವರ್ಗವಾಸಿಯಾಯಿತು. ಶ್ರೀಕಾಂತೆಯೇ ಮುಂತಾದ ಸಿದ್ಧಾರ್ಥನ ಹೆಂಡತಿಯರೂ ಸುಕೋಶಲನ ಮಡದಿಯರೂ ಗುಣಾರ್ಯೆಯ ಹತ್ತಿರ ದೀಕ್ಷಾಧಾರಣೆಯನ್ನು ಮಾಡಿದರು, ಉಗ್ರವಾದ ತಪಸ್ಸನ್ನಾಚರಿಸಿ ಅವರು ಸುರಲೋಕಪ್ರಾಪ್ತರಾದರು. ಗಂಧಮಾದನ ರಾಜನು ಕೂಡ ಯಶೋಧರ ಗುರುಗಳಿಂದ ತನ್ನ ಪೂರ್ವ ವೃತ್ತಾಂತವನ್ನೆಲ್ಲಾ ತಿಳಿದು ವಿರಕ್ತಿ ಹೊಂದಿ ದೀಕ್ಷೆ ಪಡೆದು ತಪಸ್ಸುಮಾಡಿ ಪಾಂಡುಕ ಪರ್ವತದಲ್ಲಿ ಸಿದ್ಧಿಯನ್ನು ಸಂಪಾದಿಸಿದನು. (೨೮೪ ಶ್ಲೋಕಗಳು)

## ೧೨೮. ಗಜಕುಮಾರ ಕಥಾನಕಂ

ಸೌರಾಷ್ಟ್ರ ವಿಷಯ, ದ್ವಾರವತೀ ನಗರ, ರಾಜ ವಸುದೇವ, ರಾಣಿ ಗಂಧರ್ವದತ್ತೆ, ಇವರ ಮಗ ಗಜಕುಮಾರ. ಪೌದನಪುರದ ರಾಜ ಅಪರಾಜಿತ, ಅವನ ಪ್ರಿಯೆ ಅಪರಾಜಿತೆ. ಇವನಿಗೆ ವಸುದೇವನ ಮೇಲೆ ರೋಷ. ಆದ್ದರಿಂದ ವಸುದೇವನು ಅಪರಾಜಿತನನ್ನು ಹಿಡಿದು ತಂದವರಿಗೆ ವರವನ್ನು ಕೊಡುತ್ತೇನೆಂದು ತನ್ನ ನಗರದಲ್ಲಿ ಘೋಷಿಸಿದನು. ಈ ಘೋಷಣೆಯನ್ನು ಗಜಕುಮಾರನು ಕೇಳಿ ಪೌದನಪುರಕ್ಕೆ ಹೋಗಿ ಭಯಂಕರ ಕಾಳಗವಾಡಿ ಅಪರಾಜಿತನನ್ನು ಕಟ್ಟಿ ಸೆರೆಯಾಗಿಸಿ ವಸುದೇವನ ಮುಂದೆ ತಂದಿರಿಸಿದನು. ವರವನ್ನು ಕೇಳು ಕೊಡುತ್ತೇನೆ ಎಂದ ವಸುದೇವ. ನಿನ್ನ ಪುರದಲ್ಲಿ ನಾನು ಸ್ವಚ್ಛಂದವಾಗಿ ವಿಹರಿಸುತ್ತೇನೆ, ನಿನ್ನ ಪ್ರಸಾದದಿಂದ, ಎಂದು ಗಜಕುಮಾರ, ವರವನ್ನು ಪಡೆದು ಆ ಪುರದ ಪಂಗುಲ ಶ್ರೇಷ್ಠಿಯ ಭಾರ್ಯೆ ಸುರತಿಯೊಡನೆ ಭಯವಿರಹಿತನಾಗಿ ಸಂತುಷ್ಟನಾಗಿ ರಮಿಸಿದನು. ಪಂಗುಲನು ಇದನ್ನೆಲ್ಲ ನೋಡಿದರೂ ಏನನ್ನೂ ಮಾಡಲು ಅಸಮರ್ಥನಾಗಿ ಮನಸ್ಸಿನಲ್ಲಿ ಕೋಪಾನ್ವಿತನಾದನು. ಈ ನಡುವೆ ಗಜಕುಮಾರನು ನೇಮಿನಾಥ ತೀರ್ಥಂಕರನ ಸಮೀಪದಲ್ಲಿ ಧರ್ಮವನ್ನು ಕೇಳಿ ವಿರಕ್ತನಾಗಿ ಪ್ರವ್ರಜ್ಯವನ್ನು ಕೈಕೊಂಡನು. ಅನಂತರ ಅನೇಕ ತಪಸ್ಸುಗಳನ್ನು ಆಚರಿಸುತ್ತ ನಾನಾತರು ವಿರಾಜಿತವಾದ ರೈವತಕೋದ್ಯಾನಕ್ಕೆ ಬಂದು ಪಾದೋಪಗಮನ ಮೃತ್ಯುವನ್ನು ಬಯಸುತ್ತ ಉತ್ತಾನಶಯ್ಯೆಯಲ್ಲಿ ಕುಮಾರನು ನಿಂತುಕೊಂಡನು. ಈ ವಿಷಯವನ್ನು ಪಂಗುಲಕನು ಕೇಳಿ ಮುನಿಯ ಬಳಿಗೆ ಲೋಹಕೀಲಗಳ ಸಮೇತನಾಗಿ ಹೋಗಿ ಅತ್ಯಂತ ಕೋಪಾವಿಷ್ಟನಾಗಿ ಅವನ ಶರೀರವನ್ನು ಕೀಲಕಗಳಿಂದ ಜಡಿದು ಹೊಡೆದು

ತನ್ನ ಮನೆಗೆ ಮರಳಿದನು. ಈ ವೇದನೆಯನ್ನು ಗಜಕುಮಾರನು ಸೈರಿಸಿ ಸತ್ತು ದೇವಲೋಕಕ್ಕೆ ಹೋದನು. (೧೯ ಶ್ಲೋಕಗಳು)

## ೧೨೯. ಸನತ್ಕುಮಾರಚಕ್ರಿಕಥಾನಕಂ

ಕುರುಜಾಂಗಲ ದೇಶ. ಹಸ್ತಿನಾಪುರ. ರಾಜ ಕುರುವಂಶ ಸಂಭೂತ ವಿಶ್ವಸೇನ. ಅವನ ಮಹಾದೇವಿ ಪ್ರಿಯಂವದೆಯಾದ ಸಹದೇವಿ. ಇವರ ಮಗ ಸನತ್ಕುಮಾರ, ಚತುರ್ಥಕ ಚಕ್ರವರ್ತಿ. ಇವನು ರೂಪಾತಿಶಯ ಸಂಪನ್ನನಾಗಿ ರಾಜಭೋಗಗಳನ್ನು ಅನುಭವಿಸುತ್ತ ಇದ್ದನು. ಪ್ರಥಮ ಕಲ್ಪೇಂದ್ರನು ಸೌದಾಮನ್ಯಾದಿ ನಾಟಕವನ್ನು ನೋಡುತ್ತ ಸಿಂಹಾಸನಸ್ಥಿತನಾಗಿದ್ದಾಗ ಸಂಗಮನಾಮಕ ದೇವನು ಈಶಾನ ಕಲ್ಪದಿಂದ ಬಂದು ಸೌಧರ್ಮೇಂದ್ರನನ್ನು ಕಂಡನು. ದೇವತೆಗಳ ತೇಜಸ್ಸು ಅವನ ಬರವಿನಿಂದ ನಷ್ಟವಾಯಿತು, ಸೂರ್ಯೋದಯದಲ್ಲಿ ಚಂದ್ರನ ಕಾಂತಿಯ ಹಾಗೆ. ವಿಸ್ಮಿತರಾದ ದೇವತೆಗಳು ಶಕ್ರನನ್ನು ಕೇಳಿದರು, ಯಾವ ಕಾರಣದಿಂದ ಈ ದೇವನು ರವಿಪ್ರಭನಾದನು ಎಂದು. ಅದಕ್ಕೆ ಇಂದ್ರ ಹೇಳಿದ, ಆಚಾಮ್ಲವರ್ಧನಾಖ್ಯತಪವನ್ನು ಇವನು ಮಾಡಿದ್ದರಿಂದ ಹೀಗಾದನು ಎಂದು. ಇಂಥ ರೂಪ ತೇಜಸ್ಸುಗಳನ್ನುಳ್ಳವರು ಇನ್ನೂ ಯಾರಾದರೂ ಇರುವರೋ ಎಂದು ದೇವತೆಗಳು ಕೇಳಿದರು. ತೇಜಸಾಧಿಕನಾದ ಸನತ್ಕುಮಾರನು ಹಸ್ತಿನಾವತಿಯಲ್ಲಿದ್ದಾನೆ ಎಂದ ಇಂದ್ರ. ಇದನ್ನು ಪರೀಕ್ಷಿಸಬೇಕೆಂದು ವಿಜಯ, ವೈಜಯಂತ—ಎಂಬಿಬ್ಬರು ದೇವತೆಗಳು ಅಸೂಯೆಯಿಂದ ವಿಪ್ರವೇಷಧಾರಿಗಳಾಗಿ ಸನತ್ಕುಮಾರನ ಬಳಿಗೆ ಬಂದರು. ಎಣ್ಣೆ ಬಳಿದುಕೊಂಡಿದ್ದ ಅವನ ದೇಹ ಸೌಂದರ್ಯವನ್ನು ನೋಡಿ ಅವರಿಬ್ಬರೂ ವಿಸ್ಮಿತರಾದರು (ಭ್ರುವಂಸ್ತೈಲಾವ ಗುಂಡಿತಃ). ನಿನ್ನ ರೂಪ ಯೌವನಗಳು ಇಂದ್ರನು ವರ್ಣಿಸಿದಂತೆಯೇ ಇವೆ ಎಂದರವರು. ನೀವು ಯಾರು, ಎಲ್ಲಿಂದ ಬಂದಿರಿ ಎಂದು ಕೇಳಿದ ಚಕ್ರಿ. ಸೌಧರ್ಮೇಂದ್ರನ ಸಭೆಯಲ್ಲಿ ನಿನ್ನ ರೂಪ ಯೌವನಗಳು ಇಂದ್ರನಿಂದ ವರ್ಣಿತವಾದುದನ್ನು ಕೇಳಿ ಇಲ್ಲಿಗೆ ನೋಡಲು ಬಂದೆವೆಂದು ಅವರು ಹೇಳಿದರು. ನೋಡಿದ್ದಾಯಿತು, ಇಂದ್ರನ ವರ್ಣನೆಗಿಂತ ನಿನ್ನ ರೂಪ ಮಿಗಿಲಾಗಿದೆ, ಹೋಗುತ್ತೇವೆ ಎಂದರು. ಚಕ್ರಿಯು ರೋಮಾಂಚಿತ ವಿಗ್ರಹನಾಗಿ ಆ ದೇವತೆಗಳನ್ನು ಕುರಿತು ಸಭೆಯಲ್ಲಿ ಹೀಗೆಂದನು: ಎರಡು ಗಳಿಗೆಗಳ ವರೆಗೆ ಇಲ್ಲಿಯೇ ಇರಿ, ಆಮೇಲೆ ತಿರುಗಿ ನನ್ನ ರೂಪವನ್ನು ನೋಡುವಿರಂತೆ, ನಾನು ಮಜ್ಜನ ಮಾಡಿ ಅಲಂಕರಿಸಿಕೊಂಡು ಪುಷ್ಪತಾಂಬೂಲ ವಸ್ತ್ರ ಸಮನ್ವಿತನಾಗಿ ಸಿಂಹಾಸನಾಸೀನನಾಗುವುದನ್ನು ನೋಡಿರಿ. ದೇವತೆಗಳು ಹಾಗೆಯೇ ಆಗಲಿ ಎಂದು ಅಲ್ಲಿಯೇ ಇದ್ದರು. ಚಕ್ರಿ ಮಜ್ಜನ ಮಾಡಿ ಅಲಂಕೃತನಾಗಿ ಸಿಂಹಾಸನವೇರಿದ್ದನ್ನು ನೋಡಿದ ಆ ಇಬ್ಬರು ದೇವತೆಗಳು ರೂಪಯೌವನಗಳು ಅಶಾಶ್ವತ ಮಿಂಚಿನಂತೆ, ಮೋಡದಂತೆ, ಇಂದ್ರಚಾಪದಂತೆ, ಎಂದರು. ಚಕ್ರಿಯು ವಿಸ್ಮಿತನಾದನು. ಯೌವನೋದಯದಲ್ಲಿ ರೂಪವು ಅವಲೋಕನೀಯ, ಈಗ ಒಂದು ಕ್ಷಣದಲ್ಲಿ ನಿನ್ನ ರೂಪ ವಿಚ್ಛಾಯವಾಗಿದೆ. ಎಂದು

ಹೇಳಲು ಅವನು ತನ್ನ ನಷ್ಟ ಲಾವಣ್ಯ ಸಂಪತ್ತನ್ನು ನೋಡಿಕೊಂಡನು. ಅವನಿಗೆ ಮಹಾವಿರಕ್ತಿಯುಂಟಾಯಿತು. ಮಗನಿಗೆ ರಾಜ್ಯಪಟ್ಟವನ್ನು ಕಟ್ಟಿ ಬಾಹ್ಯಾಭ್ಯಂತರ ಸಂಗವನ್ನು ತೊರೆದು ವಿನಯಂಧರ ಸ್ವಾಮಿಗಳಲ್ಲಿ ದೀಕ್ಷಾಗ್ರಹಣ ಮಾಡಿದನು. ಪ್ರವ್ರಜ್ಯಷಷ್ಠೋತವಾಸಾಂತ್ಯದಲ್ಲಿ ಪಾರಣೆಗಾಗಿ ನಗರ ಪ್ರವೇಶ; ಅವನಿಗೆ ದೇವ ದತ್ತನಿಂದ ಭಿಕ್ಷವಾಗಿ ಕೊಡಲ್ಪಟ್ಟ ಚೀರಕಭತ್ತದಿಂದಲೂ ಆಡಿನ ಮೊಸರಿನಿಂದಲೂ ಭೋಜನ ಮಾಡಿ ಪ್ರೀತಮಾನಸನಾದನು. ಆಹಾರ ದೋಷದಿಂದ ಅವನಿಗೆ ಕಚ್ಛುಖಾಸ ಜ್ವರಾದಿಗಳುಂಟಾದುವು. ಅವನು ಉಗ್ರತಪಸ್ಸನ್ನು ಮಾಡಿದನು. ಆಮಖೇಲೌಷಧಿ, ಜಲ್ಲೌಷಧಿ, ಸರ್ವೌಷಧಿ—ಮುಂತಾದ ಔಷಧಿಸಿದ್ಧಿಗಳುಂಟಾದುವು. ಆದರೂ ತನ್ನ ವ್ಯಾಧಿಗಳಿಗೆ ಅವನು ಪ್ರತೀಕಾರ ಮಾಡಲಿಲ್ಲ. ಇವನ ತಪಸ್ಸನ್ನು ಸೌಧರ್ಮೇಂದ್ರ ತನ್ನ ಸಭೆಯಲ್ಲಿ ಹೊಗಳಿದ್ದನ್ನು ಕೇಳಿ ಆ ಇಬ್ಬರು ದೇವತೆಗಳು ಪುನಃ ವೈದ್ಯವೇಷ ದಿಂದ ಸನತ್ಕುಮಾರನ ಬಳಿಗೆ ಬಂದು ವ್ಯಾಧಿವಿನಾಶನವನ್ನು ಮಾಡುವೆವೆಂದು ಹೇಳಿದರು. ಸಂಸಾರವ್ಯಾಧಿಯನ್ನು ಹಾಳುಮಾಡಿರಿ ಎಂದನವನು. ಈ ಕೆಲಸಕ್ಕೆ ನಾವು ಸಮರ್ಥರಲ್ಲ ಎಂದರವರು. ವಿಸ್ಮಿತರಾಗಿ ಸುರಾಲಯಕ್ಕೆ ಅವರು ತೆರಳಿದರು. ಸನತ್ಕುಮಾರ ಕರ್ಮವಿನಾಶವನ್ನು ಮಾಡಿ ಅನಂತಸುಖಸಂಯುಕ್ತ ಸಿದ್ಧಿ ಪತ್ತನಕ್ಕೆ ಹೋದನು. (೫೮ ಶ್ಲೋಕಗಳು)

## ೧೩೦. ಏಣಿಕಾಪುತ್ರ ಕಥಾನಕಂ

ವೈದಿಶಾಖ್ಯಪುರ. ಪ್ರಜಾಪಾಲ ರಾಜ. ಅವನ ಕಾಮಿನಿ ಸುನಂದೆ. ಅವನ ರಾಜ ಶ್ರೇಷ್ಠಿ ಆನಂದ, ಅವನ ಭಾರ್ಯೆ ಸುನಂದೆ. ಇವರಿಗೆ ಪದ್ಮಾವತೀ ಮುಂತಾದ ಏಳು ಹೆಣ್ಣುಮಕ್ಕಳಾದರು. ಇವರಲ್ಲಿ ಅತ್ಯಂತ ಕಿರಿಯಳು ಏಣಿಕಾ ಎಂಬವಳು. ಇವಳನ್ನು ಸಾಗರದತ್ತ ಶ್ರೇಷ್ಠಿಗೆ ಕೊಟ್ಟು ವಿವಾಹವಾಯಿತು. ಇವರಿಗೆ ಮಗ ಆದನು, ಏಣಿಕಾ ಪುತ್ರನೆಂದು ಹೆಸರು, ಮಹಾ ವಿಭವ ಸಂಪನ್ನ, ಧರ್ಮೈಕ ರಸಿಕ. ಇವನು ವರ್ಧಮಾನ ಜಿನನ ಬಳಿಗೆ ಹೋಗಿ ತನ್ನ ಆಯುಃ ಪ್ರಮಾಣವನ್ನು ಕೇಳಿದ. ಸ್ವಲ್ಪವೇ ಎಂದು ಉತ್ತರ ಬಂತು. ವಿರಕ್ತನಾಗಿ ಜಿನನ ಸಮೀಪದಲ್ಲಿ ದೀಕ್ಷಾಗ್ರಹಣ ಮಾಡಿದ. ವಿಹಾರ ಮಾಡುತ್ತ ಗಂಗಾನದಿಯನ್ನು ಉತ್ತರಿಸಲು ನಾವೆಯನ್ನು ಏರಿದನು. ಅದು ಮುಳುಗಿ ಇವನು ಸಮಾಧಿಮರಣದಿಂದ ಸತ್ತನು. (೮ ಶ್ಲೋಕಗಳು)

## ೧೩೧. ಭದ್ರಬಾಹು ಕಥಾನಕಂ

ಪೌಂಡ್ರವರ್ಧನ ವಿಷಯ. ಕೋಟೀಮತ ಎಂಬ ಪುರ. ರಾಜ ಪದ್ಮರಥ. ಅವನ ದೇವಿ ಪದ್ಮಶ್ರೀ ರತಿವಲ್ಲಭಾ. ಇವನ ದ್ವಿಜ ಸೋಮಶರ್ಮ. ಭಾರ್ಯೆ ಸೋಮಶ್ರೀ. ಇವರಿಬ್ಬರ ಮಗ ಭದ್ರಬಾಹು (ಭದ್ರಂ ಭದ್ರಾಶಯಃ). ಇವನಿಗೆ ಮುಂಜಿ ಆದಮೇಲೆ ಅನೇಕ ಬ್ರಹ್ಮಚಾರಿಗಳೊಡನೆ ದೇವಕೋಟ್ಟ(=ಕೋಟೀಮತ)ಪುರದಲ್ಲಿ ಆಡು

ತ್ತಿದ್ದನು. ಒಂದು ವಟ್ಟಿನ ಮೇಲೆ ಇನ್ನೊಂದು ವಟ್ಟನ್ನಿಟ್ಟು ೧೪ ಆಗುವವರೆಗೆ ಆಟ. ಆಗ ಗೋವರ್ಧನನು ಚತುರ್ದಶಪೂರ್ವಧಾರಿ ವರ್ಧಮಾನ ಜಿನನ ನಿರ್ವಾಣಾನಂತರ ಊರ್ಜಯಂತ ಗಿರಿಗೆ ಹೋಗುತ್ತ ಕೋಟೀನಗರಕ್ಕೆ ಬಂದು ಭದ್ರಬಾಹು ಕುಮಾರ ನನ್ನು ನೋಡಿದನು. ಈ ಹುಡುಗನು ಪಂಚಮಶ್ರುತ ಕೇವಲಿ ಆಗುವನೆಂದು ತಿಳಿದನು. ಹೀಗೆ ಆದೇಶ ಮಾಡಿದನು. ತಂದೆಯ ಒಪ್ಪಿಗೆಯಿಂದ ಭದ್ರಬಾಹುವನ್ನು ಶಿಷ್ಯನನ್ನಾಗಿ ಮಾಡಿಕೊಂಡು ಅವನಿಗೆ ಗೋವರ್ಧನ ನಾನಾ ಶಾಸ್ತ್ರಗಳನ್ನು ಕಲಿಸಿದನು. ಭದ್ರಬಾಹು ವಿರಕ್ತನಾಗಿ ತಪೋನಿರತನಾದನು. ಸ್ವಲ್ಪ ಕಾಲದಲ್ಲೇ ಸಮಸ್ತ ಶ್ರುತಪಾರಗನಾದನು, ಗೋವರ್ಧನನ ಪ್ರಸಾದದಿಂದ ಮುನಿಯಾದನು. ಕಾಯೋತ್ಸರ್ಗದಲ್ಲಿ ನಿಂತನು. ದೇವತೆಗಳೆಲ್ಲ ಇವನಿಗೆ ಪೂಜೆ ಮಾಡಿದರು. ಅನಂತರ ಅವನು ಸಮಸ್ತಗಣ ಪಾಲಕ ನಾದನು. ನಾನಾ ತಪಸ್ಸುಗಳನ್ನು ಮಾಡಿ ಗೋವರ್ಧನ ಸುರಲೋಕಕ್ಕೆ ಹೋದ. ಆಮೇಲೆ ಭದ್ರಬಾಹು ವಿಹಾರಿಸುತ್ತ ಅವಂತೀ ವಿಷಯದ ಉಜ್ಜಯಿನೀ ಪುರಿಗೆ ಬಂದನು. ಸಿಪ್ರಾನದೀತಟದ ಉಪವನದಲ್ಲಿ ಚತುರ್ವಿಧ ಸಂಘ ಸಮೇತನಾಗಿ ಭದ್ರ ಬಾಹು ಮುನಿ ತಂಗಿದನು.

ಆ ಪುರಿಯಲ್ಲಿ ಚಂದ್ರಗುಪ್ತರಾಜನು ಸಮ್ಯಗ್ದರ್ಶನ ಸಂಪನ್ನನು, ತನ್ನ ದೇವಿ ಸುಪ್ರಭೆಯೊಡನೆ ಇದ್ದನು. ಭದ್ರಬಾಹು ಮನೆಯಿಂದ ಮನೆಗೆ ಭಿಕ್ಷಾರ್ಥವಾಗಿ ತೊಳಲುತ್ತ ಬಂದನು. ಅವನು ಹೊಕ್ಕ ಒಂದು ಮನೆಯಲ್ಲಿ ಜನರೇ ಇರಲಿಲ್ಲ. ಆ ಮನೆಯಲ್ಲಿ ಜೋಲಿಕಾಂತರ್ಗತ ಶಿಶುವೊಂದಿತ್ತು; ಭಗವನ್, ಇಲ್ಲಿಂದ ಬೇಗನೆ ಹೊರಟು ಹೋಗು ಎಂದು ಅದು ಹೇಳಿತು. ದಿವ್ಯಜ್ಞಾನಿಯಾದ ಭದ್ರಬಾಹು ಮಗುವಿನ ಮಾತಿನಿಂದ ದ್ವಾದಶ ವರ್ಷಗಳ ಕ್ಷಾಮ ಬರುತ್ತದೆಂಬುದನ್ನು ಅರಿತವನಾಗಿ ಭೋಜನ ವಿಮುಖನಾಗಿ ಜಿನಮಂದಿರಕ್ಕೆ ಬಂದನು. ಅಲ್ಲಿ ಮಧ್ಯಾಹ್ನ ವೇಳೆಯಲ್ಲಿ ತನ್ನ ಸಂಘಕ್ಕೆ ಹೀಗೆಂದು ಹೇಳಿದನು: ಈ ದೇಶದಲ್ಲಿ ಅನಾವೃಷ್ಟಿಯಾಗಿ ದ್ವಾದಶ ವರ್ಷಗಳ ದುರ್ಭಿಕ್ಷ ಬರುತ್ತದೆ, ದೇಶ ಜನಶೂನ್ಯವಾಗುತ್ತದೆ ನೃಪ ತಸ್ಕರ ಲುಂಟಾಕ ರಿಂದ. ನಾನು ಕ್ಷೀಣಾಯುಷ್ಕನಾಗಿರುವುದರಿಂದ ಇಲ್ಲಿಯೇ ಇರುತ್ತೇನೆ. ನೀವೆಲ್ಲ ಸಾಧು ಗಳು ಲವಣಾಬ್ಧಿ ಸಮೀಪಕ್ಕೆ ಹೋಗಿ ಎಂದು ಹೇಳಿದನು. ಭದ್ರಬಾಹುವಿನ ಮಾತನ್ನು ಕೇಳಿ ಚಂದ್ರಗುಪ್ತ ನಾನೂ ಯೋಗಿಯ ದೆಸೆಯಲ್ಲೇ ಇರುವೆನೆಂದು ಹೇಳಿ ತಪಸ್ಸನ್ನು ಸ್ವೀಕರಿಸಿದನು. ಚಂದ್ರಗುಪ್ತ ಮುನಿಯು ದಶಪೂರ್ವಧರರಲ್ಲಿ ಪ್ರಥಮನಾಗಿ ವಿಶಾಖಾ ಚಾರ್ಯನೆಂಬ ಹೆಸರಿನಿಂದ ಸರ್ವಸಂಘಾಧಿಪನಾದನು. ಈ ಸಂಘ ಸಮುದಾಯದೊಡನೆ ಗುರುವಾಕ್ಯಾನುಸಾರವಾಗಿ ಚಂದ್ರಗುಪ್ತನು ದಕ್ಷಿಣಾಪಥದ ದೇಶದಲ್ಲಿರುವ ಪುನ್ನಾಟ ವಿಷಯಕ್ಕೆ ಪ್ರಯಾಣ ಮಾಡಿದನು. ರಾಮಿಲ್ಲ, ಸ್ಥೂಲವೃದ್ಧ, ಭದ್ರಾಚಾರ್ಯ ಎಂಬ ಮೂವರು ಸ್ವಸಂಘ ಸಮುದಾಯಗಳೊಡನೆ ಸಿಂಧ್ವಾದಿದೇಶಗಳಿಗೆ ಹೋದರು. ಭದ್ರಬಾಹು ಮುನಿಯು (ಭಾದ್ರಪಮದೇಶಂ ಉಜ್ಜಯಿನೀಭವಂ) ಹಲವು ದಿವಸಗಳು ಅನಶನ ವ್ರತವನ್ನು ಕೈಕೊಂಡು ಆರಾಧನಾವಿಧಿಯಿಂದ ಸಮಾಧಿ ಮರಣವನ್ನು ಹೊಂದಿ

"ದಿವಂಯಯರೌ". ಕ್ಷಾಮವು ಕಳೆದು ಸುಭಿಕ್ಷ ತಲೆದೋರಲು ಭದ್ರಬಾಹು ಗುರುವಿನ ಶಿಷ್ಯ ವಿಶಾಖಾಚಾರ್ಯನು (=ಚಂದ್ರಗುಪ್ತ) ದಕ್ಷಿಣಾಪಥದಿಂದ ಮಧ್ಯದೇಶಕ್ಕೆ ಬಂದನು. ಸಿಂಧು ವಿಷಯಕ್ಕೆ ಹೋದ ಆ ಮೂವರು ಮುನಿಗಳು ಪಾನಾನ್ನ ಭೋಜನ ಹೀನವಾದ ಆ ಭೀಷಣ ಕಾಲದಲ್ಲಿ ಜನಸನ್ನಿಧಿಯಲ್ಲಿ ಹೀಗೆ ಹೇಳಿದರು: "ಬಾಗಿಲಲ್ಲಿ ನಿಂತ ಭಿಕ್ಷುಕ ಜನ ಗಲಾಟೆ ಮಾಡುತ್ತ ತಿನ್ನುವುದಕ್ಕೆ ಇಲ್ಲದವರಾಗಿದ್ದಾರೆ, ಎಲ್ಲರೂ ಕ್ಷುಧಾಗ್ರಸ್ತರಾಗಿದ್ದಾರೆ, ಇವರ ಹೆದರಿಕೆಯಿಂದ ರಾತ್ರಿ ಅಡಿಗೆ ಮಾಡಬೇಕಾಗಿದೆ. ಭಿಕ್ಷುಗಳೇ, ನೀವು ಕೂಡ ರಾತ್ರಿ ಭಿಕ್ಷೆಯನ್ನು ತಂದು ಅದನ್ನು ಹಗಲು ಊಟ ಮಾಡಿರಿ" ಎಂದು. ಸಾಧುಗಳು ಹಾಗೆಯೇ ಮಾಡಲಾರಂಭಿಸಿದರು. ಒಬ್ಬ ಮುನಿ ಬೆತ್ತಲೆಯಾಗಿ, ಕ್ಷೀಣವಿಗ್ರಹನಾಗಿ ಭಿಕ್ಷಾ ಪಾತ್ರೆಯನ್ನು ಹಿಡಿದುಕೊಂಡು ಶ್ರಾವಕ ಗೃಹಕ್ಕೆ ಹೋದನು, ರಾತ್ರಿ ಹೊತ್ತಿನಲ್ಲಿ. ಒಬ್ಬ ಗರ್ಭಿಣಿ ಶ್ರಾವಕಿ ಈ ಮುನಿರೂಪವನ್ನು ಕಂಡು ಬೆಚ್ಚಿದಳು, ಗರ್ಭಸ್ರಾವವಾಯಿತು. ಇದನ್ನು ನೋಡಿದ ಶ್ರಾವಕರೆಲ್ಲ ಯತೀಶನನ್ನು ಕುರಿತು ಹೀಗೆಂದರು: ಈ ಕೆಟ್ಟ ಕಾಲ ಕಳೆದ ಮೇಲೆ ಪ್ರಾಯಶ್ಚಿತ್ತ ಮಾಡಿಕೊಳ್ಳಬಹುದು, ಒಳ್ಳೆ ಕಾಲ ಬಂದಾಗ ಮರಳಿ ತಪಸ್ಸಿಗೆ ಹೋಗಬಹುದು; ಅಲ್ಲಿಯವರಗೆ ಎಡಗೈಯಿಂದ ಅರ್ಧವಸ್ತ್ರ ಹಿಡಿದುಕೊಂಡು ಭಿಕ್ಷೆಗೆ ಬನ್ನಿರಿ, ರಾತ್ರಿ ಬೇಡಿ ಹಗಲು ಊಟ ಮಾಡಿರಿ ಎಂದು. ಸಾಧುಗಳು ಇದಕ್ಕೆ ಒಪ್ಪಿಕೊಂಡರು. ಒಳ್ಳೆ ಕಾಲ ಬಂತು. ಆಗ ಆ ಮೂವರು ಮುನಿಗಳು ಸರ್ವ ಸಾಧುಗಳನ್ನು ಕೂಗಿ ಕರೆದು 'ಅರ್ಧಪಾಲಕವನ್ನು ಬಿಟ್ಟು ನಿಗ್ರಂಥ ರೂಪವನ್ನು ಧಾರಣೆ ಮಾಡಿರಿ' ಎಂದು ಹೇಳಿದರು. ಮುಕ್ತಿಲಾಲಸ ಚೇತನರು ಕೆಲವರು ನಿಗ್ರಂಥರೂಪಧಾರಣೆ ಮಾಡಿದರು. ಆ ಬಳಿಕ ಆ ಮೂವರು ಆಚಾರ್ಯರು ವಿಶಾಖಾಚಾರ್ಯನ (ಚಂದ್ರಗುಪ್ತನ) ಬಳಿಗೆ ಬಂದರು. ಅವರು ಅರ್ಧಕರ್ಪಟವನ್ನು ಬಿಟ್ಟು ಮೂವರೂ ದಿಗಂಬರರಾದರು. ಜಿನಕಲ್ಪ, ಸ್ಥವಿರಕಲ್ಪ—ಎಂಬೆರಡು ವಿಧಾನಗಳಾದುವು ಅರ್ಧಪಾಲಕ ಸಂಯುಕ್ತರಿಂದ. ಸೌರಾಷ್ಟ್ರ ದೇಶದ ವಲಭಿಪುರ, ರಾಜ ವಪ್ರಪಾದ, ಮಿಥ್ಯಾದರ್ಶನ ದೂಷಿತನು. ಅವನ ದೇವಿ ಸ್ವಾಮಿನಿ. ಇವಳಿಗೆ ಅರ್ಧಪಾಲಕರಲ್ಲಿ ತುಂಬ ಭಕ್ತಿ. ಒಂದು ದಿವಸ ರಾಜನೂ ದೇವಿಯೂ ದಿಗವಲೋಕನವನ್ನು ಮಾಡುತ್ತಿರುವಾಗ ಒಬ್ಬ ಅರ್ಧಪಾಲಕನು ಮಧ್ಯಾಹ್ನ ವೇಳೆಯಲ್ಲಿ ರಾಜಮಂದಿರಕ್ಕೆ ಬಂದನು. ಇದನ್ನು ನೋಡಿ ರಾಜ ತನ್ನ ದೇವಿಗೆ ಹೇಳಿದನು—ಅರ್ಧಪಾಲಕ ಸಂಘ ನಿನಗೆ ಶೋಭನವಾದುದಲ್ಲ, ಇವರು ನಗ್ನರೂ ಅಲ್ಲ, ವಸ್ತ್ರವೀತರೂ ಅಲ್ಲ ಎಂದು, ವಿಡಂಬನಪೂರ್ವಕವಾಗಿ. ಒಂದು ದಿನ ಅರ್ಧಪಾಲಕ ಸಂಘವೊಂದು ನಗರಕ್ಕೆ ಬಂತು. ಅದನ್ನು ನೋಡಿ ರಾಜನು ಅರ್ಧಪಾಲವನ್ನು ಬಿಟ್ಟು ನಿರ್ಗ್ರಂಥರಾಗಿರಿ ಎಂದು ಅಪ್ಪಣೆ ಮಾಡಿದನು, ನಿರ್ಗ್ರಂಥರಾಗಲು ಇಷ್ಟವಿಲ್ಲದಿದ್ದರೆ ಅರ್ಧ ಕಪ್ಪಟವನ್ನು ಬಿಟ್ಟು ಋಜುವಸ್ತ್ರವನ್ನು ಧರಿಸಿಕೊಳ್ಳಿರಿ, ಸುಖವಾಗಿರಿ ನನ್ನ ರಾಜ್ಯದಲ್ಲಿ ಎಂದ. ಹೀಗೆ ವಪ್ರಪಾದ ನೃಪಾಜ್ಞೆಯಿಂದ ಲಾಟದೇಶದಲ್ಲಿ ಕಾಂಬಲ ತೀರ್ಥವು ಅಂದಿನಿಂದ ಅರಂಭವಾಯಿತು. ಈ ಕಂಬಲಿಕಾ ತೀರ್ಥದಿಂದ ಸಾವಲಿಪತ್ತನದಲ್ಲಿ (ದಕ್ಷಿಣಾಪಥದ) ಯಾಪನ ಸಂಘವು ಹುಟ್ಟಿತು. (ಇದೇ

ಯಾಪನೀಯ ಸಂಘವಿರಬಹುದು, ಶ್ವೇತಭಿಕ್ಷು ಜಾಪುಲಿಸಂಘ ಎಂದಿದೆ ವಡ್ಡಾರಾಧನೆಯಲ್ಲಿ). (೮೧ ಶ್ಲೋಕಗಳು)

### ೧೩೨. ಸಮುದ್ರದತ್ತಾದಿ ಕಥಾನಕ = ಲಲಿತಘಟೆ

ಕೌಶಂಬೀ ನಗರದಲ್ಲಿ ಹುಟ್ಟಿದ ಇಭ್ಯಕುಲೋತ್ಪನ್ನರಾದ ೩೨ ಶ್ರಾವಕರು, ಇಂದ್ರದತ್ತಾದಿಗಳು ಇದ್ದರು. ಅವರಿಗೆಲ್ಲ ಮಕ್ಕಳಿದ್ದರು. ಸಮುದ್ರದತ್ತಾದಿ ಶ್ರಾವಕರು ಕೇವಲಿಯ ವಂದನೆಗಾಗಿ ಹೋಗಿ ಭಕ್ತಿಯಿಂದ ಮುನಿಯನ್ನು ಕೇಳಿದರು—ನಮಗೆ ಆಯುಷ್ಯ ಪ್ರಮಾಣವೆಷ್ಟು ಎಂದು. ನೀವೆಲ್ಲ ಅಲ್ಪಾಯುಷ್ಯರು ಎಂದರವರು. ಇದನ್ನು ಕೇಳಿ ಆ ಮೂವತ್ತೆರಡು ಕುಮಾರಕರು ಮಹಾವೈರಾಗ್ಯ ಸಹಿತರಾಗಿ ಪ್ರವ್ರಜಿಸಿದರು. ಯಮುನಾನದೀ ತೀರದಲ್ಲಿ ಪಾದೋಪಗಮನದಿಂದ ನಿಂತರು. ನದೀಪ್ರವಾಹದಿಂದ ಅವರು ಸೆಳೆಯಲ್ಪಟ್ಟವರಾಗಿ ಮಡುವಿನಲ್ಲಿ ಮುಳುಗಿ ಸತ್ತರು. ಸುರಲೋಕಕ್ಕೆ ಹೋದರು. (೮ ಶ್ಲೋಕಗಳು)

### ೧೩೩. ಧರ್ಮಘೋಷ ಮುನಿ ಕಥಾನಕಂ

ಧರ್ಮಘೋಷಮುನಿ ಚಂಪಾನಗರ ವಾಸ್ತವ್ಯ. ಮಾಸೋಪವಾಸಾಂತ್ಯದಲ್ಲಿ ಪಾರಣೆಗಾಗಿ ತುರುಪಟ್ಟಿಗೆ (ವ್ರಜಂ) ಹೋದನು. ದಾರಿತಪ್ಪಿ ನಡೆಯಲು ಇಷ್ಟವಿಲ್ಲದೆ ಬಾಯಾರಿಕೆಯಿಂದ ಪೀಡಿತನಾಗಿ ಗಂಗಾನದೀ ತೀರದ ಹಸುರು ಹಸಲೆಯ ಮೇಲೆ ನಿಂತನು. ಇದನ್ನು ಗಂಗಾದೇವಿ ನೋಡಿ ಜಲಪೂರ್ಣಕಲಶಗಳನ್ನು ತಂದು ಆಲದ ಮರದ ಕೆಳಗಿದ್ದ ಮುನಿಯನ್ನು ಕುರಿತು ಈ ನೀರನ್ನು ಕುಡಿದು ಸೇದೆಯನ್ನಾರಿಸಿರಿ ಎಂದಳು. ನಿನ್ನ ಕೈಯಿಂದ ಈ ನೀರನ್ನು ಕುಡಿಯಲಾರೆ ಎಂದನು ಅವನು. ಗಂಗಾದೇವಿ ಬೇಗನೆ ಪೂರ್ವ ವಿದೇಹದಲ್ಲಿದ್ದ ಜಿನನಲ್ಲಿಗೆ ಹೋಗಿ ಮುನಿಯ ವಿಷಯವನ್ನು ಅವನಿಗೆ ತಿಳಿಸಿ ನನ್ನ ಹಸ್ತದಿಂದ ಅವನು ನೀರು ಕುಡಿಯುವುದಿಲ್ಲ, ಇದಕ್ಕೆ ಕಾರಣವೇನು ಎಂದು ಕೇಳಿದಳು. ಜಿನನು ಅವ್ಯಕ್ತವಾಣಿಯಿಂದ ಹೇಳಿದನು—ಮುನಿಗಳು ತಿರ್ಯಗ್ದೇವಾಸುರರ ಕೈಯಿಂದ ಪಾನಭೋಜನಗಳನ್ನು ಸ್ವೀಕರಿಸುವುದಿಲ್ಲ, ಆದ್ದರಿಂದ ನೀನು ಸಮ್ಯಕ್ತ್ವ, ಜಿನಪೂಜೆ, ಪ್ರಾತಿಹಾರ್ಯಗಳನ್ನು ಮಾಡು, ಇದೇ ನಿನ್ನ ಕೆಲಸ—ಎಂದನು. ಆಗ ಗಂಗಾದೇವಿ ಸುಶೀತಲ ಜಲವರ್ಷವನ್ನು ಮುನಿಯ ಮೇಲೆ ಕರೆದಳು. ಮುನಿಗೆ ಸೇದೆ ತೊಲಗಿ ಘಾತಿಕರ್ಮಗಳು ಕ್ಷಯಿಸಿ ಕೇವಲಜ್ಞಾನವುಂಟಾಯಿತು. ಅವನಿಂದ ದೇವಿಯು ಧರ್ಮವನ್ನು ಕೇಳಿ ಅವನನ್ನು ಪೂಜಿಸಿ ಸ್ವಮಂದಿರಕ್ಕೆ ತೆರಳಿದಳು. ಮುನಿಯು ಮೋಕ್ಷವನ್ನು ಸಂಪಾದಿಸಿದನು. (೧೮ ಶ್ಲೋಕಗಳು)

### ೧೩೪. ಶ್ರೀಧರಮುನಿ ಕಥಾನಕಂ (=ಸಿರಿದಿಣ್ಣ)

ಚಂಪಾಪುರದಲ್ಲಿ ಸಿಂಹರಥನೆಂಬ ರಾಜ, ಸಿಂಹಿಕೆ ಎಂಬ ಶ್ರಾವಿಕೆಯ ಪತಿ. ಸಾಕೇತ

ನಗರದಲ್ಲಿ ಅಂಶುಮಾನನೆಂಬ ರಾಜ, ಅವನ ಪ್ರಿಯೆ ಅಂಶುಮಾಲಿನಿ. ಇಲಾಪುರದ ರಾಜ ಜಿತಶತ್ರು, ಅವನ ಕಾಂತೆ ಇಲಾದೇವಿ. ಈ ಮೂವರು ಮಿತ್ರ ದಂಪತಿಗಳು ಸುಖವಾಗಿ ಕಾಲಯಾಪನೆ ಮಾಡುತ್ತಿದ್ದರು. ನಂದೀಶ್ವರ ದಿನದಂದು ಈ ಮೂವರೂ ತಂತಮ್ಮ ನಗರಗಳಲ್ಲಿ ಭಕ್ತಿಯಿಂದ ಜಿನ ಮಹಾ ಮಹಿಮೆಯನ್ನು ಮಾಡಿದರು. ಜಿನ ಶತ್ರು ಜನರಿಗೆ ಸಪರ್ಯೆಯನ್ನು ಮಾಡಲಾರಂಭಿಸಿದನು. ಅವನ ದಾದಿ—ವಿರೂಪೆ, ದೀರ್ಘ ದಂತೆ, ಕರಾಲಾಸ್ಯೆ, ಜಲಬುದ್ಬುದಲೋಚನೆ, ಪಾದಖಂಜೆ, ಬೃಹತ್ತುಂಡೆ, ಪ್ರಾಣಿ ಗಳಿಗೆ ಭಯಕಾರಿಣಿ, ಲಂಬಸ್ತನಿ, ಲಂಬೋಷ್ಠೆ, ವಿಷಮಾಸ್ಥಿಶಿರಾತತಿ—ಜಿನಮಂದಿರಕ್ಕೆ ಬರುತ್ತಿದ್ದವಳನ್ನು ಜಿತಶತ್ರು ಕಂಡು ಹೀಗೆಂದನು: ನೀನು ಇಲ್ಲಿಯೇ ನಿಲ್ಲು, ನಿನ್ನ ಭೀಷಣಾಕಾರವನ್ನು ನೋಡಿದವರು, ಜಿನ ಪೂಜೆಗೆ ಬಂದವರು, ಜುಗುಪ್ಸೆಗೊಳ್ಳುವರು, ಆದ್ದರಿಂದ ನೀನು ಬರಬೇಡ ಜಿನಾಲಯಕ್ಕೆ ಎಂದು. ದಾದಿ ದುಃಖಿತಳಾಗಿ ಕಣ್ಣೀರನ್ನು ಸುರಿಸುತ್ತ ಮಂದಭಾಗ್ಯೆಯಾದ ನನಗೆ ಜಿನಪೂಜಾದರ್ಶನ ಲಾಭವಿಲ್ಲ ಎಂದು ಹೇಳಿ ಜಿನಪೂಜೆಯ ಆ ಎಂಟು ದಿವಸಗಳಲ್ಲಿ ಉಪವಾಸ ಮಾಡಿದಳು, ತನ್ನ ಮನೆಯಲ್ಲೇ. ಜಿತಶತ್ರು ಅಷ್ಟಾಹ್ನಿಕವನ್ನು ಮುಗಿಸಿ ಮನೆಗೆ ಬಂದು ದಾದಿಯನ್ನು ನೋಡಿ ಅಬ್ಬೆ, ನೀನೇಕೆ ದುರ್ಬಲಳಾಗಿದ್ದೀಯೆ, ಶೋಕಯುಕ್ತಳಾಗಿರುವೆ, ಯಾರಿಂದ ನಿನಗೆ ಅಪಕಾರ ಎಂದು ಕೇಳಿದನು. ಅದಕ್ಕೆ ದಾದಿ ಮನೆಯಲ್ಲೇ ಅಷ್ಟಾಹ್ನಿಕ ಮಾಡಿದೆ ಎಂದಳು. ಮಾತೆ, ನಿನಗೆ ಬೇಕಾದ ವರವನ್ನು ಕೇಳು ಎಂದನು ರಾಜ. ಅದಕ್ಕೆ ಅವಳು ನನಗಾಗಿ ಇನ್ನೊಂದು ಸಲ ಅಷ್ಟಾಹ್ನಿಕವನ್ನು ಮಾಡು ಎಂದಳು. ಜಿತಶತ್ರು ಮರಳಿ ಜಿನಪೂಜೆ ಆರಂಭಿಸಿದನು, ಧಾತ್ರಿ ಮರಳಿ ಅಷ್ಟೋಪವಾಸವನ್ನು ಮಾಡಿದಳು. ಹಿಮವದ್ಗಿರಿ ಸಂಭೂತ ಪದ್ಮಹ್ರದ ನಿವಾಸಿನಿಯಾದ ಶ್ರೀದೇವಿ ನಿಜ ಪರಿವಾರ ಸಹಿತಳಾಗಿ ದಾದಿಯ ಬಳಿಗೆ ಬಂದು ಚಿನ್ನದ ಕಲಶದ ನೀರಿನಿಂದ ಸ್ನಾನ ಮಾಡಿಸಿ ಅವಳನ್ನು ಪೂಜಿಸಿ ತನ್ನ ಮನೆಗೆ ಮರಳಿದಳು. ದಾದಿ ಶ್ರೀದೇವಿಯಂತೆ ತಾನಾಗಬೇಕೆಂದು ನಿದಾನಂಗೆಯ್ದು ಸತ್ತಳು.

ಭರತಕ್ಷೇತ್ರದ ಜಂಬೂಮತಿ ದ್ವೀಪದಲ್ಲಿ ಪದ್ಮಹ್ರದದಲ್ಲಿ ಅವಳು ದೇವಿಯಾಗಿ ಹುಟ್ಟಿದಳು. ಶ್ರೀದೇವಿ ಇಲಾವರ್ಧನಕ್ಕೆ ಬಂದು ಜನರಿಗೆ ಸ್ವಪ್ನವನ್ನು ಕಾಣಿಸಿದಳು. ಶ್ರೀದೇವಿಗೆ ಶ್ರೀಗೃಹವನ್ನು ಮಾಡಿಸಿ ಭಕ್ತಿಯಿಂದ ಪೂಜಿಸಿರಿ. ನಿಮಗೆ ಇಷ್ಟವಾದ ವರವನ್ನು ಕೊಡುತ್ತೇನೆ ಎಂದು. ಶ್ರೀಗೃಹ ನಿರ್ಮಾಣವಾಯಿತು, "ಧ್ವಜಭೂಷಿತಂ." ಇಲಾದೇವಿ ಸ್ವಗೃಹಸ್ಥಿತ ಶ್ರೀಯಾ ದೇವಿಯನ್ನು ನೋಡಿದಳು. ೧೨ ವರ್ಷಗಳು ಪೂಜೆ ಮಾಡಿದಳು. ಶ್ರೀದೇವಿ ಸ್ವಯಂಪ್ರಭ ಜಿನನ ಬಳಿಗೆ ಹೋಗಿ ಇಲಾದೇವಿಗೆ ಮಕ್ಕಳಾಗುವುದೋ ಇಲ್ಲವೋ ಎಂದು ಕೇಳಿದಳು. ನಾಕ ಪರಿಚ್ಯುತನಾದ ದೇವತೆ ಯೊಬ್ಬ (ವರ್ಧಮಾನ) ಇಲಾದೇವಿಗೆ ಮಗನಾಗುವನೆಂದು ಜಿನ ಹೇಳಿದ. ಇಲಾದೇವಿಗೆ ಶ್ರೀದೇವಿ ಸ್ವಪ್ನದಲ್ಲಿ ಈ ವಿಷಯವನ್ನು ತಿಳಿಸಿದಳು. ಮಗ ಹುಟ್ಟಿದ, ಶ್ರೀದತ್ತನೆಂಬ ಹೆಸರಾಯಿತು. ಸಾಕೇತ ಪತಿಯ ಪುತ್ರಿ ಇವನಿಗೆ ಸ್ವಯಂವರದಲ್ಲಿ ಪತ್ನಿಯಾದಳು,

ಅವಳ ಹೆಸರು ಅಂಶುಮತಿ. ಇವಳೊಡನೆ ಬಳುವಳಿಯಾಗಿ ಒಂದು ಗಿಣಿ ಬಂತು. ದಂಪತಿಗಳು ಅಕ್ಷಕ್ರೀಡೆಯನ್ನಾಡುತ್ತಿರಲು ಅಂಶುಮತಿ ಗೆದ್ದಾಗ ಗಿಳಿ ರೆಕ್ಕೆಗಳನ್ನು ಬಡಿಯುತ್ತ ರೇಖಾದ್ವಯವನ್ನು ಬರೆಯಿತು, ಅಂಶುಮತಿ ಸೋತಾಗ ಒಂದು ಗೆರೆಯನ್ನು ಬರೆಯಿತು. ಶ್ರೀದತ್ತನಿಗೆ ಇದನ್ನು ನೋಡಿ ಕೋಪ ಕೆರಳಿ ಗಿಳಿಯ ಕೊರಳನ್ನು ಹೊಡೆದನು, ಅದು ಸತ್ತಿತು. ಗಿಳಿ ಮಂದ ಕಷಾಯ ಕಾರಣವಾಗಿ ವ್ಯಂತರ ದೇವನಾಗಿ ಜನ್ಮಿಸಿತು. ಮೋಡ ಕರಗುವುದನ್ನು ಕಂಡ ಶ್ರೀದತ್ತ ವಿರಕ್ತನಾಗಿ ರಾಜ್ಯವನ್ನು ಮಗಳಿಗೆ ಕೊಟ್ಟು ವರಧರ್ಮನೆಂಬ ಯತಿಯ ಬಳಿ ದೀಕ್ಷಾಪೂರ್ವಕವಾಗಿ ಸರ್ವಶಾಸ್ತ್ರಾರ್ಥಗಳನ್ನು ಕಲಿತು ಏಕ ವಿಹಾರಿಯಾಗಿ ಮಾಗಿಯ ಕಾಲದಲ್ಲಿ ಸ್ವಪುರಕ್ಕೆ ಬಂದು ರಾತ್ರಿ ಪ್ರತಿಮಾಯೋಗದಲ್ಲಿ ನಿಂತುಕೊಂಡನು. ಆ ವ್ಯಂತರದೇವ ವಿಭಂಗ ಜ್ಞಾನದಿಂದ ಇದನ್ನು ತಿಳಿದು ಇಲಾಪಟ್ಟಣಕ್ಕೆ ಬಂದು ಸೀತವಾತಗಳನ್ನು ವೆಗ್ಗಳಿಸುತ್ತ ಕೋಪದಿಂದ ಮುನಿಯ ಮೇಲೆ ಜಲವರ್ಷವನ್ನು ಸುರಿಸಿದನು. ಈ ಪರೀಷಹವನ್ನು ಶ್ರೀದತ್ತ ಸೈರಿಸಿ ನಿರ್ವಾಣಕ್ಕೆ ಸಂದನು.

## ೧೩೫. ವೃಷಭಸೇನಮುನಿ ಕಥಾನಕಂ

ಉಜ್ಜಯಿನೀ ನಗರ; ಪ್ರದ್ಯೋತನೆಂಬ ರಾಜ; ಮಹಾದೇವಿ ಜ್ಯೋತಿರ್ಮಾಲೆ. ಒಂದು ದಿವಸ ಆನೆಯ ಮೇಲೆ ಕುಳಿತು ರಾಜ ಬೇಟೆಗಾಗಿ ಅರಣ್ಯಕ್ಕೆ ಹೋದನು. ಆನೆ ಮದನಿರ್ಭರದಿಂದ ಅತಿ ವೇಗವಾಗಿ ಓಡಲು ತೊಡಗಿದ್ದರಿಂದ ರಾಜನು ಮರದ ಕೊಂಬೆಯನ್ನು ಹಿಡಿದುಕೊಂಡನು; ಆನೆ ಮುಂದಕ್ಕೆ ಓಡಿತು. ರಾಜ ಅಲ್ಲಿ ಇಲ್ಲಿ ಓಡಾಡುತ್ತ ಖೇಟಕಗ್ರಾಮಕ್ಕೆ ಬಂದನು; ಬಾಯಾರಿಕೆಯಿಂದ ಪೀಡಿತನಾಗಿ ಒಂದು ಬಾವಿಯ ಬಳಿಗೆ ಹೋಗಿ ನಿಂತನು. ಜಿನಪಾಲಿತನೆಂಬ ಗ್ರಾಮಕೂಟನ ಮಗಳು ಜಿನದತ್ತೆ ಜಿನಮತಿಗಾಗಿ ನೀರನ್ನು ತರಲು ಆ ಬಾವಿಗೆ ಬಂದಳು. ರಾಜ ಜಲಪಾನವನ್ನು ಮಾಡಿಸುವಂತೆ ಅವಳನ್ನು ಬೇಡಿದನು. ಅವಳು ಸ್ವಲ್ಪ ಸ್ವಲ್ಪವಾಗಿ ನೀರನ್ನು ಬಿಟ್ಟು ಪರ್ಕರವನ್ನು ಮಾಡಿದಳು. ಆಮೇಲೆ ತನ್ನ ಮನೆಗೆ ಬಂದು ಅವಳು ತನ್ನ ತಂದೆಗೆ ಗ್ರಾಮದ ಹೊರಗೆ ಒಬ್ಬ ಸುಂದರ ಪುರುಷನಿದ್ದಾನೆ, ಅವನನ್ನು ಮನೆಗೆ ಒಡಗೊಂಡು ಬಾ ಎಂದು ಹೇಳಿದಳು. ಗ್ರಾಮಕೂಟನು ಹಾಗೆಯೇ ಮಾಡಿದನು. ಅಷ್ಟರಲ್ಲಿ ರಾಜನನ್ನು ಹುಡುಕುತ್ತ ಅವನ ಸ್ಕಂಧಾವಾರವೆಲ್ಲ ಅಲ್ಲಿಗೆ ಬಂತು. ಗ್ರಾಮಕೂಟನು ಆಗ ಬಂದವನು ರಾಜನೆಂದು ತಿಳಿದು ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಿದನು. ರಾಜನು ಜಿನದತ್ತೆಗೆ ಮಹಾದೇವಿ ಪದವಿಯನ್ನು ಕೊಟ್ಟನು ಸುಪ್ರೀತನಾಗಿ; ಉಜ್ಜಯಿನಿಗೆ ಬಂದನು. ಅಂತಃಪುರದ ಎಲ್ಲರನ್ನೂ ಬಿಟ್ಟು ಜಿನದತ್ತೆಗೆ ಪರಮಾಸಕ್ತನಾದನು. ಒಂದು ದಿನ ಮದಗಜವೊಂದು ಬಾವಿಗೆ ಬಿದ್ದಿದೆಯೆಂದು ತಿಳಿದು ರಾಜನು ಅದನ್ನು ನೋಡಲು ನಗರದ ಹೊರಗೆ ಹೋದನು. ಆಗ ಅಲಂಕಾರ ಮಾಡಿಕೊಳ್ಳುತ್ತಿದ್ದ ಜಿನದತ್ತೆ ರಾಜ ಹೋದುದನ್ನು ತಿಳಿದು ಕುಪಿತಳಾದಳು. ಅವಳನ್ನು ಬಿಟ್ಟು ಹೋದುದ

ಕ್ಕಾಗಿ ಇತರ ಸ್ತ್ರೀಯರು ಸಂತೋಷಭರಿತರಾದರು ; ಇವಳ ಭಯದಿಂದ ರಾಜ ನಮ್ಮ ಬಳಿಗೆ ಬಾರದಿದ್ದನು ಎಂದು ಅಧ್ಯಕ್ಷನಿಗೆ ಹೇಳುತ್ತಿದ್ದರು. ಈ ಮಾತನ್ನು ಜಿನದತ್ತೆ ಕೇಳಿ ತನ್ನ ಮಾಡವನ್ನು ಬಿಟ್ಟು ಬೇರೆ ಮನೆಗೆ ಹೊರಟುಹೋದಳು. ಮರಳಿ ಬಂದ ರಾಜ ತನ್ನ ಮನೆಯಲ್ಲಿ ಜಿನದತ್ತೆಯನ್ನು ಕಾಣದೆ ಅವಳೆಲ್ಲಿ ಎಂದು ಕೇಳಿದಾಗ ಅಧ್ಯಕ್ಷ ಅವಳು ಕೋಪಗೊಂಡು ಬೇರೆ ಮನೆಗೆ ಹೋದಳೆಂದೂ ವಿರಕ್ತಳಾಗಿ ತಪಸ್ವಿನಿಯಾದ ಳೆಂದೂ ಹೇಳಿದನು. ರಾಜ ಕೋಪಗೊಂಡು ಇಂಥ ಹೆಂಡತಿಯಿಂದ ತನಗೆ ಜನನಿಂದೆ ಬರುತ್ತದೆಂದು ಭಾವಿಸಿ ಜಿನದತ್ತೆಯನ್ನು ಶ್ಮಶಾನದಲ್ಲಿ ಬಿಟ್ಟುಬಿಡಿ ಎಂದು ಆಜ್ಞೆ ಮಾಡಿದನು. ಗರ್ಭವತಿಯಾಗಿದ್ದ ಅವಳು ಶ್ಮಶಾನದಲ್ಲೇ ಮಗನನ್ನು ಹೆತ್ತಳು. ರಾಜನು ಕನಸಿನಲ್ಲಿ ವೃಷಭನನ್ನು ಕಂಡು ಅದರ ಫಲವನ್ನು ಕೇಳಿದಾಗ ಅದು ಪುತ್ರೋತ್ಪತ್ತಿ ಸೂಚಕವೆಂದು ಮಂತ್ರಿ ಹೇಳಿದನು. ತನ್ನ ರಾಣಿಯರಲ್ಲಿ ಯಾರಿಗೆ ಮಗು ಹುಟ್ಟಿದೆ ಯೆಂದು ವಿಚಾರಿಸುವುದು ಎಂದು ರಾಜ ಮಂತ್ರಿಗೆ ಹೇಳಿದ. ಅವನು ಹೋಗಿ ರಾಣಿ ಯರನ್ನೆಲ್ಲ ಕೇಳಿದ ; ಅವರ ಉತ್ತರ

> ಅಸ್ಮಾಕಂ ದುರ್ಭಗಾನಾಂ ಹಿ ಕಥಂ ಪುತ್ರೋ ಧವಂ ವಿನಾ ॥ ೩೫
> ಭರ್ತೃಸಂಗಂ ವಿನಾ ವತ್ಸ ಗರ್ಭೋತ್ಪತ್ತಿಃಕಥಂ ಭವೇತ್ ।
> ಅಸ್ಮಾಕಂ ಪುಣ್ಯಹೀನಾನಾಂ ವಂಚಿತಾನಾಮನೇನ ಭೋ ॥ ೩೬

ಆಮೇಲೆ ಮಂತ್ರಿ ಜಿನದತ್ತೆಯಲ್ಲಿಗೆ ಬಂದು ಪುತ್ರಸಂಗತೆಯಾಗಿದ್ದ ಅವಳನ್ನು ನೋಡಿ ರಾಜನಲ್ಲಿಗೆ ಬಂದು ಅವಳಿಗೆ ಸುದ್ದಿಯನ್ನು ತಿಳಿಸಿದನು. ರಾಜ ಹೃಷ್ಟನಾಗಿ ಜಿನದತ್ತೆ ಯನ್ನು ಶಿಶುಸಮೇತ ಬರಮಾಡಿಕೊಂಡು ಆದರಿಸಿ ಕುಮಾರನಿಗೆ ವೃಷಭಸೇನನೆಂದು ಹೆಸರಿಟ್ಟನು. ಕುಮಾರನಿಗೆ ಎಂಟು ವರ್ಷಗಳಾದಾಗ ಪ್ರದ್ಯೋತ ಧರ್ಮವಿನ್ಯಸ್ತ ಮಾನಸನಾಗಿ ಮಗನಿಗೆ ರಾಜ್ಯಪಟ್ಟವನ್ನು ಕಟ್ಟಲು ಮನಸ್ಸುಮಾಡಿ ಹೇಳಿದ. ಅದಕ್ಕೆ ಮಗನ ಉತ್ತರ :

> ಮನುಷ್ಯರಾಜ್ಯ ಪಟ್ಟಂ ಕಿಂ ಬಧ್ನಾಸಿ ತ್ವಂ ಮಮ ಪ್ರಭೋ ॥ ೪೫
> ದೇವಮೋಕ್ಷಾದಿ ಸಂಯುಕ್ತಂ ರಾಜ್ಯಪಟ್ಟಂ ಮಹಾಗುಣಂ
> ಪ್ರಾರ್ಥ್ಯಂಕೃತ್ಯಮನು ಸ್ಪಷ್ಟಂ ಪ್ರವ್ರಜ್ಯಾಂ ಕರ್ತುಮರ್ಹಸಿ ॥ ೪೬

ಎಂದನು. ನಿನಗೆ ನನ್ನಿಂದ ಮೊದಲು ಮನುಷ್ಯರಾಜ್ಯಪಟ್ಟ, ಅನಂತರ ತಪಸ್ಸಿನಿಂದ ದೇವ ರಾಜ್ಯಪಟ್ಟ, ಮೋಕ್ಷರಾಜ್ಯಪಟ್ಟ ಎಂದ ರಾಜ. ಕೂಡಲೇ ಕುಮಾರನು ಅಭಿನಂದನ ಮುನಿ ಗಳ ಹತ್ತಿರ ದೀಕ್ಷಾಗ್ರಹಣ ಮಾಡಿ ತಪಸ್ವಿಯಾಗಿ ಏಕವಿಹಾರಿಯಾಗಿ ವತ್ಸಕಾವತೀ ವಿಷ ಯದ ಕೌಶಂಬೀನಗರದ ಹತ್ತಿರ ಇದ್ದ ದೇವವಾಟನಗಕ್ಕೆ ಬಂದು ಪ್ರತಿಮಾಯೋಗದಲ್ಲಿ ನಿಂತನು. ಆ ನಗರದ ಶ್ರಾವಕರೆಲ್ಲ ಆ ಬೆಟ್ಟಕ್ಕೆ ಹೋಗಿ ಮುನಿಯನ್ನು ಪೂಜಿಸಿ ಬಂದರು. ಆದೇ ನಗರದ ಬುದ್ಧದಾಸನೆಂಬವನು, ಜಿನಧರ್ಮದ್ವೇಷಕನು, ಆ ಬೆಟ್ಟಕ್ಕೆ ಹೋಗಿ ಮುನಿ ಭಿಕ್ಷೆಗೆ ಹೋಗಿದ್ದಾಗ, ಅವನು ನಿಂತಿದ್ದ ಶಿಲೆಯನ್ನು ಕಿಚ್ಚಿನಿಂದ ಕೆಂಪಗೆ ಕಾಸಿ ತನ್ನ ಮನೆಗೆ ಬಂದನು. ಭಿಕ್ಷೆಯಿಂದ ಹಿಂದಿರುಗಿದ ಮುನಿ ಅಗ್ನಿತಪ್ತ

ಶಿಲಾತಲವನ್ನು ನೋಡಿ ಹೆದರದೆ ಹತ್ತಿ ಕುಳಿತನು. ಈ ಪರೀಷಹವನ್ನು ಸೈರಿಸಿ ವೃಷಭನು ಕೇವಲ ಜ್ಞಾನಿಯಾದನು. (೫೮ ಶ್ಲೋಕಗಳು)

## ೧೩೬. ಸ್ವಾಮಿ ಕಾರ್ತಿಕೇಯ ಕಥಾನಕಂ

ಕಾರ್ತಿಕಾಖ್ಯಪುರ. ಅಗ್ನಿನಾಮಕರಾಜ. ಭಾರ್ಯೆ ವೀರವತಿ. ಇವರಿಗೆ ಆರುಜನ ಹೆಣ್ಣುಮಕ್ಕಳು—ಬಂಧುಮತಿ, ಶ್ರೀಷೇಣೆ, ಶ್ರೀಮತಿ, ಸ್ವಯಂಪ್ರಭೆ, ಪ್ರಭಾವತಿ, ಕೀರ್ತ್ಯಾ, ಲಕ್ಷ್ಮೀಮತಿ. ನಂದೀಶ್ವರ ದಿನದಂದು ಈ ಆರು ಜನರೂ ಉಪವಾಸಮಾಡಿ ಜಿನನನ್ನು ಪುಷ್ಪಗಳಿಂದ ಪೂಜಿಸಿ ಪ್ರಸಾದವನ್ನು ಎಲ್ಲರಿಗೂ ಕೊಡುವಾಗ ರಾಜ ಇವರನ್ನು ನೋಡಿದನು. ಕನಿಷ್ಠಳಾದ ಕೀರ್ತಿಕೆಯನ್ನು ಅವನು ನೋಡಿದಾಗ ಅವನಿಗೆ ಕಾಮವುಂಟಾಯಿತು. ತನ್ನ ಭಾರ್ಯೆಯನ್ನು ಒಪ್ಪಿಸಿ ಮಗಳನ್ನೇ ಮದುವೆ ಆದ. ಕೀರ್ತಿಕೆ ಗರ್ಭವತಿ ಆದಳು; ೯ನೆಯ ತಿಂಗಳಲ್ಲಿ ಶರವಣೋದ್ಯಾನದ ವಾಪಿಯಲ್ಲಿ ವಿಹರಿಸಬೇಕೆಂದು ಅವಳಿಗೆ ಮನವಾಗಿ ಅಲ್ಲಿ ಕ್ರೀಡಿಸುತ್ತಿರಲು ಮಗನನ್ನು ಹೆತ್ತಳು. ಅವನಿಗೆ ಕಾರ್ತಿಕೇಯ ಎಂಬ ಹೆಸರಾಯಿತು; ಆ ಮೇಲೆ ವೀರಶ್ರೀ ಎಂಬ ಮಗಳು ಹುಟ್ಟಿದಳು. ಇವಳನ್ನು ರೋಹೇಟಕ ಪುರೇಶನಾದ ಕ್ರೌಂಚನೆಂಬವನು ಮದುವೆಯಾದನು. ಸ್ವಾಮಿ ಕಾರ್ತಿಕೇಯನು ಹುಡುಗರೊಡನೆ ಆಡುತ್ತಾ ೧೪ ವರ್ಷಗಳ ಪ್ರಾಯವನ್ನು ಪಡೆದನು. ತನ್ನೊಡನಾಡಿಗಳಿಗೆ ಅವರವರ ಮಾತಾಮಹ ಮಂದಿರಗಳಿಂದ ವಸಂತಕಾಲದ ಪ್ರಾಭೃತಗಳು ಬಂದುದನ್ನು ಕಾರ್ತಿಕೇಯ ನೋಡಿ ತಾಯ ಬಳಿಗೆ ಹೋಗಿ ನನಗೆ ಮಾತಾಮಹನು ಇರುವನೇ, ಇಲ್ಲವೇ ಎಂಬುದನ್ನು ಹೇಳು ಎಂದನು.

> ಶ್ರುತ್ವಾ ಪುತ್ರವಚೋ ಮಾತಾ ದುಃಖಪೂರಿತ ಮಾನಸಾ ।
> ಜಗಾದ ನಂದನಂ ಚೈಕಃ ಪಿತಾ ತೇ ಮೇಪಿ ಬಾಲಕಃ ॥ ೧೭

ಎಂದಳು ಅವಳು. ತಾಯ ಮಾತನ್ನು ಕೇಳಿ ಕಾರ್ತಿಕೇಯನಿಗೆ ಮಹಾ ವಿರಕ್ತಿ ಹುಟ್ಟಿ ಯಶೋಧರ ಮುನಿಗಳ ಪಾರ್ಶ್ವದಲ್ಲಿ ದೀಕ್ಷಾಗ್ರಹಣಮಾಡಿ ನಾನಾ ತಪಸ್ಸುಗಳನ್ನು ಮಾಡುತ್ತ ವಿಹಾರಿಸುತ್ತ ಅವನು ಕಿಷ್ಕಿಂಧ ಪರ್ವತಕ್ಕೆ ಬಂದನು. ಅಲ್ಲಿ ರಾತ್ರಿ ಪ್ರತಿಮಾ ಯೋಗದಲ್ಲಿ ನಿಂತುಕೊಂಡನು. ಮಳೆ ಸುರಿದು ಆವನ ಕಾಯಮಲವೆಲ್ಲ ತೊಳೆಯಿತು; ಆ ಮಲದ ನೀರು ಸರ್ವೌಷಧವಾಗಿ ಪರಿಣಮಿಸಿತು; ಅದರಲ್ಲಿ ಸ್ನಾನಮಾಡಿ ಲೋಕ ವ್ಯಾಧಿ ವಿವರ್ಜಿತವಾಯಿತು. ದಕ್ಷಿಣಾಪಥದಲ್ಲಿ ಹುಟ್ಟಿದ ಆ ತೀರ್ಥವು ಪವಿತ್ರವಾದದ್ದಾಯಿತು. ಒಂದು ದಿನ ಆ ಮುನಿ ರೋಹೇಟಕಪುರಕ್ಕೆ ಬಂದನು. ಅರಮನೆಯ ಸೌಧದಲ್ಲಿದ್ದ ಕ್ರೌಂಚನೂ ವೀರಶ್ರೀಯೂ ಇವನನ್ನು ನೋಡಿದರು; ವೀರಶ್ರೀಗೆ ಅಣ್ಣನನ್ನು ಕಂಡು ಪ್ರೀತಿಯುಂಟಾಯಿತು. ಇಷ್ಟರಲ್ಲಿ ಅರಮನೆಗೆ ಬಂದು ಹಿಂದಿರುಗುತ್ತಿದ್ದ ಆ ಮುನಿಯನ್ನು ಕ್ರೌಂಚನು ಶಕ್ತ್ಯಾಯುಧದಿಂದ ಘಾತಿಸಿದನು. ಆ ಮಹಾಮುನಿ ಮಯೂರ ವಿದ್ಯೆಯಿಂದ ಮೇಲಕ್ಕೆ ಹಾರಿದಾಗ ಸ್ವಾಮಿಗೇಹಕ್ಕೆ ಒಯ್ಯಲ್ಪಟ್ಟನು. ಅಲ್ಲಿ ಅವನು ವೇದನೆಯನ್ನು ಸೈರಿಸಿ ಸತ್ತು ಸುರಲೋಕಕ್ಕೆ ಹೋದನು. (೨೫ ಶ್ಲೋಕಗಳು)

## ೧೩೭. ಅಭಯಘೋಷಮುನಿ ಕಥಾನಕಂ

ಕಾಕಂದೀನಗರ. ರಾಜ ಅಭಯಘೋಷ. ಭಾರ್ಯೆ ಅಭಯಮತಿ. ಒಂದು ದಿನ ಚತುರಂಗಸೈನ್ಯ ಪರಿವೃತನಾಗಿ ರಾಜ ಪಟ್ಟಣದಿಂದ ಹೊರಕ್ಕೆ ಹೋದವನು ನಾಲ್ಕೂ ಕಾಲುಗಳನ್ನು ಕಟ್ಟಿ ಕೋಲಿನ ಮಧ್ಯೆ ನೇತಾಡುತ್ತಿದ್ದ ಆಮೆಯೊಂದನ್ನು ನೋಡಿದನು. ಅದನ್ನು ಹೊತ್ತ ಜಾಲಗಾರನು ಹಾಡುತ್ತ ಬೇಗಬೇಗನೆ ಹೋಗುತ್ತಿದ್ದನು. ಅಭಯ ಘೋಷನು ಚಕ್ರವನ್ನು ಬೀಸಿ ಎಸೆದು ಆಮೆಯ ನಾಲ್ಕು ಕಾಲುಗಳನ್ನೂ ಒಂದೇಸಲಕ್ಕೆ ಕತ್ತರಿಸಿ ಹಾಕಿದನು. ಜಾಲಗಾರನು ಆ ಆಮೆಯನ್ನು ಮನೆಗೆ ಕೊಂಡುಹೋದನು. ಆಮೆ ಆ ಇರುಳೇ ದುಃಖದಿಂದ ಸತ್ತುಹೋಗಿ ಅಭಯಘೋಷನ ಮಗನಾಗಿ ಹುಟ್ಟಿ ಚಂಡವೇಗನೆಂಬ ಹೆಸರನ್ನು ಪಡೆಯಿತು. ಚಂದ್ರಗ್ರಹಣ ವಿಲೋಕನದಿಂದ ಅಭಯ ಘೋಷ ವೈರಾಗ್ಯ ಸಂಯುಕ್ತನಾಗಿ ತಪವನ್ನು ಸ್ವೀಕರಿಸಿ ಕಾಕಂದಿಯಿಂದ ಉಜ್ಜಯಿನೀ ಪುರಕ್ಕೆ ಬಂದು ಅಲ್ಲಿ ವೀರಾಸನದಲ್ಲಿ ಕುಳಿತುಕೊಂಡನು. ಇವನ ಮಗನಾದ ಚಂಡ ವೇಗ ಪೂರ್ವ ವೈರ ಕಾರಣದಿಂದ ಇವನ ಹಸ್ತಪಾದಗಳನ್ನು ಕತ್ತರಿಸಿದನು. ಈ ಚಂಡವೇಗೋಪಸರ್ಗವನ್ನು ಸೈರಿಸಿ ಅಭಯಘೋಷ ಕೇವಲ ಜ್ಞಾನಿಯಾಗಿ ಮೋಕ್ಷಕ್ಕೆ ಹೋದನು. (೧೨ ಶ್ಲೋಕಗಳು)

## ೧೩೮. ವಿದ್ಯುಚ್ಚರಮುನಿ ಕಥಾನಕಂ

ಭರತಕ್ಷೇತ್ರ. ಮಿಥಿಲಾನಗರಿ. ರಾಜ ಪದ್ಮರಥಾನ್ವಯದ ವಾಮರಥ. ಭಾರ್ಯೆ ಬಂಧು ಮತಿ. ಅಲ್ಲಿ ತಳವಾರ (ಆರಕ್ಷಿಕಃ) ಯಮದಂಡ. ಚೋರ ವಿದ್ಯುಚ್ಚರ, ಚತುಷ್ಷಷ್ಟಿಕ ಲಾನ್ವಿತ. ಪೌರರ ಸಾರರತ್ನಗಳನ್ನು ಕದ್ದು ಭೂಮಿಯಲ್ಲಿ ಅವನು ಬಚ್ಚಿಡುತ್ತಿದ್ದನು. ಹಗಲು ದೇವಾಲಯದಲ್ಲಿ ಕುಷ್ಠರೋಗಗ್ರಸ್ತನಾಗಿ ವೇದನೆಯಿಂದ ನರಳುತ್ತ ಮಲಗಿದ್ದು ಇರುಳು ದಿವ್ಯದೇಹಧರನಾಗಿ ಅವನು ಜನರ ದ್ರವ್ಯವನ್ನು ಅಪಹರಿಸಿ ಇಷ್ಟಳಾದ ಗಣಿಕೆ ಯೊಡನೆ ವಿಹಾರಿಸುತ್ತಿದ್ದನು. ಒಂದು ರಾತ್ರಿ ವಾಮರಥಾಖ್ಯರಾಜನ ಮನೆಗೆ ಮತಿ ಕೌಶಲದಿಂದ ಪ್ರವೇಶಿಸಿ ಹಾರವನ್ನು ಕದ್ದುಕೊಂಡು ಬೇಗನೆ ಹೊರ ಹೊರಟನು. ಬೆಳಗ್ಗೆ ವಾಮರಥ ಯಮದಂಡನನ್ನು ಕರೆದು "ಈ ಇರುಳು ಯಾವನೋ ನನ್ನ ಮನೆಗೆ ನುಗ್ಗಿ— ಅವನು ದಿವ್ಯರೂಪಧರ, ವಿದ್ಯುದುಜ್ವಲ ದೇಹಿ—ನನ್ನ ದೇವಿಯನ್ನು ಮರುಳುಮಾಡಿ ಅವಳ ಕಣ್ಣ ಮುಂದೆಯೇ ಸುರದತ್ತವಾದ ಮುಕ್ತಾಹಾರವನ್ನು ಅಪಹರಿಸಿಕೊಂಡು ಹೋದ. ಅವನನ್ನು ನೀನು ಏಳು ದಿವಸಗಳಲ್ಲಿ ಕಂಡುಹಿಡಿಯಬೇಕು. ಇಲ್ಲವಾದರೆ ನಿನಗೆ ದಂಡನೆಯಾಗುತ್ತದೆ" ಎಂದು ಹೇಳಿದನು. ಯಮದಂಡನು ಕಳ್ಳನನ್ನು ಅನ್ವೇ ಷಣೆ ಮಾಡಲು ಹೊರಟನು. ಆರಾಮಾಪಣವಾಪಿ ಸರಃ ಸಾಣೂರವೇಶ್ಮಗಳಲ್ಲಿ ಎಷ್ಟು ಹುಡುಕಿದರೂ ಕಳ್ಳನು ಸಿಕ್ಕಲಿಲ್ಲ.

ಏಳನೆಯ ದಿವಸದಂದು ತಳಾರನು ಶಾಲೆಯೊಂದರಲ್ಲಿ ಅನಾಥನಾದ ದೇಶಿಕನೊಬ್ಬ ನನ್ನು ನೋಡಿ ಹೃಷ್ಟಚಿತ್ತನಾಗಿ ಅವನನ್ನು ಕರೆದುಕೊಂಡು ರಾಜನ ಬಳಿಗೆ ಬಂದನು.

ಅಂಜನಘುಟಿಕೆಗಳನ್ನು ಹಿಡಿದುಕೊಂಡು ಯಮದಂಡ ಪುರಸ್ಸರನಾಗಿ ಅವನು ಬಂದು 'ನಾನು ತಸ್ಕರನಲ್ಲ, ಮಾಯೆಯಲ್ಲೂ ರೂಪಪರಾವರ್ತನದಲ್ಲೂ ಇಂದ್ರಜಾಲದಲ್ಲೂ ಪರಿಣತನಾದ ಈ ಮಾಯಾವಿ ತಳಾರನು ನನ್ನನ್ನು ಕೊಲ್ಲಿಸುವುದಕ್ಕಾಗಿ ಹೀಗೆ ಮಾಡಿದ್ದಾನೆ' ಎಂದು ರಾಜನ ಎದುರಿಗೆ ಹೇಳಿದನು. ಕಳ್ಳನ ಮಾತನ್ನು ರಾಜ ಕೇಳಿ ಈ ವಿಷಯವನ್ನು ಎಲ್ಲ ಕೋವಿದರೂ ತಿಳಿದುಕೊಳ್ಳಬೇಕು, ಆರಕ್ಷಿಕನು ರೂಪ ಪರಾವರ್ತನ ಮಾಡುವುದನ್ನು ಪ್ರದರ್ಶಿಸಲಿ ಎಂದನು. ವಿನಾಕಾರಣವಾಗಿ ಈ ಅನಾಥನೂ ದೇಶಿಕನೂ ಯಮದಂಡನಿಂದ ನಾಶಿತನಾದನು, ಸಂದೇಹನಿವಾರಣೆ ಮಾಡಲಿ, ಎಂದನು ವಿದ್ಯುಚ್ಚರ. ತಳಾರನು ಅವನನ್ನು ಮನೆಗೆ ಕರೆದುಕೊಂಡು ಹೋಗಿ ಮಾಘ ಮಾಸದಿರುಳಿನಲ್ಲಿ ದ್ವಾತ್ರಿಂಶದ್ವೇದನೆಗಳಿಂದ ದಂಡಿಸಿದನು. ಬೆಳಗಾದಾಗ ತಸ್ಕರ ಯಮದಂಡನೊಡನೆ ರಾಜನಲ್ಲಿಗೆ ಬಂದು, ನರೇಶ್ವರ ನನ್ನ ಮಾತನ್ನು ಕೇಳು, ನಾನು ತಸ್ಕರನಲ್ಲ ಎಂದು ಮತ್ತೆ ಹೇಳಿದ. ರಾಜನು ಕಳ್ಳನಿಗೆ ಹೀಗೆಂದ—ನೀನು ಕಳ್ಳನಲ್ಲದಿದ್ದರೆ ಮೂವತ್ತೆರಡು ದಂಡನೆಗಳನ್ನು ಹೇಗೆ ಸೈರಿಸಿದೆ. ಇದಕ್ಕೆ ನಾನಾ ಶಾಸ್ತ್ರ ವಿಶಾರದನಾದ ವಿದ್ಯುಚ್ಚರ ಹೇಳಿದನು—ಶ್ಮಶಾನದಲ್ಲಿದ್ದ ಧೀಮಂತನೊಬ್ಬನಿಂದ ನಾನಾ ವಿಧ ನಾರಕ ದುಃಖಗಳನ್ನು ಕೇಳಿ ತಿಳಿದಿದ್ದೆ. ಇವುಗಳೊಡನೆ ಹೋಲಿಸಿ ನೋಡಿದರೆ ದಂಡನೆಗಳ ವೇದನೆ ಅಲ್ಪವೆಂದು ಭಾವಿಸಿ ಸೈರಿಸಿದೆ. ಈ ಮಾತಿಗೆ ನೃಪನು ಸಂತುಷ್ಟನಾಗಿ ವರವನ್ನು ಕೇಳು, ಕೊಡುತ್ತೇನೆ ಎಂದನು. ಮಿತ್ರನಾದ ತಳಾರನಿಗೆ ಅಭಯವನ್ನು ಕೊಡು ಎಂದು ಕೇಳಿದ ಕಳ್ಳ. ರಾಜ—ಯಮದಂಡ ನಿನಗೆ ಮಿತ್ರ ಹೇಗೆ. ವಿದ್ಯುಚ್ಚರ—'ನಮ್ಮ ಮಿತ್ರತ್ವಕ್ಕೆ ಕಾರಣವನ್ನು ಕೇಳು, ರಾಜ. ದಕ್ಷಿಣಾಪಥದಲ್ಲಿ ಆಭೀರ ವಿಷಯವಿದೆ. ಅಲ್ಲಿನ ವಿನ್ಯಾನದೀತೀರದಲ್ಲಿ ವಿನ್ಯಾತಟವೆಂಬ ಪುರವಿದೆ. ಅಲ್ಲಿ ಜಿತಶತ್ರು ಇದ್ದನು, ಅವನ ಭಾರ್ಯೆ ಜಯಮತಿ. ಅವರ ಮಗ ನಾನು. ಅದೇ ನಗರದಲ್ಲಿ ಯಮನಾಮಕ ತಲಾರನಿದ್ದನು, ಅವನ ಹೆಂಡತಿ ಯಮುನಾದೇವಿ. ಇವರಿಬ್ಬರ ಮಗ ಯಮದಂಡ. ಬಾಲಕಾಲ ಕಳೆಯುತ್ತಲು ನಾನು ಚೋರಶಾಸ್ತ್ರದಲ್ಲಿ ಶಿಕ್ಷಿತನಾದೆ. ಯಮದಂಡನು ಅದೇ ಗುರುಗಳಲ್ಲಿ ಸಕಲ ತಳಾರ ಶಾಸ್ತ್ರವನ್ನು ಕಲಿತನು. ನಾನು ಯಮದಂಡನಿಗೆ ಹೇಳಿದೆ—ನೀನೆಲ್ಲಿ ತಳಾರನಾಗುವೆಯೋ ಅಲ್ಲಿ ನಾನು ಕಳ್ಳನಾಗಿರುತ್ತೇನೆ ಎಂದು. ಅದಕ್ಕೆ ಅವನು ನೀನೆಲ್ಲಿ ಕಳ್ಳನಾಗಿರುವೆಯೋ ಅಲ್ಲೇ ನಾನು ತಳಾರನಾಗಿರುತ್ತೇನೆ' ಎಂದನು.

ಹೀಗೆ ನಾವಿಬ್ಬರೂ ಪ್ರತಿಜ್ಞೆ ಮಾಡಿದೆವು. ಕಾಲ ಕಳೆಯಿತು. ನನ್ನ ತಂದೆ ನನಗೆ ರಾಜ್ಯವನ್ನು ಕೊಟ್ಟು ಅಭಿನಂದನರ ಹತ್ತಿರ ತಪಸ್ಸನ್ನು ಸ್ವೀಕರಿಸಿದನು. ಯಮದಂಡನ ತಂದೆಯೂ ಸಹ ತನ್ನ ಪದವಿಯನ್ನು ಮಗನಿಗೆ ಕೊಟ್ಟು ಅದೇ ಗುರುಗಳಲ್ಲಿ ಜೈನ ದೀಕ್ಷೆಯನ್ನು ಪಡೆದನು. ನಾನು ವಿನ್ಯಾತಟದಲ್ಲಿ ನಿಷ್ಕಂಟನಾಗಿ ಆಳುತ್ತಿದ್ದೆ. ಯಮದಂಡನು ನಗರಪಾಲನೆಯನ್ನು ಮಾಡಿ ಕಳ್ಳರಿಂದ ಜನರನ್ನು ರಕ್ಷಿಸುತ್ತಿದ್ದ. ನನ್ನ ಪ್ರಭು ತಸ್ಕರ, ನಾನು ತಳಾರ, ಇದು ಒಳ್ಳೆಯದಲ್ಲ ಎಂದು ಯಮದಂಡ ಭಾವಿಸಿ

ಆರಕ್ಷಿಕ ಪದವಿಯನ್ನು ತೊರೆದು, ರಾಜನೇ, ನಿನ್ನ ಬಳಿಗೆ ಅವನು ಬಂದನು. ನಾನು ಅವನಿಂದ ಬಹುಕಾಲ ಅಗಲಿದವನಾಗಿ ಅವನನ್ನು ಪರೀಕ್ಷಿಸಬೇಕೆಂದು ನಿನ್ನ ಪಟ್ಟಣಕ್ಕೆ ಬಂದೆ. ನಮ್ಮಿಬ್ಬರ ಈ ಸಂಬಂಧ ಈಗ ಪ್ರಕಟವಾಯಿತು. ರಾಜನೇ, ನಿನಗೆ ಎಲ್ಲವನ್ನೂ ತಿಳಿಸುತ್ತೇನೆ, ಎಂದನು. ನಾನು ಕದ್ದ ಹಾರಾದಿ ಧನವೆಲ್ಲ ನಿನಗೆ ಸಮರ್ಪಿಸಿದ್ದೇನೆ— ಜನರೆಲ್ಲ ತಂತಮ್ಮ ಒಡವೆಗಳನ್ನು ಆರಿಸಿಕೊಂಡರು.

ವಿದ್ಯುಚ್ಚರನ ವೃತ್ತಾಂತವನ್ನು ತಿಳಿದ ಮಂತ್ರಿಗಳು ಅವನಲ್ಲಿಗೆ ದೂತನನ್ನು ಕಳಿಸಿದರು. ಅವನು ಬಂದು 'ರಾಜ, ನಿನ್ನ ಪಟ್ಟಣಕ್ಕೆ ಬೇಗನೆ ಬಾ, ರಾಜ್ಯವಾಳು' ಎಂದನು. ವಾಮರಥನು ಇದನ್ನೆಲ್ಲಾ ಕೇಳಿ ವಿದ್ಯುಚ್ಚೋರನು ನನ್ನ ಭಾಗಿನೇಯನಾಗಿದ್ದಾನೆ,ಅವನಿಗೆ ನನ್ನ ಸುತೆಯನ್ನು ಕೊಡುತ್ತೇನೆ,ಸ್ವೀಕರಿಸಲಿ ಎಂದ. ಮಾತುಲನ ಮಾತನ್ನು ಕೇಳಿ ವಿದ್ಯುಚ್ಚರ ಯಮದಂಡ ಸಮೇತನಾಗಿ ಸ್ವಪತ್ತನಕ್ಕೆ ಹೋಗಿ ತನ್ನ ಮಗನಿಗೆ ರಾಜ್ಯವನ್ನು ಕೊಟ್ಟು ಪರಿಗ್ರಹಗಳನ್ನು ತೊರೆದು ಬಹು ಸಾಮಂತಸಹಿತನಾಗಿ ಗುಣಸೇನ ಗುರುಗಳಲ್ಲಿ ದೀಕ್ಷೆಯನ್ನು ಪಡೆದನು. ಅನೇಕ ತಪಗಳನ್ನು ಮಾಡುತ್ತ ೫೦೦ ಶಿಷ್ಯರೊಡನೆ ಕೂಡಿ ಅವನು ತಾಮ್ರಲಿಂದ್ರೀಪುರಕ್ಕೆ ಬಂದನು. ಆ ಪುರನಿವಾಸಿಯಾದ ದುರ್ಗಿ ಮುನಿಯನ್ನು ಕಂಡು ಅವನ ಪಾದಕ್ಕೆ ನಮಿಸಿ ನನ್ನ ಪೂಜೆ ಮುಗಿಯುವವರೆಗೆ, ಐದು ದಿವಸಗಳವರೆಗೆ ಪಟ್ಟಣ ಪ್ರವೇಶಮಾಡಬೇಡ, ಸ್ವಾಮಿ, ಎಂದು ಬೇಡಿದಳು. ಮುನಿ ಶಿಷ್ಯರಿಂದ ಪ್ರೇರಿತನಾಗಿ ದುರ್ಗಿಯ ಮಾತನ್ನು ತಿರಸ್ಕರಿಸಿ ನಗರಪ್ರವೇಶ ಮಾಡಿ ಅದರ ಪಶ್ಚಿಮ ದಿಗ್ಭಾಗದಲ್ಲಿ ರಾತ್ರಿ ಪ್ರತಿಮಾಯೋಗದಲ್ಲಿ ನಿಂತನು. ಕೋಪಾವಿಷ್ಟಳಾದ ದುರ್ಗಿ ದಂಶೋಪಸರ್ಗವನ್ನು ಮಾಡಿದಳು. ಅದನ್ನೆಲ್ಲ ಸೈರಿಸಿ ವಿದ್ಯುಚ್ಚರ ಸಮಾಧಿ ಮರಣದಿಂದ ನಿರ್ವಾಣಕ್ಕೆ ಸಂದನು. (೬೩ ಶ್ಲೋಕಗಳು)

## ೧೯೯. ಗಜಕುಮಾರ ಕಥಾನಕಂ

ಶ್ರಾವಸ್ತಿನಗರ. ರಾಜ ಉಪರಿಚರ. ಮಹಾದೇವಿ ಪದ್ಮಾವತಿ. ತನಯರು ಅನಂತವೀರ್ಯ ಮುಂತಾದ ಐವರು. ಒಂದು ದಿನ ಉಪರಿಚರ ರಾಜನು ಸ್ವಕೀಯ ಅಂತಃಪುರ ಸ್ತ್ರೀಯರಿಂದ ಕೂಡಿದವನಾಗಿ ಪ್ರಮದೋದ್ಯಾನಕ್ಕೆ ಹೋಗಿ ಸುದರ್ಶನಾಖ್ಯ ವಾಪಿಯಲ್ಲಿ ಕ್ರೀಡಿಸುತ್ತಿದ್ದನು. ಅವನ ರಾಣಿಯರು, ಪದ್ಮಾವತಿ, ಅಮಿತಪ್ರಭೆ, ಸುಪ್ರಭೆ, ಪ್ರಭಾವತಿ. ಅದೇ ವನದಲ್ಲಿ ರಮಿಸುತ್ತಿದ್ದ ಮದನವೇಗೆ, ವಿದ್ಯುದ್ದಂಷ್ಟ್ರನ ಮಡದಿ ಪ್ರಶಂಸಾ ಪೂರ್ವಕವಾಗಿ ಉಪರಿಚರನ ವೈಭವವನ್ನು ವರ್ಣಿಸಿದಳು. ವಿದ್ಯುದ್ದಂಷ್ಟ್ರ ರುಷಾನ್ವಿತನಾಗಿ ಹೆಂಡತಿಯನ್ನು ತನ್ನ ನಗರದಲ್ಲಿ ಬಿಟ್ಟು ಮರಳಿ ಬಂದು ಸುದರ್ಶನ ವಾಪಿಯನ್ನು ದೊಡ್ಡ ಬಂಡೆಯಿಂದ ಮುಚ್ಚಿಬಿಟ್ಟನು. ಮಿಥ್ಯಾದರ್ಶನಯುತನಾದ ಉಪರಿಚರ ಸತ್ತು ಆರ್ತಧ್ಯಾನ ಕಾರಣವಾಗಿ ದಂದಶೂಕನಾಗಿ ಜನ್ಮತಾಳಿದನು. ಅವನ ಭಾರ್ಯೆಯರು ಸಮ್ಯಗ್ದರ್ಶನಯುತರಾಗಿ ಅನಶನದಿಂದ ಸತ್ತು ಪ್ರಥಮ ಸ್ವರ್ಗದಲ್ಲಿ ಹುಟ್ಟಿದರು. ಒಂದು ದಿನ ಅನಂತವೀರ್ಯನು ಕ್ರೀಡಿಸಲು ಆ ಉದ್ಯಾನಕ್ಕೆ ಬಂದು ಸಾಗರ

ಸೇನಮುನಿಯನ್ನು ಅಲ್ಲಿ ಕಂಡು ನಮಸ್ಕರಿಸಿ 'ನನ್ನ ತಂದೆ ಯಾವ ಗತಿಗೆ ಸಂದನು, ಹೇಳಿರಿ' ಎಂದು ಕೇಳಿದನು. ಋಷಿ ಹೇಳಿದನು—ಸುದರ್ಶನವಾಪಿಯಲ್ಲಿ ಸತ್ತ ನಿನ್ನ ತಂದೆ ಇದೇ ವನದಲ್ಲಿ ಹಾವಾಗಿ ಹುಟ್ಟಿದ್ದಾನೆ. 'ಅವನು ಜಿನ ಧರ್ಮವನ್ನು ಹೇಗೆ ಗ್ರಹಿಸಬಲ್ಲ' ಎಂದು ಅನಂತವೀರ್ಯ ಕೇಳಿದ. "ನೀನು ಹಾವಿನ ಬಿಲದ ಬಳಿಗೆ ಹೋಗಿ ಸಾಧು ಸಮೀಪಕ್ಕೆ ಬೇಗನೆ ಹೋಗು, ನಿನ್ನ ಮಾತನ್ನು ಕೇಳಿ ಜಾತಿಸ್ಮರತ್ವವನ್ನು ಹೊಂದಿ ಅದು ಜಿನಧರ್ಮವನ್ನು ಗ್ರಹಿಸುತ್ತದೆ" ಎಂದನು. ಹಾವು ಹಾಗೆಯೇ ಮಾಡಿತು. ಜಿನಧರ್ಮ ಸ್ವೀಕರಣವನ್ನು ಮಾಡಿ ಅನಶನ ವ್ರತದಿಂದ ಪಂಚತ್ವವನ್ನು ಹೊಂದಿ ನಾಗಮಂದಿರದಲ್ಲಿ ಸುಂದರನಾದ ನಾಗಕುಮಾರನಾಗಿ ಹುಟ್ಟಿತು. ಇವನ ದೇವಿಯರು ಅವಧಿಜ್ಞಾನದಿಂದ ಈ ವಿಷಯವನ್ನು ತಿಳಿದವರಾಗಿ ನಾಗಮಂದಿರಕ್ಕೆ ಬಂದರು. ಅನಂತವೀರ್ಯನು ತನ್ನ ಮಗ ಸುವಾಸುವಿಗೆ ರಾಜ್ಯವನ್ನು ಕೊಟ್ಟು ಸಾಗರಸೇನಮುನಿಯಿಂದ ದೈಗಂಬರ ದೀಕ್ಷೆಯನ್ನು ಸ್ವೀಕರಿಸಿದನು, ಮಹಾಮುನಿಯಾಗಿ ಮೋಕ್ಷಕ್ಕೆ ಹೋದನು.

ಒಂದು ದಿವಸ ನಾಗಕುಮಾರನು ನಂದೀಶ್ವರ ಮಹಾಮಹವನ್ನು ಮಾಡಿ ಜಿನವಂದನಾರ್ಥನಾಗಿ ಮಂದರಪರ್ವತಕ್ಕೆ ಬಂದು ಸಕಲತ್ರನಾಗಿ ವಿದ್ಯೆಯನ್ನು ಸಾಧಿಸುತ್ತಿದ್ದ ವಿದ್ಯುದ್ದಂಷ್ಟ್ರನನ್ನು ಅಲ್ಲಿ ಕಂಡನು; ಕೂಡಲೇ ಅವನನ್ನೂ ಅವನ ಹೆಂಡತಿಯನ್ನೂ ಸಮುದ್ರ ಮಧ್ಯಕ್ಕೆ ಎಸೆದು ಪೂರ್ವ ವೈರ ಕಾರಣದಿಂದ ಅವರನ್ನು ಕೊಂದನು. ಹತನಾದ ವಿದ್ಯುದ್ದಂಷ್ಟ್ರನು ಖಟಖಟಾಭಿದವೆಂಬ ನರಕದಲ್ಲಿ ಹುಟ್ಟಿ ಆಮೇಲೆ ತೋಣಿಮದ್ಧರಣೀಧರದಲ್ಲಿ ಹುಲಿಯಾಗಿ ಜನ್ಮಿಸಿದನು.

ಹಸ್ತಿನಗರದ ರಾಜ ವಿಜಯದತ್ತ; ದೇವಿ ವಿಜಯೆ; ಇವರಿಗೆ ನಾಗಕುಮಾರನು ಸತ್ತು ಮಗನಾಗಿ ಹುಟ್ಟಿ ಗುರುದತ್ತನೆಂಬ ಹೆಸರನ್ನು ಪಡೆದನು. ಇವನ ಎಂಟನೆಯ ವಯಸ್ಸಿನಲ್ಲಿ ತಂದೆ ಇವನಿಗೆ ರಾಜ್ಯವನ್ನು ಕೊಟ್ಟು ತಪಸ್ಸಿಗೆ ಹೋದನು. ಗುರುದತ್ತನು ರಾಜ್ಯವಾಳುತ್ತಿದ್ದನು. ಲಾಟದೇಶದ ನಡುವೆ ತೋಣಿಮಂತ ಪರ್ವತದ ಪೂರ್ವೋತ್ತರದಿಶಾ ಭಾಗದಲ್ಲಿ ಚಂದ್ರಪುರಿ ಎಂಬ ರಮ್ಯವಾದ ನಗರವಿತ್ತು. ಅದಕ್ಕೆ ರಾಜ ಚಂದ್ರಕೀರ್ತಿ, ಮಹಾದೇವಿ ಚಂದ್ರಲೇಖೆ. ಇವರಿಗೆ ಜಿನಮತ್ಯಾದಿ ಸಪ್ತ ಕನ್ನಿಕೆಯರು ಹುಟ್ಟಿದರು. ಇವರಲ್ಲಿ ಕಿರಿಯಳಾದ ಅಭಯಮತಿ ಉತ್ತಮಳು. ಇವಳನ್ನು ಗುರುದತ್ತನು ವಿವಾಹವಾಗಲು ಬಯಸಿ ಎಷ್ಟು ಸಲ ಹೇಳಿ ಕಳಿಸಿದರೂ ಇವಳ ತಂದೆ ಒಪ್ಪಲಿಲ್ಲ. ಆದ್ದರಿಂದ ಗುರುದತ್ತ ಸೈನ್ಯಸಮೇತನಾಗಿ ಹೊರಟು ಆ ಪುರವನ್ನು ಮುತ್ತಿಗೆ ಹಾಕಿದನು. ಭಯಂಕರವಾದ ಮಹಾಯುದ್ಧ ನಡೆಯಿತು. ರಣಮುಖದಲ್ಲಿದ್ದ ಮಹೇಂದ್ರದತ್ತನ ಕೈ ಸಕಂಕಣವಾಗಿದ್ದದ್ದು, ಕತ್ತರಿಸಿ ಬಿತ್ತು. ಅದನ್ನು ಒಂದು ಕಾಗೆ ಎತ್ತಿಕೊಂಡು ಬರುತ್ತಿರುವಾಗ ಅದು ಅಭಯಮತಿಯ ಮಾಡದ ಮೇಲೆ ಅವಳ ಎದುರಿಗೇ ಬಿತ್ತು. ಇದನ್ನು ನೋಡಿ ಅವಳು ದಾದಿಯನ್ನು ಕೇಳಿದಳು 'ಇದು ಯಾರ ಕೈ' ಎಂದು. 'ನಿನ್ನ ಕಾರಣವಾಗಿ ನಡೆಯುತ್ತಿರುವ ಜನ ಸಂಕ್ಷಯಕಾರಿ ಯುದ್ಧದಲ್ಲಿ ಹೋರಾಡಿದ ಯಾವನೋ ಒಬ್ಬನ ಕೈ' ಇದು ಎಂದು ದಾದಿ ಹೇಳಿದಳು. ಅಭಯ

ಮತಿಗೆ ಆಶ್ಚರ್ಯವಾಯಿತು. ಅಷ್ಟರಲ್ಲಿ ಭಯಗ್ರಸ್ತನಾದ ಚಂದ್ರಕೀರ್ತಿ ಗುರುದತ್ತನಿಗೆ ಪ್ರೀತನಾಗಿ ಮಗಳನ್ನು ಕೊಟ್ಟನು. ಅಲ್ಲಿ ಗುರುದತ್ತನು ಭಾರ್ಯಾಸಹಿತನಾಗಿ ಸುಖ ವಾಗಿದ್ದನು. ಅವನಲ್ಲಿಗೆ ಜನರೆಲ್ಲಾ ಬಂದು 'ತೋಣಿಮಂತ ಪರ್ವತದಲ್ಲಿರುವ ಹುಲಿಯ ಭಯದಿಂದ ಜನವೆಲ್ಲ ಸಂತ್ರಸ್ತರಾಗಿ ಓಡಿಹೋಗಿದ್ದಾರೆ' ಎಂದು ಹೇಳಿದರು. ಗುರು ದತ್ತನು ರುಷಾನ್ವಿತನಾಗಿ ಆ ಬೆಟ್ಟಕ್ಕೆ ಹೋದನು. ಅವನ ಸೈನ್ಯದ ಕೋಲಾಹಲ ಶಬ್ದವನ್ನೂ ಆನೆಗಳ ಘೀಂಕಾರವನ್ನೂ ಕೇಳಿದ ಆ ಹುಲಿ (=ವಸರ) ಹೆದರಿ ಗುಹೆಯ ನಡುವೆ ಅವಿತುಕೊಂಡಿತು. ಅದನ್ನು ಕೊಲ್ಲಲು ಆಗದಿದ್ದುದರಿಂದ ಆ ಗುಹೆಯ ಮುಖ ದಲ್ಲಿ ತೃಣಾದಿಗಳನ್ನು ಒಟ್ಟಿ ಕಿಚ್ಚನ್ನು ಹೊತ್ತಿಸಿದರು. ಅದರ ಹೊಗೆ ಸುತ್ತಿ ಹುಲಿ ಸತ್ತಿತು. ಚಂದ್ರಾಪುರಿಯಲ್ಲಿ ಭವಧರ್ಮನೆಂಬ ವಿಪ್ರ, ಅವನ ಪ್ರಿಯೆ ಮಾಹನಿ ಎಂಬ ವಳು. ಇವರಿಗೆ ಆ ಹುಲಿ ಕಪಿಲನೆಂಬ ಮಗನಾಗಿ ಹುಟ್ಟಿತು; ಅವನ ಹೆಂಡತಿಯು ಕಪಿಲಾ.

ಚಂದ್ರಪುರಿಯಲ್ಲಿ ತಂಗಿದ್ದ ಗುರುದತ್ತ ಸ್ವಸೈನ್ಯಪರಿವಾರಸಮೇತನಾಗಿ ತನ್ನ ನಗರ ವಾದ ಹಸ್ತಿನಗರಕ್ಕೆ ಬಂದನು. ಅವನ ಭಾರ್ಯೆ ಅಭಯಮತಿ ಮಗನನ್ನು ಹೆತ್ತಳು. ಒಂದು ದಿನ ಆ ಪಟ್ಟಣದ ಹತ್ತಿರವಿದ್ದ ಧರಣೀ ಭೂಷಣಗಿರಿಗೆ ಅಮೃತಾಶ್ರವರೆಂಬ ತಪಸ್ವಿ ಗಳು ಬಂದರು. ಅವರನ್ನು ವಂದಿಸಲು ಗುರುದತ್ತನು ಅಲ್ಲಿಗೆ ಹೋದನು; ತನ್ನ ಪೂರ್ವ ಭವ ವೃತ್ತಾಂತವನ್ನು ಹೇಳಬೇಕೆಂದು ಅವರನ್ನು ಪ್ರಾರ್ಥಿಸಿದನು. ಕೃಪೆಯಿಂದ ಅವರು ಹೀಗೆ ಹೇಳಿದರು—ಹಿಂದಿನ ಭವದಲ್ಲಿ ನೀನು ಉಪರಿಚರ ರಾಜನಾಗಿದ್ದೆ, ಹಾವಾಗಿದ್ದೆ, ಆಮೇಲೆ ನಾಗಕುಮಾರನಾದೆ, ಈಗ ಗುರುದತ್ತನಾಗಿರುವೆ—ಎಂದರು. ಇದನ್ನು ಕೇಳಿ ಅಭಯಮತಿ ತನ್ನ ಭವಾವಳಿಯನ್ನು ಬೆಸಗೊಂಡಳು. ಅವಧಿಜ್ಞಾನ ಲೋಚನನು ಹೇಳಿದನು: 'ಗಂಧರ್ವ ನಗರೋದ್ಭವನಾದ ಗರುಡವೇಗನೆಂಬೊಬ್ಬನಿದ್ದನು; ಅವನ ಪ್ರಿಯೆ ಗೋಮತಿ. ಆ ಪುರಿಗೆ ಒಂದು ದಿವಸ ಸಮಾಧಿ ಗುಪ್ತರೆಂಬ ಮುನಿಗಳು ಬಂದರು. ಇವನ ಹತ್ತಿರ ಗೋಮತಿ ಮಧುಮಾಂಸ ಸುರಾಪಾನ, ಸ್ತ್ರೀಯ, ಪ್ರಾಣಿ ವಧೆ—ಇವುಗಳಿಂದ ರಹಿತವಾದ ವ್ರತವನ್ನು ಸ್ವೀಕರಿಸಿ ಮನೆಗೆ ಬಂದಳು. ಅವಳ ಗಂಡ ಅನೇಕ ತಿತ್ತಿರ ಪಕ್ಷಿಗಳನ್ನು ಕಟ್ಟಿಕೊಂಡು ಪಂಜರದಲ್ಲಿಟ್ಟನು. ಅವುಗಳನ್ನು ಗೋಮತಿ ಬಿಟ್ಟು ಹಾರಿಸಿದಳು. ಅವಳನ್ನು ಕೋಪದಿಂದ ಗಂಡ ಮನೆಯಿಂದ ಹೊರಕ್ಕೆ ಅಟ್ಟಿಬಿಟ್ಟನು. ಅವಳು ಕಾಲಕ್ರಮದಲ್ಲಿ ಸತ್ತು ಚಂದ್ರಲೇಖಾತನಯಳಾದ ಅಭಯಮತಿಯಾಗಿದ್ದಾಳೆ. ಅಲ್ಲದೆ ನೀನು ಗರ್ಭದಲ್ಲಿರುವಾಗ ನಿನ್ನ ತಾಯಿಗೆ ಬಯಕೆಯಾಯಿತು, ಸಕಲ ಪ್ರಾಣಿಗಳಿಗೂ ಅಭಯವನ್ನು ಕಾಣಿಸಬೇಕೆಂದು. ರಾಜ ಪ್ರಾಣಿಹಿಂಸೆ ಆಗಬಾರದೆಂದು ಘೋಷಿಸಿದನು. ನಿನಗೆ ಅಭಯಮತಿ ಎಂಬ ಹೆಸ ರಾಯಿತು ಇದಕ್ಕಾಗಿ.' ತನ್ನ ಭವಾವಳಿಯನ್ನು ಕೇಳಿ ಅಭಯಮತಿ ಅಭಯಳೆಂಬ ಆರ್ಯಿಕೆಯ ಬಳಿ ಜೈನದೀಕ್ಷಾಧಾರಿಯಾದಳು. ಗುರುದತ್ತನು ತನ್ನ ಮಗ ಶ್ರೀದತ್ತನಿಗೆ ರಾಜ್ಯ ಕೊಟ್ಟು ಅಮಿತಮುನಿಗಳ ಪಾರ್ಶ್ವದಲ್ಲಿ ದೀಕ್ಷೆಯನ್ನು ವಹಿಸಿದನು.

ಕಪಿಲೆಯು ದಧಿ ಮಿಶ್ರಿತ ಅನ್ನವನ್ನು (ಭಕ್ತಂ) ತೆಗೆದುಕೊಂಡು ತನ್ನ ಪತಿಯ ಅಪ್ಪಣೆಯಂತೆ ಹೊಲಕ್ಕೆ ಹೋದಳು. ಹೊಲವನ್ನು ಉಳುತ್ತಿದ್ದ ಕಪಿಲನು ಕಾದು ಸಾಕಾಗಿ ಹಸಿವಿನಿಂದ ಬಳಲಿ ಅಷ್ಟರಲ್ಲಿ ತನ್ನ ಮನೆಗೆ ಬಂದನು, ಮಧ್ಯಾಹ್ನ ವೇಳೆಯಲ್ಲಿ. ಕೋಪಗೊಂಡ ಅವನು, 'ದುಷ್ಟೇ, ನೀನು ಅನ್ನವನ್ನು ತಿಂದು ಮನೆಗೆ ಬಂದ ಕಾರಣವೇನು, ಹಸಿವು ಬಾಯಾರಿಕೆಯಿಂದ ಪೀಡಿತನಾದ ನಾನು ಇಲ್ಲಿದ್ದೇನೆ,ದುರ್ಜನರಲ್ಲಿ ದುರ್ಜನೆಯೇ' ಎಂದನು. ಈ ಮಾತನ್ನು ಕೇಳಿ ಕಪಿಲೆ, ನಿನಗಾಗಿ ನಾನು ಅನ್ನವನ್ನು ತೆಗೆದುಕೊಂಡು ಹೊಲಕ್ಕೆ ಹೋದೆ, ನಿನ್ನನ್ನು ಕಾಣದೆ ಇಲ್ಲಿಗೆ ಬಂದೆ ಎಂದಳು. 'ಏಕೆ, ಅಲ್ಲಿದ್ದ ಮುನಿ ಹೇಳಲಿಲ್ಲವೆ ನಿನಗೆ, ಈ ಹೊಲದಿಂದ ಬೇರೆ ಹೊಲಕ್ಕೆ ಉಳಲು ನಾನು ಹೋಗಿದ್ದೆನು' ಎಂದನು ಅವನು. 'ನಾನು ಆ ಮುನಿಯನ್ನು ಕೇಳಿದೆ, ಆದರೆ ಅವನು ಮಾತೇ ಆಡಲಿಲ್ಲ, ಮೂಕನಂತೆ ಇದ್ದನು' ಎಂದಳವಳು. ಈ ಮಾತನ್ನು ಕೇಳಿ ಕಪಿಲ ಕೋಪವನ್ನು ಬಿಟ್ಟು ಹೆಂಡತಿಯನ್ನು ಸಮಾಧಾನಪಡಿಸಿ ತನ್ನ ಕೋಪವನ್ನು ಋಷಿಯ ಕಡೆಗೆ ತಿರುಗಿಸಿದನು; ವರ್ತಿವಂಟನಗಳನ್ನೂ ಅಗ್ನಿಯನ್ನೂ ತಂದು ಪ್ರತಿಮಾಯೋಗದಲ್ಲಿದ್ದ ಆ ಮುನಿಯ ಬಳಿಗೆ ಬಂದು ಕಾಲಿನಿಂದ ಹಿಡಿದು ತಲೆಯವರೆಗೆ ಸುತ್ತಿ (ವೇಂಟನೇ) ಪೂರ್ವ ವೈರಾನುಬಂಧದಿಂದ ಉರಿ ಹೊತ್ತಿಸಿದನು. ಈ ವೇದನೆಯನ್ನು ಗುರುದತ್ತ ಸೈರಿಸಿ ಕೇವಲಜ್ಞಾನವನ್ನು ಪಡೆದನು. ಚತುರ್ವಿಧಾಮರರು ಬಂದು ಗುರುದತ್ತನನ್ನು ಪೂಜಿಸಿದರು. ಇದನ್ನು ಕಂಡ ಕಪಿಲ ತನ್ನನ್ನು ತಾನೇ ನಿಂದಿಸಿಕೊಂಡು ಗುರುದತ್ತನ ಪಾದಗಳ ಮೇಲೆ ಬಿದ್ದು ಜಿನೋದಿತ ಧರ್ಮವನ್ನು ಕೇಳಿ ಸ್ವಭವಾಂತರಗಳನ್ನು ಹೇಳಬೇಕೆಂದು ಕೇಳಿದನು. ಗುರುದತ್ತ ಹೇಳಿದನು: ನೀನು ಮೊದಲು ವಿದ್ಯುದ್ದಂಷ್ಟ್ರನೆಂಬ ಖೇಚರನಾಗಿದ್ದೆ; ನಾಗಕುಮಾರನಿಂದ ನಿನ್ನ ವಧೆಯಾಗಿ ರತ್ನಪ್ರಭೆಯೆಂಬ ನರಕಕ್ಕೆ ಹೋದೆ, ಅಲ್ಲಿಂದ ಬಂದು ತೋಣಿಮಂತ ಪರ್ವತದಲ್ಲಿ ಹುಲಿಯಾಗಿ ಹುಟ್ಟಿದೆ, ಗುರುದತ್ತನಿಂದ ಮಡಿದು ಈಗ ಕಪಿಲನಾದೆ—ಎಂದನು. ಈ ಮಾತನ್ನು ಕೇಳಿ ಕಪಿಲ ಪುರಾತನ ವೈರವನ್ನು ಬಿಟ್ಟು ದೀಕ್ಷಾಗ್ರಹಣಮಾಡಿ ಮುನಿಯಾದನು. ಆಮೇಲೆ ಏಕವಿಹಾರಿಯಾಗಿ ಸುತ್ತಾಡುತ್ತ ಕೊಂಕಣ ವಿಷಯಕ್ಕೆ ಬಂದನು. ಭಯಂಕರವಾದ ಗಿರಿವಲ್ಲರಿಕೆಯೆಂಬಲ್ಲಿ ಶುಷ್ಕಕಾಷ್ಠರಾಶಿಯ ಮೇಲೆ ಅವನು ಇರುಳು ಪ್ರತಿಮಾಯೋಗದಲ್ಲಿ ನಿಂತನು. ಅಲ್ಲಿಗೆ ಬಂದ ಪಾಮರನು ಆ ವಲ್ಲರದಲ್ಲಿ ಉರಿಯನ್ನು ಇಟ್ಟು ತನ್ನ ಮನೆಗೆ ಹೋದನು. ಈ ಉಪಸರ್ಗವನ್ನು ಸೈರಿಸಿ ಕಪಿಲನು ಸಮಾಧಿ ಮರಣದಿಂದ ಸತ್ತನು, ಅಚ್ಯುತ ಕಲ್ಪದಲ್ಲಿ ದೇವನಾಗಿ ಹುಟ್ಟಿದನು. ಬೆಳಗಾದಾಗ ಆ ಕೌಂಕಣನು ವಲ್ಲರದ ಬಳಿಗೆ ಬಂದು ಬೆಂದ ಮುನಿಯನ್ನು ಕಂಡನು (ವಲ್ಲರ = ಹೊದರು). ದುಃಖದಿಂದ ತನ್ನನ್ನು ತಾನೇ ನಿಂದಣೆಗರ್ಹಣೆ ಮಾಡಿಕೊಂಡು ಅದೇ ಅಗ್ನಿಯಲ್ಲಿ ಬಿದ್ದು ಸತ್ತು ಹೀನನೆಂಬ ದೇವತೆಯಾದನು.

ಆಯುರಂತ್ಯದಲ್ಲಿ ಅವನು ವಿಂಧ್ಯದ ಕಾಡಿನಲ್ಲಿ ಶ್ವೇತಹಸ್ತಿಯಾಗಿ ಹುಟ್ಟಿದನು. ಜನ ಸಂಕ್ಷಯಮಾಡುತ್ತಿದ್ದ ಈ ಆನೆಯನ್ನು ಅಚ್ಯುತೇಂದ್ರನು ನೋಡಿ ಆದಕ್ಕೆ

ಉಪದೇಶಮಾಡಿದನು. ಆನೆಯು ಪ್ರಶಮನವನ್ನು ಪಡೆಯಿತು, ಸಂಯಮಾಖ್ಯ ತಪಸ್ಸನ್ನು ಸ್ವೀಕರಿಸಿತು. ಒಂದು ದಿನ ಕಾಳ್ಕಿಚ್ಚು ಹತ್ತಿಕೊಂಡು ಅಡವಿ ಬೇಯುತ್ತಿರುವಾಗ ಆನೆಯು ಹಿಂಡಿನೊಡನೆ ಈ ಆನೆ ವಟವೃಕ್ಷದಡಿಯಲ್ಲಿ ನಿಂತಿತು. ಬೆಂಕಿ ಅದಕ್ಕೂ ಆವರಿಸಿ ಉರಿಯುತ್ತಿರಲು ಆ ಆನೆಯ ಕಾಲ್ಗೆಳಗೆ ಒಂದು ಮೊಲ ಬಂದು ನಿಂತಿತು. ಆನೆ ಸತ್ತು ಸಹಸ್ರಾರ ಕಲ್ಪದಲ್ಲಿ ಹುಟ್ಟಿತು. ಆಮೇಲೆ ಅದು ರಾಜಗೃಹಪುರದಲ್ಲಿ ಶ್ರೇಣಿಕನ ಮಹಾದೇವಿ ಧನಶ್ರೀಯ ಗರ್ಭದಲ್ಲಿ ಬಂದು ನೆಲಸಿತು. ಅವಳಿಗೆ ಬಯಕೆಯಾಯಿತು; ಮಳೆಗಾಲದಲ್ಲಿ ಆನೆಯನ್ನೇರಿ ಸೈನ್ಯಸಮೇತವಾಗಿ ಅಡವಿಯನ್ನು ಹೊಕ್ಕು ಆಲದ ಹಣ್ಣುಗಳನ್ನು ತಿಂದು ಬಿಳಿಯಾನೆಯನ್ನು ಹತ್ತಿ ಇರುಳು ವಿಹರಿಸುವ ಕನಸಾಯಿತು ನನಗೆ ಎಂದಳವಳು ರಾಜನಿಗೆ. ಈ ಮಾತನ್ನು ಕೇಳಿ ಶ್ರೇಣಿಕ ತನ್ನ ಮಗ ಅಭಯಕುಮಾರನನ್ನು ಕರೆದು ಅವನಿಗೆ ಹೀಗೆಂದನು—ಧನಶ್ರೀಯ ದೌಹೃದಕ್ಕೆ ಉಪಾಯವನ್ನು ಹೇಳು ಎಂದು. ಅದಕ್ಕೆ ಕುಮಾರ—ವಿಜಯಾರ್ಧದ ದಕ್ಷಿಣದಲ್ಲಿ ಆಕಾಶತಿಲಕವೆಂಬ ನಗರವಿದೆ; ನನಗೆ ಪ್ರಿಯನಾದ ಖೇಚರನೊಬ್ಬ ಅಲ್ಲಿದ್ದಾನೆ; ಆವನ ಹೆಂಡತಿ ಕನಕಮಾಲೆ. ಅವರಿಗೆ ಮಗಳು ಕನಕಚಿತ್ರೆ. ಇವಳು ಖೇಚರೀ ವಿದ್ಯಾಸಾಧನೆ ಮಾಡುತ್ತಿರಲು ಒಬ್ಬ ಚಿತ್ರಗತಿ ಎಂಬ ಖೇಚರನು ಇವಳ ಕೈಯನ್ನು ಹಿಡಿದುಕೊಂಡನು. ಇದನ್ನು ಕಂಡ ಮನೋಗತ್ಯಾದಿ ಖೇಚರರು ಕೋಪದಿಂದ ಹನ್ನೆರಡು ವರ್ಷಗಳು ನೀನು ಮನುಷ್ಯನಾಗಿರು ಎಂದು ಶಪಿಸಿದರು. ಅವನು ಹಾಗೆಯೇ ಮನುಷ್ಯನಾಗಿ ಹುಟ್ಟಿ ಕಾಮಲತೆಯ ಗೃಹದಲ್ಲಿದ್ದಳು. ಹನ್ನೆರಡು ವರ್ಷವಾದಮೇಲೆ ಆ ಖೇಚರ ತನ್ನ ಲೋಕಕ್ಕೆ ಹೋಗಬೇಕೆಂದು ವಿದ್ಯಾಸಾಧನೆ ಮಾಡುತ್ತಿದ್ದನು. ನಾನು (ಅಭಯಕುಮಾರ) ವಿದ್ಯೆಯ ಸಾಧನೆಯಲ್ಲಿ ಸಹಾಯ ಮಾಡಿದೆನು. ಆ ಖೇಚರನು ಸ್ಮರಿಸಿದ ಮಾತ್ರದಿಂದಲೇ ಬರುತ್ತಾನೆ. ಅವನಿಂದ ದೌಹೃದದ ಪೂರೈಕೆ ಆಗುತ್ತದೆ—ಎಂದನು. ಆವಿಧ್ಯಾಧರ ಹಾಗೆಯೇ ಬಂದು ಬಯಕೆಯನ್ನು ಪೂರೈಸಿ ತನ್ನ ಲೋಕಕ್ಕೆ ಹೋದ. ಆಮೇಲೆ ಧನಶ್ರೀಗೆ ಗಜಕುಮಾರಾಖ್ಯ ಮಗನು ಹುಟ್ಟಿದನು. ಅಲ್ಲಿಗೆ ಬಂದ ಸುಮತಿ ಮುನಿಯಿಂದ ಗಜಕುಮಾರ ಪೂರ್ವಭವಗಳನ್ನು ಕೇಳಿ ತಿಳಿದು ವಿರಕ್ತನಾಗಿ ತಪಸ್ವಿಯಾದನು, ಏಕವಿಹಾರಿಯಾದನು. ಕಲಿಂಗ ವಿಷಯದ ದಂತಿಪುರಕ್ಕೆ ಅವನು ಬಂದನು. ಆ ಪುರದ ಪಶ್ಚಿಮಭಾಗದಲ್ಲಿ ಆ ಮುನಿ ಆ ತಪಯೋಗದಲ್ಲಿ ನಿಂತನು. ಅಲ್ಲಿ ರಾಜ ನರಸಿಂಹ, ಅವನ ದೇವಿ ಸುಮತಿ, ಮಗ ಗುಣಪಾಲ. ಗೂಢಮಂತ್ರ ಪ್ರಯೋಗಜ್ಞನೂ ನಿಷ್ಠುರಮಾನಸನೂ ಆದ ಬುದ್ಧದಾಸನೆಂಬ ಮಂತ್ರಿ ಇದ್ದ. ಗಜಪರ್ವತದಲ್ಲಿದ್ದ ಮುನಿಪುಂಗವನನ್ನು ನೋಡಿ ಗುಣಪಾಲ ಮಂತ್ರಿಗಳಿಗೆ ಹೇಳಿದ—ಈ ಯೋಗಿ ಪರ್ವತದಲ್ಲಿ ಏಕೆ ಇದ್ದಾನೆ, ಬಿಸಿಲಿನಲ್ಲಿ ಒಣಗುತ್ತ ಎಂದು. ಈ ಮಾತನ್ನು ಕೇಳಿ ಬುದ್ಧದಾಸ ಹೇಳಿದ— ಈ ಋಷಿಗೆ ಚಂಡವಾಯು ಹಿಡಿದಿದೆ ಎಂದು. ವಾತನಾಶನ ಔಷಧಿಯನ್ನು ಹೇಳು ಎಂದ ಗುಣಪಾಲ. ಆ ಶಿಲಾತಲವನ್ನು ಉರಿಯಿಂದ ಕಾಯಿಸುವುದೇ ಔಷಧಿ ಎಂದ ಬುದ್ಧದಾಸ. ಮುನಿ ಪುರಕ್ಕೆ ಭಿಕ್ಷೆಗೆ ಹೋಗಿದ್ದಾಗ ಬುದ್ಧದಾಸ ಶಿಲಾತಲವನ್ನು

ಚನ್ನಾಗಿ ಕಾಸಿಬಿಟ್ಟ. ಆ ಬಂಡೆಯ ಮೇಲೆ ಕಾಯೋತ್ಸರ್ಗದಿಂದ ಮುನಿ ನಿಂತು ಉಪಸರ್ಗವನ್ನು ಸೈರಿಸಿ ಸಮಾಧಿಯಿಂದ ಸತ್ತು ಅಂತಕೃತ್ಕೇವಲಿಯಾಗಿ ನಿರ್ವಾಣಕ್ಕೆ ಸಂದನು. ಇದನ್ನು ಕಂಡ ಬುದ್ಧದಾಸ ಸಮ್ಯಗ್ದರ್ಶನ ಸಹಿತನಾದನು. ಗುಣಪಾಲ ತನ್ನ ಮಗ ನರಪಾಲನಿಗೆ ರಾಜ್ಯಕೊಟ್ಟು ದೀಕ್ಷಾಧಾರಿಯಾದನು. (೧೭೨ ಶ್ಲೋಕಗಳು)

## ೧೪೦. ಚಿಲಾತಮಿತ್ರ ಕಥಾನಕಂ

ಮಗಧ ವಿಷಯದ ಗೋಪಾಲಕನೆಂಬ ಸಾರ್ಥವಾಹಕನು ಸಾರ್ಥಂಬೆರಸು ಹೋಗುತ್ತಿರುವಾಗ ಯಶೋಧರರೆಂಬ ಮುನಿಗಳನ್ನು ಕಂಡು ಅವರಿಗೆ ಭಿಕ್ಷಾದಾನ ಮಾಡಿದನು. ಆಮೇಲೆ ಅವನು ಸತ್ತು ದೇವತೆಯಾದನು. ಆಮೇಲೆ ಅವನು ಪ್ರಶ್ರೇಣಿಕ ರಾಜನ ಮಗನಾಗಿ ಹುಟ್ಟಿ ಚಿಲಾತನೆಂಬ ಹೆಸರನ್ನು ಪಡೆದನು. ಪ್ರಶ್ರೇಣಿಕನು ಉಜ್ಜಯಿನೀ ನಗರದ ಮುದ್ರಾಯಣ ಕುಮಾರನ ಬಳಿಗೆ ದೂತನನ್ನು ಕಳಿಸಿದನು. ಆ ಊರಿನ ರಾಜ ಪ್ರದ್ಯೋತನು ಆ ದೂತನನ್ನು ಹಿಡಿದು ಸೆರೆಯಲ್ಲಿಟ್ಟನು. ಕಂದನೆಂಬ ಇನ್ನೊಬ್ಬ ಸಾರ್ಥಾಧಿಪತಿ ಮುದ್ರಾಯಣನನ್ನು ಅಪಹರಿಸಿಕೊಂಡು ರಾಜಗೃಹ ನಗರಕ್ಕೆ ತೆಗೆದುಕೊಂಡು ಹೋದನು. ಆಗ ಪ್ರದ್ಯೋತನು ಕೋಪಾವಿಷ್ಟನಾಗಿ ಸೈನ್ಯಸಮೇತನಾಗಿ ಪ್ರಶ್ರೇಣಿಕನ ಮೇಲೆ ದಂಡೆತ್ತಿ ಬಂದನು. ಪ್ರಶ್ರೇಣಿಕನು ಸಾರಿಸಿದನು—ಪ್ರದ್ಯೋತನನ್ನು ಹಿಡಿದು ಕಟ್ಟಿ ತಂದವರಿಗೆ ಇಷ್ಟವಾದ ವರವನ್ನು ಕೊಡುತ್ತೇನೆಂದು. ಈ ಘೋಷಣೆಯನ್ನು ಚಿಲಾತಪುತ್ರ ಕೇಳಿ ಜಲಕ್ರೀಡಾರತನಾಗಿದ್ದ ಪ್ರದ್ಯೋತನನ್ನು ಕಟ್ಟಿ ತಂದನು. ಅವನಿಗೆ ವರಪ್ರದಾನ—ರಾಜಗೃಹದಲ್ಲಿ ಸ್ವೇಚ್ಛೆಯಿಂದ ೧೨ ವರ್ಷಗಳ ಕಾಲ ಭೋಗಾಸಂಸಕ್ತ ಮಾನಸನಾಗಿರುವಂತೆ. ಆಮೇಲೆ ಪ್ರಶ್ರೇಣಿಕ ತನ್ನ ಮಗನಿಗೆ ರಾಜ್ಯಸಂಪದವನ್ನು ಕೊಟ್ಟು ಜಿನಸೇನ ಗುರುಗಳ ಬಳಿ ದೀಕ್ಷಾ ಗ್ರಹಣಮಾಡಿದನು. ಆಮೇಲೆ ಚಿಲಾತಪುತ್ರನು ಕೋಪವಿಳಿದ ಶ್ರೇಣಿಕನಿಂದ ಸ್ವದೇಶದಿಂದ ನಿರ್ಘಾಟಿತನಾಗಿ ಮಾತಾಮುಹನಿದ್ದವನಕ್ಕೆ ಬಂದನು. ಅಲ್ಲಿ ದುರ್ಗಕೋಟೆಯನ್ನು ಕಟ್ಟಿ ಭೋಗಭಾಗಿಯಾಗಿ ಸುಖವಾಗಿದ್ದನು. ಅಲ್ಲಿ ಅವನಿಗೆ ಭರ್ತೃಮಿತ್ರನೆಂಬ ಪ್ರಾಣಸಖನೊಬ್ಬನು ದೊರೆತನು. ಅವನ ಮಾತುಲ ಭದ್ರದತ್ತ, ಮಗಳು ಸುಭದ್ರೆ—ಇವಳನ್ನು ಭರ್ತೃಮಿತ್ರನಿಗೆ ಕೊಡಲು ಇಷ್ಟಪಡಲಿಲ್ಲ. ಭರ್ತೃಮಿತ್ರನು ಐವರು ಭಟರೊಡನೆ ಆ ಕನ್ನೆಯನ್ನು ಅಪಹರಿಸಲು ಹೋಗಿ ಸ್ನಾನಮಾಡುತ್ತಿದ್ದ ಅವಳನ್ನು (ವಿವಾಹ ಸಮಯೇ) ಕದ್ದುಕೊಂಡು ಹೋದನು. (ಇಲ್ಲಿ ಸ್ವಲ್ಪ ಅಸ್ಪಷ್ಟತೆ ಇದೆ.) ಶ್ರೇಣಿಕನು ಧನುರ್ಧಾರಿಯಾಗಿ ಅಟ್ಟಿಸಿಕೊಂಡು ಬಂದನು. ಭಯದಿಂದ ಭರ್ತೃಮಿತ್ರ ಕನ್ನೆಯನ್ನು ಕೊಂದನು; ಅವಳು ವ್ಯಂತರಿಯಾಗಿ ಹುಟ್ಟಿದಳು. ಆಮೇಲೆ ಭರ್ತೃಮಿತ್ರ ವೈಭಾರ ಪರ್ವತದ ಶಿಖರವನ್ನು ಹತ್ತಿದನು. ಐನೂರ್ವರು ಶಿಷ್ಯರೊಡನೆ ಅಲ್ಲಿದ್ದ ಮುನಿದತ್ತನೆಂಬ ಮುನಿಯನ್ನು ಅವನು ಕಂಡು ಅವನಿಂದ ಜಿನದೀಕ್ಷೆಯನ್ನು ವಹಿಸಿದನು. ಚಿಲಾತಮಿತ್ರನು ಕಾಯೋತ್ಸರ್ಗದಲ್ಲಿದ್ದನು. ಅಲ್ಲಿಗೆ ಸೈನ್ಯಸಮೇತನಾದ ಶ್ರೇಣಿಕನು ಬಂದು ಅವನನ್ನು ಪೂಜಿಸಿ ಸ್ವಪುರಕ್ಕೆ

ಮರಳಿದನು. ಆ ವ್ಯಂತರಿ ವಿಭಂಗಜ್ಞಾನದಿಂದ ತಿಳಿದು ಸೌಲಿಕರೂಪವನ್ನು ಧರಿಸಿ (ಕಾಗೆ) ಬಂದು ಆ ಮುನಿಯ ತಲೆಯಮೇಲೆ ಕುಳಿತು ಚಂಚು ಪ್ರಹಾರದಿಂದ ಎರಡು ಕಣ್ಣುಗಳನ್ನು ಕಿತ್ತು ತಿಂದಿತು. ದೀರ್ಘ ಮಸ್ತಕಯುಕ್ತ ಕೀಟಕಗಳು ಕಿತ್ತುತಿಂದುವು. ಈ ಉಪಸರ್ಗವನ್ನು ಸೈರಿಸಿ ಚಿಲಾತಪುತ್ರನು ಸತ್ತು ಸರ್ವಾರ್ಥಸಿದ್ಧಿಗೆ ಹೋದನು. (೩೬ ಶ್ಲೋಕಗಳು)

## ೧೪೧. ಧಾನ್ಯಕುಮಾರಮುನಿ ಕಥಾನಕಂ (ದಂಡಕರಿಸಿಯ ಕಥೆ)

ಪೂರ್ವ ವಿದೇಹದ ವೀತಶೋಕಪುರ. ಅಶೋಕರಾಜ, ದೇವಿ ಅಶೋಕಾ. ಎತ್ತುಗಳ ಮುಖಗಳನ್ನು ಕಟ್ಟಿ ತನ್ನ ಕೃಷಿಕ್ಷೇತ್ರಕ್ಕೆ ಧಾನ್ಯಸಂಗ್ರಹ ಲಂಪಟನಾಗಿ ರಾಜ ಬಂದನು. ತನ್ನ ಬಾಣಸಿಗ ಸ್ತ್ರೀಯರ ಸ್ತನಗಳನ್ನು ಮಕ್ಕಳು ಸ್ತನ್ಯಪಾನಮಾಡದಂತೆ ಕಟ್ಟಿ ಅವರನ್ನು ದುಡಿಸಿಕೊಳ್ಳುತ್ತಿದ್ದನು. ಹೀಗಿರಲು ಅವನಿಗೆ ಮಹಾರೋಗವು ಪ್ರಾಪ್ತವಾಯಿತು. ಅದಕ್ಕೆ ಭಕ್ತಸಂಯುಕ್ತ ಔಷಧವನ್ನು ಮಾಡಿಸಿದನು. ಒಬ್ಬ ಮಹಾಯೋಗಿ ಅವನ ಮನೆಗೆ ಬಂದನು. ರಾಜ ಸತ್ಕರಿಸಿ ಔಷಧವನ್ನು ಅವನಿಗೆ ಭಿಕ್ಷಾದಾನಮಾಡಿದನು. ಇದರಿಂದ ಮುನಿಯ ೧೨ ವರ್ಷಗಳ ವ್ಯಾಧಿ ಹೋಯಿತು. ರಾಜನು ವೇದನೆಯಿಂದ ಸತ್ತನು. ಇವನು ಮಾಡಿದ ಪುಣ್ಯಫಲವಾಗಿ ಅಮಲಕಂಠನಗರದಲ್ಲಿರುವ ಅರಿಷ್ಟ ಸೇನರಾಜನಿಗೂ ಅವನ ರಮಣಿ ನಂದಿಮತಿಗೂ ಧಾನ್ಯಕುಮಾರನೆಂಬ ಮಗನಾಗಿ ಹುಟ್ಟಿದನು. ಅರಣ್ಯಹಸ್ತಿದಮನದಿಂದ ದರ್ಮದತ್ತನೆಂದೂ ಶಿಲೋದ್ಧರಣದಿಂದ ಅನಂತವೀರ್ಯನೆಂದೂ ಮಹಾಶತ್ರುದಮನದಿಂದ ಅಪರಾಜಿತನೆಂದೂ ಸ್ಕಂಧಾವಾರ ಸಮಾಶ್ರಯತೆಯಿಂದ ದುರ್ಯೋಧನನೆಂದೂ ಜಿತಶತ್ರುವೆಂದೂ ಇವನಿಗೆ ಹೆಸರು ಗಳಾದುವು. ಇವನಿಗೆ ಮಂತ್ರಿ ಇವನ ಮಾತುಲನಾದ ಧಾನ್ಯನು. ಇವನು ಮಾತ್ಸರ್ಯ ಹತಾತ್ಮಕ. ದಮದತ್ತಾದಿ ಹೆಸರುಗಳನ್ನು ಕೂಡ ಉಚ್ಚರಿಸಲು ಇಷ್ಟವಿರಲಿಲ್ಲ ಇವನಿಗೆ. ಒಂದು ದಿವಸ ಮಂತ್ರಿ ಧಾನ್ಯಕುಮಾರನಿಗೆ ಹೇಳಿದನು—ಧಾನ್ಯ ಎಂದು ಗಟ್ಟಿಯಾಗಿ ಕರೆದನು. ಕುಮಾರನು ಮಾವ, ನನ್ನನ್ನು ಧಾನ್ಯನೆಂದು ಏಕೆ ಕೂಗುವೆ ಎಂದನು. ಅದಕ್ಕೆ ಅವನು ನಿನ್ನ ಪ್ರಧಾನಕುಲ ಸಂಭೂತನಿಂದ ಧಾನ್ಯನೇ ಸರಿ ನೀನು ಎಂದು ದಮದತ್ತಾದಿ ನಾಮಗಳು ನಿನಗೆ ಹೊಂದುವುದಿಲ್ಲ; ಅವು ಋಷಿಗಳಿಗೆ ತಕ್ಕ ಹೆಸರು ಗಳು ; ಇಂದ್ರಿಯ ನಿಗ್ರಹದಿಂದ ದಮದತ್ತ, ಉಗ್ರಚರ್ಯಾ ವಿಧಾನೇನ ಅನಂತವೀರ್ಯ, ಪರೀಷಹೋಪಸರ್ಗಗಳ ಜಯದಿಂದ ಅಪರಾಜಿತ, ರಾಗದ್ವೇಷ ಜಯದಿಂದ ಜಿತಶತ್ರು— ಆದ್ದರಿಂದ ಈ ಹೆಸರುಗಳು ನಿನಗೆ ಯುಕ್ತವಲ್ಲ. ಕರ್ಣಶೂಲದಂತಿರುವ ಈ ಮಾತು ಗಳನ್ನು ಕುಮಾರ ಕೇಳಿ ಮಾತುಲನಿಗೆ ಹೇಳಿದನು—ಗುಣಯುಕ್ತವಾದ ಹೆಸರುಗಳು ನನಗೆ ಹೇಗೆ ಬರುತ್ತವೆ ಹೇಳು. ಇದೆಲ್ಲ ಮುಂದೆ ಸ್ಪಷ್ಟವಾಗುತ್ತವೆ ಎಂದ ಮಂತ್ರಿ. ಅಲ್ಲಿಗೆ ನೇಮಿಜಿನ ಬಂದು ಸಂಘ ಸಮೇತನಾಗಿ (ಮಹಾಪಲ್ಲವ ದೇಶದಿಂದ) ಉದ್ಯಾನವನ ದಲ್ಲಿ ತಂಗಿದನು. ಧಾನ್ಯಕುಮಾರನು ಅವನನ್ನು ದರ್ಶನಮಾಡಲು ಹೋದನು. ತನ್ನ ಭವ

ಗಳನ್ನೂ ಆಯುಸ್ಸನ್ನೂ ಕೇಳಿದನು. ಅನ್ಯಭವದಲ್ಲಿ ನೀನು ಅಶೋಕನಾಗಿದ್ದೆ, ಈಗ ಧಾನ್ಯನಾಗಿದ್ದೀಯೆ, ಸ್ವಲ್ಪಾಯು ನೀನು—ಎಂದ. ಅವನು ವಿರಕ್ತನಾದ ಕುಮಾರ ನೇಮಿನಾಥನಲ್ಲಿ ದೀಕ್ಷಾಗ್ರಹಣಮಾಡಿ ಭಿಕ್ಷೆಗೆ ಹೊರಟನು. ಅವನಿಗೆ ಅದು ಲಭಿಸಲಿಲ್ಲ. ಏನಾದರೂ ದೊರೆತರೆ ತಿಂದಕೂಡಲೇ ವಮನವಾಗುತ್ತಿತ್ತು. ಕಾಕತಾಲೀಯವಾಗಿ ಭೋಜನ ದೊರೆತರೂ ಅದು ಛರ್ದಿಯನ್ನುಂಟುಮಾಡುತ್ತಿತ್ತು. ಒಂದುಸಲ ವಿಣುಕನಿಂದ ಔಷಧವು ಕೊಡಲ್ಪಟ್ಟಿತು ; ಛರ್ದಿ ಉಂಟಾಗಲಿಲ್ಲ. ಇದಕ್ಕಾಗಿ ಅವನು ಪ್ರಾಯಶ್ಚಿತ್ತಮಾಡಿಕೊಂಡು ಚರಿಸುತ್ತ ಶೂರಪತ್ತನಕ್ಕೆ ಬಂದನು. ಆ ಪುರದ ಉತ್ತರಭಾಗದ ಯಮುನಾತೀರದಲ್ಲಿ ಪ್ರತಿಮಾಯೋಗದಲ್ಲಿ ಅವನು ನಿಂತನು. ಆ ಸೌರಿಪುರಕ್ಕೆ ರಾಜ ಯಮುನಾವಂಕ ಬೇಟೆಗಾಗಿ ಸೈನ್ಯದೊಡನೆ ಅಲ್ಲಿಗೆ ಬಂದನು. ಈ ಬತ್ತಲೆ ಮುನಿಯನ್ನು ಕಂಡು ಶಕುನವಾಗಲಿಲ್ಲವೆಂದು ರಾಜ ಕೋಪದಿಂದ ಅವನ ಮೈಯನ್ನು ಬಾಣಗಳಿಂದ ತುಂಬಿ ತನ್ನ ಪಟ್ಟಣಕ್ಕೆ ಬಂದನು. ಈ ಉಪಸರ್ಗವನ್ನು ಧಾನ್ಯಮುನಿ ಸೈರಿಸಿ ಶುದ್ಧಾತ್ಮನಾಗಿ ಮೋಕ್ಷಕ್ಕೆ ಹೋದನು. ಆ ಕ್ಷೇತ್ರ ಸಿದ್ಧಿ ಕ್ಷೇತ್ರವಾಯಿತು. ಯಮುನಾವಂಕನು ಕುಷ್ಠದಿಂದ ಸತ್ತು ಘೋರ ನರಕಕ್ಕೆ ಸಂದನು. (೫೧ ಶ್ಲೋಕಗಳು)

## ೧೪೨. ಅಭಿನಂದನಾದಿ ಮುನಿಕಥಾನಕಂ

ಭಾರತದೇಶದ ದಕ್ಷಿಣಾ ಪಥದಲ್ಲಿ ಕುಂಭಕಾರಪುರಿ ; ದಂಡವೇಗನೆಂಬ ರಾಜ, ಅವನ ಪ್ರಿಯೆ ಸುವ್ರತೆ. ಅವನ ಮಂತ್ರಿ ಬಾಲಕ ಎಂಬವನು, ಜಿನಶಾಸನ ವಿದ್ವೇಷಿ, ಮುನಿಸಂಘಪರಾಙ್ಮುಖ. ಅಭಿನಂದನನೇ ಮುಂತಾದ ಐನೂರ್ವರು ಸಾಧುಗಳು ಅಲ್ಲಿಗೆ ಬಂದರು. ನೃಪನ ಸಭೆಯಲ್ಲಿ ಮಂತ್ರಿ ಬಾಲಕ ಇವರೊಡನೆ ವಾದಮಾಡಿ ಸೋತನು. ಮಹಾದೇವಿಯ ಸಹಾಯದಿಂದ ಮಂತ್ರಿ ಕೂಟಮಂತ್ರವನ್ನು ಮಾಡಿ ರಾಜನಿಗೆ ಮುನಿಗಳ ಮೇಲೆ ಕೋಪ ಬರುವಂತೆ ಮಾಡಿದನು. (ಸಂಬಂಧೇನ ಮಹಾದೇವ್ಯಾಃ ಕೂಟ ಮಂತ್ರಂ ವಿಧಾಯ ಚ । ರಾಜಾಯಂ ರೋಷಮಾನೀತೋ ಮಂತ್ರಿಣಾ ಮುನಿಭಿಃ ಸಮಂ ||) ರಾಜ ಮುನಿಗಳನ್ನು ಗಾಣದಲ್ಲಿ ಹಿಂಡಿಸಿದನು. ಅವರೆಲ್ಲ ಅನಶನಮಾಡಿ ಸಮಾಧಿ ಮರಣದಿಂದ ಸತ್ತರು. (೮ ಶ್ಲೋಕಗಳು)

## ೧೪೩. ಚಾಣಕ್ಯಮುನಿ ಕಥಾನಕಂ

ಪಾಟಲೀಪುತ್ರ. ನಂದನೆಂಬ ರಾಜ, ಮಹಾದೇವಿ ಸುವ್ರತೆ. ಇವನಿಗೆ ಮಂತ್ರಿಗಳು ಕವಿ, ಸುಬಂಧು, ಶಕಟಾಖ್ಯಾ—ಎಂಬ ಮೂವರು ಸಮಸ್ತ ಲೋಕವಿಖ್ಯಾತರು. ಇದೇ ಪುರದಲ್ಲಿ ಕಪಿಲನೆಂಬ ಬ್ರಾಹ್ಮಣನಿದ್ದನು ; ಅವನ ಭಾರ್ಯೆ ದೇವಿಲೆ, ಇವರ ಮಗ ಚಾಣಕ್ಯ, ವೇದವೇದಾಂಗ ಸಂಯುಕ್ತ, ಸರ್ವಶಾಸ್ತ್ರಾರ್ಥಕೋವಿದ, ಸಮಸ್ತಜನಪೂಜಿತ. ಇವನ ಪ್ರಿಯೆ ಯಶೋಮತಿ. ಕಪಿಲನ ಸೋದರ ಸೊಸೆಯನ್ನು ಕವಿಗೆ ಕೊಟ್ಟು ಮದುವೆಯಾಗಿತ್ತು. ಪ್ರತ್ಯಂತವಾಸಿಗಳ ದಂಗೆ ನಡೆದದ್ದನ್ನು ಕವಿ ರಾಜನಿಗೆ ತಿಳಿಸಲು

ರಾಜ ಮಂತ್ರಿಗಳಿಗೆ ಹೇಳಿದ. ಅವರಿಗೆಲ್ಲ ಹಣಕೊಟ್ಟು ವಶಪಡಿಸಿಕೊಳ್ಳಿರಿ ಎಂದು. ಕವಿ ಒಬ್ಬೊಬ್ಬರಿಗೂ ಒಂದೊಂದು ಲಕ್ಷವನ್ನು ಕೊಟ್ಟನು. ಒಂದುಸಲ ನಂದ ರಾಜಭಂಡಾರಿಗಳನ್ನು ಕರೆದು ಎಷ್ಟು ಹಣ ಉಳಿದಿದೆಯೆಂದು ಕೇಳಿದನು. ಭಂಡಾರದಲ್ಲಿ ಏನೂ ಧನವಿಲ್ಲ. ನಿನ್ನ ಸಕಲ ಧನವನ್ನು ಕವಿ ಪ್ರತ್ಯಂತವಾಸಿಗಳಿಗೆ ಕೊಟ್ಟುಬಿಟ್ಟನು. ಎಂದನು ಧನಪಾಲ; ನಂದನಿಗೆ ಸಿಟ್ಟುಬಂದು ಕವಿಯನ್ನು ಅವನ ಹೆಂಡತಿ ಮಕ್ಕಳ ಸಮೇತವಾಗಿ ಅಂಧಕೂಪದಲ್ಲಿ ಹಾಕಿಸಿದನು. ದಿನವೊಂದಕ್ಕೆ ಒಂದು ಶರಾವೆ ಅನ್ನವನ್ನು ಕವಿಗಾಗಿ ಕೊಡುವಂತೆ ನಿಯಮ. ಯಾರು ವೈರ ನಿರ್ಯಾತನಮಾಡಲು ಸಮರ್ಥನೋ ಅವನು ಮಾತ್ರ ಈ ಶರಾವೆಯ ಅನ್ನವನ್ನು ತಿನ್ನಲಿ ಎಂದು ಕವಿ ಹೇಳಿದ. ಅವನ ಕುಟುಂಬದವರು ನೀನೇ ಊಟಮಾಡು ಎಂದರು. ಅದರಂತೆ ಕವಿ ಭೋಜನಮಾಡುತ್ತ ಅಂಧಕೂಪದಲ್ಲಿ ತತ್ತಟಗೋಚರ ಬಿಲವನ್ನು ಕೊರೆದು ಇದ್ದನು. ಮೂರುವರ್ಷಗಳಾದುವು. ಎಲ್ಲರೂ ಸತ್ತರು, ಕವಿ ಮಾತ್ರ ಜೀವಿಸಿದ್ದನು. ಪ್ರತ್ಯಂತವಾಸಿಗಳು ಈ ಸುದ್ದಿಯನ್ನು ಕೇಳಿ ನಂದಪತ್ತನವನ್ನು ಮುತ್ತಿದರು. ಆಗ ನಂದ ಕವಿಯನ್ನು ಸ್ಮರಿಸಿಕೊಂಡು ಕವಿಯನ್ನು ಕೂಪದಿಂದ ಹೊರಕ್ಕೆ ತೆಗೆಯಿಸಿ ಕ್ಷಮೆಯನ್ನು ಕೇಳಿದನು, ವರವನ್ನು ಕೇಳು ಎಂದನು. ನಿನ್ನ ಕೈಯಿಂದಲೇ ನನಗೆ ದ್ರವ್ಯವನ್ನು ಕೊಡು ಎಂದನು ಕವಿ. ಸಭಾಮಧ್ಯೆ ಹಾಗೇ ಆಗಲಿ ಎಂದ ರಾಜ.

ಒಂದು ಸಲ ಅಲ್ಲಿ ಇಲ್ಲಿ ಓಡಾಡುತ್ತಿದ್ದ ಕವಿ ದರ್ಭಸೂಚಿಯನ್ನು ಅಗೆಯುತ್ತಿದ್ದ ಚಾಣಕ್ಯನನ್ನು ನೋಡಿದನು. ಏತಕ್ಕೆ ಇದನ್ನು ಅಗೆಯುತ್ತೀಯೆ ಎಂದು ಕೇಳಿದನು. ಈ ದರ್ಭಸೂಚಿ ನನ್ನ ಕಾಲನ್ನು ಚುಚ್ಚಿತು, ರಕ್ತ ಬರುತ್ತಿದೆ ನೋಡು, ಇದನ್ನು ಬೇರುಸಹಿತ ಕಿತ್ತುಹಾಕುತ್ತೇನೆ ಎಂದನು. ಕವಿ ಇದನ್ನು ಕೇಳಿ ನಂದವಂಶವನ್ನು ನಿರ್ಮೂಲಮಾಡಲು ಇವನೇ ಸಮರ್ಥನೆಂದು ತಿಳಿದುಕೊಂಡನು. ಸಭಾಮಧ್ಯದಲ್ಲಿ ಅವನು ಒಂದು ಶ್ಲೋಕವನ್ನು ಬರೆದನು. "ನರೇಣೈಕ ಶರೀರೇಣನಯಶಾಸ್ತ್ರಯುತೇನ ಚ। ವ್ಯವಸಾಯೇನ ಯುಕ್ತೇನ ಜೇತುಂ ಶಕ್ಯಾ ವಸುಂಧರಾ"– ಈ ಶ್ಲೋಕವನ್ನು ನೋಡಿ ಚಾಣಕ್ಯ ಬರೆದ—"ನರೇಣೈಕ ಶರೀರೇಣ ನಯ ಶಾಸ್ತ್ರ ಯುತೇನ ಚ। ವ್ಯವಸಾಯೇನ ಯುಕ್ತೇನ" ಇತ್ಯಾದಿ. ಇದನ್ನು ನೋಡಿ ಕವಿ ಸಂತುಷ್ಟನಾಗಿ ಭಾರ್ಯಾ ಸಮೇತನಾದ ಚಾಣಕ್ಯನನ್ನು ತನ್ನ ಮನೆಗೆ ಕರೆದನು. ಅವನು ಬಂದ. ಆಗ ಕವಿ ಚಾಣಕ್ಯನ ಮನೆಯ ಅಂಗಳದಲ್ಲಿ ಪರೀಕ್ಷಿಸುವುದಕ್ಕಾಗಿ ಅನೇಕ ದೀನಾರಗಳನ್ನು ಚೆಲ್ಲಿಸಿದನು. ಯಶೋಮತಿ ದೀನಾರಗಳನ್ನು ತಂದು ಚಾಣಕ್ಯನಿಗೆ ತೋರಿಸಿದಳು, ರಾಜನು ಬ್ರಾಹ್ಮಣರಿಗೆ ಕಪಿಲೆಗಳನ್ನು ಕೊಡುತ್ತಾನಂತೆ, ನೀನು ಏಕೆ ಹೋಗಿ ತರಬಾರದು ಎಂದಳು. ಹಾಗೆಯೇ ಆಗಲಿ ಎಂದು ಚಾಣಕ್ಯ ಹೋದ. ಇದನ್ನು ಮಂತ್ರಿ ಕವಿ ತಿಳಿದು ರಾಜನಿಗೆ ಹೇಳಿದ—ಈ ಬ್ರಾಹ್ಮಣನಿಗೆ ಬಹುದುಗ್ಧಸಮಾಯುಕ್ತವಾದ ಗೋಸಹಸ್ರವನ್ನು ಕೊಡು ಎಂದು. ಹಾಗೇ ಆಗಲಿ ಎಂದ ರಾಜ. ಕವಿ ಚಾಣಕ್ಯನನ್ನು ಕರೆದು ಅಗ್ರಾಸನದಲ್ಲಿ ಕುಳ್ಳಿರಿಸಿದನು. ಕುಳಿತ ಚಾಣಕ್ಯನು ದರ್ಭಾಸನ ಕದಂಬಕದಿಂದಲೂ

ಕುಂಡಿಕೆಗಳಿಂದಲೂ ರುದ್ಧನಾಗಿ ಮಂಡಿಸಿದನು. ಆಗ ರಾಜ—ಇತರ ಬ್ರಾಹ್ಮಣರು ಬಂದಿದ್ದಾರೆ, ಆಸನವನ್ನು ಬಿಡು ಎಂದು ಹೇಳಿದ ಚಾಣಕ್ಯನಿಗೆ. ಒಂದು ಆಸನವನ್ನು ಬಿಟ್ಟು ಚಾಣಕ್ಯ ಕುಳಿತನು. ಹೀಗೆಯೇ ಒಂದೊಂದಾಗಿ ಆಸನವನ್ನು ಅವನು ಬಿಡ ಬೇಕಾಯಿತು. ನಂದನು ಹೇಳಿದ—ಸ್ವಾಮಿ, ಅಗ್ರಾಸನವನ್ನು ಇತರ ವಿಪ್ರರು ಸ್ವೀಕರಿ ಸಿದರು, ನೀವು ರಾಜಗೃಹದಿಂದ ದೂರ ಹೋಗಿ ಬಹಿರ್ಗೃಹದ್ವಾರದಲ್ಲಿ ನಿಂತಿರಿ ಎಂದನು. ಚಾಣಕ್ಯನು ರಕ್ತಲೋಚನನಾಗಿ ಹೇಳಿದ—ಹೀಗೆ ಮಾಡುವುದು ನಿನಗೆ ಯೋಗ್ಯವಲ್ಲ, ಭೋಜನಕ್ಕಾಗಿ ಕುಳಿತ ನನ್ನನ್ನು ತಿರಸ್ಕರಿಸಿರುವುದು ತರವಲ್ಲ. ಚಾಣಕ್ಯನಿಗೆ ಅರ್ಧಚಂದ್ರ ಪ್ರಹಾರವಾಗಿ ಧಾಟಿತನಾದನು. ಕೋಪಗೊಂಡ ಅವನು ಗೃಹದ ಹೊರಕ್ಕೆ ಹೋಗಿ 'ನಂದವಂಶಕ್ಷಯಂ ಶೀಘ್ರಂ ವಿದಧಾಮಿ' ಎಂದು ಚಿಂತಿಸಿ ಸ್ಫುಟವಾಗಿ ಹೀಗೆಂದನು—ಯಾವನು ನಿಹತ ಕಂಟಕ ರಾಜ್ಯವನ್ನು ಬಯಸುತ್ತಾನೋ ಅವನು ನನ್ನ ಪಕ್ಷಕ್ಕೆ ಬರಲಿ ಎಂದು. ನಾನು ಬರುತ್ತೇನೆಂದು ಒಬ್ಬ ಹೇಳಿದ. ಅವನ ಕೈಯನ್ನು ಹಿಡಿದುಕೊಂಡು ಚಾಣಕ್ಯ ಬೇಗನೆ ಹೊರಟು ಹೋದ. ವಾಯುವೇಗದ ಕುದುರೆಯನ್ನೇರಿ ಚಾಣಕ್ಯ ವಾರ್ಧಿಮಧ್ಯದಲ್ಲಿದ್ದ ಜಲದುರ್ಗವೊಂದನ್ನು ಪ್ರವೇಶಿಸಿ ಅಲ್ಲಿ ಇದ್ದನು. ಒಬ್ಬ ನರನಿಂದ ಕೂಡಿದ ಚಾಣಕ್ಯನನ್ನು ಪ್ರತ್ಯಂತವಾಸಿ ಭೂಪಾಲರಲ್ಲಿ ಒಬ್ಬನು ನೋಡಿ ಇತರ ಎಲ್ಲ ಪ್ರತ್ಯಂತವಾಸಿಗಳಿಗೂ ತಿಳಿಸಿದನು. ಅವರೆಲ್ಲ ಸೇರಿ ಚಾಣಕ್ಯನನ್ನು ಕರೆದುಕೊಂಡು ಬಂದರು. ಆ ರಾಜರೆಲ್ಲ ನಂದನನ್ನು ದಂಡ ತೆರುವಂತೆ ಕೇಳಿದರು. ಕೊಡುವುದಿಲ್ಲವೆಂದ ಅವನು. ಅವನ ಸೈನ್ಯವನ್ನೆಲ್ಲ ಮಂತ್ರದಿಂದ ಭೇದಿಸಿ ನಂದನನ್ನು ಕೊಂದು ಚಾಣಕ್ಯ ಕುಸುಮಪುರದಲ್ಲಿ ರಾಜ್ಯವಾಳುತ್ತಿದ್ದನು.

ಕೆಲವು ಕಾಲ ರಾಜ್ಯವಾಳಿ ಚಾಣಕ್ಯ ಜೊತೆಯಲ್ಲಿ ಬಂದ ಮನುಷ್ಯನಿಗೆ ರಾಜ್ಯ ಪಟ್ಟವನ್ನು ಕೊಟ್ಟು ಜಿನಧರ್ಮವನ್ನು ಕೇಳಿ ಪರಿಗ್ರಹ ಪರಿತ್ಯಾಗಿಯಾಗಿ ಮತಿಪ್ರಧಾನ ಸಾಧುಗಳಿಂದ ದೀಕ್ಷಾಗ್ರಹಣಮಾಡಿ ವಿಹರಿಸುತ್ತ ಐನೂರ್ವರು ಶಿಷ್ಯರಿಂದ ಪರಿ ವೇಷ್ಟಿತನಾಗಿ ದಕ್ಷಿಣಾಪಥದ ವನವಾಸಕ್ಕೆ ಬಂದನು. ಆಮೇಲೆ ಕೌಂಚಪುರದ ಪಶ್ಚಿಮ ದಿಕ್ಕಿನಲ್ಲಿದ್ದ ಗೋಕುಲಸ್ಥಾನದಲ್ಲಿ ಚಾಣಕ್ಯ ಕಾಯೋತ್ಸರ್ಗದಲ್ಲಿ ನಿಂತನು. ಆ ಪುರದ ರಾಜ ಸುಮಿತ್ರ, ಭಾರ್ಯೆ ವಿನಯಮತಿ. ಮಂತ್ರಿ ಸುಬಂಧು. ಇವನು ನಂದ ಮರಣಾ ನಂತರ ಚಾಣಕ್ಯನ ಮೇಲೆ ಕೋಪಾವಿಷ್ಟನಾಗಿದ್ದನು. ಸುಮಿತ್ರ ಸಪರಿವಾರನಾಗಿ ಮುನಿಯನ್ನು ವಂದಿಸಲು ಹೋದನು, ಅವನನ್ನು ಪೂಜಿಸಿ ಬಂದನು. ಅಸ್ತಮನ ವೇಳೆಯಲ್ಲಿ ಸುಬಂಧು ಅಲ್ಲಿಗೆ ತಾನು ಹೋಗಿ ಸಾಗ್ನಿಕರೀಷವನ್ನು ಮುನಿಯ ಸುತ್ತ ಇಟ್ಟು ಪಾಪವನ್ನು ಕಟ್ಟಿಕೊಂಡು ಬಂದನು, ನರಕಕ್ಕೆ ಹೋದನು. ಚಾಣಕ್ಯನು ಶಿಷ್ಯ ಸಮೇತನಾಗಿ ಪಾದೋಪಗಮನವನ್ನು ಮಾಡಿ ಉಪಸರ್ಗವನ್ನು ಸಹಿಸಿ ಶುಕ್ಲ ಧ್ಯಾನದಿಂದ ಸಮಾಧಿ ಮರಣವನ್ನು ಹೊಂದಿದನು. ಕೌಂಚಪುರದ ಪಶ್ಚಿಮ ದಿಗ್ಭಾಗ ದಲ್ಲಿ ಮುನಿಯ ನಿಷದ್ಯತೆಯು ಈಗಲೂ ಸಾಧುಗಳಿಂದ ಪೂಜಿತವಾಗುತ್ತಿದೆ.

## ೧೪೪. ವೃಷಭಸೇನ ಮುನಿ ಕಥಾನಕಂ

ದಕ್ಷಿಣಾಪಥದ ಆಂಧ್ರವಿಷಯ. ಕುಲಾಲನಗರ. ರಾಜ ವೈಶ್ರವಣ, ಪ್ರಿಯೆ ಪದ್ಮಾವತಿ. ಮಂತ್ರಿ ರಿಷ್ಟಕ ಜಿನಧರ್ಮದ್ವೇಷಿ, ಸಾಧುಸಂಘ ನಿಂದಕ. ವೃಷಭಸೇನಗಣಿಗಳು ಮುನಿ ಸಮುದಾಯ ಸಮೇತವಾಗಿ ಸುತ್ತಾಡುತ್ತ ಆ ನಗರಕ್ಕೆ ಬಂದರು. ಇವರ ಬರವನ್ನು ಕೇಳಿ ವೈಶ್ರವಣ ಸಂದರ್ಶನಾರ್ಥವಾಗಿ ಹೊರಟನು. ಇದನ್ನು ನೋಡಿ ಮಂತ್ರಿ ರಾಜನೇ ಎಲ್ಲಿಗೆ ಹೋಗುತ್ತಿ ಎಂದನು. ಜನ ಹೇಳಿದರು ರಾಜನು ಮುನಿಗಣವನ್ನು ವಂದಿಸಲು ಹೊರಟಿದ್ದಾನೆ ಎಂದು. ಕೋಪಸಂಗತನಾದ ರಿಷ್ಟಕ ಮುನಿಗಳೊಡನೆ ನೃಪಸಭೆಯ ನಡುವೆ ವಾದಮಾಡಿ ಸೋತುಹೋದನು. ರಾತ್ರಿ ಮಂತ್ರಿ ಅವರಿದ್ದ ಮನೆಯನ್ನು ಸುಟ್ಟನು. ಈ ಉಪಸರ್ಗವನ್ನು ಸೈರಿಸಿ ವೃಷಭಸೇನ ಋಷಿಸಮುದಾಯ ಸಮೇತನಾಗಿ ಸತ್ತು ಸ್ವರ್ಗಕ್ಕೆ ಹೋದನು.

# ೩. ಕೆಲವು ಕಠಿಣ ಪದಗಳ ಕೋಶ

(ಮೊದಲನೆಯದು ಪುಟಸಂಖ್ಯೆ : ಎರಡನೆಯದು ಪಂಕ್ತಿಸಂಖ್ಯೆ)

ಅಂಗಡಿಯಲವಡಂ ೪೬–೬
ಅಗ್ಗಯಿಲೆ ೧೨೩–೫
ಅಡ್ಡಣಿಗೆ ೭೮–೧೨, ೧೩
ಅಱುನೀರ್ ೫೭–೧೩
ಅಱುತ ೬–೨೦
ಅರ್ಧಗಪ್ಪಡ ೯೨–೧೬, ೨೩, ೨೭; ೯೩–೧೮
ಅರ್ಧಗಪ್ಪಡದ ತೀರ್ಥ ೯೩–೨, ೩, ೬
ಅರ್ಧಗಪ್ಪಡದ ಯತಿ ೯೩–೧೧
ಅರ್ಧಗಪ್ಪಡದ ಸಂಘ ೯೩–೯, ೧೨
ಅಲಂಪು ೧೮೮–೧೮
ಅಳಿಪು ೧೭–೧೩
ಅಳೆ ೬೮–೨೬
[ಅಳಿ]ಱುವಳ್ಳ ೧೨೩–೨೮
ಅಟ್ಕಾಡು ೨೩–೧

ಅಂದೆ ೯೩–೯
ಆಪಣ ೧೬–೧, ೧೩, ೧೪
ಆರವೆ ೭೬–೨೫
ಆಳಂಬೆ ೧೨೬–೧೮; ೧೫೧–೧

ಇಂಬುಗೆಯ್ ೪೩–೧೫
ಇಱುಂಪೆ ೧೬೮–೫
ಇಱುಪೆ ೧೭೬–೨೫

ಉಂಕೆ ೧೫೧–೩
ಉಕ್ಕೈವ ೬–೨೪, ೨೬
ಉಗುರಿಸು ೧೧೭–೧೦
ಉಚ್ಚಳಿಸು ೫೯–೩೦
ಉಣ್ಣಪಡು ೧೫೭–೭, ೧೮೨–೧೮
ಉತ್ತವಳ ೩೩–೨೨
ಉರ್ಕೆವ ೧೭–೧೯
ಉರ್ಕೈವ ೩೫–೪; ೪೦–೨೪

ಉರ್ಚು ೫–೪; ೫೨–೧
ಉಲ್ಲವ ೮೩-೨೭ ; ೧೪೨–೧೧
ಉಸಿರ್ಪತ್ತು ೧೨೭–೧೭
ಉಳಿ ೧೨೯–೬
ಉಳಿಸೆಂ[ಡು] ೧೨೯–೫
ಉಱದು ೧೩–೧; ೫೦–೧೯; ೧೬೫–೧೨

ಊಡು ೪೫–೧೨, ೧೩ ; ೧೧೧–೯ ; ೧೬೨–೨೦; ೧೭೧–೨೬, ೨೭; ೧೭೬–೧೧ ; ೧೭೭–೨೦ ; ೧೮೪–೧೯; ೧೮೬–೧೭, ೨೪ ; ೧೯೦–೧೧

ಎಕ್ಕಮದ್ದಳೆ ೮೦–೧೨
ಎಡೆ ೧೨೩–೨೧
ಎಣಿಕೊಳ್ ೧೭–೪
ಎರಲೆ ೬೧–೬
ಎಱಲ್ ೯೧–೧೨, ೧೬; ೯೨–೧೬ ; ೧೨೨–೧೭
ಎಟ್ಬು ೧೭–೧೭, ೨೩ ; ೧೫೬–೧೮

ಏಕಸಱು ೮೮–೨೭
ಏರಣಿಗ ೫೧–೧೧
ಏಳಿದು ೧೦–೧೭
ಏಱಲಿಕ್ಕು ೧೮೮–೧೭
ಏಱಿಸು ೮೫–೯ ; ೯೧–೨೪ ; ೯೨–೨೪ ; ೧೦೧–೩ ; ೧೧೫–೧೯ ; ೧೨೮–೨ ; ೧೪೨–೫
ಏಱು ೫೯–೨೮ ; ೧೧೯–೪

ಒಂತಿ ೯೭–೬ ; ೧೪೦–೪
ಒಂದೆವಱಿಗುಟ್ಟು ೧೩–೨೪ ; ೧೪–೧೧
ಒಕ್ಕಲಿಗ ೧೮೭–೨೩ ; ೧೮೮–೧

ಗುಜ್ಜಿ ೧೦೬-೨೨
ಗುಡ್ಡ ೭-೧೧
ಗುರ್ದ ೧೪೩-೧೫
ಗೊಟ್ಟ ೭೬-೨೪
ಗೊಡ್ಡ ೧೬೬-೧೧ ; ೧೭೭-೨೫ ; ೧೭೮-೨
ಗೋಸಣೆ ೫೦-೨೨ ; ೧೧೮-೧೩
ಗೋಸನೆ ೭೮-೪ ; ೧೬೫-೨೨
ಗೋಸನೆಗಳೆ ೧೫೧-೧೬

ಚದುರಸಿಗೆ ೧೬೨-೨೦, ೨೧
ಚಳಿ ೧೨೫-೨೫
ಚಿತ್ತಾರಿಗ ೩೪-೧೧
ಚೋಳಂಗಿ ೧೮೪-೧೮

ಛರ್ದ ೧೭೧-೯, ೧೦

ಜಾದಿನ ಸೇಲೆ ೧೮೬-೬
ಜಾದು ೧೯೦-೧೧
ಜಾನಿಸು ೮೩-೧೨ ; ೧೦೯-೨೪ ; ೧೩೮-೩
೧೫೪-೧೫ ; ೧೭೪-೮
ಜಾವಜ್ಜೀವ ೮೮-೨೮ ; ೧೩೮-೨, ೧೪೨-೭
ಜಾವವಿರ್ ೧೪-೨೫, ೨೮
ಜಾವಮಿರಿಸು ೧೪-೨೬, ೨೭
ಜೂದು ೧೪-೪
ಜೋಗಭಕ್ತಿ ೧೫೬-೮ ; ೧೬೧-೨
ಜೋಗು ೨೭-೨೪, ೨೮; ೨೮-೧ ೨೮-೮
೪೮-೭, ೭ ; ೧೭೧-೨೧

ಝುಣಂಬ ೧೯-೧೨, ೧೩, ೧೭

ತಗು ೧೦೪-೯ ; ೧೧೬-೩
ತಜಿನೆವಟಿಯಿಂಗೆ ೧೩೩-೧೯
ತಣ್ಣತ್ತು ೬೪, ೨೨
ತಮ್ಮ ನಾಟ್ಕೆ ೭೧-೨೫
ತರುವಲಿ ೭೬-೧೮
ತಳವ (ಜಿ) ೧೮೭-೧
ತಳಾಜಿ ೧೪-೧
ತಳಿ ೧೩೭-೩
ತಳಿಗೆ ೬೪-೧೭, ೨೩,

ತಜುಸಲ್ ೬೧-೨೬; ೧೧೪-೧೧
ತಟಿತೆ ೪೫-೨೧
ತಾಂಗು ೭೭-೩ ; ೯೦-೨೯ ; ೧೧೭-೧೮
೧೩೧-೯
ತಾಪು ೫೧-೨೮ ; ೫೨-೧
ತಿಂಬಡ ೧೧೬-೨೦
ತಿಣ್ಣಂ ೭೭-೬
ತಿಮುಟಿಸಾಟ್ ೯೦-೧೪
ತಿರಿ ೮-೨೨
ತಿರುವಾಯ್ ೯೬-೬
ತುಣವ ೮೩-೨೮
ತುಯ್ಯಲ್ ೬೪-೧೭, ೨೨ ; ೭೮-೧೬ ;
೧೬೪-೨೨
ತುರಿಪ ೫-೧೯ ; ೧೧೧-೨೦
ತುಜುಪಟ್ಟೆ ೧೦೩-೨೨, ೨೩, ೨೪ ;
೫೪-೧೯; ೧೯೧-೧೯
ತೂಂಕಡು ೧೫೬-೯
ತೆಗಲೆ ೪೮-೧೯ ; ೫೬-೮; ೫೯-೨೯ ;
೯೬-೨೯
ತೇನತೇನಂ ೧೬೩-೧೦
ತೊಗಲ್ ೧೭೨-೨
ತೊವಲ್ ೨೩-೨ ; ೬೪-೨೪ ; ೧೭೩-೧೫
ತೊವೆ ೭೫-೧೫
ತೊಟ್ಟು ೪೪-೪, ೬
ತೋರ ೫೧-೨೬

ದಂಸಮುಸಕ ೧೩೪-೧೮
ದಮ್ಮ ೭೭-೧೧, ೨೦ ; ೮೪-೨
ದರಿ ೫೬-೨
ದರ್ಕು ೪೬-೧೩ ; ೧೭೪-೨೯
ದೆಸೆ ೧೮೦-೨೪
ದಾಯು ೩೭-೨೩, ೨೪
ದಿಬ್ಬ ೧೩೯-೨೪ ; ೧೪೦-೨
ದೀನಾರ ೧೪-೫ ; ೧೭-೨೦, ೨೪; ೨೫-೨೦-
೨೫-೨೩; ೨೫-೨೬
ದೂಸಿಗ ೧೨೩-೪
ದೇಸಿಗ ೪೬-೮
ದೋಣಿಕೊಂಡ ೬೮-೪
ದ್ರಮ್ಮ ೧೦-೧೬, ೧೭೭-೪

# ೪. ಜೈನ ಪಾರಿಭಾಷಿಕ ಶಬ್ದಕೋಶ

(ಮೊದಲಿನ ಸಂಖ್ಯೆ ಪುಟವನ್ನು ನಿರ್ದೇಶಿಸುತ್ತದೆ)

**ಅಂತರ್ಗತ ಕೇವಲಿ** ೬೨–ಒಳಗಡೆ ಸೇರಿರುವ ಎಂದರೆ ಲೀನವಾದ ಕೇವಲ ಜ್ಞಾನವುಳ್ಳವನು.

**ಅಘಾತಿ ಕರ್ಮ** ೧೦೪ = ಆತ್ಮನ ಗುಣಗಳನ್ನು ನಾಶಮಾಡದ ಕರ್ಮ. ಇದು ನಾಲ್ಕು ತೆರ: (೧) ಆಯು = ಆಯುಸ್ಸಿನ ಅವಧಿಯನ್ನು ನಿರ್ಣಯಿಸುವ ಕರ್ಮ. (೨) ನಾಮ = ವ್ಯಕ್ತಿಯ ತೂಕ, ಎತ್ತರ, ಗಾತ್ರ, ಬಣ್ಣ ಮುಂತಾದುವನ್ನು ನಿರ್ಣಯಿಸುವ ಕರ್ಮ. (೩) ಗೋತ್ರ–ವ್ಯಕ್ತಿಯ ವಂಶ, ಕುಲ, ದೇಶವನ್ನು ನಿರ್ಣಯಿಸುವ ಕರ್ಮ. (೪) ವೇದನೀಯ = ಇಹಜೀವನದಲ್ಲಿ ಸುಖ ದುಃಖಕಾರಣವಾದ ಕರ್ಮ.

**ಅಚ್ಯುತ ಕಲ್ಪ** ೨೪–ಹದಿನಾರು ಸ್ವರ್ಗಗಳಲ್ಲಿ ಕೊನೆಯದು.

**ಅಣುವ್ರತ** ೧೧–ಜೈನ ಗೃಹಸ್ಥರು ಧರಿಸಿ ಪೂರ್ಣ ಆಸಕ್ತಿ ಹೊಂದುವ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ವ್ರತಗಳು.

**ಗುಣವ್ರತ** ೧೨೬–ಜೈನ ಸಂನ್ಯಾಸಿ ಹಾಕಿಕೊಳ್ಳುವ ದೈನಂದಿನ ಮಿತಿಗಳು. ಇವು ಮೂರು ತೆರ. (೧) ದಿಗ್‌ವ್ರತ–ನಿಶ್ಚಿತ ದಿಕ್ಕಿನಲ್ಲಿ ಮಾತ್ರ ಚರಿಸುವುದೆಂದು ಗೊತ್ತುಮಾಡಿಕೊಳ್ಳುವುದು. (೨) ದೇಶವ್ರತ–ನಿಶ್ಚಿತ ಸ್ಥಳಕ್ಕೆ ಮಾತ್ರ ಹೋಗುವುದೆಂದು ಗೊತ್ತುಮಾಡಿಕೊಳ್ಳುವುದು. (೩) ದಂಡವಿರತಿ ವ್ರತ–ದಂಡಿಸುವುದನ್ನು ಬಿಡುವುದು.

**ಅನಂತ ಚತುಷ್ಟಯ** ೯೯; ನಾಲ್ಕು ಸಿದ್ಧಿಗಳು : (೧) ಅನಂತಜ್ಞಾನ. (೨) ಅನಂತದರ್ಶನ. (೩) ಅನಂತ ವೀರ್ಯ. (೪) ಅನಂತ ಸುಖ.

**ಅಭವ್ಯ ಜೀವ** ೧೦–ಸಮ್ಯಗ್ದರ್ಶನಾದಿಗಳಲ್ಲಿ ಪರಿಣತವಾಗದೆ ಸಿದ್ಧಸ್ಥಿತಿಗೆ ಏರದ ಚೇತನ.

**ಅಭಕ್ಷ್ಯ** ೯೬–ತಿನ್ನಬಾರದ ಪದಾರ್ಥಗಳು ; ಜೇನು, ಅತ್ತಿಹಣ್ಣು, ಅರಳಿಹಣ್ಣು, ಆಲದ ಹಣ್ಣು, ಹಲಸಿನ ಹಣ್ಣು, ಬಸುರಿ ಮರದ ಹಣ್ಣು.

**ಅಯಥಾಕರ್ಮದ ದೋಷ** ೧೦೩–ಉಚಿತವಲ್ಲದ ಕಾರ್ಯವನ್ನು ಮಾಡುವುದರಿಂದ ಬರುವ ದೋಷ.

**ಅಯೋಗಿ ಕೇವಲಿ** ೧೫೫–ಯೋಗದ ಅಭಾವವಿರುವ ಅಯೋಗಿ ಕೇವಲಿ ಗುಣಸ್ಥಾನ ಎಂಬ ೧೪ನೆಯ ಗುಣಸ್ಥಾನದಲ್ಲಿ ವರ್ತಿಸುವವನು.

**ಅರ್ಧಚಕ್ರವರ್ತಿ** ೫೦–ಷಟ್ಖಂಡಗಳ ಒಡೆಯ, ಚಕ್ರವರ್ತಿ. ಮೂರು ಖಂಡಗಳ ಒಡೆಯ ಅರ್ಧ ಚಕ್ರವರ್ತಿ.

**ಅವಧಿ ಜ್ಞಾನ** ೯, ೧೨–ಜೈನಯತಿಗಳಿಗೆ ಒದಗುವ ವಿಶೇಷ ಜ್ಞಾನ. ಕಾಲದೇಶಗಳು ಎಷ್ಟೇ ದೂರವಾಗಿದ್ದರೂ ಕೆಲವು ಮಿತಿಗೊಳಪಟ್ಟು ಅಲ್ಲಿನ ವಿಷಯಗಳನ್ನು ತಿಳಿಯುವ ಜ್ಞಾನ.

**ಅವಧಿ ಜ್ಞಾನಿ** ೪೩–ಅವಧಿ ಜ್ಞಾನವುಳ್ಳ ಜೈನಯತಿ.

**ಅವಲೋಕಿನೀ ವಿದ್ಯೆ** ೬೫–ದೂರಸ್ಥ ಸಂಗತಿಯನ್ನು ತಿಳಿಯುವ ವಿದ್ಯೆ.

**ಅಷ್ಟಮದ** ೬–ಕುಲಮದ, ರೂಪಮದ, ವಯಸ್ಸಿನ ಮದ, ತೋಳಿನ ಮದ, ತಪೋಮದ, ಕಲಾಮದ, ದೇವತಾಬಲಮದ, ರಾಜ್ಯಮದಗಳು.

**ಅಷ್ಟವಿಧಕರ್ಮ** ೯೮–೪ ಘಾತಿ ಕರ್ಮಗಳು ಮತ್ತು ೪ ಅಘಾತಿ ಕರ್ಮಗಳು.

ಆಚಾಮ್ಲವರ್ಧನ ೬೬–ಇದು ಒಂದು ವ್ರತ. ಸೌವೀರಭುಕ್ತಿ ಎಂದು ಇದರ ಹೆಸರು. ಒಂದು ಆಚಾಮ್ಲ ಒಂದು ಪಾರಣೆ. ಎರಡು ಆಚಾಮ್ಲ ಒಂದು ಪಾರಣೆ, ಮೂರು ಆಚಾಮ್ಲ ಒಂದು ಪಾರಣೆ. ಹೀಗೆ ಹತ್ತರವರೆಗೂ. ಅನಂತರ ಒಂಬತ್ತು ಆಚಾಮ್ಲ ಒಂದು ಪಾರಣೆ, ಎಂಟು ಆಚಾಮ್ಲ ಒಂದು ಪಾರಣೆ–ಹೀಗೆ ಒಂದರವರೆಗೂ ಕ್ರಮವಾಗಿ ನಡೆಸಿದರೆ ೧೦೦ ಆಚಾಮ್ಲ ೧೯ ಪಾರಣೆಗಳಾಗುತ್ತವೆ. ಇದು ಸೌಂದರ್ಯವರ್ಧಕ ವ್ರತ

ಆಮೋಷಧಿ ಋದ್ಧಿ ೬೯–ತಪಸ್ಸಿದ್ಧಿ ಪಡೆದವರಿಗೆ ಉಂಟಾಗುವ ಮಹಿಮೆಗಳಾದ ಋದ್ಧಿಗಳಲ್ಲಿ ಒಂದು. ಅಸಾಧ್ಯ ರೋಗಗಳು ಮುನಿಯ ಪಾದಾದಿಸ್ಪರ್ಶದಿಂದ ಪರಿಹಾರವಾಗುವುದು.

ಅನಾಯತನ ಸೇವೆ ೭–ಸಮ್ಯಗ್ದರ್ಶನದಲ್ಲಿ ಧರ್ಮಸ್ಥಾನವಲ್ಲದವುಗಳ ಗಾಢ ಸಂಗತಿಯಿಂದ ಆಗುವ ಆರು ದೋಷಗಳು. ಕುದೇವ, ಕುಗುರು ಮತ್ತು ಕುಧರ್ಮ ಮತ್ತು ಕುದೇವ ಪೂಜಕ, ಕುಗುರು ಪೂಜಕ ಮತ್ತು ಕುಧರ್ಮ ಪೂಜಕರುಗಳ ಸಹವಾಸ.

ಆರ್ತಧ್ಯಾನ ೪೮, ೬೪–ದುಃಖ ಸಮುದ್ಭೂತವಾದದ್ದು ಆರ್ತಧ್ಯಾನ. ಇಷ್ಟಾಕಾಂಕ್ಷಿಯಾಗಿ, ಭೋಗಾಕಾಂಕ್ಷಿಯಾಗಿ ಕೊರಗುವುದು.

ಆಸನ್ನಭವ್ಯ ೭೯, ೧೮೪–ಬೇಗ ಮೋಕ್ಷಗಾಮಿಯಾಗುವ ಜೀವ.

ಇಂಗಿಣೀಮರಣ ೧೯೨–ಸಾಧು ಸಂಘದಿಂದ ಬೇರೆಯಾಗಿ ಏಕಾಂತದಲ್ಲಿ ಮರಣ ಹೊಂದುವುದು. ನಾಲ್ಕು ಬಗೆಯ ಆಹಾರ ತ್ಯಾಗಮಾಡಿ, ತನ್ನ ಶರೀರದ ಸೇವೆಯನ್ನು ತಾನೇ ಮಾಡಿ, ಉಪಸರ್ಗವೊದಗಿದಾಗ ಅದನ್ನೂ ಬಿಟ್ಟು ಸಮತೆಯಿಂದ ಸಹಿಸಿ ವಜ್ರವೃಷಭ ನಾರಾಚ, ವಜ್ರನಾರಾಚ ಅಥವಾ ನಾರಾಚ—ಈ ಮೂರು ಸಂಹನನಗಳನ್ನು ಧರಿಸುವನು.

ಇಪ್ಪತ್ತೆರಡು ಪರೀಷಹಗಳು ೯೬–ಮೋಕ್ಷಗಾಮೀ ಜೀವನಿಗೆ ಒದಗುವ ತೊಂದರೆಗಳು. ಅವು ಇಪ್ಪತ್ತೆರಡು : (೧) ಹಸಿವು, (೨) ಬಾಯಾರಿಕೆ, (೩) ಚಳಿ, (೪) ಬಿಸಿ, (೫) ಕ್ರಿಮಿ ಕೀಟಗಳ ಕಡಿತ, (೬) ಬೆತ್ತಲೆಯಿಂದಾಗುವ ತೊಂದರೆ, (೭) ಅರತಿಯ ವಾಧೆ, (೮) ಹೆಂಗಸರಿಂದಾಗುವ ತೊಂದರೆ, (೯) ಓಡಾಡುವಾಗ ಆಗುವ ಬಾಧೆ, (೧೦) ಮಲಗುವಾಗ ಆಗುವ ಬಾಧೆ, (೧೧) ಕುಳಿತಿರುವಾಗ ಆಗುವ ತೊಂದರೆ, (೧೨) ಬೈಗುಳು, (೧೩) ಹೊಡೆತ, (೧೪) ಭಿಕ್ಷೆ ಬೇಡುವಾಗ ಬರುವ ಕಷ್ಟನಿಷ್ಠುರ, (೧೫) ಭಿಕ್ಷೆ ಸಿಗದಿದ್ದಾಗ ಆಗುವ ಖೇದ, (೧೬) ತಪೋಮಹಿಮೆಗಳು ಕಾಣದಿರುವುದು, (೧೭) ರೋಗ, (೧೮) ಮುಳ್ಳು ಕಲ್ಲುಗಳಿಂದಾಗುವ ಬಾಧೆ, (೧೯) ತನ್ನ ಪ್ರಜ್ಞೆಗೆ ಅಹಂಕಾರಪಡುವುದು, (೨೦) ಉತ್ತಮ ಜ್ಞಾನಾಕಾಂಕ್ಷಿಯಾಗಿ ಅಜ್ಞಾನಕ್ಕೆ ಕೊರಗುವುದು, (೨೧) ಸ್ನಾನ ಮಾಡದಿರುವುದರಿಂದಾಗುವ ಬಾಧೆ, (೨೨) ಜನ ಪುರಸ್ಕರಿಸದಿದ್ದಾಗ ಆಗುವ ಬಾಧೆ.

ಇಪ್ಪತ್ತೈದು ದೋಷಗಳು ೬–ಶಂಕೆಯೇ ಮೊದಲಾದ ಎಂಟು ಮಲಗಳು, ಎಂಟು ಮದಗಳು, ಮೂರು ಮೂಢಗಳು ಮತ್ತು ಆರು ಅನಾಯತನ ಸೇವೆಗಳು.

ಈರ್ಯಾಪತ್ತಿ ೭೯, ೮೦–ಪ್ರಾಸುಕ ಮಾರ್ಗದಲ್ಲಿ ಹಗಲುಹೊತ್ತು ಕಾರ್ಯನಿಮಿತ್ತವಾಗಿ ಉತ್ಸುಕನೂ, ಅನ್ಯಮನಸ್ಕನೂ ಆಗದೆ ಮುಂದೆ ನೋಡಿಕೊಂಡು ಸೂಕ್ಷ್ಮಬಾದರ ಪ್ರಾಣಿಗಳನ್ನು ಪ್ರಯತ್ನಪೂರ್ವಕವಾಗಿ ಪರಿಹರಿಸಿ ನಡೆಯುವುದು.

ಉಗ್ರೋಗ್ರತಪ ೬೯–ಕಷ್ಟವಿಲ್ಲದೆ ಪಕ್ಷಮಾಸಾದಿಗಳ ಉಪವಾಸಮಾಡುತ್ತ ಹೋಗುವುದು.

ಉಪವಾಸಪಚ್ಚಕ್ಖಾಣ ೮೨–ಉಪವಾಸ ಪ್ರತಿಜ್ಞೆ.

ಉಪಶಾಂತ ಗುಣಸ್ಥಾನ ೨೯–ಹನ್ನೊಂದನೆಯ ಗುಣಸ್ಥಾನ.

ಉಪಸರ್ಗ ೧–ತೊಂದರೆಗಳು. ಇದು ದೇವ ನಾರಕ ತಿರ್ಯಕ್ ಮಾನುಷ ಎಂದು ನಾಲ್ಕು ವಿಧ.

ಏಷಣಾ ಸಮಿತಿ ೭೯–ಜೀವ ದಯಾಪರನೂ, ಮೋಕ್ಷಸಾಧಕನೂ ಆದ ತಪಸ್ವಿನ ರತ್ನತ್ರಯ ಭಾವನೆ ತಪೋವೃದ್ಧ್ಯರ್ಥವಾಗಿ ಚರ್ಯಾಮಾರ್ಗದಿಂದ ಶೀತೋಷ್ಣ ಸ್ನಿಗ್ಧರೂಕ್ಷಗುಣ

ಕಲಿತ ಪರಕೃತ ಪ್ರಾಸುಕಾಹಾರವನ್ನೂ ರಾಗದ್ವೇಷವನ್ನೂ ಬಿಟ್ಟು ಸಮಚಿತ್ತದಿಂದ ಊಟ ಮಾಡುವುದು.

**ಏಲುಂ ಗುಣಂಗಳು** ೩೨–ಗುಣಗಳು ೬, ೮, ೩೬ ಎಂದು ಹಲವು ವಿಧ. ಇಲ್ಲಿ ಏಳು ಗುಣಗಳು (೧) ಸಮ್ಯಗ್ದರ್ಶನ ಶುದ್ಧ, (೨) ಅಕದವದಕರ್ಮ (ದೋಷವಿಲ್ಲದ ಕರ್ಮ) (೩) ಸುಶೀಲ ಗುಣನಿಲಯ, (೪) ಉಜ್ಜುಗತ್ತ (ಉದ್ಯೋಗಾರ್ತ) (೫) ಗುರುಭತ್ತ (ಗುರುಭಕ್ತ (೬) ಪವಯಣ ಕುಶಲ (ಪ್ರವಚನ ಕುಶಲ), (೭) ಮದಿಪ್ಪಗಬ್ಭೋಯ (ಬುದ್ಧಿಯಲ್ಲಿ ಪ್ರೌಢಿಮೆ.)

**ಕಷಾಯ** ೨೪–ಕ್ರೋಧ, ಮಾನ, ಮಾಯ, ಲೋಭಗಳು.

**ಕಾಯೋತ್ಸರ್ಗ** ೪೮–ಶರೀರಾದಿಗಳ ಮಮತೆಯನ್ನು ತೊರೆದು ಆತ್ಮವನ್ನು ಸುಮುಖಮಾಡಿ ಕೊಳ್ಳುವುದು.

**ಕ್ಷಪಕಶ್ರೇಣಿ** ೧೩೪–ಗುಣಸ್ಥಾನಗಳಲ್ಲಿ ಜೀವ ಉನ್ನತಿ ಹೊಂದುತ್ತಾ ಹೋಗುವಾಗ ಯಾವುದು ಚಾರಿತ್ರ ಮೋಹನೀಯಗಳ ನಾಶಮಾಡುತ್ತದೋ ಅದು. ಕ್ಷಪಕ ಶ್ರೇಣಿಯನ್ನು ಏರು ವವನು ೧೧ನೆಯ ಗುಣಸ್ಥಾನವನ್ನು ಸ್ಪರ್ಶಿಸುವುದಿಲ್ಲ.

**ಖೇಳೋಷಧಿ ಶುದ್ಧಿ** ೬೯–ಔಷಧರ್ದಿಗಳಲ್ಲಿ ಒಂದು. ಯತಿಯ ಎಂಜಲಿನಿಂದ ರೋಗ ಪರಿಹಾರ ವಾಗುವುದು.

**ಗುಣಸ್ಥಾನ** ೧೫೪–ಸಂಸಾರದಲ್ಲಿ ಸಿಕ್ಕು ಮಿಥ್ಯಾತ್ವದಲ್ಲಿ ಮುಳುಗಿರುವ ಜೀವ ಕರ್ಮಕ್ಷಯ ಮಾಡಿಕೊಂಡು ಮೇಲೇರುವಾಗ ೧೪ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳೇ ಗುಣಸ್ಥಾನ ಗಳು. ಕರ್ಮದ ಉದಯ, ಉಪಶಮ, ಶಾಂತ, ಕ್ಷಯ, ಕ್ಷಯೋಪಶಮಗಳಿಂದ ಉಂಟಾ ಗುವ ಜೀವದ ಸ್ಥಿತಿಗೆ ಗುಣಸ್ಥಾನವೆಂದು ಹೆಸರು.

**ಗೋಚಾರನಿಯಮ** ೭೯, ೮೫–ಸಾಧುವಿನ ಭಿಕ್ಷಾಕ್ರಮ. ಆಹಾರಕ್ಕಾಗಿ ಹಸುವು ವನದ ಶೋಭೆ, ಸೌಂದರ್ಯಗಳನ್ನು ಲಕ್ಷಿಸದೆ ಚರಿಸುವಂತೆ ಸನ್ಯಾಸಿ ಭಿಕ್ಷವನ್ನು ಮಾತ್ರ ಗಮನಿಸ ಬೇಕು. ದಾತಾರನನ್ನಾಗಲಿ ಅವನ ಐಶ್ವರ್ಯವನ್ನಾಗಲಿ ಗಣಿಸಬಾರದು.

**ಘಾತಿಕರ್ಮ** ೧೦೪, ೧೫೪–ಘಾತಿಕರ್ಮಗಳು ೪. ಜೀವಕ್ಕೆ ಸಹಜವಾದ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖ ಎಂಬ ನಾಲ್ಕು ಅನಂತ ಗುಣಗಳಿಗೆ ಘಾತಿ ಉಂಟುಮಾಡುವ ಕರ್ಮ. ಅವು (೧) ಜ್ಞಾನಾವರಣೀಯ—ಅನಂತಜ್ಞಾನವನ್ನು ಆವರಿಸುವುದು (೨) ದರ್ಶನಾವರಣೀಯ—ಅನಂತದರ್ಶನವನ್ನು ಆವರಿಸುವುದು (೩) ಅಂತರಾಯ–ಅನಂತವೀರ್ಯವನ್ನು ಆವರಿಸುವುದು, (೪) ಮೋಹನೀಯ–ಜೀವವನ್ನು ಮೋಹಗೊಳಿಸಿ ಅನಂತ ಸುಖವನ್ನು ಮರೆಸುವುದು. ಘಾತಿಕರ್ಮಗಳು ಜೀವವನ್ನು ಸಂಸಾರದಲ್ಲಿ ಸಿಲುಕಿಸುತ್ತವೆ.

**ಘೋರತಪ** ೬೯–ಭಯಾನಕ ಸ್ಥಳದಲ್ಲಿ ರೋಗಾದಿಗಳುಂಟಾದರೂ ತಪಸ್ಸು ಮಾಡುವುದು.

**ಚತುರ್ನಿಕಾಯಾಮರ** ೩೦–ಭವನಪತಿ, ವ್ಯಂತರಿಕ, ಜ್ಯೋತಿಷ್ಕ ಮತ್ತು ವಿಮಾನ ವಾಸಿ ಗಳೆಂಬ ನಾಲ್ಕು ಬಗೆಯ ದೇವತೆಗಳು.

**ಚತುರ್ದಶಪೂರ್ವಗಳು** ೪೯–ದ್ವಾದಶಾಂಗಗಳಲ್ಲಿ ೧೨ನೆಯ ದೃಷ್ಟಿ ವಾದಾಂಗಕ್ಕೆ ಮೂಲ ವಾಗಿದ್ದು ಈಗ ಕಾಣೆಯಾಗಿರುವ ೧೪ ಪೂರ್ವಗಳು. (೧) ಉತ್ಪಾದ ಪೂರ್ವ, (೨) ಅಗ್ರಾ ಯಣೀ ಪೂರ್ವ, (೩) ವೀರ್ಯಾನುವಾದ ಪೂರ್ವ, (೪) ಅಸ್ತಿನಾಸ್ತಿ ಪ್ರವಾದ ಪೂರ್ವ, (೫) ಜ್ಞಾನಪ್ರವಾದ ಪೂರ್ವ, (೬) ಸತ್ಯಪ್ರವಾದ ಪೂರ್ವ, (೭) ಆತ್ಮಪ್ರವಾದ ಪೂರ್ವ, (೮) ಕರ್ಮಪ್ರವಾದ ಪೂರ್ವ, (೯) ಪ್ರತ್ಯಾಖ್ಯಾನುವಾದ ಪೂರ್ವ, (೧೦) ವಿದ್ಯಾನುವಾದ ಪೂರ್ವ, (೧೧) ಕಲ್ಯಾಣವಾದ ಪೂರ್ವ, (೧೨) ಪ್ರಾಣವಾದ ಪೂರ್ವ, (೧೩) ಕ್ರಿಯಾ ವಿಶಾಲ ಪೂರ್ವ, (೧೪) ತ್ರಿಲೋಕ ಬಿಂದುಸಾರ ಪೂರ್ವ.

ಚಾರಣರಿಸಿಯರ್ ೬೨–ಆಕಾಶದಲ್ಲಿ ಸಂಚರಿಸುವ ಮುನಿ.

ಜಲ್ಲೋ (ಲ್ಲೋ)ಷಧಿಋದ್ಧಿ ೬೯–ಹತ್ತು ತಪಸ್ಸಿದ್ಧಿಗಳನ್ನು ಪಡೆದವರಿಗೆ ಉಂಟಾಗುವ ಮಹಿಮೆ. ಔಷಧರ್ಧಿಗಳಲ್ಲಿ ಒಂದು. ಸಾಧುವಿನ ಜೆವರಿನ ಸ್ಪರ್ಶದಿಂದ ರೋಗ ಹರವಾಗುವುದು.

ಜಿನಕಲ್ಪ ೯೩–ಏಕವಿಹಾರಿಯಾದ ಜೈನ ಸಾಧು ಸಂಪ್ರದಾಯ.

ದೀಪ್ತತಪ ೬೯–ಅನೇಕ ಉಪವಾಸಗಳ ಅನಂತರವೂ ಶರೀರದ ಕಾಂತಿ ಕುಂದದಿರುವುದು. ಮುಖದಲ್ಲಿ ದುರ್ಗಂಧ ಬರದಿರುವುದು.

ದ್ವಾದಶವಿಧತಪ ೧–ಕರ್ಮನಿರ್ಜರೆಗೆ ಸಾಧನವಾದ ತಪಸ್ಸುಗಳು ೧೨. ಅವು ಎರಡು ವಿಧ. (೧) ಬಾಹ್ಯ (೨) ಆಭ್ಯಂತರ.

ಬಾಹ್ಯತಪಗಳು ೬–(೧) ಅನಶನ (ಆಹಾರವಿಲ್ಲದೆ ತಪಸ್ಸು ಮಾಡುವುದು), (೨) ಅವಮೋದರ್ಯ (ಹೊಟ್ಟೆ ತುಂಬುವುದಕ್ಕಿಂತ ಕಡಮೆ ತೆಗೆದುಕೊಳ್ಳುವುದು, (೩) ವೃತ್ತಿಸಂಖ್ಯಾನ (ನಿರ್ದಿಷ್ಟ ರೀತಿಯಲ್ಲಿ ಮಾತ್ರ ಭಿಕ್ಷೆ ಮಾಡುವುದಾಗಿ ಮಿತಿಹಾಕಿಕೊಳ್ಳುವುದು, (೪) ರಸತ್ಯಾಗ (ಹಾಲು, ಮೊಸರು ಮೊದಲಾದ ತನಗೆ ಪ್ರಿಯವಾದುವನ್ನು ಬಿಡುವುದು, (೫) ಕಾಯಕ್ಲೇಶ (ಗಾಳಿ, ಮಳೆ, ಬಿಸಿಲುಗಳಲ್ಲಿ ದೇಹವನ್ನು ದಂಡಿಸಿ ತಪಸ್ಸು ಮಾಡುವುದು, (೬) ವಿವಿಕ್ತ ಶಯನಾಸನ (ಏಕಾಂತವಾಗಿ ಕೂಡುವುದು, ಮಲಗುವುದು ಈ ಬಗೆಯ ತಪಸ್ಸು.

ಅಭ್ಯಂತರ ತಪಸ್ಸು ೬-ಪ್ರಾಯಶ್ಚಿತ್ತ (ಮಾಡಿದ ತಪ್ಪನ್ನು ಒಪ್ಪಿಕೊಂಡು ಶಿಕ್ಷೆಯನ್ನು ಅನುಭವಿಸುವುದು, (೨) ವಿನಯ (ಜ್ಞಾನದರ್ಶನ ಚಾರಿತ್ರಗಳಲ್ಲಿ ಹಿರಿಯರಿಗೆ ವಿನಯವಾಗಿರುವುದು) (೩) ವೈಯಾಪೃತ್ಯ–ವೃದ್ಧರೂ ಅಶಕ್ತರೂ ರೋಗಿಷ್ಠರೂ ಆದ ಯತಿಗಳ ಸೇವೆ ಮಾಡುವುದು. (೪) ಸ್ವಾಧ್ಯಾಯ (ಆಗಮ ಗ್ರಂಥಗಳನ್ನು ಅಭ್ಯಾಸ ಮಾಡುವುದು, (೫) ವ್ಯುತ್ಸರ್ಗ (ಶರೀರದಮೇಲಣ ಆಸೆಯನ್ನು ಬಿಟ್ಟು ಸಮಚಿತ್ತದಿಂದಿರುವುದು. (೬) ಧ್ಯಾನ.

ದ್ವಾದಶಾಂಗಗಳು ೪೯—(೧) ಆಚಾರಾಂಗ—ಯತಿಯ ನಡವಳಿಕೆಯನ್ನು ತಿಳಿಸುತ್ತದೆ. (೨) ಸೂತ್ರಕೃತಾಂಗ ಜ್ಞಾನ—ವಿನಯ, ಧಾರ್ಮಿಕಕ್ರಿಯೆ ಮೊದಲಾದವನ್ನು ತಿಳಿಸುತ್ತದೆ. (೩) ಸ್ಥಾನಾಂಗ—ಜೀವಪುದ್ಗಲ ಮೊದಲಾದ ದ್ರವ್ಯಗಳ ಸ್ಥಾನವನ್ನು ತಿಳಿಸುತ್ತದೆ. (೪) ಸಮವಾಯಾಂಗ—ದ್ರವ್ಯ ಕಾಲ ಕ್ಷೇತ್ರ ಭಾವಗಳ ದೃಷ್ಟಿಭೇದಗಳಿಂದ ತೋರುವ ಸಾಮ್ಯವನ್ನು ತಿಳಿಸುತ್ತದೆ. (೫) ವ್ಯಾಖ್ಯಾಪ್ರಜ್ಞಪ್ತಿ—ಗಣಧರರ ಪ್ರಶ್ನೆಗಳಿಗೆ ತೀರ್ಥಂಕರರ ಉತ್ತರಗಳನ್ನು ತಿಳಿಸುತ್ತದೆ (೬) ಜ್ಞಾತೃಧರ್ಮಕಥಾಂಗ; ಧಾರ್ಮಿಕ ಕಥೆ, ಗಣಧರ ತೀರ್ಥಂಕರರ ಸಂವಾದವಿದೆ. (೭) ಉಪಾಸಕಾಧ್ಯಾಯಾಂಗ—ಶ್ರಾವಕಾಚಾರಗಳನ್ನು ತಿಳಿಸುತ್ತದೆ. (೮) ಅಂತಕೃದ್ದಶಾಂಗ—ಪ್ರತಿ ತೀರ್ಥಂಕರರ ಕಾಲದಲ್ಲಿಯೂ ಉಪಸರ್ಗವನ್ನು ಸಹಿಸಿ ತಪಸ್ಸು ಮಾಡಿದ ಹತ್ತು ಹತ್ತು ಮುನಿಗಳ ಚರಿತ್ರೆಯಿದೆ. (೯) ಅನುತ್ತರೋಪಪಾದಕ ದಶಾಂಗ—ಪ್ರತಿ ತೀರ್ಥಂಕರರ ಕಾಲದಲ್ಲಿಯೂ ತಪಸ್ಸಿನಿಂದ ಐದು ಅನುತ್ತರಗಳಲ್ಲಿ ಹುಟ್ಟಿದ ಹತ್ತು ಹತ್ತು ಮುನಿಗಳ ಚರಿತ್ರೆಯಿದೆ. (೧೦) ಪ್ರಶ್ನ ವ್ಯಾಕರಣಾಂಗ—ಪ್ರಾಣಿಗಳ ಸುಖದುಃಖದ ಪ್ರಶ್ನೆಗಳಿಗೆ ಉತ್ತರವಿದೆ. (೧೧) ವಿಪಾಕ ಸೂತ್ರಾಂಗ—ಕರ್ಮಗಳ ಪರಿಪಾಕ ಸ್ವರೂಪವನ್ನು ತಿಳಿಸುತ್ತದೆ. (೧೨) ದೃಷ್ಟಿಪ್ರವಾದಾಂಗ—ಬೇರೆ ಬೇರೆ ದರ್ಶನಗಳನ್ನು ವಿವರಿಸಿ ಸಮ್ಯಗ್ ದರ್ಶನವನ್ನು ತಿಳಿಸುತ್ತದೆ. ಇಲ್ಲಿ ಚತುರ್ದಶ ಪೂರ್ವಗಳೂ ಸೇರಿವೆ.

ನಂದೀಶ್ವರ ೧೦೭—ನಂದೀಶ್ವರದಲ್ಲಿ ಸೌಧರ್ಮಾದಿ ಇಂದ್ರರ ಸಾನ್ನಿಧ್ಯದಲ್ಲಿ ಮಾಡುವ ಪೂಜೆ. ಇದನ್ನು ಕಾರ್ತಿಕ, ಫಾಲ್ಗುಣ, ಆಷಾಢಗಳ ಅಂತ್ಯವಾರಗಳಲ್ಲಿ ಮಾಡುವುದು.

ಧರ್ಮಧ್ಯಾನ ೨೯—ಧರ್ಮಸ್ವರೂಪವನ್ನೂ ಯಾವಾಗಲೂ ಚಿಂತಿಸುತ್ತಿರುವುದು.

ನವಪದಾರ್ಥಗಳು—ಜೀವ, ಅಜೀವ, ಪುಣ್ಯ, ಪಾಪ, ಅಸ್ರವ, ಸಂವರ, ನಿರ್ಜರ, ಬಂಧ, ಮೋಕ್ಷ.

ನಿಶ್ಶಲ್ಯಗಳು ೪೪—ಮಾಯಾ (ಕಪಟ), ಮಿಥ್ಯಾ (ಶ್ರದ್ಧೆಯ ಅಭಾವ), ನಿಧಾನ (ಭೋಗಾಕಾಂಕ್ಷೆ)ಗಳೆಂಬ ಶಲ್ಯಗಳಿಲ್ಲದಿರುವುದು.

ಪಂಚಮಹಾಪಾತಕ ೯೬—ಬಾಲವಧೆ, ಸ್ತ್ರೀವಧೆ, ಗೋವಧೆ, ಋಷಿವಧೆ, ಬ್ರಾಹ್ಮಣವಧೆ.

ಪಂಚಾಸ್ತಿಕಾಯಗಳು—ಕಾಲವನ್ನುಳಿದು ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶಗಳು.

ಪಂಥಾತಿಚಾರನಿಯಮ ೧೦೩—ಚರಿಗೆಯಿಂದ ಹಿಂದಿರುಗಿ ದಾರಿಯಲ್ಲಾಗಿದ್ದ ಅತಿಚಾರಗಳ ಶುದ್ಧಿಗೆ ಮಾಡಬೇಕಾದ ನಿಯಮ.

ಪಡಿಕಮಣ ೬, ೨೮—೧೪ ಪ್ರಕೀರ್ಣಕಗಳಲ್ಲಿ ನಾಲ್ಕನೆಯದು ಹಿಂದೆ ಮಾಡಿದ ದೋಷಗಳಿಗೆ ಪಶ್ಚಾತ್ತಾಪಪಡುವುದು. ಇದು ಏಳು ಬಗೆ; (೧) ದೈವಸಿಕ (ಹಗಲು ಮಾಡಿದ ದೋಷ), (೨) ರಾತ್ರಿಕ (ರಾತ್ರಿ ಮಾಡಿದ ದೋಷ), (೩) ಐರ್ಯಾಪಥಿಕ (ಚರಿಗೆಗೆ ಹೋಗುವಾಗ ನಡೆದ ದೋಷ), (೪) ಪಾಕ್ಷಿಕ (ಹದಿನೈದು ದಿವಸಗಳಲ್ಲಿ ನಡೆದ ದೋಷ), (೫) ಚಾತುರ್ಮಾಸಿಕ (ನಾಲ್ಕು ತಿಂಗಳಲ್ಲಿ ನಡೆದ ದೋಷ), (೬) ಸಾಂವತ್ಸರಿಕ (ವರ್ಷಪೂರ್ತಿ ನಡೆದ ದೋಷ), (೭) ಉತ್ತಮಾರ್ಥ (ಸಮಾಧಿ ಮರಣ ಸಮಯದಿಂದ ಜೀವನ ಪರ್ಯಂತರ ನಡೆದ ದೋಷ).

ಪದಿನೆಂಟುಂದೋಷಂಗಳ್ ೬—ಅರ್ಹಂತನಿಗೆ ಇವು ಇರುವುದಿಲ್ಲ. ಹಸಿವು, ಬಾಯಾರಿಕೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಜರೆ, ರೋಗ, ಮರಣ, ಬೆವರು, ಖೇದ, ಮದ, ರತಿ, ಆಶ್ಚರ್ಯ, ಜನ್ಮ, ನಿದ್ರಾ, ವಿಷಾದ.

ಪರೀಷಹಂಗಳು ೧—೨೨ ಪರೀಷಹಗಳು ನೋಡಿ.

ಪೃಥಕ್ತ್ವವೀತರ್ಕವಿಚಾರ ೨೯—ಮೊದಲ ಶುಕ್ಲ ಧ್ಯಾನದಲ್ಲಿ ೮ನೆಯ ಗುಣಸ್ಥಾನದಿಂದ ೧೨ನೆಯ ಗುಣಸ್ಥಾನದ ಕೆಲವು ಭಾಗದವರೆಗೆ ನಡೆಯುವಂಥದು.

ಪ್ರಾಯೋಪಗಮ—೧, ೨೮, ೮೩—ಜೈನಯತಿಗಳು ತಮ್ಮ ರೋಗಕ್ಕೆ ತಾವೂ ಚಿಕಿತ್ಸೆಮಾಡಿಕೊಳ್ಳದೆ ಬೇರೆಯವರಿಂದಲೂ ಮಾಡಿಸದೆ ಧ್ಯಾನದಲ್ಲಿ ಲೀನರಾಗಿ, ಅಚಲರಾಗಿ ಪ್ರಾಣತ್ಯಾಗ ಮಾಡುವುದು.

ಬಾಹ್ಯಾಭ್ಯಂತರ ಪರಿಗ್ರಹ ೧, ೯, ೧೧, ೯೬—ದ್ವಾದಶ ವಿಧತಪಗಳನ್ನು ಸ್ವೀಕರಿಸುವುದು.

ಭವ್ಯ ೫—ಚೈತನ್ಯ ಜೀವವು ಸಮ್ಯಗ್ದರ್ಶನಾದಿ ಭಾವರೂಪದಲ್ಲಿ ಪರಿಣತಿ ಹೊಂದಿ ಮೋಕ್ಷಗಾಮಿಯಾಗುವುದು.

ಭುಕ್ತಪ್ರತ್ಯಾಖ್ಯಾನವಿಧಿ ೨೪—ಕ್ರಮಪೂರ್ವಕವಾಗಿ ಆಹಾರ ಪಾನೀಯಗಳನ್ನು ತ್ಯಾಗಮಾಡುವುದು.

ಮಹಾತಪ ೬೯—ಸಿಂಹ ನಿಷ್ಕ್ರೀಡಿತಾದಿ ಮಹಾತಪಗಳನ್ನು ಮಾಡುವುದು.

ಮಹಾವ್ರತ ೬—ಸಾಧುವು ಪಾಲಿಸಲು ಯೋಗ್ಯವಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಐದು ವ್ರತಗಳು.

ಮಿಥ್ಯಾತ್ವ ೨೪—ಅತತ್ವಶ್ರದ್ಧಾನದ ಉದಯದಿಂದ ಜೀವನು ಆಪ್ತರು ಮತ್ತು ತೀರ್ಥಂಕರರು ಹೇಳಿದ ಮೋಕ್ಷಮಾರ್ಗದಿಂದ ಪರಾಙ್ಮುಖನಾಗಿ ಸಮ್ಯಕ್ತ್ವರಹಿತನಾಗಿ ಮಿಥ್ಯಾದೃಷ್ಟಿಯಾಗುತ್ತಾನೆ.

ಮುಂಡಕೇವಲಿ ೧೫೪—ಮುಂಡನಾ ಅಥವಾ ವಶಪಡಿಸಿಕೊಳ್ಳುವ ಕೇವಲಿ. ಇವು ಹತ್ತು ಬಗೆ ಐದು ವಿಧವಾದ ಸ್ಪರ್ಶನ. (೬) ವಚನಮುಂಡ (ಮಾತಾಡದಿರುವುದು),(೭) ಹಸ್ತಮುಂಡ ಕುಚೇಷ್ಟೆಗಾಗಿ ಕೈಯಾಡಿಸದಿರುವುದು. (೮) ಪಾದಮುಂಡ ಪಾದಗಳನ್ನು ಆಸನದಲ್ಲಿ ಸೇರಿಸ

ದಿರುವುದು, (೯) ಮನಮುಂಡ (ಕೆಟ್ಟದ್ದನ್ನು ಯೋಚಿಸದಿರುವುದು), (೧೦) ಶರೀರಮುಂಡ ಶರೀರವನ್ನು ಹತೋಟಿಯಲ್ಲಿಟ್ಟುಕೊಳ್ಳುವುದು.

ಪ್ರಯೋಜನವಿಲ್ಲದ ಕೆಲಸದಲ್ಲಿ ಯಾವುದರಿಂದ ಹಿಂಸೆಯಾಗುತ್ತದೆಯೋ ಅದನ್ನು ಬಳಸಬಾರದು.

ಮೂಱುಮೂಢಗಳು ೭—(೧) ದೇವತಾಮೂಢ (ಮಿಥ್ಯಾದೇವತೆಗಳ ಅರ್ಚನೆ), (೨) ಲೋಕಮೂಢ (ಮಿಥ್ಯಾಕ್ಷೇತ್ರಗಳಲ್ಲಿ ನಂಬಿಕೆ), (೩) ಪಾಷಂಡಿಮೂಢ (ಮಿಥ್ಯಾ ಗುರುಗಳನ್ನು ನಂಬುವುದು).

ರತ್ನತ್ರಯ ೨೪,೯೭೨—ಮೋಕ್ಷ ಸಾಧನಗಳಾದ ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ, ಸಮ್ಯಗ್‌ಚಾರಿತ್ರಗಳು.

ವಿಪ್ರೋ(ಟ್ರೋ)ಷಧಿಋದ್ಧಿ-೧೦ ತಪಸ್ಸಿದ್ಧಿ ಪಡೆದವರಿಗೆ ಉಂಟಾಗುವ ಮಹಿಮೆಗಳಲ್ಲಿ ಒಂದು. ಔಷಧರ್ಧಿಗಳಲ್ಲಿ ಒಂದು. ಯತಿಯ ಸ್ಪರ್ಶ ಮಲಮೂತ್ರದಿಂದ ರೋಗಹರವಾಗುವುದು.

ವಿಭಂಗಜ್ಞಾನ ೧೪೫, ೧೬೮—ಮಿಥ್ಯಾತ್ವಯುಕ್ತ ಅವಧಿಜ್ಞಾನಕ್ಕೆ ವಿಭಂಗಜ್ಞಾನವೆಂದು ಹೆಸರು. ಆತ್ಮನಿಗೆ ಅಹಿತವನ್ನುಂಟುಮಾಡುವ ಪದಾರ್ಥಗಳನ್ನು ತಿಳಿಯಬಲ್ಲುದಲ್ಲದೆ ಹಿತಕರ ಪದಾರ್ಥಗಳ ಸ್ವರೂಪವನ್ನು ಅರಿಯದು.

ವೀಚಿಮರಣ ೬೮—ಅಲೆಯು ಎದ್ದು ಬಿದ್ದು ನಾಶವಾಗುವಂತೆ ಸಂತತವಾದ ಮರಣವನ್ನು ಹೊಂದುವಿಕೆ. ಮನುಷ್ಯರ ಆಯುಸ್ಸು, ತೇಜಸ್ಸುಗಳು ನಿರಂತರವಾಗಿ ಕುಂದುತ್ತಿರುವುದು.

ವ್ಯಂತರದೇವ ೪೧—ಬೇರೆ ಬೇರೆ ದೇಶಗಳಲ್ಲಿ ಯಾರು ಇರುವರೋ ಆ ದೇವತೆಗಳು. ಇವರು ಎಂಟು ಬಗೆ; (೧) ಕಿನ್ನರ. (೨) ಕಿಂಪುರುಷ. (೩) ಮಹೋರಗ. (೪) ಗಂಧರ್ವ. (೫) ಯಕ್ಷ. (೬) ರಾಕ್ಷಸ. (೭) ಭೂತ. (೮) ಪಿಶಾಚ.

ಶಂಕಾದ್ಯಷ್ಟಮಲಂಗಳು ೬—ಶಂಕ, ಆಕಾಂಕ್ಷಾ, ವಿಚಿಕಿತ್ಸಾ, ಅನ್ಯದೃಷ್ಟಿ, ಪ್ರಶಂಸಾ, ಸಂಸ್ತವಾ, ಸಮ್ಯಗ್ ದೃಷ್ಟಿ, ಅತಿಚಾರಗಳು.

ಶುಕ್ಲಧ್ಯಾನ ೨೯—ಶುಚಿತ್ವ ಸಮೇತವಾದದ್ದು ಶುಕ್ಲಧ್ಯಾನ. ಧರ್ಮಧ್ಯಾನವನ್ನು ಮುಗಿಸಿ ಮುಕ್ತಿ ಹೊಂದುವುದನ್ನು ಕುರಿತು ಚಿಂತಿಸುವುದು. ಶುಕ್ಲಧ್ಯಾನವು ಸಾಕ್ಷಾತ್ತಾಗಿ ಮುಕ್ತಿಗೆ ಸಾಧನವಾಗುತ್ತದೆ.

ಷಡ್ದ್ರವ್ಯಗಳು ೬—ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ.

ಸಪ್ತವ್ಯಸನ ೩—ದ್ಯೂತಕ್ರೀಡೆ, ವೇಶ್ಯಾಸೇವನೆ, ಪರಸ್ತ್ರೀಗಮನ, ಚೌರ್ಯಕರ್ಮ, ಮಾಂಸಭಕ್ಷಣ, ಮದ್ಯಪಾನ, ಬೇಟೆಯಾಡುವುದು.

ಸಮಾಧಿಮರಣ ೪೫—ಅನ್ನ ಕಷಾಯ ಮುಂತಾದುವುಗಳನ್ನು ತ್ಯಾಗಮಾಡಿ ರತ್ನತ್ರಯಗಳಲ್ಲಿ ಸ್ಥಿರನಾಗಿ ಪ್ರಾಣತ್ಯಾಗಮಾಡುವ ಕ್ರಮ.

ಸಮ್ಯಕ್ತ್ವ ೧೩—ಜೈನಮತದ ಸಮ್ಯಗ್‌ದರ್ಶನಾದಿ ತತ್ತ್ವಗಳ ಸತ್ಯತ್ವದಲ್ಲಿ ಸಂಪೂರ್ಣವಾದ ನಂಬಿಕೆಯಿರುವುದು. ಮಿಥ್ಯಾತ್ವಕ್ಕೆ ವಿರುದ್ಧವಾದದ್ದು.

ಸರ್ವಾರ್ಥಸಿದ್ಧಿ ೧—೨೭ ಅನುತ್ತರವಿಮಾನಗಳಲ್ಲಿ ಎಲ್ಲಕ್ಕೂ ಮೇಲಿರುವದು ಮತ್ತು ಅತ್ಯುತ್ತಮವಾದದ್ದು.

ಸರ್ವೋಷಧಿಋದ್ಧಿ ೬೯—ಹತ್ತು ತಪಸ್ಸಿದ್ಧಿಗಳನ್ನು ಪಡೆದವರಿಗೆ ಒದಗುವ ಮಹಿಮೆ. ಸಾಧುವಿನ ಅಂಗಸ್ಪರ್ಶ, ಉಸಿರು, ಮಲಮೂತ್ರಗಳೆಲ್ಲಾ ರೋಗನಾಶಕವಾಗಿರುವುದು.

ಸಿಂಹನಿಷ್ಕ್ರೀಡಿತ ೧೭೨—೮೦ ದಿನದಲ್ಲಿ ೬೦ ಉಪವಾಸ ಮತ್ತು ೨೦ ಪಾರಣೆಗಳನ್ನು ಮಾಡುವ ವ್ರತ.

**ಸಿದ್ಧಗುಣ ೭**—ಮುಕ್ತಜೀವರಿಗಿರುವ ಎಂಟು ಗುಣಗಳು. (೧) ಸಮ್ಯಕ್ತ್ವ. (೨) ಅನಂತ ದರ್ಶನ. (೩) ಅನಂತಜ್ಞಾನ. (೪) ಅನಂತವೀರ್ಯ. (೫) ಸೂಕ್ಷ್ಮತ್ವ. (೬) ಅವಗಾಹಿತ್ವ. (೭) ಅವ್ಯಾಬಾಧತ್ವ ಮತ್ತು (೮) ಅಗುರುಲಘುತ್ವಗಳು.

**ಸಿದ್ಧಸ್ವರೂಪ ೭**—ಆತ್ಮವು ೮ ಕರ್ಮಗಳನ್ನು ನಾಶಪಡಿಸಿ ೮ ಗುಣಗಳನ್ನು ಪ್ರಕಟಪಡಿಸುವುದು. ದೇಹರಹಿತವಾಗಿ ಪುರುಷಾಕಾರವು ಲೋಕಶಿಖರದ ಮೇಲೆ ವಿರಾಜಮಾನವಾಗಿರುವುದು. ನಿತ್ಯಜ್ಞಾನಾನಂದದಲ್ಲಿ ಮಗ್ನವಾಗಿ ಸಾಧ್ಯವಿದ್ದದನ್ನು ಸಾಧಿಸುವುದು. ಪೂರ್ಣ ಕೃತಕೃತ್ಯ ವಾಗಿ, ಅವಿನಾಶಿಯಾಗಿ, ಸ್ವಭಾವದಲ್ಲಿ ಸದಾ ತಲ್ಲೀನವಾದುದು.

**ಸ್ಪರ್ಶೌಷಧಿ**—ಆಮರ್ಶೌಷಧಿ, ಯತಿಯ ಸ್ಪರ್ಶದಿಂದ ರೋಗ ಪರಿಹಾರವಾಗುವಂಥದು.

**ಸಾಮಾನಿಕದೇವ ೨೪**—ಇಂದ್ರನಿಗಿರುವ ಆಜ್ಞೆ, ಐಶ್ವರ್ಯ ಶಕ್ತಿಗಳಿಲ್ಲದೆ, ಆಯುಸ್ಸು, ವೀರ್ಯ, ಪರಿವಾರ, ಭೋಗೋಪ ಭೋಗಾದಿ ಶಕ್ತಿಗಳಿಂದ ಇರುವಂಥವನು. ಗುರು, ತಂದೆ, ಉಪಾಧ್ಯಾಯರಂತೆ ಪೂಜ್ಯರಾದ ದೇವರುಗಳು ಸಾಮಾನಿಕದೇವರು.

**ಸ್ಥವಿರಕಲ್ಪ ೯೩**—ಏಕಾಂಗ ವಿಹಾರಿಯಾಗಲಾರದೆ ಋಷಿ ಸಂಘದಲ್ಲಿದ್ದು ಸಂಘದ ರೀತಿ ಅಥವಾ ಪರಂಪರಾಗತ ರೀತಿಯನ್ನು ತಿಳಿಸುವ ಸಾಧು.

# ೫. ಉದ್ಧೃತ ಪದ್ಯಗಳ ಅಕಾರಾದಿ

## (i) ಪ್ರಾಕೃತ



---

* ಈ ಗುರುತು ಇರುವ ಪದ್ಯಗಳ ಆಕರಗಳನ್ನು ಮೊತ್ತಮೊದಲಿಗೆ ಕಂಡುಹಿಡಿದವರು ಡಾ॥ ಆ. ನೇ. ಉಪಾಧ್ಯೆ, ಎಂ. ಎ., ಡಿಲಿಟ್ ಅವರು.

## (ii) ಸಂಸ್ಕೃತ

## (iii) ಕನ್ನಡ

## ಸಂಕೇತಗಳ ವಿವರ

ಅಜಿಪು — ಅಜಿತನಾಥ ಪುರಾಣ (ರನ್ನ)
ಅರ್ಧನೇ — ಅರ್ಧನೇಮಿ (ನೇಮಿಚಂದ್ರ)
ಆದಿ, ಆದಿಪು — ಆದಿಪುರಾಣ (ಪಂಪ)
ಕಕೋ — ಕಥಾಕೋಶ (ಹರಿಷೇಣ)
ಕಾದಂಬರಿಉ — ಕಾದಂಬರಿಯ ಉತ್ತರಭಾಗ (ನಾಗವರ್ಮ)
ಕಾಮಸೂ — ಕಾಮಸೂತ್ರ (ವಾತ್ಸ್ಯಾಯನ)
ಕಾವ್ಯಲೋ — ಕಾವ್ಯಾವಲೋಕನ (ನಾಗವರ್ಮ)
ಕುವ್ಯಾಉ — ಉದ್ಯೋಗ ಪರ್ವ (ಕುಮಾರವ್ಯಾಸ)
ಗದಾ — ಗದಾಯುದ್ಧ (ರನ್ನ)
ಗಿರಿಕಾ — ಗಿರಿಜಾಕಲ್ಯಾಣ ಕಾವ್ಯ (ಹರಿಹರ)
ಚಂದ್ರಪು — ಚಂದ್ರಪ್ರಭಪುರಾಣ (ಅಗ್ಗಳ)
ಚಾಮಂಪು — ಚಾವುಂಡರಾಯಪುರಾಣ (ಚಾವುಂಡರಾಯ)
ಜಗವಿ — ಜಗನ್ನಾಥ ವಿಜಯ (ರುದ್ರಭಟ್ಟ)
ಜೀವಸಂ — ಜೀವಸಂಬೋಧನೆ (ಬಂಧುವರ್ಮ)
ತ — ತಮಿಳು
ಪಂಪಭಾ — ಪಂಪಭಾರತ (ಪಂಪ)
ಪಂಪರಾ — ಪಂಪರಾಮಾಯಣ (ನಾಗಚಂದ್ರ)
ಪರಪ್ರ — ಪರಮಾತ್ಮ ಪ್ರಕಾಶ (ಜೋಯಿಂದು)
ಪು — ಪುಟ
ಪೂಹಗ — ಪೂರ್ವದಹಳಗನ್ನಡ
ಪ್ರಷರ — ಪ್ರಶಮರತಿಪ್ರಕರಣ (ಉಮಾಸ್ವಾತಿ)
ಪ್ರಾ — ಪ್ರಾಕೃತ
ಭ. ಆ. — ಭಗವತೀ ಆರಾಧನೆ (ಶಿವಕೋಟಿ)
ಭ. ನೀ. — ನೀತಿಶತಕ (ಭರ್ತೃಹರಿ)
ಭ. ವ. — ವೈರಾಗ್ಯಶತಕ (ಭರ್ತೃಹರಿ)
ಲೀಲಾವ — ಲೀಲಾವತೀ (ನೇಮಿಚಂದ್ರ)
ವರಾಂಗ — ವರಾಂಗಚರಿತೆ (ಚಟಾಸಿಂಹನಂದಿ)
ಲೋಕೋಪ — ಲೋಕೋಪಕಾರ (ಚಾವುಂಡರಾಯ)
ಮಲ — ಮಲಯಾಳ
ಶಬ್ದವಿ — ಶಬ್ದವಿಹಾರ (ಡಿ. ಎಲ್. ನರಸಿಂಹಚಾರ್)
ಶಮದ — ಶಬ್ದಮಣಿದರ್ಪಣ (ಕೇಶಿರಾಜ)
ಶಾಂತೀಶ್ವ — ಶಾಂತೀಶ್ವರಪುರಾಣ (ಕಮಲಭವ)
ಸಂ — ಸಂಸ್ಕೃತ
ಸುಕುಮಾ — ಸುಕುಮಾರಚರಿತ್ರೆ (ಶಾಂತಿನಾಥ)

# ಅಚ್ಚಿನ ತಪ್ಪುಗಳು

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| iv | ೧೪ | ಶೇಕಟರೇಫ | ಶಕಟರೇಫ |
| viii | ೩ | ಓಡಿ | ಓದಿ |
| xviii | ೧೫ | ಶಾಶನ | ಶಾಸನ |
| xix | ೩೦ | another | author |
| xxiv | ೨ | ಕುಂಡಕುಂದ | ಕುಂದಕುಂದ |
| xxix | ೨ | ನಾಗಾರ್ಜನಿ | ನಾಗಾರ್ಜುನ |
| xxxii | ೧೦ | ಶತಪೂನ | ಶತಮಾನ |
| xxxii | ೧೯ | ಎಮ್ಮೆಣ್ಣ | ಎಮ್ಮಣ್ಣ |
| ೨ | ೨ | ತಿನೆಪಡುತಿದೊ | ತಿನೆಪಡುತಿರ್ದೊ |
| ೬ | ೧೮ | ವಸ್ತುಗೆಳೆಲ್ಲ | ವಸ್ತುಗಳೆಲ್ಲ |
| ೧೧ | ೧೦ | ಅಜ್ಞಾ | ಆಜ್ಞಾ |
| ೧೩ | ೧ | ೧ | ೧೩ |
| ೧೩ | ೨೩ | ಪೋಪನ್ನೆಗ | ಪೋಪನ್ನೆಗಾ |
| ೧೫ | ೨೧ | ಧನದತ್ತನಂಬೊಂ | ಧನದತ್ತನೆಂಬೊಂ |
| ೧೫ | ೨೬ | ಪದಸದನ | ಪಸದನ |
| ೧೬ | ೨೮ | ಪೂಲ್ಲಮಾನಸಿ | ಪೊಲ್ಲಮಾನಸಿ |
| ೨೦ | ೨೩ | ವೈನೈಕ | ವೈನಕ |
| ೨೪ | ೨೦ | ಸಾದಿಸಿ | ಸಾಧಿಸಿ |
| ೨೫ | ೨೬ | ಎಯ್ದಿ ಳಾ | ಎಯ್ದಿದಳಾ |
| ೨೬ | ೨೬ | ಬಟಿಕ್ಕೆ | ಬಚಿಕ್ಕೆ |
| ೩೨ | ೧೫ | ಪ್ರತಿಪಾಳಿಸ | ಪ್ರತಿಪಾಳಿಸು |
| ೩೫ | ೧೭ | ಪರಿವಾರಮೆಲ್ಲಮಂ | ಪರಿವಾರಮೆಲ್ಲಮುಂ |
| ೩೮ | ೧೧ | ಯುಗಳುಂ | ಯುಗಳಂ |
| ೩೮ | ೩೧ | ಶ್ರೀಧರಂ | ಶ್ರೀಧರ |
| ೩೯ | ೨೪ | ನಿರ್ಮಿಚ್ಚಿ | ನಿಮಿರ್ಚ್ಚಿ |
| ೪೧ | ೮ | ಒಡೆಯರಕ್ಕರ್ | ಒಡೆಯರ್ಕರ್ |
| ೫೬ | ೨೦ | ಸಿತಕ್ಷಯ | ಸಿತಯಕ್ಷ |
| ೬೮ | ೨೦ | ಮರ್ಥ್ಯೆ | ಮರ್ಧ್ಯೆ? |
| ೭೨ | ೧೭ | ನಿವೃತ್ತಿಗೆಯ್ದ | ನಿವೃತ್ತಿಗೆಯ್ದು |
| ೭೭ | ೨೬ | ಪೋಟಿಲ್ಗೆ | ಪೊಟಿಲ್ಗೆ |

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೮೦ | ೨೫ | ಉಣಲ್ಬರವೇಳ್ | ಉಣಲ್ಬರವೇಳ್ |
| ೮೪ | ೪ | ವಿಭವಮುಂ | ವಿಭವಮಂ |
| ೯೮ | ೫ | ಪಾಗಲ್ಭ್ಯಶಿ | ಪ್ರಾಗಲ್ಭ್ಯಶಿ |
| ೧೦೬ | ೩ | ಪಡುಪೊಳ್ | ಪಡುವೊಳ್ |
| ೧೦೭ | ೨೪ | ಹಿಮುಮಂತ | ಹಿಮವಂತ |
| ೧೦೮ | ೨೩ | ದಾಚಾಳ | ವಾಚಾಳ |
| ೧೧೧ | ೨೦ | ದೊರಸನುಂ | ದೊಡರಸನುಂ |
| ೧೧೮ | ೧ | ಆಸಕನಂಪ | ಆಸನಕಂಪ |
| ೧೨೦ | ೪ | ವಡಿವಣ್ಣೋ | ಪಡಿವಣ್ಣೋ |
| ೧೨೭ | ೨ | ನಿಟ್ಟೆಲ್ವ | ನಿಟ್ಟೆಲ್ವ |
| ೧೨೮ | ೧೧ | ಪೇಟ್ದಿಲ್ | ಪೇಟಿಲ್ |
| ೧೩೧ | ೧೦ | ಕನ್ನ್ಯಾರತ್ನ | ಕನ್ಯಾರತ್ನ |
| ೧೩೨ | ೩೧ | ಬಲ್ಮೆಯುಂ | [1]ಬಲ್ಮೆಯುಂ |
| ೧೩೩ | ೧೨ | ಸವ್ವೇ | ಸವ್ವೇ |
| ೧೩೪ | ೫ | ಪೆನ್ನೆರಡು | ಪನ್ನೆರಡು |
| ೧೩೬ | ೪ | ಅದಿಯಾಸಿ | ಅಧಿಯಾಸಿ |
| ೧೩೮ | ೯ | ಪೆರ್ವಾಗಿ | ಪೆರ್ವಾವಾಗಿ |
| ೧೪೩ | ೨೩ | ಹರಂಗಳನ್ನೆ | ಹರಂಗಳೆನ್ನೆ |
| ೧೪೭ | ೬ | ಬನ್ನಿಪೇಂ | ಬನ್ನಿಮೆಂ |
| ೧೪೭ | ೧೮ | ಪೇೞಮಿಂ | ಪೇೞಮೆಂ |
| ೧೪೮ | ೧ | ಬೞಯನೆ | ಬೞಯನೆ |
| ೧೪೯ | ೧೦ | ಮೆರಸು | ಮರಸು |
| ೧೬೨ | ೩ | ಚಾಳಿಣಿಕದೊವಾ | ಚಾಳಿಣಿಕದೋವಾ |
| ೧೬೯ | ೪ | ಉತ್ತಮು | ಉತ್ತಮಂ |
| ೧೬೯ | ೧೩ | ಯಿರ್ವರ್ಗರ್ | ಯಿರ್ವರ್ಗೆ |
| ೧೭೨ | ೧೪ | ರೆನ್ನಗಂ | ರನ್ನಗಂ |
| ೧೭೪ | ೧೨ | ಸಿರಿಯರ್ | ರಿಸಿಯರ್ |
| ೧೭೫ | ೫ | ಮಹೇದ್ರ | ಮಹೇಂದ್ರ |
| ೧೭೭ | ೧೩ | ಮಾಡಿದೆ | ಮಾಡಿದ |
| ೧೮೦ | ೭ | ದಜ್ಜತೋ | ದಜ್ಝಂತೋ |
| ೧೮೨ | ೪ | ಪೊಗೊಯ್ಯು | ಪೂಗೊಯ್ಯು |
| ೧೮೩ | ೨೦ | ಪಾಟಳೀಪುತ್ರ | ಪಾಟಳೀಪುತ್ರ |
| ೧೯೦ | ೧೧ | ವಸ್ತ್ರದೊಳವು | ವಸ್ತ್ರಮೊಳವು |
| ೧೯೨ | ೧ | ಕಿಚ್ಚ್ಕಂ | ಕಿಚ್ಚಂ |
| ೧೯೪ | ೩೨ | ಐನ್ಮಾಂತರ | ಜನ್ಮಾಂತರ |
| ೨೦೧ | ೩ | ಗಿದೇನೆಯೇ | ಗಿದ್ದೇನೆಯೇ |

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೨೦೫ | ೨೧ | ಒಂದೆವಜಿಕೆಗುಟ್ಟ | ಒಂದೆವಱಿಕೆಗುಟ್ಟು |
| ೨೦೭ | ೧೭ | ಬಟಿಕ್ಕಂ | ಬಱಿಕ್ಕಂ |
| ೨೧೦ | ೧೭ | ಸೆಟ್ಟ ವಟ್ಟಂ | ಸೆಟ್ಟೆ ವಟ್ಟಂ |
| ೨೧೨ | ೬ | ಪೆತ್ತ ನಿಲ್ಲ | ಪೆತ್ತೆ ನಿಲ್ಲ |
| ೨೧೨ | ೧೪ | ಸ್ಮರ್ಶನೇ | ಸ್ಪರ್ಶನೇ |
| ೨೧೩ | ೨೩ | ವಿಚಿತ್ರಪುಪ್ಪ | ವಿಚಿತ್ರಮಪ್ಪ |
| ೨೨೦ | ೧೬ | ಉಳ್ಳವನ್ನೋ | ಉಳ್ಳವನೋ |
| ೨೨೦ | ೧೭ | ಆಗುತ್ತಾ ನೆ | ಅಗುತ್ತೇನೆ |
| ೨೩೦ | ೧ | ಅನ್ವಯಿಸ | ಅನ್ವಯಿಸಿ |
| ೨೩೨ | ೧೭ | ಅರ್ಚನೆ ; | ಅರ್ಚನೆ |
| ೨೩೪ | ೨೮ | ಆಗುತ್ತಡೆ | ಆಗುತ್ತದೆ |
| ೨೩೫ | ೧೦ | ವೊನ್ನತಳಿಗೆ | ಪೊನ್ನತಳಿಗೆ |
| ೨೪೨ | ೨೫ | ಅಜಾಗೃ | ಅಜಾಗಲ |
| ೨೪೩ | ೨ | ವಿರುದ್ದೇನ | ವಿರುದ್ಧೇನ |
| ೨೪೩ | ೬ | ಉಂಟಾಗುವುದ್ತೋ | ಉಂಟಾಗುವುದೋ |
| ೨೪೪ | ೭ | ದಜ್ಜ ಇ | ದಜ್ಝ ಇ |
| ೨೪೪ | ೨೬ | ನಿಮುಗೊಸೆದಂ | ನಿಮುಗೊಸೆದೆಂ |
| ೨೪೫ | ೨೮ | ಬಿಂಬಳಂ | ಬಂಬಳಂ |
| ೨೪೬ | ೨೩ | ಪಾಟಿಕೆಯು | ಪಾಱಿಯು |
| ೨೪೮ | ೮ | ಕೊಗಳಿ | ಕೋಗಳಿ |
| ೨೪೮ | ೨೨ | ಕೊಗಳಿಯನೆಮ್ದಿ | ಕೋಗಳಿಯನೆಯ್ದಿ |
| ೨೪೯ | ೧೬ | ತೊಟಿಲ್ಬಿದೊಡೆ | ತೊಟಿಲ್ಚಿದೊಡೆ |
| ೨೫೦ | ೧೩ | ಬಾಱಿವಾಜಿಕೆ | ಬಾಟಿಕೆವಾಟಿಕೆ |
| ೨೫೧ | ೧ | ಘಟಿಕಾ | ಘುಟಿಕಾ |
| ೨೫೨ | ೫ | ಪುಯ್ಯಲಿಡಯಿಡೆ | ಪುಯ್ಯಲಿಡೆಯಿಡೆ |
| ೨೫೨ | ೧೫ | ಬೇಚರಂ | ಖೇಚರಂ |
| ೨೫೨ | ೩೦ | ನೆರಪುವರಂ | ನೆರಪುವರುಂ |
| ೨೫೩ | ೧೮ | ದಾದರು | ವಾದರು |
| ೨೫೫ | ೪ | ಖರಪಟಪನ್ನು | ಖರಪಟವನ್ನು |
| ೨೫೬ | ೧೫ | ಆಗಿನ | ಆಗಿನ |
| ೨೫೬ | ೧೮ | ಐಂಡೀರ | ಡಿಂಡೀರ |
| ೨೫೮ | ೩ | ಸ್ಫೂರ್ಜಲ್ | ಸ್ಫೂರ್ಜತ್ |
| ೨೬೦ | ೧೩ | ಪಾಜಿವ | ಪಾಱುವ |
| ೨೬೯ | ೨೬ | ಪೆಟ್ದ ಟ್ಟಂ | ಪೇಟ್ದ ಟ್ಟಂ |
| ೨೭೨ | ೧೧ | ೯೯ | ೧೯ |
| ೨೭೨ | ೧೫ | ೯೪ | ೧೪ |

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೨೭೫ | ೨೫ | ವ್ಯೈಯಾಪೃತ್ಯಂ | ವೈಯಾಪೃತ್ಯಂ |
| ೨೮೧ | ೬ | ಸಮುದ್ವಿತ | ಸಮನ್ವಿತ |
| ೨೮೬ | ೧೫ | ಭಾರ್ಯ | ಭಾರ್ಯೆ |
| ೨೮೮ | ೧ | ವೋದಕ | ಬೋದ |
| ೨೮೮ | ೪ | ವೋದನಿಗೆ | ಬೋದನಿಗೆ |
| ೨೯೦ | ೧೫ | ಅವಳು | ಅವಳ |
| ೨೯೭ | ೨೮ | ಚಿಕ್ರಿ | ಚಕ್ರಿ |
| ೨೯೭ | ೨೯ | ಅಶಾಶ್ವತ | ಅಶಾಶ್ವತ |
| ೩೦೦ | ೧೬ | ನಿಗ್ರಂಥ | ನಿರ್ಗ್ರಂಥ |
| ೩೦೦ | ೩೧ | ಅರಂಭ | ಆರಂಭ |
| ೩೦೧ | ೨೨ | ಸೀಕರಿಸು | ಸ್ವೀಕರಿಸು |
| ೩೧೨ | ೪ | ಕಾಲ್ಗೆಳಗೆ | ಕಾಲ್ಕೆಳಗೆ |
| ೩೧೨ | ೧೭ | ಗೃಹದಲ್ಲಿದ್ದಳು | ಗೃಹದಲ್ಲಿದ್ದನು |
| ೩೧೨ | ೨೧ | ಅವಿದ್ಯಾಧರ | ಆ ವಿದ್ಯಾಧರ |
| ೩೧೪ | ೨೦ | ದರ್ಮದತ್ತ | ಧರ್ಮದತ್ತ |
| ೩೨೬ | ೧೨ | ಸಮುದ್ಭೂತ | ಸಮುದ್ಭೂತ |
| ೩೨೬ | ೨೧ | ವಾಧೆ | ಬಾಧೆ |
| ೩೨೯ | ೨೦ | ಪೃಥಕ್ತ್ವ ವೀತರ್ಕ ವಿಚಾರ | ಪೃಥಕ್ತ್ವ ವಿತರ್ಕ ವೀಚಾರ |
| ೩೨೯ | ೨೬ | ಸಮ್ಯಗ್ಧರ್ಶನ | ಸಮ್ಯಗ್ದರ್ಶನ |
| ೩೩೬ | ೧೨ | ಚಂದ್ರಫಭ | ಚಂದ್ರಪ್ರಭ |
| ೩೩೬ | ೨೨ | (ಉಮಾಸ್ವಾತಿ) | ಉಮಾಸ್ವಾತಿ |
| ೩೩೬ | ೨೮ | ಭವ | ಭವ್ಯೆ |
| ೩೩೬ | ೨೯ | ಚಟಾಸಿಂಹನಂದಿ | ಜಟಾಸಿಂಹನಂದಿ |
| ೩೩೬ | | ಜಾವುಂಡರಾಯ | ಚಾವುಂಡರಾಯ |
| ೩೩೬ | ೩೩ | ಶಾಂತೀಶ್ವರ- ಪ್ರರಾಣ | ಶಾಂತೀಶ್ವರ- ಪುರಾಣ |
| ೩೩೬ (ಸಂಕೇತಸೂಚಿಗೆ ಸೇರತಕ್ಕದ್ದು) | | ಮೂಲಾ | ಮೂಲಾರಾಧನಾ (ವಟ್ಟಕೇರಸ್ವಾಮಿ) |

(ಮೇಲ್ಕಂಡ ತಪ್ಪುಗಳನ್ನು ವಾಚಕರು ದಯವಿಟ್ಟು ತಿದ್ದಿಕೊಂಡು ಗ್ರಂಥವನ್ನು ಓದಬೇಕಾಗಿ ಪ್ರಾರ್ಥನೆ. ಮುಂದಿನ ಮುದ್ರಣದಲ್ಲಿ ಇವುಗಳನ್ನು ನೇರ್ಪಡಿಸಲಾಗುವುದು. ಸಂ.)

ಇದೇ ಲೇಖಕರ ಇನ್ನೊಂದು ಗ್ರಂಥ

# ಕನ್ನಡ ಗ್ರಂಥ ಸಂಪಾದನೆ

(ಎರಡನೆಯ ಮುದ್ರಣ)

ಕೆಲವು ಅಭಿಪ್ರಾಯಗಳು

It is a learned treatise indispensable to scholars engaged in the editing and teaching of old Kannada Classics. The wealth of material you have collected to illustrate the principles is admirable. I congratulate you on your new achievement.

DR A. R. KRISHNA SASTRI

It is a matter of congratulation for kannada scholars that Prof. D. L. Narasimhachar has given them a valuable book *Kannada Granthasampadane* which is a remarkable achivement in the field of Kannada Studies. DR A.N. UPADHYE

You have broken fresh ground and added a new dimension to kannada scholarship. Prof V. K. GOKAK

. . . The printing and get up leave nothing to be desired.

THE HINDU

ಇದು ಮೂಲಾಧಾರಗಳನ್ನು ಕಟ್ಟುವ ಗಟ್ಟಿಮಾಡುವ ಕಾರ್ಯ. ಈ ಶಾಸ್ತ್ರದ ಸ್ವರೂಪ ಕ್ರಮ ವಿಧಾನಗಳು, ತಪ್ಪುವೋಹನಗಳು, ಉಚಿತ ವಿವೇಚನೆ, ಕೊನೆಯ ಪಾಠನಿರ್ಣಯಗಳಿಗೆ 'Creative Scholarship' ಬೇಕಾಗುತ್ತದೆ. ಒಣ ಪಾಂಡಿತ್ಯ ಸಾಲದು. ವಿದ್ವತ್ತಿಯ ಜೊತೆಗೆ ಹೃದಯದ ಆರ್ದ್ರತೆ ಇರುವ ನೀವು ಇದನ್ನು ಸಾಧಿಸಿದ್ದೀರಿ.

ಇದನ್ನು ಅಚ್ಚುಮಾಡಿಸಿ ಶ್ರೀ ಶಂಕರನಾರಾಯಣರಾಯರು ದೊಡ್ಡ ಪುಣ್ಯ ಕಟ್ಟಿಕೊಂಡಿದ್ದಾರೆ. ಪ್ರೊ. ವಿ. ಸೀತಾರಾಮಯ್ಯ

ಪುಟಗಳು xii+272 ಬೆಲೆ : 10.00 ; 15.00

ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಉಪಯುಕ್ತವಾದ ಮತ್ತೊಂದು ಗ್ರಂಥ

**'ಪಂಪಭಾರತ ದರ್ಶನ'** ಪ್ರೊ. ಕೆ. ವೆಂಕಟರಾಮಪ್ಪ ಬೆಲೆ 4.50 ; 8.00

## ಬರಲಿರುವ ಗ್ರಂಥಗಳು :

ಭಾಸಮಹಾಕವಿ : ಸಿ. ಕೆ. ವೆಂಕಟರಾಮಯ್ಯ

ಕರ್ಣಾಟಕ ನಾಗಾನಂದ ನಾಟಕ (ಟಿಪ್ಪಣಿಗಳೊಡನೆ) ನಂಜನಗೂಡು ಅನಂತರಾಮಶಾಸ್ತ್ರೀ

ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ (ಟಿಪ್ಪಣಿಗಳೊಡನೆ) ನಂಜನಗೂಡು ಸುಬ್ಬಾಶಾಸ್ತ್ರೀ

ಕರ್ಣಾಟಕ ಶಾಕುಂತಳ ನಾಟಕ (ಟಿಪ್ಪಣಿಗಳೊಡನೆ) ಬಸಪ್ಪಶಾಸ್ತ್ರೀ

ಶಾರದಾ ಮಂದಿರ : ರಾಮಯ್ಯರ್ ರಸ್ತೆ : ಮೈಸೂರು - 4